ಶ್ರೀ ಜಯ [redacted] ರತ್ನ ಮಾಲಾ

[redacted]

ಶ್ರೀ [redacted] ಣಂ

[redacted]

ಪೀಠಿಕೆ

ಮಾನವನು ಯಾರು ? ಈ ಜಗತ್ತಿನಲ್ಲಿ ಅವನ ಸ್ಥಾನವು ಯಾವುದು ? ಅವನ ಜೀವನದ ಮುಖ್ಯ ಗುರಿ ಏನು ? ಮೂಕಜಂತುಗಳಿಗಿಂತ ಉತ್ತಮರೀತಿಯಲ್ಲಿ ಬಾಳಲು ಅವನಿಗೆ ಅವಶ್ಯಕವಾಗಿ ಬೇಕಾಗುವ ಸಾಧನಗಳೇನು ? ಸಂಸಾರದ ಕೋಟಲೆಗಳಿಂದ ಅವನು ಮುಕ್ತನಾಗುವ ಬಗೆ ಹೇಗೆ ? ಮುಂತಾದ ಅನೇಕ ಪ್ರಶ್ನೆಗಳು ಪ್ರತಿಯೊಬ್ಬ ವಿಚಾರಪರನ ಹೃದಯಾಂತರಾಳದಲ್ಲಿ ಮೂಡುತ್ತಲೇ ಇವೆ. ಈ ಪ್ರಶ್ನೆಗಳಿಗೆಲ್ಲ ಉತ್ತರಕೊಡುವುದು ಅಷ್ಟು ಸುಲಭಸಾಧ್ಯವಲ್ಲದಿದ್ದರೂ ಮಾನವನು ಅದನ್ನು ತಿಳಿದ ಹೊರತು ಜ್ಞಾನಿಯೆನಿಸುವುದಿಲ್ಲ. ಪುರುಷನು ಪಶುಗಳಂತೆ ನಿದ್ರಾಹಾರಗಳಿಂದ ಮಾತ್ರ ಜೀವನವನ್ನು ನಿರ್ವಹಿಸಲಾರನು. ಜಗತ್ತಿನಲ್ಲಿ ಅತ್ಯುತ್ತಮವಾದ ಬಾಳನ್ನು ಬಾಳಲು ಪ್ರತಿಯೊಬ್ಬನೂ ಬಯಸುವನು. ಆ ರೀತಿಯಾದ ಬಾಳಿಗೆ ಜ್ಞಾನಾರ್ಜನೆಯು ಅತ್ಯವಶ್ಯಕ. ಆದುದರಿಂದ ಜಗತ್ಸೃಷ್ಟಿಯ ತತ್ವ ಮತ್ತು ಉದ್ದೇಶವನ್ನು ಸಂಪೂರ್ಣವಾಗಿ ಅರಿತು ಜ್ಞಾನಿಯಾದ ಹೊರತು ಮಾನವ ಜೀವನವು ಪರಿಪೂರ್ಣವಾಗಲಾರದು.

ವಿಧಿನಿಯಮಗಳನ್ನು ತಿಳಿಸುವ ವೇದವೇದಾಂಗಗಳು ಸೃಷ್ಟಿಯ ತತ್ವ ಮತ್ತು ಉದ್ದೇಶವನ್ನು ಪ್ರತಿಪಾದಿಸುವುವಾದರೂ, ಆ ಮಾರ್ಗವು ಅತಿಗಹನವಾದುದು. ಸಾಹಿತ್ಯ ಮತ್ತು ಕಲೆಯು ಸಾಮಾನ್ಯ ಮನುಜನನ್ನೂ ಸುಲಭಮಾರ್ಗದಲ್ಲಿ ಕರೆದೊಯ್ದು ಗುರಿಮುಟ್ಟಿಸಬಲ್ಲುದು. ಸಾಹಿತಿಗಳಿಂದಲೇ ಸಾಮಾನ್ಯ ಮಾನವನ ನೈತಿಕ ಬೆಳೆವಣಿಗೆಯು ಮುಂದುವರಿಯುವುದು. ಸಾಹಿತ್ಯ ಮತ್ತು ಕಲೆಯು ಮಾನವನ ಇಷ್ಟಾನಿಷ್ಟಗಳನ್ನು ಗಮನಿಸದೆ ತನ್ನ ಪ್ರಭಾವವನ್ನು ಅವನ ಮೇಲೆ ಬೀರಿ, ಅವನ ಊಹಾಶಕ್ತಿಯನ್ನು ಹೆಚ್ಚಿಸಿ, ಮನಸ್ಸನ್ನು ವಿಶಾಲಗೊಳಿಸಿ, ಜೀವನವನ್ನು ಮೇಲ್ಮಟ್ಟಕ್ಕೆ ತರುವುದು. ಆದುದರಿಂದಲೇ ಪ್ರಭುವಾಣಿಯಂತಿರುವ ವೇದ ವೇದಾಂಗಗಳ ಸಾರವನ್ನು ಮಿತ್ರವಾಣಿಯಂತಿರುವ ಪುರಾಣಗಳ ರೂಪದಲ್ಲಿ ಮಹರ್ಷಿಗಳು ಮನುಜ ಸಾಮಾನ್ಯರಿಗೆ ಬೋಧಿಸಿದರು. ವೈದಿಕಸಂಸ್ಕೃತಿ ಮತ್ತು ತತ್ವಗಳನ್ನು ಸರಸವಾಗಿ ಲಲಿತವಾದ ಮತ್ತು ತಿಳಿಯಾದ ಸಾಹಿತ್ಯದಲ್ಲಿ ತಿಳಿಸುವುದೇ ಪುರಾಣಗಳ ಪರಮೋದ್ದೇಶ.

'ವಿಸ್ತಾರಾಯ ತು ಲೋಕಾನಾಂ ಸ್ವಯಂ ನಾರಾಯಣಃ ಪ್ರಭುಃ |
ವ್ಯಾಸರೂಪೇಣ ಕೃತವಾನ್ ಪುರಾಣಾನಿ ಮಹೀತಲೆ' ||

ಎಂಬ ಸೂಕ್ತಿಯಿಂದ ಭಕ್ತಪರಾಧೀನನೂ, ದಯಾಮಯನೂ, ಆದ ಶ್ರೀಮನ್ನಾರಾಯಣನು, ಸಂಸಾರಸಮುದ್ರದಲ್ಲಿ ಮುಳುಗಿ, ಕಾಮಕ್ರೋಧಾದಿ

ಅರಿಷಡ್ವರ್ಗಗಳಿಗೆ ಸಿಲುಕಿ, ತೊಳಲುತ್ತಿರುವ ಮಾನವನ ಉದ್ಧಾರಕ್ಕಾಗಿ ಪುರಾಣಗಳನ್ನು ವ್ಯಾಸರೂಪದಿಂದ ರಚಿಸಿದನೆಂದು ವ್ಯಕ್ತವಾಗುತ್ತದೆ. ಅಷ್ಟಾದಶ ಮಹಾಪುರಾಣಗಳ ಮಧ್ಯಗತವಾದ 'ಬ್ರಹ್ಮವೈವರ್ತ ಮಹಾಪುರಾಣ'ದಲ್ಲೂ ಬ್ರಹ್ಮತತ್ತ್ವವು ವಿವೃತವಾಗಿದೆ. ಸಪ್ತಲೋಕಾತ್ಮಕವಾದ ಸೃಷ್ಟಿಯ ಮೂಲತತ್ತ್ವವಾವುದೆಂದು ತರ್ಕವು ಉದಯಿಸಿದಾಗ ಪ್ರಾಚೀನಮಹರ್ಷಿಗಳು ಮೂರು ರೀತಿ ಉತ್ತರವಿತ್ತರು. ಕೆಲವರು ಪ್ರಕೃತಿಯನ್ನು ಮೂಲತತ್ತ್ವವೆಂದರು (ಮಾರ್ಕಂಡೇಯಪುರಾಣ). ಕೆಲವರು ಅಗ್ನಿಪ್ರಾಣವನ್ನು ಮೂಲತತ್ತ್ವವೆಂದರು (ಆಗ್ನೇಯಪುರಾಣ). ಕೆಲವರು ಸೌರಶಕ್ತಿಯನ್ನು ಮೂಲತತ್ತ್ವವೆಂದರು (ಭವಿಷ್ಯಪುರಾಣ). ಈ ರೀತಿಯಾದ ಮೂರು ವಿಪ್ರತಿಪತ್ತಿಗಳನ್ನು ವ್ಯಾಸಮಹರ್ಷಿಗಳು ಮೇಲ್ಕಂಡ ಪುರಾಣಗಳಲ್ಲಿ ಸ್ಪಷ್ಟಪಡಿಸಿ ಇವೆಲ್ಲವೂ ಬ್ರಹ್ಮನ ವಿವರ್ತವೆಂದು (ಬ್ರಹ್ಮವೇ ಮೂಲತತ್ತ್ವವೆಂದು) ಬ್ರಹ್ಮವೈವರ್ತ ಮಹಾಪುರಾಣದಲ್ಲಿ ವಿಶದಗೊಳಿಸಿದ್ದಾರೆ. 'ತಮೇತಂ ಬ್ರಹ್ಮಾಣಂ ವಿವಿದಿಷಂತಿ ಯಜ್ಞೇನ ದಾನೇನ ತಪಸಾ ನಾಶಕೇನ' 'ಯಜ್ಜ್ಞಾತ್ವಾ ನೇಹ ಭೂಯೋಽನ್ಯತ್ ಜ್ಞಾತವ್ಯಮವಶಿಷ್ಯತೆ' ಮುಂತಾದ ಶ್ರುತಿವಚನಗಳಿಂದ ಬ್ರಹ್ಮಜ್ಞಾನವೇ ಮನುಜನ ಪರಮೋದ್ದೇಶವೆಂದು ಸ್ಪಷ್ಟಪಡಿಸಿದ್ದಾರೆ.

ಬ್ರಹ್ಮವೈವರ್ತಮಹಾಪುರಾಣವು ಬ್ರಹ್ಮಖಂಡ, ಪ್ರಕೃತಿಖಂಡ, ಗಣೇಶಖಂಡ ಮತ್ತು ಶ್ರೀಕೃಷ್ಣಜನ್ಮಖಂಡವೆಂದು ನಾಲ್ಕು ವಿಭಾಗಗಳಿಂದ ಕೂಡಿದೆ. ಮೊದಲನೆಯದಾದ ಬ್ರಹ್ಮಖಂಡದಲ್ಲಿ ಪರಬ್ರಹ್ಮಸ್ವರೂಪವು ಪ್ರಾಧಾನ್ಯವಾಗಿ ನಿರೂಪಿತವಾಗಿದೆ.

'ಮಹಾಪ್ರಳಯದಲ್ಲಿ ಪರಬ್ರಹ್ಮವು ನಿರ್ಗುಣ ನಿರಾಕಾರವೂ, ತೇಜೋಮಯವೂ, ಸಚ್ಚಿದಾನಂದಸ್ವರೂಪವೂ ಆಗಿದ್ದು ಸೃಷ್ಟ್ಯುನ್ಮುಖವಾದಾಗ ಸಗುಣ ಸಾಕಾರವೂ, ನಾಮರೂಪಾತ್ಮಕವೂ ಆಗುವುದು. ಆಗ ಮೂಲಪ್ರಕೃತಿಯಲ್ಲಿ ಲೀನವಾಗಿದ್ದ ಗುಣಗಳು ಕ್ಷುಬ್ಧವಾಗಿ ಮಹತ್ತತ್ತ್ವದ ಉತ್ಪತ್ತಿಯಾಗುವುದು. ಮಹತ್ತತ್ತ್ವದಿಂದ ತಾಮಸ, ರಾಜಸ, ಮತ್ತು ಸಾತ್ವಿಕರೂಪವಾದ ಅಹಂಕಾರಗಳೂ, ಅವುಗಳಿಂದ ಪಂಚತನ್ಮಾತ್ರಗಳೂ, ಇಂದ್ರಿಯ ಮತ್ತು ವಿಷಯಗಳೂ ಉತ್ಪತ್ತಿಯಾಗುವುವು. ಅದರಂತೆಯೇ ಮಹತ್ತತ್ತ್ವ ಮತ್ತು ಅಹಂಕಾರಗಳಿಂದ ಚರಾಚರಾತ್ಮಕವಾದ ಜಗತ್ತಿನ ಉತ್ಪತ್ತಿಯಾಗುವುದು. ಆಗ ಪರಮಾತ್ಮನ ಪ್ರೇರಣೆಯಿಂದ ಜನ್ಮಾಂತರದ ವಾಸನಾಸ್ಮರಣೆಯುಂಟಾಗಿ ಜೀವನು ನಾಮರೂಪಾತ್ಮಕವಾದ ಪ್ರಪಂಚದ ವ್ಯವಹಾರಕ್ಕೊಳಗಾಗುವನು. ಜಗತ್ತಿನಲ್ಲಿರುವ ಸಚರಾತ್ಮಕವಾದ ಪ್ರಾಣಿಗಳ ಜೀವನ ನಿರ್ವಾಹ ಸಾಮಗ್ರಿಯು ಪಂಚಮಹಾಭೂತಗಳಿಂದ ಸೃಷ್ಟಿಯಾದ ಸ್ಥಾವರ ವಸ್ತುಗಳಲ್ಲಿವೆ. ಎಲ್ಲ ಪ್ರಾಣಿಗಳಿಗಿಂತಲೂ ಮನುಷ್ಯನು ಭಿನ್ನನಾಗಿರುವನು. ಅವನು ತನ್ನ ಜೀವನ ನಿರ್ವಾಹಕ್ಕಾಗಿ ಬುದ್ಧಿವಂತಿಕೆಯಿಂದಲೂ, ಕೆಲವೆಡೆ

ಶಾಸ್ತ್ರಾಧಾರಗಳಿಂದಲೂ ಅನೇಕ ಮಾರ್ಗವನ್ನು ಕಲ್ಪಿಸಿಕೊಳ್ಳುವನು. ನಾವು ರೂಪಾತ್ಮಕವಾದ ಯಾವ ವಸ್ತುವನ್ನು ವಿಮರ್ಶಿಸಿ ನೋಡಿದರೂ ಅದು ಕೇವಲ ಸತ್ತಾಮಾತ್ರವಾಗಿ ತೋರುವುದು. ಉಳಿದ ವಿಶೇಷವೆಲ್ಲ ಉಪ್ತವಾಗುವುದು. ಆದುದರಿಂದ ಶರೀರ ಮತ್ತು ವಿಶ್ವಬ್ರಹ್ಮಾಂಡದ ಉತ್ಪತ್ತಿ ಮೊದಲ್ಗೊಂಡು ಮರಣ ಮತ್ತು ಮಹಾಪ್ರಳಯದವರೆಗಿರುವ ವಿಶೇಷ ರೂಪಗಳೆಲ್ಲ ಪರಬ್ರಹ್ಮಸ್ವರೂಪವಾದರೂ ಅವನು ಮಾತ್ರ ನಿರ್ಲಿಪ್ತನಾಗಿರುವನು. ಯಾವಾಗ ಮನಸ್ಸು ಆತ್ಮವಿಚಾರ ಮತ್ತು ಯೋಗಾಭ್ಯಾಸದ ಮೂಲಕ ಸತ್ವರಜಸ್ತಮೋಗುಣಸಂಬಂಧಿಯಾದ ವ್ಯಾವಹಾರಿಕ ವೃತ್ತಿಗಳನ್ನೂ, ಜಾಗ್ರತ್ಸ್ವಪ್ನ, ಸುಷುಪ್ತ್ಯಾದಿ ಸ್ವಾಭಾವಿಕ ವೃತ್ತಿಗಳನ್ನೂ ಬಿಟ್ಟು ಉಪರತವಾಗುವುದೋ ಆಗ ಶಾಂತಚಿತ್ತದಿಂದ 'ತತ್ವಮಸಿ' ಮುಂತಾದ ಮಹಾವಾಕ್ಯಗಳ ಅನುಸಂಧಾನದಿಂದ ಆತ್ಮಜ್ಞಾನವುಂಟಾಗುವುದು. ಆತ್ಮಜ್ಞಾನಿಯು ಅವಿದ್ಯೆಯಿಂದ ಉತ್ಪನ್ನವಾದ ಕರ್ಮವಾಸನೆಯನ್ನೂ ಮತ್ತು ಪ್ರವೃತ್ತಿಯನ್ನೂ ತೊರೆದು ಬಿಡುವನು. ಇದೇ ಮುಕ್ತಿಯೆನಿಸುವುದು, ಇದು ಬ್ರಹ್ಮಖಂಡದ ಸಾರಸಂಗ್ರಹ.

ಪುರಾಣಗಳು ಸಾತ್ವಿಕ, ರಾಜಸ, ಮತ್ತು ತಾಮಸವೆಂದು ಮೂರು ಬಗೆಯಾಗಿವೆ. ಬ್ರಹ್ಮವೈವರ್ತಪುರಾಣವು ರಾಜಸವಾದುದರಿಂದ ರಜೋಗುಣಪ್ರಧಾನನಾದ ರಾಧಾರಮಣನನ್ನೇ ಪರಮಾತ್ಮನೆಂದು ಬಣ್ಣಿಸಿ ಅವನಿಂದ ಬ್ರಹ್ಮ, ವಿಷ್ಣು, ಮಹೇಶ್ವರರ ಆವಿರ್ಭಾವವಾಯಿತೆಂದು ಪ್ರತಿಪಾದಿಸಿರುವರು. ಇಷ್ಟು ಮಾತ್ರದಿಂದ ಸತ್ವಗುಣಪ್ರಧಾನಿಗಳಾದ ಬ್ರಹ್ಮ ಮಹೇಶರಿಗೆ ಯಾವ ನ್ಯೂನತೆಯನ್ನೂ ಹೇಳಿದಂತಾಗುವುದಿಲ್ಲ. ಮಹೇಶನು ಸಂಸಾರಿಯಾಗಬೇಕಾದಾಗ ರಜೋಗುಣಪ್ರಧಾನನಾದ ಶ್ರೀಕೃಷ್ಣನನ್ನು ಕುರಿತು ತಪಸ್ಸುಮಾಡಬೇಕಾಯಿತೇ ಹೊರತು, ಸಂಸಾರದಿಂದ ನಿರ್ಲಿಪ್ತನಾಗಿದ್ದಾಗ ಸ್ವಯಂ ಸರ್ವಜ್ಞನೆಂದೂ, ಸತ್ವಗುಣಪ್ರಧಾನನೆಂದೂ ಅನೇಕ ಕಡೆಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ಅಲ್ಲದೆ ಕಾಲಾಗ್ನಿರುದ್ರನು ತಮೋಗುಣಪ್ರಧಾನನೆಂದೂ, ಜಗತ್ಸಂಹಾರಕನೆಂದೂ, ಮಹೇಶ್ವರನು ಲಯಕಾರಣನೆಂದು ತಿಳಿಯುವುದು ತಪ್ಪೆಂದೂ ವಿಶದವಾಗಿ ತಿಳಿಸಿದೆ. ಆದುದರಿಂದ ಕೃಷ್ಣ, ಬ್ರಹ್ಮ, ವಿಷ್ಣು, ಈಶ ಮುಂತಾದ ಈ ನಾಮರೂಪಗಳಲ್ಲಿ ಆಧಿಕ್ಯ ನ್ಯೂನತೆಗಳನ್ನು ಎಣಿಸುವುದು ಅನವಶ್ಯಕ. 'ಏಕಂ ಸದ್ವಿಪ್ರಾ ಬಹುಧಾ ವದಂತಿ' 'ಏಕಮೇವಾದ್ವಿತೀಯಂ ಬ್ರಹ್ಮ' 'ನೇಹ ನಾನಾಸ್ತಿ ಕಿಂಚನ' ಇತ್ಯಾದಿ ಶ್ರುತಿವಚನಗಳ ಪರ್ಯಾಲೋಚನೆಯಿಂದ ಬ್ರಹ್ಮ, ವಿಷ್ಣು, ಮಹೇಶ್ವರಾದಿಗಳಿಗೆ ವ್ಯಾವಹಾರಿಕ ಸ್ಥಿತಿಯಲ್ಲಿ ಭೇದವೇ ಹೊರತು ಪಾರಮಾರ್ಥಿಕ ಸ್ಥಿತಿಯಲ್ಲಿ ಎಲ್ಲವೂ ಒಂದೇ ಎಂಬುದು ಸ್ಪಷ್ಟವಾಗುವುದು.

ಈ ಸಂಪುಟದಲ್ಲಿ ಬ್ರಹ್ಮಶಾಪಕ್ಕೊಳಗಾದ ನಾರದನ ಜನ್ಮಾಂತರಗಳನ್ನು ನಿರೂಪಿಸುವ ಸಂದರ್ಭದಲ್ಲಿ ವರ್ಣಾಶ್ರಮಗಳ ವ್ಯವಸ್ಥೆಯನ್ನೂ, ನಿತ್ಯಕರ್ಮದ ವಿಧಿಯನ್ನೂ, ಪಾತಿವ್ರತ್ಯದ ಮಹಿಮೆಯನ್ನೂ, ವಿಷ್ಣುಭಕ್ತನ ವೈಶಿಷ್ಟ್ಯವನ್ನೂ ವಿಶದವಾಗಿ ತಿಳಿಯಬಹುದು.

ಇಂತಹ ಮಹಾಪುರಾಣಗಳನ್ನು ಕರ್ಣಾಟಕ ಭಾಷೆಯಲ್ಲಿ ಪ್ರಚಾರಗೊಳಿಸಲು ಕಾರಣಕರ್ತರೂ, ಪರಮೋದಾರಿಗಳೂ, ವಿದ್ವದಭಿಮಾನಿಗಳೂ, ರಾಜರ್ಷಿಗಳೂ, ಕರ್ಣಾಟಕ ಸಿಂಹಾಸನಾಧೀಶ್ವರರೂ ಆದ **ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುಗಳವರು ಬಂಧುಮಿತ್ರಕಳತ್ರಾದಿಗಳೊಡನೆ ಚಿರಕಾಲ ಸುಖವಾಗಿ ಧರ್ಮದಿಂದ ರಾಜ್ಯವನ್ನು ಪರಿಪಾಲಿಸಲೆಂದು ಶ್ರೀಕೃಷ್ಣಪರಮಾತ್ಮನನ್ನು ಪ್ರಾರ್ಥಿಸುವ,

ಸರ್ವಧಾರಿ ಸಂವತ್ಸರದ
ಶ್ರಾವಣ ಶುದ್ಧ ೧೧
ಭಾನುವಾರ.

ಅನುವಾದಕ :
ಬಿಟ್ಟೆದಪುರದ ಸುಬ್ರಾಯರ ಮಗ ಕೃಷ್ಣಪ್ಪ.

ವಿಷಯಾನುಕ್ರಮಣಿಕೆ

ಅಧ್ಯಾಯ ವಿಷಯ ಪುಟ

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

ಪ್ರಥಮೋಽಧ್ಯಾಯಃ

ಗಣೇಶಬ್ರಹ್ಮೇಶಸುರೇಶಶೇಷಾಃ ಸುರಾಶ್ಚ ಸರ್ವೇ ಮನವೋ ಮುನೀಂದ್ರಾಃ ।
ಸರಸ್ವತೀಶ್ರೀಗಿರಿಜಾದಿಕಾಶ್ಚ ಯಂ ನಮಂತಿ ದೇವಂ ಪ್ರಣಮಾಮಿ ತಂ ವಿಭುಂ

ಒಂದನೆಯ ಅಧ್ಯಾಯವು

ಕೃಷ್ಣಂ ಗೋಪಕಿಶೋರವೇಷಸುಭಗಂ ಜ್ಯೋತಿರ್ಮಯಂ ನಿರ್ಗುಣಂ
ಭಕ್ತಾನುಗ್ರಹವಿಗ್ರಹಂ ಸುರುಚಿರಂ ಸ್ವೇಚ್ಛಾಮಯಂ ನಿರ್ಮಲಂ ।
ಸಾನಂದಂ ಸರಸೀರುಹೇಕ್ಷಣಮಮುಂ ರಾಧಾಮನೋಹಾರಿಣಂ
ವಂದೇ ವಾಂಛಿತಸಿದ್ಧಯೇಽಚ್ಯುತಪದಂ ಭಕ್ತ್ಯೈಕಸಿದ್ಧಿಪ್ರದಂ ॥

೧. ಯಾವ ಸರ್ವಶಕ್ತನಾದ ಪರಮಾತ್ಮನಿಗೆ ಗಣೇಶ, ಬ್ರಹ್ಮ, ಮಹೇಶ, ಸುರೇಶ, (ಇಂದ್ರ) ಮತ್ತು ಆದಿಶೇಷ ಮುಂತಾದ ಸಮಸ್ತದೇವತೆಗಳೂ, *ಚತುರ್ದಶ ಮನುಗಳೂ, ಮಾನ್ಯ ಮುನಿಗಳೂ, ಸರಸ್ವತಿ, ಲಕ್ಷ್ಮಿ ಮತ್ತು ಪಾರ್ವತಿ ಮುಂತಾದ ದೇವಿಯರೂ ನಮಿಸುವರೋ ವಿಶ್ವವ್ಯಾಪಿಯಾದ ಆ ಪರಮಾತ್ಮನಿಗೆ ಭಕ್ತಿಪೂರ್ವಕವಾಗಿ ವಂದಿಸುವೆನು.

ಟಿಪ್ಪಣಿ — *ಚತುರ್ದಶಮನುಗಳು: ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷ, ವೈವಸ್ವತ, ಸೂರ್ಯಸಾವರ್ಣಿ, ದಕ್ಷಸಾವರ್ಣಿ, ಬ್ರಹ್ಮಸಾವರ್ಣಿ, ಧರ್ಮಸಾವರ್ಣಿ, ರುದ್ರಸಾವರ್ಣಿ, ದೇವಸಾವರ್ಣಿ, ಮತ್ತು ಇಂದ್ರಸಾವರ್ಣಿ.

ಸ್ಥೂಲಾಸ್ತನೂರ್ವಿದಧತಂ ತ್ರಿಗುಣಂ ವಿರಾಜಂ
ವಿಶ್ವಾನಿ ಲೋಮವಿವರೇಷು ಮಹಾಂತಮಾದ್ಯಂ ।
ಸೃಷ್ಟ್ಯುನ್ಮುಖಃ ಸ್ವಕಲಯಾಪಿ ಸಸರ್ಜ ಸೂಕ್ಷ್ಮಂ
ನಿತ್ಯಂ ಸಮೇತ್ಯ ಹೃದಿ ಯಸ್ತಮಜಂ ಭಜಾಮಿ ॥ ೨ ॥

ಧ್ಯಾಯಂತೇ ಧ್ಯಾನನಿಷ್ಠಾಸ್ಸುರನರಮನವೋ ಯೋಗಿನೋ ಯೋಗರೂಢಾಃ। ಸಂತಃ ಸ್ವಪ್ನೇಽಪಿ ಸಂತಂ ಕತಿ ಕತಿ ಜನಿಭಿರ್ಯಂ ನ ಪಶ್ಯಂತಿ ತಪ್ತ್ವಾ ॥ ಧ್ಯಾಯೇ ಸ್ವೇಚ್ಛಾಮಯಂ ತಂ ತ್ರಿಗುಣಪರಮಹೋ ನಿರ್ವಿಕಾರಂ ನಿರೀಹಂ ಭಕ್ತ್ಯಾ ಧ್ಯಾನೈಕಹೇತೋರ್ನಿರುಪಮರುಚಿರ-ಶ್ಯಾಮರೂಪಂ ದಧಾನಂ ॥ ೩ ॥

---

೨. ಯಾವ ಪರಮಾತ್ಮನು ಸೃಷ್ಟಿಗೆ ಇಚ್ಛಿಪಟ್ಟ ಮಾತ್ರದಿಂದಲೇ, ತನ್ನ ಕಲಾಸಂಭೂತನೂ, ತ್ರಿಗುಣಾತ್ಮಕನೂ ಆದ ಮಹಾವಿರಾಟ್ಪುರುಷನ ರೋಮ ಕೂಪಗಳಲ್ಲಿ ಉಪಸಂಪೃತವಾಗಿರುವ ನಿಖಿಲಜಗತ್ತೂ ಸ್ಥೂಲಶರೀರರೂಪವಾಗಿ ಪ್ರಕಟ ವಾಗುವುದೋ, ಯಾವಾತನು ಅಣುಸ್ವರೂಪನೂ, ಜನನಮರಣರಹಿತನೂ, ನಿತ್ಯನೂ, ನಿರ್ಗುಣನೂ, ಭಕ್ತರ ಹೃದಯದಲ್ಲಿ ನಿತ್ಯಸನ್ನಿಹಿತನೂ ಆಗಿರುವನೋ ಅಂಥ ಅನಾದಿಪುರುಷನನ್ನು ಭಕ್ತಿಯಿಂದ ಭಜಿಸುವೆನು.

೩. ದೇವತೆಗಳು, ಮನುಗಳು ಮತ್ತು ಮಾನವರು ಧ್ಯಾನಾರೂಢರಾಗಿಯೂ, ಯೋಗಿಗಳು ಯೋಗಾರೂಢರಾಗಿಯೂ, ಸಂತರು ತಪೋನಿರತರಾಗಿಯೂ, ಅನೇಕ ಜನ್ಮಗಳಿತ್ತೀ ಅಚಲವಾದ ಭಕ್ತಿಯಿಂದ ಭಜಿಸಿದರೂ, ಜಾಗ್ರತ್, ಸ್ವಪ್ನ, ಸುಷುಪ್ತಿ ಯೆಂಬ ಅವಸ್ಥಾತ್ರಯಗಳಲ್ಲೂ ಸ್ವಯಂಪ್ರಕಾಶನಾದ ಯಾವ ಪರಮಾತ್ಮನನ್ನು ಕಾಣುವುದು ಕಷ್ಟವೋ, ಯಾರು ರೂಪರಹಿತನಾದರೂ ಸ್ವೇಚ್ಛಾರೂಪಿಯಾದುದರಿಂದ ಭಜಿಸುವ ಭಕ್ತರಿಗಾಗಿ ಸುಂದರ ರೂಪವನ್ನು ಧರಿಸುವನೋ, ತ್ರಿಗುಣಾತೀತನೂ, ವಿಕಾರರಹಿತನೂ, ಇಚ್ಛಾರಹಿತನೂ ಆದ ಆ ಪರಮಾತ್ಮನನ್ನು ಅನನ್ಯ ಭಕ್ತಿಯಿಂದ ಭಜಿಸುವೆನು.

ವಂದೇ ಕೃಷ್ಣಂ ಗುಣಾತೀತಂ ಪರಂ ಬ್ರಹ್ಮಾಚ್ಯುತಂ ಯತಃ |
ಆವಿರ್ಬಭೂವುಃ ಪ್ರಕೃತಿಬ್ರಹ್ಮವಿಷ್ಣುಶಿವಾದಯಃ　　　|| ೪ ||

ಓಂ ನಮೋ ಭಗವತೇ ವಾಸುದೇವಾಯ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಂ |
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್　　　|| ೧ ||

---

೪. ತ್ರಿಗುಣಾತೀತನಾದ ಯಾವ ಪರಬ್ರಹ್ಮನಿಂದ ತ್ರಿಗುಣಾತ್ಮಕರಾದ ಪ್ರಕೃತಿ, ಬ್ರಹ್ಮ, ವಿಷ್ಣು, ಶಿವ ಮುಂತಾದ ದೇವತೆಗಳ ಆವಿರ್ಭಾವವಾಯಿತೋ, ಅವಿನಾಶಿಯಾದ ಆ ಕೃಷ್ಣಪರಮಾತ್ಮನಿಗೆ ಭಕ್ತಿಪೂರ್ವಕವಾಗಿ ವಂದಿಸುವೆನು.

ಬ್ರಹ್ಮವೈವರ್ತ ಮಹಾಪುರಾಣದಲ್ಲಿ 'ಕೃಷ್ಣ' ಎಂಬ ಪದಕ್ಕೆ 'ಕರ್ಷತೀತಿ, ಕೃಷ್ಣಃ-ಅಂದರೆ, ಸರ್ವರ ಪಾಪವನ್ನೂ ನಾಶಗೊಳಿಸಿ ಮುಕ್ತಿಯನ್ನು ಕೊಡುವವನು' ಎಂಬ ಅವಯವಾರ್ಥವನ್ನೇ ಮುಖ್ಯವಾಗಿಟ್ಟುಕೊಂಡು ಶ್ರೀಕೃಷ್ಣನೇ ಪರಬ್ರಹ್ಮನೆಂದೂ, ಆತನಿಂದಲೇ ನಾರಾಯಣ, ಮಹಾದೇವ, ಚತುರ್ಮುಖಬ್ರಹ್ಮ ಮತ್ತು ಧರ್ಮ ಮುಂತಾದ ದೇವತೆಗಳೂ, ಸರಸ್ವತಿ, ಮಹಾಲಕ್ಷ್ಮಿ, ಪ್ರಕೃತಿ (ಪಾರ್ವತಿ) ಸಾವಿತ್ರಿ ಮತ್ತು ಮೂರ್ತಿ ಮುಂತಾದ ದೇವಿಯರೂ ಕ್ರಮವಾಗಿ ಅವತರಿಸಿದರೆಂದೂ, ಅನಂತರ ಸ್ಥಾವರ ಜಂಗಮಾತ್ಮಕವಾದ ವಿಶ್ವದ ಸೃಷ್ಟಿಯಾಯಿತೆಂದೂ, ಹೇಳಿರುವುದರಿಂದ ಶ್ರೀಕೃಷ್ಣನೇ ಸರ್ವೋತ್ತಮನೆಂದು ವ್ಯಕ್ತವಾಗುವುದು.

೧. ಮುನಿಶ್ರೇಷ್ಠರಾದ *ನರನಾರಾಯಣರಿಗೆ ನಮಿಸಿ, ಸರಸ್ವತೀದೇವಿಯನ್ನೂ ವ್ಯಾಸಮಹರ್ಷಿಯನ್ನೂ ಭಕ್ತಿಯಿಂದ ಭಜಿಸಿ ಜಯ(ಪುರಾಣ)ವನ್ನಾರಂಭಿಸಬೇಕು.

ಟಿಪ್ಪಣಿ — *ನರನಾರಾಯಣರು : ಇವರು ಸ್ವಾಯಂಭುವ ಮನ್ವಂತರದಲ್ಲಿ ಜನಿಸಿದ ಧರ್ಮಮುನಿಯ ಇಬ್ಬರು ಪುತ್ರರು. ನರನು ಹಿರಿಯವನು. ನಾರಾಯಣನು ಕಿರಿಯವನು. ಇವರಿಬ್ಬರೂ ಬದರಿಕಾಶ್ರಮದಲ್ಲಿ ಬಹಳಕಾಲ ತಪಸ್ಸುಮಾಡಿಕೊಂಡಿದ್ದು ದ್ವಾಪರಯುಗದಲ್ಲಿ ಅರ್ಜುನ ಕೃಷ್ಣರಾಗಿ ಜನಿಸಿದರು.

ಅಮೃತಪರಮಪೂರ್ವಂ ಭಾರತೀ ಕಾಮಧೇನುಂ
ಶ್ರುತಿಗಣಕೃತವತ್ಸೋ ವ್ಯಾಸದೇವೋ ದುದೋಹ ।
ಅತಿರುಚಿರಪುರಾಣಂ ಬ್ರಹ್ಮವೈವರ್ತಮೇತತ್
ಪಿಬತ ಪಿಬತ ಮುಗ್ಧಾ ದುಗ್ಧಮಕ್ಷಯ್ಯಮಿಷ್ಟಂ ॥ ೨ ॥

---

೨. ಮಹರ್ಷಿಯಾದ ವ್ಯಾಸನು ವೇದಗಳನ್ನೇ ಕರುವಾಗಿ ಪಡೆದ ಸರಸ್ವತಿಯೆಂಬ ಕಾಮಧೇನುವಿನ ಅಮೃತೋಪಮವಾದ ಹಾಲನ್ನು ಕರೆದಿರುವನು. ಬಹಳ ಮನೋಹರವಾದ ಬ್ರಹ್ಮವೈವರ್ತಮಹಾಪುರಾಣವೆಂಬುದೇ ಆ ಹಾಲು. ಎಷ್ಟು ಸವಿದರೂ ತೃಪ್ತಿಯಾಗದ ಈ ಪುರಾಣರೂಪವಾದ ಹಾಲನ್ನು ಅಜ್ಞಾನಿಗಳೆಲ್ಲರೂ ಸವಿದು ಜ್ಞಾನಿಗಳಾಗಲಿ.

ಇಲ್ಲಿಗೆ ಮಂಗಳಾಶಾಸನವು ಮುಗಿದುದು.

॥ ಅಥ ಕಥಾಪ್ರಾರಂಭಃ ॥

ಭಾರತೇ ನೈಮಿಷಾರಣ್ಯೇ ಋಷಯಃ ಶೌನಕಾದಯಃ ।
ನಿತ್ಯಾಂ ನೈಮಿತ್ತಿಕೀಂ ಕೃತ್ವಾ ಕ್ರಿಯಾಮೂಷುಃ ಕುಶಾಸನೇ ॥ ೧ ॥

ಏತಸ್ಮಿನ್ನಂತರೇ ಸೌತಿಮಾಗಚ್ಛಂತಂ ಯದೃಚ್ಛಯಾ ।
ಪ್ರಣತಂ ಸುವಿನೀತಂ ತಂ ವಿಲೋಕ್ಯ ದದುರಾಸನಂ ॥ ೨ ॥

ತಂ ಸಂಪೂಜ್ಯಾತಿಥಿಂ ಭಕ್ತ್ಯಾ ಶೌನಕೋ ಮುನಿಪುಂಗವಃ ।
ಪಪ್ರಚ್ಛ ಕುಶಲಂ ಶಾಂತಂ ಶಾಂತಃ ಪೌರಾಣಿಕಂ ಮುದಾ ॥ ೩ ॥

ವರ್ತ್ಮಾಯಾಸವಿನಿರ್ಮುಕ್ತಂ ವಸಂತಂ ಸುಸ್ಥಿರಾಸನೇ ।
ಸಸ್ಮಿತಂ ಸರ್ವತತ್ತ್ವಜ್ಞಂ ಪುರಾಣಾನಾಂ ಪುರಾಣವಿತ್ ॥ ೪ ॥

ಕಥಾಪ್ರಾರಂಭವು

೧. ಭರತಖಂಡದಲ್ಲಿ *ನೈಮಿಷವೆಂಬ ಒಂದು ಅರಣ್ಯವಿದೆ. ಅಲ್ಲಿ ಹಿಂದೊಮ್ಮೆ ಶೌನಕಾದಿ ಮಹರ್ಷಿಗಳು ನಿತ್ಯನೈಮಿತ್ತಿಕಕರ್ಮಗಳನ್ನು ಆಚರಿಸಿ, ದರ್ಭಾಸನದಲ್ಲಿ ಮಂಡಿಸಿದ್ದರು.

೨. ಆ ಸಮಯಕ್ಕೆ ಸರಿಯಾಗಿ ಸೂತಮಹರ್ಷಿಗಳ ಮಕ್ಕಳಾದ ಉಗ್ರಶ್ರವರೆಂಬುವರು ಅನಿರೀಕ್ಷಿತವಾಗಿ ಅಲ್ಲಿಗೆ ಬಂದು ವಿನಯದಿಂದ ಋಷಿಗಳಿಗೆರಗಿದರು. ಶೌನಕಾದಿ ಋಷಿಗಳೂ ಕೂಡ ಸೂತಪುತ್ರರಿಗೆ ಪವಿತ್ರವಾದ ಆಸನವನ್ನು ಕೊಟ್ಟು ಕುಳಿತುಕೊಳ್ಳಲು ಹೇಳಿದರು.

೩. ಮುನಿಗಳಲ್ಲಿ ಶ್ರೇಷ್ಠರೂ, ಶಾಂತರೂ ಆದ ಶೌನಕರು, ಪುರಾಣಗಳನ್ನು ಬಲ್ಲವರೂ, ಶಾಂತರೂ ಆದ ಅತಿಥಿಗಳನ್ನು ಭಕ್ತಿಯಿಂದ ಸತ್ಕರಿಸಿ, ಕುಶಲಪ್ರಶ್ನೆ ಮಾಡಿದರು.

೪. ಸ್ವಲ್ಪಕಾಲ ವಿಶ್ರಮಿಸಿಕೊಂಡು, ಮಾರ್ಗಾಯಾಸವನ್ನು ಕಳೆದು, ಸ್ಮಿತಮುಖರಾಗಿ ಆಸನವನ್ನು ಅಲಂಕರಿಸಿರುವ, ಸೂತಪುರಾಣಿಕರ ಮಕ್ಕಳೂ ಪುರಾಣಗಳ ತತ್ತ್ವವನ್ನು ಬಲ್ಲವರೂ ಆದ ಉಗ್ರಶ್ರವರಿಂದ ಸರ್ವೋತ್ತಮವಾದ ಪುರಾಣವಾವುದೆಂಬುದನ್ನು ತಿಳಿದುಕೊಳ್ಳಬೇಕೆಂದು ಬಯಸಿ ಶೌನಕರು ಇಂತು ಪ್ರಶ್ನಿಸಿದರು.

ಟಿಪ್ಪಣಿ—*ನೈಮಿಷ: ಇದು ಗೋಮತೀರದಲ್ಲಿರುವ ಮಹಾಪವಿತ್ರವಾದ ಒಂದು ವನ, ಅಯೋಧ್ಯೆ ಮತ್ತು ರೋಹಿಲ್‌ಖಂಡದ ರೈಲ್ವೆಮಾರ್ಗದ ಬಳಿಯಿದೆ. ಹಿಂದೆ ದೇವತೆಗಳೆಲ್ಲರೂ ಇಲ್ಲಿ ದೊಡ್ಡ ಯಜ್ಞಮಾಡಿದರು.

ಪರಂ ಕೃಷ್ಣಕಥೋಪೇತಂ ಪುರಾಣಂ ಶ್ರುತಿಸಂಮತಂ ।
ಮಂಗಲಂ ಮಂಗಲಾರ್ಹಂ ಚ ಮಂಗಲ್ಯಂ ಮಂಗಲಾಲಯಂ ॥ ೫ ॥

ಸರ್ವಮಂಗಲಬೀಜಂ ಚ ಸರ್ವದಾ ಮಂಗಲಪ್ರದಂ ।
ಸರ್ವಾಮಂಗಲನಿಘ್ನಂ ಚ ಸರ್ವಸಂಪತ್ಕರಂ ಪರಂ ॥ ೬ ॥

ಹರಿಭಕ್ತಿಪ್ರದಂ ಶಶ್ವತ್ಸುಖದಂ ಮೋಕ್ಷದಂ ಭವೇತ್ ।
ತತ್ವಜ್ಞಾನಪ್ರದಂ ದಾರಪುತ್ರಪೌತ್ರ ವಿವರ್ಧನಂ ॥ ೭ ॥

ಪಪ್ರಚ್ಛ ಸುವಿನೀತಂ ಚ ಸುಪ್ರೀತೋ ಮುನಿಸಂಸದಿ ।
ಯಥಾಕಾಶೇ ತಾರಾಕಾಣಾಂ ದ್ವಿಜರಾಜೋ ವಿರಾಜತೇ ॥ ೮ ॥

॥ ಶೌನಕ ಉವಾಚ ॥

ಪ್ರಸ್ಥಾನಂ ಭವತಃ ಕುತ್ರ ಕುತ ಆಯಾಸಿ ತೇ ಶಿವಂ ।
ಕಿಮಸ್ಮಾಕಂ ಪುಣ್ಯದಿನಂ ಅದ್ಯ ತ್ವದ್ದರ್ಶನೇನ ಚ ॥ ೯ ॥

೫-೮. ಆಕಾಶದಲ್ಲಿ ನಕ್ಷತ್ರಗಳ ಮಧ್ಯದಲ್ಲಿ ಬೆಳಗುವ ಚಂದ್ರನಂತೆ ಉಗ್ರಶ್ರವರು ತಮ್ಮ ದಿವ್ಯತೇಜಸ್ಸಿನಿಂದ ಋಷಿಗಳ ಸಭೆಯಲ್ಲಿ ಬೆಳಗುತ್ತಿರಲು, ಅವರ ಬಾಯಿಂದ ಬರುವ ಅಮೃತವಾಣಿಯನ್ನು ಕೇಳಲು ಋಷಿಗಳೆಲ್ಲರೂ ಕುತೂಹಲಗೊಂಡಿರಲು, 'ಮಾನ್ಯರೇ ಪರಬ್ರಹ್ಮಸ್ವರೂಪನಾದ ಶ್ರೀಕೃಷ್ಣನ ಕಥೆಯನ್ನೊಳಗೊಂಡು, ವೇದದಲ್ಲಿ ಪ್ರತಿಪಾದಿತವಾಗಿ, ಅಮಂಗಳನಾಶಕವೂ ಮಂಗಳದಾಯಕವೂ ಆಗಿ, ಪಠನಮಾತ್ರದಿಂದಲೇ ಪರಮಾತ್ಮನಲ್ಲಿ ಅಚಲವಾದ ಭಕ್ತಿಯೂ, ಅದರ ಫಲವಾದ ನಿರಂತರ ಸುಖವೂ ದೊರೆತು, ಪತ್ನೀಪುತ್ರಪೌತ್ರಾದಿಸಕಲಸಂಪತ್ತನ್ನೂ ಇತ್ತು, ಕೊನೆಗೆ ತತ್ವಜ್ಞಾನದಿಂದ ಮುಕ್ತಿಯನ್ನೇ ಕೊಡುವ ಒಂದು ದಿವ್ಯ ಪುರಾಣವನ್ನು ತಾವು ನಮಗೆ ವಿಸ್ತರಿಸಿ ಹೇಳಬೇಕು' ಎಂದು ಶೌನಕರು ಬಹಳ ವಿನಯದಿಂದ ಪ್ರಶ್ನಿಸಿದರು.

೯. ಶೌನಕ—ಮಹರ್ಷಿಗಳೇ, ತಾವು ಎಲ್ಲಿಗೆ ಪ್ರಯಾಣಮಾಡುತ್ತಿದ್ದೀರಿ? ಎಲ್ಲಿಂದ ಇಲ್ಲಿಗೆ ದಯಮಾಡಿಸಿದಿರಿ? ನಿಮಗೆ ಕುಶಲವೇ? ತಮ್ಮಂಥ ಮಹಾತ್ಮರ ದರ್ಶನವಾದ ಈ ದಿನವೇ ನಮಗೆ ಸುದಿನ. ನಮ್ಮ ಪೂರ್ವಪುಣ್ಯದ ಫಲವಾಗಿ ತಮ್ಮ ಸಂದರ್ಶನ ಲಭಿಸಿತು.

ವಯಮೇವ ಕಲೌ ಭೀತಾಃ ವಿಶಿಷ್ಟಜ್ಞಾನವರ್ಜಿತಾಃ ।
ಮುಮುಕ್ಷವೋ ಭವೇ ಮಗ್ನಾಸ್ತದ್ಧೇತುಸ್ತ್ವಮಿಹಾಗತಃ ॥ ೧೦ ॥

ಭವಾನ್ ಸಾಧುರ್ಮಹಾಭಾಗಃ ಪುರಾಣೇಷು ಪುರಾಣವಿತ್ ।
ಸರ್ವೇಷು ಚ ಪುರಾಣೇಷು ನಿಷ್ಣಾತೋಽತಿಕೃಪಾನಿಧಿಃ ॥ ೧೧ ॥

ಶ್ರೀಕೃಷ್ಣೇ ನಿಶ್ಚಲಾ ಭಕ್ತಿರ್ಯತೋ ಭವತಿ ಶಾಶ್ವತೀ ।
ತತ್ಕಥ್ಯತಾಂ ಮಹಾಭಾಗ ಪುರಾಣಂ ಜ್ಞಾನವರ್ಧನಂ ॥ ೧೨ ॥

ಗರೀಯಸೀ ಯಾ ಸಾಕ್ಷಾಚ್ಚ ಕರ್ಮಮೂಲನಿಕೃಂತನೀ ।
ಸಂಸಾರಸನ್ನಿಬದ್ಧಾನಾಂ ನಿಗಡಚ್ಛೇದಕರ್ತರೀ ॥ ೧೩ ॥

ಭವದಾವಾಗ್ನಿದಗ್ಧಾನಾಂ ಪೀಯೂಷವೃಷ್ಟಿವರ್ಷಿಣೀ ।
ಸುಖದಾಽನಂದದಾ ಸೌತೇ ಶಶ್ವಚ್ಚೇತಸಿ ಜೀವಿನಾಂ ॥ ೧೪ ॥

---

೧೦. ಕಲಿಯುಗದಲ್ಲಿ ಹುಟ್ಟಿರುವ ನಾವು ಕಲಿಯ ದೌರ್ಜನ್ಯದಿಂದ ಪರಮಾತ್ಮಸ್ವರೂಪವನ್ನು ಅರಿಯಲಾಗದೆ ಸಂಸಾರಸಾಗರದಲ್ಲಿ ಮುಳುಗಿದ್ದೇವೆ. ಮೋಕ್ಷಹೊಂದಬೇಕೆಂಬ ಆಸೆಯಿದ್ದರೂ ದಾರಿಕಾಣೆವು. ನಮಗೆ ಮುಕ್ತಿಮಾರ್ಗವನ್ನು ಉಪದೇಶಿಸಲೆಂದೇ ತಾವು ಬಂದಂತಾಯಿತು.

೧೧. ತಾವು ಸತ್ಪುರುಷರು ; ಮಹಾಭಾಗ್ಯಶಾಲಿಗಳು ; ಪುರಾಣಗಳ ಸಾರ ವನ್ನರಿತವರು. ಆದುದರಿಂದ ದಯಾಮಯರಾದ ತಾವು ಮುಕ್ತಿಮಾರ್ಗದರ್ಶಕವಾದ ಪುರಾಣವೊಂದನ್ನು ನಮಗೆ ಉಪದೇಶಿಸಬೇಕು.

೧೨. ಮಹಾಜ್ಞಾನಿಗಳಾದ ತಾವು ಹೇಳುವ ಪುರಾಣವನ್ನು ನಾವು ಕೇಳಿದ ಮಾತ್ರದಿಂದಲೇ ನಮ್ಮ ಜ್ಞಾನಭಂಡಾರವು ವೃದ್ಧಿಹೊಂದಿ, ಶ್ರೀಕೃಷ್ಣನಲ್ಲಿ ನಿಶ್ಚಲವೂ, ಶಾಶ್ವತವೂ ಆದ ಭಕ್ತಿಯುಂಕುರಿಸಬೇಕು.

೧೩–೧೪. ಯಾವ ಭಕ್ತಿಯು ಜನ್ಮಾಂತರದ ಕರ್ಮಶೇಷಗಳನ್ನು ನಿರ್ಮೂಲ ಗೊಳಿಸಿ, ಸಂಸಾರದಲ್ಲಿ ಸಿಲುಕಿದವರ ಬಂಧನವನ್ನು ಕತ್ತರಿಸಿ, ಸಂಸಾರವೆಂಬ ಕಾಡುಕಿಚ್ಚಿಗೆ ಸಿಲುಕಿ ತಪಿಸುತ್ತಿರುವವರಿಗೆ ಅಮೃತಧಾರೆಯಂತೆ ಆಹ್ಲಾದಗೊಳಿಸಿ, ಜೀವಿಗಳ ಮನಸ್ಸಿಗೆ ನಿರಂತರವಾದ ಆನಂದವನ್ನು ಕೊಡುವ ಮುಖ್ಯಸಾಧನ ವಾಗಿರುವುದು.

ಯತ್ರಾದೌ ಸರ್ವಬೀಜಂ ಚ ಪರಂ ಬ್ರಹ್ಮ ನಿರೂಪಣಂ ।
ತಸ್ಯ ಸೃಷ್ಟ್ಯುನ್ಮುಖಸ್ಯಾಪಿ ಸೃಷ್ಟೇರುತ್ಕೀರ್ತನಂ ಪರಂ ॥ ೧೫ ॥

ಸಾಕಾರಂ ವಾ ನಿರಾಕಾರಂ ಪರಮಾತ್ಮಸ್ವರೂಪಕಂ ।
ಕಿಮಾಕಾರಂ ಚ ತದ್ಬ್ರಹ್ಮ ತದ್ಧ್ಯಾನಂ ಕಿಂಚ ಭಾವನಂ ॥ ೧೬ ॥

ಧ್ಯಾಯಂತೇ ವೈಷ್ಣವಾಃ ಕಿಂ ವಾ ಶಾಂತಾಶ್ಚ ಯೋಗಿನಸ್ತಥಾ ।
ಮತಂ ಪ್ರಧಾನಂ ಕೇಷಾಂ ವಾ ಗೂಢಂ ವೇದೇ ನಿರೂಪಿತಂ ॥ ೧೭ ॥

ಪ್ರಕೃತೇಶ್ಚ ಯ ಆಕಾರಃ ಯತ್ರ ವತ್ಸ ನಿರೂಪಿತಃ ।
ಗುಣಾನಾಂ ಲಕ್ಷಣಂ ಯತ್ರ ಮಹದಾದೇಶ್ಚ ನಿಶ್ಚಯಃ ॥ ೧೮ ॥

---

೧೫. ಆ ಪುರಾಣದ ಆದಿಯಲ್ಲಿ ನಿಖಿಲಪ್ರಪಂಚಕ್ಕೂ ಬೀಜರೂಪವಾದ ಪರಬ್ರಹ್ಮಸ್ವರೂಪವನ್ನೂ, ಸೃಷ್ಟಿಗೆ ತೊಡಗಿದ ಅವನ ಸೃಷ್ಟಿಕ್ರಮವನ್ನೂ ನಿರೂಪಿಸಬೇಕು.

೧೬. ಪರಮಾತ್ಮಸ್ವರೂಪವು ಸಾಕಾರವೇ ಅಥವಾ ನಿರಾಕಾರವೇ? ಪರಬ್ರಹ್ಮ ಸ್ವರೂಪವನ್ನು ನಾವು ಧ್ಯಾನಮಾಡುವ ಬಗೆ ಹೇಗೆ? ಅದನ್ನು ನಮ್ಮ ಅನುಭವಕ್ಕೆ ತಂದುಕೊಳ್ಳುವುದೆಂತು?

೧೭. ವಿಷ್ಣುಭಕ್ತರು ಮತ್ತು ಶಾಂತಾತ್ಮರಾದ ಯೋಗಿಗಳು ಆ ಪರವಸ್ತುವನ್ನು ಹೇಗೆ ಧ್ಯಾನಿಸುವರು? ಇವರಿಬ್ಬರು ಅನುಸರಿಸುವ ಮಾರ್ಗದಲ್ಲಿ ಯಾವುದು ಮುಖ್ಯವೆಂದು ವೇದದಲ್ಲಿ ಹೇಳಿದೆ?

೧೮. ಪ್ರಕೃತಿಯ ಆಕಾರವಾವುದು? ಸತ್ವರಜಸ್ತಮೋಗುಣಗಳ ಸ್ವರೂಪ ಭೇದವೇನು? ಮಹತ್ತು, ಸೂಕ್ಷ್ಮ ಮತ್ತು ಅವ್ಯಕ್ತ ಇವುಗಳನ್ನು ತಿಳಿಯುವ ಬಗೆ ಹೇಗೆ?

ಗೋಲೋಕವರ್ಣನಂ ಯತ್ರ ಯತ್ರ ವೈಕುಂಠವರ್ಣನಂ ।
ವರ್ಣನಂ ಶಿವಲೋಕಸ್ಯ ಯತ್ರಾನ್ಯತ್ ಸ್ವರ್ಗವರ್ಣನಂ ॥ ೧೯ ॥

ಅಂಶಾನಾಂ ಚ ಕಲಾನಾಂ ಚ ಯತ್ರ ಸೌತೇ ನಿರೂಪಣಂ ।
ಕೇ ಪ್ರಾಕೃತಾಃ ಕಾ ಪ್ರಕೃತಿಃ ಕ ಆತ್ಮಾ ಪ್ರಕೃತೇಃ ಪರಃ ॥ ೨೦ ॥

ನಿಗೂಢಂ ಜನ್ಮ ಯೇಷಾಂ ವಾ ದೇವಾನಾಂ ದೇವಯೋಷಿತಾಂ ।
ಸಮುತ್ಪತ್ತಿಃ ಸಮುದ್ರಾಣಾಂ ಶೈಲಾನಾಂ ಸರಿತಾಮಪಿ ॥ ೨೧ ॥

ಕೇ ವಾಂಶಾಃ ಪ್ರಕೃತೇಶ್ಚಾಪಿ ಕಲಾಃ ಕಾ ವಾ ಕಲಾಕಲಾಃ ।
ತಾಸಾಂ ಚ ಚರಿತಂ ಧ್ಯಾನಂ ಪೂಜಾಸ್ತೋತ್ರಾದಿಕಂ ಶುಭಂ ॥ ೨೨ ॥

---

೧೯. ಯಾವ ಪುರಾಣದಲ್ಲಿ ಗೋಲೋಕ, ವೈಕುಂಠಲೋಕ, ಶಿವಲೋಕ ಮತ್ತು ಇತರ ಸ್ವರ್ಗಲೋಕಗಳ ವರ್ಣನೆಯಿದೆ?

೨೦. ಪರಮಾತ್ಮನ ಅಂಶ ಮತ್ತು ಕಲೆಯಿಂದ ಅವತರಿಸುವವರಾರು? ಜನನಮರಣಾತ್ಮಕವಾದ ಸಂಸಾರಕೋಟಲೆಗೆ ಸಿಲುಕುವ ಪ್ರಾಕೃತರಾರು? ಪ್ರಕೃತಿ ಮತ್ತು ಪ್ರಕೃತಿಗಿಂತ ಶ್ರೇಷ್ಠವಾದ ಪರಮಾತ್ಮ, ಇವುಗಳ ವಿವೇಚನೆಯು ಬಗೆ ಹೇಗೆ?

೨೧. ದೇವತೆಗಳ ಮತ್ತು ದೇವತಾಸ್ತ್ರೀಯರ ಉತ್ಪತ್ತಿಕ್ರಮವೆಂತು? ಸಮುದ್ರ, ಪರ್ವತ ಮತ್ತು ನದಿಗಳ ಸೃಷ್ಟಿಯು ಹೇಗಾಯಿತು?

೨೨. ಪ್ರಕೃತಿಯ ಅಂಶ, ಕಲೆ, ಮತ್ತು ಕಲಾಂಶದಿಂದ ಅವತರಿಸಿದ ದೇವಿಯರು ಯಾರು? ಅವರ ಚರಿತ್ರೆಯೇನು? ಮಂಗಳಕರವಾದ ಆ ದೇವಿಯರ, ಪೂಜಾಸ್ತೋತ್ರಾದಿಗಳ ಕ್ರಮವಾವುದು?

ದುರ್ಗಾ ಸರಸ್ವತೀ ಲಕ್ಷ್ಮೀ ಸಾವಿತ್ರೀಣಾಂ ಚ ವರ್ಣನಂ ।
ಯತ್ರೈವ ರಾಧಿಕಾಖ್ಯಾನಮತ್ಯಪೂರ್ವಂ ಸುಧೋಪಮಂ ॥ ೨೩ ॥

ಜೀವಕರ್ಮ ವಿಪಾಕಶ್ಚ ನರಕಾಣಾಂ ಚ ವರ್ಣನಂ ।
ಕರ್ಮಣಾಂ ಖಂಡನಂ ಯತ್ರ ಯತ್ರ ತೇಭ್ಯೋ ವಿಮೋಕ್ಷಣಂ ॥ ೨೪ ॥

ಯೇಷಾಂ ಚ ಜೀವಿನಾಂ ಯದ್ಯತ್ ಸ್ಥಾನಂ ಯತ್ರ ಶುಭಾಶುಭಂ ।
ಜೀವಿನಾಂ ಕರ್ಮಣೋ ಯಸ್ಮಾತ್ ಯಾಸು ಯಾಸು ಚ ಯೋನಿಷು ॥ ೨೫ ॥

ಜೀವಿನಾಂ ಕರ್ಮಣೋ ಯಸ್ಮಾತ್ ಯೋ ಯೋ ರೋಗೋ ಭವೇದಿಹ ।
ಮೋಕ್ಷಣಂ ಕರ್ಮಣೋ ಯಸ್ಮಾತ್ತೇಷಾಂ ಚೈತನ್ನಿರೂಪಯ ॥ ೨೬ ॥

---

೨೩. ಯಾವ ಪುರಾಣದಲ್ಲಿ ದುರ್ಗಾ, ಸರಸ್ವತಿ, ಲಕ್ಷ್ಮಿ, ಮತ್ತು ಸಾವಿತ್ರಿ ದೇವಿಯರ ವರ್ಣನೆಯೂ, ಅಮೃತದಂತೆ ಆಹ್ಲಾದಕರವಾದ ರಾಧಾಕೃಷ್ಣರ ವಿಲಾಸ ಕಥೆಯೂ ನಿರೂಪಿತವಾಗಿದೆ?

೨೪. ಜೀವಿಗಳ ಕರ್ಮವಿಪಾಕವನ್ನೂ ಮತ್ತು ನರಕಗಳ ಸ್ವರೂಪವನ್ನೂ ಎಲ್ಲಿ ವಿಸ್ತಾರವಾಗಿ ತಿಳಿಯಬಹುದು? ಕರ್ಮಾಚರಣೆ ಕೂಡದೆಂದು ಎಲ್ಲಿ ಹೇಳಿದೆ? ಕರ್ಮಬಂಧನದಿಂದ ಮುಕ್ತರಾಗುವ ಕ್ರಮವನ್ನು ಯಾವ ಪುರಾಣದಲ್ಲಿ ತಿಳಿಯಬಹುದು?

೨೫–೨೬. ಯಾವ ಯಾವ ಕರ್ಮದ ಫಲವಾಗಿ, ಯಾವ ಯಾವ ಯೋನಿಯಲ್ಲಿ ಜೀವಿಗಳಿಗೆ ಜನ್ಮವು ಲಭಿಸುವುದು? ಅದರಲ್ಲಿ ಶುಭಾಶುಭಗಳಾವುವು? ಯಾವ ದುಷ್ಕರ್ಮದ ಫಲವಾಗಿ ಪ್ರಾಣಿಗಳಿಗೆ ಯಾವ ರೋಗವು ಸಂಭವಿಸುವುದು? ಏನು ಮಾಡಿ ಆ ದುಷ್ಕರ್ಮಗಳಿಂದ ಪಾರಾಗಬಹುದು?

ಮನಸಾ ತುಳಸೀ ಕಾಳೀ ಗಂಗಾ ಪೃಥ್ವೀ ವಸುಂಧರಾ ।
ಆಸಾಂ ಯತ್ರ ಶುಭಾಖ್ಯಾನಂ ಅನ್ಯಾಸಾಮಪಿ ಯತ್ರ ವೈ ॥ ೨೭ ॥

ಶಾಲಿಗ್ರಾಮಶಿಲಾನಾಂ ಚ ದಾನಾನಾಂ ಚ ನಿರೂಪಣಂ ।
ಅಪೂರ್ವಂ ಯತ್ರ ವಾ ಸೌತೇ ಧರ್ಮಾಧರ್ಮನಿರೂಪಣಂ ॥ ೨೮ ॥

ಗಣೇಶ್ವರಸ್ಯ ಚರಿತಂ ಯತ್ರ ತಜ್ಜನ್ಮ ಕರ್ಮ ಚ ।
ಕವಚಸ್ತೋತ್ರಮಂತ್ರಾಣಾಂ ಗೂಢಾನಾಂ ಯತ್ರ ವರ್ಣನಂ ॥ ೨೯ ॥

ಯದಪೂರ್ವಮುಪಾಖ್ಯಾನಮಶ್ರುತಂ ಪರಮಾದ್ಭುತಂ ।
ಕೃತ್ವಾ ಮನಸಿ ತತ್ಸರ್ವಂ ಸಾಂಪ್ರತಂ ವಕ್ತುಮರ್ಹಸಿ ॥ ೩೦ ॥

ಯತ್ರ ಜನ್ಮ ಭ್ರಮೋ ವಿಶ್ವೇ ಪುಣ್ಯಕ್ಷೇತ್ರೇ ಚ ಭಾರತೇ ।
ಪರಿಪೂರ್ಣತಮಸ್ಯಾಪಿ ಕೃಷ್ಣಸ್ಯ ಪರಮಾತ್ಮನಃ ॥ ೩೧ ॥

---

೨೭. ಮನಸಾ, ತುಳಸಿ, ಕಾಳಿ, ಗಂಗೆ, ಪೃಥ್ವಿ, ವಸುಂಧರೆ ಮತ್ತು ಇತರ ದೇವಿಯರ ದಿವ್ಯವಂಗಳ ಚರಿತ್ರೆಯು ಯಾವ ಪುರಾಣದಲ್ಲಿದೆ?

೨೮. ಸಾಲಿಗ್ರಾಮಶಿಲೆಯ ಮಹಿಮೆ ಮತ್ತು ಅದರ ದಾನದಿಂದ ಲಭಿಸುವ ಪುಣ್ಯವೇನು? ಧರ್ಮಾಧರ್ಮಸ್ವರೂಪವನ್ನು ಎಲ್ಲಿ ವಿಶೇಷವಾಗಿ ವಿವೇಚನೆಮಾಡಿದೆ?

೨೯–೩೦. ಗಣಪತಿಯ ಜನ್ಮಕರ್ಮಗಳನ್ನು ತಿಳಿಸುವ ಚರಿತ್ರೆಯು ಎಲ್ಲಿದೆ? ಕವಚ, ಸ್ತೋತ್ರ, ಮಂತ್ರಗಳ ರಹಸ್ಯವನ್ನು ಎಲ್ಲಿ ವರ್ಣಿಸಿದೆ? ನಾವು ಇದುವರೆಗೂ ಕೇಳದಿರುವ ಆಶ್ಚರ್ಯಕರವಾದ ಸಂಗತಿ ಯಾವುದು? ಇವೆಲ್ಲವನ್ನೂ ಮನಸ್ಸಿನಲ್ಲಿ ಚೆನ್ನಾಗಿ ಯೋಚಿಸಿ ಹೇಳಬೇಕೆಂದು ವಿನಯದಿಂದ ಬೇಡುತ್ತೇವೆ.

೩೧. ಅಲ್ಲದೆ, ಪರಿಪೂರ್ಣಸ್ವರೂಪನಾದ ಶ್ರೀಕೃಷ್ಣಪರಮಾತ್ಮನು ಸಂಸಾರ ಬಂಧನಕ್ಕೆ ಸಿಲುಕಿದುದೆಂತು? ಪುಣ್ಯಕ್ಷೇತ್ರವಾದ ಭರತಖಂಡದ ಯಾವ ಭಾಗದಲ್ಲಿ, ಆತನು ಜನ್ಮವೆತ್ತಿ ಭ್ರಮಣಮಾಡಿದನು?

ಜನ್ಮ ಕಸ್ಯ ಗೃಹೇ ಲಬ್ಧಂ ಪುಣ್ಯೇ ಪುಣ್ಯವತೋ ಮುನೇ ।
ಸುತಂ ಪ್ರಸೂತಾ ಕಾ ಧನ್ಯಾ ಮಾನ್ಯಾ ಪುಣ್ಯವತೀ ಸತೀ ॥ ೩೨ ॥

ಆವಿರ್ಭೂಯ ಚ ತದ್ಗೇಹಾತ್ ಕ್ವಗತಃ ಕೇನ ಹೇತುನಾ ।
ಗತ್ವಾ ಕಿಂ ಕೃತವಾನ್ ತತ್ರ ಕಥಂ ವಾ ಪುನರಾಗತಃ ॥ ೩೩ ॥

ಭಾರಾವತರಣಂ ಕೇನ ಪ್ರಾರ್ಥಿತೋ ಗೋಽಶ್ಚಕಾರ ಸಃ ।
ವಿಧಾಯ ಕಿಂ ವಾ ಸೇತುಂ ಚ ಗೋಲೋಕಂ ಗತವಾನ್ ಪುನಃ ॥ ೩೪ ॥

ಇತೀದಮನ್ಯದಾಖ್ಯಾನಂ ಪುರಾಣಂ ಶ್ರುತಿ ದುರ್ಲಭಂ ।
ದುರ್ವಿಜ್ಞೇಯಂ ಮುನೀನಾಂ ಚ ಮನೋನಿರ್ಮಲಕಾರಣಂ ॥ ೩೫ ॥

ಸ್ವಜ್ಞಾನಾದ್ಯನ್ಮಯಾ ಪೃಷ್ಟಮಪೃಷ್ಟಂ ವಾ ಶುಭಾಶುಭಂ ।
ಸದ್ಯೋ ವೈರಾಗ್ಯಜನನಂ ತನ್ಮೇ ವ್ಯಾಖ್ಯಾತುಮರ್ಹಸಿ ॥ ೩೬ ॥

---

೩೨. ಯಾವ ಪುಣ್ಯಾತ್ಮನ ಮಂಗಳಗೃಹದಲ್ಲಿ ಶ್ರೀಕೃಷ್ಣನ ಅವತಾರವಾಯಿತು? ಧನ್ಯಳೂ, ಮಾನ್ಯಳೂ ಆದ ಯಾವಾಕೆಯು ಅವನ ತಾಯಿಯಾಗುವ ಭಾಗ್ಯವನ್ನು ಪಡೆದಳು.

೩೩. ಅವತಾರಮಾಡಿದ ಮೇಲೆ ಯಾವ ಕಾರಣದಿಂದ ಆ ಮನೆಯನ್ನು ಬಿಟ್ಟನು ಮತ್ತು ಎಲ್ಲಿಗೆ ಹೋದನು ? ಹೋಗಿ ಅಲ್ಲಿ ಅವನು ಮಾಡಿದ ಮಹತ್ಕಾರ್ಯ ವಾವುದು ? ಅಲ್ಲಿಂದ ಪುನಃ ಹಿಂತಿರುಗಿ ಬಂದುದು ಹೇಗೆ ?

೩೪. ಅವನು ಯಾರ ಪ್ರಾರ್ಥನೆಯಂತೆ ಭೂಭಾರವನ್ನಿಳುಹಿದನು ? ಪುನಃ ಗೋಲೋಕಕ್ಕೆ ಹೋಗಿ ಸೇರಲು ಅವನು ರಚಿಸಿದ ಮಾರ್ಗವಾವುದು ?

೩೫–೩೬. ವೇದದಲ್ಲಿ ವ್ಯಕ್ತವಾಗದೆಯೂ ಮುನಿಗಳಿಂದ ತಿಳಿಯಲಾಗದೆಯೂ ಇರುವ ಪುರಾಣವೊಂದನ್ನು ಹೇಳಿ, ನಮ್ಮ ಮನಸ್ಸನ್ನು ನಿರ್ಮಲಗೊಳಿಸಿ, ನನ್ನ ಅಲ್ಪತಿಳಿವಳಿಕೆಯಿಂದ ನಾನು ಕೇಳಿದ ಮತ್ತು ಕೇಳದಿರುವ, ಸಂಸಾರದಲ್ಲಿ ಜಿಗುಪ್ಸೆ ಹುಟ್ಟಿಸುವ ಶುಭಾಶುಭ ವಿಷಯಗಳನ್ನು ದಯವಿಟ್ಟು ನಮಗೆ ವಿಸ್ತರಿಸಿ ಹೇಳಬೇಕು.

ಶಿಷ್ಯಪೃಷ್ಟಮಪೃಷ್ಟಂ ವಾ ವ್ಯಾಖ್ಯಾನಂ ಕುರುತೇ ಚ ಯಃ ।
ಸ ಸದ್ಗುರುಃ ಸತಾಂ ಶ್ರೇಷ್ಠಃ ಯೋಗ್ಯಾಯೋಗ್ಯೇ ಚ ಯಃ ಸಮಃ ॥ ೩೭ ॥

॥ ಸೌತಿರುವಾಚ ॥

ಸರ್ವಂ ಕುಶಲಮಸ್ಮಾಕಂ ಭವತ್ಪಾದಾಬ್ಜದರ್ಶನಾತ್ ।
ಸಿದ್ಧಕ್ಷೇತ್ರಾದಾಗತೋಽಹಂ ಯಾಮಿ ನಾರಾಯಣಾಶ್ರಮಂ ॥ ೩೮ ॥

ದೃಷ್ಟ್ವಾ ವಿಪ್ರಸಮೂಹಂ ಚ ನಮಸ್ಕರ್ತುಮಿಹಾಗತಃ ।
ದ್ರಷ್ಟುಂ ಚ ನೈಮಿಷಾರಣ್ಯಂ ಪುಣ್ಯದಂ ಚಾಪಿ ಭಾರತೇ ॥ ೩೯ ॥

---

೩೭. ಶಿಷ್ಯನು ವಿನಯದಿಂದ ಪ್ರಶ್ನಿಸಿದ್ದನ್ನೂ ಮತ್ತು ಅಜ್ಞಾನದಿಂದ ಪ್ರಶ್ನಿಸದೆ ಬಿಟ್ಟದ್ದನ್ನೂ ಯಾವ ಗುರುವು ವಿವರಿಸುವನೋ ಮತ್ತು ಯೋಗ್ಯಾಯೋಗ್ಯರೆಲ್ಲರಲ್ಲೂ ಸಮದೃಷ್ಟಿಯನ್ನಿಟ್ಟಿರುವನೋ ಆತನೇ ಸದ್ಗುರುವೆನಿಸಿಕೊಳ್ಳುವನು.

೩೮. ಸೂತಪುತ್ರರು :— ತಪೋನಿರತರಾದ ತಮ್ಮ ಅಡಿದಾವರೆಗಳ ದರ್ಶನದಿಂದ ನಾವು ಕ್ಷೇಮವಾಗಿದ್ದೇವೆ. ಈಗ †ಸಿದ್ಧಾಶ್ರಮದಿಂದ ಬಂದ ನಾನು ಮುಂದೆ *ನಾರಾಯಣಾಶ್ರಮಕ್ಕೆ ಹೋಗಬೇಕಾಗಿದೆ.

೩೯. ಮಧ್ಯಮಾರ್ಗದಲ್ಲಿ ತಪಸ್ವಿಗಳಾದ ಬ್ರಾಹ್ಮಣರ ದಿವ್ಯಸಂದರ್ಶನವನ್ನು ಪಡೆದು, ಅವರಿಗೆ ವಂದಿಸಿ, ಭರತಖಂಡದಲ್ಲಿ ಪುಣ್ಯತಮವಾದ ನೈಮಿಷಾರಣ್ಯವನ್ನೂ ನೋಡಿ ಹೋಗಬೇಕೆಂದು ಹೀಗೆ ಬಂದೆನು.

ಸಿದ್ಧಾಶ್ರಮ—†ಇದು ಮಲದ ಮತ್ತು ಕರೂಷ ದೇಶಗಳ ನಡುವೆಯಿದೆ. ಪೂರ್ವದಲ್ಲಿ ಅದಿತಿ, ಕಶ್ಯಪ, ವಾಮನ ಮುಂತಾದವರು ತಪಸ್ಸು ಮಾಡಿ ಸಿದ್ಧಿಪಡೆದಕಾರಣ ಇದಕ್ಕೆ ಸಿದ್ಧಾಶ್ರಮವೆಂದು ಹೆಸರು. ವಿಶ್ವಾಮಿತ್ರನು ತಪಸ್ಸುಮಾಡಿದುದೂ, ಶ್ರೀರಾಮನು ಮಾರೀಚ, ಸುಬಾಹುಗಳನ್ನು ನಿಗ್ರಹಿಸಿದುದೂ ಇಲ್ಲಿಯೇ.

ನಾರಾಯಣಾಶ್ರಮ—*ಹಿಮವತ್ಪರ್ವತದ ಉತ್ತರಕ್ಕಿರುವ ಬದರಿಕಾಶ್ರಮಕ್ಕೇ ಈ ಹೆಸರು. ನರನಾರಾಯಣರು ಬಹಳಕಾಲ ಇಲ್ಲಿ ತಪಸ್ಸುಮಾಡುತ್ತಿದ್ದರು. ಇದು ಅಲಕನಂದಾ ತೀರದಲ್ಲಿದೆ. ಅಲ್ಲಿಯೇ ನಾರಾಯಣಸ್ವಾಮಿಯ ಮಂದಿರವೂ ಒಂದಿದೆ.

ದೇವಂ ವಿಪ್ರಂ ಗುರುಂ ದೃಷ್ಟ್ವಾ ನ ನಮೇದ್ಯಸ್ತು ಸ-ಭ್ರಮಾತ್ ।
ಸ ಕಾಲಸೂತ್ರಂ ವ್ರಜತಿ ಯಾವಚ್ಚಂದ್ರದಿವಾಕರೌ ॥ ೪೦ ॥

ಹರಿರ್ಬ್ರಾಹ್ಮಣರೂಪೇಣ ಶಶ್ವದ್ಭ್ರಮತಿ ಭೂತಲೇ ।
ಸುಕೃತೀ ಪ್ರಣಮೇತ್ಪುಣ್ಯಾತ್ ಬ್ರಾಹ್ಮಣಂ ಹರಿರೂಪಿಣಂ ॥ ೪೧ ॥

ಭಗವನ್ ಯತ್ತ್ವಯಾ ಪೃಷ್ಟಂ ಜ್ಞಾತಂ ಸರ್ವಮಭೀಪ್ಸಿತಂ ।
ಸಾರಭೂತಂ ಪುರಾಣೇಷು ಬ್ರಹ್ಮವೈವರ್ತಮುತ್ತಮಂ ॥ ೪೨ ॥

ಪುರಾಣೋಪಪುರಾಣಾನಾಂ ವೇದಾನಾಂ ಭ್ರಮಭಂಜನಂ ।
ಹರಿಭಕ್ತಿಪ್ರದಂ ಸರ್ವತತ್ತ್ವಜ್ಞಾನವಿವರ್ಧನಂ ॥ ೪೩ ॥

---

೪೦. ದೇವರು, ಬ್ರಾಹ್ಮಣರು ಮತ್ತು ಗುರುಗಳನ್ನು ನೋಡಿದರೂ ಆದರದಿಂದ ವಂದಿಸದೆ ಉದಾಸೀನನಾಗಿರುವವನು ಚಂದ್ರಸೂರ್ಯರಿರುವವರೆಗೆ ಕಾಲಸೂತ್ರವೆಂಬ ನರಕದಲ್ಲಿ ನರಳುವನು.

೪೧. ವಿಷ್ಣುವು ಭೂಮಂಡಲದಲ್ಲಿ ಆಗಾಗ್ಗೆ ಬ್ರಾಹ್ಮಣರೂಪಧಾರಿಯಾಗಿ ತಿರುಗಾಡುವನು. ವಿಷ್ಣುಸ್ವರೂಪಿಯಾದ ಆ ಬ್ರಾಹ್ಮಣನ ಸಂದರ್ಶನವನ್ನು ಪಡೆದು ವಂದಿಸಲು ಜನ್ಮಾಂತರದ ಸುಕೃತವಿರಬೇಕು.

೪೨. ಪೂಜ್ಯರಾದ ಶೌನಕರೇ, ತಮ್ಮ ಪ್ರಶ್ನೆಗಳಿಂದ ತಮ್ಮ ಅಭಿಪ್ರಾಯವು ವಿಶದವಾಯಿತು. ಪುರಾಣಗಳಲ್ಲೆಲ್ಲ ಬ್ರಹ್ಮವೈವರ್ತಪುರಾಣವೆಂಬುದು ಸಾರಭೂತವೂ ಅತ್ಯುತ್ತಮವೂ ಆಗಿದೆ.

೪೩. ವೇದಗಳು, ಇತರ ಪುರಾಣಗಳು ಮತ್ತು ಉಪಪುರಾಣಗಳು ಇವುಗಳಿಂದ ತಿಳಿಯುವ ಭ್ರಮರೂಪವಾದ ತತ್ತ್ವವು ಈ ಪುರಾಣದಲ್ಲಿ ಸ್ಪಷ್ಟವಾಗುವುದು. ಅಲ್ಲದೆ ಈ ಪುರಾಣಪಠನದಿಂದ ಹರಿಭಕ್ತಿಯೂ, ಸಕಲ ತತ್ತ್ವಜ್ಞಾನವೂ ವೃದ್ಧಿಯಾಗುವುದು.

ಕಾಮಿನಾಂ ಕಾಮದಂ ಚೇದಂ ಮುಮುಕ್ಷೂಣಾಂ ಚ ಮೋಕ್ಷದಂ ।
ಭಕ್ತಿಪ್ರದಂ ವೈಷ್ಣವಾನಾಂ ಕಲ್ಪವೃಕ್ಷಸ್ವರೂಪಕಂ ॥ ೪೪ ॥

ಬ್ರಹ್ಮಖಂಡಂ ಸರ್ವಬೀಜಂ ಪರಬ್ರಹ್ಮನಿರೂಪಣಂ ।
ಧ್ಯಾಯಂತೇ ಯೋಗಿನಸ್ಸಂತೋ ವೈಷ್ಣವಾ ಯತ್ಪರಾತ್ಪರಂ ॥ ೪೫ ॥

ವೈಷ್ಣವಾ ಯೋಗಿನಸ್ಸಂತಃ ನ ಚ ಭಿನ್ನಾಶ್ಚ ಶೌನಕ ।
ಸ್ವಜ್ಞಾನಪರಿಪಾಕೇನ ಭವಂತಿ ಜೀವಿನಃ ಕ್ರಮಾತ್ ॥ ೪೬ ॥

ಸಂತೋ ಭವಂತಿ ಸತ್ಸಂಗಾತ್ ಯೋಗಿಸಂಗೇನ ಯೋಗಿನಃ ।
ವೈಷ್ಣವಾ ಭಕ್ತಸಂಗೇನ ಕ್ರಮಾತ್ಸದ್ಯೋಗಿನಃ ಪರಾಃ ॥ ೪೭ ॥

---

೪೪. ಮತ್ತು ಈ ಪುರಾಣವು ವಿಷಯಾಭಿಲಾಷಿಗಳಿಗೆ ವಿಷಯಸುಖವನ್ನೂ, ಮೋಕ್ಷಕಾಮಿಗಳಿಗೆ ಮೋಕ್ಷಸುಖವನ್ನೂ, ವೈಷ್ಣವರಿಗೆ ವಿಷ್ಣುಭಕ್ತಿಯನ್ನೂ ಕೊಡುವ ಕಲ್ಪವೃಕ್ಷದಂತಿರುವುದು.

೪೫. ಯೋಗಾಭ್ಯಾಸಿಗಳೂ, ಸತ್ಪುರುಷರೂ ಮತ್ತು ವಿಷ್ಣುಭಕ್ತರೂ, ಯಾವ ಪರಾತ್ಪರವಸ್ತುವನ್ನು ನಿರಂತರವೂ ಧ್ಯಾನಿಸುವರೋ, ಯಾವುದು ನಿಖಿಲಜಗತ್ತಿಗೂ ಆದಿಕಾರಣವೋ, ಅಂಥ ಪರಬ್ರಹ್ಮತತ್ವದ ನಿರೂಪಣೆಯು ಬ್ರಹ್ಮಖಂಡದಲ್ಲಿ ವಿಸ್ತಾರವಾಗಿದೆ.

೪೬-೪೭. ಎಲೈ ಶೌನಕನೇ, ವಿಷ್ಣುಭಕ್ತರು, ಯೋಗಿಗಳು ಮತ್ತು ಸಂತರು ವಸ್ತುತಃ ವಿರುದ್ಧರಲ್ಲ. ತಮ್ಮ ತಮ್ಮ ತಿಳಿವಳಿಕೆಗೆ ತಕ್ಕ ಹೆಸರನ್ನು ಮಾತ್ರ ಜೀವಿಗಳು ಹೊಂದುವರು. ಸತ್ಸಹವಾಸಿಗಳು ಸಂತರೆಂತಲೂ, ಯೋಗಾಭ್ಯಾಸಿಗಳೊಡ ಗೂಡಿದವರು ಯೋಗಿಗಳೆಂತಲೂ, ಭಕ್ತರ ಒಡನಾಡಿಗಳು ವೈಷ್ಣವರೆಂತಲೂ ಪ್ರಸಿದ್ಧಿಪಡೆಯುವರು. ವೈಷ್ಣವರು, ಸಂತರು ಮತ್ತು ಯೋಗಿಗಳು ಕ್ರಮವಾಗಿ ಶ್ರೇಷ್ಠರೆನಿಸುವರು.

ಯತ್ರೋದ್ಭವಶ್ಚ ದೇವಾನಾಂ ದೇವೀನಾಂ ಸರ್ವಜೀವಿನಾಂ ।
ತತಃ ಪ್ರಕೃತಿಖಂಡೇ ಚ ದೇವೀನಾಂ ಚರಿತಂ ಶುಭಂ । ೪೮ ॥

ಜೀವಕರ್ಮವಿಪಾಕಶ್ಚ ಶಾಲಿಗ್ರಾಮ ನಿರೂಪಣಂ ।
ತಾಸಾಂ ಚ ಕವಚಸ್ತೋತ್ರಮಂತ್ರಪೂಜಾನಿರೂಪಣಂ ॥ ೪೯ ॥

ಪ್ರಕೃತೇರ್ಲಕ್ಷಣಂ ತತ್ರ ಕಲಾಂಶಾನಾಂ ನಿರೂಪಣಂ ।
ಕೀರ್ತೇರುತ್ಕೀರ್ತನಂ ತಾಸಾಂ ಪ್ರಭಾವಶ್ಚ ನಿರೂಪಿತಃ ॥ ೫೦ ॥

ಸುಕೃತೀನಾಂ ದುಷ್ಕೃತೀನಾಂ ಯದ್ಯತ್ ಸ್ಥಾನಂ ಶುಭಾಶುಭಂ ।
ವರ್ಣನಂ ನರಕಾಣಾಂ ಚ ರೋಗಾಣಾಂ ಮೋಕ್ಷಣಂ ತತಃ ॥ ೫೧ ॥

ತತೋ ಗಣೇಶಖಂಡೇ ಚ ತಜ್ಜನ್ಮ ಪರಿಕೀರ್ತಿತಂ ।
ಅತೀವಾಪೂರ್ವಚರಿತಂ ಶ್ರುತಿವೇದಸುದುರ್ಲಭಂ ॥ ೫೨ ॥

ಗಣೇಶಭೃಗುಸಂವಾದೇ ಸರ್ವತತ್ವನಿರೂಪಣಂ ।
ನಿಗೂಢಕವಚಸ್ತೋತ್ರಮಂತ್ರತಂತ್ರನಿರೂಪಣಂ ॥ ೫೩ ॥

೪೮-೫೧. ಅಲ್ಲದೆ ಬ್ರಹ್ಮಖಂಡದಲ್ಲಿ ದೇವತೆಗಳ, ದೇವಿಯರ ಮತ್ತು ಸಕಲ ಜೀವಿಗಳ ಉತ್ಪತ್ತಿಕ್ರಮವೂ ವರ್ಣಿತವಾಗಿದೆ. ಅನಂತರ ಪ್ರಕೃತಿಖಂಡದಲ್ಲಿ ದುರ್ಗಾ, ಲಕ್ಷ್ಮೀ, ಸರಸ್ವತಿ, ಸಾವಿತ್ರಿ ಮತ್ತು ರಾಧಾದೇವಿಯರ ಶುಭಚರಿತ್ರೆಯೂ, ಅವರ ಕವಚ, ಸ್ತೋತ್ರ, ಮಂತ್ರ ಮತ್ತು ಪೂಜಾಕ್ರಮಗಳೂ ನಿರೂಪಿತವಾಗಿವೆ. ಜೀವಿಗಳ ಕರ್ಮವಿಪಾಕವೂ ಸಾಲಿಗ್ರಾಮಶಿಲೆಯ ಮಹಿಮೆಯೂ ಅಲ್ಲಿ ತಿಳಿಯುತ್ತದೆ. ಪ್ರಕೃತಿಯ ಮತ್ತು ಅವಳ ಕಲಾಂಶಾವತಾರಿಗಳಾದ ದೇವಿಯರ ಮಹಿಮೆಯೂ ಮತ್ತು ಕೀರ್ತಿಯೂ ಅಲ್ಲಿ ವ್ಯಕ್ತವಾಗುತ್ತದೆ. ಪುಣ್ಯಪಾಪಕರ್ಮಗಳನ್ನು ಮಾಡಿದವರಿಗೆ ಲಭಿಸುವ ಶುಭಾಶುಭ ಸ್ಥಾನಗಳ ವರ್ಣನೆಯೂ, ನರಕ ಮತ್ತು ರೋಗಗಳ ವರ್ಣನೆಯೂ, ಅವುಗಳಿಂದ ಬಿಡುಗಡೆ ಹೊಂದುವ ಕ್ರಮವೂ ಅಲ್ಲಿ ಸ್ಪಷ್ಟವಾಗಿದೆ.

೫೨-೫೩. ಮುಂದೆ ಗಣೇಶಖಂಡದಲ್ಲಿ ಗಣೇಶನ ಜನನವು ನಿರೂಪಿತವಾಗಿದೆ. ಗಣೇಶಚರಿತೆಯು ವೇದದಲ್ಲಿ ದುರ್ಲಭವೂ, ಅತ್ಯಪೂರ್ವವೂ ಆಗಿದೆ. ಗಣೇಶ ಮತ್ತು ಭೃಗುಮಹರ್ಷಿಗಳ ಸಂವಾದದಲ್ಲಿ ಸಕಲ ಶಾಸ್ತ್ರಗಳ ತತ್ವವೂ, ಗೂಢವಾದ ಕವಚ, ಸ್ತೋತ್ರ, ಮಂತ್ರ ಮತ್ತು ತಂತ್ರಗಳ ಸ್ವರೂಪವೂ ಅಲ್ಲಿ ತಿಳಿಯುತ್ತದೆ.

ಶ್ರೀಕೃಷ್ಣಜನ್ಮಖಂಡಂ ಚ ಕೀರ್ತಿತಂ ಚ ತತಃ ಪರಂ |
ಭಾರತೇ ಪುಣ್ಯಕ್ಷೇತ್ರೇ ಚ ಶ್ರೀಕೃಷ್ಣ ಜನ್ಮ ಕರ್ಮ ಚ　　|| ೫೪ ||

ಭುವೋ ಭಾರಾವತರಣಂ ಕ್ರೀಡಾಕೌತುಕಮಂಗಲಂ |
ಸತಾಂ ಸೇತುವಿಧಾನಂ ಚ ಜನ್ಮಖಂಡೇ ನಿರೂಪಿತಂ　　|| ೫೫ ||

ಇದಂ ತೇ ಕಥಿತಂ ವಿಪ್ರ ಪುರಾಣಪ್ರವರಂ ಪರಂ |
ಚತುಃಖಂಡೈಃ ಪರಿಮಿತಂ ಸರ್ವಧರ್ಮನಿರೂಪಣಂ　　|| ೫೬ ||

ಸರ್ವೇಷಾಮೀಪ್ಸಿತಂ ಶ್ರೀದಂ ಸರ್ವಾಶಾಪೂರ್ಣಕಾರಣಂ |
ಬ್ರಹ್ಮವೈವರ್ತಕಂ ನಾಮ ಸರ್ವಾಭೀಷ್ಟಫಲಪ್ರದಂ　　|| ೫೭ ||

ಸಾರಭೂತಂ ಪುರಾಣೇಷು ಕೇವಲಂ ವೇದಸಂಮಿತಂ |
ವಿವೃತಂ ಬ್ರಹ್ಮ ಕಾರ್ತ್ಸ್ನ್ಯಂ ಚ ಕೃಷ್ಣೇನ ಯತ್ರ ಶೌನಕ　　|| ೫೮ ||

೫೪-೫೫. ಅಲ್ಲಿಂದ ಮುಂದೆ ಶ್ರೀಕೃಷ್ಣ ಜನ್ಮಖಂಡವು ನಿರೂಪಿತವಾಗಿದೆ. ಆ ಖಂಡದಲ್ಲಿ ಪುಣ್ಯಕ್ಷೇತ್ರವಾದ ಭರತಖಂಡದಲ್ಲಿ ಶ್ರೀಕೃಷ್ಣನು ಅವತಾರ ಮಾಡಿದುದು, ಅವನ ಬಾಲಲೀಲೆಗಳು, ಭೂಭಾರವನ್ನಿಳುಹಿದಕ್ರಮ, ಸತ್ಪುರುಷರ ಮುಕ್ತಿಗಾಗಿ ಅವನು ಕಲ್ಪಿಸಿದ ಸೇತುಮಾರ್ಗ ಮುಂತಾದುವು ವ್ಯಕ್ತವಾಗಿವೆ.

೫೬-೫೭. ವಿಪ್ರೋತ್ತಮನಾದ ಎಲೈ ಶೌನಕನೇ, ಸರ್ವಧರ್ಮಗಳಸಾರವನ್ನೂ ತಿಳಿಸಿ, ಎಲ್ಲರ ಮನೋಭಿಲಾಷೆಗಳನ್ನೂ ಪೂರ್ಣಗೊಳಿಸಿ, ಸಕಲ ಸಂಪತ್ತನ್ನೂ ಕೊಡುವ, ಬ್ರಹ್ಮವೈವರ್ತವೆಂಬ ಈ ಮಹಾಪುರಾಣವು, ಪುರಾಣಗಳಿಗೆಲ್ಲಾ ಶ್ರೇಷ್ಠವಾದುದು.

೫೮. ಪುರಾಣಗಳಲ್ಲಿ ಅತ್ಯುತ್ತಮವೂ, ವೇದಸಾರವೂ ಆದ ಈ ಪುರಾಣದಲ್ಲಿ ವ್ಯಾಸಮಹರ್ಷಿಗಳು ಬ್ರಹ್ಮಸ್ವರೂಪವನ್ನು ಸಂಪೂರ್ಣವಾಗಿ ವಿವರಿಸಿರುವುದರಿಂದ ಇದಕ್ಕೆ 'ಬ್ರಹ್ಮವೈವರ್ತ' ವೆಂದು ತಿಳಿದವರು ಹೇಳುವರು.

ಬ್ರಹ್ಮವೈವರ್ತಕಂ ತೇನ ಪ್ರವದಂತಿ ಪುರಾವಿದಃ ।
ಇದಂ ಪುರಾಣಸೂತ್ರಂ ಚ ಪುರಾ ದತ್ತಂ ಚ ಬ್ರಹ್ಮಣೇ ॥ ೫೯ ॥

ನಿರಾಮಯೇ ಚ ಗೋಲೋಕೇ ಕೃಷ್ಣೇನ ಪರಮಾತ್ಮನಾ ।
ಮಹಾತೀರ್ಥೇ ಪುಷ್ಕರೇ ಚ ದತ್ತಂ ಧರ್ಮಾಯ ಬ್ರಹ್ಮಣಾ ॥ ೬೦ ॥

ಧರ್ಮೇಣ ದತ್ತಂ ಪುತ್ರಾಯ ಪ್ರೀತ್ಯಾ ನಾರಾಯಣಾಯ ಚ ॥ ೬೧ ॥

ನಾರದೋ ವ್ಯಾಸದೇವಾಯ ಪ್ರದದೌ ಜಾಹ್ನವೀ ತಟೇ ।
ವ್ಯಾಸಃ ಪುರಾಣಸೂತ್ರಂ ತತ್ ಸಂವ್ಯಸ್ಯ ವಿಪುಲಂ ಮಹತ್ ॥ ೬೨ ॥

ಮಹ್ಯಂ ದದೌ ಸಿದ್ಧಕ್ಷೇತ್ರೇ ಪುಣ್ಯದೇಶೇ ಮನೋಹರಂ ।
ಮಯೇದಂ ಕಥಿತಂ ಬ್ರಹ್ಮಂ ಸ್ತತ್ಸಮಗ್ರಂ ನಿಶಾಮಯ ॥ ೬೩ ॥

೫೯–೬೦ ಪೂರ್ವದಲ್ಲಿ ಶ್ರೀಕೃಷ್ಣಪರಮಾತ್ಮನು ಆನಂದಮಯವಾದ ಗೋಲೋಕದಲ್ಲಿ ಸೂತ್ರರೂಪವಾದ ಈ ಪುರಾಣವನ್ನು ಬ್ರಹ್ಮನಿಗೆ ಉಪದೇಶಿಸಿದನು. ಬ್ರಹ್ಮನೂಕೂಡ ಪುಷ್ಕರಮಹಾಕ್ಷೇತ್ರದಲ್ಲಿ ಧರ್ಮದೇವನಿಗೆ ಉಪದೇಶಿಸಿದನು.

೬೧–೬೨. ಧರ್ಮದೇವನು ಪ್ರೀತಿಯಿಂದ ತನ್ನ ಪುತ್ರನಾದ ನಾರಾಯಣನಿಗೂ ಅದೇ ಪರಂಪರೆಯಲ್ಲಿ ನಾರದಮಹರ್ಷಿಯು ಗಂಗಾತೀರದಲ್ಲಿ ವ್ಯಾಸಮಹರ್ಷಿಗೂ ಉಪದೇಶಿಸಿದರು. ವ್ಯಾಸಮಹರ್ಷಿಯಾದರೋ, ಸೂತ್ರರೂಪವಾದ ಈ ಪುರಾಣವನ್ನು ಅವಶ್ಯಕವಿದ್ದಷ್ಟು ವಿಸ್ತರಿಸಿ, ಮನೋಹರವಾದುದನ್ನಾಗಿ ಮಾಡಿ, ಪುಣ್ಯಕ್ಷೇತ್ರವಾದ ಸಿದ್ಧಾಶ್ರಮದಲ್ಲಿ ನನಗೆ ಅನುಗ್ರಹಿಸಿದನು.

೬೩. ಎಲೈ ಬ್ರಾಹ್ಮಣೋತ್ತಮನೇ, ಈಗ ನಾನು ಆ ಪುರಾಣವನ್ನು ಸಂಪೂರ್ಣವಾಗಿ ಹೇಳುವೆನು. ಸಾವಧಾನದಿಂದ ಕೇಳು.

ಅಷ್ಟಾದಶಸಹಸ್ರಂ ತು ವ್ಯಾಸೇನೇದಂ ಪುರಾಣಕಂ ।
ಪುರಾಣಕಾರ್ತ್ಸ್ನ್ಯಶ್ರವಣೇ ಯತ್ಫಲಂ ಲಭತೇ ನರಃ ।
ತತ್ಫಲಂ ಲಭತೇ ನೂನಮಧ್ಯಾಯಶ್ರವಣೇನ ಚ　　॥ ೬೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಸೌತಿಶೌನಕಸಂವಾದೇ ಬ್ರಹ್ಮಖಂಡೇ ಅನುಕ್ರಮಣಿಕಾ ನಾಮ ಪ್ರಥಮೋಽಧ್ಯಾಯಃ

---

೬೪. ಮಹರ್ಷಿಯಾದ ವ್ಯಾಸನು ಸೂತ್ರರೂಪವಾಗಿದ್ದ ಈ ಪುರಾಣವನ್ನು ಹದಿನೆಂಟುಸಾವಿರ ಗ್ರಂಥಗಳಾಗಿ ವಿಸ್ತರಿಸಿರುವನು. ಮನುಜನಿಗೆ, ಎಲ್ಲ ಪುರಾಣವನ್ನೂ ಕೇಳುವುದರಿಂದ ದೊರಕುವ ಸತ್ಫಲವು, ಈ ಪುರಾಣದ ಒಂದು ಅಧ್ಯಾಯ ಶ್ರವಣದಿಂದಲೇ ದೊರಕುವುದರಲ್ಲಿ ಸಂದೇಹ ಲೇಶವೂ ಇಲ್ಲ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ, ಸೌತಿಶೌನಕ ಪ್ರಶ್ನೋತ್ತರ ರೂಪವಾದ ಬ್ರಹ್ಮಖಂಡದಲ್ಲಿ ಅನುಕ್ರಮಣಿಕೆಯೆಂಬ ಒಂದನೆಯ ಅಧ್ಯಾಯವು ಸಮಾಪ್ತವಾದುದು.

ಒಂದನೆಯ ಅಧ್ಯಾಯದ ಸಾರಾಂಶವು

ಪೂರ್ವದಲ್ಲಿ ಶೌನಕಾದಿಮಹರ್ಷಿಗಳು ನೈಮಿಶಾರಣ್ಯದಲ್ಲಿದ್ದಾಗ ಒಮ್ಮೆ ಸೂತ ಮಹರ್ಷಿಗಳ ಪುತ್ರರಾದ ಉಗ್ರಶ್ರವರು ಅಲ್ಲಿಗೆ ಬಂದರು. ಅನಿರೀಕ್ಷಿತವಾಗಿ ಬಂದ ಅತಿಥಿಗಳಿಗೆ ಶೌನಕರು ಉಚಿತಸತ್ಕಾರವನ್ನು ಮಾಡಿ, ಅವರು ಸ್ವಲ್ಪಕಾಲ ವಿಶ್ರಮಿಸಿ ಕೊಂಡಮೇಲೆ, ಸರ್ವೋತ್ತಮವಾದ ಪುರಾಣಕಥೆಯೊಂದನ್ನು ತಮಗೆ ಅರುಹ ಬೇಕೆಂದು ಬೇಡಿದರು. ಎಲ್ಲ ಪುರಾಣಗಳನ್ನೂ ಬಲ್ಲ ಉಗ್ರಶ್ರವರು 'ಯಾವುದನ್ನು ಹೇಳಬೇಕು' ಎಂದು ಯೋಚಿಸುತ್ತಿರುವಷ್ಟರಲ್ಲಿಯೇ ಶೌನಕರು ಮತ್ತೊಮ್ಮೆ ಇಂತು ಪ್ರಶ್ನಿಸಿದರು. 'ಪರಬ್ರಹ್ಮಸ್ವರೂಪನಾದ ಶ್ರೀಕೃಷ್ಣನ ಕಥೆಯನ್ನು ಮುಖ್ಯ ವಾಗಿ ಬೋಧಿಸಿ, ಕೇಳಿದವರ ಸಕಲ ಪಾಪಗಳನ್ನೂ ಪರಿಹರಿಸಿ, ಮುಕ್ತಿಯನ್ನು ಕೊ ಡುವ ದಿವ್ಯಪುರಾಣವೊಂದನ್ನು ನಮಗೆ ಬೋಧಿಸಿರಿ. ಅದರಲ್ಲಿ ಪ್ರಪಂಚಕ್ಕೆಲ್ಲ ಮೂಲ ಪುರುಷನಾರು? ಆತನ ಸ್ವರೂಪವಾವುದು? ಅದನ್ನು ತಿಳಿಯುವ ಬಗೆಹೇಗೆ? ಅವ ನನ್ನು ಧ್ಯಾನಿಸುವಕ್ರಮವಾವುದು? ನಿಖಿಲಪ್ರಪಂಚವೂ ಅವನಿಂದ ಸೃಷ್ಟವಾದುದು ಹೇಗೆ? ಜೀವಿಗಳು ಆಚರಿಸುವ ಪುಣ್ಯಾಪಾಪಕರ್ಮಗಳ ಮತ್ತು ಅವುಗಳ ಫಲದ ಸ್ವರೂಪವೇನು? ಧರ್ಮಾಧರ್ಮಗಳಾವುವು? ಬ್ರಹ್ಮ, ವಿಷ್ಣು, ಮಹೇಶ್ವರರ ಕರ್ತ ವ್ಯವಾವುದು? ಪ್ರಕೃತಿ, ಮತ್ತು ಗಣೇಶ ಇವರುಗಳ ಉತ್ಪತ್ತಿಗೆ ಕಾರಣವೇನು? ಶ್ರೀಕೃಷ್ಣನ ಅವತಾರಕ್ಕೆ ಕಾರಣವೇನು? ಅವನ ಬಾಲಲೀಲೆಗಳೇನು? ಅವನು ಮಾಡಿದ ಮಹತ್ಕಾರ್ಯವಾವುದು? ಇವೆಲ್ಲವೂ ವಿಸ್ತಾರವಾಗಿ ತಿಳಿಯಬೇಕು' ಎಂದು ಕೇಳಿದ ಶೌನಕರ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವು 'ಬ್ರಹ್ಮವೈವರ್ತ ಮಹಾ ಪುರಾಣ' ದಲ್ಲಿ ದೊರುಕುವುದೆಂದೂ, ಅದು 'ಬ್ರಹ್ಮಖಂಡ, ಪ್ರಕೃತಿಖಂಡ, ಗಣೇಶ ಖಂಡ ಮತ್ತು ಶ್ರೀಕೃಷ್ಣಜನ್ಮಖಂಡ' ವೆಂದು ನಾಲ್ಕು ವಿಭಾಗವಾಗಿರುವುದೆಂದೂ, ಪುರಾಣಗಳಲ್ಲೆಲ್ಲ ಅದೇ ಸರ್ವೋತ್ತಮವೆಂದೂ ಹೇಳಿ ಉಗ್ರಶ್ರವರು ಬ್ರಹ್ಮವೈವರ್ತ ಮಹಾಪುರಾಣವನ್ನು ಹೇಳಲಾರಂಭಿಸಿದರು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ದ್ವಿತೀಯೋಽಧ್ಯಾಯಃ ॥

॥ ಶೌನಕ ಉವಾಚ ॥

ಕಿಮಪೂರ್ವಂ ಶ್ರುತಂ ಸೌತೇ ಪರಮಾದ್ಭುತಮೀಪ್ಸಿತಂ ।
ಸರ್ವಂ ಕಥಯ ಸಂವ್ಯಸ್ಯ ಬ್ರಹ್ಮಖಂಡಮನುತ್ತಮಂ ॥ ೧ ॥

ವಂದೇ ಗುರೋಃ ಪಾದಪದ್ಮಂ ವ್ಯಾಸಸ್ಯಾಮಿತತೇಜಸಃ ।
ಹರಿಂ ದೇವಾನ್ ದ್ವಿಜಾನ್ ನತ್ವಾ ಧರ್ಮಾನ್ ವಕ್ಷ್ಯೇ ಸನಾತನಾನ್ ॥ ೨ ॥

ಯಚ್ಛ್ರುತಂ ವ್ಯಾಸವಕ್ತ್ರೇಣ ಬ್ರಹ್ಮಖಂಡಮನುತ್ತಮಂ ।
ಅಜ್ಞಾನಾಂಧತಮೋಧ್ವಂಸಿ ಜ್ಞಾನವರ್ತ್ಮಪ್ರದೀಪಕಂ ॥ ೩ ॥

ಎರಡನೆಯ ಅಧ್ಯಾಯವು

೧. ಶೌನಕ :—ಸೂತಪುತ್ರರೇ, ಹಿಂದೆಂದೂ ಕೇಳದ ಪರಮಾಶ್ಚರ್ಯಕರವಾದ ವಿಷಯವನ್ನು ತಮ್ಮ ಬಾಯಿಂದ ಕೇಳಿ ಬಹಳಸಂತೋಷವಾಯಿತು. ಬ್ರಹ್ಮಖಂಡವನ್ನು ವಿಸ್ತಾರವಾಗಿ ತಮ್ಮಿಂದ ಕೇಳಬೇಕೆಂದು ನನಗೆ ಬಹಳ ಕುತೂಹಲವಿದೆ. ದಯವಿಟ್ಟು ವಿಸ್ತರಿಸಿ ಹೇಳಿ.

೨-೩. ಸೂತಪುತ್ರ :—ಪರಮತೇಜಸ್ವಿಗಳಾದ ವ್ಯಾಸಮಹರ್ಷಿಗಳ ಪಾದಪದ್ಮಗಳಿಗೆ ಭಕ್ತಿಯಿಂದ ವಂದಿಸಿ, ದೇವಬ್ರಾಹ್ಮಣರಿಗೆ ನಮಿಸಿ ಅನಾದಿಯಾದ ಧರ್ಮವನ್ನು ವಿವರಿಸುವೆನು. ವ್ಯಾಸರು ಅಪ್ಪಣೆ ಕೊಡಿಸಿದಂತೆ ಬ್ರಹ್ಮಖಂಡವು ಜನರ ಅಜ್ಞಾನವೆಂಬ ಕತ್ತಲೆಯನ್ನು ತೊಡೆದು, ಜ್ಞಾನಮಾರ್ಗವನ್ನು ಬೆಳಗಿ ಸರ್ವಶ್ರೇಷ್ಠವೆನಿಸಿರುವುದು.

ಜ್ಯೋತಿಃಸಮೂಹಂ ಪ್ರಲಯೇ ಪುರಾಸೀತ್ಕೇವಲಂ ದ್ವಿಜ ।
ಸೂರ್ಯಕೋಟಿಪ್ರಭಂ ನಿತ್ಯಮನಂತಂ ವಿಶ್ವಕಾರಣಂ ॥ ೪ ॥

ಸ್ವೇಚ್ಛಾಮಯಸ್ಯ ಚ ವಿಭೋಃ ತಜ್ಜ್ಯೋತಿರುಜ್ಜ್ವಲಂ ಮಹತ್ ।
ಜ್ಯೋತಿರಭ್ಯಂತರೇ ಲೋಕತ್ರಯಮೇವ ಮನೋಹರಂ ॥ ೫ ॥

ತೇಷಾಮುಪರಿ ಗೋಲೋಕಂ ನಿತ್ಯಮೀಶ್ವರವದ್ದ್ವಿಜ ।
ತ್ರಿಕೋಟಿಯೋಜನಾಯಾಮವಿಸ್ತೀರ್ಣಂ ಮಂಡಲಾಕೃತಿ ॥ ೬ ॥

ತೇಜಃಸ್ವರೂಪಂ ಸುಮಹದ್ರತ್ನಭೂಮಿಮಯಂ ಪರಂ ।
ಅದೃಶ್ಯಂ ಯೋಗಿಭಿಃ ಸ್ವಪ್ನೇ ದೃಶ್ಯಂ ಗಮ್ಯಂ ಚ ವೈಷ್ಣವೈಃ ॥ ೭ ॥

ಯೋಗೇನ ಧೃತಮೀಶೇನ ಚಾಂತರಿಕ್ಷಸ್ಥಿತಂ ವರಂ ।
ಆಧಿವ್ಯಾಧಿಜರಾಮೃತ್ಯುಶೋಕಭೀತಿವಿವರ್ಜಿತಂ ॥ ೮ ॥

---

೪. ಎಲೈ ಬ್ರಾಹ್ಮಣೋತ್ತಮನೇ, ಸೃಷ್ಟಿಗೆಮೊದಲು ಪ್ರಳಯದಲ್ಲಿ ಸ್ವಯಂ ಪ್ರಕಾಶವಾದ ಪರಬ್ರಹ್ಮಮಾತ್ರವಿದ್ದಿತು. ಕೋಟಿಸೂರ್ಯರಿಗೆ ಮಿಗಿಲಾದ ತೇಜೋಮಯವಾದ ಆ ಪರಬ್ರಹ್ಮವು, ನಿತ್ಯವೂ, ಅನಂತವೂ ವಿಶ್ವಕಾರಣವೂ ಆದುದು.

೫. ಇಚ್ಛಾಮಾತ್ರಪ್ರಭುವೂ, ಅತ್ಯುಜ್ಜ್ವಲವೂ ಆದ ಆ ಜ್ಯೋತಿಯೊಳಗಡೆ ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮನೋಹರವಾದ ಮೂರು ಲೋಕಗಳಿರುವುವು

೬-೭ ಆ ಮೂರುಲೋಕದ ಮೇಲುಭಾಗದಲ್ಲಿ ನಾದಬ್ರಹ್ಮದ ಕಳಾರೂಪವೂ ನಿತ್ಯವೂ ಆದ ಗೋಲೋಕವೆಂಬುದಿರುವುದು. ಬಿಂದುರೂಪವಾಗಿ ವ್ಯಾಪಕವಾದ ಆ ಲೋಕವು ಮೂರುಕೋಟಿಯೋಜನ ಚದರಳತೆಯುಳ್ಳದ್ದು. ತೇಜೋಮಯವಾದ ಆ ಲೋಕದ ಸ್ಥಳವೆಲ್ಲವೂ ರತ್ನಮಯವಾದುದು. ಯೋಗಿಗಳು ಸ್ವಪ್ನದಲ್ಲಿಯೂ ನೋಡಲಾಗದ ಆ ಲೋಕವನ್ನು ವಿಷ್ಣುಭಕ್ತರು ಮಾತ್ರ ನೋಡಿ ಅಲ್ಲಿಗೆ ಹೋಗುವರು.

೮. ಪರಮಾತ್ಮನ ಯೋಗಶಕ್ತಿಯಿಂದ ಅಂತರಿಕ್ಷದಲ್ಲಿರುವ ಆ ಲೋಕದಲ್ಲಿ ಮನೋರೋಗವಾಗಲೀ, ಶಾರೀರಕ ರೋಗವಾಗಲೀ, ಯಾರಿಗೂ ಸಂಭವಿಸುವುದಿಲ್ಲ. ಜರಾಮರಣಗಳಿಗೂ, ದುಃಖಭಯಗಳಿಗೂ ಅಲ್ಲಿ ಎಡೆಯಿಲ್ಲ.

ಸದ್ರತ್ನರಚಿತಾಸಂಖ್ಯಮಂದಿರೈಃ ಪರಿಶೋಭಿತಂ ।
ಲಯೇ ಕೃಷ್ಣಯುತಂ ಸೃಷ್ಟೌ ಗೋಪಗೋಪೀಭಿರಾವೃತಂ ॥ ೯ ॥

ತದಧೋ ದಕ್ಷಿಣೇ ಸವ್ಯೇ ಪಂಚಾಶತ್ಕೋಟಿಯೋಜನಾನ್ ।
ವೈಕುಂಠಶಿವಲೋಕಂ:ತು ತತ್ಸಮಂ ಸುಮನೋಹರಂ ॥ ೧೦ ॥

ಕೋಟಿಯೋಜನವಿಸ್ತೀರ್ಣಂ ವೈಕುಂಠಂ ಮಂಡಲಾಕೃತಿ।
ಲಯೇ ಶೂನ್ಯಂ ಚ ಸೃಷ್ಟೌ ಚ ಲಕ್ಷ್ಮೀನಾರಾಯಣಾನ್ವಿತಂ ॥ ೧೧ ॥

ಚತುರ್ಭುಜೈಃ ಪಾರ್ಷದೈಶ್ಚ ಜರಾಮೃತ್ಯ್ವಾದಿವರ್ಜಿತಂ ।
ಸವ್ಯೇ ಚ ಶಿವಲೋಕಂ ಚ ಕೋಟಿಯೋಜನ ವಿಸ್ತೃತಂ
ಲಯೇ ಶೂನ್ಯಂ ಚ ಸೃಷ್ಟೌ ಚ ಸಪಾರ್ಷದ ಶಿವಾನ್ವಿತಂ । ॥ ೧೨ ॥

---

೯. ರತ್ನರಚಿತವಾದ ಅನೇಕ ಮಂದಿರಗಳಿಂದ ಮನೋಹರವಾಗಿರುವ ಆ ಲೋಕದಲ್ಲಿ ಪ್ರಳಯ ಕಾಲದಲ್ಲಿ ಶ್ರೀಕೃಷ್ಣಪರಮಾತ್ಮನೊಬ್ಬನಿರುವನು. ಸೃಷ್ಟಿಯಲ್ಲಿ ಮಾತ್ರ ಗೋಪಗೋಪಿಯರಿಂದ ಕೂಡಿಕೊಂಡಿರುವನು.

೧೦. ಆ ಗೋಲೋಕದ ಕೆಳಗೆ ಐವತ್ತುಕೋಟಿಯೋಜನ ದೂರದಲ್ಲಿ ಬಲ ಭಾಗದಲ್ಲಿ ವೈಕುಂಠಲೋಕವೂ, ಎಡಭಾಗದಲ್ಲಿ ಶಿವಲೋಕವೂ ಅದರಂತೆಯೇ ಮನೋಹರವಾಗಿವೆ.

೧೧. ಕೋಟಿಯೋಜನ ವಿಸ್ತೀರ್ಣವಾಗಿಯೂ ಮಂಡಲಾಕಾರವಾಗಿಯೂ ಇರುವ ವೈಕುಂಠಲೋಕವು ಪ್ರಳಯದಲ್ಲಿ ಶೂನ್ಯವಾಗಿಯೂ, ಸೃಷ್ಟಿಕಾಲದಲ್ಲಿ ಲಕ್ಷ್ಮೀನಾರಾಯಣರೊಡಗೂಡಿಯೂ ಇರುತ್ತದೆ.

೧೨. ಚತುರ್ಭುಜರಾದ ಪಾರ್ಷದರಿಂದ ಪರಿವೃತವಾದ ವೈಕುಂಠಲೋಕದಲ್ಲಿ ಜರಾಮರಣಭಯವಿಲ್ಲವು. ಗೋಲೋಕದ ಎಡಭಾಗದಲ್ಲಿ ಕೋಟಿಯೋಜನ ವಿಸ್ತೀರ್ಣವಾದ ಶಿವಲೋಕವಿರುವುದು. ಅದೂ ಪ್ರಳಯಕಾಲದಲ್ಲಿ ಶೂನ್ಯ. ಸೃಷ್ಟಿಕಾಲದಲ್ಲಿ ಶಿವನು ಅಲ್ಲಿ ಪಾರ್ಷದರೊಡನಿರುವನು.

ವೃಂದಾವನವನಾಭ್ಯರ್ಣೇ ರಾಸಮಂಡಲಸಂಸ್ಥಿತಂ ।
ರಾಸೇಶ್ವರಂ ರಾಸವಾಸಂ ರಾಸೋಲ್ಲಾಸಸಮುತ್ಸುಕಂ ॥ ೩೭ ॥

ಇತ್ಯೇವಮುಕ್ತ್ವಾ ತಂ ನತ್ವಾ ರತ್ನಸಿಂಹಾಸನೇ ವರೇ ।
ನಾರಾಯಣೇಶೌ ಸಂಭಾಷ್ಯ ಸ ಉವಾಸ ತದಾಜ್ಞಯಾ ॥ ೩೮ ॥

ಇತಿ ಬ್ರಹ್ಮಕೃತಂ ಸ್ತೋತ್ರಂ ಪ್ರಾತರುತ್ಥಾಯ ಯಃಪಠೇತ್ ।
ಪಾಪಾನಿ ತಸ್ಯ ನಶ್ಯಂತಿ ದುಃಸ್ವಪ್ನಃ ಸುಸ್ವಪ್ನೋ ಭವೇತ್ ॥ ೩೯ ॥

ಭಕ್ತಿರ್ಭವತಿಗೋವಿಂದೇ ಶ್ರೀಪುತ್ರಪೌತ್ರವರ್ಧಿನೀ ।
ಅಕೀರ್ತಿಃ ಕ್ಷಯಮಾಪ್ನೋತಿ ಸತ್ಕೀರ್ತಿಃ ವರ್ಧತೇ ಚಿರಂ ॥ ೪೦ ॥

॥ ಸೌತಿರುವಾಚ ॥

ಆವಿರ್ಬಭೂವ ತತ್ಪಶ್ಚಾದ್ವಕ್ಷಸಃ ಪರಮಾತ್ಮನಃ ।
ಸಸ್ಮಿತಃ ಪುರುಷಃ ಕಶ್ಚಿತ್ ಶುಕ್ಲವರ್ಣೋ ಜಟಾಧರಃ ॥ ೪೧ ॥

---

೩೭. ವೃಂದಾವನದ ಸಮೀಪದಲ್ಲಿರುವ ರಾಸಮಂಡಲದಲ್ಲಿ ಮಂಡಿಸಿ, ರಾಸ ಕ್ರೀಡಾಸಕ್ತನಾಗಿ ನೀನು ರಾಸೇಶ್ವರನೆನಿಸಿರುವೆ.

೩೮. ಚತುರ್ಮುಖಬ್ರಹ್ಮನು ಈ ರೀತಿಯಾಗಿ ಸ್ತುತಿಸಿ, ಶ್ರೀಕೃಷ್ಣಪರಮಾತ್ಮನಿಗೆ ವಂದಿಸಿ, ನಾರಾಯಣ ಮತ್ತು ಶಂಕರನನ್ನು ಸಂಭಾಷಿಸಿ ಪರಮಾತ್ಮನ ಅಪ್ಪಣೆಯಂತೆ ರತ್ನಸಿಂಹಾಸನದಲ್ಲಿ ಕುಳಿತನು.

೩೯-೪೦. ಬ್ರಹ್ಮಕೃತವಾದ ಈ ಸ್ತೋತ್ರವನ್ನು ಉದಯಕಾಲದಲ್ಲಿ ಶುಚಿಯಾಗಿ ಪಠಿಸುವವರ ಪಾಪಗಳು ಪರಿಹಾರವಾಗಿ, ದುಃಸ್ವಪ್ನವೆಲ್ಲವೂ ಶುಭಸ್ವಪ್ನವಾಗುವವು. ಅಲ್ಲದೆ ಶ್ರೀಹರಿಯಲ್ಲಿ ಭಕ್ತಿಯೂ, ಪುತ್ರ, ಪೌತ್ರಸಂಪದಭಿವೃದ್ಧಿಯೂ, ಉಂಟಾಗಿ ಅಪಕೀರ್ತಿಯು ದೂರವಾಗಿ ಸತ್ಕೀರ್ತಿಯು ಎಲ್ಲೆಡೆಯಲ್ಲೂ ಲಭಿಸುವುದು.

೪೧. ಸೂತಪುತ್ರ :—ಅನಂತರದಲ್ಲಿ ಪರಮಾತ್ಮನ ವಕ್ಷಃಸ್ಥಳದಿಂದ ಶುಕ್ಲವರ್ಣನೂ, ಜಟಾಧರನೂ, ಸ್ಮಿತವದನನೂ ಆದ ಪುರುಷನೊಬ್ಬನು ಆವಿರ್ಭವಿಸಿದನು

ಶ್ರೀವತ್ಸವಕ್ಷಃಸಂಭ್ರಾಜತ್ಕೌಸ್ತುಭೇನ ವಿರಾಜಿತಂ ।
ಸದ್ರತ್ನಸಾರರಚಿತಕಿರೀಟಮುಕುಟೋಜ್ಜ್ವಲಂ ॥ ೧೯ ॥

ರತ್ನಸಿಂಹಾಸನಸ್ಥಂ ಚ ವನಮಾಲಾ ವಿಭೂಷಿತಂ ।
ತದೇವ ಪರಮಂ ಬ್ರಹ್ಮ ಭಗವಂತಂ ಸನಾತನಂ ॥ ೨೦ ॥

ಸ್ವೇಚ್ಛಾಮಯಂ ಸರ್ವಬೀಜಂ ಸರ್ವಾಧಾರಂ ಪರಾತ್ಪರಂ ।
ಕಿಶೋರವಯಸಂ ಶಶ್ವದ್ಗೋಪವೇಷವಿಧಾಯಕಂ ॥ ೨೧ ॥

ಕೋಟಿಪೂರ್ಣೇಂದು ಶೋಭಾಢ್ಯಂ ಭಕ್ತಾನುಗ್ರಹಕಾರಕಂ ।
ನಿರೀಹಂ ನಿರ್ವಿಕಾರಂ ಚ ಪರಿಪೂರ್ಣತಮಂ ವಿಭುಂ ॥ ೨೨ ॥

ರಾಸಮಂಡಲಮಧ್ಯಸ್ಥಂ ಶಾಂತಂ ರಾಸೇಶ್ವರಂ ವರಂ ।
ಮಾಂಗಲ್ಯಂ ಮಂಗಲಾರ್ಹಂ ಚ ಮಂಗಲಂ ಮಂಗಲಪ್ರದಂ ॥ ೨೩ ॥

೧೯–೨೦. ವಕ್ಷಃಸ್ಥಲದಲ್ಲಿರುವ ಶ್ರೀವತ್ಸವೆಂಬ ಮಚ್ಚೆಯಿಂದಲೂ, ಕೌಸ್ತುಭವೆಂಬ ರತ್ನದಿಂದಲೂ ಶೋಭಿತವಾಗಿ, ಶ್ರೇಷ್ಠರತ್ನಗಳನ್ನು ಮೆಟ್ಟಿರುವ ಕಿರೀಟವನ್ನು ತಲೆಯಲ್ಲಿ ಧರಿಸಿ, ರತ್ನಸಿಂಹಾಸನದಲ್ಲಿ ಕುಳಿತು, ತುಳಸೀವನಮಾಲೆಯಿಂದ ವಿಭೂಷಿತವಾದ ಆದಿವ್ಯಮೂರ್ತಿಯೇ ಅನಾದಿಯಾದ ಪರಬ್ರಹ್ಮನ ಸಾಕಾರಸ್ವರೂಪವೆನಿಸಿರುವುದು.

೨೧. ಸ್ವೇಚ್ಛಾಮಯವೂ, ಸರ್ವಕಾರಣವೂ, ಸರ್ವಾಧಾರವೂ, ಪರಾತ್ಪರವೂ ಎನಿಸಿದ ಆ ಪರಬ್ರಹ್ಮವಸ್ತುವು ಪದೆ ಪದೆ ಗೋಪಕಿಶೋರವೇಷವನ್ನು ಧರಿಸುವುದು.

೨೨. ಕೋಟಿಪೂರ್ಣಚಂದ್ರರಿಗೆಣೆಯಾದ ಕಾಂತಿಯಿಂದ ಕೂಡಿ ಭಕ್ತಾನುಗ್ರಹಕಾರಕನಾದ ಆ ಪರಮಾತ್ಮನು ವಸ್ತುತಃ ಇಚ್ಛಾರಹಿತನೂ ನಿರ್ವಿಕಾರನೂ, ವಿಶ್ವವ್ಯಾಪಕನೂ ಪರಿಪೂರ್ಣತಮನೂ ಆಗಿದ್ದಾನೆ.

೨೩. ರಾಸಮಂಡಲದ ಮಧ್ಯದಲ್ಲಿ ಕುಳಿತು ಶಾಂತಾಕಾರನಾದ ಆ ರಾಸೇಶ್ವರನು ಸರ್ವಮಂಗಳಸ್ವರೂಪನೂ, ಸರ್ವಮಂಗಳದಾಯಕನೂ ಆಗಿರುವನು.

ಪರಮಾನಂದಬೀಜಂ ಚ ಸತ್ಯಮಕ್ಷರಮವ್ಯಯಂ ।
ಸರ್ವಸಿದ್ಧೇಶ್ವರಂ ಸರ್ವಸಿದ್ಧಿರೂಪಂ ಚ ಸಿದ್ಧಿದಂ ॥ ೨೪ ॥

ಪ್ರಕೃತೇಃ ಪರಮೀಶಾನಂ ನಿರ್ಗುಣಂ ನಿತ್ಯವಿಗ್ರಹಂ ।
ಆದ್ಯಂ ಪುರುಷಮವ್ಯಕ್ತಂ ಪುರುಹೂತಂ ಪುರುಷ್ಟುತಂ ॥ ೨೫ ॥

ಸತ್ಯಂ ಸ್ವತಂತ್ರಮೇಕಂ ಚ ಪರಮಾತ್ಮಸ್ವರೂಪಕಂ ।
ಧ್ಯಾಯನ್ತ್ಯೇ ವೈಷ್ಣವಾಃ ಶಾಂತಾಃ ಶಾಂತಂ ತತ್ಪರಮಾಯಣಂ ॥ ೨೬ ॥

ಏವಂ ರೂಪಂ ಪರಂ ಬಿಭ್ರತ್ ಭಗವಾನೇಕಏವ ಸಃ ।
ದಿಗ್ಭಿಶ್ಚ ನಭಸಾ ಸಾರ್ಧಂ ಶೂನ್ಯಂ ವಿಶ್ವಂ ದದರ್ಶ ಹ ॥ ೨೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಸೌತಿಶೌನಕಸಂವಾದೇ
ಪರಬ್ರಹ್ಮನಿರೂಪಣಂ ನಾಮ ದ್ವಿತೀಯೋಽಧ್ಯಾಯಃ

---

೨೪. ಪರಮಾನಂದಮಯವಾದ ಮೋಕ್ಷಕ್ಕೆ ಬೀಜರೂಪನೂ, ಸತ್ಯಸ್ವರೂಪನೂ, ನಾಶರಹಿತನೂ, ನಿತ್ಯಸಿದ್ಧನೂ ಆದ ಆ ಪರಮಾತ್ಮನು ಸಕಲರಿಗೂ ಇಷ್ಟಾರ್ಥ ಸಿದ್ಧಿಯನ್ನು ಕೊಡುವನು.

೨೫-೨೬. ಪ್ರಕೃತಿಗಿಂತ ಪರನೂ, ನಿರ್ಗುಣನೂ, ನಿತ್ಯವಿಗ್ರಹನೂ, ಅನಾದಿ ಪುರುಷನೂ, ಅವ್ಯಕ್ತನೂ, ಇಂದ್ರಾದಿಸಕಲದೇವತೆಗಳಿಂದ ಸ್ತುತನೂ, ಅದ್ವಿತೀಯನೂ, ಸತ್ಯಸ್ವರೂಪನೂ ಆದ ಆ ಪರಮಾತ್ಮನ ದಿವ್ಯಸುಂದರಾಕಾರವನ್ನು ಬಿಟ್ಟು ಭಕ್ತರು ಶಾಂತಚಿತ್ತದಿಂದ ಧ್ಯಾನಿಸಿ ಮುಕ್ತರಾಗುವರು.

೨೭. ಮೇಲೆ ಹೇಳಿದಂತೆ ದಿವ್ಯಸುಂದರಾಕಾರವನ್ನು ಧರಿಸಿರುವ ಅದ್ವಿತೀಯನಾದ ಪರಮಾತ್ಮನು ಆಕಾಶದಿಕ್ಕುಗಳನ್ನುಳಿದು ಶೂನ್ಯವಾಗಿರುವ ವಿಶ್ವವನ್ನು ಕಂಡನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಬ್ರಹ್ಮಖಂಡದಲ್ಲಿ ಸೌತಿಶೌನಕ
ಸಂವಾದ ಪ್ರಸಂಗದಿಂದ ಪರಬ್ರಹ್ಮಸ್ವರೂಪವನ್ನು ತಿಳಿಸುವ
ಎರಡನೆಯ ಅಧ್ಯಾಯವು ಮುಗಿದುದು.

ಎರಡನೆಯ ಅಧ್ಯಾಯದ ಸಾರಾಂಶವು

ಆದಿಸೃಷ್ಟಿಗೆ ಪೂರ್ವದಲ್ಲಿ ಎಲ್ಲೆಲ್ಲಿಯೂ ಆತ್ಮಜ್ಯೋತಿಯು ಮಾತ್ರ ಬೆಳಗುತಿದ್ದಿತು. ಬಿಂದುರೂಪವಾದ ಆ ಜ್ಯೋತಿಯೊಳಗೆ ಲೋಕತ್ರಯವೂ ಅಡಗಿದ್ದಿತು. ಆ ತ್ರಿಲೋಕದ ಮೇಲುಭಾಗದಲ್ಲಿ ಜ್ಯೋತಿರ್ಮಯವಾದ ಗೋಲೋಕವೂ, ಅದರ ಕೆಳಗೆ ಎಡ ಬಲ ಭಾಗಗಳಲ್ಲಿ ಕ್ರಮವಾಗಿ ಶಿವಲೋಕ ಮತ್ತು ವೈಕುಂಠಲೋಕಗಳೂ ಇದ್ದವು. ಸೃಷ್ಟಿಕಾಲದಲ್ಲಿ ಗೋಲೋಕದಲ್ಲಿ ಶ್ರೀಕೃಷ್ಣಪರಮಾತ್ಮನು ಅನೇಕ ಗೋಪಗೋಪಿಯರೊಡಗೂಡಿರುವನು. ಅಂತೆಯೇ ವೈಕುಂಠ ಶಿವಲೋಕಗಳಲ್ಲೂ, ಸೃಷ್ಟಿಯಲ್ಲಿ ಕ್ರಮವಾಗಿ ಲಕ್ಷ್ಮೀನಾರಾಯಣನೂ, ಶಿವನೂ ತಮ್ಮ ಪಾರ್ಷದರೊಡಗೂಡಿರುವರು. ಪ್ರಳಯದಲ್ಲಿ ಅವೆರಡು ಲೋಕವೂ ಶೂನ್ಯವಾಗಿರುವುದು. ಮೇಲೆ ಹೇಳಿದ ಲೋಕಗಳಲ್ಲಿ ವಾಸಿಸುವವರಿಗೆ ಜರಾಮರಣವ್ಯಾಧಿಗಳ ಬಾಧೆಯಿಲ್ಲ ಗೋಲೋಕದಲ್ಲಿ ನೆಲಸಿರುವ ನಿತ್ಯವಾದ ಆತ್ಮಜ್ಯೋತಿಯೊಳಗೆ ಧ್ಯಾನಕ್ಕೆ ಅವಲಂಬನವಾದ ದಿವ್ಯಸುಂದರಾಕಾರವನ್ನು ವಿಷ್ಣುಭಕ್ತರು ಕಲ್ಪಿಸಿಕೊಳ್ಳುವರು. ಆತ್ಮನಂತೆ ಆಕಾಶದಿಕ್ಕುಗಳೂ ನಿತ್ಯವಾದುವು. ಪ್ರಳಯದಲ್ಲಿಯೂ ಅವು ಆತ್ಮನಲ್ಲಿ ಅವಿನಾಶಿಯಾಗಿರುವುವು.

ಸಾಕಾರನಾದ ಪರಮಾತ್ಮನು ಪ್ರಳಯದಲ್ಲಿ ಶೂನ್ಯವಾದ ವಿಶ್ವವನ್ನೊಮ್ಮೆ ನೋಡಿದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ತೃತೀಯೋಽಧ್ಯಾಯಃ॥

॥ ಸೌತಿರುವಾಚ ॥

ದೃಷ್ಟ್ವಾ ಶೂನ್ಯಮಯಂ ವಿಶ್ವಂ ಗೋಲೋಕಂ ಚ ಭಯಂಕರಂ ।
ನಿರ್ಜಂತು ನಿರ್ಜಲಂ ಘೋರಂ ನಿರ್ವಾತಂ ತಮಸಾವೃತಂ ॥ ೧ ॥

ವೃಕ್ಷಶೈಲಸಮುದ್ರಾದಿವಿಹೀನಂ ವಿಕೃತಾಕೃತಂ ।
ನಿರ್ಮೂರ್ತಿಕಂ ಚ ನಿರ್ಧಾತು ನಿಃಸಸ್ಯಂ ನಿಸ್ತೃಣಂ ದ್ವಿಜ ॥ ೨ ॥

ಆಲೋಚ್ಯ ಮನಸಾ ಸರ್ವಮೇಕ ಏವಾಸಹಾಯವಾನ್ ।
ಸ್ವೇಚ್ಛಯಾ ಸ್ರಷ್ಟುಮಾರೇಭೇ ಸೃಷ್ಟಿಂ ಸ್ವೇಚ್ಛಾಮಯಃ ಪ್ರಭುಃ ॥ ೩ ॥

ಆವಿರ್ಬಭೂವುಃ ಸರ್ಗಾದೌ ಪುಂಸೋ ದಕ್ಷಿಣಪಾರ್ಶ್ವತಃ ।
ಭವಕಾರಣರೂಪಾಶ್ಚ ಮೂರ್ತಿಮಂತಸ್ತ್ರಯೋ ಗುಣಾಃ ॥ ೪ ॥

ಮೂರನೆಯ ಅಧ್ಯಾಯವು

೧–೩. ಸೂತಪುತ್ರ:—ಜೀವಿಗಳಿಂದಲೂ, ಜಲ, ವಾಯು ಮತ್ತು ತೇಜಸ್ಸುಗಳಿಂದಲೂ ರಹಿತವಾಗಿ ಭಯಂಕರವಾದ, ಶೂನ್ಯವಿಶ್ವವು ಪರಮಾತ್ಮನ ದೃಗ್ಗೋಚರವಾಯಿತು. ಗಿಡಮರಗಳೂ, ಬೆಟ್ಟಗುಡ್ಡಗಳೂ, ಸರಿತ್ಸಮುದ್ರಗಳೂ, ಮುತ್ತು ಮಾಣಿಕ್ಯಗಳೂ, ಗೈರಿಕಾದಿ ಧಾತುಗಳೂ, ತೃಣಾದಿಸಸ್ಯಗಳೂ ಇಲ್ಲದೆ ಶೂನ್ಯವಾಗಿರುವ ವಿಶ್ವವನ್ನೂ, ಏಕಾಂಗಿಯಾದ ತನ್ನನ್ನೂ ನೋಡಿದ, ಸ್ವೇಚ್ಛಾಮಯನಾದ ಈಶ್ವರನು ಸೃಷ್ಟಿಗೆ ಮನಸ್ಸು ಮಾಡಿದನು.

೪. ಆದಿಸೃಷ್ಟಿಯಲ್ಲಿ ಪರಮಪುರುಷನ ಬಲಭಾಗದಿಂದ ಪ್ರಪಂಚಕ್ಕೆ ಕಾರಣರೂಪವಾದ ಸತ್ವರಜಸ್ತಮೋಗುಣಗಳು ಮೂರ್ತಿಮತ್ತಾಗಿ ಆವಿರ್ಭವಿಸಿದವು.

ತತೋ ಮಹಾನಹಂಕಾರಃ ಪಂಚತನ್ಮಾತ್ರ ಏವ ಚ ।
ರೂಪರಸಗಂಧಸ್ಪರ್ಶಶಬ್ದಾಶ್ಚೈವೇತಿ ಸಂಗಕಾಃ ॥ ೫ ॥

ಅವಿರ್ಬಭೂವ ತತ್ಪಶ್ಚಾತ್ ಸ್ವಯಂ ನಾರಾಯಣಃ ಪ್ರಭುಃ ।
ಶ್ಯಾಮೋ ಯುವಾ ಪೀತವಾಸಾ ವನಮಾಲೀ ಚತುರ್ಭುಜಃ ॥ ೬ ॥

ಶಂಖಚಕ್ರಗದಾಪದ್ಮಧರಃ ಸ್ಮೇರಮುಖಾಂಬುಜಃ ।
ರತ್ನಭೂಷಣಭೂಷಾಢ್ಯ ಶಾರ್ಙ್ಗೀ ಕೌಸ್ತುಭಭೂಷಣಃ ॥ ೭ ॥

ಶ್ರೀವತ್ಸವಕ್ಷಾಃ ಶ್ರೀವಾಸಃ ಶ್ರೀನಿಧಿಃ ಶ್ರೀವಿಭಾವನಃ ।
ಶಾರದೇಂದುಪ್ರಭಾಮೃಷ್ಟಮುಖೇಂದು ಸುಮನೋಹರಃ ॥ ೮ ॥

ಕಾಮದೇವಪ್ರಭಾಮೃಷ್ಟರೂಪಲಾವಣ್ಯಸುಂದರಃ ।
ಶ್ರೀಕೃಷ್ಣ ಪುರತಃ ಸ್ಥಿತ್ವಾ ತುಷ್ಟಾವ ತಂ ಪ್ರಟಾಂಜಲಿಃ ॥ ೯ ॥

೫. ಅನಂತರ ಮಹತ್ ಮತ್ತು ಅಹಂಕಾರವೆಂಬ ತತ್ತ್ವಗಳೂ, ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶವೆಂಬ ಪಂಚಮಹಾಭೂತಗಳಿಗೆ ಕಾರಣಗಳಾದ ಪಂಚತನ್ಮಾತ್ರಗಳೂ, ರೂಪ, ರಸ, ಗಂಧ, ಸ್ಪರ್ಶ ಮತ್ತು ಶಬ್ದವೆಂಬ ಗುಣಗಳೂ ಕ್ರಮವಾಗಿ ಆವಿರ್ಭವಿಸಿದವು.

೬–೯. ಅನಂತರ ಮೇಘಶ್ಯಾಮನೂ, ನವಯುವಕನೂ, ಚತುರ್ಭುಜನೂ, ಪೀತಾಂಬರನೂ, ಶಂಖಚಕ್ರಗದಾಪದ್ಮಧಾರಿಯೂ ಆಗಿ ವನಮಾಲೆಯನ್ನು ಧರಿಸಿ, ರತ್ನಾಭರಣಗಳನ್ನು ತೊಟ್ಟಿರುವ ಶ್ರೀಮನ್ನಾರಾಯಣನು ಆವಿರ್ಭವಿಸಿದನು. ಶಾರ್ಙ್ಗಧನುರ್ಧರನೂ, ಶ್ರೀವತ್ಸಲಾಂಛನನೂ, ಕೌಸ್ತುಭೋದ್ಭಾಸಿತನೂ ಆಗಿ ಎದೆಯಲ್ಲಿ ಲಕ್ಷ್ಮಿಯನ್ನು ಧರಿಸಿ, ಶರಚ್ಚಂದ್ರನನ್ನು ಧಿಕ್ಕರಿಸುವ ಮುಖದಿಂದಲೂ, ಮನ್ಮಥನನ್ನು ಅಲ್ಲಗಳೆಯುವ ರೂಪಲಾವಣ್ಯಗಳಿಂದಲೂ ಶೋಭಿಸುತ್ತಿರುವ ಆ ನಾರಾಯಣನು ಶ್ರೀಕೃಷ್ಣಪರಮಾತ್ಮನ ಮುಂದೆ ನಿಂತು ಕೈಮುಗಿದುಕೊಂಡು ಈ ರೀತಿಯಾಗಿ ಸ್ತೋತ್ರಮಾಡಿದನು.

|| ನಾರಾಯಣ ಉವಾಚ ||

ವರಂ ವರೇಣ್ಯಂ ವರದಂ ವರಾರ್ಹಂ ವರಕಾರಣಂ |
ಕಾರಣಂ ಕಾರಣಾನಾಂ ಚ ಕರ್ಮ ತತ್ಕರ್ಮಕಾರಣಂ || ೧೦ ||

ತಪಸ್ತತ್ಫಲದಂ ಶಶ್ವತ್ ತಪಸ್ವೀಶಂ ಚ ತಾಪಸಂ |
ವಂದೇ ನವಘನಶ್ಯಾಮಂ ಸ್ವಾತ್ಮಾರಾಮಂ ಮನೋಹರಂ || ೧೧ ||

ನಿಷ್ಕಾಮಂ ಕಾಮರೂಪಂ ಚ ಕಾಮಘ್ನಂ ಕಾಮಕಾರಣಂ |
ಸರ್ವಂ ಸರ್ವೇಶ್ವರಂ ಸರ್ವಬೀಜರೂಪಮನುತ್ತಮಂ || ೧೨ ||

ವೇದರೂಪಂ ವೇದಭವಂ ವೇದೋಕ್ತಫಲದಂ ಫಲಂ |
ವೇದಜ್ಞಂ ತದ್ವಿಧಾನಂ ಚ ಸರ್ವವೇದವಿದಾಂ ವರಂ || ೧೩ ||

ಇತ್ಯುಕ್ತ್ವಾ ಭಕ್ತಿಯುಕ್ತಶ್ಚ ಸ ಉವಾಸ ತದಾಜ್ಞಯಾ |
ರತ್ನಸಿಂಹಾಸನೇ ರಮ್ಯೇ ಪುರತಃ ಪರಮಾತ್ಮನಃ || ೧೪ ||

೧೦-೧೧. ನಾರಾಯಣ :—ಸರ್ವಶ್ರೇಷ್ಠನೂ, ಶುಭಾಶುಭಕರ್ಮಕಾರಕನೂ, ತಪೋರೂಪನೂ, ತಪಃಫಲದಾಯಕನೂ, ತಾಪಸಶ್ರೇಷ್ಠನೂ, ಸ್ವಾತ್ಮಾರಾಮನೂ, ನವಮೇಘಶ್ಯಾಮನೂ ಆದ ಎಲೈ ಪರಮಾತ್ಮನೇ, ನಿನಗೆ ಭಕ್ತಿಯಿಂದ ವಂದಿಸುವೆನು.

೧೨-೧೩. ನಿಷ್ಕಾಮನಾದ ನೀನೇ ಕಾಮರೂಪನೂ, ಕಾಮಕಾರಣನೂ, ಕಾಮನಾಶಕನೂ ಆಗಿರುವೆ. ಸರ್ವೇಶ್ವರನೂ, ಸರ್ವಶ್ರೇಷ್ಠನೂ, ಸರ್ವಬೀಜನೂ ಆದ ನೀನು ವೇದಸ್ವರೂಪನೂ, ವೇದೋಕ್ತಫಲಪ್ರದನೂ, ವೇದಜ್ಞರಲ್ಲಿ ಶ್ರೇಷ್ಠನೂ ಎನಿಸಿರುವೆ.

೧೪. ಹೀಗೆಂದು ಭಕ್ತಿಪೂರ್ವಕವಾಗಿ ಭಜಿಸಿ, ಶ್ರೀಮನ್ನಾರಾಯಣನು ಶ್ರೀಕೃಷ್ಣಪರಮಾತ್ಮನ ಮುಂದೆ ರಮ್ಯವಾದ ರತ್ನಸಿಂಹಾಸನದಲ್ಲಿ ಅವನ ಅಪ್ಪಣೆ ಪಡೆದು ಕುಳಿತನು.

ನಾರಾಯಣಕೃತಂ ಸ್ತೋತ್ರಂ ಯಃ ಪಠೇತ್ಸುಸಮಾಹಿತಃ ।
ತ್ರಿಸಂಧ್ಯಂ ಯಃ ಪಠೇನ್ನಿತ್ಯಂ ಪಾಪಂ ತಸ್ಯ ನ ವಿದ್ಯತೇ   ॥ ೧೫ ॥

ಪುತ್ರಾರ್ಥೀ ಲಭತೇ ಪುತ್ರಂ ಭಾರ್ಯಾರ್ಥೀ ಲಭತೇ ಪ್ರಿಯಾಂ ।
ಭ್ರಷ್ಟರಾಜ್ಯೋ ಲಭೇದ್ರಾಜ್ಯಂ ಧನಂ ಭ್ರಷ್ಟಧನೋ ಲಭೇತ್   ॥ ೧೬ ॥

ಕಾರಾಗಾರೇ ವಿಪದ್ಗ್ರಸ್ತಃ ಸ್ತೋತ್ರೇಣಾನೇನ ಮುಚ್ಯತೇ ।
ರೋಗಾತ್ಪ್ರಮುಚ್ಯತೇ ರೋಗೀ ಧ್ರುವಂ ಶ್ರುತ್ವಾ ಚ ಸಂಯತಃ   ॥ ೧೭ ॥

॥ ಸೌತಿರುವಾಚ ॥

ಆವಿರ್ಬಭೂವ ತತ್ಪಶ್ಚಾದಾತ್ಮನೋ ವಾಮಪಾರ್ಶ್ವತಃ ।
ಶುದ್ಧಸ್ಫಟಿಕಸಂಕಾಶಃ ಪಂಚವಕ್ತ್ರೋ ದಿಗಂಬರಃ   ॥ ೧೮ ॥

---

೧೫. ನಾರಾಯಣಕೃತವಾದ ಈ ಸ್ತೋತ್ರವನ್ನು ಯಾರು ಮೂರು ಸಂಧ್ಯಾ ಕಾಲಗಳಲ್ಲೂ ಭಕ್ತಿಪೂರ್ವಕವಾಗಿ ಪಠಿಸುವರೋ ಅವರಿಗೆ ಪಾಪಲೇಶವೂ ಸಂಘಟಿಸುವುದಿಲ್ಲ.

೧೬. ಮಕ್ಕಳನ್ನಾಶಿಸುವವರಿಗೆ ಮಕ್ಕಳೂ. ಪತ್ನಿಯನ್ನು ಬಯಸುವವರಿಗೆ ಪತ್ನಿಯೂ ಲಭಿಸುವುದಲ್ಲದೆ ರಾಜ್ಯಭ್ರಷ್ಟರಿಗೆ ರಾಜ್ಯವೂ, ನಷ್ಟಧನರಿಗೆ ಧನವೂ ಪುನಃ ದೊರೆಯುವುದು.

೧೭. ಕಾರಾಗೃಹದಲ್ಲಿ ಕಷ್ಟಕ್ಕೆ ಸಿಲುಕಿದವನೂ, ದೀರ್ಘರೋಗದಿಂದ ನರಳುತ್ತಿರುವವನೂ ಚಿತ್ತಶುದ್ಧಿಯಿಂದ ಈ ಸ್ತೋತ್ರವನ್ನು ಕೇಳಿದರೆ ಮುಕ್ತಿಹೊಂದುವುದರಲ್ಲಿ ಸಂಶಯವಿಲ್ಲ.

೧೮. ಸೂತಪುತ್ರ :—ಅನಂತರ ಸ್ಫಟಿಕಮಣಿಯಂತೆ ಪರಿಶುದ್ಧನೂ, ಪಂಚಮುಖನೂ, ದಿಗಂಬರನೂ ಆದ ಶಂಕರನು ಪರಮಾತ್ಮನ ವಾಮಭಾಗದಿಂದ ಅವತರಿಸಿದನು.

ತಪ್ತಕಾಂಚನವರ್ಣಾಭಜಟಾಭಾರಧರೋವರಃ ।
ಈಷದ್ಧಾಸ್ಯಪ್ರಸನ್ನಾಸ್ಯಸ್ತ್ರಿಣೇತ್ರಶ್ಚಂದ್ರಶೇಖರಃ ॥ ೧೯ ॥

ತ್ರಿಶೂಲಪಟ್ಟಿಶಧರೋ ಜಪಮಾಲಾಕರಃ ಪರಃ ।
ಸರ್ವಸಿದ್ಧೇಶ್ವರಃ ಸಿದ್ಧಃ ಯೋಗೀಂದ್ರಾಣಾಂ ಗುರೋರ್ಗುರುಃ ॥ ೨೦ ॥

ಮೃತ್ಯೋರ್ಮೃತ್ಯುರೀಶ್ವರಶ್ಚ ಮೃತ್ಯುರ್ಮೃತ್ಯುಂಜಯಃ ಶಿವಃ ।
ಜ್ಞಾನಾನಂದೋ ಮಹಾಜ್ಞಾನೀ ಮಹಾಜ್ಞಾನಪ್ರದಃ ಪರಃ ॥ ೨೧ ॥

ಪೂರ್ಣಚಂದ್ರಪ್ರಭಾಮೃಷ್ಟಸುಖದೃಶ್ಯೋ ಮನೋಹರಃ ।
ವೈಷ್ಣವಾನಾಂ ಚ ಪ್ರವರಃ ಪ್ರಜ್ವಲನ್ ಬ್ರಹ್ಮತೇಜಸಾ ॥ ೨೨ ॥

ಶ್ರೀಕೃಷ್ಣಪುರತಃ ಸ್ಥಿತ್ವಾ ತುಷ್ಟಾವ ತಂ ಪುಟಾಂಜಲಿಃ ।
ಪುಲಕಾಂಕಿತಸರ್ವಾಂಗಃ ಸಾಶ್ರುನೇತ್ರೋಽತಿಗದ್ಗದಃ ॥ ೨೩ ॥

---

೧೯. ಅವನು ಪುಟಕ್ಕೆಹಾಕಿದಚಿನ್ನದಂತೆ ಹೊಂಬಣ್ಣವಾದ ಜಟೆಗಳಿಂದಲೂ, ಮುಗುಳುನಗೆಯಿಂದ ಪ್ರಸನ್ನವಾದ ಮುಖದಿಂದಲೂ, ಮೂರುಕಣ್ಣುಗಳಿಂದಲೂ, ತಲೆಯಲ್ಲಿರುವ ಅರ್ಧಚಂದ್ರನಿಂದಲೂ ಶೋಭಿಸಿದನು.

೨೦. ಕೈಗಳಲ್ಲಿ ತ್ರಿಶೂಲ, ಪಟ್ಟಿಶ ಮುಂತಾದ ಆಯುಧಗಳನ್ನೂ ಜಪಸರವನ್ನೂ ಧರಿಸಿ, ಯೋಗಾರೂಢನಾಗಿ ಯೋಗಿಶ್ರೇಷ್ಠನೂ, ಸರ್ವಸಿದ್ಧೇಶ್ವರನೂ ಎನಿಸಿದನು.

೨೧. ಸರ್ವಶಕ್ತನೂ, ಮೃತ್ಯುಂಜಯನೂ, ಜ್ಞಾನಾನಂದಮಯನೂ ಆದ ಆ ಶಿವನು ಮೃತ್ಯುವಿಗೂ ಮೃತ್ಯುಸ್ವರೂಪನಾಗಿದ್ದುದಲ್ಲದೆ, ಮಹಾಜ್ಞಾನಿಯೂ, ಎಲ್ಲರಿಗೂ ಜ್ಞಾನದಾಯಕನೂ ಆಗಿದ್ದನು.

೨೨. ಪೂರ್ಣಚಂದ್ರಪ್ರಭೆಯಂತೆ ಸುಖದೃಶ್ಯನೂ, ಮನೋಹರನೂ ಆಗಿದ್ದ ಆ ಶಿವನು ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತ ವಿಷ್ಣುಭಕ್ತರಲ್ಲಿ ಶ್ರೇಷ್ಠನೆನಿಸಿದನು.

೨೩. ಶ್ರೀಕೃಷ್ಣಪರಮಾತ್ಮನ ಮುಂದೆನಿಂತು ಆ ಶಿವನು ರೋಮಾಂಚಿತಶರೀರನಾಗಿ, ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ ಗದ್ಗದಕಂಠದಿಂದ ಸ್ತುತಿಸ ಲಾರಂಭಿಸಿದನು.

॥ ಮಹಾದೇವ ಉವಾಚ ॥

ಜಯಸ್ವರೂಪಂ ಜಯದಂ ಜಯೇಶಂ ಜಯಕಾರಣಂ ।
ಪ್ರವರಂ ಜಯದಾನಾಂ ಚ ವಂದೇ ತಮಪರಾಜಿತಂ ॥ ೨೪ ॥

ವಿಶ್ವಂ ವಿಶ್ವೇಶ್ವರೇಶಂ ಚ ವಿಶ್ವೇಶಂ ವಿಶ್ವಕಾರಣಂ ।
ವಿಶ್ವಾಧಾರಂ ಚ ವಿಶ್ವಸ್ತಂ ವಿಶ್ವಕಾರಣಕಾರಣಂ ॥ ೨೫ ॥

ವಿಶ್ವರಕ್ಷಾಕಾರಣಂ ಚ ವಿಶ್ವಘ್ನಂ ವಿಶ್ವಜಂ ಪರಂ ।
ಫಲಬೀಜಂ ಫಲಾಧಾರಂ ಫಲಂ ಚ ತತ್ಫಲಪ್ರದಂ ॥ ೨೬ ॥

ತೇಜಃಸ್ವರೂಪಂ ತೇಜೋದಂ ಸರ್ವತೇಜಸ್ವಿನಾಂ ವರಂ ।
ಇತ್ಯೇವಮುಕ್ತ್ವಾ ತಂ ನತ್ವಾ ರತ್ನಸಿಂಹಾಸನೇ ವರೇ ॥
ನಾರಾಯಣಂ ಚ ಸಂಭಾಷ್ಯ ಸ ಉವಾಸ ತದಾಜ್ಞಯಾ ॥ ೨೭ ॥

---

೨೪. ಎಲೈ ಪರಮಾತ್ಮನೆ, ನಿತ್ಯಮುಕ್ತನಾದ ನೀನು ಸಂಸಾರಸಾಗರದಲ್ಲಿ ಮುಳುಗಿರುವ ಭಕ್ತರಿಗೆ ಮುಕ್ತಿ (ಜಯ) ದಾಯಕನಾಗಿರುವೆ. ಸರ್ವಸಿದ್ಧೇಶ್ವರನಾದ ನಿನ್ನನ್ನು ಜಯಿಸುವವರಾರೂ ಇಲ್ಲ.

೨೫. ವಿರಾಡ್ರೂಪನಾದ ನೀನು ವಿಶ್ವಕಾರಣನೂ, ವಿಶ್ವಾಧಾರನೂ, ವಿಶ್ವೇಶ್ವರನೂ, ಆಗಿರುವುದಲ್ಲದೆ ವಿಶ್ವವ್ಯಾಪಕನಾಗಿರುವೆ.

೨೬. ವಿಶ್ವರಕ್ಷಕನೂ ವಿಶ್ವಕಾರಕನೂ ಆದ ನೀನು ಮೋಕ್ಷಫಲಕ್ಕೆ ಬೀಜಸ್ವರೂಪನೂ, ಮೋಕ್ಷಫಲದಾಯಕನೂ, ಮೋಕ್ಷರೂಪನೂ ಆಗಿರುವೆ.

೨೭. ತೇಜೋಮಯನೂ, ತೇಜೋದಾಯಕನೂ ಆದ ಎಲೈ ಪರಮಾತ್ಮನೇ ನಿನಗೆ ಅನಂತ ವಂದನೆಗಳು ಎಂದು ಹೇಳಿ, ಶಿವನು, ನಾರಾಯಣನೊಡನೆ ಸಂಭಾಷಿಸಿ, ಪರಮಾತ್ಮನ ಅಪ್ಪಣೆಪಡೆದು ರತ್ನಸಿಂಹಾಸನದಲ್ಲಿ ಮಂಡಿಸಿದನು.

ಇತಿ ಶಂಭುಕೃತಂ ಸ್ತೋತ್ರಂ ಯೋ ಜನಃ ಸಂಯತಃ ಪಠೇತ್ ।
ಸರ್ವಸಿದ್ಧಿರ್ಭವೇತ್ತಸ್ಯ ವಿಜಯಂ ಚ ಪದೇ ಪದೇ ॥ ೨೮ ॥

ಸಂತತಂ ವರ್ಧತೇ ಮಿತ್ರಂ ಧನಮೈಶ್ವರ್ಯಮೇವ ಚ ।
ಶತ್ರುಸೈನ್ಯಂ ಕ್ಷಯಂ ಯಾತಿ ದುಃಖಾನಿ ದುರಿತಾನಿ ಚ ॥ ೨೯ ॥

ಇತಿ ಶ್ರೀ ಬ್ರಹ್ಮವೈವರ್ತೇ ಶಂಭುಕೃತಂ ಶ್ರೀಕೃಷ್ಣ ಸ್ತೋತ್ರಂ.

॥ ಸೌತಿರುವಾಚ ॥

ಆವಿರ್ಬಭೂವ ತತ್ಪಶ್ಚಾತ್ ಕೃಷ್ಣಸ್ಯ ನಾಭಿಪಂಕಜಾತ್ ।
ಮಹಾತಪಸ್ವೀ ವೃದ್ಧಶ್ಚ ಕಮಂಡಲುಕರೋ ವರಃ ॥ ೩೦ ॥

ಶುಕ್ಲವಾಸಾಃ ಶುಕ್ಲದಂತಃ ಶುಕ್ಲಕೇಶಃ ಚತುರ್ಮುಖಃ ।
ಯೋಗೀಶಃ ಶಿಲ್ಪಿನಾಮೀಶಃ ಸರ್ವೇಷಾಂ ಜನಕೋ ಗುರುಃ ॥ ೩೧ ॥

೨೮–೨೯. ಶಂಭುಕೃತವಾದ ಈ ಸ್ತೋತ್ರವನ್ನು ಜಿತೇಂದ್ರಿಯರಾಗಿ ಯಾರು ಪಠಿಸುವರೋ ಅವರಿಗೆ ಸಕಲಸಿದ್ಧಿಯೂ, ಎಲ್ಲ ಕಾರ್ಯಗಳಲ್ಲಿ ಜಯವೂ ಲಭಿಸುವುದು. ಮಿತ್ರ ಬಾಂಧವರೂ, ಧನಕನಕಾದಿಗಳೂ, ಅಭಿವೃದ್ಧಿಹೊಂದುವುದಲ್ಲದೆ, ಶತ್ರುಗಳೂ ದುಃಖದುರಿತಗಳೂ ದೂರವಾಗುವುವು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದಲ್ಲಿ ಶಂಭುವು ಮಾಡಿದ
ಶ್ರೀಕೃಷ್ಣ ಸ್ತೋತ್ರವು ಮುಗಿದುದು.

೩೦. ಸೂತಪುತ್ರ :—ಅನಂತರದಲ್ಲಿ ಶ್ರೀಕೃಷ್ಣಪರಮಾತ್ಮನ ನಾಭಿಕಮಲದಿಂದ ವೃದ್ಧನೂ ಮಹಾತಪಸ್ವಿಯೂ, ಕಮಂಡಲುಧಾರಿಯೂ ಆದ ಪುರುಷನೊಬ್ಬನು ಆವಿರ್ಭವಿಸಿದನು.

೩೧. ಶುಕ್ಲಾಂಬರಧರನೂ, ಶುಕ್ಲದಂತನೂ, ಶುಕ್ಲಕೇಶನೂ ಆದ ಆ ಚತುರ್ಮುಖಬ್ರಹ್ಮನು, ಯೋಗಿಗಳಿಗೂ ಶಿಲ್ಪಿಗಳಿಗೂ ಶ್ರೇಷ್ಠನೆನಿಸಿ ಚರಾಚರಾತ್ಮಕವಾದ ನಿಖಿಲ ಜಗತ್ತಿಗೂ ಜನಕನಾದನು.

ತಪಸಾಂ ಫಲದಾತಾ ಚ ಪ್ರದಾತಾ ಸರ್ವಸಂಪದಾಂ ।
ಸ್ರಷ್ಟಾ ವಿಧಾತಾ ಕರ್ತಾ ಚ ಹರ್ತಾ ಚ ಸರ್ವಕರ್ಮಣಾಂ ॥ ೩೨ ॥

ಧಾತಾ ಚತುರ್ಣಾಂ ವೇದಾನಾಂ ಜ್ಞಾತಾ ವೇದಪ್ರಸೂಪತಿಃ ।
ಶಾಂತಃ ಸರಸ್ವತೀಕಾಂತಃ ಸುಶೀಲಶ್ಚ ಕೃಪಾನಿಧಿಃ ॥ ೩೩ ॥

ಶ್ರೀಕೃಷ್ಣಪುರತಃ ಸ್ಥಿತ್ವಾ ತುಷ್ಟಾವ ತಂ ಪುಟಾಂಜಲಿಃ ।
ಪುಲಕಾಂಕಿತಸರ್ವಾಂಗೋ ಭಕ್ತಿನಮ್ರಾತ್ಮಕಂಧರಃ ॥ ೩೪ ॥

॥ ಬ್ರಹ್ಮೋವಾಚ ॥

ಕೃಷ್ಣಂ ವಂದೇ ಗುಣಾತೀತಂ ಗೋವಿಂದಮೇಕಮಕ್ಷರಂ ।
ಅವ್ಯಕ್ತಮವ್ಯಯಂ ವ್ಯಕ್ತಂ ಗೋಪವೇಷವಿಧಾಯಿನಂ ॥ ೩೫ ॥

ಕಿಶೋರವಯಸಂ ಶಾಂತಂ ಗೋಪೀಕಾಂತಂ ಮನೋಹರಂ ।
ನವೀನನೀರದಶ್ಯಾಮಂ ಕೋಟಿಕಂದರ್ಪಸುಂದರಂ ॥ ೩೬ ॥

---

೩೨. ತಪಃಫಲದಾತೃವೂ, ಸರ್ವಸಂಪತ್ಪ್ರದಾತೃವೂ ಆದ ಆ ಸೃಷ್ಟಿಕರ್ತನು ಸರ್ವಕರ್ಮಗಳ ಕರ್ತೃವೂ, ನಾಶಕನೂ ಆದನು.

೩೩. ಚತುರ್ವೇದಗಳ ಜನಕನೂ, ಧಾರಕನೂ, ಜ್ಞಾತೃವೂ ಆದ ಆ ದಯಾಮಯನು ಸರಸ್ವತಿಯಕಾಂತನೂ, ಶಾಂತನೂ, ಆದನು.

೩೪. ಆ ಚತುರ್ಮುಖಬ್ರಹ್ಮನು ಶ್ರೀಕೃಷ್ಣಪರಮಾತ್ಮನ ಮುಂದೆ ನಿಂತು ರೋಮಾಂಚಿತಶರೀರನಾಗಿ, ಭಕ್ತಿಯಿಂದ ತಲೆಬಾಗಿ, ಕೈಮುಗಿದುಕೊಂಡು ಸ್ತುತಿಸಲಾರಂಭಿಸಿದನು.

೩೫. ಬ್ರಹ್ಮ:—ತ್ರಿಗುಣಾತೀತನೂ, ಅದ್ವಿತೀಯನೂ, ಅಕ್ಷರನೂ, ಅವ್ಯಕ್ತನೂ ಆದ ಎಲೈ ಶ್ರೀಕೃಷ್ಣಪರಮಾತ್ಮನೇ, ಸ್ವೇಚ್ಛಾಮಯನಾದ ನೀನು ಗೋಪವೇಷಧಾರಿಯಾಗಿ ವ್ಯಕ್ತನಾಗಿರುವೆ.

೩೬. ಗೋಪಕಿಶೋರವೇಷಧಾರಿಯೂ, ಗೋಪಿಯರಕಾಂತನೂ, ಶಾಂತನೂ ಆದ ನೀನು ನವಮೇಘಶ್ಯಾಮನೂ, ಕೋಟಿಕಂದರ್ಪಸುಂದರನೂ, ಮನೋಹರನೂ ಆಗಿರುವೆ.

ವೃಂದಾವನವನಾಭ್ಯರ್ಣೇ ರಾಸಮಂಡಲಸಂಸ್ಥಿತಂ ।
ರಾಸೇಶ್ವರಂ ರಾಸವಾಸಂ ರಾಸೋಲ್ಲಾಸಸಮುತ್ಸುಕಂ ॥ ೩೭ ॥

ಇತ್ಯೇವಮುಕ್ತ್ವಾ ತಂ ನತ್ವಾ ರತ್ನಸಿಂಹಾಸನೇ ವರೇ ।
ನಾರಾಯಣೇಶೌ ಸಂಭಾಷ್ಯ ಸ ಉವಾಸ ತದಾಜ್ಞಯಾ ॥ ೩೮ ॥

ಇತಿ ಬ್ರಹ್ಮಕೃತಂ ಸ್ತೋತ್ರಂ ಪ್ರಾತರುತ್ಥಾಯ ಯಃಪಠೇತ್ ।
ಪಾಪಾನಿ ತಸ್ಯ ನಶ್ಯಂತಿ ದುಃಸ್ವಪ್ನಃ ಸುಸ್ವಪ್ನೋ ಭವೇತ್ ॥ ೩೯ ॥

ಭಕ್ತಿರ್ಭವತಿಗೋವಿಂದೇ ಶ್ರೀಪುತ್ರಪೌತ್ರವರ್ಧಿನೀ ।
ಅಕೀರ್ತಿಃ ಕ್ಷಯಮಾಪ್ನೋತಿ ಸತ್ಕೀರ್ತಿಃ ವರ್ಧತೇ ಚಿರಂ ॥ ೪೦ ॥

॥ ಸೌತಿರುವಾಚ ॥

ಆವಿರ್ಬಭೂವ ತತ್ಪಶ್ಚಾದ್ವಕ್ಷಸಃ ಪರಮಾತ್ಮನಃ ।
ಸಸ್ಮಿತಃ ಪುರುಷಃ ಕಶ್ಚಿತ್ ಶುಕ್ಲವರ್ಣೋ ಜಟಾಧರಃ ॥ ೪೧ ॥

---

೩೭. ವೃಂದಾವನದ ಸಮೀಪದಲ್ಲಿರುವ ರಾಸಮಂಡಲದಲ್ಲಿ ಮಂಡಿಸಿ, ರಾಸ ಕ್ರೀಡಾಸಕ್ತನಾಗಿ ನೀನು ರಾಸೇಶ್ವರನೆನಿಸಿರುವೆ.

೩೮. ಚತುರ್ಮುಖಬ್ರಹ್ಮನು ಈ ರೀತಿಯಾಗಿ ಸ್ತುತಿಸಿ, ಶ್ರೀಕೃಷ್ಣಪರಮಾತ್ಮನಿಗೆ ವಂದಿಸಿ, ನಾರಾಯಣ ಮತ್ತು ಶಂಕರರನ್ನು ಸಂಭಾಷಿಸಿ ಪರಮಾತ್ಮನ ಅಪ್ಪಣೆಯಂತೆ ರತ್ನಸಿಂಹಾಸನದಲ್ಲಿ ಕುಳಿತನು.

೩೯–೪೦. ಬ್ರಹ್ಮಕೃತವಾದ ಈ ಸ್ತೋತ್ರವನ್ನು ಉದಯಕಾಲದಲ್ಲಿ ಶುಚಿಯಾಗಿ ಪಠಿಸುವವರ ಪಾಪಗಳು ಪರಿಹಾರವಾಗಿ, ದುಃಸ್ವಪ್ನವೆಲ್ಲವೂ ಶುಭಸ್ವಪ್ನವಾಗುವುವು. ಅಲ್ಲದೆ ಶ್ರೀಹರಿಯಲ್ಲಿ ಭಕ್ತಿಯೂ, ಪುತ್ರ, ಪೌತ್ರಸಂಪದಭಿವೃದ್ಧಿಯೂ, ಉಂಟಾಗಿ ಅಪಕೀರ್ತಿಯು ದೂರವಾಗಿ ಸತ್ಕೀರ್ತಿಯು ಎಲ್ಲೆಡೆಯಲ್ಲೂ ಲಭಿಸುವುದು.

೪೧. ಸೂತಪುತ್ರ :—ಅನಂತರದಲ್ಲಿ ಪರಮಾತ್ಮನ ವಕ್ಷಃಸ್ಥಳದಿಂದ ಶುಕ್ಲ ವರ್ಣನೂ, ಜಟಾಧರನೂ, ಸ್ಮಿತವದನನೂ ಆದ ಪುರುಷನೊಬ್ಬನು ಆವಿರ್ಭವಿಸಿದನು

ಸರ್ವಸಾಕ್ಷೀ ಚ ಸರ್ವಜ್ಞಃ ಸರ್ವೇಷಾಂ ಸರ್ವಕರ್ಮಣಾಂ ।
ಸಮಃ ಸರ್ವತ್ರ ಸದಯಃ ಹಿಂಸಾಕೋಪವಿವರ್ಜಿತಃ ॥ ೪೨ ॥

ಧರ್ಮಜ್ಞಾನಯುತೋ ಧರ್ಮೋ ಧರ್ಮಿಷ್ಠೋ ಧರ್ಮದೋಭವೇತ್ ।
ಸ ಏವ ಧರ್ಮಿಣಾಂ ಧರ್ಮಃ ಪರಮಾತ್ಮಾ ಫಲೋದ್ಭವಃ ॥ ೪೩ ॥

ಶ್ರೀಕೃಷ್ಣಪುರತಃ ಸ್ಥಿತ್ವಾ ಪ್ರಣಮ್ಯ ದಂಡವದ್ಭುವಿ ।
ತುಷ್ಟಾವ ಪರಮಾತ್ಮಾನಂ ಸರ್ವೇಶಂ ಸರ್ವಕಾಮದಂ ॥ ೪೪ ॥

॥ ಶ್ರೀ ಧರ್ಮ ಉವಾಚ ॥

ಕೃಷ್ಣಂ ವಿಷ್ಣುಂ ವಾಸುದೇವಂ ಪರಮಾತ್ಮಾನಮೀಶ್ವರಂ ।
ಗೋವಿಂದಂ ಪರಮಾನಂದಮೇಕಮಕ್ಷರಮಚ್ಯುತಂ ॥ ೪೫ ॥

---

೪೨. ಸಕಲಪ್ರಾಣಿಗಳ ಕರ್ಮಸಾಕ್ಷಿಯೂ, ಸರ್ವಜ್ಞನೂ ಆದ ಆ ಪುರುಷನು ಹಿಂಸಾಕೋಪಗಳನ್ನು ಬಿಟ್ಟು ಸರ್ವಪ್ರಾಣಿಗಳಲ್ಲೂ ಸಮನೂ ದಯಾಮಯನೂ ಆದನು.

೪೩. ಧರ್ಮಜ್ಞಾನಿಯೂ, ಧರ್ಮಿಷ್ಠನೂ, ಧರ್ಮಫಲದಾಯಕನೂ, ಧರ್ಮಸ್ವರೂಪನೂ ಆದ ಆ ಪುರುಷನೇ ಧರ್ಮದೇವನೆನಿಸಿದನು.

೪೪. ಸರ್ವೇಶ್ವರನೂ, ಸರ್ವಕಾಮಿತಾರ್ಥದಾಯಕನೂ ಆದ ಶ್ರೀಕೃಷ್ಣಪರಮಾತ್ಮನ ಮುಂದೆ ಭೂಮಿಯಮೇಲೆ ಸಾಷ್ಟಾಂಗವೆರಗಿ ಆ ಧರ್ಮಪುರುಷನು ಈ ರೀತಿಯಾಗಿ ಸ್ತುತಿಸಿದನು.

೪೫. ಧರ್ಮ :—ದ್ವಾಪರಯುಗದಲ್ಲಿ ವಸುದೇವನ ಪುತ್ರನಾಗಿ ಅವತರಿಸಿ ಕೃಷ್ಣನೆಂದು ಹೆಸರುಪಡೆದ ಎಲೈ ಶ್ರೀಕೃಷ್ಣಪರಮಾತ್ಮನೇ, ನಾಶರಹಿತನೂ, ಪರಮಾನಂದಸ್ವರೂಪನೂ, ಆದ ನಿನಗೆ ವಂದಿಸುವೆನು.

ಗೋಪೇಶ್ವರಂ ಚ ಗೋಪೀಶಂ ಗೋಪಂ ಗೋರಕ್ಷಕಂ ವಿಭುಂ ।
ಗವಾಮೀಶಂ ಚ ಗೋಷ್ಠಸ್ಥಂ ಗೋವತ್ಸಪುಚ್ಛಧಾರಿಣಂ ॥ ೪೬ ॥

ಗೋ ಗೋಪಗೋಪೀಮಧ್ಯಸ್ಥಂ ಪ್ರಧಾನಂ ಪುರುಷೋತ್ತಮಂ ।
ವಂದೇಽನವದ್ಯಮನಘಂ ಶ್ಯಾಮಂ ಶಾಂತಂ ಮನೋಹರಂ ॥ ೪೭ ॥

ಇತ್ಯುಚ್ಚಾರ್ಯ ಸಮುತ್ತಿಷ್ಠನ್ ರತ್ನಸಿಂಹಾಸನೇ ವರೇ ।
ಬ್ರಹ್ಮವಿಷ್ಣುಮಹೇಶಾಂಸ್ತಾನ್ ಸಂಭಾಷ್ಯ ಸ ಉವಾಸ ಹ ॥ ೪೮ ॥

ಚತುರ್ವಿಂಶತಿನಾಮಾನಿ ಧರ್ಮವಕ್ತ್ರೋದ್ಗತಾನಿ ಚ ।
ಯಃ ಪಠೇತ್ ಪ್ರಾತರುತ್ಥಾಯ ಸ ಸುಖೀ ಸರ್ವತೋ ಜಯೀ ॥ ೪೯ ॥

ಮೃತ್ಯುಕಾಲೇ ಹರೇರ್ನಾಮ ತಸ್ಯ ಸಾಂಧ್ಯಂ ಲಭೇದ್ಧ್ರುವಂ ।
ಸ ಯಾತ್ಯಂತೇ ಹರೇಃಸ್ಥಾನಂ ಹರಿದಾಸ್ಯಂ ಭವೇದ್ಧ್ರುವಂ ॥ ೫೦ ॥

೪೬–೪೭. ಗೋಪರೊಡೆಯನೂ, ಗೋಪಿಯರಕಾಂತನೂ, ಗೋವುಗಳರಕ್ಷಕನೂ ಆದ ನೀನು ಒಮ್ಮೊಮ್ಮೆ ಗೋಷ್ಠ (ಕೊಟ್ಟಿಗೆ) ದಲ್ಲಿದ್ದುಕೊಂಡು ಕರುಗಳ ಬಾಲವನ್ನು ಹಿಡಿದು ಆಡಿಸುತ್ತಿರುವೆ. ಮತ್ತೊಮ್ಮೆ ಗೋಗೋಪಗೋಪಿಯರ ಮಧ್ಯದಲ್ಲಿ ಕುಳಿತು ಪ್ರಧಾನಪುರುಷನೆನಿಸಿರುವೆ. ಇಂತಿದ್ದರೂ, ನಿರ್ದುಷ್ಟನೂ ನಿರ್ಲಿಪ್ತನೂ, ಶಾಂತನೂ ಆದ ನಿನಗೆ ಸಾಷ್ಟಾಂಗವೆರಗುವೆನು.

೪೮. ಧರ್ಮಪುರುಷನು ಶ್ರೀಕೃಷ್ಣಪರಮಾತ್ಮನಮುಂದೆ ಈ ರೀತಿಯಾಗಿ ಸ್ತುತಿಸಿ, ಬ್ರಹ್ಮವಿಷ್ಣುಮಹೇಶ್ವರರನ್ನು ಮಾತನಾಡಿಸಿ ರತ್ನಸಿಂಹಾಸನದಲ್ಲಿ ಮಂಡಿಸಿದನು.

೪೯. ಧರ್ಮಪುರುಷನ ಬಾಯಿನಿಂದ ಬಂದ ಈ ಇಪ್ಪತ್ತನಾಲ್ಕು ದಿವ್ಯ ನಾಮಗಳನ್ನು ಉಷಃಕಾಲದಲ್ಲೆದ್ದು ಯಾರು ಪಠಿಸುವರೋ ಅವರು ಎಲ್ಲ ಕಾರ್ಯಗಳಲ್ಲೂ ಜಯಶೀಲರಾಗಿ ಸುಖಹೊಂದುವರು.

೫೦. ಮರಣಕಾಲದಲ್ಲಿ ಯಾರು ಶ್ರೀಹರಿಯ ಈ ದಿವ್ಯನಾಮಗಳನ್ನುಚ್ಚರಿಸುವರೋ,ಅವರಿಗೆ ಮರಣಾನಂತರದಲ್ಲಿ ಶ್ರೀಹರಿಯ ಸಾನ್ನಿಧ್ಯವೂ, ಸೇವೆಯೂ, ಮುಕ್ತಿಯೂ ಲಭಿಸುವುದರಲ್ಲಿ ಸಂಶಯವಿಲ್ಲ.

ನಿತ್ಯಂ ಧರ್ಮಸ್ತಂ ಘಟತೇ ನಾಧರ್ಮೇ ತದ್ರತಿರ್ಭವೇತ್ ।
ಚತುರ್ವರ್ಗಫಲಂ ತಸ್ಯ ಶಶ್ವತ್ಕರಗತಂ ಭವೇತ್ ॥ ೫೧ ॥

ತಂ ದೃಷ್ಟ್ವಾ ಸರ್ವಪಾಪಾನಿ ಪಲಾಯಂತೇ ಭಯೇನ ಚ ।
ಭಯಾನಿ ಚೈವ ದುಃಖಾನಿ ವೈನತೇಯಮಿವೋರಗಾಃ ॥ ೫೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಧರ್ಮಕೃತಂ ಶ್ರೀಕೃಷ್ಣಸ್ತೋತ್ರಂ.

॥ ಸೌತಿರುವಾಚ ॥

ಆವಿರ್ಬಭೂವ ಕನ್ಯೈಕಾ ಧರ್ಮಸ್ಯ ವಾಮಪಾರ್ಶ್ವತಃ ।
ಮೂರ್ತಿರ್ಮೂರ್ತಿಮತೀ ಸಾಕ್ಷಾತ್ ದ್ವಿತೀಯಾ ಕಮಲಾಲಯಾ ॥ ೫೩ ॥

ಆವಿರ್ಬಭೂವ ತತ್ಪಶ್ಚಾನ್ಮುಖತಃ ಪರಮಾತ್ಮನಃ ।
ಏಕಾದೇವೀ ಶುಕ್ಲವರ್ಣಾ ವೀಣಾಪುಸ್ತಕಧಾರಿಣೀ ॥ ೫೪ ॥

೫೧–೫೨. ಈ ಸ್ತೋತ್ರಪಠನಮಾಡುವವರಿಗೆ ಧರ್ಮಕಾರ್ಯಗಳಲ್ಲಿಯೇ ಮನಸ್ಸೊಲಿದು ಅಧರ್ಮದಿಂದ ದೂರವಾಗುವುದು. ಧರ್ಮಾದಿ ಚತುರ್ವರ್ಗಫಲವೂ ಅವರ ಕರಗತವಾಗುವುದು. ಆ ವಿಷ್ಣುಭಕ್ತರನ್ನು ನೋಡಿ ಸಕಲಪಾಪಗಳೂ, ದುಃಖಭಯಗಳೂ, ಗರುಡನನ್ನು ಕಂಡ ಹಾವು ಹೆದರಿ ಓಡುವಂತೆ ದೂರ ಓಡುವವು.

ಇಲ್ಲಿಗೆ ಬ್ರಹ್ಮವೈವರ್ತಪುರಾಣದಲ್ಲಿ ಧರ್ಮಪುರುಷಕೃತ
ವಾದ ಶ್ರೀಕೃಷ್ಣಸ್ತೋತ್ರವು ಮುಗಿದುದು

೫೩. ಸೂತಪುತ್ರ :—ಅನಂತರ ಆ ಧರ್ಮಪುರುಷನ ಎಡಭಾಗದಿಂದ, ಸಾಕ್ಷಾತ್ ಎರಡನೆಯ ಲಕ್ಷ್ಮೀದೇವಿಯೋ ಎಂಬಂತಿರುವ ಮೂರ್ತಿಯೆಂಬ ಕನ್ಯೆಯೊಬ್ಬಳು ಆವಿರ್ಭವಿಸಿದಳು

೫೪. ಅನಂತರ ಪರಮಾತ್ಮನ ಮುಖದಿಂದ ಗೌರಾಂಗಿಯೂ, ವೀಣಾಪುಸ್ತಕಪಾಣಿಯೂ ಆದ ದೇವಿಯೊಬ್ಬಳು ಅವತರಿಸಿದಳು.

ಕೋಟಿಪೂರ್ಣೇಂದುಶೋಭಾಢ್ಯಾ ಶರತ್ಪಂಕಜಲೋಚನಾ ।
ವಹ್ನಿಶುದ್ಧಾಂಶುಕಾಧಾನಾಂ ರತ್ನಭೂಷಣಭೂಷಿತಾ ॥ ೫೫ ॥

ಸಸ್ಮಿತಾ ಸುದತೀ ಶ್ಯಾಮಾ ಸುಂದರೀಣಾಂ ಚ ಸುಂದರೀ ।
ಶ್ರೇಷ್ಠಾ ಶ್ರುತೀನಾಂ ಶಾಸ್ತ್ರಾಣಾಂ ವಿದುಷಾಂ ಜನನೀಪರಾ ॥ ೫೬ ॥

ವಾಗಧಿಷ್ಠಾತೃದೇವೀ ಸಾ ಕವೀನಾಮಿಷ್ಟದೇವತಾ ।
ಶುದ್ಧಸತ್ವಸ್ವರೂಪಾ ಚ ಶಾಂತರೂಪಾ ಸರಸ್ವತೀ ॥ ೫೭ ॥

ಗೋವಿಂದಪುರತಃ ಸ್ಥಿತ್ವಾ ಜಗೌ ಪ್ರಥಮತಃ ಸುಖಂ ।
ತನ್ನಾಮಗುಣಕೀರ್ತಿಂ ಚ ವೀಣಯಾ ಸಾ ನನರ್ತ ಚ ॥ ೫೮ ॥

ಕೃತಾನಿಯಾನಿ ಕರ್ಮಾಣಿ ಕಲ್ಪೇ ಕಲ್ಪೇ ಯುಗೇ ಯುಗೇ ।
ತಾನಿ ಸರ್ವಾಣಿ ಹರಿಣಾ ತುಷ್ಟಾವ ಸಂಪುಟಾಂಜಲಿಃ ॥ ೫೯ ॥

---

೫೫. ಕೋಟಿಪೂರ್ಣಚಂದ್ರರಂತೆ ಶೋಭಿಸುವ ಮುಖಕಾಂತಿಯಿಂದಲೂ, ಶರದೃತುವಿನ ತಾವರೆ ಎಸಳಿನಂತಿರುವ ವಿಶಾಲನಯನದಿಂದಲೂ ಶೋಭಿತಳಾದ ಆ ದೇವಿಯು ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಧರಿಸಿ ರತ್ನಾಲಂಕಾರಗಳನ್ನು ತೊಟ್ಟಿದ್ದಳು.

೫೬. ಸ್ಮಿತಮುಖಿಯೂ, ಶುಭ್ರವಾದ ದಂತಪಂಕ್ತಿಯುಳ್ಳವಳೂ, ನವ ಯುವತಿಯೂ, ತ್ರಿಪುರಸುಂದರಿಯೂ ಆದ ಆ ದೇವಿಯು ಶ್ರುತಿಗಳಿಗೂ, ಶಾಸ್ತ್ರಗಳಿಗೂ ಮತ್ತು ಪಂಡಿತರಿಗೂ ಮಾತೆಯೆನಿಸಿದಳು.

೫೭. ಆ ದೇವಿಯೇ ಮಾತಿಗೆ ಅಧಿಷ್ಠಾತೃದೇವತೆಯೂ, ಕವಿಗಳ ಇಷ್ಟ ದೇವತೆಯೂ, ಶುದ್ಧಸತ್ವಸ್ವರೂಪಳೂ, ಶಾಂತರೂಪಳೂ ಆದ ಸರಸ್ವತೀದೇವಿಯು.

೫೮. ಸರಸ್ವತೀದೇವಿಯು ಶ್ರೀಕೃಷ್ಣಪರಮಾತ್ಮನ ಮುಂದೆ ನಿಂತು ಮೊದಲು ಸ್ವಾಗತವನ್ನು ಬಯಸಿ, ಅವನ ಗುಣಕೀರ್ತಿಗಳನ್ನು ವೀಣೆಯಲ್ಲಿ ನುಡಿಸಿ ನರ್ತನ ಮಾಡಿದಳು.

೫೯. ಕಲ್ಪಕಲ್ಪಗಳಲ್ಲಿಯೂ, ಯುಗಯುಗಗಳಲ್ಲಿಯೂ ಶ್ರೀಹರಿಯು ಮಾಡಿದ ಅತ್ಯದ್ಭುತಕಾರ್ಯಗಳನ್ನು, ಕೈಮುಗಿದುಕೊಂಡು ವರ್ಣಿಸಿ ಸ್ತುತಿಸಿದಳು.

|| ಸರಸ್ವತ್ಯುವಾಚ ||

ರಾಸಮಂಡಲಮಧ್ಯಸ್ಥಂ ರಾಸೋಲ್ಲಾಸಸಮುತ್ಸುಕಂ ।
ರತ್ನಸಿಂಹಾಸನಸ್ಥಂ ಚ ರತ್ನಭೂಷಣಭೂಷಿತಂ || ೬೦ ||

ರಾಸೇಶ್ವರಂ ರಾಸಕರಂ ವರಂ ರಾಸೇಶ್ವರೀಶ್ವರಂ ।
ರಾಸಾಧಿಷ್ಠಾತೃದೈವಂ ಚ ವಂದೇ ರಾಸವಿನೋದಿನಂ || ೬೧ ||

ರಾಸಾಯಾಸಪರಿಶ್ರಾಂತಂ ರಾಸರಾಸವಿಹಾರಿಣಂ ।
ರಾಸೋತ್ಸುಕಾನಾಂ ಗೋಪೀನಾಂ ಕಾಂತಂ ಶಾಂತಂ ಮನೋಹರಂ || ೬೨ ||

ಪ್ರಣಮ್ಯ ಚ ತಮಿತ್ಯುಕ್ತ್ವಾ ಪ್ರಹೃಷ್ಟವದನಾ ಸತೀ ।
ಉವಾಸ ಸಾ ಸಕಾಮಾ ಚ ರತ್ನಸಿಂಹಾಸನೇ ವರೇ || ೬೩ ||

ಇತಿ ವಾಣೀಕೃತಂ ಸ್ತೋತ್ರಂ ಪ್ರಾತರುತ್ಥಾಯ ಯಃ ಪಠೇತ್ ।
ಬುದ್ಧಿಮಾನ್ ಧನವಾನ್ ಸೋಽಪಿ ವಿದ್ಯಾವಾನ್ ಪುತ್ರವಾನ್ಸದಾ || ೬೪ ||

ಇತಿ ಶ್ರೀ ಬ್ರಹ್ಮವೈವರ್ತೇ ಸರಸ್ವತೀಕೃತಂ ಶ್ರೀಕೃಷ್ಣಸ್ತೋತ್ರಂ.

೬೦–೬೧, ಸರಸ್ವತಿ : —'ರಾಸಮಂಡಲಮಧ್ಯದಲ್ಲಿರುವ ರತ್ನಸಿಂಹಾಸನದಲ್ಲಿ ಕುಳಿತು ರತ್ನಾಭರಣಗಳನ್ನು ತೊಟ್ಟು, ರಾಸಕ್ರೀಡೆಯಲ್ಲಿ ಉತ್ಸುಕನಾಗಿ, ರಾಸಾಧಿಷ್ಠಾತೃದೇವತೆಯೂ, ರಾಸವಿನೋದಿಯೂ, ರಾಸೇಶ್ವರನೂ ಎನಿಸಿದ ಎಲೈ ರಾಧಾರಮಣನೇ, ನಿನಗೆ ವಂದಿಸುವೆನು.

೬೨–೬೩. ರಾಸೋತ್ಸುಕರಾದ ಗೋಪಿಯರ ಮನಸ್ತೃಪ್ತಿಗಾಗಿ ಪ್ರತಿರಾಸಮಂಡಲದಲ್ಲಿಯೂ ವಿಹರಿಸಿ ಪರಿಶ್ರಾಂತನೂ, ಶಾಂತನೂ, ಮನೋಹರನೂ ಆದ ಎಲೈ ಪರಮಾತ್ಮನೇ, ನಿನಗೆ ಅಭಿವಂದಿಸುವೆನು' ಎಂದು ಹೇಳಿ ಸರಸ್ವತಿಯು ಸ್ಮಿತವದನಳಾಗಿ ನಮಸ್ಕರಿಸಿ ಶ್ರೇಷ್ಠವಾದ ರತ್ನಸಿಂಹಾಸನದಲ್ಲಿ ಕುಳಿತಳು.

೬೪. ಸರಸ್ವತೀಕೃತವಾದ ಈ ಸ್ತೋತ್ರವನ್ನು ಉದಯಕಾಲದಲ್ಲೆದ್ದು ಪಠಿಸುವವರು ಸರ್ವದಾ ಬುದ್ಧಿವಂತರೂ, ಹಣವಂತರೂ, ವಿದ್ಯಾವಂತರೂ, ಪುತ್ರವಂತರೂ ಆಗುವುದರಲ್ಲಿ ಸಂಶಯವಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದಲ್ಲಿ ಸರಸ್ವತಿಮಾಡಿದ
ಶ್ರೀಕೃಷ್ಣಸ್ತೋತ್ರವು ಮುಗಿದುದು

|| ಸೌತಿರುವಾಚ ||

ಆವಿರ್ಬಭೂವ ಮನಸಃ ಕೃಷ್ಣಸ್ಯ ಪರಮಾತ್ಮನಃ ।
ಏಕಾ ದೇವೀ ಗೌರವರ್ಣಾ ರತ್ನಾಲಂಕಾರಭೂಷಿತಾ || ೬೫ ||

ಪೀತವಸ್ತ್ರಪರೀಧಾನಾ ಸಸ್ಮಿತಾ ನವಯೌವನಾ ।
ಸರ್ವೈಶ್ವರ್ಯಾಧಿದೇವೀ ಸಾ ಸರ್ವಸಂಪತ್ಫಲಪ್ರದಾ || ೬೬ ||

ಸ್ವರ್ಗೇ ಚ ಸ್ವರ್ಗಲಕ್ಷ್ಮೀಶ್ಚ ರಾಜಲಕ್ಷ್ಮೀಶ್ಚ ರಾಜಸು ।
ಸಾ ಹರೇಃ ಪುರತಃ ಸ್ಥಿತ್ವಾ ಪರಮಾತ್ಮಾನಮೀಶ್ವರಂ ।
ತುಷ್ಟಾವ ಪ್ರಣತಾ ಸಾಧ್ವೀ ಭಕ್ತಿನಮ್ರಾತ್ಮಕಂಧರಾ || ೬೭ ||

|| ಮಹಾಲಕ್ಷ್ಮೀರುವಾಚ ||

ಸತ್ಯಸ್ವರೂಪಂ ಸತ್ಯೇಶಂ ಸತ್ಯಬೀಜಂ ಸನಾತನಂ ।
ಸತ್ಯಾಧಾರಂ ಚ ಸತ್ಯಜ್ಞಂ ಸತ್ಯಮೂಲಂ ನಮಾಮ್ಯಹಂ || ೬೮ ||

---

೬೫. ಸೂತಪುತ್ರ :—ಅನಂತರದಲ್ಲಿ ಶ್ರೀಕೃಷ್ಣಪರಮಾತ್ಮನ ಮನಸ್ಸಿನಿಂದ, ಗೌರಾಂಗಿಯೂ, ರತ್ನಾಭರಣಾಲಂಕೃತಳೂ ಆದ ದೇವಿಯೊಬ್ಬಳವತರಿಸಿದಳು.

೬೬. ಪೀತಾಂಬರಧಾರಿಣಿಯೂ, ಸ್ಮಿತವದನೆಯೂ, ನವಯುವತಿಯೂ, ಸರ್ವಸಂಪತ್ಪ್ರದಾತ್ರಿಯೂ ಆದ ಆ ದೇವಿಯೇ ಐಶ್ವರ್ಯಕ್ಕೆ ಅಧಿದೇವತೆಯಾದ ಮಹಾಲಕ್ಷ್ಮಿಯು.

೬೭. ಸ್ವರ್ಗದಲ್ಲಿ ಸ್ವರ್ಗಲಕ್ಷ್ಮಿಯೂ, ರಾಜ್ಯದಲ್ಲಿ ರಾಜಲಕ್ಷ್ಮಿಯೂ ಎನಿಸಿಕೊಂಡ ಆ ದೇವಿಯು ಶ್ರೀಕೃಷ್ಣಪರಮಾತ್ಮನ ಮುಂದೆ ನಿಂತು ಭಕ್ತಿಯಿಂದ ತಲೆಬಾಗಿ ನಮಿಸಿ ಇಂತು ಸ್ತುತಿಸಲಾರಂಭಿಸಿದಳು.

೬೮. ಮಹಾಲಕ್ಷ್ಮಿ:— ಸತ್ಯಮೂಲನೂ, ಸತ್ಯಾಧಾರನೂ, ಸತ್ಯಸ್ವರೂಪನೂ, ಸತ್ಯಜ್ಞನೂ, ಸನಾತನನೂ ಆದ ಎಲೈ ಪರಮಾತ್ಮನೇ ನಿನಗೆ ವಂದಿಸುವೆನು.

ಇತ್ಯುಕ್ತ್ವಾ ಶ್ರೀಹರಿಂ ನತ್ವಾ ಸಾ ಚೋವಾಸ ಸುಖಾಸನೇ ।
ತಪ್ತಕಾಂಚನವರ್ಣಾಭಾ ಭಾಸಯಂತೀ ದಿಶಸ್ತ್ವಿಷಾ ॥ ೬೯ ॥

ಆವಿರ್ಬಭೂವ ತತ್ಪಶ್ಚಾದ್ಬುದ್ಧೇಶ್ಚ ಪರಮಾತ್ಮನಃ ।
ಸರ್ವಾಧಿಷ್ಠಾತೃದೇವೀ ಸಾ ಮೂಲಪ್ರಕೃತಿರೀಶ್ವರೀ ॥ ೭೦ ॥

ತಪ್ತಕಾಂಚನವರ್ಣಾಭಾ ಸೂರ್ಯಕೋಟಿಸಮಪ್ರಭಾ ।
ಈಷದ್ಧಾಸ್ಯಪ್ರಸನ್ನಾಸ್ಯಾ ಶರತ್ಪಂಕಜಲೋಚನಾ ॥ ೭೧ ॥

ರಕ್ತವಸ್ತ್ರಪರೀಧಾನಾ ರತ್ನಾಭರಣಭೂಷಿತಾ ।
ನಿದ್ರಾ ತೃಷ್ಣಾ ಕ್ಷುತ್ಪಿಪಾಸಾ ದಯಾ ಶ್ರದ್ಧಾ ಕ್ಷಮಾದಿಕಾಃ ॥ ೭೨ ॥

ತಾಸಾಂ ಚ ಸರ್ವಶಕ್ತೀನಾಮೀಶಾಧಿಷ್ಠಾತೃದೇವತಾ ।
ಭಯಂಕರೀ ಶತಭುಜಾ ದುರ್ಗಾ ದುರ್ಗಾರ್ತಿನಾಶಿನೀ ॥ ೭೩ ॥

---

೬೯. ಪುಟಕ್ಕೆಹಾಕಿದ ಚಿನ್ನದಂತೆ ಗೌರಾಂಗಿಯಾದ ಆ ಲಕ್ಷ್ಮೀದೇವಿಯು ತನ್ನ ದೇಹಕಾಂತಿಯಿಂದ ದಶದಿಕ್ಕುಗಳನ್ನೂ ಬೆಳಗುತ್ತ ಶ್ರೀಹರಿಗೆ ನಮಿಸಿ ಸುಖಾಸನದಲ್ಲಿ ಕುಳಿತುಕೊಂಡಳು.

೭೦–೭೧. ಅನಂತರದಲ್ಲಿ ಪರಮಾತ್ಮನ ಬುದ್ಧಿಯಿಂದ, ಪುಟಕ್ಕೆ ಹಾಕಿದ ಚಿನ್ನದಂತೆ ಹೊಂಬಣ್ಣವುಳ್ಳವಳೂ, ಕೋಟಿಸೂರ್ಯರಂತೆ ಕಾಂತಿಮತಿಯೂ, ಮಂದಸ್ಮಿತದಿಂದ ಪ್ರಸನ್ನವಾದ ಮುಖವುಳ್ಳವಳೂ, ಶರದೃತುವಿನ ಕಮಲದಳದಂತೆ ವಿಶಾಲನಯನವುಳ್ಳವಳೂ ಆದ ದೇವಿಯೊಬ್ಬಳು ಅವತರಿಸಿದಳು. ಆಕೆಯೇ ಸಕಲಾಧಿಷ್ಠಾತೃದೇವಿಯಾದ ಮೂಲಪ್ರಕೃತಿಯು.

೭೨–೭೩. ಕೆಂಪುಬಟ್ಟೆಯನ್ನುಟ್ಟು ರತ್ನಾಭರಣಗಳನ್ನು ತೊಟ್ಟು, ನಿದ್ರೆ, ಆಶೆ, ಹಸಿವು, ಬಾಯಾರಿಕೆ, ದಯೆ, ಶ್ರದ್ಧೆ, ಕ್ಷಮೆ ಮುಂತಾದ ಸರ್ವಶಕ್ತಿಗಳಿಗೂ ಅಧಿದೇವತೆಯೆನಿಸಿ ನೂರುಬಾಹುಗಳಿಂದ ಭಯಂಕರಳಾಗಿದ್ದ ಆಕೆಯನ್ನೇ ಪೀಡಾಪರಿಹಾರಕಳಾದ ದುರ್ಗಾದೇವಿಯೆನ್ನುವರು.

ಆತ್ಮನಃ ಶಕ್ತಿರೂಪಾ ಸಾ ಜಗತಾಂ ಜನನೀ ಪರಾ ।
ತ್ರಿಶೂಲ ಶಕ್ತಿ ಶಾರ್ಙ್ಗಂ ಚ ಧನುಃಖಡ್ಗಶರಾಣಿ ಚ ॥ ೭೪ ॥

ಶಂಖಚಕ್ರಗದಾಪದ್ಮಮಕ್ಷಮಾಲಾಂ ಕಮಂಡಲುಂ ।
ವಜ್ರಮಂಕುಶಪಾಶಂ ಚ ಭುಶುಂಡೀದಂಡತೋಮರಂ ॥ ೭೫ ॥

ನಾರಾಯಣಾಸ್ತ್ರಂ ಬ್ರಹ್ಮಾಸ್ತ್ರಂ ರೌದ್ರಂ ಪಾಶುಪತಂ ತಥಾ ।
ಪಾರ್ಜನ್ಯಂ ವಾರುಣಂ ವಾಹ್ನಂ ಗಾಂಧರ್ವಂ ಬಿಭ್ರತೀ ಸತೀ ॥
ಕೃಷ್ಣಸ್ಯ ಪುರತಃ ಸ್ಥಿತ್ವಾ ತುಷ್ಟಾವ ತಂ ಮುದಾನ್ವಿತಾ ॥ ೭೬ ॥

॥ ಪ್ರಕೃತಿರುವಾಚ ॥

ಅಹಂ ಪ್ರಕೃತಿರೀಶಾನಾ ಸರ್ವೇಶಾ ಸರ್ವರೂಪಿಣೀ ।
ಸರ್ವಶಕ್ತಿಸ್ವರೂಪಾ ಚ ಮಯಾ ಚ ಶಕ್ತಿಮಜ್ಜಗತ್ ॥ ೭೭ ॥

೭೪–೭೬. ಆತ್ಮಶಕ್ತಿರೂಪಳಾದ ಆ ಜಗಜ್ಜನನಿಯು, ತ್ರಿಶೂಲ, ಶಕ್ತಿ, ಶಾರ್ಙ್ಗಗಳನ್ನೂ, ಕತ್ತಿ, ಬಾಣಗಳನ್ನೂ, ಶಂಖಚಕ್ರಗದಾಪದ್ಮಗಳನ್ನೂ, ಕಮಂಡಲು ಮತ್ತು ಅಕ್ಷಮಾಲೆಯನ್ನೂ, ವಜ್ರಾಯುಧ, ಅಂಕುಶ, ಪಾಶ, ಭುಶುಂಡೀ, ಮುಂತಾದವುಗಳನ್ನೂ, ದಂಡತೋಮರಗಳನ್ನೂ, ನಾರಾಯಣಾಸ್ತ್ರ, ಬ್ರಹ್ಮಾಸ್ತ್ರ, ರೌದ್ರಾಸ್ತ್ರ, ಪಾಶುಪತಾಸ್ತ್ರ, ಪರ್ಜನ್ಯಾಸ್ತ್ರ, ವಾರುಣಾಸ್ತ್ರ, ಆಗ್ನೇಯಾಸ್ತ್ರ ಮತ್ತು ಗಾಂಧರ್ವಾಸ್ತ್ರ ಮೊದಲಾದ ದಿವ್ಯಾಸ್ತ್ರಗಳನ್ನು ಧರಿಸಿ, ಶ್ರೀಕೃಷ್ಣಪರಮಾತ್ಮನ ಮುಂದೆ ನಿಂತು ಸಂತೋಷದಿಂದ ಸ್ತುತಿಸಲಾರಂಭಿಸಿದಳು.

೭೭. ಪ್ರಕೃತಿ :—ಎಲೈ ಪರಮಾತ್ಮನೇ, ಸರ್ವೇಶ್ವರಿಯೂ, ಸರ್ವಶಕ್ತಿಸ್ವರೂಪಳೂ, ಸರ್ವಾಧಾರಳೂ, ಆತ್ಮಪ್ರಕೃತಿಯೂ ಆದ ನನ್ನಿಂದ ಜಗತ್ತೆಲ್ಲವೂ ಶಕ್ತಿಯುತವಾಗಿದೆ.

ತ್ವಯಾ ಸೃಷ್ಟಾ ನ ಸ್ವತಂತ್ರಾ ತ್ವಮೇವ ಜಗತಾಂಪತಿಃ ।
ಗತಿಶ್ಚ ಪಾತಾ ಸ್ರಷ್ಟಾ ಚ ಸಂಹರ್ತಾ ಚ ಪುನರ್ವಿಧಿಃ ॥ ೭೮ ॥

ಸ್ರಷ್ಟುಂ ಸ್ರಷ್ಟಾ ಚ ಸಂಹರ್ತುಂ ಸಂಹರ್ತಾ ವೇಧಸಾಂ ವಿಧಿಃ ।
ಪರಮಾನಂದರೂಪಂ ತ್ವಾಂ ವಂದೇಽಚಾನಂದಪೂರ್ವಕಂ ॥ ೭೯ ॥

ಚಕ್ಷುರ್ನಿಮೇಷಕಾಲೇ ಚ ಬ್ರಹ್ಮಣಃ ಪತನಂ ಭವೇತ್ ।
ತಸ್ಯ ಪ್ರಭಾವಮತುಲಂ ವರ್ಣಿತುಂ ಕಃ ಕ್ಷಮೋ ವಿಭೋ ॥ ೮೦ ॥

ಭ್ರೂಭಂಗಲೀಲಾಮಾತ್ರೇಣ ವಿಷ್ಣುಕೋಟಿಂ ಸೃಜೇತ್ತು ಯಃ ।
ಚರಾಚರಾಂಶ್ಚ ವಿಶ್ವೇಷು ದೇವಾನ್ ಬ್ರಹ್ಮಪುರೋಗಮಾನ್ ॥ ೮೧ ॥

ಮದ್ವಿಧಾಃ ಕತಿ ವಾ ದೇವೀಃ ಸ್ರಷ್ಟುಂ ಶಕ್ತಶ್ಚ ಲೀಲಯಾ ।
ಪರಿಪೂರ್ಣತಮಂ ಸ್ವೀಡ್ಯಂ ವಂದೇ ಚಾನಂದಪೂರ್ವಕಂ ॥ ೮೨ ॥

೭೮–೭೯. ಜಗತ್ಪತಿಯಾದ ನಿನ್ನಿಂದ ಸೃಷ್ಟಳಾದ ನಾನೂ ಸ್ವತಂತ್ರಳಲ್ಲ. ಸೃಷ್ಟಿಸ್ಥಿತಿಲಯಗಳಿಗೆ ಕಾರಣರೆನಿಸಿದ ಬ್ರಹ್ಮವಿಷ್ಣುಮಹೇಶ್ವರರೂ ಸ್ವತಂತ್ರರಲ್ಲ. ಎಲ್ಲರಿಗೂ ಮೂಲಕಾರಣನಾದರೂ, ನಿರ್ಗುಣನೂ, ನಿರಾಮಯನೂ, ಪರಮಾನಂದ ಸ್ವರೂಪನೂ, ಆದ ನಿನ್ನನ್ನು ಆನಂದದಿಂದ ವಂದಿಸುವೆನು.

೮೦. ಎಲೈ ವಿಭುವೇ, ಯಾವ ಪರಮಾತ್ಮನು ಕಣ್ಣುರೆಪ್ಪೆಹೊಡೆಯುವುದರೊಳಗೆ ಚತುರ್ಮುಖಬ್ರಹ್ಮನ ಪತನವಾಗುವುದೋ ಆ ಪರಮಾತ್ಮನ ಅತುಲ ಪ್ರಭಾವವನ್ನು ವರ್ಣಿಸಲು ಯಾರಿಗೆ ತಾನೆ ಸಾಧ್ಯವಾಗುವುದು ?

೮೧–೮೨. ಯಾರ ಭ್ರೂ (ಹುಬ್ಬು) ಸಂಜ್ಞಾಮಾತ್ರದಿಂದ ಕೋಟಿವಿಷ್ಣುಗಳೂ, ಬ್ರಹ್ಮಾದಿಸಕಲದೇವತೆಗಳೂ, ಚರಾಚರಾತ್ಮಕವಾದ ವಿಶ್ವವೂ ಸೃಜಿಸಲ್ಪಡುವುವೋ ಯಾರು ಲೀಲಾಮಾತ್ರದಿಂದ ನನ್ನಂಥ ಅಗಣಿತದೇವಿಯರನ್ನು ಸೃಜಿಸಬಲ್ಲನೋ, ಅಂಥ ಪರಿಪೂರ್ಣಸ್ವರೂಪನಾದ ಪರಮಾತ್ಮನನ್ನು ಆನಂದಪೂರ್ವಕವಾಗಿ ವಂದಿಸುವೆನು.

ಮಹಾನ್ವಿರಾಡ್ಯತ್ಕಲಾಂಶೋ ವಿಶ್ವಸಂಖ್ಯಾಶ್ರಯೋ ವಿಭೋ ।
ವಂದೇ ಚಾನಂದಪೂರ್ವಂ ತಂ ಪರಮಾತ್ಮಾನಮೀಶ್ವರಂ ॥ ೮೩ ॥

ಯಂ ಚ ಸ್ತೋತುಮಶಕ್ತಾಶ್ಚ ಬ್ರಹ್ಮವಿಷ್ಣುಶಿವಾದಯಃ ।
ವೇದಾ ಅಹಂ ಚ ವಾಣೀ ಚ ವಂದೇ ತಂ ಪ್ರಕೃತೇಃಪರಂ ॥ ೮೪ ॥

ವೇದಾಶ್ಚ ವಿದುಷಾಂ ಶ್ರೇಷ್ಠಾಃ ಸ್ತೋತುಂ ಶಕ್ತಾಶ್ಚ ನ ಕ್ಷಮಾಃ ।
ನಿರ್ಲಕ್ಷ್ಯಂ ಕಃ ಕ್ಷಮಃ ಸ್ತೋತುಂ ತಂ ನಿರೀಹಂ ನಮಾಮ್ಯಹಂ ॥ ೮೫ ॥

ಇತ್ಯೇವಮುಕ್ತ್ವಾ ಸಾ ದುರ್ಗಾ ರತ್ನಸಿಂಹಾಸನೇ ವರೇ ।
ಉವಾಸ ನತ್ವಾ ಶ್ರೀಕೃಷ್ಣಂ ತುಷ್ಟುವುಸ್ತಾಂ ಸುರೇಶ್ವರಾಃ ॥ ೮೬ ॥

---

೮೩. ಅಗಣಿತವಿಶ್ವಕ್ಕೂ ಆಶ್ರಯನಾದ ಮಹಾವಿರಾಟ್ಪುರುಷನೂ ಯಾವ ಪರಮಾತ್ಮನ ಕಲಾಂಶದಿಂದ ಸಂಭೂತನೋ, ಸರ್ವೇಶ್ವರನಾದ ಆ ಪರಮಾತ್ಮನನ್ನು ಆನಂದದಿಂದ ವಂದಿಸುವೆನು.

೮೪. ಬ್ರಹ್ಮವಿಷ್ಣುಶಿವಾದಿಗಳೂ, ಚತುರ್ವೇದಗಳೂ, ನಾನೂ ಮತ್ತು ಸರಸ್ವತಿಯೂ ಯಾರನ್ನು ಸ್ತುತಿಸಲಶಕ್ತರೋ, ಪ್ರಕೃತಿಗೆಪರನಾದ ಆ ಪರಮಾತ್ಮನನ್ನು ವಂದಿಸುವೆನು.

೮೫. ಚತುರ್ವೇದಗಳೂ, ಪಂಡಿತವರ್ಯರೂ, ಎಲ್ಲವನ್ನೂ ಹೊಗಳಲು ಶಕ್ತರಾದರೂ, ಆದಿಮಧ್ಯಾಂತರಹಿತನಾದ ಪರಮಾತ್ಮನನ್ನು ಮಾತ್ರ ಹೊಗಳಲಾರರು ನಿರ್ಗುಣನೂ, ನಿರೀಹನೂ, ನಿತ್ಯಾನಂದಮಯನೂ ಆದ ಆ ಪರಮಾತ್ಮನಿಗೆ ನಮಿಸುವೆನು.

೮೬. ದುರ್ಗಾದೇವಿಯು ಹೀಗೆ ಹೇಳಿ ಶ್ರೀಕೃಷ್ಣಪರಮಾತ್ಮನಿಗೆ ನಮಸ್ಕರಿಸಿ ರತ್ನಸಿಂಹಾಸನದಲ್ಲಿ ಕುಳಿತಳು. ಆನಂತರ ಬ್ರಹ್ಮಾದಿಸಕಲದೇವತೆಗಳೂ ಆಕೆಯನ್ನು ಸ್ತುತಿಸಿದರು.

ಇತಿ ದುರ್ಗಾಕೃತಂ ಸ್ತೋತ್ರಂ ಕೃಷ್ಣಸ್ಯ ಪರಮಾತ್ಮನಃ ।
ಯಃ ಪಠೇದರ್ಚನಾಕಾಲೇ ಸ ಜಯೀ ಸರ್ವತೋ ಸುಖೀ || ೮೭ ||

ದುರ್ಗಾ ತಸ್ಯ ಗೃಹಂ ತ್ಯಕ್ತ್ವಾ ನೈವ ಯಾತಿ ಕದಾಚನ ।
ಭವಾಬ್ಧೌಯಶಸಾ ಭಾತಿ ಯಾತ್ಯಂತೇ ಶ್ರೀಹರೇಃ ಪುರಂ || ೮೮ ||

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ
ಸೌತಿಶೌನಕಸಂವಾದೇ ದುರ್ಗಾಸ್ತೋತ್ರಂ ನಾಮ
ತೃತೀಯೋಽಧ್ಯಾಯಃ.

---

೮೭. ದುರ್ಗಾದೇವಿಕೃತವಾದ ಶ್ರೀಕೃಷ್ಣಪರಮಾತ್ಮನ ಸ್ತೋತ್ರವನ್ನು ಯಾರು ಪೂಜಾಕಾಲದಲ್ಲಿ ಪಠಿಸುವರೋ ಅವರು ಎಲ್ಲ ಕಾರ್ಯಗಳಲ್ಲೂ ಜಯಶೀಲರಾಗುವರು.

೮೮. ಅಲ್ಲದೆ ದುರ್ಗಾದೇವಿಯು ಆತನ ಮನೆಯಲ್ಲಿ ಸರ್ವದಾ ನೆಲೆಸಿರುವಳು. ಆ ಭಕ್ತನು ಸಂಸಾರದಲ್ಲಿರುವವರೆಗೂ ಕೀರ್ತಿವಂತನಾಗಿ ಅಂತ್ಯಕಾಲದಲ್ಲಿ ಶ್ರೀಹರಿಯ ಸನ್ನಿಧಿಯನ್ನು ಹೊಂದುವನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಬ್ರಹ್ಮಖಂಡದಲ್ಲಿ ದುರ್ಗಾಸ್ತೋತ್ರವನ್ನು ತಿಳಿಸುವ ಮೂರನೆಯ ಅಧ್ಯಾಯವು ಮುಗಿದುದು.

ಮೂರನೆಯ ಅಧ್ಯಾಯದ ಸಾರಾಂಶವು

ಅದ್ವಿತೀಯನೂ, ಅಸಹಾಯನೂ, ನಿಷ್ಪ್ರಪಂಚನೂ, ಸ್ವಯಂಜ್ಯೋತಿಸ್ಸ್ವರೂಪನೂ ಆದ ಆ ಪರಮಾತ್ಮನು ಶೂನ್ಯವಿಶ್ವವನ್ನು ನೋಡಿ, ಸೃಷ್ಟಿಮಾಡಲು ಬಯಸಿ, ಮೊದಲು ಸತ್ವರಜಸ್ತಮೋಗುಣಗಳನ್ನೂ, ಮಹತ್ತತ್ವ ಮತ್ತು ಅಹಂಕಾರತತ್ವಗಳನ್ನೂ, ಪಂಚತನ್ಮಾತ್ರಗಳನ್ನೂ, ರೂಪಾದಿಗುಣಗಳನ್ನೂ ಸೃಜಿಸಿ, ಅನಂತರ ತನ್ನ ಪೂರ್ಣಾಂಶದಿಂದ ಶ್ರೀಮನ್ನಾರಾಯಣನನ್ನೂ, ವಾಮಭಾಗದಿಂದ ಮಹಾದೇವನನ್ನೂ, ನಾಭಿಕಮಲದಿಂದ ಬ್ರಹ್ಮದೇವನನ್ನೂ, ವಕ್ಷಃಸ್ಥಲದಿಂದ ಧರ್ಮಪುರುಷನನ್ನೂ, ಮುಖದಿಂದ ಸರಸ್ವತೀದೇವಿಯನ್ನೂ, ಮನಸ್ಸಿನಿಂದ ಮಹಾಲಕ್ಷ್ಮಿಯನ್ನೂ, ಬುದ್ಧಿಯಿಂದ ಪ್ರಕೃತಿ (ದುರ್ಗಾ) ದೇವಿಯನ್ನೂ ಸೃಷ್ಟಿಮಾಡಿದನು ಧರ್ಮಪುರಷನ ವಾಮಭಾಗದಿಂದ ಮೂರ್ತಿದೇವಿಯೂ ಆವಿರ್ಭವಿಸಿದಳು. ಅವರೆಲ್ಲರೂ ಆವಿರ್ಭವಿಸಿದ ಕೂಡಲೆ ಕ್ರಮವಾಗಿ ಶ್ರೀಕೃಷ್ಣಪರಮಾತ್ಮನನ್ನು ಭಕ್ತಿಯಿಂ ಸ್ತೋತ್ರಮಾಡಿ ಅವನ ಮುಂದೆ ರತ್ನಸಿಂಹಾಸನವನ್ನಲಂಕರಿಸಿದರು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಚತುರ್ಥೋಽಧ್ಯಾಯಃ ॥

॥ ಸೌತಿರುವಾಚ ॥

ಆವಿರ್ಬಭೂವ ತತ್ಪಶ್ಚಾತ್ ಕೃಷ್ಣಸ್ಯ ರಸನಾಗ್ರತಃ ।
ಶುದ್ಧಸ್ಫಟಿಕಸಂಕಾಶಾ ದೇವೀ ಚೈಕಾ ಮನೋಹರಾ ॥ ೧ ॥

ಶುಕ್ಲವಸ್ತ್ರಪರೀಧಾನಾ ಸರ್ವಾಲಂಕಾರಭೂಷಿತಾ ।
ಬಿಭ್ರತೀ ಜಪಮಾಲಾಂ ಚ ಸಾ ಸಾವಿತ್ರೀ ಪ್ರಕೀರ್ತಿತಾ ॥ ೨ ॥

ಸಾ ತುಷ್ಟಾವ ಪುರಃ ಸ್ಥಿತ್ವಾ ಪರಂ ಬ್ರಹ್ಮ ಸನಾತನಂ ।
ಪುಟಾಂಜಲಿಪರಾ ಸಾಧ್ವೀ ಭಕ್ತಿನಮ್ರಾತ್ಮಕಂಧರಾ ॥ ೩ ॥

ನಾಲ್ಕನೆಯ ಅಧ್ಯಾಯವು

೧. ಅನಂತರ ಶ್ರೀಕೃಷ್ಣಪರಮಾತ್ಮನ ನಾಲಿಗೆತುದಿಯಿಂದ ಸ್ಫಟಿಕಮಣಿಯಂತೆ ಪರಿಶುದ್ಧಳೂ, ಮನೋಹರಳೂ ಆದ ದೇವಿಯೊಬ್ಬಳು ಆವಿರ್ಭವಿಸಿದಳು.

೨. ಬಿಳುಪಾದ ವಸ್ತ್ರವನ್ನುಟ್ಟು, ಸರ್ವಾಲಂಕಾರಭೂಷಿತಳಾಗಿ, ಜಪಮಾಲೆಯನ್ನು ಹಿಡಿದಿದ್ದ ಆಕೆಯೇ ಸಾವಿತ್ರೀದೇವಿಯು.

೩. ಆ ಸಾವಿತ್ರೀದೇವಿಯು ಶ್ರೀಕೃಷ್ಣಪರಮಾತ್ಮನ ಮುಂದೆ ಭಕ್ತಿಪೂರ್ವಕವಾಗಿ ತಲೆತಗ್ಗಿಸಿಕೊಂಡು, ಅಂಜಲಿಬದ್ಧಳಾಗಿ ನಿಂತು ಸ್ತುತಿಸಲಾರಂಭಿಸಿದಳು.

॥ ಸಾವಿತ್ರ್ಯುವಾಚ ॥

ನಮಾಮಿ ಸರ್ವಬೀಜಂ ತ್ವಾಂ ಬ್ರಹ್ಮಜ್ಯೋತಿಸ್ಸನಾತನಂ ।
ಪರಾತ್ಪರತರಂ ಶ್ಯಾಮಂ ನಿರ್ವಿಕಾರಂ ನಿರಂಜನಂ ॥ ೪ ॥

ಇತ್ಯುಕ್ತ್ವಾ ಸಸ್ಮಿತಾ ದೇವೀ ರತ್ನಸಿಂಹಾಸನೇ ವರೇ ।
ಉವಾಸ ಶ್ರೀಹರಿಂ ನತ್ವಾ ಪುನರೇವ ಶ್ರುತಿಪ್ರಸೂಃ ॥ ೫ ॥

ಆವಿರ್ಬಭೂವ ತತ್ಪಶ್ಚಾತ್ ಕೃಷ್ಣಸ್ಯ ಪರಮಾತ್ಮನಃ ।
ಮನಸಾಶ್ಚ ಪುಮಾನೇಕಃ ತಪ್ತಕಾಂಚನಸನ್ನಿಭಃ ॥ ೬ ॥

ಮನೋ ಮಥ್ನಾತಿ ಸರ್ವೇಷಾಂ ಪಂಚಬಾಣೇನ ಕಾಮಿನಾಂ ।
ತನ್ನಾಮ ಮನ್ಮಥಂ ತೇನ ಪ್ರವದಂತಿ ಮನೀಷಿಣಃ ॥ ೭ ॥

ತಸ್ಯ ಪುಂಸೋ ವಾಮಪಾರ್ಶ್ವಾತ್ ಕಾಮಸ್ಯ ಕಾಮಿನೀವರಾ ।
ಬಭೂವಾತೀವ ಲಲಿತಾ ಸರ್ವೇಷಾಂ ಮೋಹಕಾರಿಣೀ ॥ ೮ ॥

---

೪. ಸಾವಿತ್ರಿ :—ಅನಾದಿಯೂ, ಸರ್ವಕಾರಣನೂ, ಜ್ಯೋತಿರ್ಮಯನೂ, ನಿರ್ಲಿಪ್ತನೂ,ವಿಕಾರರಹಿತನೂ, ಮತ್ತು ಪರಾತ್ಪರನೂ ಆದ ನಿನ್ನನ್ನು ಭಕ್ತಿಯಿಂದ ನಮಿಸುವೆನು.

೫. ವೇದಮಾತೆಯಾದ ಸಾವಿತ್ರಿಯು ಇಂತು ಸ್ತುತಿಸಿ ಸ್ಮಿತಮುಖದಿಂದ ಶ್ರೀಹರಿಯನ್ನು ನಮಿಸಿ ರತ್ನಸಿಂಹಾಸನದಲ್ಲಿ ಮಂಡಿಸಿದಳು.

೬. ಅನಂತರದಲ್ಲಿ ಶ್ರೀಕೃಷ್ಣಪರಮಾತ್ಮನ ಮನಸ್ಸಿನಿಂದ ಪುಟಕ್ಕೆ ಹಾಕಿದ ಚಿನ್ನದಂತೆ ಹೊಂಬಣ್ಣವುಳ್ಳ ಪುರುಷನೊಬ್ಬನು ಆವಿರ್ಭವಿಸಿದನು.

೭. ಆ ಪುರುಷನು ಕುಸುಮಬಾಣಗಳಿಂದ ಕಾಮಿಗಳ ಮನಸ್ಸನ್ನು ಮಥಿಸು (ಚಂಚಲಗೊಳಿಸು)ತ್ತಿದ್ದುದರಿಂದ ವಿದ್ವಾಂಸರು ಅವನನ್ನು ಮನ್ಮಥನೆಂದು ಕರೆದರು.

೮. ಆ ಮನ್ಮಥನ ವಾಮಭಾಗದಿಂದ ತ್ರಿಲೋಕೈಕಸುಂದರಿಯೂ, ಭುವನ ಮೋಹಕಳೂ ಆದ ಕಾಮಿನಿಯೊಬ್ಬಳು ವ್ಯಕ್ತಳಾದಳು.

ರತಿರ್ಬಭೂವ ಸರ್ವೇಷಾಂ ತಾಂ ದೃಷ್ಟ್ವಾ ಸಸ್ಮಿತಾಂ ಸತೀಂ ।
ರತೀತಿ ತೇನ ತನ್ನಾಮ ಪ್ರವದಂತಿ ಮನೀಷಿಣಃ ॥ ೯ ॥

ಹರಿಂ ಸ್ತುತ್ವಾ ತಯಾ ಸಾರ್ಧಂ ಸ ಉಪಾಸ ಹರೇಃ ಪುರಃ ।
ರತ್ನಸಿಂಹಾಸನೇ ಚಾಸ್ಯ ಪಂಚಬಾಣೋ ಧನುರ್ಧರಃ ॥ ೧೦ ॥

ಮಾರಣಂ ಸ್ತಂಭನಂ ಚೈವ ಜೃಂಭಣಂ ಶೋಷಣಂ ತಥಾ ।
ಉನ್ಮಾದನಂ ಪಂಚಬಾಣಾನ್ ಪಂಚಬಾಣೋ ಬಿಭರ್ತಿ ಸಃ ॥ ೧೧ ॥

ಬಾಣಾನ್ ಚಿಕ್ಷೇಪ ಸರ್ವಾಂಶ್ಚ ಕಾಮೋ ಬಾಣಪರೀಕ್ಷಯಾ ।
ಸದ್ಯಃ ಸರ್ವೇ ಸಕಾಮಾಶ್ಚ ಬಭೂವುರೀಶ್ವರೇಚ್ಛಯಾ ॥ ೧೨ ॥

ರತಿಂ ದೃಷ್ಟ್ವಾ ಬ್ರಹ್ಮಣಶ್ಚ ರೇತಃಪಾತೋ ಬಭೂವ ಹ ।
ತತ್ರ ತಸ್ಥೌ ಮಹಾಯೋಗೀ ವಸ್ತ್ರೇಣಾಚ್ಛಾದ್ಯ ಲಜ್ಜಯಾ ॥ ೧೩ ॥

---

೯. ಹಸನ್ಮುಖಿಯಾದ ಆಕೆಯನ್ನು ನೋಡಿ ಎಲ್ಲರಿಗೂ ರತಿ (ಪ್ರೀತಿ) ಯುಂಟಾದುದರಿಂದ ರತಿದೇವಿಯೆಂದು ಆಕೆಗೆ ಪಂಡಿತರು ಹೆಸರಿಟ್ಟರು.

೧೦. ಪಂಚಬಾಣನಾದ ಆ ಮನ್ಮಥನು ಶ್ರೀಹರಿಯನ್ನು ಸ್ತುತಿಸಿ ಅವನ ಮುಂದಿರುವ ರತ್ನಸಿಂಹಾಸನದಲ್ಲಿ ರತಿದೇವಿಯೊಡನೆ ಕುಳಿತುಕೊಂಡನು.

೧೧. ಆ ಮನ್ಮಥನು ಧರಿಸಿರುವ ಪಂಚಬಾಣಗಳಲ್ಲಿ ಒಂದು ಮರಣವನ್ನುಂಟುಮಾಡುವುದು. ಮತ್ತೊಂದು ಶರೀರವು ಅಚಲವಾಗುವಂತೆಯೂ ಇನ್ನೊಂದು ಕಾಮಾಭಿವೃದ್ಧಿಯಾಗುವಂತೆಯೂ ಮಾಡುವುವು. ಉಳಿದೆರಡರಲ್ಲಿ ಒಂದು ಶರೀರವನ್ನು ಒಣಗಿಸುವುದು. ಮತ್ತೊಂದು ಹುಚ್ಚುಹಿಡಿಸುವುದು.

೧೨. ಆಗ ಮನ್ಮಥನು ತನ್ನ ಬಾಣಗಳ ಶಕ್ತಿಯನ್ನು ಪರೀಕ್ಷಿಸಲು ಪ್ರಯೋಗಿಸಿದನು. ಕೂಡಲೆ ಪರಮಾತ್ಮನ ಪ್ರೇರಣೆಯಂತೆ ಅಲ್ಲಿದ್ದ ದೇವತೆಗಳೆಲ್ಲ ಕಾಮಿಗಳಾದರು.

೧೩. ರತಿದೇವಿಯನ್ನು ನೋಡಿದ ಬ್ರಹ್ಮನಿಗೆ ಮನ್ಮಥನ ಬಾಣವು ಸೋಕಿದ ಕೂಡಲೆ ವೀರ್ಯಸ್ಖಲನವಾಯಿತು. ಮಹಾಯೋಗೀಶ್ವರನಾದ ಆ ಬ್ರಹ್ಮನು ಲಜ್ಜಿತನಾಗಿ ಬಟ್ಟೆಯನ್ನು ಮರೆಮಾಡಿಕೊಂಡು ತಲೆಬಾಗಿ ನಿಂತನು.

ವಸ್ತ್ರಂ ದಗ್ಧ್ವಾ ಸಮುತ್ತಸ್ಥೌ ಜ್ವಲದಗ್ನಿಃ ಸುರೇಶ್ವರಃ ।
ಕೋಟಿತಾಲಪ್ರಮಾಣಶ್ಚ ಸಶಿಖಶ್ಚ ಸಮುಜ್ಜ್ವಲನ್ ॥ ೧೪ ॥

ಕೃಷ್ಣಸ್ತದ್ವರ್ಧನಂ ದೃಷ್ಟ್ವಾ ಸಸರ್ಜಾಪಃ ಸ್ವಲೀಲಯಾ ।
ನಿಶ್ವಾಸವಾಯುನಾ ಸಾರ್ಧಂ ಮುಖಬಿಂದುಸಮುದ್ಗಿರನ್ ॥ ೧೫ ॥

ವಿಶ್ವೌಘಂ ಪ್ಲಾವಯಾಮಾಸ ಮುಖಬಿಂದುಜಲಂ ದ್ವಿಜ ।
ತತ್ರ ಕಿಂಚಿಜ್ಜಲಕಣಂ ವಹ್ನಿಂ ಶಾಂತಂ ಚಕಾರ ಹ ॥ ೧೬ ॥

ತತಃ ಪ್ರಭೃತಿ ತೇನಾಗ್ನಿಸ್ತೋಯಾನ್ನಿರ್ವಾಣತಾಂ ವ್ರಜೇತ್ ।
ಆವಿರ್ಭೂತಃ ಪುಮಾನೇಕಸ್ತತಸ್ತದಧಿದೇವತಾ ॥ ೧೭ ॥

ಉತ್ತಸ್ಥೌ ತಜ್ಜಲಾದೇಕಃ ಪುಮಾನ್ ಸ ವರುಣಃ ಸ್ಮೃತಃ ।
ಜಲಾಧಿಷ್ಠಾತೃದೇವೋಽಸೌ ಸರ್ವೇಷಾಂ ಯಾದಸಾಂಪತಿಃ ॥ ೧೮ ॥

---

೧೪. ವೀರ್ಯರೂಪವಾದ ಆ ಅಗ್ನಿಯು ಬ್ರಹ್ಮನ ವಸ್ತ್ರವನ್ನು ಸುಟ್ಟು, ಅನೇಕ ತಾಳೆಯ ಮರದಷ್ಟು ಎತ್ತರವಾಗಿ ಪ್ರಜ್ವಲಿಸಲಾರಂಭಿಸಿತು. ಈ ರೀತಿಯಾಗಿ ಪಂಚಭೂತಗಳಲ್ಲೊಂದಾದ ತೇಜಸ್ಸು ಸೃಷ್ಟಿಯಾಯಿತು.

೧೫. ಈ ರೀತಿಯಾದ ಅಗ್ನಿಜ್ವಾಲೆಯನ್ನು ನೋಡಿ ಶ್ರೀಕೃಷ್ಣಪರಮಾತ್ಮನು ತನ್ನ ನಿಃಶ್ವಾಸದೊಡನೆ ಹೊರಬಂದ ಜಲಕಣಗಳಿಂದಲೇ ಲೀಲಾಜಾಲವಾಗಿ ಜಲ ಸೃಷ್ಟಿಯನ್ನು ಮಾಡಿದನು.

೧೬. ಎಲೈ ಬ್ರಾಹ್ಮಣೋತ್ತಮನೇ, ಶ್ರೀಕೃಷ್ಣಪರಮಾತ್ಮನ ನಿಃಶ್ವಾಸದೊಡನೆ ಹೊರಬಂದ ಜಲಕಣವು ನಿಖಿಲ ವಿಶ್ವವನ್ನೂ ತೋಯಿಸಿತು. ಅದರಲ್ಲೊಂದು ಬಿಂದುಮಾತ್ರ ರೇತೋರೂಪವಾದ ಅಗ್ನಿಯನ್ನು ಶಾಂತಗೊಳಿಸಿತು.

೧೭. ಅಗ್ನಿಜ್ವಾಲೆಯನ್ನು ಶಾಂತಗೊಳಿಸಲೆಂದು ಜಲಸೃಷ್ಟಿಯಾದುದರಿಂದ ಇಂದಿಗೂ ನೀರು ಬಿದ್ದರೆ ಅಗ್ನಿಶಾಂತಿಯಾಗುವುದು. ಅನಂತರದಲ್ಲಿ ಆ ಅಗ್ನಿಜ್ವಾಲೆಯಿಂದ ಅದರ ಅಧಿದೇವತೆಯಾದ ಅಗ್ನಿಪುರುಷನು ಆವಿರ್ಭವಿಸಿದನು.

೧೮. ಆ ನೀರಿನಿಂದ ಜಲ ಮತ್ತು ಜಲಚರಗಳಿಗೆ ಅಧಿದೇವತೆಯಾದ ಪುರುಷನೊಬ್ಬನು ಆವಿರ್ಭವಿಸಿ ವರುಣನೆನಿಸಿಕೊಂಡನು.

ಆವಿರ್ಬಭೂವ ಕನ್ಯೈಕಾ ತದ್ವಹ್ನೇರ್ವಾಮಪಾರ್ಶ್ವತಃ ।
ಸಾ ಸ್ವಾಹಾ ವಹ್ನಿಪತ್ನೀಂ ತಾಂ ಪ್ರವದಂತಿ ಮನೀಷಿಣಃ ॥ ೧೯ ॥

ಜಲೇಶಸ್ಯ ವಾಮಪಾರ್ಶ್ವಾತ್ಕನ್ಯಾ ಚೈಕಾ ಬಭೂವ ಸಾ ।
ವರುಣಾನೀತಿ ವಿಖ್ಯಾತಾ ವರುಣಸ್ಯ ಪ್ರಿಯಾ ಸತೀ ॥ ೨೦ ॥

ಬಭೂವ ಪವನಃ ಶ್ರೀಮಾನ್ ವಿಭೋರ್ನಿಃಶ್ವಾಸವಾಯುನಾ ।
ಸ ಚ ಪ್ರಾಣಾಶ್ಚ ಸರ್ವೇಷಾಂ ನಿಃಶ್ವಾಸಸ್ತತ್ಫಲೋದ್ಭವಃ ॥ ೨೧ ॥

ತಸ್ಯ ವಾಯೋರ್ವಾಮಪಾರ್ಶ್ವಾತ್ಕನ್ಯಾ ಚೈಕಾ ಬಭೂವ ಹ ।
ವಾಯೋಃ ಪತ್ನೀ ಸಾಚ ದೇವೀ ವಾಯವೀ ಪರಿಕೀರ್ತಿತಾ ॥ ೨೨ ॥

ಕೃಷ್ಣಸ್ಯ ಕಾಮಬಾಣೇನ ರೇತಃಪಾತೋ ಬಭೂವ ಹ ।
ಜಲೇ ತದ್ರೇಚನಂ ಚಕ್ರೇ ಲಜ್ಜಯಾ ಸುರಸಂಸದಿ ॥ ೨೩ ॥

---

೧೯. ಆ ಅಗ್ನಿಪುರುಷನ ವಾಮಭಾಗದಿಂದ ಕನ್ಯೆಯೊಬ್ಬಳವತರಿಸಿದಳು. ಆಕೆಯನ್ನೇ ಅಗ್ನಿಪತ್ನಿಯಾದ ಸ್ವಾಹಾದೇವಿಯೆಂದು ಬಲ್ಲವರು ಕರೆದರು.

೨೦. ಜಲಾಧಿದೇವತೆಯಾದ ವರುಣನ ವಾಮಭಾಗದಿಂದ ಕನ್ಯೆಯೊಬ್ಬಳವ ತರಿಸಿ, ವರುಣಾನೀಯೆಂಬ ಹೆಸರಿನಿಂದ ವರುಣನ ಪ್ರಿಯಳಾದಳು.

೨೧. ವಿಶ್ವವ್ಯಾಪಕನಾದ ಪರಮಾತ್ಮನ ನಿಃಶ್ವಾಸದಿಂದಲೇ ವಾಯುದೇವನ ಸೃಷ್ಟಿಯಾಗಿ ಎಲ್ಲರ ನಿಃಶ್ವಾಸೋಚ್ಛ್ವಾಸಕ್ಕೆ ಅವಕಾಶವಾಯಿತು. ಅವನೇ ಸಕಲರಿಗೂ ಪ್ರಾಣರೂಪನಾದನು.

೨೨. ಆ ವಾಯುದೇವನ ವಾಮಾರ್ಧದಿಂದ ಕನ್ಯೆಯೊಬ್ಬಳು ಆವಿರ್ಭವಿಸಿ ದಳು. ಆ ದೇವಿಯೇ ವಾಯವಿಯೆಂಬ ಹೆಸರಿನಿಂದ ಪ್ರಖ್ಯಾತಳಾಗಿ ವಾಯು ದೇವನ ಪತ್ನಿಯಾದಳು.

೨೩. ಇತ್ತ ಮನ್ಮಥಬಾಣದಿಂದ ಶ್ರೀಕೃಷ್ಣನಿಗೂ ರೇತಃ ಪತನವಾಯಿತು. ದೇವತೆಗಳೆದುರಿನಲ್ಲಿ ಲಜ್ಜಿತನಾದ ಕೃಷ್ಣನು ಆ ರೇತಸ್ಸನ್ನು ನೀರಿನೊಳಗೆರಚಿದನು.

ಸಹಸ್ರವತ್ಸರಾಂತೇ ತಡ್ಡಿಂಭರೂಪಂ ಬಭೂವ ಹ ।
ತತೋ ಮಹಾನ್ವಿರಾಡ್ ಜಜ್ಞೇ ವಿಶ್ವೌಘಾಧಾರ ಏವ ಸಃ ॥ ೨೪ ॥

ಯಸ್ಯೈಕಲೋಮವಿವರೇ ವಿಶ್ವೈಕಸ್ಯ ವ್ಯವಸ್ಥಿತಿಃ ।
ಸ್ಥೂಲಾತ್ ಸ್ಥೂಲತರಃ ಸೋಽಪಿ ಮಹಾನ್ನಾನ್ಯಸ್ತತಃ ಪರಃ ॥ ೨೫ ॥

ಸ ಏವ ಷೋಡಶಾಂಶೋಽಪಿ ಕೃಷ್ಣಸ್ಯ ಪರಮಾತ್ಮನಃ ।
ಮಹಾವಿಷ್ಣುಸ್ಸ ವಿಜ್ಞೇಯಃ ಸರ್ವಾಧಾರಸ್ಸನಾತನಃ ॥ ೨೬ ॥

ಮಹಾರ್ಣವೇ ಶಯಾನಃ ಸ ಪದ್ಮಪತ್ರಂ ಯಥಾಜಲೇ ।
ಬಭೂವತುಸ್ತೌ ದ್ವೌ ದೈತ್ಯೌ ತಸ್ಯ ಕರ್ಣಮಲೋದ್ಭವೌ ॥ ೨೭ ॥

ತೌ ಜಲಾಚ್ಚ ಸಮುತ್ಥಾಯ ಬ್ರಹ್ಮಾಣಂ ಹಂತುಮುದ್ಯತೌ ।
ನಾರಾಯಣಶ್ಚ ಭಗವಾನ್ ಜಘನೇ ತೌ ಜಘಾನ ಹ ॥ ೨೮ ॥

---

೨೪. ಸಾವಿರವರ್ಷಗಳನಂತರ ಆ ರೇತಸ್ಸು ಒಂದು ಶಿಶುರೂಪವನ್ನು ತಾಳಿತು. ಅದೇ ಮುಂದೆ ನಿಖಿಲಪ್ರಪಂಚಕ್ಕೂ ಆಧಾರವಾದ ಮಹಾವಿರಾಟ್ಪುರುಷ ನೆನಿಸಿತು.

೨೫. ಆ ವಿರಾಟ್ಪುರುಷನ ಲೋಮಕೂಪವೊಂದರಲ್ಲಿ ಒಂದೊಂದು ವಿಶ್ವ ವಡಗಿದೆ. ಸ್ಥೂಲವಸ್ತುಗಳಿಗೆ ಅತಿಸ್ಥೂಲನಾದ ಆ ವಿರಾಟ್ಪುರುಷನಿಗಿಂತ ಮಹತ್ತಾದುದು ಮತ್ತಾವುದೂ ಇಲ್ಲ.

೨೬. ಶ್ರೀಕೃಷ್ಣಪರಮಾತ್ಮನ ಹದಿನಾರನೆಯ ಒಂದಂಶದಿಂದ ಅವತರಿಸಿ ಸರ್ವಾಧಾರನಾಗಿರುವ ಆ ಅನಾದಿಪುರುಷನನ್ನೇ ಮಹಾವಿಷ್ಣುವೆನ್ನುವರು.

೨೭. ನೀರಿನ ಮೇಲೆ ತಾವರೆ ಎಲೆಯು ನಿರ್ಲಿಪ್ತವಾಗಿರುವಂತೆ ಮಹಾಸಮುದ್ರದಲ್ಲಿ ನಿರ್ಲಿಪ್ತನಾಗಿ ಮಲಗಿ ತೇಲುತ್ತಿದ್ದ ಆ ಮಹಾವಿಷ್ಣುವಿನ ಕಿವಿಯ ಕೊಳೆಯಿಂದ ಮಧುಕೈಟಭರೆಂಬ ಇಬ್ಬರು ರಾಕ್ಷಸರು ಉತ್ಪನ್ನರಾದರು.

೨೮. ಆ ರಾಕ್ಷಸರಿಬ್ಬರೂ ನೀರಿನಿಂದೆದ್ದು ಬ್ರಹ್ಮನನ್ನು ವಧಿಸಲುದ್ಯುಕ್ತರಾದರು ಆಗ ಭಗವಂತನಾದ ನಾರಾಯಣನು ಅವರ ಜಘನಪ್ರದೇಶಕ್ಕೆ ಹೊಡೆದು ಅವರನ್ನು ಸಂಹರಿಸಿದನು.

ಬಭೂವ ಮೇದಿನೀ ಕೃತ್ಸ್ನಾ ಕಾತ್ಸ್ನ್ಯೇನ ಮೇದಸಾ ತಯೋಃ ।
ತತ್ರೈವ ಸಂತಿ ವಿಶ್ವಾನಿ ಸಾ ಚ ದೇವೀ ವಸುಂಧರಾ ॥ ೨೯ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ
ಸೌತಿಶೌನಕಸಂವಾದೇ ಸೃಷ್ಟಿನಿರೂಪಣೇ
ಚತುರ್ಥೋಽಧ್ಯಾಯಃ

---

೨೯. ಆ ಮಧುಕೈಟಭರ ಸಂಪೂರ್ಣವಾದ ಮೇದಸ್ಸಿನಿಂದ ಮೇದಿನಿ (ಪೃಥ್ವಿ) ಯ ಉತ್ಪತ್ತಿಯಾಯಿತು. ನಿಖಿಲವಿಶ್ವಕ್ಕೂ ಆಧಾರವಾದ ಆ ಮೇದಿನಿಯನ್ನೇ ವಸುಂಧರಾದೇವಿಯೆನ್ನುವರು.

ಇಲ್ಲಿಗೆ ಸೌತಿಶೌನಕಸಂವಾದ ರೂಪವಾದ ಬ್ರಹ್ಮಖಂಡದಲ್ಲಿ
ಸೃಷ್ಟಿ ನಿರೂಪಣಾತ್ಮಕವಾದ ನಾಲ್ಕನೆಯ
ಅಧ್ಯಾಯವು ಮುಗಿಗುದು

ನಾಲ್ಕನೆಯ ಅಧ್ಯಾಯದ ಸಾರಾಂಶವು

ಪರಮಾತ್ಮನ ನಾಲಿಗೆಯ ತುದಿಯಿಂದ ಸಾವಿತ್ರಿಯು ಅವತರಿಸಿ ಅವನನ್ನು ಭಕ್ತಿಯಿಂದ ಸ್ತುತಿಸಿದಳು. ಅನಂತರ ಪರಮಾತ್ಮನ ಮನಸ್ಸಿನಿಂದ ಮನ್ಮಥನೂ, ಆ ಮನ್ಮಥನ ವಾಮಭಾಗದಿಂದ ರತೀದೇವಿಯೂ ಉತ್ಪನ್ನರಾದರು. ಆ ರತಿಯ ಸೌಂದರ್ಯವನ್ನು ನೋಡಿ ಅಲ್ಲಿದ್ದವರ ಮನಸ್ಸು ಚಂಚಲವಾಯಿತು. ಆ ಸಮಯಕ್ಕೆ ಸರಿಯಾಗಿ ಮನ್ಮಥನು ಪರೀಕ್ಷೆಗೆಂದು ಬಾಣಪ್ರಯೋಗಮಾಡಿದನು. ಕೂಡಲೆ ಬ್ರಹ್ಮನಿಗೆ ರೇತಃಪತನವುಂಟಾಗಿ ಅಗ್ನಿರೂಪವನ್ನು ತಾಳಿತು. ಆ ಅಗ್ನಿಶಾಂತಿಗಾಗಿ ಶ್ರೀಕೃಷ್ಣಪರಮಾತ್ಮನ ಮುಖದಿಂದ ನಿಃಶ್ವಾಸವಾಯುವಿನೊಡನೆ ಜಲಸೃಷ್ಟಿಯಾಯಿತು. ಆ ಜಲದಿಂದ ಅಗ್ನಿಶಾಂತಿಯಾಯಿತು. ಅನಂತರ ಅಗ್ನಿ, ಜಲ, ವಾಯುಗಳಿಂದ ಕ್ರಮವಾಗಿ ಅಗ್ನಿ, ವರುಣ, ವಾಯುದೇವತೆಗಳ ಉತ್ಪತ್ತಿಯಾಯಿತು. ಅಲ್ಲದೆ ಆ ದೇವತೆಗಳ ವಾಮಭಾಗದಿಂದ ಕ್ರಮವಾಗಿ ಸ್ವಾಹಾ, ವರುಣಾನೀ ಮತ್ತು ವಾಯವೀದೇವಿಯರ ಉತ್ಪತ್ತಿಯಾಯಿತು.

ಇತ್ತ ಪಂಚಬಾಣನ ಬಾಣಸ್ಪರ್ಶದಿಂದ ವಿಕೃತನಾದ ಕೃಷ್ಣನ ರೇತಸ್ಸು ನೀರಿನೊಳಗೆ ಬಿದ್ದು ಸಹಸ್ರವರ್ಷಗಳಾದನಂತರ ಮಹಾವಿಷ್ಣುವಿನ ಅವತಾರವಾಯಿತು. ಆ ಮಹಾವಿರಾಟ್ಪುರುಷನ ಕರ್ಣಮಲದಿಂದ ಹುಟ್ಟಿದ ಮಧುಕೈಟಭರೆಂಬ ಇಬ್ಬರು ರಾಕ್ಷಸರು ಬ್ರಹ್ಮನನ್ನು ಸಂಹರಿಸಲು ಹೋಗಿ ನಾರಾಯಣನಿಂದ ಹತವಾದರು. ಆ ರಾಕ್ಷಸರ ಮೇದಸ್ಸಿನಿಂದಲೇ ಮೇದಿನಿಯು ಉತ್ಪನ್ನವಾಯಿತು. ಆ ಮೇದಿನಿಯು ನಿಖಿಲವಿಶ್ವವನ್ನೂ ಧರಿಸಿದುದರಿಂದ ವಸುಂಧರೆಯಾಯಿತು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಪಂಚಮೋಽಧ್ಯಾಯಃ ॥

॥ ಶೌನಕ ಉವಾಚ ॥

ಗೋಗೋಪಗೋಪ್ಯೋ ಗೋಲೋಕೇ ಕಿಂ ನಿತ್ಯಾಃ ಕಿಂ ನು ಕಲ್ಪಿತಾಃ ।
ಮಮ ಸಂದೇಹಭೇದಾರ್ಥಂ ತನ್ಮೇ ವ್ಯಾಖ್ಯಾತುಮರ್ಹಸಿ ॥ ೧ ॥

॥ ಸೌತಿರುವಾಚ ॥

ಸರ್ವಾದಿ ಸೃಷ್ಟೌ ತಾಃ ಕ್ಲೃಪ್ತಾಃ ಪ್ರಲಯೇ ಪ್ರಲಯೇ ಸ್ಥಿತಾಃ ।
ಸರ್ವಾದಿಸೃಷ್ಟಿಕಥನಂ ಯನ್ಮಯಾ ಕಥಿತಂ ದ್ವಿಜ ॥ ೨ ॥

ಐದನೆಯ ಅಧ್ಯಾಯವು

೧. ಶೌನಕರು :— ಎಲೈ ಸೂತಪುತ್ರರೆ, ಗೋಲೋಕದಲ್ಲಿರುವ ಗೋವುಗಳು ಮತ್ತು ಗೋಪಗೋಪಿಯರು ಪರಮಾತ್ಮನಂತೆ ನಿತ್ಯರೇ ? ಅಥವಾ ಅನಿತ್ಯರೇ ? ನನಗುಂಟಾಗಿರುವ ಈ ಸಂದೇಹವನ್ನು ತಾವು ದಯವಿಟ್ಟು ಪರಿಹರಿಸಿ.

೨. ಸೂತಪುತ್ರ:—ಆದಿಸೃಷ್ಟಿಯಲ್ಲಿ ಕಲ್ಪಿತರಾದ ಗೋಗೋಪಗೋಪಿಯರು ಪ್ರತಿ ಪ್ರಳಯದಲ್ಲಿಯೂ ನಿತ್ಯರಾಗಿರುವರು. ಎಲೈ ವಿಪ್ರವರ್ಯನೇ, ನಾನು ಇದು ವರೆಗೂ ಸರ್ವಾದಿಸೃಷ್ಟಿಕ್ರಮವನ್ನು ವಿವರಿಸಿರುವೆನು.

ಸರ್ವಾದಿಸೃಷ್ಟೌ ಕ್ಲೃಪ್ತೌ ಚ ನಾರಾಯಣಮಹೇಶ್ವರೌ ।
ಪ್ರಲಯೇ ಪ್ರಲಯೇಽವ್ಯಕ್ತೌ ಸ್ಥಿತೌ ತೌ ಪ್ರಕೃತಿಶ್ಚ ಸಾ ॥ ೩ ॥

ಸರ್ವಾದೌ ಬ್ರಹ್ಮಕಲ್ಪಸ್ಯ ಚರಿತಂ ಕಥಿತಂ ದ್ವಿಜ ।
ವಾರಾಹಪಾದ್ಮಕಲ್ಪೌ ದ್ವೌ ಕಥಯಿಷ್ಯಾಮಿ ಶ್ರೋಷ್ಯಸಿ ॥ ೪ ॥

ಬ್ರಾಹ್ಮವಾರಾಹಪಾದ್ಮಾಶ್ಚ ಕಲ್ಪಾಶ್ಚ ತ್ರಿವಿಧಾ ಮುನೇ ।
ಯಥಾ ಯುಗಾನಿ ಚತ್ವಾರಿ ಕ್ರಮೇಣ ಕಥಿತಾನಿ ಚ ॥ ೫ ॥

ಸತ್ಯಂ ತ್ರೇತಾ ದ್ವಾಪರಂ ಚ ಕಲಿಶ್ಚೇತಿ ಚತುರ್ಯುಗಂ ।
ತ್ರಿಶತೈಶ್ಚ ಷಷ್ಟ್ಯಧಿಕೈರ್ಯುಗೈರ್ದಿವ್ಯಂ ಯುಗಂ ಸ್ಮೃತಂ ॥ ೬ ।

ಮನ್ವಂತರಂ ತು ದಿವ್ಯಾನಾಂ ಯುಗಾನಾಮೇಕಸಪ್ತತಿಃ ।
ಚತುರ್ದಶೇಷು ಮನುಷು ಗತೇಷು ಬ್ರಹ್ಮಣೋ ದಿನಂ ॥ ೭ ॥

---

೩. ಅಂತೆಯೇ, ಆದಿಸೃಷ್ಟಿಯಲ್ಲಿ ಕಲ್ಪಿತರಾದ ನಾರಾಯಣಮಹೇಶ್ವರರೂ ಮತ್ತು ಪ್ರಕೃತಿಮಾತೆಯೂ, ಪ್ರತಿಪ್ರಳಯದಲ್ಲಿಯೂ ಅವ್ಯಕ್ತರಾಗಿ ಪರಮಾತ್ಮನಲ್ಲಿಯೇ ಲೀನರಾಗಿರುವರು.

೪. ಎಲೈ ಬ್ರಾಹ್ಮಣೋತ್ತಮನೇ, ನಾನು ಇದುವರೆಗೂ ಹೇಳಿದುದು ಬ್ರಹ್ಮಕಲ್ಪದ ವಿಚಾರವಾಯಿತು. ಮುಂದೆ ವಾರಾಹ ಮತ್ತು ಪಾದ್ಮಕಲ್ಪಗಳ ಚರಿತ್ರೆಯನ್ನು ವಿವರಿಸುವೆನು. ಗಮನಿಸಿ ಕೇಳು.

೫. ಎಲೈ ಶೌನಕಮುನಿಯೇ, ಬ್ರಾಹ್ಮ, ವಾರಾಹ, ಪಾದ್ಮ ಎಂದು ಮೂರು ಕಲ್ಪಗಳೂ, ಸತ್ಯ, ತ್ರೇತಾ, ದ್ವಾಪರ ಮತ್ತು ಕಲಿಯೆಂದು ನಾಲ್ಕುಯುಗಗಳೂ ಕ್ರಮವಾಗಿ ಸಂಭವಿಸುವುವು.

೬-೭. ಮುನ್ನೂರ ಅರವತ್ತು ಮಾನುಷಯುಗಗಳು ಕಳೆದರೆ ದೇವಮಾನದಲ್ಲಿ ಒಂದು ಯುಗವಾಗುವುದು. ದೇವತೆಗಳ ಎಪ್ಪತ್ತೊಂದು ಯುಗಗಳಿಗೆ ಒಂದು ಮನ್ವಂತರವೆನ್ನುವರು ಚತುರ್ದಶಮನುಗಳ ರಾಜ್ಯಭಾರವು ಮುಗಿದರೆ ಚತುರ್ಮುಖಬ್ರಹ್ಮನ ಒಂದು ಹಗಲು ಆಗುವುದು.

ತ್ರಿಶತ್ಯೈಶ್ಚ ಷಷ್ಠ್ಯಧಿಕ್ಯೈರ್ದಿನೈರ್ವರ್ಷಂ ಚ ಬ್ರಹ್ಮಣಃ ।
ಅಷ್ಟೋತ್ತರಂ ವರ್ಷಶತಂ ವಿಧೇರಾಯುರ್ನಿರೂಪಿತಂ ॥ ೮ ॥

ಏತನ್ನಿಮೇಷಕಾಲಸ್ತು ಕೃಷ್ಣಸ್ಯ ಪರಮಾತ್ಮನಃ ।
ಬ್ರಹ್ಮಣಶ್ಚಾಯುಷಾ ಕಲ್ಪಃ ಕಾಲವಿದ್ಭಿರ್ನಿರೂಪಿತಂ ॥ ೯ ॥

ಕ್ಷುದ್ರಕಲ್ಪಾ ಬಹುತರಾಸ್ತೇ ಸಂವರ್ತಾದಯಸ್ಮೃತಾಃ ।
ಸಪ್ತಕಲ್ಪಾಂತಜೀವೀ ಸ ಮಾರ್ಕಂಡೇಯಶ್ಚ ತನ್ಮತಃ ॥ ೧೦ ॥

ಬ್ರಹ್ಮಣಶ್ಚ ದಿನೇಸ್ಯೈವ ಸ ಕಲ್ಪಃ ಪರಿಕೀರ್ತಿತಃ ।
ವಿಧೇಶ್ಚ ಸಪ್ತದಿವಸೇ ಮುನೇರಾಯುರ್ನಿರೂಪಿತಂ ॥ ೧೧ ॥

---

೮. ಆ ರೀತಿಯಾದ ಮುನ್ನೂರ ಅರವತ್ತು ದಿನಗಳು ಕಳೆದರೆ ಬ್ರಹ್ಮನ ಒಂದು ವರ್ಷವಾಗುವುದು. ಇಂಥ ನೂರೆಂಟು ವರ್ಷಗಳು ಬ್ರಹ್ಮನ ಆಯುಃ ಪರಿಮಾಣವು.

೯. ಇಷ್ಟು ದೀರ್ಘವಾದ ಕಾಲವು ಶ್ರೀಕೃಷ್ಣಪರಮಾತ್ಮನ ರೆಪ್ಪೆಬಡಿಯುವ ಕಾಲಕ್ಕೆ ಸಮವೆನಿಸುವುದು. ಬ್ರಹ್ಮನ ಆಯುಷ್ಯಕ್ಕೆ ಒಂದು ಕಲ್ಪವೆಂದು ಕಾಲಜ್ಞರು ಹೇಳುವರು.

೧೦. ಇದಲ್ಲದೆ ಸಂವರ್ತಮೊದಲಾದ ಅನೇಕ ಸಣ್ಣ ಸಣ್ಣ ಕಲ್ಪಗಳುಂಟು ಈ ರೀತಿಯಾದ ಏಳುಕಲ್ಪಗಳು ಕಳೆಯುವವರೆಗೆ ಜೀವಿಸಿರುವುದರಿಂದಲೇ ಮಾರ್ಕಂಡೇಯನನ್ನು ಚಿರಂಜೀವಿಯೆನ್ನುವರು.

೧೧. ಒಂದೊಂದು ಕ್ಷುದ್ರಕಲ್ಪವೂ ಬ್ರಹ್ಮನ ಒಂದೊಂದು ದಿನಕ್ಕೆ ಸಮವೆನಿಸುವುದು. ಅಂದಮೇಲೆ ಬ್ರಹ್ಮನ ಏಳುದಿವಸಗಳವರೆಗೆ ಮಾರ್ಕಂಡೇಯನು ಜೀವಿಸಿರುವನು.

ಬ್ರಾಹ್ಮವಾರಾಹಪಾದ್ಮಾಶ್ಚ ತ್ರಯಃ ಕಲ್ಪಾಃ ನಿರೂಪಿತಾಃ ।
ಕಲ್ಪತ್ರಯೇ ಯಥಾಸೃಷ್ಟಿಃ ಕಥಯಾಮಿ ನಿಶಾಮಯ ॥ ೧೨ ॥

ಬ್ರಾಹ್ಮೇ ಚ ಮೇದಿನೀಂ ಸೃಷ್ಟ್ವಾ ಸ್ರಷ್ಟಾ ಸೃಷ್ಟಿಂ ಚಕಾರ ಸಃ ।
ಮಧುಕೈಭಟಯೋಶ್ಚೈವ ಮೇದಸಾಚಾಜ್ಞಯಾ ಪ್ರಭೋಃ ॥ ೧೩ ॥

ವಾರಾಹೇ ತಾಂ ಸಮುದ್ಧೃತ್ಯ ಲುಪ್ತಾಂ ಮಗ್ನಾಂ ರಸಾತಲಾತ್ ।
ವಿಷ್ಣೋರ್ವರಾಹರೂಪಸ್ಯ ದ್ವಾರಾ ಚಾತಿಪ್ರಯತ್ನತಃ ॥ ೧೪ ॥

ಪಾದ್ಮೇ ವಿಷ್ಣೋರ್ನಾಭಿಪದ್ಮೇ ಸ್ರಷ್ಟಾ ಸೃಷ್ಟಿಂ ವಿನಿರ್ಮಮೇ ।
ತ್ರಿಲೋಕೀಂ ಬ್ರಹ್ಮಲೋಕಾಂತಾಂ ನಿತ್ಯಲೋಕತ್ರಯಂ ವಿನಾ ॥ ೧೫ ॥

---

೧೨. ಬ್ರಾಹ್ಮ, ವಾರಾಹ ಮತ್ತು ಪಾದ್ಮವೆಂಬ ಮೂರುಕಲ್ಪಗಳು ಮುಖ್ಯವಾದುವೆಂದು ಮೊದಲೇ ತಿಳಿಸಿದೆನು. ಈಗ ಈ ಮೂರುಕಲ್ಪಗಳಲ್ಲಿಯೂ ಉಂಟಾಗುವ ಸೃಷ್ಟಿಕ್ರಮವನ್ನು ವಿವರಿಸುವೆನು. ಸಾವಧಾನದಿಂದ ಕೇಳು.

೧೩. ಬ್ರಾಹ್ಮಕಲ್ಪದಲ್ಲಿ ಸೃಷ್ಟಿಕರ್ತನು ಪರಮಾತ್ಮನ ಅಪ್ಪಣೆಯಂತೆ ಮಧುಕೈಟಭರೆಂಬ ರಾಕ್ಷಸರ ಮೇದಸ್ಸಿನಿಂದ ಮೇದಿನಿಯನ್ನು ಸೃಷ್ಟಿಮಾಡಿ ಅನಂತರ ಮುಂದಿನ ಸೃಷ್ಟಿಗಾರಂಭಿಸಿದನು.

೧೪. ವಾರಾಹಕಲ್ಪದಲ್ಲಿ ಸಮುದ್ರದೊಳಗೆ ಮುಳುಗಿದ್ದ ಆ ಮೇದಿನಿಯನ್ನು ವರಾಹರೂಪಿಯಾದ ವಿಷ್ಣುವಿನ ಮೂಲಕವಾಗಿ ಮೇಲಕ್ಕೆ ತರಿಸಿ ಮುಂದಿನಸೃಷ್ಟಿ ಮಾಡಿದನು.

೧೫. ಪಾದ್ಮಕಲ್ಪದಲ್ಲಿ ಸೃಷ್ಟಿಕರ್ತನು ನಿತ್ಯವಾದ ಗೋಲೋಕ ಮತ್ತು ವೈಕುಂಠ, ಶಿವಲೋಕಗಳನ್ನು ಬಿಟ್ಟು ಬ್ರಹ್ಮಲೋಕದವರೆಗಿನ ಸಕಲಪ್ರಪಂಚವನ್ನೂ ವಿಷ್ಣುವಿನ ನಾಭಿಕಮಲದಲ್ಲೇ ಸೃಷ್ಟಿಮಾಡಿದನು.

ಏತತ್ತು ಕಾಲಸಂಖ್ಯಾನಮುಕ್ತಂ ಸೃಷ್ಟಿನಿರೂಪಣೇ ।
ಕಿಂಚಿನ್ನಿರೂಪಣಂ ಸೃಷ್ಟೇಃ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೬ ॥

॥ ಶೌನಕ ಉವಾಚ ॥

ಅತಃ ಪರಂ ಕಿಂ ಚಕಾರ ಭಗವಾನ್ ಸಾತ್ವತಾಂಪತಿಃ ।
ಏತಾನ್ ಸೃಷ್ಟ್ವಾ ಕಿಂ ಚಕಾರ ತನ್ಮೇ ವ್ಯಾಖ್ಯಾತುಮರ್ಹಸಿ ॥ ೧೭ ॥

॥ ಸೌತಿ ರುವಾಚ ॥

ಅತಃ ಪರಂ ತು ಗೋಲೋಕೇ ಗೋಲೋಕೇಶೋ ಮಹಾನ್ ಪ್ರಭುಃ ।
ಏತಾನ್ ಸೃಷ್ಟ್ವಾ ಜಗಾಮಾಸೌ ಸುರಮ್ಯಂ ರಾಸಮಂಡಲಂ ॥ ೧೮ ॥

ರಮ್ಯಾಣಾಂ ಕಲ್ಪವೃಕ್ಷಾಣಾಂ ಮಧ್ಯೇಽತೀವಮನೋಹರಂ ।
ಸುವಿಸ್ತೀರ್ಣಂ ಚ ಸುಸಮಂ ಸುಸ್ನಿಗ್ಧಂ ಮಂಡಲಾಕೃತಿಂ ॥ ೧೯ ॥

---

೧೬. ಈ ರೀತಿಯಾಗಿ ಕಾಲಪರಿಮಾಣವನ್ನೂ ಕಲ್ಪಗಳ ಸೃಷ್ಟಿಕ್ರಮವನ್ನೂ ಯಥಾಮತಿ ನಿರೂಪಿಸಿದೆನು. ಇನ್ನು ಯಾವ ವಿಷಯವನ್ನು ಕೇಳಬೇಕೆಂದು ನಿನಗೆ ಇಚ್ಛೆಯಿದೆ.

೧೭, ಶೌನಕ :—ಷಡ್ಗುಣೈಶ್ವರ್ಯಪರಿಪೂರ್ಣನೂ, ಜಗನ್ನಾಥನೂ ಆದ ಪರಮಾತ್ಮನು ಬ್ರಹ್ಮಾದಿದೇವತೆಗಳನ್ನು ಸೃಷ್ಟಿಮಾಡಿದನಂತರ ಏನುಮಾಡಿದನೆಂಬುದನ್ನು ದಯವಿಟ್ಟು ವಿಸ್ತರಿಸಿ ಹೇಳು.

೧೮. ಸೂತಪುತ್ರ :—ಗೋಲೋಕಾಧಿಪತಿಯಾದ ಶ್ರೀಕೃಷ್ಣಪರಮಾತ್ಮನು ಬ್ರಹ್ಮಾದಿದೇವತೆಗಳನ್ನು ಸೃಷ್ಟಿಮಾಡಿದನಂತರ ಗೋಲೋಕದಲ್ಲಿರುವ ಸುಂದರವಾದ ರಾಸಮಂಡಲಕ್ಕೆ ತೆರಳಿದನು.

೧೯. ಆ ರಾಸಮಂಡಲವು ಸುಂದರವಾದ ಕಲ್ಪವೃಕ್ಷಗಳ ಮಧ್ಯದಲ್ಲಿ ವಿಸ್ತೀರ್ಣವಾಗಿಯೂ, ಸಮತಲವಾಗಿಯೂ, ಮಂಡಲಾಕಾರವಾಗಿಯೂ ಇದ್ದಿತು.

ಚಂದನಾಗುರುಕಸ್ತೂರೀಕುಂಕುಮೈಶ್ಚ ಸುಸಂಸ್ಕೃತಂ ।
ದಧಿಲಾಜಸಕ್ತುಧಾನ್ಯದೂರ್ವಾಪರ್ಣಪರಿಪ್ಲುತಂ ॥ ೨೦ ॥

ಪಟ್ಟಸೂತ್ರಗ್ರಂಥಿಯುಕ್ತಂ ನವಚಂದನಪಲ್ಲವೈಃ ।
ಸಂಯುಕ್ತ ರಂಭಸ್ತಂಭಾನಾಂ ಸಮೂಹೈಃ ಪರಿವೇಷ್ಟಿತಂ ॥ ೨೧ ॥

ಸದ್ರತ್ನಸಾರನಿರ್ಮಾಣಮಂಡಪಾನಾಂ ತ್ರಿಕೋಟಿಭಿಃ ।
ರತ್ನಪ್ರದೀಪಜ್ವಲಿತೈಃ ಪುಷ್ಪಧೂಪಾಧಿವಾಸಿತೈಃ ॥ ೨೨ ॥

ಶೃಂಗಾರಾರ್ಹಂ ಭೋಗವಸ್ತುಸಮೂಹಪರಿವೇಷ್ಟಿತಂ ।
ಅತೀವಲಲಿತಾಕಲ್ಪತಲ್ಪಯುಕ್ತೈಃ ಸುಶೋಭಿತಂ ॥ ೨೩ ॥

ತತ್ರ ಗತ್ವಾ ಚ ತೈಃಸಾರ್ಧಂ ಸಮುವಾಸ ಜಗತ್ಪತಿಃ ।
ದೃಷ್ಟ್ವಾ ರಾಸಂ ವಿಸ್ಮಿತಾಸ್ತೇ ಬಭೂವುರ್ಮುನಿಸತ್ತಮ ॥ ೨೪ ॥

೨೦–೨೧. ಅಗುರುಚಂದನಗಳಿಂದಲೂ, ಕಸ್ತೂರೀಕುಂಕುಮಗಳಿಂದಲೂ, ಸುಸಂಸ್ಕೃತವಾಗಿ ಮೊಸರು, ಅರಳು, ಹಿಟ್ಟು, ಧಾನ್ಯ, ಗರಿಕೆ ಮತ್ತು ಮುತ್ತುಗದೆಲೆಗಳಿಂದ ಪರಿಪೂರಿತವಾದ ಆ ರಾಸಮಂಡಲವಲ್ಲಿ ಗಂಟುಹಾಕಿರುವ ರೇಷ್ಮೆದಾರಗಳೂ, ಚಂದನವಚಿಗುರುಗಳೂ, ಬಾಳೆಯಕಂಭಗಳೂ ತೋರಣಾಕಾರವಾಗಿ ಅಲಂಕರಿಸಲ್ಪಟ್ಟಿದ್ದವು.

೨೨–೨೩. ಶ್ರೇಷ್ಠರತ್ನಗಳಿಂದ ನಿರ್ಮಿತವಾದ ಮೂರುಕೋಟಿಮಂಟಪಗಳಿಂದಲೂ, ಪ್ರಜ್ವಲಿಸುತ್ತಿರುವ ರತ್ನದೀಪಗಳಿಂದಲೂ, ಕೂಡಿ ಗಂಧಪುಷ್ಪಧೂಪಾದಿಗಳಿಂದ ಸುವಾಸಿತವಾಗಿ, ಶೃಂಗಾರಯೋಗ್ಯವಾದ ಉಪಭೋಗಸಾಧನಗಳಿಂದ ಪರಿವೇಷ್ಟಿತವಾದ ಆ ರಾಸಮಂಡಲದಲ್ಲಿ ಮನೋಹರವಾದ ನೇಪಥ್ಯಗಳಿಂದ ಕೂಡಿ ಸುಸಜ್ಜಿತವಾದ ಶಯನವು ಶೋಭಿಸುತ್ತಿದ್ದಿತು.

೨೪. ಎಲೈ ಮುನಿವರ್ಯನೆ, ಶ್ರೀಕೃಷ್ಣಪರಮಾತ್ಮನು ಈ ರೀತಿಯಾದ ರಾಸಮಂಡಲಕ್ಕೆ ಆ ದೇವತೆಗಳೊಡನೆ ಹೋಗಿ ಕುಳಿತುಕೊಳ್ಳಲು, ಅವರೆಲ್ಲರೂ ಆ ರಾಸಮಂಡಲದ ವೈಚಿತ್ರ್ಯವನ್ನು ಕಂಡು ವಿಸ್ಮಯಗೊಂಡರು.

ಆವಿರ್ಬಭೂವ ಕನ್ಯೈಕಾ ಕೃಷ್ಣಸ್ಯ ವಾಮಪಾರ್ಶ್ವತಃ ।
ಧಾವಿತ್ವಾ ಪುಷ್ಪಮಾನೀಯ ದದಾವರ್ಘ್ಯಂ ಪ್ರಭೋಃ ಪದೇ ॥ ೨೫ ॥

ರಾಸೇ ಸಂಭೂಯ ಗೋಲೋಕೇ ಸಾ ದಧಾವ ಹರೇಃ ಪುರಃ ।
ತೇನ ರಾಧಾ ಸಮಾಖ್ಯಾತಾ ಪುರಾವಿದ್ಭಿರ್ದ್ವಿಜೋತ್ತಮ ॥ ೨೬ ॥

ಪ್ರಾಣಾಧಿಷ್ಠಾತೃದೇವೀ ಸಾ ಕೃಷ್ಣಸ್ಯ ಪರಮಾತ್ಮನಃ ।
ಆವಿರ್ಬಭೂವ ಪ್ರಾಣೇಭ್ಯಃ ಪ್ರಾಣೇಭ್ಯೋಽಪಿ ಗರೀಯಸೀ ॥ ೨೭ ॥

ದೇವೀ ಷೋಡಶವರ್ಷೀಯಾ ನವಯೌವನಸಂಯುತಾ ।
ವಹ್ನಿಶುದ್ಧಾಂಶುಕಾಧಾನಾ ಸಸ್ಮಿತಾ ಸುಮನೋಹರಾ ॥ ೨೮ ॥

ಸುಕೋಮಲಾಂಗೀ ಲಲಿತಾ ಸುಂದರೀಷು ಚ ಸುಂದರೀ ।
ಬೃಹನ್ನಿತಂಬಭಾರಾರ್ತಾ ಪೀನಶ್ರೋಣಿಪಯೋಧರಾ ॥ ೨೯ ॥

---

೨೫. ಅಲ್ಲಿ ಶ್ರೀಕೃಷ್ಣನ ವಾಮಭಾಗದಿಂದ ಕನ್ಯೆಯೊಬ್ಬಳು ಆವಿರ್ಭವಿಸಿ, ಕೂಡಲೇ ಓಡಿಹೋಗಿ, ಹೂವನ್ನು ತಂದು ಅವನ ಪಾದಗಳಿಗೆ ಪೂಜೆಮಾಡಿದಳು.

೨೬. ಆ ಕನ್ಯೆಯು ಗೋಲೋಕದ ರಾಸಮಂಡಲದಲ್ಲಿ ಅವತರಿಸಿ, ಶ್ರೀಹರಿಯ ಮುಂದೆ ಧಾವಿಸಿ (ಓಡಿ)ದುದರಿಂದ ಆಕೆಯನ್ನು ' ರಾಧಾ ' ಯೆಂದು ಹಿಂದಿನವರು ಹೇಳುವರು.

೨೭. ಆ ರಾಧೆಯು ಕೃಷ್ಣಪರಮಾತ್ಮನ ಪ್ರಾಣಗಳಿಗೆ ಅಧಿಷ್ಠಾತೃದೇವತೆಯು. ಕೃಷ್ಣಪರಮಾತ್ಮನ ಪ್ರಾಣಗಳಿಂದ ಆವಿರ್ಭವಿಸಿ ಪ್ರಾಣಕ್ಕಿಂತಲೂ ಮಿಗಿಲಾಗಿದ್ದಳು.

೨೮. ಹದಿನಾರುವರ್ಷದ ನವಪ್ರಾಯವುಳ್ಳ ಆ ದೇವಿಯು ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನುಟ್ಟು ಮಂದಸ್ಮಿತವದನದಿಂದ ಮನೋಹರಳಾಗಿದ್ದಳು.

೨೯. ಕೋಮಲಾವಯುಗಳಿಂದ ಸುಂದರಿಯರನ್ನು ಮೀರಿದ ಆಕೆಯು ಅತಿ ದಪ್ಪವಾದ ನಿತಂಬಬಿಂಬದಿಂದಲೂ, ವರ್ತುಲಾಕಾರವಾದ ಸ್ತನದ್ವಯಗಳಿಂದಲೂ ಕೂಡಿ ಮಂದಗಮನೆಯಾಗಿದ್ದಳು.

ಬಂಧುಜೀವಜಿತಾರಕ್ತಸುಂದರೋಷ್ಠಾಧರಾ ವರಾ ।
ಮುಕ್ತಾಪಂಕ್ತಿಜಿತಾಚಾರುದಂತಪಙ್ಕ್ತಿಮನೋಹರಾ ॥ ೩೦ ॥

ಶರತ್ಪಾರ್ವಣಕೋಟೀಂದು ಶೋಭಾಮೃಷ್ಟಶುಭಾನನಾ ।
ಚಾರುಸೀಮಂತಿನೀ ಚಾರುಶರತ್ಪಂಕಜಲೋಚನಾ ॥ ೩೧ ॥

ಖಗೇಂದ್ರಚಂಚುವಿಜಿತಚಾರುನಾಸಾ ಮನೋಹರಾ ।
ಸ್ವರ್ಣಗಂಡೂಕವಿಜಿತೇಗಂಡಯುಗ್ಮೇ ಚ ಬಿಭ್ರತೀ ॥ ೩೨ ॥

ದಧತೀ ಚಾರುಕರ್ಣೇ ಚ ರತ್ನಾಭರಣಭೂಷಿತೇ ।
ಚಂದನಾಗುರುಕಸ್ತೂರೀಯುಕ್ತಕುಂಕುಮಬಿಂದುಭಿಃ ॥ ೩೩ ॥

ಸಿಂಧೂರಬಿಂದುಸಂಯುಕ್ತಾಸುಕಪೋಲಾ ಮನೋಹರಾ ।
ಸುಸಂಸ್ಕೃತಂ ಕೇಶಪಾಶಂ ಮಾಲತೀಮಾಲ್ಯಭೂಷಿತಂ ॥ ೩೪ ॥

ಸುಗಂಧಕಬರೀಭಾರಂ ಸುಂದರಂ ದಧತೀ ಸತೀ ।
ಸ್ಥಲಪದ್ಮಪ್ರಭಾಮುಷ್ಟಂ ಪಾದಯುಗ್ಮಂ ಚ ಬಿಭ್ರತೀ ॥ ೩೫ ॥

೩೦–೩೨. ಕೆಂಪುದಾಸವಾಳದ ಹೂವಿಗಿಂತ ಕೆಂಪಾಗಿರುವ ಕೆಳತುಟಿಯಿಂದಲೂ, ಮುತ್ತಿನಸಾಲುಗಳನ್ನು ಅಲ್ಲಗಳೆಯುವ ಹಲ್ಲುಗಳ ಸಾಲಿನಿಂದಲೂ, ಶರದೃತುವಿನ ಕೋಟಿಚಂದ್ರಪ್ರಭೆಯನ್ನು ಮೀರಿರುವ ಮುಖಕಾಂತಿಯಿಂದಲೂ ಮನೋಹರಳಾಗಿದ್ದ ಆ ರಾಧೆಯ ಸುಂದರವಾದ ಬೈತಲೆಯೂ, ಶರದೃತುವಿನ ಕಮಲ ದಳದಂತೆ ವಿಶಾಲವಾದ ಕಣ್ಣುಗಳೂ, ಗರುಡನ ಕೊಕ್ಕಿನಂತೆ ಮನೋಹರವಾದ ಮೂಗೂ, ಸ್ವರ್ಣಫಲಕದಂತೆ ಹೊಳಪಾದ ಕಪೋಲಗಳೂ ಕೃಷ್ಣಪರಮಾತ್ಮನ ಚಿತ್ತಾಕರ್ಷಕಗಳಾಗಿದ್ದವು.

೩೩–೩೫. ರತ್ನಕುಂಡಲಗಳಿಂದಲಂಕೃತವಾದ ಎರಡುಕಿವಿಗಳಿಂದಲೂ, ಚಂದನ, ಅಗರು, ಕಸ್ತೂರಿ, ಕುಂಕುಮ ಮತ್ತು ಚಂದ್ರದ ಬೊಟ್ಟುಗಳಿಂದ ಲಂಕೃತವಾದ ಕಪೋಲಸ್ಥಳಗಳಿಂದಲೂ, ಸುವಾಸಿತತೈಲಗಳಿಂದ ಸಂಸ್ಕೃತವಾದ ಕೇಶಪಾಶಗಳಿಂದಲೂ, ಜಾಜಿಹೂಮಾಲೆಯಿಂದ ಸುವಾಸಿತವಾದ ಕಬರೀ (ಹೆರಳು) ಭಾರದಿಂದಲೂ ಮನೋಹರಳಾಗಿದ್ದ ಆ ರಾಧೆಯ ಚರಣದ್ವಯವು ನೆಲದಾವರೆಯ ಕಾಂತಿಯನ್ನು ನಿಂದಿಸುವಂತಿದ್ದಿತು.

ಗಮನಂ ಕುರ್ವತೀ ಚಾ ಸಾ ಹಂಸಖಂಜನಗಂಜನಂ ।
ಸದ್ರತ್ನಸಾರನಿರ್ಮಾಣಾಂ ವನಮಾಲಾಂ ಮನೋಹರಾಂ ॥ ೩೬ ॥

ಹಾರಂ ಹೀರಕನಿರ್ಮಾಣಂ ರತ್ನಕೇಯೂರಕಂಕಣಂ ।
ಸದ್ರತ್ನಸಾರನಿರ್ಮಾಣಂ ಪಾಶಕಂ ಸುಮನೋಹರಂ ॥ ೩೭ ॥

ಅಮೂಲ್ಯರತ್ನನಿರ್ಮಾಣಂ ಕ್ವಣನ್ಮಂಜೀರರಂಜಿತಂ ।
ನಾನಾಪ್ರಕಾರಚಿತ್ರಾಢ್ಯಂ ಸುಂದರಂ ಪರಿಬಿಭ್ರತೀ ॥ ೩೮ ॥

ಸಾ ಚ ಸಂಭಾಷ್ಯ ಗೋವಿಂದಂ ರತ್ನಸಿಂಹಾಸನೇ ವರೇ ।
ಉವಾಸ ಸಸ್ಮಿತಾ ಭರ್ತುಃ ಪಶ್ಯಂತೀ ಮುಖಮಂಡಲಂ ॥ ೩೯ ॥

ತಸ್ಯಾಶ್ಚ ಲೋಮಕೂಪೇಭ್ಯಃ ಸದ್ಯೋ ಗೋಪಾಂಗನಾಗಣಃ ।
ಆವಿರ್ಬಭೂವ ರೂಪೇಣ ವೇಷೇಣೈವ ಚ ತತ್ಸಮಃ ॥ ೪೦ ॥

೩೬–೩೮. ಹಂಸಪಕ್ಷಿಯಂತೆ ಮನೋಹರವಾದ ನಡಿಗೆಯುಳ್ಳ ಆ ದೇವಿಯು ಶ್ರೇಷ್ಠರತ್ನಗಳಿಂದ ನಿರ್ಮಿತವಾದ ವನಮಾಲೆಯನ್ನೂ, ಮುತ್ತಿನಹಾರವನ್ನೂ, ರತ್ನದ ಭುಜಕೀರ್ತಿಗಳನ್ನೂ, ಹಸ್ತಾಭರಣಗಳನ್ನೂ, ಅಮೂಲ್ಯರತ್ನನಿರ್ಮಿತವಾದ ವಡ್ಯಾಣ ಮತ್ತು ಕಾಲುಸರಗಳನ್ನೂ, ಇನ್ನೂ ಅನೇಕ ವಿಧವಾದ ಸುಂದರಾಭರಣಗಳನ್ನೂ ಉಚಿತವಾಗಿ ಅವಯವಗಳಿಗೆ ತೊಟ್ಟು ಅತಿಮನೋಹರಳಾಗಿದ್ದಳು.

೩೯. ಆ ರಾಧಾದೇವಿಯು ಮಂದಹಾಸದಿಂದ ಶ್ರೀಕೃಷ್ಣಪರಮಾತ್ಮನ ವದನಾರವಿಂದವನ್ನು ನೋಡುತ್ತ ಅವನ ಅಪ್ಪಣೆ ಪಡೆದು ರತ್ನಸಿಂಹಾಸನದಲ್ಲಿ ಕುಳಿತಳು.

೪೦. ಕೂಡಲೇ ಆ ರಾಧೆಯ ರೋಮಕೂಪಗಳಿಂದ, ರೂಪ, ವೇಷ, ಭೂಷಣಗಳಲ್ಲಿ ಆಕೆಗೆ ಎಣೆಯಾದ ಅನೇಕ ಗೋಪಿಕಾಸ್ತ್ರೀಯರು ಆವಿರ್ಭವಿಸಿದರು.

ಲಕ್ಷಕೋಟೀ ಪರಿಮಿತಃ ಶಶ್ವತ್ ಸುಸ್ಥಿರಯೌವನಃ ।
ಸಂಖ್ಯಾವಿದ್ಭಿಶ್ಚ ಸಂಖ್ಯಾತೋ ಗೋಲೋಕೇ ಗೋಪಿಕಾಗಣಃ ॥ ೪೧ ॥

ಕೃಷ್ಣಸ್ಯ ಲೋಮಕೂಪೇಭ್ಯಃ ಸದ್ಯೋ ಗೋಪಗಣೋ ಮುನೇ ।
ಆವಿರ್ಬಭೂವ ರೂಪೇಣ ವೇಷೇಣೈವ ಚ ತತ್ಸಮಃ ॥ ೪೨ ॥

ತ್ರಿಂಶತ್ಕೋಟೀಪರಿಮಿತಃ ಕಮನೀಯೋ ಮನೋಹರಃ ।
ಸಂಖ್ಯಾವಿದ್ಭಿಶ್ಚ ಸಂಖ್ಯಾತೋ ವಲ್ಲವಾನಾಂ ಗಣಃ ಶ್ರುತೌ ॥ ೪೩ ॥

ಕೃಷ್ಣಸ್ಯ ಲೋಮಕೂಪೇಭ್ಯಃ ಸದ್ಯಶ್ಚಾವಿರ್ಬಭೂವ ಹ ।
ನಾನಾವರ್ಣೋ ಗೋಗಣಶ್ಚ ಶಶ್ವತ್ಸುಸ್ಥಿರಯೌವನಃ ॥ ೪೪ ॥

ಬಲೀವರ್ದಾಸ್ಸುರಭ್ಯಶ್ಚ ವತ್ಸಾ ನಾನಾವಿಧಾಃ ಶುಭಾಃ ।
ಅತೀವ ಲಲಿತಾ ಶ್ಯಾಮಾ ಬಹ್ವ್ಯೋ ವೈ ಕಾಮಧೇನವಃ ॥ ೪೫ ॥

---

೪೧. ಗಣಿತಜ್ಞರಿಂದ ಗುಣಿತವಾದಂತೆ ಲಕ್ಷಕೋಟಿಪರಿಮಿತಿಯುಳ್ಳ, ಸ್ಥಿರ ಯೌವನವತಿಯರಾದ ಗೋಪಿಕಾಸ್ತ್ರೀಯರೂ ರಾಧೆಯ ರೋಮಕೂಪಗಳಿಂದ ಅವತರಿಸಿದರು.

೪೨. ಎಲೈ ಮುನಿವರ್ಯನೇ, ಇತ್ತ ಶ್ರೀಕೃಷ್ಣಪರಮಾತ್ಮನ ರೋಮಕೂಪಗಳಿಂದ, ರೂಪ, ವೇಷ, ಭೂಷಣಗಳಲ್ಲಿ ಅವನಿಗೆ ಸಮರಾದ ಗೋಪರ ಸಮೂಹವು ಆವಿರ್ಭವಿಸಿತು.

೪೩. ಮನೋಹರವಾದ ಆ ಗೋಪರಸಮೂಹವು ಗಣಿತಜ್ಞರ ಲೆಕ್ಕದಂತೆ ಮೂವತ್ತುಕೋಟಿ ಪರಿಮಾಣವುಳ್ಳದ್ದಾಗಿದ್ದಿತ್ತು.

೪೪. ಅಂತೆಯೇ ಶ್ರೀಕೃಷ್ಣಪರಮಾತ್ಮನ ರೋಮಕೂಪಗಳಿಂದ ಸ್ಥಿರ ಯೌವನವುಳ್ಳ, ನಾನಾವರ್ಣದ ಗೋವುಗಳ ಸಮೂಹವು ಆವಿರ್ಭವಿಸಿತು.

೪೫. ಗೂಳಿಗಳು, ಹಸುಗಳು, ನಾನಾಬಣ್ಣದ ಕರುಗಳು ಮತ್ತು ಬಹಳ ಮನೋಹರವಾದ ಅನೇಕ ಕಾಮಧೇನುಗಳೂ ಕೂಡ ಶ್ರೀಕೃಷ್ಣಪರಮಾತ್ಮನ ರೋಮಕೂಪಗಳಿಂದ ಆವಿರ್ಭವಿಸಿದವು.

ತೇಷಾಮೇಕಂ ಬಲೀವರ್ದಂ ಕೋಟಿಸಿಂಹಸಮಂ ಬಲೇ |
ಶಿವಾಯ ಪ್ರದದೌ ಕೃಷ್ಣೋ ವಾಹನಾಯ ಮನೋಹರಂ || ೪೬ ||

ಕೃಷ್ಣಾಂಘ್ರಿನಖರಂಧ್ರೇಭ್ಯೋ ಹಂಸಪಂಕ್ತಿರ್ಮನೋಹರಾ |
ಆವಿರ್ಬಭೂವ ಸಹಸಾ ಸ್ತ್ರೀಪುಂವತ್ಸ ಸಮನ್ವಿತಾ || ೪೭ ||

ತೇಷಾಮೇಕಂ ರಾಜಹಂಸಂ ಮಹಾಬಲಪರಾಕ್ರಮಂ |
ವಾಹನಾಯ ದದೌ ಕೃಷ್ಣೋ ಬ್ರಹ್ಮಣೇ ಚ ತಪಸ್ವಿನೇ || ೪೮ ||

ವಾಮಕರ್ಣಸ್ಯ ವಿವರಾತ್ ಕೃಷ್ಣಸ್ಯ ಪರಮಾತ್ಮನಃ |
ಗಣಃ ಶ್ವೇತತುರಂಗಾಣಾಮಾವಿರ್ಭೂತೋ ಮನೋಹರಃ || ೪೯ ||

ತೇಷಾಮೇಕಂ ಚ ಶ್ವೇತಾಶ್ವಂ ಧರ್ಮಾರ್ಥಂ ವಾಹನಾಯ ಚ |
ದದೌ ಗೋಪಾಂಗನೇಶಶ್ಚ ಸಂಪ್ರೀತ್ಯಾ ಸುರಸಂಸದಿ || ೫೦ ||

ದಕ್ಷಕರ್ಣಸ್ಯ ವಿವರಾತ್ ಪುಂಸಶ್ಚ ಸುರಸಂಸದಿ |
ಆವಿರ್ಭೂತಾ ಸಿಂಹಪಂಕ್ತಿರ್ಮಹಾಬಲಪರಾಕ್ರಮಾ || ೫೧ ||

---

೪೬. ಅವುಗಳಲ್ಲಿ ಕೋಟಿಸಿಂಹಕ್ಕೆ ಸಮಾನ ಬಲವುಳ್ಳ ಒಂದು ಗೂಳಿಯನ್ನು ಶ್ರೀಕೃಷ್ಣನು ಶಿವನಿಗೆ ವಾಹನವಾಗಿ ಕೊಟ್ಟನು.

೪೭. ಶ್ರೀಕೃಷ್ಣನ ಪಾದಗಳ ನಖರಂಧ್ರದಿಂದ ಅನೇಕ ಹೆಣ್ಣುಗಂಡು ಮರಿಗಳೊಡಗೂಡಿದ, ಮನೋಹರವಾದ ಹಂಸಪಕ್ಷಿಗಳ ಸಾಲೊಂದು ಆವಿರ್ಭವಿಸಿತು.

೪೮. ಅವುಗಳಲ್ಲಿ ಹೆಚ್ಚು ಪರಾಕ್ರಮವುಳ್ಳ ರಾಜಹಂಸವೊಂದನ್ನು ತಪಸ್ವಿಯಾದ ಬ್ರಹ್ಮನಿಗೆ ವಾಹನವಾಗಿ ಕೊಟ್ಟನು.

೪೯. ಕೃಷ್ಣಪರಮಾತ್ಮನ ಎಡಗಿವಿಯ ರಂಧ್ರದಿಂದ ಮನೋಹರವಾದ ಶ್ವೇತಾಶ್ವಗಳ ಸಮೂಹವು ಆವಿರ್ಭವಿಸಿತು.

೫೦. ಅವುಗಳಲ್ಲಿ ಶ್ವೇತಾಶ್ವವೊಂದನ್ನು ಗೋಪಾಂಗನೆಯರ ವಲ್ಲಭನು ಪ್ರೀತಿಯಿಂದ ಆ ದೇವಸಭೆಯಲ್ಲಿ ಧರ್ಮಪುರುಷನಿಗೆ ವಾಹನವಾಗಿ ಕೊಟ್ಟನು.

೫೧. ಆ ದೇವಸಭೆಯಲ್ಲಿ ಪರಮಾತ್ಮನ ಬಲಗಿವಿಯ ರಂಧ್ರದಿಂದ ಹೆಚು ಬಲಪರಾಕ್ರಮವುಳ್ಳ ಸಿಂಹಗಳ ಸಾಲೊಂದು ಆವಿರ್ಭವಿಸಿತು.

ತೇಷಾಮೇಕಂ ದದೌ ಕೃಷ್ಣಃ ಪ್ರಕೃತ್ಯೈ ಪರಮಾದರಂ ।
ಅಮೂಲ್ಯರತ್ನಮಾಲ್ಯಂ ಚ ವರಂ ಯದಭಿವಾಂಛಿತಂ ॥ ೫೨ ॥

ಕೃಷ್ಣೋ ಯೋಗೇನ ಯೋಗೀಂದ್ರಶ್ಚಕಾರ ರಥಪಂಚಕಂ ।
ಶುದ್ಧರತ್ನೇಂದ್ರನಿರ್ಮಾಣಂ ಮನೋಯಾಯಿ ಮನೋಹರಂ ॥ ೫೩ ॥

ಲಕ್ಷಯೋಜನಮೂರ್ಧ್ವೇ ಚ ಪ್ರಸ್ಥೇ ಚ ಶತಯೋಜನಂ ।
ಲಕ್ಷಚಕ್ರಂ ವಾಯುರಂಹಃ ಲಕ್ಷಕ್ರೀಡಾಗೃಹಾನ್ವಿತಂ ॥ ೫೪ ॥

ಶೃಂಗಾರಾರ್ಹಂ ಭೋಗವಸ್ತುತಲ್ಪಾಸಂಖ್ಯಸಮನ್ವಿತಂ ।
ರತ್ನಪ್ರದೀಪಲಕ್ಷಾಣಾಂ ವಾಜಿಭಿಶ್ಚ ವಿರಾಜಿತಂ ॥ ೫೫ ॥

ನಾನಾಚಿತ್ರವಿಚಿತ್ರಾಢ್ಯಂ ಸದ್ರತ್ನಕಲಶೋಜ್ವಲಂ ।
ರತ್ನದರ್ಪಣಭೂಷಾಢ್ಯಂ ಶೋಭಿತಂ ಶ್ವೇತಚಾಮರೈಃ ॥ ೫೬ ॥

---

೫೨. ಶ್ರೀಕೃಷ್ಣಪರಮಾತ್ಮನು ಅವುಗಳಲ್ಲೊಂದು ಸಿಂಹವನ್ನೂ, ಅಮೂಲ್ಯವಾದ ರತ್ನಮಾಲೆಯನ್ನೂ, ಅಭೀಪ್ಸಿತವಾದ ವರವನ್ನೂ ಪ್ರಕೃತಿಗೆ ಅತ್ಯಾದರದಿಂದ ಕೊಟ್ಟನು.

೫೩. ಯೋಗಿಶ್ರೇಷ್ಠನಾದ ಪರಮಾತ್ಮನು ಯೋಗಶಕ್ತಿಯಿಂದ ಮನೋವೇಗದಲ್ಲಿ ಹೋಗುವ ಶುದ್ಧರತ್ನನಿರ್ಮಿತವಾದ ಐದು ಮನೋಹರ ರಥಗಳನ್ನು ಸೃಜಿಸಿದನು.

೫೪. ಆ ರಥಗಳು ಲಕ್ಷಯೋಜನ ಎತ್ತರವಾಗಿಯೂ, ಲಕ್ಷಯೋಜನ ವಿಸ್ತೀರ್ಣವಾಗಿಯೂ, ಲಕ್ಷಚಕ್ರಗಳಿಂದಲೂ, ಲಕ್ಷಕ್ರೀಡಾಮಂದಿರಗಳಿಂದಲೂ ಕೂಡಿ ವಾಯುವೇಗವುಳ್ಳದ್ದಾಗಿಯೂ ಇದ್ದವು.

೫೫. ಅಸಂಖ್ಯವಾದ ಭೋಗಸಾಮಗ್ರಿಗಳಿಂದಲೂ, ಶಯನಗಳಿಂದಲೂ, ಶೃಂಗಾರಸುಖಕ್ಕೆ ಅರ್ಹವಾಗಿಯೂ, ಲಕ್ಷರತ್ನದೀಪಗಳಿಂದ ವಿರಾಜಿತವಾಗಿಯೂ ಇದ್ದ ಆ ರಥಗಳಿಗೆ ಅಸಂಖ್ಯ ಕುದುರೆಗಳನ್ನು ಕಟ್ಟಿದ್ದಿತು.

೫೬. ಚಿತ್ರವಿಚಿತ್ರಗಳಿಂದಲಂಕೃತವಾಗಿ, ರತ್ನಕಲಶಗಳಿಂದಲೂ, ರತ್ನಗನ್ನಡಿಗಳಿಂದಲೂ ಸುಸಜ್ಜಿತವಾಗಿದ್ದ ಆ ರಥಗಳು ಶ್ವೇತಚಾಮರಗಳಿಂದ ಶೋಭಿಸುತ್ತಿದ್ದವು.

ವಹ್ನಿಶುದ್ಧಾಂಶುಕೈಶ್ಚಿತ್ರೈರ್ಮುಕ್ತಾಜಾಲೈರ್ವಿಭೂಷಿತಂ ।
ಪದ್ಮೇಂದ್ರಮುಕ್ತಾಮಾಣಿಕ್ಯಹೀರಹಾರವಿರಾಜಿತಂ　　॥ ೫೭ ॥

ಆರಕ್ತವರ್ಣರತ್ನೇಂದ್ರಸಾರನಿರ್ಮಾಣಕೃತ್ರಿಮೈಃ ।
ಪಂಕಜಾನಾಮಸಂಖ್ಯೈಶ್ಚ ಸುಂದರೈಶ್ಚ ಸುಶೋಭಿತಂ　　॥ ೫೮ ॥

ದದೌ ನಾರಾಯಣಾಯೈಕಂ ತೇಷಾಂ ಮಧ್ಯೇ ದ್ವಿಜೋತ್ತಮ ।
ಏಕಂ ದತ್ವಾ ರಾಧಿಕಾಯೈ ರರಕ್ಷಾಶೇಷಮಾತ್ಮನೇ　　॥ ೫೯ ॥

ಆವಿರ್ಬಭೂವ ಕೃಷ್ಣಸ್ಯ ಗುಹ್ಯದೇಶಾತ್ತತಃ ಪರಂ ।
ಪಿಂಗಲಶ್ಚ ಪುಮಾನೇಕಃ ಪಿಂಗಲೈಶ್ಚ ಗಣೈಸ್ಸಹ　　॥ ೬೦ ॥

ಆವಿರ್ಭೂತಾ ಯತೋ ಗುಹ್ಯಾತ್ತೇನ ತೇ ಗುಹ್ಯಕಾಸ್ಮೃತಾಃ ।
ಯಃ ಪುಮಾನ್ ಸ ಕುಬೇರಶ್ಚ ಧನೇಶೋ ಗುಹ್ಯಕೇಶ್ವರಃ　　॥ ೬೧ ॥

೫೭–೫೮. ಅಗ್ನಿಯಂತೆ ಪರಿಶುದ್ಧವಾದ ಚಿತ್ರವಸ್ತ್ರಗಳಿಂದಲೂ, ಮುತ್ತಿನ ಹಾರಗಳಿಂದಲೂ, ವಿಭೂಷಿತವಾಗಿ, ಮುತ್ತು, ಮಾಣಿಕ್ಯ, ವಜ್ರ ಮತ್ತು ರತ್ನದ ಹಾರಗಳಿಂದಲಂಕೃತವಾಗಿ, ಪದ್ಮರಾಗ ರತ್ನಗಳಿಂದ ನಿರ್ಮಿತವಾದ ಕೃತ್ರಿಮಕಮಲಗಳಿಂದ ಶೋಭಿತವಾಗಿ, ಆ ರಥಗಳು ಅತ್ಯಂತ ಮನೋಹರವಾಗಿದ್ದವು.

೫೯. ಎಲೈ ವಿಪ್ರೋತ್ತಮನೇ, ಆ ಐದು ರಥಗಳಲ್ಲಿ ನಾರಾಯಣನಿಗೊಂದನ್ನೂ, ರಾಧಾದೇವಿಗೊಂದನ್ನೂ ಕೊಟ್ಟು ಉಳಿದ ಮೂರು ರಥಗಳನ್ನು ಶ್ರೀಕೃಷ್ಣನು ತನಗಾಗಿ ಇಟ್ಟುಕೊಂಡನು.

೬೦. ಅನಂತರ ಕೃಷ್ಣಪರಮಾತ್ಮನ ಗುಹ್ಯಪ್ರದೇಶದಿಂದ ಹೊಂಬಣ್ಣವುಳ್ಳ ಪುರುಷನೊಬ್ಬನು ಪಿಂಗಳವರ್ಣದ ಗಣಗಳೊಡನೆ ಆವಿರ್ಭವಿಸಿದನು.

೬೧. ಗುಹ್ಯಪ್ರದೇಶದಿಂದ ಹೊರಬಂದರಾದ ಕಾರಣ ಅವರನ್ನು ಗುಹ್ಯಕರೆನ್ನುವರು. ಅವರಲ್ಲಿ ಪ್ರಧಾನನಾದ ಪುರುಷನೇ, ಧನಾಧಿಪತಿಯಾದ ಕುಬೇರನೆನಿಸಿದನು.

ಬಭೂವ ಕನ್ಯಕಾ ಚೈಕಾ ಕುಬೇರೇ ವಾಮಪಾರ್ಶ್ವತಃ ।
ಕುಬೇರಪತ್ನೀ ಸಾ ದೇವೀ ಸುಂದರೀಣಾಂ ಮನೋರಮಾ ॥ ೬೨ ॥

ಭೂತಪ್ರೇತಪಿಶಾಚಾಶ್ಚ ಕೂಷ್ಮಾಂಡಬ್ರಹ್ಮರಾಕ್ಷಸಾಃ ।
ವೇತಾಲಾವಿಕೃತಾಸ್ತಸ್ಯಾವಿರ್ಭೂತಾ ಗುಹ್ಯದೇಶತಃ ॥ ೬೩ ॥

ಶಂಖಚಕ್ರಗದಾಪದ್ಮಧಾರಿಣೋ ವನಮಾಲಿನಃ ।
ಪೀತವಸ್ತ್ರಪರೀಧಾನಾಃ ಸರ್ವೇ ಶ್ಯಾಮಚತುರ್ಭುಜಾಃ ॥ ೬೪ ॥

ಕಿರೀಟಿನಃ ಕುಂಡಲಿನೋ ರತ್ನಭೂಷಣಭೂಷಿತಾಃ ।
ಆವಿರ್ಭೂತಾಃ ಪಾರ್ಷದಾಶ್ಚ ಕೃಷ್ಣಸ್ಯ ಮುಖತೋ ಮುನೇ ॥ ೬೫ ॥

ಚತುರ್ಭುಜಾನ್ ಪಾರ್ಷದಾಂಶ್ಚ ದದೌ ನಾರಾಯಣಾಯ ಚ ।
ಗುಹ್ಯಕಾನ್ ಗುಹ್ಯಕೇಶಾಯ ಭೂತಾದೀನ್ ಶಂಕರಾಯ ಚ ॥ ೬೬ ॥

---

೬೨. ಆ ಕುಬೇರನ ವಾಮಭಾಗದಿಂದ ಸುಂದರವಾದ ಕನ್ಯಕೆಯೊಬ್ಬಳು ಆವಿರ್ಭವಿಸಿದಳು. ಆಕೆಯೇ ಕುಬೇರನ ಪತ್ನಿಯಾದ ಮನೋರಮೆಯು.

೬೩. ಆ ಕುಬೇರನ ಗುಹ್ಯಪ್ರದೇಶದಿಂದ, ಭೂತಪ್ರೇತಪಿಶಾಚರೂ, ಕೂಷ್ಮಾಂಡ ಬ್ರಹ್ಮರಾಕ್ಷಸರೂ, ವಿಕಾರವಾದ ವೇತಾಲಗಳೂ ಆವಿರ್ಭವಿಸಿದರು.

೬೪–೬೫. ಎಲೈ ಶೌನಕಮುನಿಯೇ, ಅನಂತರ ಶ್ರೀಕೃಷ್ಣನ ಮುಖದಿಂದ, ಶಂಖಚಕ್ರಗದಾಪದ್ಮಗಳನ್ನು ಚತುರ್ಭುಜಗಳಲ್ಲಿ ಧರಿಸಿ, ಕಂಠದಲ್ಲಿ ವನಮಾಲೆಯನ್ನು ಹಾಕಿಕೊಂಡು, ಪೀತಾಂಬರವನ್ನುಟ್ಟು, ಕಿರೀಟಕುಂಡಲಗಳನ್ನೂ, ರತ್ನಾಭರಣಗಳನ್ನೂ ತೊಟ್ಟಿದ್ದ ಮನೋಹರರಾದ ಪಾರ್ಷದರು ಆವಿರ್ಭವಿಸಿದರು.

೬೬. ಚತುರ್ಭುಜರಾದ ಪಾರ್ಷದರನ್ನು ನಾರಾಯಣನಿಗೂ, ಗುಹ್ಯಕರನ್ನು ಕುಬೇರನಿಗೂ, ಭೂತಾದಿಗಣಗಳನ್ನು ಶಂಕರನಿಗೂ, ಪರಮಾತ್ಮನು ಕೊಟ್ಟನು.

ದ್ವಿಭುಜಾಃ ಶ್ಯಾಮವರ್ಣಾಶ್ಚ ಜಪಮಾಲಾಕರಾ ವರಾಃ ।
ಧ್ಯಾಯಂತಶ್ಚರಣಾಂಭೋಜಂ ಕೃಷ್ಣಸ್ಯ ಸತತಂ ಮುದಾ ॥ ೬೭ ॥

ದಾಸ್ಯೇ ನಿಯುಕ್ತಾ ದಾಸಾಶ್ಚೈವಾರ್ಘ್ಯಮಾದಾಯ ಯತ್ನತಃ ।
ಆವಿರ್ಭೂತಾ ವೈಷ್ಣವಾಶ್ಚ ಸರ್ವೇ ಕೃಷ್ಣಪರಾಯಣಾಃ ॥ ೬೮ ॥

ಪುಲಕಾಂಕಿತಸರ್ವಾಂಗಾಃ ಸಾಶ್ರುನೇತ್ರಾಃ ಸಗದ್ಗದಾಃ ।
ಆವಿರ್ಭೂತಾಃ ಪಾದಪದ್ಮಾತ್ ಪಾದಪದ್ಮೈಕಮಾನಸಾಃ ॥ ೬೯ ॥

ಆವಿರ್ಬಭೂವುಃ ಕೃಷ್ಣಸ್ಯ ದಕ್ಷನೇತ್ರಾದ್ಭಯಂಕರಾಃ ।
ತ್ರಿಶೂಲಪಟ್ಟಿಶಧರಸ್ತ್ರಿನೇತ್ರಾಶ್ಚಂದ್ರಶೇಖರಾಃ ॥ ೭೦ ॥

ದಿಗಂಬರಾ ಮಹಾಕಾಯಾ ಜ್ವಲದಗ್ನಿಶಿಖೋಪಮಾಃ ।
ತೇ ಭೈರವಾ ಮಹಾಭಾಗಾಃ ಶಿವತುಲ್ಯಾಶ್ಚ ತೇಜಸಾ ॥ ೭೧ ॥

ರುರುಸಂಹಾರಕಾಲಾಖ್ಯಾ ಅಸಿತಕ್ರೋಧಭೀಷಣಾಃ ।
ಮಹಾಭೈರವಖಟ್ವಾಂಗಾವಿತ್ಯಷ್ಟೌ ಭೈರವಾಃ ಸ್ಮೃತಾಃ ॥ ೭೨ ॥

೬೭-೬೯. ಶ್ಯಾಮವರ್ಣರೂ, ದ್ವಿಭುಜರೂ ಆಗಿ ಕೈಯಲ್ಲಿ ಜಪಮಾಲೆಯನ್ನು ಹಿಡಿದು ಸರ್ವದಾ ಶ್ರೀಕೃಷ್ಣಪರಮಾತ್ಮನ ಪಾದಪದ್ಮಗಳನ್ನು ಮುದದಿಂದ ಧ್ಯಾನಿಸುತ್ತ ಪರಮಾತ್ಮನ ಸೇವೆಗಾಗಿ ಪೂಜಾಸಾಮಗ್ರಿಗಳನ್ನು ಪ್ರಯತ್ನಪೂರ್ವಕವಾಗಿ ತಂದು ರೋಮಾಂಚಿತಶರೀರವುಳ್ಳವರೂ, ಆನಂದಾಶ್ರುಪೂರಿತಲೋಚನರೂ ಆಗಿ ಗದ್ಗದ ಕಂಠದಿಂದ ಆತನನ್ನು ಸ್ತುತಿಸುತ್ತಿದ್ದ ವಿಷ್ಣುಭಕ್ತರು ಪರಮಾತ್ಮನ ಪಾದಕಮಲದಿಂದ ಆವಿರ್ಭವಿಸಿದರು.

೭೦-೭೧. ಕೃಷ್ಣಪರಮಾತ್ಮನ ಬಲಗಣ್ಣಿನಿಂದ ದಿಗಂಬರರೂ, ದೀರ್ಘಕಾಯರೂ, ಅಗ್ನಿಜ್ವಾಲೆಯಂತೆ ತೇಜಸ್ವಿಗಳೂ, ಶಿವನಿಗೆ ಸಮಾನರೂ ಆದ ಎಂಟು ಜನ ಭೈರವರು ಆವಿರ್ಭವಿಸಿದರು. ಅವರು ಕೈಯಲ್ಲಿ ಧರಿಸಿರುವ ತ್ರಿಶೂಲ, ಪಟ್ಟಿಶ ಮುಂತಾದ ಆಯುಧಗಳಿಂದಲೂ, ಮುಖದಲ್ಲಿರುವ ಮೂರು ಕಣ್ಣುಗಳಿಂದಲೂ, ತಲೆಯಲ್ಲಿರುವ ಚಂದ್ರನಿಂದಲೂ ನೋಡಲು ಭಯಂಕರರಾಗಿದ್ದರು.

೭೨. ಆ ಎಂಟುಜನ ಭೈರವರು ಕ್ರಮವಾಗಿ ರುರು, ಸಂಹಾರ, ಕಾಲ, ಅಸಿತ, ಕ್ರೋಧ, ಭೀಷಣ, ಮಹಾ ಮತ್ತು ಖಟ್ವಾಂಗ ಎಂಬ ಉಪಪದದಿಂದ ಪ್ರಸಿದ್ಧರಾದರು. (ರುರುಭೈರವ, ಸಂಹಾರಭೈರವ ಇತ್ಯಾದಿ.)

ಆವಿರ್ಬಭೂವ ಕೃಷ್ಣಸ್ಯ ವಾಮನೇತ್ರಾದ್ಭಯಂಕರಃ ।
ತ್ರಿಶೂಲಪಟ್ಟಿಶವ್ಯಾಘ್ರಚರ್ಮಾಂಬರಗದಾಧರಃ ॥ ೭೩ ॥

ದಿಗಂಬರೋ ಮಹಾಕಾಯಸ್ತ್ರಿಣೇತ್ರಶ್ಚಂದ್ರಶೇಖರಃ ।
ಸ ಈಶಾನೋ ಮಹಾಭಾಗೋ ದಿಕ್ಪಾಲಾನಾಮಧೀಶ್ವರಃ ॥ ೭೪ ॥

ಡಾಕಿನ್ಯಶ್ಚೈವ ಯೋಗಿನ್ಯಃ ಕ್ಷೇತ್ರಪಾಲಾಃ ಸಹಸ್ರಶಃ ।
ಆವಿರ್ಬಭೂವುಃ ಕೃಷ್ಣಸ್ಯ ನಾಸಿಕಾವಿವರೋದರಾತ್ ॥ ೭೫ ॥

ಸುರಾಸ್ತ್ರಿಕೋಟಿಸಂಖ್ಯಾತಾ ದಿವ್ಯಮೂರ್ತಿಧರಾ ವರಾಃ ।
ಆವಿರ್ಬಭೂವುಃ ಸಹಸಾ ಪುಂಸೋ ವೈ ಪೃಷ್ಠದೇಶತಃ ॥ ೭೬ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಸೌತಿಶೌನಕ ಸಂವಾದೇ
ಸೃಷ್ಟಿನಿರೂಪಣೇ ಬ್ರಹ್ಮಖಂಡೇ ಪಂಚಮೋಽಧ್ಯಾಯಃ

೭೩–೭೪. ಅನಂತರ ಕೃಷ್ಣಪರಮಾತ್ಮನ ಎಡಗಣ್ಣಿನಿಂದ ತ್ರಿಶೂಲ, ಪಟ್ಟಿಶ, ಗದೆ ಮುಂತಾದ ಆಯುಧಗಳನ್ನು ಧರಿಸಿ, ವ್ಯಾಘ್ರಚರ್ಮವನ್ನುಟ್ಟು ದೀರ್ಘಕಾಯನೂ, ತ್ರಿಯನನೂ ಆದ ಪುರುಷನೊಬ್ಬನು ಆವಿರ್ಭಸಿದನು. ತಲೆಯಲ್ಲಿ ಬಾಲಚಂದ್ರನನ್ನು ಧರಿಸಿದ್ದ ಆ ಮಹಾತ್ಮನೇ ದಿಕ್ಪಾಲಕರಿಗೊಡೆಯನಾದ ಈಶಾನನೆನಿಸಿದನು.

೭೫. ಸಹಸ್ರಾರು ಸಂಖ್ಯೆಯಲ್ಲಿ ಡಾಕಿನಿ, ಯೋಗಿನಿಯರೂ ಮತ್ತು ಕ್ಷೇತ್ರಪಾಲರೂ ಕೃಷ್ಣಪರಮಾತ್ಮನ ನಾಸಿಕಾರಂಧ್ರದಿಂದ ಆವಿರ್ಭವಿಸಿದರು.

೭೬. ದಿವ್ಯಸುಂದರಾಕಾರವುಳ್ಳ ಮೂರುಕೋಟಿ ದೇವತೆಗಳು ಪರಮಾತ್ಮನ ಬೆನ್ನಿನಿಂದ ಜಾಗ್ರತೆಯಾಗಿ ಆವಿರ್ಭವಿಸಿದರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಬ್ರಹ್ಮಖಂಡದಲ್ಲಿ "ಸೃಷ್ಟಿ ನಿರೂಪಣಾತ್ಮಕವಾದ" ಐದನೆಯ ಅಧ್ಯಾಯವು ಮುಗಿದುದು.

ಐದನೆಯ ಅಧ್ಯಾಯದ ಸಾರಾಂಶವು

ಗೋಲೋಕದಲ್ಲಿರುವ ಗೋವುಗಳು ಮತ್ತು ಗೋಪಗೋಪಿಯರು ಪರಮಾತ್ಮನಂತೆ ನಿತ್ಯರೇ? ಅಥವಾ ಅನಿತ್ಯರೇ? ಎಂದು ಶೌನಕರು ಕೇಳಲು, 'ಅವರೆಲ್ಲರೂ ಸೃಷ್ಟಿಯಲ್ಲಿ ನಿಯತವಾಗಿದ್ದು, ಪ್ರಳಯವಾದಾಗ ಪರಮಾತ್ಮನಲ್ಲಿ ಐಕ್ಯವಾಗುವರು' ಎಂದು ಹೇಳುತ್ತ ಸೂತಪುತ್ರರು ಕಲ್ಪಾದಿಗಳನ್ನು ವಿವರಿಸತೊಡಗಿದರು. ಬ್ರಾಹ್ಮ, ವಾರಾಹ ಮತ್ತು ಪಾದ್ಮನೆಂದು ಮೂರು ಕಲ್ಪಗಳುಂಟು. ಸತ್ಯ, ತ್ರೇತಾ, ದ್ವಾಪರ ಮತ್ತು ಕಲಿಯೆಂದು ಯುಗಗಳು ನಾಲ್ಕು. ಈ ಯುಗಗಳು ಮುನ್ನೂರ ಅರವತ್ತು ಸಾರಿ ಮರಳಿದರೆ, ದೇವತೆಗಳಿಗೊಂದು ಯುಗವಾಗುವುದು. ದೇವತೆಗಳ ಎಪ್ಪತ್ತೊಂದು ಯುಗಗಳಿಗೆ ಒಂದು ಮನ್ವಂತರವೆನ್ನುವರು. ಇಂಥ ಹದಿನಾಲ್ಕು ಮನ್ವಂತರಗಳು ಕಳೆದರೆ ಬ್ರಹ್ಮನಿಗೊಂದು ಹಗಲಾಗುವುದು. ಈ ರೀತಿಯಾದ ಮುನ್ನೂರ ಅರವತ್ತು ದಿವಸಗಳಾದರೆ ಬ್ರಹ್ಮನಿಗೆ ಒಂದು ವರ್ಷವಾಗುವುದು. ಹೀಗೆ ನೂರೆಂಟು ವರ್ಷಗಳು ಬ್ರಹ್ಮನ ಆಯುಃಪರಿಮಿತಿ. ಇದನ್ನೇ ಬ್ರಾಹ್ಮಕಲ್ಪವೆನ್ನುವರು. ಬ್ರಹ್ಮನ ಒಂದು ಹಗಲಿಗೆ ಸಮನಾದ ಕೆಲವು ಕ್ಷುದ್ರಕಲ್ಪಗಳುಂಟು. ಈ ರೀತಿಯಾದ ಏಳು ಕಲ್ಪಗಳ ಕಾಲ ಜೀವಿಸುವುದರಿಂದ ಮಾರ್ಕಂಡೇಯನನ್ನು ಚಿರಾಯುವೆನ್ನುವರು.

ಬ್ರಾಹ್ಮಕಲ್ಪದಲ್ಲಿ ಮಧುಕೈಟಭರ ಮೇದಸ್ಸಿನಿಂದ ಮೇದಿನಿಯ ಸೃಷ್ಟಿಯಾಗುವುದು. ವರಾಹಕಲ್ಪದಲ್ಲಿ ವರಾಹಾವತಾರಿಯಾದ ವಿಷ್ಣುವು ಪಾತಾಳದಲ್ಲಿ ಮುಳುಗಿರುವ ಭೂಮಿಯನ್ನು ಮೇಲಕ್ಕೆತ್ತುವನು. ಪಾದ್ಮಕಲ್ಪದಲ್ಲಿ ವಿಷ್ಣುವಿನ ನಾಭಿಕಮಲದಿಂದ ಸೃಷ್ಟಿಯಾರಂಭವಾಗುವುದು.

ಬ್ರಹ್ಮಾದಿದೇವತೆಗಳ ಸೃಷ್ಟಿಯಾದನಂತರ ಶ್ರೀಕೃಷ್ಣಪರಮಾತ್ಮನು ಎಲ್ಲ ದೇವತೆಗಳೊಡಗೂಡಿ ಗೋಲೋಕದ ರಾಸಮಂಡಲಕ್ಕೆ ಹೋಗಿ ಕುಳಿತನು. ಆಗ ಪರಮಾತ್ಮನ ವಾಮಭಾಗದಿಂದ ರಾಧಾದೇವಿಯೂ, ಆಕೆಯ ರೋಮಕೂಪಗಳಿಂದ ಅನೇಕ ಗೋಪಿಕಾಸ್ತ್ರೀಯರೂ ಆವಿರ್ಭವಿಸಿದರು. ಅಂತೆಯೇ ಶ್ರೀಕೃಷ್ಣನ ರೋಮಕೂಪಗಳಿಂದ ಅಸಂಖ್ಯಗೋಪರೂ, ಹಸುಕರುಗಳೂ, ಗೂಳಿಗಳೂ ಆವಿರ್ಭವಿಸಿದರು.

ಪರಮಾತ್ಮನು ಅವುಗಳಲ್ಲುತ್ತಮವಾದ ಗೂಳಿಯೊಂದನ್ನು ಶಂಕರನಿಗೆ ವಾಹನವಾಗಿ ಕೊಟ್ಟನು. ಪರಮಾತ್ಮನ ಉಗುರುಸಂದಿನಲ್ಲಿ ಹುಟ್ಟಿದ ಅನೇಕ ಹಂಸಗಳಲ್ಲಿ ಉತ್ತಮವಾದುದೊಂದನ್ನು ಬ್ರಹ್ಮನಿಗೂ, ಎಡಗಿವಿಯಿಂದ ಹುಟ್ಟಿಬಂದ ಕುದುರೆ ಗಳಲ್ಲೊಂದನ್ನು ಧರ್ಮಪುರುಷನಿಗೂ, ಬಲಗಿವಿಯಿಂದ ಹೊರಬಂದ ಸಿಂಹ ಗಳಲ್ಲೊಂದನ್ನು ಪ್ರಕೃತಿದೇವಿಗೂ ವಾಹನವಾಗಿ ಕೊಟ್ಟನು. ಅನಂತರ ಯೋಗ ಶಕ್ತಿಯಿಂದ ಐದು ರಥಗಳನ್ನು ಸೃಜಿಸಿ ಒಂದನ್ನು ನಾರಾಯಣನಿಗೂ, ಮತ್ತೊಂದನ್ನು ರಾಧಾದೇವಿಗೂ ಕೊಟ್ಟನು. ಅನಂತರ ಪರಮಾತ್ಮನ ಗುಹ್ಯಪ್ರದೇಶದಿಂದ ಗುಹ್ಯಕರೂ ಅವರ ಅಧಿಪತಿಯಾದ ಕುಬೇರನೂ, ಕುಬೇರನ ವಾಮಭಾಗದಿಂದ ಅವನ ಪತ್ನಿ ಯಾದ ಮನೋರಮೆಯೂ, ಅವನ ಗುಹ್ಯಪ್ರದೇಶದಿಂದ ಭೂತ, ಪ್ರೇತ ಪಿಶಾಚಾದಿ ಗಳೂ ಆವಿರ್ಭವಿಸಿದರು. ಪರಮಾತ್ಮನ ಮುಖದಿಂದ ಆವಿರ್ಭವಿಸಿದ ಚತುರ್ಭುಜ ರನ್ನೂ, ಪಾರ್ಷದರನ್ನೂ ನಾರಾಯಣನಿಗೆ ಕೊಟ್ಟನು. ಹಾಗೆಯೇ ಕುಬೇರನಿಗೆ ಗುಹ್ಯಕರನ್ನೂ, ಮಹಾದೇವನಿಗೆ ಭೂತಗಣವನ್ನೂ ಕೊಟ್ಟನು. ಅನಂತರ ಪರಮಾತ್ಮನ ಪಾದಪದ್ಮದಿಂದ ವಿಷ್ಣುಭಕ್ತರೂ, ಬಲಗಣ್ಣಿನಿಂದ ಅಷ್ಟಭೈರವರೂ, ಎಡಗಣ್ಣಿನಿಂದ ಈಶಾನನೂ, ನಾಸಿಕಾರಂಧ್ರದಿಂದ ಡಾಕಿನಿ ಶಾಕಿನಿಯರೂ, ಬೆನ್ನಿನಿಂದ ಮೂರುಕೋಟಿ ದೇವತೆಗಳೂ ಆವಿರ್ಭವಿಸಿದರು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಷಷ್ಠೋಽಧ್ಯಾಯಃ ॥

॥ ಸೌತಿರುವಾಚ ॥

ಅಥ ಕೃಷ್ಣೋ ಮಹಾಲಕ್ಷ್ಮೀಂ ಸಾದರಂ ಚ ಸರಸ್ವತೀಂ ।
ನಾರಾಯಣಾಯ ಪ್ರದದೌ ರತ್ನೇಂದ್ರಂ ಮಾಲಯಾ ಸಹ ॥ ೧ ॥

ಸಾವಿತ್ರೀಂ ಬ್ರಹ್ಮಣೇ ಪ್ರಾದಾನ್ಮೂರ್ತಿಂ ಧರ್ಮಾಯ ಸಾದರಂ ।
ರತಿಂ ಕಾಮಾಯ ರೂಪಾಢ್ಯಾಂ ಕುಬೇರಾಯ ಮನೋರಮಾಂ ॥ ೨ ॥

ಅನ್ಯಾಶ್ಚ ಯಾಯಾ ಅನ್ಯೇಭ್ಯೋ ಯಾಶ್ಚ ಯೇಭ್ಯಃ ಸಮುದ್ಭವಾಃ ।
ತಸ್ಮೈ ತಸ್ಮೈ ದದೌ ಕೃಷ್ಣಸ್ತಾಂ ತಾಂ ರೂಪವತೀಂ ಸತೀಂ ॥ ೩ ॥

೧-೩. ಮೇಲೆ ಹೇಳಿದ ಸೃಷ್ಟಿಯಾದ ನಂತರ ಕೃಷ್ಣಪರಮಾತ್ಮನು ಮಹಾಲಕ್ಷ್ಮಿಯನ್ನೂ, ಸರಸ್ವತೀದೇವಿಯನ್ನೂ, ಒಂದು ರತ್ನಮಾಲೆಯನ್ನೂ ನಾರಾಯಣನಿಗೆ ಆದರಪೂರ್ವಕವಾಗಿ ಅನುಗ್ರಹಿಸಿದನು. ಸಾವಿತ್ರೀದೇವಿಯನ್ನು ಬ್ರಹ್ಮದೇವನಿಗೂ, ಮೂರ್ತಿದೇವಿಯನ್ನು ಧರ್ಮದೇವನಿಗೂ, ಮನೋರಮೆಯನ್ನು ಕುಬೇರನಿಗೂ, ರೂಪವತಿಯಾದ ರತೀದೇವಿಯನ್ನು ಮನ್ಮಥನಿಗೂ, ಹಾಗೆಯೇ ಯಾವ ಯಾವ ದೇವಿಯರು ಯಾರ ಯಾರ ಅವಯವದಿಂದ ಜನಿಸಿದರೋ, ಅವರನ್ನು ಆಯಾಯ ಪುರುಷನಿಗೂ ದಯಪಾಲಿಸಿದನು.

ತತಃ ಶಂಕರಮಾಹೂಯ ಸರ್ವೇಶೋ ಯೋಗಿನಾಂ ಗುರುಂ ।
ಉವಾಚ ಪ್ರಿಯಮಿತ್ಯೇವಂ ಗೃಹ್ಣೀಯೋಃ ಸಿಂಹವಾಹಿನೀಂ ॥ ೪ ॥

ಶ್ರೀಕೃಷ್ಣಸ್ಯ ವಚಃ ಶ್ರುತ್ವಾ ಪ್ರಹಸನ್ನೀಲಲೋಹಿತಃ ।
ಉವಾಚ ಭೀತಃ ಪ್ರಣತಃ ಪ್ರಾಣೇಶಂ ಪ್ರಭುಮಚ್ಯುತಂ ॥ ೫ ॥

॥ ಶ್ರೀ ಮಹೇಶ್ವರ ಉವಾಚ ॥

ಅಧುನಾಹಂ ನ ಗೃಹ್ಣಾಮಿ ಪ್ರಕೃತಿಂ ಪ್ರಾಕೃತೋ ಯಥಾ ।
ತ್ವದ್ಭಕ್ತ್ಯೈಕವ್ಯವಹಿತಾಂ ದಾಸ್ಯಮಾರ್ಗವಿರೋಧಿನೀಂ ॥ ೬ ॥

ತತ್ವಜ್ಞಾನಸಮಾಚ್ಛನ್ನಾಂ ಯೋಗದ್ವಾರಕಪಾಟಿಕಾಂ ।
ಮುಕ್ತೀಚ್ಛಾಧ್ವಂಸರೂಪಾಂ ಚ ಸಕಾಮಾಂ ಕಾಮವರ್ಧಿನೀಂ ॥ ೭ ॥

ತಪಸ್ಯಾಚ್ಛನ್ನರೂಪಾಂ ಚ ಮಹಾಮೋಹಕರಂಡಿಕಾಂ ।
ಭವಕಾರಾಗೃಹೇ ಘೋರೇ ದೃಢಾಂ ನಿಗಡರೂಪಿಣೀಂ ॥ ೮ ॥

---

೪. ಅನಂತರ ಯೋಗಿಶ್ರೇಷ್ಠನಾದ ಶಂಕರನನ್ನು ಕರೆದು ಸಿಂಹವಾಹಿನಿಯಾದ ದುರ್ಗಾದೇವಿಯನ್ನು ಸ್ವೀಕರಿಸಬೇಕೆಂದು ಸರ್ವೇಶ್ವರನು ಹಿತನುಡಿಯಾಡಿದನು.

೫. ಶ್ರೀಕೃಷ್ಣಪರಮಾತ್ಮನ ಮಾತನ್ನು ಕೇಳಿ ನಸುನಗುತ್ತಾ ಮಹಾದೇವನು ಪರಮಾತ್ಮನಿಗೆರಗಿ ಬಹಳ ಭಯ ಸಂಕೋಚಗಳಿಂದ ನಾಶರಹಿತನಾದ ಅವನನ್ನು ಕುರಿತು ಕೆಲವು ಮಾತನ್ನಾಡಿದನು.

೬–೧೦. ಮಹೇಶ್ವರ:—ಪ್ರಾಕೃತಳಾದ ಈ ಪ್ರಕೃತಿದೇವಿಯನ್ನು ಸ್ವೀಕರಿಸಿದೆನಾದರೆ ನಾನೂ ಪ್ರಾಕೃತನಾಗುವೆನು. ಆಕೆಯು ಪರಮಾತ್ಮನ ಭಕ್ತಿಮಾರ್ಗದಲ್ಲಿ ಅಡ್ಡಿಯಾಗುವಳು. ಅವಳ ಮನಸ್ಸು ಸೇವೆಯಲ್ಲಿ ಒಲಿಯದು. ಆಕೆಗೆ ತತ್ವಜ್ಞಾನವು ತಿಳಿಯದು. ಯೋಗಮಾರ್ಗವು ಮೊದಲೇ ತಿಳಿಯದು. ನನಗಿರುವ ಮೋಕ್ಷೇಚ್ಛೆಯನ್ನೂ ಧ್ವಂಸಗೊಳಿಸುವಳು. ತಾನೂ ಆಶಾಪೂರ್ಣಳಲ್ಲದೆ ನನಗೂ ಆಶಾಜನಕಳಾಗುವಳು. ತಪಸ್ಸನ್ನು ಅರಿಯಳವಳು. ನನ್ನನ್ನು ಅಜ್ಞಾನಾಂಧಕಾರದಲ್ಲಿ ಮುಳುಗಿಸಬಲ್ಲ ಮಾಯೆಯುವಳು. ಸಂಸಾರವೆಂಬ ಕಾರಾಗೃಹದಲ್ಲಿ ನನಗೆ ನಿಗಡ ಬಂಧನ ಮಾಡಿಡಬಲ್ಲಳು. ಒಂದೊಂದು ವೇಳೆ ಸದ್ಬುದ್ಧಿಯನ್ನು ತಪ್ಪಿಸಿ ಚಂಚಲ

ಶಶ್ವದ್ದ್ವಿಬುದ್ಧಿ ಜನನೀಂ ಸದ್ಬುದ್ಧಿ ಚ್ಛೇದಕಾರಿಣೀಂ ।
ಶಶ್ವದ್ದ್ವಿಭೋಗಸಾರಾಂ ಚ ವಿಷಯೇಚ್ಛಾವಿವರ್ಧಿನೀಂ ॥ ೯ ॥

ನೇಚ್ಛಾಮಿ ಗೃಹಿಣೀಂ ನಾಥ ವರಂ ದೇಹಿ ಮದೀಪ್ಸಿತಂ ।
ಯಸ್ಯ ಯದ್ವಾಞ್ಛಿತಂ ತಸ್ಮೈ ತದ್ದದಾತಿ ಸದೀಶ್ವರಃ ॥ ೧೦ ॥

ತ್ವದ್ಭಕ್ತಿ ವಿಷಯೇ ದಾಸ್ಯೇ ಲಾಲಸಾ ವರ್ಧತೇಽನಿಶಂ ।
ತೃಪ್ತಿರ್ನ ಜಾಯತೇ ನಾಮಜಪನೇ ಪಾದಸೇವನೇ ॥ ೧೧ ॥

ತ್ವನ್ನಾಮ ಪಂಚವಕ್ತ್ರೇಣ ಗುಣಂ ಸನ್ಮಙ್ಗಲಾಲಯಂ ।
ಸ್ವಪ್ನೇ ಜಾಗರಣೇ ಶಶ್ವದ್ಗಾಯನ್ ಗಾಯನ್ಭ್ರಮಾಮ್ಯಹಂ ॥ ೧೨ ॥

ಆಕಲ್ಪಕಲ್ಪಕೋಟಿಂ ಚ ತ್ವದ್ರೂಪಧ್ಯಾನತತ್ಪರಂ ।
ಭೋಗೇಚ್ಛಾವಿಷಯೇ ನೈವ ಯೋಗೇ ತಪಸಿ ಮನ್ಮನಃ ॥ ೧೩ ॥

ತ್ವತ್ಸೇವನೇ ಪೂಜನೇ ಚ ವಂದನೇ ನಾಮಕೀರ್ತನೇ ।
ಸದೋಲ್ಲಸಿತಮೇಷಾಂ ಚ ವಿರತೌ ವಿರತಿಂ ಲಭೇತ್ ॥ ೧೪ ॥

ಬುದ್ಧಿಯನ್ನು ಹುಟ್ಟಿಸುವಳು. ವಿಷಯಸುಖಗಳಲ್ಲಿ ಅಭಿಲಾಷೆಯನ್ನು ಅಭಿವೃದ್ಧಿಗೊಳಿಸುವಳು. ಆದ್ದರಿಂದ ಎಲೈ, ಪರಮಾತ್ಮನೇ, ನನಗೆ ಆಕೆಯು ಗೃಹಿಣಿಯಾಗಬೇಕೆಂಬ ಇಚ್ಛೆಯಿಲ್ಲ. ಪ್ರಕೃತದಲ್ಲಿ ನಾನು ಬಯಸುವ ವರವನ್ನು ನನಗೆ ದಯಪಾಲಿಸು. ಭಕ್ತರು ಬಯಸಿದ ಬಯಕೆಗಳನ್ನು ಪೂರೈಸುವುದು ಪರಮಾತ್ಮನ ಕರ್ತವ್ಯವಲ್ಲವೆ.

೧೧-೧೪. ನನಗಾದರೋ ನಿನ್ನಲ್ಲಿ ಅಚಲವಾದ ಭಕ್ತಿಯೂ, ಸೇವೆಮಾಡಬೇಕೆಂಬ ಇಚ್ಛೆಯೂ, ಪ್ರತಿಕ್ಷಣದಲ್ಲಿಯೂ ಹೆಚ್ಚುತ್ತಿದೆ. ನಿನ್ನ ದಿವ್ಯನಾಮಗಳನ್ನು ಎಷ್ಟು ಜಪಿಸಿದರೂ, ನಿನ್ನ ಪಾದಸೇವೆಯನ್ನು ಇನ್ನೆಷ್ಟು ಮಾಡಿದರೂ ನನಗೆ ತೃಪ್ತಿಯಿಲ್ಲ. ನಿನ್ನ ದಿವ್ಯಮಂಗಳ ನಾಮವನ್ನೂ, ಗುಣವನ್ನೂ ಸ್ವಪ್ನದಲ್ಲೂ, ಜಾಗ್ರದವಸ್ಥೆಯಲ್ಲೂ ನನ್ನ ಐದು ಬಾಯಿಗಳಿಂದ ಜಪಿಸುತ್ತಾ ಅಲೆಯುತ್ತಿದ್ದೇನೆ. ಎಷ್ಟೋ ಕೋಟಿಕಲ್ಪಗಳಿಂದ ನಿನ್ನ ರೂಪವನ್ನು ಧ್ಯಾನಮಾಡುತ್ತಲಿರುವ ನನ್ನ ಮನಸ್ಸು, ಸಂಸಾರ ಭೋಗದಲ್ಲಿ ಒಲಿಯಲೊಲ್ಲದು. ಯೋಗಾಭ್ಯಾಸಮಾಡುವುದರಲ್ಲೂ, ತಪಸ್ಸುಮಾಡುವುದರಲ್ಲೂ, ನನಗೆ ಬಹಳ ಇಚ್ಛೆ. ಅಷ್ಟೇ ಅಲ್ಲ. ನಿನ್ನ ಸೇವೆ ಪೂಜೆಗಳಲ್ಲಿಯೂ, ನಿನ್ನನ್ನು ವಂದಿಸುವುದರಲ್ಲಿಯೂ, ನಿನ್ನ ದಿವ್ಯನಾಮ ಸಂಕೀರ್ತನದಲ್ಲಿಯೂ, ಯಾವಾಗಲೂ ನನ್ನ ಮನಸ್ಸು ತೊಡಗಿರುವುದು.

ಸ್ಮರಣಂ ಕೀರ್ತನಂ ನಾಮಗುಣಯೋಃ ಶ್ರವಣಂ ಜಪಃ ।
ತ್ವಚ್ಚಾರುರೂಪಧ್ಯಾನಂ ತ್ವತ್ಪಾದಸೇವಾಭಿವಂದನಂ ॥ ೧೫ ॥

ಸಮರ್ಪಣಂ ಚಾತ್ಮನಶ್ಚ ನಿತ್ಯಂ ನೈವೇದ್ಯಭೋಜನಂ ।
ವರಂ ವರೇಶ ದೇಹೀದಂ ನವಧಾ ಭಕ್ತಿಲಕ್ಷಣಂ ॥ ೧೬ ॥

ಸಾರ್ಷ್ಟಿಸಾಲೋಕ್ಯಸಾರೂಪ್ಯಸಾಮೀಪ್ಯಂ ಸಾಮ್ಯಲೀನತಾಂ ।
ವದಂತಿ ಷಡ್ವಿಧಾಂ ಮುಕ್ತಿಂ ಮುಕ್ತಾಮುಕ್ತಿವಿದೋ ವಿಭೋ ॥ ೧೭ ॥

ಅಣಿಮಾ ಲಘಿಮಾ ಪ್ರಾಪ್ತಿಃ ಪ್ರಾಕಾಮ್ಯಂ ಮಹಿಮಾ ತಥಾ ।
ಈಶಿತ್ವಂ ಚ ವಶಿತ್ವಂ ಚ ಸರ್ವಕಾಮಾವಸಾಯಿತಾ । ೧೮ ॥

ಸರ್ವಜ್ಞದೂರಶ್ರವಣಂ ಪರಕಾಯಪ್ರವೇಶನಂ ।
ವಾಕ್ಸಿದ್ಧಿಃ ಕಲ್ಪವೃಕ್ಷತ್ವಂ ಸ್ರಷ್ಟುಂ ಸಂಹರ್ತುಮೀಶತಾ ॥ ೧೯ ॥

೧೫–೧೬. ಎಲೈ ವರದಾತನೇ! ಪರಮಾತ್ಮನ ದಿವ್ಯನಾಮವನ್ನು ಸ್ಮರಿಸುವುದು, ದಿವ್ಯಗುಣಗಳನ್ನು ಕೇಳುವುದು, ಜಪಮಾಡುವುದು, ದಿವ್ಯಮಂಗಳರೂಪವನ್ನು ಧ್ಯಾನಮಾಡುವುದು, ಪಾದಸೇವೆಯನ್ನು ಮಾಡುವುದು, ನಮಿಸುವುದು, ತನ್ನಾತ್ಮವನ್ನೇ ಪರಮಾತ್ಮನಿಗೆ ಅರ್ಪಿಸುವುದು, ನಿತ್ಯವೂ ಮಿಷ್ಟಾನ್ನವನ್ನು ನಿವೇದಿಸುವುದು, ಈ ಪ್ರಕಾರವಾಗಿ ಬಲ್ಲವರು ಹೇಳುವ ಒಂಭತ್ತು ವಿಧವಾದ ಭಕ್ತಿಯನ್ನು ನನಗೆ ದಯಪಾಲಿಸು.

೧೭. ಸಾರ್ಷ್ಟಿ, ಸಾಲೋಕ್ಯ, ಸಾರೂಪ್ಯ, ಸಾಮೀಪ್ಯ, ಸಾಮ್ಯ, ಲೀನತಾ ಎಂದು ಮುಕ್ತಿಯು ಆರು ವಿಧವೆಂದು ಮುಕ್ತಿಸ್ವರೂಪವನ್ನು ಬಲ್ಲವರು ಹೇಳುವರು.

೧೮–೧೯. ಅಣಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಮಹಿಮಾ, ಈಶಿತ್ವ, ವಶಿತ್ವ, ಸರ್ವಕಾಮ, ಅವಸಾಯಿತಾ, ಸರ್ವಜ್ಞ, ದೂರಶ್ರವಣ, ಪರಕಾಯಪ್ರವೇಶನ, ವಾಕ್ಸಿದ್ಧಿ, ಕಲ್ಪವೃಕ್ಷತ್ವ, ಸ್ರಷ್ಟುಮೀಶತಾ, ಸಂಹರ್ತುಮೀಶತಾ, ಅಮರತ್ವ, ಸರ್ವಾಗ್ರ್ಯ ಎಂದು ಹದಿನೆಂಟು ಸಿದ್ಧಿಗಳು ಧರ್ಮಶಾಸ್ತ್ರದಲ್ಲಿ ಉಕ್ತವಾಗಿವೆ.

ಅಮರತ್ವಂ ಚ ಸರ್ವಾಗ್ರ್ಯಂ ಸಿದ್ಧಯೋಽಷ್ಟಾದಶ ಸ್ಮೃತಾಃ ।
ಯೋಗಾಸ್ತಪಾಂಸಿ ಸರ್ವಾಣಿ ದಾನಾನಿ ಚ ವ್ರತಾನಿ ಚ ॥ ೨೦ ॥

ಯಶಃಕೀರ್ತಿರ್ವಚಃ ಸತ್ಯಂ ಧರ್ಮಾಣ್ಯನಶನಾನಿ ಚ ।
ಭ್ರಮಣಂ ಸರ್ವತೀರ್ಥೇಷು ಸ್ನಾನಮನ್ಯಸುರಾರ್ಚನಂ ॥ ೨೧ ॥

ಸುರಾರ್ಚಾ ದರ್ಶನಂ ಸಪ್ತದ್ವೀಪ ಸಪ್ತಪ್ರದಕ್ಷಿಣಂ ।
ಸ್ನಾನಂ ಸರ್ವಸಮುದ್ರೇಷು ಸರ್ವಸ್ವರ್ಗಪ್ರದರ್ಶನಂ ॥ ೨೨ ॥

ಬ್ರಹ್ಮತ್ವಂ ಚೈವ ರುದ್ರತ್ವಂ ವಿಷ್ಣುತ್ವಂ ಚ ಪರಂಪದಂ ।
ಅತೋಽನಿರ್ವಚನೀಯಾನಿ ವಾಂಛನೀಯಾನಿಸಂತಿ ವಾ ॥ ೨೩ ॥

ಸರ್ವಾಣ್ಯೇತಾನಿ ಸರ್ವೇಶ ಕಥಿತಾನಿ ಚ ಯಾನಿ ಚ ।
ತೇವಭಕ್ತಿಕಲಾಂಶಸ್ಯ ಕಲಾಂ ನಾರ್ಹನ್ತಿ ಷೋಡಶೀಂ ॥ ೨೪ ॥

ಶರ್ವಸ್ಯ ವಚನಂ ಶ್ರುತ್ವಾ ಕೃಷ್ಣಸ್ತಂ ಯೋಗಿನಾಂ ಗುರುಂ ।
ಪ್ರಹಸ್ಯೋವಾಚ ವಚನಂ ಸತ್ಯಂ ಸರ್ವಸುಖಪ್ರದಂ ॥ ೨೫ ॥

೨೦-೨೪. ಯೋಗಾಭ್ಯಾಸಮಾಡುವುದು, ತಪಸ್ಸುಮಾಡುವುದು, ಬಗಬಗೆಯಾದ ದಾನಗಳನ್ನು ಮಾಡುವುದು, ವಿವಿಧ ವ್ರತಗಳನ್ನಾಚರಿಸುವುದು, ಕೀರ್ತಿಗಳಿಸುವುದು, ಸತ್ಯವಂತನಾಗಿರುವುದು, ಧರ್ಮವನ್ನಾಚರಿಸುವುದು, ಉಪವಾಸ ಮಾಡುವುದು, ಎಲ್ಲ ತೀರ್ಥಕ್ಷೇತ್ರಗಳಲ್ಲಿಯೂ ಸಂಚರಿಸಿ, ಸ್ನಾನಮಾಡಿ, ಅನೇಕ ದೇವತೆಗಳನ್ನು ಪೂಜಿಸುವುದು, ಮತ್ತೊಬ್ಬರು ಮಾಡುವ ಪೂಜೆಯನ್ನು ನೋಡುವುದು, ಏಳು ದ್ವೀಪಗಳನ್ನೂ ಏಳುಸಾರಿ ಪ್ರದಕ್ಷಿಣೆಮಾಡುವುದು, ಸಪ್ತಸಮುದ್ರಗಳಲ್ಲಿಯೂ ಸ್ನಾನಮಾಡುವುದು, ಎಲ್ಲ ಸ್ವರ್ಗಗಳನ್ನೂ ದರ್ಶನಮಾಡುವುದು, ಸಾಕ್ಷಾತ್ ಬ್ರಹ್ಮ, ರುದ್ರ ಮತ್ತು ವಿಷ್ಣುವಿನ ಸ್ವರೂಪವನ್ನು ಹೊಂದುವುದು, ಇನ್ನೂ ವರ್ಣಿಸಲಸಾಧ್ಯವಾದ ಉತ್ತಮಪದವಿಯನ್ನು ಪಡೆಯುವುದು, ಇವೆಲ್ಲವೂ ಪರಮಾತ್ಮನಲ್ಲಿ ಭಕ್ತಿ ಇಟ್ಟು ಪಡೆದ ಹದಿನಾರನೆಯ ಒಂದುಭಾಗದ ಪುಣ್ಯಕ್ಕೂ ಎಣೆಯಾಗಲಾರವು.

೨೫. ಯೋಗಿಶ್ರೇಷ್ಠನಾದ ಮಹೇಶನ ಮಾತನ್ನು ಕೇಳಿ ಅವನ ಮುಖವನ್ನು ನೋಡಿ ನಗುತ್ತಾ ಕೃಷ್ಣಪರಮಾತ್ಮನು ಸರ್ವರಿಗೂ ಸುಖಕರವಾದ ಸತ್ಯವಚನವನ್ನಾಡಿದನು.

॥ ಶ್ರೀ ಭಗವಾನುವಾಚ ॥

ಮತ್ಸೇವಾಂ ಕುರು ಸರ್ವೇಶ ಶರ್ವ ಸರ್ವವಿದಾಂ ವರ ।
ಕಲ್ಪಕೋಟಿಶತಂ ಯಾವತ್ ಪೂರ್ಣಂ ಶಶ್ವದಹರ್ನಿಶಂ ॥ ೨೬ ॥

ವರಸ್ತಪಸ್ವಿನಾಂ ತ್ವಂ ಚ ಸಿದ್ಧಾನಾಂ ಯೋಗಿನಾಂ ತಥಾ ।
ಜ್ಞಾನಿನಾಂ ವೈಷ್ಣವಾನಾಂ ಚ ಸುರಾಣಾಂ ಚ ಸುರೇಶ್ವರ ॥ ೨೭ ॥

ಅಮರತ್ವಂ ಲಭ ಭವ ಭವ ಮೃತ್ಯುಂಜಯೋ ಮಹಾನ್ ।
ಸರ್ವಸಿದ್ಧಿಂ ಚ ವೇದಾಂಶ್ಚ ಸರ್ವಜ್ಞತ್ವಂ ಚ ಮದ್ವರಾತ್ ॥ ೨೮ ॥

ಅಸಂಖ್ಯಬ್ರಹ್ಮಣಾಂ ಪಾತಂ ಲೀಲಯಾ ವತ್ಸ ಪಶ್ಯಸಿ ।
ಅದ್ಯಪ್ರಭೃತಿ ಜ್ಞಾನೇನ ತೇಜಸಾ ವಯಸಾ ಶಿವ ॥ ೨೯ ॥

ಪರಾಕ್ರಮೇಣ ಯಶಸಾ ಮಹಸಾ ಮತ್ಸಮೋ ಭವ ।
ಪ್ರಾಣಾನಾಮಧಿಕಸ್ತ್ವಂ ಚ ನಭಕ್ತಸ್ತ್ವತ್ಪರೋ ಮಮ ॥ ೩೦ ॥

೨೬–೨೮. ಭಗವಂತ:—ಸರ್ವಜ್ಞನಾದ ಮಹಾದೇವನೇ! ನೂರು-ಕೋಟಿ ಕಲ್ಪಗಳವರೆಗೂ ಹಗಲೂ ರಾತ್ರಿ ಎಡೆಬಿಡದೆ ನನ್ನ ಸೇವೆಯನ್ನು ಮಾಡು. ತಪಸ್ವಿಗಳು ಸಿದ್ಧರು, ಯೋಗಿಗಳು, ಜ್ಞಾನಿಗಳು, ವಿಷ್ಣುಭಕ್ತರು, ದೇವತೆಗಳು ಇವರೆಲ್ಲರಿಗೂ ನೀನೇ ಶ್ರೇಷ್ಠನು. ನೀನು ಮೃತ್ಯುವನ್ನು ಜಯಿಸಿ ಅಮರನಾಗು. ಅಲ್ಲದೆ ಎಲ್ಲ ವೇದಗಳನ್ನೂ ತಿಳಿದು, ಸರ್ವಜ್ಞನಾಗಿ ನನ್ನ ವರದಿಂದ ಸರ್ವಸಿದ್ಧಿಯನ್ನೂ ಹೊಂದು.

೨೯–೩೦. ನಿನ್ನ ಕಣ್ಣೆದುರಿಗೆ ಲೆಕ್ಕವಿಲ್ಲದಷ್ಟು ಚತುರ್ಮುಖ ಬ್ರಹ್ಮರು ಲಯಹೊಂದುವರು. ಇಂದಿನಿಂದ ಜ್ಞಾನ, ತೇಜಸ್ಸು, ವಯಸ್ಸು, ಪರಾಕ್ರಮ, ಕೀರ್ತಿ, ಮಹಿಮೆ ಎಲ್ಲದರಲ್ಲೂ ನೀನು ನನ್ನ ಸರಿಸಮಾನನಾಗು. ನಿನಗಿಂತ ಉತ್ತಮನಾದ ಭಕ್ತನು ಬೇರಾರೂ ನನಗಿಲ್ಲ. ನಿನಗಿಂತ ಪ್ರೀತಿಪಾತ್ರರೂ ಮತ್ತೊಬ್ಬರಿಲ್ಲ.

ತ್ವತ್ಪರೋ ನಾಸ್ತಿ ಮೇ ಪ್ರೇಯಾಂಸ್ತ್ವಂ ಮದೀಯಾತ್ಮನಃ ಪರಃ ।
ಯೇ ತ್ವಾಂ ನಿಂದಂತಿ ಪಾಪಿಷ್ಠಾ ಜ್ಞಾನಹೀನಾ ವಿಚೇತನಾಃ ॥ ೩೧ ॥

ಪಚ್ಯಂತೇ ಕಾಲಸೂತ್ರೇಣ ಯಾವಚ್ಚಂದ್ರದಿವಾಕರೌ ।
ಕಲ್ಪಕೋಟಿಶತಾಂತೇ ಚ ಗ್ರಹೀಷ್ಯಸಿ ಶಿವಾಂ ಶಿವ ॥ ೩೨ ॥

ಮಮಾವ್ಯರ್ಥಂ ಚ ವಚನಂ ಪಾಲನಂ ಕರ್ತುಮರ್ಹಸಿ ।
ತ್ವನ್ಮುಖಾನ್ನಿರ್ಗತಂ ವಾಕ್ಯಂ ನ ಕರೋಮ್ಯಧುನೇತಿ ಚ ॥ ೩೩ ॥

ಮದ್ವಾಕ್ಯಂ ಚ ಸ್ವವಾಕ್ಯಂ ಚ ಪಾಲನಂ ತತ್ಕರಿಷ್ಯಸಿ ।
ಗೃಹೀತ್ವಾ ಪ್ರಕೃತಿಂ ಶಂಭೋ ದಿವ್ಯಂ ವರ್ಷಸಹಸ್ರಕಂ ॥ ೩೪ ॥

ಸುಖಂ ಮಹಚ್ಚ ಶೃಂಗಾರಂ ಕರಿಷ್ಯಸಿ ನ ಸಂಶಯಃ ।
ನ ಕೇವಲಂ ತಪಸ್ವೀ ತ್ವಮೀಶ್ವರೋ ಮತ್ಸಮೋ ಮಹಾನ್ ॥ ೩೫ ॥

ಜ್ಞಾನವಿಲ್ಲದೆ ಯಾವ ಪಾಪಿಗಳು ನಿನ್ನನ್ನು ನಿಂದಿಸುವರೋ ಅವರು ಚಂದ್ರ ಸೂರ್ಯರಿರುವವರೆಗೂ ಕಾಲಸೂತ್ರವೆಂಬ ನರಕದಲ್ಲಿ ನರಳುವರು. ನೂರುಕೋಟಿ ಕಲ್ಪಗಳು ಕಳೆದ ಮೇಲಾದರೂ ನೀನು ಪ್ರಕೃತಿದೇವಿಯನ್ನು ಸ್ವೀಕರಿಸು.

೩೩–೩೫. ವ್ಯರ್ಥವಲ್ಲದ ನನ್ನ ವಚನವನ್ನು ನೀನು ಪರಿಪಾಲಿಸು. ಪ್ರಕೃತಿಯನ್ನು ಈಗ ಸ್ವೀಕರಿಸುವುದಿಲ್ಲವೆಂದು ನೀನೇ ಹೇಳಿದುದರಿಂದ ಮುಂದೆ ಸ್ವೀಕರಿಸುವೆ ಎಂಬುದು ಸಿದ್ಧವಾಯಿತು. ನಮ್ಮಿಬ್ಬರ ವಚನಗಳನ್ನೂ ನಾವು ಕಾಪಾಡಿಕೊಳ್ಳುವುದುಚಿತ. ಆದುದರಿಂದ ಪ್ರಕೃತಿದೇವಿಯನ್ನು ಗೃಹಿಣಿಯನ್ನಾಗಿ ಸ್ವೀಕರಿಸಿ ದೇವತೆಗಳ ಸಾವಿರವರ್ಷಕಾಲ ಶೃಂಗಾರರಸಾನುಭವವನ್ನು ಪಡೆದು ಸುಖಿಯಾಗಿರು. ನೀನು ನಿನ್ನಿಚ್ಛೆ ಬಂದಂತೆ ಇರಬಲ್ಲೆಯಾದ್ದರಿಂದ ಬೇಕಾದಾಗ ಗೃಹಸ್ಥನಾಗುವೆ. ಬೇಡವಾದಾಗ ಯೋಗಿಯಾಗುವೆ.

ಕಾಲೇ ಗೃಹೀ ತಪಸ್ವೀ ಚ ಯೋಗೀ ಸ್ವೇಚ್ಛಾಮಯೋ ಹಿ ಯಃ ।
ದುಃಖಂ ಚ ದಾರಸಂಯೋಗೇ ಯತ್ತ್ವಯಾ ಕಥಿತಂ ಶಿವ ॥ ೩೬ ॥

ಕುಸ್ತ್ರೀ ದದಾತಿ ದುಃಖಂ ಚ ಸ್ವಾಮಿನೇ ನ ಪತಿವ್ರತಾ ।
ಕುಲೇ ಮಹತಿ ಯಾ ಜಾತಾ ಕುಲಜಾ ಕುಲಪಾಲಿಕಾ ॥ ೩೭ ॥

ಕರೋತಿ ಪಾಲನಂ ಸ್ನೇಹಾತ್ಸತ್ಪುತ್ರಸ್ಯ ಸಮಂ ಪತಿಂ ।
ಪತಿರ್ಬಂಧುಃ ಪತಿರ್ಭರ್ತಾ ದೈವತಂ ಕುಲಯೋಷಿತಾಂ ॥ ೩೮ ॥

ಪತಿತೋಽಪತಿತೋ ವಾಪಿ ಕೃಪಣಶ್ಚೇಶ್ವರೋಽಥವಾ ।
ಅಸತ್ಕುಲ ಪ್ರಸೂತಾ ಯಾಃ ಪಿತ್ರೋರ್ದುಶ್ಶೀಲಮಿಶ್ರಿತಾಃ ॥ ೩೯ ॥

ಧ್ರುವಂ ತಾಃ ಪರಭೋಗ್ಯಾಶ್ಚ ಪತಿಂ ನಿಂದಂತಿ ಸಂತತಂ ।
ಅನಯೋರತಿರಿಕ್ತಂ ಚ ಯಾ ಪಶ್ಯತಿ ಪತಿಂ ಸತೀ ॥ ೪೦ ॥

ಗೋಲೋಕೇ ಸ್ವಾಮಿನಾ ಸಾರ್ಧಂ ಕೋಟಿಕಲ್ಪಂ ಪ್ರಮೋದತೇ ।
ಭವಿತಾ ಸಾ ಶಿವಾ ಶೈವೀ ಪ್ರಕೃತಿರ್ವೈಷ್ಣವೀ ಶಿವ ॥ ೪೧ ॥

೩೬–೩೮. ನೀನು ಹೇಳಿದಂತೆ ಪತ್ನಿಯನ್ನು ಸ್ವೀಕರಿಸುವುದರಿಂದ ದುಃಖವುಂಟೆಂಬುದು ಕೆಲವೆಡೆ ಸತ್ಯ. ಏಕೆಂದರೆ ಕೆಟ್ಟಹೆಂಗಸು ತನ್ನ ಪತಿಗೆ ದುಃಖವನ್ನೊದಗಿಸುವವಳೇ ಹೊರತು, ಪತಿವ್ರತೆಯು ದುಃಖವನ್ನೆಂದಿಗೂ ಕೊಡಲೊಲ್ಲಳು. ಯಾವ ಕುಲಸ್ತ್ರೀಯು ಒಳ್ಳೆಯ ವಂಶದಲ್ಲಿ ಜನಿಸಿರುವುಳೋ, ಆಕೆಯು ತನ್ನ ಪತಿಯನ್ನು ಪುತ್ರನಷ್ಟೇ ವಿಶ್ವಾಸದಿಂದ ಸೇವಿಸಿ ಪೋಷಿಸುವಳು. ಕುಲಸ್ತ್ರೀಯರಿಗೆ ತನ್ನ ಪತಿಯೇ ನೆಂಟನು, ಇಷ್ಟನು, ಅವನೇ ದೈವವು.

೩೯–೪೧. ಪತಿಯು ಪಾಪಿಯಾಗಿರಬಹುದು, ಅಥವಾ ಪುಣ್ಯವಂತನಾಗಿರಬಹುದು, ಬಡವನಾಗಿರಬಹುದು, ಅಥವಾ ಭಾಗ್ಯವಂತನಾಗಿರಬಹುದು, ಹೇಗಿದ್ದರೂ ಅವನು ಪತ್ನಿಯ ಭಾಗಕ್ಕೆ ದೇವರು. ಯಾವ ಸ್ತ್ರೀಯರು ಕೆಟ್ಟಕುಲದಲ್ಲಿ ಹುಟ್ಟಿ ತಮ್ಮ ತಾಯಿತಂದೆಯರ ಕೆಟ್ಟನಡತೆಗಳನ್ನು ಕಲಿತು ಪರಪುರುಷರೊಡಗೂಡುವರೋ ಅವರು ತಮ್ಮ ಪತಿಯರನ್ನು ನಿಂದಿಸುವರು. ಪ್ರಕೃತಿದೇವಿಯಾದರೋ ನಮ್ಮಿಬ್ಬರನ್ನೂ ಒಂದೇ ಸಮನಾಗಿ ತಿಳಿಯಬಲ್ಲವಳಾದ್ದರಿಂದ ಆ ಸಾಧ್ವೀಮಣಿಯು ತನ್ನ ಪತಿದೇವನೊಡನೇ ಗೋಲೋಕದಲ್ಲಿ ಕೋಟಿಕಲ್ಪಗಳ ಕಾಲ ಸುಖವಾಗಿರುವಳ. ಆಕೆಯನ್ನು ಶಿವಾ, ಶೈವೀ, ವೈಷ್ಣವೀ ಮುಂತಾಗಿ ಕರೆಯುವರು.

ಮದಾಜ್ಞಯಾ ಚ ತಾಂ ಸಾಧ್ವೀಂ ಗ್ರಹೀಷ್ಯಸಿ ಭವಾಯ ಚ ।
ಪ್ರಕೃತ್ಯಾ ಯೋನಿಸಂಯುಕ್ತಂ ತ್ವಲ್ಲಿಂಗಂತೀರ್ಥಮೃತ್ಕೃತಂ ॥ ೪೨ ॥

ತೀರ್ಥೇ ಸಹಸ್ರಂ ಸಂಪೂಜ್ಯ ಭಕ್ತ್ಯಾ ಪಂಚೋಪಚಾರತಃ ।
ಸದಕ್ಷಿಣಂ ಸಂಯತೋ ಯಃ ಪವಿತ್ರಶ್ಚ ಜಿತೇಂದ್ರಿಯಃ ॥ ೪೩ ॥

ಕೋಟಿಕಲ್ಪಂ ಚ ಗೋಲೋಕೇ ಮೋದತೇ ಚ ಮಯಾ ಸಹ ।
ಲಕ್ಷಂ ತೀರ್ಥೇ ಪೂಜಯೇದ್ಯೋ ವಿಧಿವತ್ಸಾಧುದಕ್ಷಿಣಂ ॥ ೪೪ ॥

ನ ಚ್ಯುತಿಸ್ತಸ್ಯ ಗೋಲೋಕಾತ್ಸಭವೇದಾವಯೋಸ್ಸಮಃ ।
ಮೃದ್ಭಸ್ಮ ಗೋಶಕೃತ್ಪಿಂಡೈಸ್ತೀರ್ಥೇ ವಾಲುಕಯಾಪಿ ವಾ ॥ ೪೫ ॥

೪೨-೪೫. ನನ್ನ ಅಪ್ಪಣೆಯಂತೆ ಸಾಧ್ವೀಮಣಿಯಾದ ಪ್ರಕೃತಿದೇವಿಯನ್ನು ಸಂಸಾರಿಯಾಗಲು ಸ್ವೀಕರಿಸು. ಪ್ರಕೃತಿದೇವಿಯು ಯೋನಿಯೊಡಗೂಡಿದ ನಿನ್ನ ಲಿಂಗಸಹಸ್ರವನ್ನು (ಅಂದರೆ ಪ್ರಪಂಚಕ್ಕೆ ಕಾರಣರೂಪವಾದ ಚಿಹ್ನೆಗಳನ್ನು) ಯಾವ ಮನುಷ್ಯನು ಪುಣ್ಯಕ್ಷೇತ್ರದಲ್ಲಿ ಗಂಧ, ಪುಷ್ಪ, ಧೂಪ, ದೀಪ ನೈವೇದ್ಯ ಎಂಬ ಪಂಚೋಪಚಾರಗಳಿಂದ ಪೂಜಿಸುವನೋ ಮತ್ತು ನಿಶ್ಚಲವಾದ ಮನಸ್ಸಿನಿಂದ ಬ್ರಾಹ್ಮಣರಿಗೆ ದಕ್ಷಿಣೆ ಕೊಡುವನೋ ಆತನು ಗೋಲೋಕದಲ್ಲಿ ಕೋಟಿಕಲ್ಪಗಳ ಕಾಲ ಆನಂದದಿಂದಿರುವನು. ಯಾವನು ಲಕ್ಷಲಿಂಗವನ್ನು ಪುಣ್ಯಕ್ಷೇತ್ರದಲ್ಲಿ ನಿಯಮದಿಂದ ಪೂಜಿಸಿ ದಕ್ಷಿಣೆ ಕೊಡುವನೋ, ಆತನಿಗೂ ಗೋಲೋಕದಿಂದ ಚ್ಯುತಿಯಿಲ್ಲ. ನಮ್ಮಿಬ್ಬರಿಗೂ ಅವನು ಸಮಾನನು. ಮೃತ್ತಿಕೆ, ವಿಭೂತಿ, ಗೋಮಯದಿಂದಾಗಲೀ ಅಥವಾ ಮರಳಿನಿಂದಾಗಲೀ ಲಿಂಗವನ್ನು ಮಾಡಿಕೊಂಡು ಪುಣ್ಯಕ್ಷೇತ್ರದಲ್ಲಿ ಯಾರು ಒಂದುಸಾರಿಯಾದರೂ ಪೂಜಿಸುವರೋ ಅವರು ಕಲ್ಪಾಯುತಕಾಲ ಸ್ವರ್ಗವಾಸಿಯಾಗುವರು.

ಕೃತ್ವಾ ಲಿಂಗಂ ಸಕೃತ್ಪೂಜ್ಯ ವಸೇತ್ಕಲ್ಪಾಯುತಂ ದಿವಿ ।
ಪ್ರಜಾವಾನ್ಭೂಮಿಮಾನ್ವಿದ್ವಾನ್ಪುತ್ರವಾನ್ಧನವಾಂಸ್ತಥಾ ॥ ೪೬ ॥

ಜ್ಞಾನವಾನ್ಮುಕ್ತಿಮಾನ್ಸಾಧುಃ ಶಿವಲಿಂಗಾರ್ಚನಾದ್ಭವೇತ್ ।
ಶಿವಲಿಂಗಾರ್ಚನಂ ಸ್ಥಾನಂ ಮತ್ತಿರ್ಥಂ ತೀರ್ಥಮೇವ ತತ್ ॥ ೪೭ ॥

ಭವೇತ್ತತ್ರ ಮೃತಃ ಪಾಪೀ ಶಿವಲೋಕಂ ಸ ಗಚ್ಛತಿ ।
ಮಹಾದೇವ ಮಹಾದೇವ ಮಹಾದೇವೇತಿ ವಾದಿನಃ ॥
ಪಶ್ಚಾದ್ಯಾಮಿ ಮಹಾತ್ರಸ್ತೋ ನಾಮಶ್ರವಣಲೋಭತಃ ॥ ೪೮ ॥

ಶಿವೇತಿ ಶಬ್ದಮುಚ್ಚಾರ್ಯ ಪ್ರಾಣಾಂಸ್ತ್ಯಜತಿ ಯೋ ನರಃ ।
ಕೋಟಿಜನ್ಮಾರ್ಜಿತಾತ್ಪಾಪಾನ್ಮುಕ್ತೋ ಮುಕ್ತಿಂ ಪ್ರಯಾತಿ ಸಃ ॥ ೪೯ ॥

ಶಿವಕಲ್ಯಾಣವಚನಂ ಕಲ್ಯಾಣಂ ಮುಕ್ತಿವಾಚಕಂ ।
ಯತಸ್ತತ್ಪ್ರಭವೇತ್ತೇನ ಸ ಶಿವಃ ಪರಿಕೀರ್ತಿತಃ ॥ ೫೦ ॥

೪೬–೫೦. ಶಿವಲಿಂಗವನ್ನು ಭಕ್ತಿಯಿಂದ ಪೂಜಿಸಿದರೆ ಮಕ್ಕಳಿಲ್ಲದವರಿಗೆ ಮಕ್ಕಳಾಗುವುವು. ಭೂಮಿ, ವಿದ್ಯೆ, ಧನ, ಜ್ಞಾನ, ಮುಕ್ತಿ ಇವುಗಳಲ್ಲಿ ಯಾವುವನ್ನು ಬಯಸಿದರೂ ಅದು ಸಿಗುವುದು. ಶಿವಲಿಂಗವನ್ನು ಪೂಜಿಸಿದ ಸ್ಥಳವೆಲ್ಲಾ ಪುಣ್ಯ ಕ್ಷೇತ್ರವೆನಿಸಿಕೊಳ್ಳುವುದು. ಅಲ್ಲಿ ಸತ್ತವನು ಪಾಪಿಯಾದರೂ ಶಿವಲೋಕವನ್ನು ಸೇರುವನು. ಯಾರು ಮಹಾದೇವ, ಮಹಾದೇವ ಎಂದು ಜಪಿಸುವರೋ ಅವರ ಹಿಂದೆ ಆ ದಿವ್ಯನಾಮವನ್ನು ಕೇಳಬೇಕೆಂಬ ಆಸೆಯಿಂದ ನಾನು ಹೋಗುತ್ತಿರುವೆನು. ಯಾವ ಮನುಷ್ಯನು ಶಿವ, ಶಿವ ಎಂದು ಹೇಳುತ್ತಲೇ ಪ್ರಾಣಗಳನ್ನು ಬಿಡುವನೋ ಅವನ ಕೋಟಿ ಜನ್ಮಕೃತವಾದ ಪಾಪಗಳು ಪರಿಹಾರವಾಗಿ ಆತನು ಮುಕ್ತನಾಗುವನು. ' ಶಿವ ' ಶಬ್ದವು ಕಲ್ಯಾಣಕರವಾದದ್ದು, ಮುಕ್ತಿಯನ್ನು ಕೊಡುವುದರಿಂದಲೇ ' ಶಿವ ' ಎಂಬುದು ದಿವ್ಯನಾಮವಾಗಿದೆ. ಆದುದರಿಂದ ಮುಕ್ತಿಯನ್ನು ಕೊಡುವವನೇ ಶಿವನೆನಿಸಿಕೊಳ್ಳುವನು.

ವಿಚ್ಛೇದೇ ಧನಬಂಧೂನಾಂ ನಿಮಗ್ನಃ ಶೋಕಸಾಗರೇ ।
ಶಿವೇತಿ ಶಬ್ದಮುಚ್ಚಾರ್ಯ ಲಭೇತ್ಸರ್ವಶಿವಂ ನರಃ ॥ ೫೧ ॥

ಪಾಪಘ್ನೇ ವರ್ತತೇ ಶಿಶ್ಚ ವಶ್ಚ ಮುಕ್ತಿಪ್ರದೇ ತಥಾ ।
ಪಾಪಘ್ನೋ ಮೋಕ್ಷದೋ ನೄಣಾಂ ಶಿವಸ್ತೇನ ಪ್ರಕೀರ್ತಿತಃ ॥ ೫೨ ॥

ಶಿವೇತಿ ಚ ಶಿವಂ ನಾಮ ಯಸ್ಯ ವಾಚಿ ಪ್ರವರ್ತತೇ ।
ಕೋಟಿಜನ್ಮಾರ್ಜಿತಂ ಪಾಪಂ ತಸ್ಯ ನಶ್ಯತಿ ನಿಶ್ಚಿತಂ ॥ ೫೩ ॥

ಇತ್ಯುಕ್ತ್ವಾ ಶೂಲಿನೇ ಕೃಷ್ಣೋ ದತ್ವಾ ಕಲ್ಪತರುಂ ಮನುಂ ।
ತತ್ವಜ್ಞಾನಂ ಮೃತ್ಯುಜಯಮುವೋಚತ್ಸಿಂಹವಾಹಿನೀಂ ॥ ೫೪ ॥

॥ ಶ್ರೀ ಭಗವಾನುವಾಚ ॥

ಅಧುನಾ ತಿಷ್ಠ ವತ್ಸೇ ತ್ವಂ ಗೋಲೋಕೇ ಮಮ ಸಂನಿಧೌ ।
ಕಾಲೇ ಭಜಿಷ್ಯಸಿ ಶಿವಂ ಶಿವದಂ ಚ ಶಿವಾಯನಂ ॥ ೫೫ ॥

೫೧–೫೪. ಹಣವನ್ನು ಕಳೆದುಕೊಂಡವರು, ಬಂಧುಗಳನ್ನಗಲಿದವರು, ಮಾನಸಿಕಚಿಂತೆಯಲ್ಲಿ ತೊಳಲುತ್ತಿರುವವರು, 'ಶಿವ' ಎಂಬ ಎರಡು ಅಕ್ಷರಗಳನ್ನು ಉಚ್ಚರಿಸಿದ ಮಾತ್ರದಿಂದಲೇ ತಮ್ಮ ದುಃಖದಿಂದ ಪಾರಾಗುವರು–'ಶಿ' ಎಂದರೆ ಪಾಪವನ್ನು ನಾಶಗೊಳಿಸುವುದು–'ವ' ಎಂದರೆ ಮುಕ್ತಿಯನ್ನು ಕೊಡುವುದು. ಆದ್ದರಿಂದ 'ಶಿವ'ನು ಪಾಪವನ್ನು ಪರಿಹರಿಸಿ, ಜನರಿಗೆ ಮುಕ್ತಿಯನ್ನು ಕೊಡುವನು. ಶಿವನೆಂಬ ಮಂಗಳಕರವಾದ ಹೆಸರು ಯಾರ ಬಾಯಲ್ಲಿ ಬರುವುದೋ ಅವರ ಕೋಟಿ ಜನ್ಮಕೃತವಾದ ಪಾಪಗಳೂ ಕೂಡ ನಿಶ್ಚಯವಾಗಿಯೂ ಪರಿಹಾರವಾಗುವುದು. ಹೀಗೆ ಹೇಳಿ ಪರಮಾತ್ಮನು ಶಿವನಿಗೆ ಕಲ್ಪವೃಕ್ಷಕ್ಕೆ ಸಮನಾದ ಮಂತ್ರವನ್ನೂ, ತತ್ವಜ್ಞಾನವನ್ನೂ ಮತ್ತು ಮೃತ್ಯುವನ್ನು ಜಯಿಸುವ ಶಕ್ತಿಯನ್ನೂ ಕೊಟ್ಟು, ಸಿಂಹವಾಹಿನಿಯಾದ ಪ್ರಕೃತಿದೇವಿಯನ್ನು ಕುರಿತು ಮುಂದಿನ ಮಾತುಗಳನ್ನಾಡಿದನು.

೫೫–೫೬. ಭಗವಂತ:–ಎಲೌ, ಪ್ರಕೃತಿದೇವಿಯೇ! ಈಗ ನೀನು ಗೋಲೋಕದಲ್ಲಿ ನನ್ನೊಡನೆಯೇ ಇರು. ಕೆಲವುಕಾಲ ಕಳೆದ ಮೇಲೆ ಮಂಗಳಕರನಾದ ಶಿವನನ್ನು ವರಿಸುವೆ. ಎಲ್ಲ ದೇವತೆಗಳ ಪರಾಕ್ರಮದಲ್ಲೂ ನಿನ್ನ ಅಂಶವನ್ನು ಪ್ರಕಟಿಸಿ, ಎಲ್ಲ

ತೇಜಸ್ಸು ಸರ್ವದೇವಾನಾಮಾವಿರ್ಭೂಯ ವರಾನನೇ ।
ಸಂಹೃತ್ಯ ದೈತ್ಯಾನ್ ಸರ್ವಾಂಶ್ಚ ಭವಿತಾ ಸರ್ವಪೂಜಿತಾ ॥ ೫೬ ॥

ತತಃ ಕಲ್ಪವಿಶೇಷೇ ಚ ಸತ್ಯಂ ಸತ್ಯಯುಗೇ ಸತಿ ।
ಭವಿತಾ ದಕ್ಷಕನ್ಯಾ ತ್ವಂ ಸುಶೀಲಾ ಶಂಭುಗೇಹಿನೀ ॥ ೫೭ ॥

ತತಃ ಶರೀರಂ ಸಂತ್ಯಜ್ಯ ಯಜ್ಞೇ ಭರ್ತುಶ್ಚ ನಿಂದಯಾ ।
ಮೇನಾಯಾಂ ಶೈಲಭಾರ್ಯಾಯಾಂ ಭವಿತಾ ಪಾರ್ವತೀತಿ ಚ ॥ ೫೮ ॥

ದಿವ್ಯಂ ವರ್ಷಸಹಸ್ರಂ ಚ ವಿಹರಿಷ್ಯಸಿ ಶಂಭುನಾ ।
ಪೂರ್ಣಂ ತತಃ ಸರ್ವಕಾಲಮಭೇದಂ ತ್ವಂ ಲಭಿಷ್ಯಸಿ ॥ ೫೯ ॥

ಕಾಲೇ ಸರ್ವೇಷು ವಿಶ್ವೇಷು ಮಹಾಪೂಜಾಸು ಪೂಜಿತೇ ।
ಭವಿತಾ ಪ್ರತಿವರ್ಷೇ ಚ ಶಾರದೀಯಾ ಸುರೇಶ್ವರಿ ॥ ೬೦ ॥

ರಾಕ್ಷಸರನ್ನೂ ಸಂಹರಿಸಿ, ಸರ್ವರಿಂದ ಪೂಜ್ಯಳಾಗು. ಅನಂತರ ಮುಂದೊಂದು ಕಲ್ಪದ ಸತ್ಯಯುಗದಲ್ಲಿ ನೀನು ದಕ್ಷಬ್ರಹ್ಮನ ಮಗಳಾಗಿ ಈಶ್ವರನನ್ನು ವರಿಸಿ ಪತಿವ್ರತೆಯಾಗಿರುವೆ.

೫೮–೬೦. ಆಗ ನಿನ್ನ ತಂದೆಯು ಒಂದು ಯಾಗವನ್ನು ಮಾಡಿ, ಅದಕ್ಕೆ ನಿನ್ನ ಪತಿಯನ್ನು ಕರೆಸದೆ ನಿಂದಿಸುವುದರಿಂದ ನೀನು ಯಜ್ಞಕುಂಡದಲ್ಲಿ ಶರೀರವನ್ನು ಬಿಟ್ಟು ಹಿಮವಂತನ ಪತ್ನಿಯಾದ ಮೇನೆಯಲ್ಲಿ ಪಾರ್ವತೀ ಎಂಬ ಹೆಸರಿನಿಂದ ಜನಿಸುವೆ. ಆಗ ಶಂಭುವನ್ನು ವರಿಸಿ ದಿವ್ಯ ಸಹಸ್ರ ವರ್ಷಗಳಕಾಲ ಅವನೊಡನೆ ವಿಹರಿಸಿಕೊಂಡಿದ್ದು, ಅನಂತರ ಅವನಲ್ಲೇ ಐಕ್ಯಳಾಗುವೆ. ಪ್ರಪಂಚದಲ್ಲಿ ನಡೆಯುವ ಮಹಾಪೂಜೆಗಳಲ್ಲೆಲ್ಲ ನೀನು ಪೂಜಿತಳಾಗಿ ಪ್ರತಿವರ್ಷದಲ್ಲೂ ಶರದೃತುವಿನಲ್ಲಿ ವಿಶೇಷವಾದ ಪೂಜೆಯನ್ನು ಹೊಂದುವೆ

ಗ್ರಾಮೇಷು ನಗರೇಷ್ವೇವ ಪೂಜಿತಾ ಗ್ರಾಮದೇವತಾ ।
ಭವತೀ ಭವಿತೇತ್ಯೇವಂ ನಾಮಭೇದೇನ ಚಾರುಣಾ ॥ ೬೧ ॥

ಮದಾಜ್ಞಯಾ ಶಿವಕೃತೈಸ್ತಂತ್ರೈರ್ನಾನಾವಿಧೈರಪಿ ।
ಪೂಜಾವಿಧಿಂ ವಿಧಾಸ್ಯಾಮಿ ಕವಚಂ ಸ್ತೋತ್ರಸಂಯುತಂ ॥ ೬೨ ॥

ಭವಿಷ್ಯನ್ತಿ ಮಹಾನ್ತಶ್ಚ ತವೈವ ಪರಿಚಾರಕಾಃ ।
ಧರ್ಮಾರ್ಥಕಾಮಮೋಕ್ಷಾಣಾಂ ಸಿದ್ಧಾಶ್ಚ ಫಲಭಾಗಿನಃ ॥ ೬೩ ॥

ಯೇ ತ್ವಾಂ ಮಾತರ್ಭಜಿಷ್ಯಂತಿ ಪುಣ್ಯಕ್ಷೇತ್ರೇ ಚ ಭಾರತೇ ।
ತೇಷಾಂ ಯಶಶ್ಚ ಕೀರ್ತಿಶ್ಚ ಧರ್ಮೈಶ್ವರ್ಯಂ ಚ ವರ್ಧತೇ ॥ ೬೪ ॥

ಇತ್ಯುಕ್ತ್ವಾ ಪ್ರಕೃತಿಂ ತಸ್ಯೈ ಮಂತ್ರಮೇಕಾದಶಾಕ್ಷರಂ ।
ದತ್ವಾ ಸಕಾಮಬೀಜಂ ಚ ಮಂತ್ರರಾಜಮನುತ್ತಮಮ್ ॥ ೬೫ ॥

ಚಕಾರ ವಿಧಿನಾ ಧ್ಯಾನಂ ಭಕ್ತಂ ಭಕ್ತಾನುಕಂಪಯಾ ।
ಶ್ರೀಮಾಯಾ ಕಾಮಬೀಜಾಢ್ಯಾಂ ದದೌ ಮಂತ್ರಂ ದಶಾಕ್ಷರಂ ॥ ೬೬ ॥

೬೧-೬೪. ಗ್ರಾಮಗಳಲ್ಲಿಯೂ, ನಗರಗಳಲ್ಲಿಯೂ, ಬೇರೆಬೇರೆ ಹೆಸರುಗಳಿಂದ ಗ್ರಾಮಾಧಿದೇವತೆ ಎಂದು ಪೂಜೆಯನ್ನು ಹೊಂದುವೆ. ನಿನ್ನನ್ನು ಪೂಜಿಸುವ ವಿಧಾನವನ್ನೂ, ಮಂತ್ರ, ಸ್ತೋತ್ರ. ಕವಚಗಳನ್ನೂ, ನನ್ನ ಅಪ್ಪಣೆಯಂತೆ ಮಹಾದೇವನು ರಚಿಸುವನು. ನಿನ್ನ ಸೇವೆಮಾಡುವವರು, ಮಹಾತ್ಮರೂ, ಧರ್ಮಾರ್ಥಕಾಮಮೋಕ್ಷಗಳನ್ನು ಪಡೆಯುವವರೂ ಆಗುವರು. ಪುಣ್ಯಕ್ಷೇತ್ರವೆನಿಸಿಕೊಂಡ ಭರತಖಂಡದಲ್ಲಿ ಯಾರು ನಿನ್ನನ್ನು ಅನನ್ಯಭಕ್ತಿಯಿಂದ ಭಜಿಸುವರೋ, ಅವರು ಧರ್ಮಿಷ್ಠರೂ, ಕೀರ್ತಿವಂತರೂ ಆಗಿ ಬಾಳುವರು.

೬೫-೬೬. ಹೀಗೆ ಹೇಳಿ ಪ್ರಕೃತಿದೇವಿಗೆ ಮಂತ್ರಮಹೋದಧಿಯಲ್ಲಿ ಹೇಳಿರುವಂತೆ ಕಾಮಬೀಜಾತ್ಮಕವಾದ ಹನ್ನೊಂದು ಅಕ್ಷರಗಳುಳ್ಳ ಮಂತ್ರವನ್ನೂ, ಅದರ ಧ್ಯಾನ, ಸ್ತೋತ್ರಾದಿಗಳನ್ನೂ ಪರಮಾತ್ಮನು ಅನುಗ್ರಹಿಸಿದನು. ಅಲ್ಲದೆ ಮಂತ್ರಮಹೋದಧಿಯಲ್ಲಿ ಹೇಳಿರುವ ಓಂ, ಹ್ರೀಂ, ಕ್ಲೀಂ ಎಂಬ ಬೀಜಾಕ್ಷರದಿಂದ ಕೂಡಿರುವ ಸದ್ಗುರುವಿನ ಉಪದೇಶದಿಂದ ಪಡೆಯಬೇಕಾದ ದಶಾಕ್ಷರ ಮಂತ್ರವನ್ನೂ ದಯಪಾಲಿಸಿದನು.

ಸೃಷ್ಟ್ಯುಪಯೌಗಿಕೀಂ ಶಕ್ತಿಂ ಸರ್ವಸಿದ್ಧಿಂ ಚ ಕಾಮದಾಂ ।
ತದ್ವಿಶಿಷ್ಟೋತ್ಕೃಷ್ಟತತ್ವಂ ಜ್ಞಾನಂ ತಸ್ಯೈ ದದೌ ವಿಭುಃ ॥ ೧೭ ॥

ತ್ರಯೋದಶಾಕ್ಷರಂ ಮಂತ್ರಂ ದತ್ವಾ ತಸ್ಮೈ ಜಗತ್ಪತಿಃ ।
ಕವಚಂ ಸ್ತೋತ್ರಸಹಿತಂ ಶಂಕರಾಯ ತಥಾ ದ್ವಿಜ ॥ ೧೮ ॥

ದತ್ವಾ ಧರ್ಮಾಯ ತಂ ಮಂತ್ರಂ ಸಿದ್ಧಿಜ್ಞಾನಂ ತದೇವ ಚ ।
ಕಾಮಾಯ ವಹ್ನಯೇ ಚೈವ ಕುಬೇರಾಯ ಚ ವಾಯವೇ ॥ ೧೯ ॥

ಏವಂ ಕುಬೇರಾದಿಭ್ಯಸ್ತು ದತ್ವಾ ಮಂತ್ರಾದಿಕಂ ಪರಂ ।
ವಿಧಿಂ ಪ್ರೋವಾಚ ಸೃಷ್ಟ್ಯರ್ಥಂ ವಿಧಾತುರ್ವಿಧಿರೇವ ಸಃ ॥ ೨೦ ॥

॥ ಶ್ರೀ ಭಗವಾನುವಾಚ ॥

ಮದೀಯಂ ಚ ತಪಃ ಕೃತ್ವಾ ದಿವ್ಯಂ ವರ್ಷಸಹಸ್ರಕಂ ।
ಸೃಷ್ಟಿಂ ಕುರು ಮಹಾಭಾಗ ವಿಧೇ ನಾನಾವಿಧಾಂ ಪರಾಂ ॥ ೨೧ ॥

೧೭–೨೦. ಪರಮಾತ್ಮನು ಪ್ರಕೃತಿದೇವಿಗೆ ಸೃಷ್ಟಿಗೆ ಬೇಕಾದ ಶಕ್ತಿಯನ್ನೂ, ಇಷ್ಟಾರ್ಥ ಫಲಗಳನ್ನು ಕೊಡುವ ಶಕ್ತಿಯನ್ನೂ, ತತ್ವಜ್ಞಾನವನ್ನೂ ದಯಪಾಲಿಸಿದನು. ಅನಂತರ ಸ್ತೋತ್ರ, ಕವಚಸಹಿತವಾದ ಹದಿಮೂರು ಅಕ್ಷರವುಳ್ಳ ಮಂತ್ರವೊಂದನ್ನು ಶಂಕರನಿಗೆ ಕೊಟ್ಟನು. ಧರ್ಮ, ಕಾಮ, ವಹ್ನಿ, ಕುಬೇರ, ವಾಯು ಮುಂತಾದ ದೇವತೆಗಳಿಗೆಲ್ಲಾ ಜ್ಞಾನಸಿದ್ಧಿರೂಪವಾದ ಮಂತ್ರವನ್ನು ಅನುಗ್ರಹಿಸಿ, ಬ್ರಹ್ಮದೇವನಿಗೆ ಮುಂದಿನ ಸೃಷ್ಟಿಮಾಡುವಂತೆ ಅಪ್ಪಣೆಯನ್ನು ಮಾಡಿದನು.

೨೧–೨೨. ಭಗವಂತ:—ದಿವ್ಯಸಹಸ್ರವರ್ಷಗಳಕಾಲ ನನ್ನನ್ನುದ್ದೇಶಿಸಿ ತಪಸ್ಸುಮಾಡಿ, ಸಿದ್ಧಿಪಡೆದು, ನಾನಾವಿಧವಾದ ಸೃಷ್ಟಿಯನ್ನು ಮಾಡೆಂದು ಹೇಳಿ

ಇತ್ಯುಕ್ತ್ವಾ ಬ್ರಹ್ಮಣೇ ಕೃಷ್ಣೋ ದದೌ ಮಾಲಾಂ ಮನೋರಮಾಂ ।
ಜಗಾಮ ಸಾರ್ಧಂ ಗೋಪೀಭಿರ್ಗೋಪೈರ್ವೃಂದಾವನಂ ವನಂ ॥ ೭೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಸೌತಿಶೌನಕ ಸಂವಾದೇ ಬ್ರಹ್ಮಖಂಡೇ ಸೃಷ್ಟಿನಿರೂಪಣಂ ನಾಮ ಷಷ್ಠೋಽಧ್ಯಾಯಃ

ಶ್ರೀಕೃಷ್ಣನು ಬ್ರಹ್ಮನಿಗೆ ಸುಂದರವಾದೊಂದು ಮಾಲೆಯನ್ನು ಕೊಟ್ಟನು. ಅನಂತರ ತಾನು ಗೋಪ ಗೋಪಿಯರೊಡನೆ ಬೃಂದಾವನಕ್ಕೆ ತೆರಳಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಬ್ರಹ್ಮಖಂಡದಲ್ಲಿ
ಸೃಷ್ಟಿ ನಿರೂಪಣ ರೂಪವಾದ ಆರನೆಯ
ಅಧ್ಯಾಯವು ಮುಗಿದುದು.

ಆರನೆಯ ಅಧ್ಯಾಯದ ಸಾರಾಂಶವು

ಪರಮಾತ್ಮನು ಲಕ್ಷ್ಮೀ ಮತ್ತು ಸರಸ್ವತೀದೇವಿಯರನ್ನು ನಾರಾಯಣನಿಗೂ, ಸಾವಿತ್ರೀದೇವಿಯನ್ನು ಬ್ರಹ್ಮದೇವನಿಗೂ, ಮೂರ್ತಿದೇವಿಯನ್ನು ಧರ್ಮದೇವನಿಗೂ, ಮನೋರಮೆಯನ್ನು ಕುಬೇರನಿಗೂ, ರತಿದೇವಿಯನ್ನು ಮನ್ಮಥನಿಗೂ, ಕೊಟ್ಟು ಮಹಾದೇವನನ್ನು ಕರೆದು ಪ್ರಕೃತಿದೇವಿಯನ್ನು ಸ್ವೀಕರಿಸಬೇಕೆಂದು ಹೇಳುವನು. ಆಗ "ಪ್ರಕೃತಿದೇವಿಯು ಚಂಚಲಳು. ಅವಳ ಕೈಹಿಡಿದವರಿಗೆ ಅಜ್ಞಾನಾಂಧಕಾರವು ಆವರಿಸಿಕೊಂಡು, ಅವರನ್ನು ಸಂಸಾರದಲ್ಲಿ ತೊಳಲಿಸುವುದು, ನನಗಾದರೋ ಯಾವಾಗಲೂ ನಿನ್ನ ಸೇವೆಮಾಡಬೇಕೆಂಬ ಇಚ್ಛೆ ಇದೆ; ಆದ್ದರಿಂದ ಪ್ರಕೃತಿಯನ್ನು ಪ್ರಕೃತದಲ್ಲಿ ಸ್ವೀಕರಿಸುವುದಿಲ್ಲ; ಈಗ ನನಗೆ ನವವಿಧ ಭಕ್ತಿಸ್ವರೂಪವನ್ನೂ, ಷಡ್ವಿಧ ಮುಕ್ತಿಸ್ವರೂಪವನ್ನೂ, ಅಷ್ಟಾದಶಸಿದ್ಧಿಗಳನ್ನೂ, ಉಪದೇಶಿಸಿ ನಿನ್ನ ಭಕ್ತನನ್ನಾಗಿ ಮಾಡಿಕೋ" ಎಂದು ಹೇಳಿದ ಮಹಾದೇವನ ಮಾತನ್ನುಕೇಳಿ, ಪರಮಾತ್ಮನು ಸಂತೋಷಪಟ್ಟು ಅವನು ಕೇಳಿದ ವರಗಳನ್ನೆಲ್ಲಾ ಕೊಟ್ಟನು. ಅಲ್ಲದೆ ಮುಂದಾದರೂ ನೀನು ಪ್ರಕೃತಿದೇವಿಯನ್ನೇ ಸ್ವೀಕರಿಸಬೇಕೆಂದು ಹೇಳಿ ಆಕೆಯ ಮಹಿಮೆಯನ್ನೂ ವರ್ಣಿಸುವನು. "ಯಾರು ಪುಣ್ಯಕ್ಷೇತ್ರಗಳಲ್ಲಿ ಶಿವಲಿಂಗವನ್ನು ಪೂಜಿಸುವರೋ ಅವರಿಗೆ ಅನಂತ ಫಲಗಳು ಕೈಗೂಡುವುವು" ಎಂದು ಹೇಳಿ "ಶಿವ" ಎಂಬ ಎರಡಕ್ಷರದ ಮಹಿಮೆಯನ್ನು ಪರಮಾತ್ಮನು ಕೊಂಡಾಡುವನು. ಪ್ರಕೃತಿದೇವಿಗೂ ಕೂಡ ಎಲ್ಲ ಗ್ರಾಮ, ನಗರಗಳಲ್ಲೂ ಪೂಜ್ಯಳಾಗುವಂತೆ ವರವನ್ನು ಕೊಟ್ಟು, "ಯಾರು ಸತ್ಯ ಯುಗದಲ್ಲಿ ದಾಕ್ಷಾಯಣಿಯಾಗಿ ಮಹಾದೇವನ ಪತ್ನಿ ಎನಿಸಿಕೊಂಡು ದಕ್ಷಯಜ್ಞಕುಂಡದಲ್ಲಿ ತನ್ನ ಶರೀರವನ್ನು ತ್ಯಜಿಸಿ, ಮುಂದೆ ಹಿಮವಂತನ ಹೊಟ್ಟೆಯಲ್ಲಿ 'ಪಾರ್ವತೀ' ಎಂಬ ಹೆಸರಿನಿಂದ ಹುಟ್ಟಿ ಶಿವಪತ್ನಿಯಾಗುವಳೋ ಮತ್ತು ಕೊನೆಯಲ್ಲಿ ಶಿವನಲ್ಲೇ ಐಕ್ಯಳಾಗುವಳೋ ಆಕೆಯೇ ಈ ಪ್ರಕೃತಿದೇವಿ. ಇವಳಿಗೆ ಎಲ್ಲೆಡೆಯಲ್ಲೂ ಪೂಜ್ಯತೆಯುಂಟು" ಎಂದು ಹೇಳುತ್ತಾ, ಅನೇಕಮಂತ್ರ, ತಂತ್ರ, ಶಕ್ತಿಗಳನ್ನು ಪ್ರಕೃತಿಗೆ ದಯಪಾಲಿಸಿದನು. ಹಾಗೆಯೇ ಶಿವನಿಗೂ, ಉಳಿದ ಎಲ್ಲ ದೇವತೆಗಳಿಗೂ ಮಂತ್ರೋಪದೇಶಮಾಡಿ, ವರವಿತ್ತು, ಬ್ರಹ್ಮದೇವನಿಗೆ ಮುಂದಿನ ಸೃಷ್ಟಿಯನ್ನು ಮಾಡುವಂತೆ ಆಜ್ಞಾಪಿಸಿ ಗೋಪ ಗೋಪಿಯರೊಡನೆ ಆನಂದಮಯವಾದ ಬೃಂದಾವನವನ್ನು ಸೇರಿದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಸಪ್ತಮೋಽಧ್ಯಾಯಃ ॥

॥ ಸೌತಿರುವಾಚ ॥

ತದಾ ಬ್ರಹ್ಮಾ ತಪಃ ಕೃತ್ವಾ ಸಿದ್ಧಿಂ ಪ್ರಾಪ್ಯ ಯಥೇಪ್ಸಿತಾಂ ।
ಸಸೃಜೇ ಪೃಥಿವೀಮಾದೌ ಮಧುಕೈಟಭಮೇದಸಾ ॥ ೧ ॥

ಸಸೃಜೇ ಪರ್ವತಾನಷ್ಟೌ ಪ್ರಧಾನಾನ್ ಸುಮನೋಹರಾನ್ ।
ಕ್ಷುದ್ರಾನಸಂಖ್ಯಾನ್ಕಿಂ ಬ್ರೂಮಃ ಪ್ರಧಾನಾಖ್ಯಾಂ ನಿಶಾಮಯ ॥ ೨ ॥

ಸುಮೇರುಂ ಚೈವ ಕೈಲಾಸಂ ಮಲಯಂ ಚ ಹಿಮಾಲಯಂ ।
ಉದಯಂ ಚ ತಥಾಸ್ತಂ ಚ ಸುವೇಲಂ ಗಂಧಮಾದನಂ ॥ ೩ ॥

ಏಳನೆಯ ಅಧ್ಯಾಯವು

೧. ಅನಂತರ ಚತುರ್ಮುಖ ಬ್ರಹ್ಮನು ತಪಸ್ಸು ಮಾಡಿ ಇಷ್ಟಾರ್ಥಸಿದ್ಧಿಯನ್ನು ಪಡೆದು, ಮಧುಕೈಟಭರ ಮೇದಸ್ಸಿನಿಂದ ಮೊದಲು ಭೂಮಿಯನ್ನು ಸೃಜಿಸಿದನು.

೨. ಅನಂತರ ಮುಖ್ಯವೂ, ಮನೋಹರವೂ ಆದ ಎಂಟು ಕುಲಪರ್ವತಗಳನ್ನೂ, ಲೆಕ್ಕವಿಲ್ಲದಷ್ಟು ಸಣ್ಣ ಪರ್ವತಗಳನ್ನೂ, ಸೃಷ್ಟಿಮಾಡಿದನು. ಅವುಗಳಲ್ಲಿ ಪ್ರಧಾನವಾದವುಗಳನ್ನು ಹೇಳುವೆನು.

೩. ಸುಮೇರು, ಕೈಲಾಸ, ಮಲಯ, ಹಿಮಾಲಯ, ಉದಯ, ಅಸ್ತ ಸುವೇಲ, ಗಂಧಮಾದನ, ಎಂಬ ಎಂಟು ಕುಲಪರ್ವತಗಳು ಮುಖ್ಯವಾದವುಗಳು.

ಸಮುದ್ರಾನ್ ಸಸೃಜೇ ಸಪ್ತ ನದಾನ್ಕತಿವಿಧಾ ನದೀಃ ।
ವೃಕ್ಷಾಂಶ್ಚ ಗ್ರಾಮನಗರಂ ಸಮುದ್ರಾಖ್ಯಾ ನಿಶಾಮಯ ॥ ೪ ॥

ಲವಣೇಕ್ಷುಸುರಾಸರ್ಪಿರ್ದಧಿದುಗ್ಧ ಜಲಾರ್ಣವಾನ್ ।
ಲಕ್ಷಯೋಜನಮಾನೇನ ದ್ವಿಗುಣಾಂಶ್ಚ ಪರಾತ್ಪರಾನ್ ॥ ೫ ॥

ಸಪ್ತದ್ವೀಪಾಂಶ್ಚ ತದ್ಭೂಮಿಮಂಡಲೇ ಕಮಲಾಕೃತೇ ।
ಉಪದ್ವೀಪಾಂಸ್ತಥಾ ಸಪ್ತ ಸೀಮಾಶೈಲಾಂಶ್ಚ ಸಪ್ತ ಚ ॥ ೬ ॥

ನಿಬೋಧ ವಿಪ್ರ ದ್ವೀಪಾಖ್ಯಾಂ ಪುರಾ ಯಾ ವಿಧಿನಾ ಕೃತಾ ।
ಜಂಬೂ ಶಾಕ ಕುಶ ಪ್ಲಕ್ಷ ಕ್ರೌಂಚ ನ್ಯಗ್ರೋಧ ಪೌಷ್ಕರಾನ್ ॥ ೭ ॥

ಮೇರೋರಷ್ಟಸು ಶೃಂಗೇಷು ಸಸೃಜೇಽಷ್ಟೌ ಪುರೀಃ ಪ್ರಭುಃ ।
ಅಷ್ಟಾನಾಂ ಲೋಕಪಾಲಾನಾಂ ವಿಹಾರಾಯ ಮನೋಹರಂ ॥ ೮ ॥

ಮೂಲೇಽನಂತಸ್ಯ ನಗರೀಂ ನಿರ್ಮಾಯ ಜಗತಾಂ ಪತಿಃ ।
ಊರ್ಧ್ವೇ ಸ್ವರ್ಗಾಂಶ್ಚ ಸಪ್ತೈವ ತೇಷಾಮಾಖ್ಯಾಂ ನಿಶಾಮಯ ॥ ೯ ॥

೪-೫. ಅಂತಯೇ, ಲವಣ, (ಉಪ್ಪು), ಇಕ್ಷು (ಕಬ್ಬಿನರಸ), ಸುರಾ (ಮಧ್ಯ), ಸರ್ಪಿ (ತುಪ್ಪ), ದಧಿ, (ಮೊಸರು), ದುಗ್ಧ (ಹಾಲು), ಜಲ (ನೀರು) ರೂಪವಾದ ಏಳು ಸಮುದ್ರಗಳನ್ನೂ, ಅನೇಕ ನದ ನದಿಗಳನ್ನೂ, ಗ್ರಾಮ, ನಗರಗಳನ್ನೂ, ತರುಗುಲ್ಮಲತಾದಿಗಳನ್ನೂ ಸೃಷ್ಟಿಮಾಡಿದನು. ಮೇಲೆ ಹೇಳಿದ ಸಮುದ್ರಗಳು ಕ್ರಮವಾಗಿ ಲಕ್ಷಯೋಜನ ವಿಸ್ತೀರ್ಣವುಳ್ಳದ್ದಾಗಿ ಮುಂದೆ ಮುಂದೆ ದ್ವಿಗುಣಿತವಾಗಿವೆ.

೬-೭. ತಾವರೆಯಂತೆ ಮಂಡಲಾಕಾರವಾದ ಭೂಮಂಡಲದಲ್ಲಿ ಜಂಬೂ, ಶಾಕ, ಕುಶ, ಪ್ಲಕ್ಷ, ಕ್ರೌಂಚ, ನ್ಯಗ್ರೋಧ, ಪೌಷ್ಕರ, ಎಂಬ ಏಳು ದ್ವಿಪಗಳನ್ನೂ, ಅಲ್ಲದೆ ಏಳು ಉಪದ್ವೀಪಗಳನ್ನು, ಏಳು ಎಲ್ಲೆ ಪರ್ವತಗಳನ್ನೂ ಸೃಜಿಸಿದನು.

೮-೧೩. ಅನಂತರ ಅಷ್ಟದಿಕ್ಪಾಲಕರ ವಿಹಾರಕ್ಕಾಗಿ ಮೇರುಪರ್ವತದ ಎಂಟು ಶಿಖರಗಳಲ್ಲೂ ಎಂಟು ಸುಂದರವಾದ ಪಟ್ಟಣಗಳನ್ನು ನಿರ್ಮಿಸಿ, ಮೇರುಪರ್ವತದ ಬುಡದಲ್ಲಿ ಆದಿಶೇಷನಿಗೊಂದು ಪಟ್ಟಣವನ್ನು ಸೃಷ್ಟಿಮಾಡಿದನು. ಅದರ ಮೇಲೆ

ಭೂಲೋಕಂ ಚ ಭುವರ್ಲೋಕಂ ಸ್ವರ್ಲೋಕಂ ಸುಮನೋಹರಂ ।
ಜನೋಲೋಕಂ ತಪೋಲೋಕಂ ಸತ್ಯಲೋಕಂ ಚ ಶೌನಕ ॥ ೧೦ ॥

ಶೃಂಗಮೂರ್ಧ್ನಿ ಬ್ರಹ್ಮಲೋಕಂ ಜರಾದಿಪರಿವರ್ಜಿತಂ ।
ತದೂರ್ಧ್ವೇ ಧ್ರುವಲೋಕಂ ಚ ಸರ್ವತಃ ಸುಮನೋಹರಂ ॥ ೧೧ ॥

ತದಧಃ ಸಪ್ತಪಾತಾಲಾನ್ನಿರ್ಮಮೇ ಜಗದೀಶ್ವರಃ ।
ಸ್ವರ್ಗಾತಿರಿಕ್ತಭೋಗಾಢ್ಯಾನಧೋಧಃ ಕ್ರಮತೋ ಮುನೇ ॥ ೧೨ ॥

ಅತಲಂ ವಿತಲಂ ಚೈವ ಸುತಲಂ ಚ ತಲಾತಲಂ ।
ಮಹಾತಲಂ ಚ ಪಾತಾಲಂ ರಸಾತಲಮಧಸ್ತತಃ ॥ ೧೩ ॥

ಸಪ್ತದ್ವೀಪೈಃ ಸಪ್ತನಾಕೈಃ ಸಪ್ತಪಾತಾಲಸಂಜ್ಞಕೈಃ ।
ಏಭಿರ್ಲೋಕೈಶ್ಚ ಬ್ರಹ್ಮಾಂಡಂ ಬ್ರಹ್ಮಾಧಿಕೃತಮೇವ ಚ ॥ ೧೪ ॥

ಏವಂ ಚಾಸಂಖ್ಯಬ್ರಹ್ಮಾಂಡಂ ಸರ್ವಂ ಕೃತ್ರಿಮಮೇವ ಚ ।
ಮಹಾವಿಷ್ಣೋಶ್ಚ ಲೋಮ್ನಾಂ ಚ ವಿವರೇಷು ಚ ಶೌನಕ ॥ ೧೫ ॥

ಪ್ರತಿವಿಶ್ವೇಷು ದಿಕ್ಪಾಲಾ ಬ್ರಹ್ಮವಿಷ್ಣುಮಹೇಶ್ವರಾಃ ।
ಸುರಾನರಾದಯಃ ಸರ್ವೇ ಸಂತಿ ಕೃಷ್ಣಸ್ಯ ಮಾಯಯಾ ॥ ೧೬ ॥

ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹೋಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ ಎಂಬ ಏಳು ಲೋಕಗಳನ್ನೂ ಕ್ರಮವಾಗಿ ಮೇಲೆ ಮೇಲೆ ಸೃಜಿಸಿ, ಜರಾಮರಣರಹಿತವಾದ ಬ್ರಹ್ಮಲೋಕವನ್ನು ಶಿಖರದಲ್ಲಿಯೂ, ಅದಕ್ಕಿಂತ ಮೇಲೆ 'ನಿತ್ಯಲೋಕವನ್ನೂ' ಸೃಷ್ಟಿಮಾಡಿದನು. ಹಾಗೆಯೇ ಕೆಳಗೆ ಕ್ರಮವಾಗಿ ಅತಲ, ವಿತಲ, ಸುತಲ, ತಲಾತಲ ಮಹಾತಲ, ಪಾತಾಳ, ರಸಾತಲ ಎಂದು ಏಳು ಪಾತಾಳಲೋಕಗಳೂ ಸೃಷ್ಟವಾದುವು. ಪಾತಾಳಲೋಕದಲ್ಲೂ ಸ್ವರ್ಗಲೋಕಕ್ಕಿಂತ ಮಿಗಿಲಾದ ಸುಖಭೋಗಗಳುಂಟು.

೧೪–೧೬. ಬ್ರಹ್ಮನಿಂದ ಸೃಷ್ಟವಾದ ಬ್ರಹ್ಮಾಂಡವು, ಸಪ್ತದ್ವೀಪಗಳಿಂದಲೂ, ಸಪ್ತನಾಕ (ಸ್ವರ್ಗ) ಗಳಿಂದಲೂ, ಸಪ್ತ ಪಾತಾಳಲೋಕಗಳಿಂದಲೂ, ತುಂಬಿ ಅಗಣಿತವಾಗಿದೆ. ಕೃತಕವಾದ ಇವೆಲ್ಲವೂ ಮಹಾವಿಷ್ಣುವಿನ ರೋಮಕೂಪಗಳಲ್ಲಿ ಇದ್ದು ಹೊರಬಂದವು. ಕೃಷ್ಣಪರಮಾತ್ಮನ ಮಾಯೆಯಿಂದ ಪ್ರತಿಲೋಕದಲ್ಲೂ, ದಿಕ್ಪಾಲಕರೂ, ಬ್ರಹ್ಮವಿಷ್ಣುಮಹೇಶ್ವರರೂ, ಸುರನರಾದಿಗಳೂ ವ್ಯಾಪಿಸಿರುವರು.

ಬ್ರಹ್ಮಾಂಡಗಣನಾಂ ಕರ್ತುಂ ನ ಕ್ಷಮೋ ಜಗತಾಂ ಪತಿಃ ।
ನ ಶಂಕರೋ ನ ಧರ್ಮಶ್ಚ ನ ಚ ವಿಷ್ಣುಶ್ಚ ಕೇ ಸುರಾಃ ॥ ೧೭ ॥

ಸಂಖ್ಯಾತುಮೀಶ್ವರಃ ಶಕ್ತೋ ನ ಸಂಖ್ಯಾತುಂ ತಥಾಪಿ ಸಃ ।
ವಿಶ್ವಾಕಾಶದಿಶಾಂ ಚೈವ ಸರ್ವತೋ ಯದ್ಯಪಿ ಕ್ಷಮಃ ॥ ೧೮ ॥

ಕೃತ್ರಿಮಾಣಿ ಚ ವಿಶ್ವಾನಿ ವಿಶ್ವಸ್ಥಾನಿ ಚ ಯೋನಿ ಚ ।
ಅನಿತ್ಯಾನಿ ಚ ವಿಪ್ರೇಂದ್ರ ಸ್ವಪ್ನವನ್ನಶ್ವರಾಣಿ ಚ ॥ ೧೯ ॥

ವೈಕುಂಠ ಶಿವಲೋಕಶ್ಚ ಗೋಲೋಕಶ್ಚ ತಯೋಃ ಪರಃ ।
ನಿತ್ಯೋ ವಿಶ್ವಬಹಿರ್ಭೂತಶ್ಚಾತ್ಮಾಕಾಶದಿಶೋ ಯಥಾ ॥ ೨೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಸೌತಿಶೌನಕ ಸಂವಾದೇ
ಬ್ರಹ್ಮಖಂಡೇ "ಸೃಷ್ಟಿನಿರೂಪಣಂ" ನಾಮ ಸಪ್ತಮೋಽಧ್ಯಾಯಃ

೧೭-೨೦. ಬ್ರಹ್ಮಾಂಡವನ್ನು ಗಣನೆಮಾಡಲು ಜಗತ್ಪತಿಯಾದ ಬ್ರಹ್ಮನಿಂದಲೂ, ಶಂಕರ, ಧರ್ಮ, ವಿಷ್ಣು ಇವರಿಂದಲೂ ಸಾಧ್ಯವಿಲ್ಲ. ಇನ್ನು ದೇವತೆಗಳ ಪಾಡೇನು ? ಸರ್ವವ್ಯಾಪಿಯಾದ ಪರಮಾತ್ಮನೊಬ್ಬನು ನಿಖಿಲ ವಿಶ್ವವನ್ನೂ, ಆಕಾಶದಿಕ್ಕುಗಳನ್ನೂ, ಲೆಕ್ಕಿಸಲು ಸಮರ್ಥನಾದರೂ, ಆತನು ನಿರ್ಲಿಪ್ತನಾಗಿರುವನು. ಈ ಪ್ರಪಂಚವೂ, ಅದರಲ್ಲಿರುವ ಅನಿತ್ಯ ವಸ್ತುಗಳೂ ಸ್ವಪ್ನದಂತೆ ಕ್ಷಣಿಕವಾದವು. ವಿಶ್ವಕ್ಕೆ ಬೇರೆಯಾಗಿರುವ ವೈಕುಂಠ, ಶಿವಲೋಕಗಳೂ, ಅದರ ಮೇಲಿರುವ ಗೋಲೋಕವೂ, ಆಕಾಶ, ದಿಕ್ಕುಗಳಂತೆ ನಿತ್ಯವಾದವು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಬ್ರಹ್ಮಖಂಡದಲ್ಲಿ
"ಸೃಷ್ಟಿನಿರೂಪಣ"ವೆಂಬ ಏಳನೆಯ
ಅಧ್ಯಾಯವು ಮುಗಿದುದು.

ಏಳನೆಯ ಅಧ್ಯಾಯದ ಸಾರಾಂಶವು

ಪರಮಾತ್ಮನ ಅಪ್ಪಣೆಯಂತೆ ಚತುರ್ಮುಖಬ್ರಹ್ಮನು ಮೊದಲು ಭೂಮಿಯನ್ನು ಸೃಷ್ಟಿಮಾಡಿ, ಅಷ್ಟಕುಲಪರ್ವತಗಳನ್ನೂ, ಸಪ್ತಸಮುದ್ರಗಳನ್ನೂ, ಸಪ್ತದ್ವೀಪಗಳನ್ನೂ, ಹದಿನಾಲ್ಕು ಲೋಕಗಳನ್ನೂ, ಎಣಿಸಲಾರದಷ್ಟು ಮರಗಿಡಗಳನ್ನೂ, ಬೆಟ್ಟಹೊಳೆಗಳನ್ನೂ, ಸೃಜಿಸಿದನು. ಆದರೆ ಇವೆಲ್ಲವೂ ನಶ್ವರವಾದವು. ಪರಮಾತ್ಮನೊಬ್ಬನೇ ಎಂದೆಂದೂ ನಾಶರಹಿತನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

|| ಅಷ್ಟಮೋಽಧ್ಯಾಯಃ ||

|| ಸೌತಿರುವಾಚ||

ಬ್ರಹ್ಮಾ ವಿಶ್ವಂ ವಿನಿರ್ಮಾಯ ಸಾವಿತ್ರ್ಯಾಂ ವರಯೋಷಿತಿ |
ಚಕಾರ ವೀರ್ಯಾಧಾನಂ ಚ ಕಾಮುಕ್ಯಾಂ ಕಾಮುಕೋ ಯಥಾ || ೧ ||

ಸಾ ದಿವ್ಯಂ ಶತವರ್ಷಂ ಚ ಧೃತ್ವಾ ಗರ್ಭಂ ಸುದುಸ್ಸಹಂ |
ಸುಪ್ರಸೂತಾ ಚ ಸುಷುವೇ ಚತುರ್ವೇದಾನ್ ಮನೋಹರಾನ್ || ೨ ||

ಎಂಟನೆಯ ಅಧ್ಯಾಯವು

೧. ಸೂತಪುತ್ರ :—ಚತುರ್ಮುಖಬ್ರಹ್ಮನು ಪ್ರಪಂಚವನ್ನು ಸೃಷ್ಟಿಮಾಡಿ ಪ್ರಜೋತ್ಪತ್ತಿಗಾಗಿ ಕಾಮುಕಿಯಾದ ತನ್ನ ಪತ್ನಿಯಲ್ಲಿ ವೀರ್ಯವನ್ನಿಡುವ ಕಾಮುಕನಂತೆ, ಸಾವಿತ್ರಿಯಲ್ಲಿ ತನ್ನ ವೀರ್ಯಾಧಾನಮಾಡಿದನು.

೨. ಸಾವಿತ್ರೀದೇವಿಯು ಪ್ರಜೆಗಳೆಲ್ಲ ಅಡಗಿರುವುದರಿಂದ ಸಹಿಸಲು ಕಷ್ಟ ವಾದ ತನ್ನ ಗರ್ಭವನ್ನು ನೂರುವರ್ಷಗಳ ಕಾಲ ಸಹಿಸಿಕೊಂಡಿದ್ದು, ಮೊದಲು ಮನೋಹರವಾದ ಋಕ್, ಯಜುಸ್ಸು, ಸಾಮ, ಅಥರ್ವಣಗಳೆಂಬ ನಾಲ್ಕು ವೇದಗಳನ್ನು ಪ್ರಸುವಿಸಿದಳು.

ವಿವಿಧಾನ್ ಶಾಸ್ತ್ರಸಂಘಾಂಶ್ಚ ತರ್ಕವ್ಯಾಕರಣಾದಿಕಾನ್ ।
ಷಟ್ತ್ರಿಂಶತ್ ಸಂಖ್ಯಕಾ ದಿವ್ಯಾ ರಾಗಿಣೀಃ ಸುಮನೋಹರಾಃ ॥ ೩ ॥

ಷಡ್ರಾಗಾನ್ ಸುಂಪರಾಂಶ್ಚೈವ ನಾನಾತಾಲ ಸಮನ್ವಿತಾನ್ ।
ಸತ್ಯತ್ರೇತಾದ್ವಾಪರಾಂಶ್ಚ ಕಲಿಂ ಚ ಕಲಹಪ್ರಿಯಂ ॥ ೪ ॥

ವರ್ಷಂ ಮಾಸಂ ಋತುಂ ಚೈವ ತಿಥಿಂ ದಂಡಕ್ಷಣಾದಿಕಂ ।
ದಿನಂ ರಾತ್ರಿಂ ಚ ವಾರಾಂಶ್ಚ ಸಂಧ್ಯಾಮುಷಸಮೇವ ಚ ॥ ೫ ॥

ಪುಷ್ಟಿಂ ಚ ದೇವಸೇನಾಂ ಚ ಮೇಧಾಂ ಚ ವಿಜಯಾಂ ಜಯಾಂ ।
ಷಟ್ಕೃತ್ತಿಕಾಶ್ಚ ಯೋಗಾಂಶ್ಚ ಕರಣಂ ಚ ತಪೋಧನಾ ॥ ೬ ॥

ದೇವಸೇನಾಂ ಮಹಾಷಷ್ಠೀಂ ಕಾರ್ತಿಕೇಯಪ್ರಿಯಾಂ ಸತೀಂ ।
ಮಾತೃಕಾಸು ಪ್ರಧಾನಾ ಸಾ ಬಾಲಾನಾಮಿಷ್ಟದೇವತಾ ॥ ೭ ॥

೩–೪. ಅಂತೆಯೇ ತರ್ಕ, ವ್ಯಾಕರಣ, ಮೀಮಾಂಸ ಮುಂತಾದ ಶಾಸ್ತ್ರ ಸಮೂಹಗಳನ್ನೂ, ಮನೋಹರವಾದ ಮೂವತ್ತಾರು ಸ್ತ್ರೀರಾಗಗಳನ್ನೂ (ಶಾಕ್ತೇಯ ದರ್ಶನದಲ್ಲಿರುವ ಮೂವತ್ತಾರು ತತ್ವಗಳು ಇದರಿಂದ ಸೂಚಿತವಾಗುತ್ತವೆ.) ಅನೇಕ ತಾಲ, ಲಯಬದ್ಧವಾಗಿ ಇಂಪಾದ ಆರು ಪುರುಷರಾಗಗಳನ್ನೂ, ಸತ್ಯ, ತ್ರೇತಾ, ದ್ವಾಪರ ಮತ್ತು (ಕಲಹ ಪ್ರಿಯನಾದ) ಕಲಿ ಎಂಬ ನಾಲ್ಕು ಯುಗಪುರುಷರನ್ನೂ ಪಡೆದಳು.

೫–೬ ವರ್ಷ, ಮಾಸ, ಋತುಗಳೂ, ತಿಥಿ, ದಂಡ, ಕ್ಷಣಗಳೂ, ದಿನ, ರಾತ್ರಿ, ವಾರಗಳೂ, ಪ್ರಾತಸ್ಸಂಧ್ಯೆ, ಸಾಯಂಸಂಧ್ಯೆಗಳೂ, ಪುಷ್ಟಿ, ದೇವಸೇನಾ, ಮೇಧಾ, ವಿಜಯಾ, ಜಯಾ ಮೊದಲಾದ ದೇವತೆಗಳೂ ತಪೋಧನಳಾದ ಸಾವಿತ್ರಿಯ ಗರ್ಭದಿಂದ ಆಕಾರಯುತರಾಗಿ ಹೊರಬಂದರು. ಷಟ್ಕೃತ್ತಿಕೆಯರೂ, ಯೋಗ ಮತ್ತು ಕರಣಗಳೂ, ಆಕೆಯ ಗರ್ಭದಿಂದಲೇ ಉತ್ಪತ್ತಿ ಪಡೆದರು.

೭. ಷಣ್ಮುಖನಪ್ರಿಯಳೂ, ಸಪ್ತಮಾತೃಕೆಯರಲ್ಲಿ* ಪ್ರಧಾನಳೂ, ಬಾಲಕರ ಇಷ್ಟದೇವತೆಯೂ, ಆದ ಷಷ್ಠೀದೇವಿಯೆಂದು ಪ್ರಸಿದ್ಧಳಾದ ದೇವಸೇನೆಯನ್ನೂ ಪ್ರಸವಿಸಿದಳು.

---

* ಸಪ್ತಮಾತೃಕೆಯರು:—ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, (ದೇವಸೇನಾ) ವೈಷ್ಣವೀ, ವಾರಾಹೀ, ಇಂದ್ರಾಣೀ, ಚಾಮುಂಡಾ.

ಬ್ರಾಹ್ಮಂ ಪಾದ್ಮಂ ಚ ವಾರಾಹಂ ಕಲ್ಪತ್ರಯಮಿದಂ ಸ್ಮೃತಂ ।
ನಿತ್ಯಂ ನೈಮಿತ್ತಿಕಂ ಚೈವ ದ್ವಿಪರಾರ್ಧಂ ಚ ಪ್ರಾಕೃತಂ ॥ ೮ ॥

ಚತುರ್ವಿಧಂ ಚ ಪ್ರಲಯಂ ಕಾಲಂ ವೈ ಮೃತ್ಯುಕನ್ಯಕಾಂ ।
ಸರ್ವಾನ್ ವ್ಯಾಧಿಗಣಾಂಶ್ಚೈವ ಸಾ ಪ್ರಸೂಯ ಸ್ತನಂ ದದೌ ॥ ೯ ॥

ಅಥ ಧಾತುಃ ಪೃಷ್ಠದೇಶಾದಧರ್ಮಃ ಸಮಜಾಯತ ।
ಅಲಕ್ಷ್ಮೀಸ್ತದ್ವಾಮಪಾರ್ಶ್ವಾತ್ ಬಭೂವಾತ್ಯಂತ ಕಾಮಿನೀ ॥ ೧೦ ॥

ನಾಭಿದೇಶಾದ್ವಿಶ್ವಕರ್ಮಾ ಜಾತೋ ವೈ ಶಿಲ್ಪಿನಾಂ ಗುರುಃ ।
ಮಹಾಂತೋ ವಸವೋಽಷ್ಟೌ ಚ ಮಹಾಬಲಪರಾಕ್ರಮಾಃ ॥ ೧೧ ॥

ಅಥ ಧಾತುಶ್ಚ ಮನಸ ಆವಿರ್ಭೂತಾ ಕುಮಾರಕಾಃ ।
ಚತ್ವಾರಃ ಪಂಚವರ್ಷೀಯಾಃ ಜ್ವಲಂತೋ ಬ್ರಹ್ಮತೇಜಸಾ ॥ ೧೨ ॥

ಸನಕಶ್ಚ ಸನಂದಶ್ಚ ತೃತೀಯಶ್ಚ ಸನಾತನಃ ।
ಸನತ್ಕುಮಾರೋ ಭಗವಾಂಶ್ಚತುರ್ಥೋ ಜ್ಞಾನಿನಾಂ ವರಃ ॥ ೧೩ ॥

೮–೯. ಬ್ರಾಹ್ಮ, ಪಾದ್ಮ, ವಾರಾಹ ಎಂಬ ಮೂರು ಕಲ್ಪಗಳನ್ನೂ, ನಿತ್ಯ, ನೈಮಿತ್ತಿಕ, ದ್ವಿಪರಾರ್ಧ ಮತ್ತು ಪ್ರಾಕೃತವೆಂಬ ಚತುರ್ವಿಧ ಪ್ರಳಯಗಳನ್ನೂ, ಕಾಲಪುರುಷನನ್ನೂ, ಮೃತ್ಯುಕನ್ಯೆಯನ್ನೂ, ಎಲ್ಲ ರೋಗಗಳ ಸಮೂಹವನ್ನೂ ಹಡೆದು ಸಾವಿತ್ರಿಯು ಸ್ತನ್ಯವನ್ನು ಕೊಟ್ಟಳು.

೧೦ ಅನಂತರ ಬ್ರಹ್ಮದೇವನ ಬೆಂಭಾಗದಿಂದ ಅಧರ್ಮಪುರುಷನೂ, ಅವನ ಎಡಭಾಗದಿಂದ ಕಾಮಾತುರಳಾದ ದರಿದ್ರಲಕ್ಷ್ಮಿಯೂ ಜನಿಸಿದರು.

೧೧. ನಾಭಿಪ್ರದೇಶದಿಂದ ಶಿಲ್ಪಿಗಳಿಗೆ ಮುಖ್ಯಪುರುಷನಾದ ವಿಶ್ವಕರ್ಮನೂ ಮಹಾಪರಾಕ್ರಮಶಾಲಿಗಳೂ, ಮಹಾತ್ಮರೂ ಆದ ಅಷ್ಟವಸುಗಳೂ* ಜನ್ಮವೆತ್ತಿದರು.

೧೨–೧೩. ಅನಂತರ ಬ್ರಹ್ಮನ ಮನಸ್ಸಿನಿಂದ, ಮಹಾತೇಜಸ್ವಿಗಳೂ, ಜನನ ಕಾಲದಲ್ಲಿಯೇ ಐದು ವರ್ಷ ವಯಸ್ಕರೂ ಆದ ನಾಲ್ಕುಜನ ಬಾಲಕರು ಆವಿರ್ಭವಿಸಿದರು. ಜ್ಞಾನಿಶ್ರೇಷ್ಠರಾದ ಅವರಿಗೆ ಕ್ರಮವಾಗಿ ಸನಕ, ಸನಂದ, ಸನಾತನ, ಸನತ್ಕುಮಾರರೆಂದು ದಿವ್ಯನಾಮಗಳು.

ಅಷ್ಟವಸುಗಳು:— ಧರ, ಧ್ರುವ, ಸೋಮ, ಅಹ, ಅನಿಲ, ಪ್ರತ್ಯೂಷ, ಪ್ರಭಾಸರೆಂಬುದಾಗಿ ಎಂಟುಮಂದಿ ಎಂದು ಭಾರತದ ಆದಿಪರ್ವದಲ್ಲಿ ಹೇಳಿದೆ.

ಆವಿರ್ಬಭೂವ ಮುಖತಃ ಕುಮಾರಃ ಕನಕಪ್ರಭಃ ।
ದಿವ್ಯರೂಪಧರಃ ಶ್ರೀಮಾನ್ ಸಸ್ತ್ರೀಕಃ ಸುಂದರೋ ಯುವಾ ॥ ೧೪ ॥

ಕ್ಷತ್ರಿಯಾಣಾಂ ಬೀಜರೂಪೋ ನಾಮ್ನಾ ಸ್ವಾಯಂಭುವೋ ಮನುಃ ।
ಯಾ ಸ್ತ್ರೀ ಸಾ ಶತರೂಪಾ ಚ ರೂಪಾಢ್ಯಾ ಕಮಲಾಕಲಾ ॥ ೧೫ ॥

ಸಸ್ತ್ರೀಕಶ್ಚ ಮನುಸ್ತಸ್ಥೌ ಧಾತ್ರಾಜ್ಞಾಪರಿಪಾಲಕಃ ।
ಸ್ವಯಂ ವಿಧಾತಾ ಪುತ್ರಾಂಶ್ಚ ತಾನುವಾಚ ಪ್ರಹರ್ಷಿತಾನ್ ॥ ೧೬ ॥

ಸೃಷ್ಟಿಂ ಕರ್ತುಂ ಮಹಾಭಾಗೋ ಮಹಾಭಾಗವತಾನ್ ದ್ವಿಜ ।
ಜಗ್ಮುಸ್ತೇ ಚ ನಹೀತ್ಯುಕ್ತ್ವಾ ತಪ್ತುಂ ಕೃಷ್ಣಪರಾಯಣಾಃ ॥ ೧೭ ॥

ಚುಕೋಪ ಹೇತುನಾ ತೇನ ವಿಧಾತಾ ಜಗತಾಂ ಪತಿಃ ।
ಕೋಪಾಸಕ್ತಸ್ಯ ಚ ವಿಧೇರ್ಜ್ವಲತೋ ಬ್ರಹ್ಮತೇಜಸಾ ॥ ೧೮ ॥

ಆವಿರ್ಭೂತಾ ಲಲಾಟಾಚ್ಚ ರುದ್ರಾ ಏಕಾದಶ ಪ್ರಭೋ ।
ಕಾಲಾಗ್ನಿರುದ್ರಃ ಸಂಹರ್ತಾ ತೇಷಾಮೇಕಃ ಪ್ರಕೀರ್ತಿತಃ ॥ ೧೯ ॥

೧೪–೧೫. ಬ್ರಹ್ಮನ ಬಾಯಿನಿಂದ ಸುವರ್ಣದಂತೆ ಹೊಂಬಣವುಳ್ಳ, ಸುಂದರ ಪುರುಷನೊಬ್ಬನು ಒಬ್ಬ ಸ್ತ್ರೀಯೊಡನೆ ಅವತರಿಸಿದನು. ದಿವ್ಯರೂಪಧರನಾದ ಆತನೇ ಕ್ಷತ್ರಿಯರಿಗೆಲ್ಲಾ ಮೂಲಪುರುಷನಾದ ಸ್ವಾಯಂಭುವಮನುವೆಂಬುವನು. ಲಕ್ಷ್ಮೀ ದೇವಿಯಂತೆ ಸುಂದರಿಯಾದ ಆ ಸ್ತ್ರೀಯೇ ಅವನ ಪತ್ನಿಯಾದ ಶತರೂಪೆ ಎಂಬುವಳು.

೧೬–೧೭. ಹೆಂಡತಿಯೊಡಗೂಡಿದ ಸಾಯಂಭುವಮನುವು ಬ್ರಹ್ಮನ ಅಪ್ಪಣೆ ಯನ್ನು ಪರಿಪಾಲಿಸಲು ನಿಂತನು. ಭಗವದ್ಭಕ್ತರಾದ ಉಳಿದ ನಾಲ್ವರು ಪುತ್ರರಿಗೆ ಸ್ವಯಂಸೃಷ್ಟಿಕರ್ತನಾದ ಬ್ರಹ್ಮನು ಸೃಷ್ಟಿಯ ಕೆಲಸವನ್ನು ನಿಯಮಿಸಲು, ಅವರು ಆಗದೆಂದು ಹೇಳಿ ಶ್ರೀಕೃಷ್ಣನನ್ನು ಕುರಿತು ತಪಸ್ಸುಮಾಡಲು ಹೊರಟು ಹೋದರು.

೧೮–೧೯. ತನ್ನ ಆಜ್ಞೆಯನ್ನು ತಿರಸ್ಕರಿಸಿದುದರಿಂದ ಜಗತ್ಪತಿಯೂ, ಸೃಷ್ಟಿಕರ್ತನೂ ಆದ ಬ್ರಹ್ಮನಿಗೆ ಕೋಪ ಬಂದಿತು. ಕೂಡಲೇ ಬ್ರಹ್ಮತೇಜಸ್ಸಿನಿಂದ ಉರಿಯುತ್ತಿರುವ ಅವನ ಹಣೆಯಿಂದ ಏಕಾದಶರುದ್ರರು ಜನಿಸಿದರು. ಅವರಲ್ಲಿ ಕಾಲಾಗ್ನಿರುದ್ರನೊಬ್ಬನು ಜಗತ್ತಿನ ಸಂಹಾರಕನೆಂದು, ಪ್ರಖ್ಯಾತಿಗೊಂಡನು.

ಸರ್ವೇಷಾಮೇವ ವಿಶ್ವಾನಾಂ ಸ ತಾಮಸ ಇತಿ ಸ್ಮೃತಃ ।
ರಾಜಸಶ್ಚ ಸ್ವಯಂ ಬ್ರಹ್ಮಾ ಶಿವೋ ವಿಷ್ಣುಶ್ಚ ಸಾತ್ವಿಕೌ ।. ೨೦ ॥

ಗೋಲೋಕನಾಥಃ ಕೃಷ್ಣಶ್ಚ ನಿರ್ಗುಣಃ ಪ್ರಕೃತೇಃ ಪರಃ ।
ಪರಮಜ್ಞಾನಿನೋ ಮೂರ್ಖಾ ವದಂತೇ ತಾಮಸಂ ಶಿವಂ ॥
ಶುದ್ಧಸತ್ವಸ್ವರೂಪಂ ಚ ನಿರ್ಮಲಂ ವೈಷ್ಣವೋತ್ತಮಂ ॥ ೨೧ ॥

ಶೃಣು ನಾಮಾನಿ ರುದ್ರಾಣಾಂ ವೇದೋಕ್ತಾನಿ ಚ ಯಾನಿ ಚ ॥ ೨೨ ॥

ಮಹಾನ್ ಮಹಾತ್ಮಾ ಮತಿಮಾನ್ ಭೀಷಣಶ್ಚ ಭಯಂಕರಃ ।
ಋತುಧ್ವಜಶ್ಚೋರ್ಧ್ವಕೇಶಃ ಪಿಂಗಲಾಕ್ಷೋ ರುಚಿಶ್ಶುಚಿಃ ॥ ೨೩ ॥

---

೨೦. ಆದ್ದರಿಂದಲೇ ನಿಖಿಲ ಜಗತ್ತಿನಲ್ಲಿಯೂ ಕಾಲಾಗ್ನಿರುದ್ರನನ್ನು ‘ ತಾಮಸ ’ ಎಂದರೆ ತಮೋಗುಣ ಪ್ರಧಾನನೆನ್ನುವರು. ಚತುರ್ಮುಖಬ್ರಹ್ಮನು ರಜೋಗುಣ ಪ್ರಧಾನನು. ಶಿವ, ವಿಷ್ಣು ಇವರಿಬ್ಬರೂ ಸಾತ್ವಿಕರು. ಅಂದರೆ ಸತ್ವಗುಣಪ್ರಧಾನರು.

೨೧. ಗೋಲೋಕಾಧಿಪತಿಯಾದ ಶ್ರೀಕೃಷ್ಣನು ಗುಣರಹಿತನು, ಪ್ರಕೃತಿಗಿಂತಲೂ ಶ್ರೇಷ್ಠನಾದವನು. ಆದರೆ ಅಜ್ಞಾನಿಗಳು ಶಿವನನ್ನು ತಮೋಗುಣಪ್ರಧಾನನೆಂದು ಹೇಳುವುದು ಅವರ ಅಜ್ಞತೆಯನ್ನು ಹೊರಪಡಿಸುವುದು. ಆ ಶಿವನಾದರೋ ಸತ್ವಗುಣಸಂಪನ್ನನು, ಪಾಪಹರನು, ವಿಷ್ಣುಭಕ್ತಾಗ್ರೇಸರನು.

೨೨–೨೩. ಈಗ ವೇದೋಕ್ತವಾದ ಏಕಾದಶರುದ್ರರ ದಿವ್ಯನಾಮಗಳನ್ನು ಹೇಳುವೆನು ಕೇಳು. ಮಹಾನ್, ಮಹಾತ್ಮಾ, ಮತಿಮಾನ್, ಭೀಷಣ, ಭಯಂಕರ ಋತು, ಧ್ವಜ, ಊರ್ಧ್ವಕೇಶ, ಪಿಂಗಳಾಕ್ಷ, ರುಚಿ, ಶುಚಿ ಎಂಬುದು ಏಕಾದಶ ರುದ್ರರ ದಿವ್ಯನಾಮವೆಂದು ವೇದದಲ್ಲಿ ಹೇಳಿರುವುದು.

ಪುಲಸ್ತ್ಯೋ ದಕ್ಷಕರ್ಣಾಚ್ಚ ಪುಲಹೋ ವಾಮಕರ್ಣತಃ ।
ದಕ್ಷನೇತ್ರಾತ್ತಥಾಽತ್ರಿಶ್ಚ ವಾಮನೇತ್ರಾತ್ಕ್ರತುಃ ಸ್ವಯಂ ॥ ೨೪ ॥

ಅರಣಿರ್ನಾಸಿಕಾರಂಧ್ರಾದಂಗಿರಾಶ್ಚ ಮುಖಾದ್ರುಚಿಃ ।
ಭೃಗುಶ್ಚ ವಾಮಪಾರ್ಶ್ವಾಚ್ಚ ದಕ್ಷೋ ದಕ್ಷಿಣಪಾರ್ಶ್ವತಃ ॥ ೨೫ ॥

ಛಾಯಾಯಾಃ ಕರ್ದಮೋ ಜಾತೋ ನಾಭೇಃ ಪಂಚಶಿಖಸ್ತಥಾ ।
ವಕ್ಷಸಶ್ಚೈವ ವೋಢುಶ್ಚ ಕಂಠದೇಶಾಚ್ಚ ನಾರದಃ ॥ ೨೬ ॥

ಮರೀಚಿಃ ಸ್ಕಂಧದೇಶಾಚ್ಚೈವಾಪಾಂತರತಮಾ ಗಲಾತ್ ।
ವಸಿಷ್ಠೋ ರಸನಾದೇಶಾತ್ಪ್ರಚೇತಾ ಅಧರೋಷ್ಠತಃ ॥
ಹಂಸಶ್ಚ ವಾಮಕುಕ್ಷೇಶ್ಚ ದಕ್ಷಕುಕ್ಷೇರ್ಯತಿಃ ಸ್ವಯಂ ॥ ೨೭ ॥

ಸೃಷ್ಟಿಂ ವಿಧಾತುಂ ಸ ವಿಧಿಶ್ಚಕಾರಾಜ್ಞಾಂ ಸುತಾನ್ಪ್ರತಿ ॥
ಪಿತುರ್ವಾಕ್ಯಂ ಸಮಾಕರ್ಣ್ಯ ತಮುವಾಚ ಸ ನಾರದಃ ॥ ೨೮ ॥

೨೪–೨೫. ಅನಂತರ ಬ್ರಹ್ಮನ ಬಲಗಿವಿಯಿಂದ ಪುಲಸ್ತ್ಯನೂ, ಎಡಗಿವಿಯಿಂದ ಪುಲಹನೂ, ಬಲಗಣ್ಣಿನಿಂದ ಅತ್ರಿಯೂ, ಎಡಗಣ್ಣಿನಿಂದ ಕ್ರತುವೂ, ಮೂಗಿನ ಎರಡು ರಂಧ್ರದಿಂದ ಅರಣಿ ಮತ್ತು ಆಂಗೀರಸನೂ, ಬಾಯಿನಿಂದ ರುಚಿ ಎಂಬುವನೂ, ಎಡಭಾಗದಿಂದ ಭೃಗುವೂ, ಬಲಭಾಗದಿಂದ ದಕ್ಷನೂ ಜನಿಸಿ ಬ್ರಹ್ಮರ್ಷಿಗಳೆನಿಸಿಕೊಂಡರು.

೨೬–೨೭. ಅಂತೆಯೇ, ಬ್ರಹ್ಮನ ನೆರಳಿನಿಂದ ಕರ್ದಮನೂ, ಹೊಕ್ಕಳಿನಿಂದ ಪಂಚಶಿಖನೂ, ಎದೆಯಿಂದ ವೋಢುವೂ, ಕಂಠದೇಶದಿಂದ ನಾರದನೂ. ಹೆಗಲಿನಿಂದ ಮರೀಚಿಯೂ, ಕತ್ತಿನಿಂದ ಅಪಾಂತರತಮನೂ, ನಾಲಿಗೆಯಿಂದ ವಸಿಷ್ಠನೂ, ಕೆಳತುಟಿಯಿಂದ ಪ್ರಚೇತಸನೂ, ಎಡಕೌಂಕುಳಿನಿಂದ ಹಂಸನೂ, ಬಲಕೌಂಕುಳಿನಿಂದ ಯತಿಯೂ ಜನಿಸಿ, ಬ್ರಹ್ಮರ್ಷಿಗಳಾದರು.

೨೮. ಬ್ರಹ್ಮದೇವನು ಈ ಮಕ್ಕಳೆಲ್ಲರನ್ನೂ ಕುರಿತು ಮುಂದಿನ ಸೃಷ್ಟಿಯನ್ನು ಮಾಡಲು ಅಪ್ಪಣೆ ಮಾಡಿದಾಗ ತಂದೆಯ ಮಾತನ್ನು ಕೇಳಿದ ನಾರದನು ಈ ಮುಂದಿನ ಮಾತುಗಳನ್ನು ವಿಜ್ಞಾಪಿಸಿದನು.

॥ ನಾರದ ಉವಾಚ ॥

ಪೂರ್ವಮಾನಯ ಮಜ್ಜ್ಯೇಷ್ಠಾನ್ಸನಕಾದೀನ್ ಪಿತಾಮಹ ।
ಕಾರಯಿತ್ವಾ ದಾರಯುಕ್ತಾನಸ್ಮಾನ್ವದ ಜಗತ್ಪತೇ ॥ ೨೯ ॥

ಪಿತ್ರಾ ತೇ ತಪಸೇ ಯುಕ್ತಾಃ ಸಂಸಾರಾಯ ವಯಂ ಕಥಂ ।
ಅಹೋ ಹಂತ ಪ್ರಭೋರ್ಬುದ್ಧಿರ್ವಿಪರೀತಾಯ ಕಲ್ಪತೇ ॥ ೩೦ ॥

ಕಸ್ಮೈ ಪುತ್ರಾಯ ಪೀಯೂಷಾತ್ಪರಂ ದತ್ತಂ ತಪೋಽಧುನಾ ।
ಕಸ್ಮೈ ದದಾಸಿ ವಿಷಯಂ ವಿಷಮಂ ಚ ವಿಷಾಧಿಕಂ ॥ ೩೧ ॥

ಅತೀವ ನಿಮ್ನೇ ಘೋರೇ ಚ ಭವಾಬ್ಧೌ ಯಃ ಪತೇತ್ಸ್ಥಿತಃ ।
ನಿಷ್ಕೃತಿಸ್ತಸ್ಯ ನಾಸ್ತೀತಿ ಕೋಟಿಕಲ್ಪೇ ಗತೇಽಪಿ ಚ ॥ ೩೨ ॥

೨೯–೩೦. ನಾರದಃ– ಎಲೈ! ಪಿತಾಮಹನೇ, ನಮ್ಮ ಹಿರಿಯರಾದ ಸನಕಾದಿಗಳನ್ನು ಕರೆಸಿ ಅವರನ್ನು ಸಂಸಾರಿಗಳನ್ನಾಗಿ ಮಾಡಿ, ಅನಂತರ ನಮಗೆ ಆಜ್ಞೆ ಮಾಡುವುದುಚಿತವಲ್ಲವೇ ? ತಂದೆಯಾದ ನೀನು ಅವರನ್ನೆಲ್ಲಾ ತಪಸ್ಸಿಗೆ ಕಳುಹಿಸಿ ನಮ್ಮನ್ನು ಮಾತ್ರ ಸಂಸಾರದಲ್ಲಿ ನಿಯಮಿಸಿದರೆ–'ಪ್ರಭುವಿಗೆ ಬುದ್ಧಿ ವಿಪರೀತವಾಗಿದೆ, ಎಂದು ನೋಡಿದವರು ಆಡುವುದಿಲ್ಲವೇ ?

೩೧–೩೨. ಕೆಲವು ಮಕ್ಕಳಿಗೆ ಅಮೃತಪಾನಕ್ಕಿಂತಲೂ ಆನಂದಕರವಾದ ತಪೋಬಲವನ್ನು ಈಗ ದಯಪಾಲಿಸಿ, ಅದೇ ಸಮಯದಲ್ಲಿ ಮತ್ತೆ ಕೆಲವರಿಗೆ ವಿಷಕ್ಕಿಂತಲೂ ದುಃಖಕರವೂ ವಿಷಮವೂ ಆದ ಸಂಸಾರದಲ್ಲಿ ಪ್ರೇರಿಸುವೆ ತಂದೆಯೇ ! ಕೋಟಿಕಲ್ಪಗಳು ಕಳೆದರೂ ದಾಟಿಬರಲಾಗದ ಗಂಭೀರವೂ, ಭಯಂಕರವೂ ಆದ ಸಂಸಾರವೆಂಬ ಸಮುದ್ರದಲ್ಲಿ ಯಾರು ತಾನೇ ಬೀಳಲು ಬಯಸಿಯಾರು ? ಇದು ಉಚಿತವೇ ?

ನಿಸ್ತಾರ ಬೀಜಂ ಸರ್ವೇಷಾಂ ಬೀಜಂ ಚ ಪುರುಷೋತ್ತಮಂ ।
ಸರ್ವದಂ ಭಕ್ತಿದಂ ದಾಸ್ಯಪ್ರದಂ ಸತ್ಯಂ ಕೃಪಾಮಯಂ ॥ ೩೩ ॥

ಭಕ್ತೈಕಶರಣಂ ಭಕ್ತವತ್ಸಲಂ ಸ್ವಚ್ಛಮೇವ ಚ ।
ಭಕ್ತಪ್ರಿಯಂ ಭಕ್ತನಾಥಂ ಭಕ್ತಾನುಗ್ರಹಕಾರಕಂ ॥ ೩೪ ॥

ಭಕ್ತಾರಾಧ್ಯಂ ಭಕ್ತಸಾಧ್ಯಂ ವಿಹಾಯ ಪರಮೇಶ್ವರಂ ।
ಮನೋ ದದಾತಿ ಕೋ ಮೂಢೋ ವಿಷಯೇ ನಾಶಕಾರಣೇ ॥ ೩೫ ॥

ವಿಹಾಯ ಕೃಷ್ಣ ಸೇವಾಂ ಚ ಪೀಯೂಷಾದಧಿಕಂ ಪ್ರಿಯಾಂ ।
ಕೋ ಮೂಢೋ ವಿಷಮಶ್ನಾತಿ ವಿಷಮಂ ವಿಷಯಾಭಿದಂ ॥ ೩೬ ॥

ಸ್ವಪ್ನವನ್ನಶ್ವರಂ ತುಚ್ಛಮಸತ್ಯಂ ಮೃತ್ಯುಕಾರಣಂ ।
ಯಥಾ ದೀಪಶಿಖಾಗ್ರಂ ಚ ಕೀಟಾನಾಂ ಸುಮನೋಹರಂ ॥ ೩೭ ॥

ಯಥಾ ಬಡಿಶಮಾಂಸಂ ಚ ಮತ್ಸ್ಯಪಾತಸುಖಪ್ರದಂ ।
ತಥಾ ವಿಷಯಿಣಾಂ ತಾತ ವಿಷಯಂ ಮೃತ್ಯುಕಾರಣಂ ॥ ೩೮ ॥

೩೩–೩೫. ಪರಮಾತ್ಮನು ಎಲ್ಲ ಕಷ್ಟಗಳಿಂದಲೂ ಪಾರುಗಾಣಿಸುವನು. ಎಲ್ಲಕ್ಕೂ ಮೂಲಪುರುಷನು. ಸತ್ಯಸ್ವರೂಪನು. ದಯಾಮಯನು. ಕೇಳಿದವರ ಇಷ್ಟಾರ್ಥವನ್ನು ದಯಪಾಲಿಸುವವನು. ಭಕ್ತರನ್ನು ಕಂಡರೆ ಅವನ ವಾತ್ಸಲ್ಯವು ಅಪರಿಮಿತವಾಗುವುದು ಭಕ್ತರಿಂದ ಮಾತ್ರ ಆ ಪರಮಾತ್ಮನನ್ನು ಒಲಿಸಿಕೊಳ್ಳಲು ಸಾಧ್ಯ. ಇಂತ ಪರಮಾತ್ಮನಲ್ಲಿ ಭಕ್ತಿ ಇಡುವುದನ್ನು ಬಿಟ್ಟು ಯಾವ ಮೂಢನು ತಾನೇ ಜನನ ಮರಣಾತ್ಮಕವೂ, ಕ್ಷಣಿಕವೂ ಆದ ಸಂಸಾರದಲ್ಲಿ ಮನಸ್ಸನ್ನಿಟ್ಟಾನು ?

೩೬–೩೮. ಅಮೃತಕ್ಕಿಂತಲೂ ಆನಂದಕರವಾದ ಶ್ರೀಕೃಷ್ಣಪರಮಾತ್ಮನ ಸೇವೆಯನ್ನು ಬಿಟ್ಟು ವಿಷದಂತೆ ಹಾನಿಕರವೂ, ವಿಷಮವೂ ಆದ ವಿಷಯಸುಖದಲ್ಲಿ ಮನಸ್ಸಿಡುವವನು ಮೂಢನಲ್ಲವೇ ? ಸಂಸಾರವಾದರೋ ಸ್ವಪ್ನದಂತೆ ಕ್ಷಣಭಂಗುರವೂ ಅಸತ್ಯವೂ, ಮರಣಕಾರಣವೂ ಆದುದು. ಪತಂಗದ ಹುಳುಗಳಿಗೆ ದೀಪದ ಜ್ವಾಲೆಯು ಮನೋಹರವಾಗಿ ಕಾಣುವಂತೆ, ಮೀನುಗಳಿಗೆ ಗಾಳದ ತುದಿಯಲ್ಲಿರುವ ಮಾಂಸದ ಚೂರು ಹಿತವಾಗಿ ತೋರುವಂತೆ, ಸಂಸಾರವು ಮುಖಮಧುರವಾಗಿದ್ದರೂ, ಅದರೊಳಗೆ ವಿಷತುಂಬಿರುವುದರಿಂದ ಸಂಸಾರಿಗಳ ವಿಪತ್ತಿಗೆ ಕಾರಣವಾಗುವುದು.

ಇತ್ಯುಕ್ತ್ವಾ ನಾರದಸ್ತತ್ರ ವಿರರಾಮ ವಿಧೇಃ ಪುರಃ ।
ತಸ್ಥೌ ತಾತಂ ನಮಸ್ಕೃತ್ಯ ಜ್ವಲದಗ್ನಿಶಿಖೋಪಮಃ ॥ ೩೯ ॥

ಬ್ರಹ್ಮಾ ಕೋಪಪರೀತಶ್ಚ ಶಶಾಪ ತನಯಂ ದ್ವಿಜ ।
ಉವಾಚ ಕಂಪಿತಾಂಗಶ್ಚ ರಕ್ತಾಸ್ಯಃ ಸ್ಫುರಿತಾಧರಃ ॥ ೪೦ ॥

॥ ಬ್ರಹ್ಮೋವಾಚ ॥

ಭವಿತಾ ಜ್ಞಾನಲೋಪಸ್ತೇ ಮಚ್ಛಾಪೇನ ಚ ನಾರದ ।
ಕ್ರೀಡಾಮೃಗಶ್ಚ ತ್ವಂ ಸಾಧ್ವೀ ಯೋಷಿಲ್ಲುಬ್ಧಶ್ಚ ಲಂಪಟಃ ॥ ೪೧ ॥

ಸ್ಥಿರಯೌವನಸಯುಕ್ತಾನಾಂ ರೂಪಾಢ್ಯಾನಾಂ ಮನೋಹರಃ ।
ಪಂಚಾಶತ್ಕಾಮಿನೀನಾಂ ಚ ಭರ್ತಾ ಚ ಪ್ರಾಣವಲ್ಲಭಃ ॥ ೪೨ ॥

ಶೃಂಗಾರಶಾಸ್ತ್ರವೇತ್ತಾ ಚ ಮಹಾಶೃಂಗಾರಲೋಲುಪಃ ।
ನಾನಾಪ್ರಕಾರಶೃಂಗಾರನಿಪುಣಾನಾಂ ಗುರೋರ್ಗುರುಃ ॥ ೪೩ ॥

---

೩೯. ಅಗ್ನಿಶಿಖೆಯಂತೆ ತೇಜಸ್ವಿಯಾದ ನಾರದನು ಈ ಮಾತುಗಳನ್ನು ತಂದೆಯಾದ ಬ್ರಹ್ಮನಿಗೆ ವಿಜ್ಞಾಪಿಸಿ ವಿನಯದಿಂದ ನಮಸ್ಕರಿಸಿ ಮುಂದೆ ನಿಂತನು.

೪೦. ನಾರದನ ಮಾತನ್ನು ಕೇಳಿ, ಬ್ರಹ್ಮನಿಗೆ ತಡೆಯಲಾರದಷ್ಟು ಕೋಪ ಬಂದಿತು. ಮೈ, ಕೈಗಳೂ, ತುಟಿಗಳೂ ನಡುಗಲಾರಂಭಿಸಿದವು. ಮುಖವು ಕೆಂಪೇರಿತು. ಕೂಡಲೆ ನಾರದನಿಗೆ ಮುಂದೆ ಹೇಳುವಂತೆ ಶಾಪವನ್ನು ಕೊಟ್ಟನು.

೪೧-೪೨. ಬ್ರಹ್ಮಾ :—ಎಲೈ, ನಾರದನೇ! ನನ್ನ ಶಾಪದಿಂದ ನಿನಗೆ ಪರಮಾತ್ಮನ ಜ್ಞಾನವು ಅಳಿಯುವುದು. ಸಂಸಾರವನ್ನು ಹಳಿದುದರ ಫಲವಾಗಿ ನೀನು ಕೋತಿಗಳಂತೆ ಚಪಲನೂ, ಸ್ತ್ರೀಲೋಲುಪನೂ ಆಗುವೆ. ಅತಿಸುಂದರನೂ, ಸ್ಥಿರಯೌವನವುಳ್ಳವನೂ ಆಗುವ, ನಿನಗೆ ಐವತ್ತು ಜನ ಯೌವನ ಸ್ತ್ರೀಯರು ಪ್ರಿಯಪತ್ನಿಯರಾಗುವರು. ನೀನು ಅವರ ಪ್ರಾಣವಲ್ಲಭನಾಗುವೆ.

೪೩. ನೀನು ಕಾಮಶಾಸ್ತ್ರವನ್ನು ಚೆನ್ನಾಗಿ ತಿಳಿದು ಅತಿಕಾಮಾಸಕ್ತನಾಗುವೆ. ಮನ್ಮಥಕಲೆಯಲ್ಲಿ ನಿಪುಣರೆನಿಸುವ ವಾತ್ಸ್ಯಾಯನಾದಿಗಳಿಗೆಲ್ಲಾ ನೀನೇ ಗುರುವಾಗುವೆ.

ಗಂಧರ್ವಾಣಾಂ ಸುವರಃ ಸುಸ್ವರಶ್ಚ ಸುಗಾಯನಃ ।
ವೀಣಾವಾದನಸಂದರ್ಭನಿಷ್ಣಾತಃ ಸ್ಥಿರಯೌವನ || ೪೪ ||

ಪ್ರಾಜ್ಞೋ ಮಧುರವಾಕ್ ಶಾಂತಃ ಸುಶೀಲಃ ಸುಂದರಃ ಸುಧೀಃ ।
ಭವಿಷ್ಯಸಿ ನ ಸಂದೇಹೋ ನಾಮತಶ್ಚೋಪಬರ್ಹಣಃ || ೪೫ ||

ತಾಭಿರ್ದಿವ್ಯಂ ಲಕ್ಷಯುಗಂ ವಿಹೃತ್ಯ ನಿರ್ಜನೇ ವನೇ ।
ಪುನರ್ಮದೀಯ ಶಾಪೇನ ದಾಸೀಪುತ್ರಶ್ಚ ತತ್ಪರಃ || ೪೬ ||

ವತ್ಸ! ವೈಷ್ಣವಸಂಸರ್ಗಾತ್ ವೈಷ್ಣವೋಚ್ಛಿಷ್ಟ ಭೋಜನಾತ್ ।
ಪುನಃ ಕೃಷ್ಣ ಪ್ರಸಾದೇನ ಭವಿಷ್ಯಸಿ ಮಮಾತ್ಮಜಃ || ೪೭ ||

ಜ್ಞಾನಂ ದಾಸ್ಯಾಮಿ ತೇ ದಿವ್ಯಂ ಪುನರೇವ ಪುರಾತನಂ ।
ಅಧುನಾ ಭವ ನಷ್ಟಸ್ತ್ವಂ ಮತ್ಸುತೋ ನಿಪತ ಧ್ರುವಂ || ೪೮ ||

---

೪೪. ಗಂಧರ್ವರಿಗೆಲ್ಲಾ ನೀನು ಉತ್ತಮನೆನಿಸಿಕೊಳ್ಳುವೆ. ನಿನ್ನ ಕಂಠಸ್ವರವು ಮಧುರವಾಗಿರುವುದು. ಬಾಯಿಹಾಡುಗಾರಿಕೆಯಲ್ಲಾಗಲೀ, ವೀಣೆಯನ್ನು ಮಧುರವಾಗಿ ನುಡಿಸುವುದರಲ್ಲಾಗಲೀ, ನಿನಗೆ ಯಾರೂ ಎಣೆಯಾಗುವುದಿಲ್ಲ. ನಿನ್ನ ಯೌವನವು ಸ್ಥಿರವಾಗಿರುವುದು.

೪೫. ನೀನು ಒಳ್ಳೆಯ ಬುದ್ಧಿವಂತನೂ, ನಡತೆವಂತನೂ, ಶಾಂತನೂ ಮತ್ತು ಹಿತನುಡಿಯಾಡುವವನೂ ಆಗುವೆ. ಉಪಬರ್ಹಣನೆಂದು ನಿನಗೆ ಹೆಸರಾಗುವುದು.

೪೬–೪೭. ನಿನ್ನ ಪತ್ನಿಯರೊಡನೆ ಲಕ್ಷಯುಗಗಳ ಕಾಲ ನಿರ್ಜನವಾದ ವನದಲ್ಲಿ ಕ್ರೀಡಿಸಿ, ನಿನ್ನ ಚಪಲಚಿತ್ತದ ಫಲವಾಗಿ ಮತ್ತೆ ನನ್ನ ಶಾ ವನ್ನು ಹೊಂದಿ ದಾಸೀಪುತ್ರನಾಗಿ ಜನಿಸುವೆ. ಆದರೂ ಶ್ರೀಕೃಷ್ಣನಲ್ಲಿ ಅಚಲವಾದ ಭಕ್ತಿಯುಳ್ಳವನಾಗಿ, ವಿಷ್ಣುಭಕ್ತರೊಡಗೂಡಿ, ಅವರ ಎಂಜಲನ್ನು ಭಕ್ತಿಯಿಂದ ತಿಂದು, ಕೃಷ್ಣ ಪರಮಾತ್ಮನ ಅನುಗ್ರಹದಿಂದ ಪುನಃ ನನ್ನ ಮಗನಾಗಿ ಹುಟ್ಟುವೆ.

೪೮. ಆಗ ಪುನಃ ನಿನಗೆ ಹಿಂದಿನ ದಿವ್ಯಜ್ಞಾನವನ್ನು ಅನುಗ್ರಹಿಸುವೆನು. ಈಗ ನೀನು ನನ್ನ ಕಣ್ಮರೆಯಾಗಿ ಹೋಗು. ನನಗೆ ಮಗನಾಗಿರಬೇಡ.

ಬ್ರಹ್ಮೇತ್ಯುಕ್ತ್ವಾ ಸುತಂ ವಿಪ್ರ ವಿರರಾಮ ಜಗತ್ಪತಿಃ ।
ರುರೋದ ನಾರದಸ್ತಾತಮುವಾಚತ್ಸಂಪುಟಾಂಜಲಿಃ ॥ ೪೯ ॥

॥ ನಾರದ ಉವಾಚ ॥

ಕ್ರೋಧಂ ಸಂಹರ ಸಂಹರ್ತಸ್ತಾತತಾತ ಜಗದ್ಗುರೋ ।
ಸ್ರಷ್ಟುಸ್ತಪಸ್ವೀಶಸ್ಯಾಹೋ ಕ್ರೋಧೋಽಯಂ ಮಯ್ಯನಾಕರಃ ॥ ೫೦ ॥

ಶಪೇತ್ಪರಿತ್ಯಜೇದ್ವಿದ್ವಾನ್ ಪುತ್ರಮುತ್ಪಥಗಾಮಿನಂ ।
ತಪಸ್ವಿನಂ ಸುತಂ ಶಪ್ತುಂ ಕಥಮರ್ಹಸಿ ಪಂಡಿತ ॥ ೫೧ ॥

ಜನಿರ್ಭವತು ಮೇ ಬ್ರಹ್ಮನ್ ಯಾಸು ಯಾಸು ಚ ಯೋನಿಷು ।
ನ ಜಹಾತು ಹರೇರ್ಭಕ್ತಿರ್ಮಾಮೇವಂ ದೇಹಿ ಮೇ ವರಂ ॥ ೫೨ ॥

---

೪೯. ಜಗದೊಡೆಯನಾದ ಬ್ರಹ್ಮನು ಹೀಗೆ ಹೇಳಿ ಸುಮ್ಮನಾದನು. ಆಗ ನಾರದನು ಗೋಳಾಡುತ್ತಾ ಕೈಮುಗಿದುಕೊಂಡು ಬ್ರಹ್ಮನನ್ನು ಕುರಿತು, ಈ ರೀತಿಯಾಗಿ ವಿಜ್ಞಾಪಿಸಿಕೊಂಡನು.

೫೦. ನಾರದ:—ಎಲೈ, ಜಗದ್ಗುರುವಾದ ಬ್ರಹ್ಮದೇವನೇ! ನನ್ನಲ್ಲಿ ಕೃಪೆ ಮಾಡಿ ಕೋಪವನ್ನು ತಡೆದುಕೋ. ಜಗತ್ಸೃಷ್ಟಿಕರ್ತನೂ, ತಪಸ್ವಿಗಳಿಗೆಲ್ಲ ಒಡೆಯನೂ, ಆದ ನೀನು ಅಕಾರಣವಾಗಿ ನಿನ್ನ ಪುತ್ರನಾದ ನನ್ನಲ್ಲಿ ಕೋಪಿಸಿಕೊಳ್ಳುವುದುಚಿತವೇ?

೫೧. ಜ್ಞಾನಿಯಾದ ತಂದೆಯು ಕೆಟ್ಟಮಾರ್ಗದಲ್ಲಿ ನಡೆಯುವ ಮಗನನ್ನು ಶಪಿಸುವನು ಅಥವಾ ಮನೆಯಿಂದ ಬಿಟ್ಟೋಡಿಸುವನು. ಆದರೆ ನನ್ನಂಥ ತಪೋನಿರತನಾದ ಮಗನನ್ನು ಶಪಿಸುವುದು ಪಂಡಿತನಾದ ನಿನಗುಚಿತವೇ?

೫೨. ಹೋಗಲಿ, ನಿನ್ನ ಶಾಪವು ವ್ಯರ್ಥವಾಗದಿರುವುದರಿಂದ, ನನಗೆ ಯಾವ ಯಾವ ನೀಚಯೋನಿಯಲ್ಲಿ ಜನ್ಮ ಒದಗಿದರೂ, ಹರಿಭಕ್ತಿಯು ನನ್ನಲ್ಲಿ ಅಚಲವಾಗಿರುವಂಥ ವರವನ್ನಾದರೂ ದಯಪಾಲಿಸು.

ಪುತ್ರಶ್ಚೇಜ್ಜಗತಾಂ ಧಾತುರ್ನಾಸ್ತಿ ಭಕ್ತಿರ್ಹರೇಃ ಪದೇ ।
ಸೂಕರಾದತಿರಿಕ್ತಶ್ಚ ಸೋಽಧಮೋ ಭಾರತೇ ಭುವಿ ॥ ೫೩ ॥

ಜಾತಿಸ್ಮರೋ ಹರೇರ್ಭಕ್ತಿಯುಕ್ತಃ ಸೂಕರಯೋನಿಷು ।
ಜನಿರ್ಲಭೇತ್ ಸ ಪ್ರವರೋ ಗೋಲೋಕಂ ಯಾತಿ ಕರ್ಮಣಾ ॥ ೫೪ ॥

ಗೋವಿಂದಚರಣಾಂಭೋಜಭಕ್ತಿಮಾಧ್ವೀಕಮೀಪ್ಸಿತಂ ।
ಪಿಬತಾಂ ವೈಷ್ಣವಾದೀನಾಂ ಸ್ಪರ್ಶಪೂತಾ ವಸುಂಧರಾ ॥ ೫೫ ॥

ತೀರ್ಥಾನಿ ಸ್ಪರ್ಶಮಿಚ್ಛಂತಿ ವೈಷ್ಣವಾನಾಂ ಪಿತಾಮಹ ।
ಪಾಪಾನಾಂ ಪಾಪಿತತ್ವಾನಾಂ ಕ್ಷಾಲನಾಯಾತ್ಮನಾಮಪಿ ॥ ೫೬ ॥

೫೩–೫೪. ಜಗತ್ಸೃಷ್ಟಿಕರ್ತನ ಮಗನಾದವನು, ಹರಿಪದದಲ್ಲಿ ಭಕ್ತಿ ಇಡದಿದ್ದರೆ ಅವನು ಭಾರತಭೂಮಿಯಲ್ಲಿ ಹಂದಿಗಿಂತಲೂ ನೀಚನೆನಿಸಿಕೊಳ್ಳುವನು. ಇದಕ್ಕಿಂತಲೂ ಜನ್ಮಾಂತರದ ಜಾತಿಸ್ಮರಣಶಕ್ತಿಯೂ, ಹರಿಭಕ್ತಿಯೂ, ಉಳ್ಳಾತನು ಹಂದಿಯ ಜನ್ಮವನ್ನು ಪಡೆದರೂ ತನ್ನ ಪುಣ್ಯಕರ್ಮಗಳಿಂದ ಗೋಲೋಕಕ್ಕೆ ಹೋಗಿ ಸೇರುವುದರಿಂದ ಉತ್ತಮನೆನಿಸಿಕೊಳ್ಳುವನು.

೫೫. ಪರಮಾತ್ಮನ ಪಾದಾರವಿಂದಗಳಲ್ಲಿಡುವ ಭಕ್ತಿ ಎಂಬುದೇ ಜೇನುತುಪ್ಪ. ಅದನ್ನು ಕುಡಿದು ಪವಿತ್ರರಾಗಿರುವವರೇ ವಿಷ್ಣುಭಕ್ತರು. ಅವರ ಸ್ಪರ್ಶದಿಂದಲೇ ಭೂಮಂಡಲವು ಪವಿತ್ರವಾಗುವುದು.

೫೬. ಅಷ್ಟೇಕೆ ? ಎಲೈ, ಪಿತಾಮಹನೇ ! ಪುಣ್ಯಕ್ಷೇತ್ರಗಳೂ ಕೂಡ ಪಾಪಿಗಳ ಸಂಪರ್ಕದಿಂದ ಸಂಭವಿಸಿದ ಪಾಪಗಳನ್ನು ವಿಷ್ಣುಭಕ್ತರ ಸ್ಪರ್ಶದಿಂದ ಪರಿಹರಿಸಿಕೊಳ್ಳಲು ಬಯಸುತ್ತವೆ.

ಮಂತ್ರೋಪದೇಶಮಾತ್ರೇಣ ನರಾ ಮುಕ್ತಾಶ್ಚ ಭಾರತೇ |
ಪರೈಶ್ಚ ಕೋಟಿಪುರುಷೈಃ ಪೂರ್ವೈಸ್ಸಾರ್ಧಂ ಹರೇರಹೋ || ೫೭ ||

ಕೋಟಿಜನ್ಮಾರ್ಜಿತಾತ್ಪಾಪಾನ್ಮಂತ್ರಗ್ರಹಣ ಮಾತ್ರತಃ |
ಮುಕ್ತಾಃ ಶುದ್ಧ್ಯಂತಿ ಯತ್ಪೂರ್ವಂ ಕರ್ಮನಿರ್ಮೂಲಯಂತಿ ಚ || ೫೮ ||

ಪುತ್ರಾನ್ ದಾರಾಂಶ್ಚ ಶಿಷ್ಯಾಂಶ್ಚ ಸೇವಕಾನ್ಬಾಂಧವಾಂಸ್ತಥಾ |
ಯೋ ದರ್ಶಯತಿ ಸನ್ಮಾರ್ಗಂ ಸದ್ಗತಿಸ್ತಂ ಲಭೇದ್ಧ್ರುವಂ || ೫೯ ||

ಯೋ ದರ್ಶಯತ್ಯಸನ್ಮಾರ್ಗಂ ಶಿಷ್ಯೈರ್ವಿಶ್ವಾಸಿತೋ ಗುರುಃ |
ಕುಂಭೀಪಾಕೇ ಸ್ಥಿತಿಸ್ತಸ್ಯ ಯಾವಚ್ಚಂದ್ರದಿವಾಕರೌ || ೬೦ ||

ಸ ಕಿಂ ಗುರುಃ ಸ ಕಿಂ ತಾತಃ ಸ ಕಿಂ ಸ್ವಾಮೀ ಸ ಕಿಂ ಸುತಃ |
ಯಃ ಶ್ರೀಕೃಷ್ಣಪದಾಂಭೋಜೇ ಭಕ್ತಿಂ ದಾತುಮನೀಶ್ವರಃ || ೬೧ ||

೫೭-೫೮. ಭಾರತಭೂಮಿಯಲ್ಲಿ ಯಾರು ಯಾರು ಸನ್ಮಾರ್ಗಪ್ರವರ್ತನೆಗಾಗಿ ಮಂತ್ರೋಪದೇಶವನ್ನು ಸ್ವೀಕರಿಸುವರೋ, ಅವರು ತಮ್ಮ ಕೋಟ್ಯಂತರ ಪೂರ್ವಜರ ಮತ್ತು ಅಪರಜರೊಡನೆ ಮುಕ್ತರಾಗುವರು. ಒಂದು ಮಂತ್ರವನ್ನು ಉಪದೇಶ ಹೊಂದಿದ ಮಾತ್ರದಿಂದ ಕೋಟಿಜನ್ಮಕೃತವಾದ ಪಾಪಗಳೂ ಪರಿಹಾರವಾಗಿ ಜನ್ಮಾಂತರ ದುಷ್ಕರ್ಮಗಳ ಸಂಸರ್ಗದಿಂದ ಜನರು ವಿಮುಕ್ತರಾಗಿ ಶುದ್ಧರಾಗುವರು.

೫೯. ಯಾವ ಮನುಷ್ಯನು ತನ್ನ ಮಕ್ಕಳಿಗಾಗಲೀ ಅಥವಾ ಬಂಧುಗಳಿಗಾಗಲೀ, ಸನ್ಮಾರ್ಗವನ್ನು ಬೋಧಿಸುವನೋ ಅವನಿಗೆ ಖಂಡಿತವಾಗಿಯೂ ಸದ್ಗತಿಯು ದೊರಕುವುದು.

೬೦. ಯಾವ ಗುರುವು ತನ್ನನ್ನೇ ನಂಬಿದ ಶಿಷ್ಯರಿಗೆ ಕೆಟ್ಟ ಮಾರ್ಗವನ್ನು ಉಪದೇಶಿಸುವನೋ, ಆತನಿಗೆ ಸೂರ್ಯಚಂದ್ರರಿರುವವರೆಗೂ, ಕುಂಭೀಪಾಕನರಕವು ಸಿದ್ಧವಾದುದು.

೬೧. ಗುರುವಾಗಲೀ, ತಂದೆಯಾಗಲೀ, ಯಜಮಾನನಾಗಲೀ ಅಥವಾ ಮಗನಾಗಲೀ, ಶ್ರೀಕೃಷ್ಣಪರಮಾತ್ಮನ ಪಾದಾರವಿಂದಗಳಲ್ಲಿ ಭಕ್ತಿಯನ್ನುಂಟು ಮಾಡುವಷ್ಟು ಶಕ್ತರಾಗದಿದ್ದರೆ ಅವರು ತಮ್ಮ, ಗೌರವಕ್ಕೇ ಕುಂದು ತಂದು ಕೊಂಡಂತಾಗುವುದು.

ಶಪ್ತೋ ನಿರಪರಾಧೇನ ತ್ವಯಾsಹಂ ಚತುರಾನನ ।
ಮಯಾ ಶಪ್ತಸ್ತ್ವಮುಚಿತೋ ಘ್ನಂತಂ ಘ್ನಂತ್ಯಪಿ ಪಂಡಿತಾಃ ॥ ೬೨ ॥

ಕವಚಸ್ತೋತ್ರ ಪೂಜಾಭಿಃ ಸಹಿತಸ್ತೇ ಮನುರ್ಮನೋಃ ।
ಲುಪ್ತೋ ಭವತು ಮಚ್ಛಾಪಾತ್ಪ್ರತಿ ವಿಶ್ವೇಷು ನಿಶ್ಚಿತಂ ॥ ೬೩ ॥

ಅಪೂಜ್ಯೋ ಭವ ವಿಶ್ವೇಷು ಯಾವತ್ಕಲ್ಪತ್ರಯಂ ಪಿತಃ ।
ಗತೇಷು ತ್ರಿಷು ಕಲ್ಪೇಷು ಪೂಜ್ಯ ಪೂಜ್ಯೋ ಭವಿಷ್ಯಸಿ ॥ ೬೪ ॥

ಅಧುನಾ ಯಜ್ಞಭಾಗಸ್ತೇ ವ್ರತಾದಿಷ್ವಪಿ ಸುವ್ರತೆ ।
ಪೂಜನಂ ಚಾಸ್ತು ಮಾನ್ಯೈಕಂ ವಂದ್ಯೋ ಭವ ಸುರಾದಿಭಿಃ ॥ ೬೫ ॥

ಇತ್ಯುಕ್ತ್ವಾ ನಾರದಸ್ತತ್ರ ವಿರರಾಮ ಪಿತುಃ ಪುರಃ ।
ತಸ್ಥೌ ಸಭಾಯಾಂ ಸ ವಿಧಿರ್ಹೃದಯೇನ ವಿದೂಯತಾ ॥ ೬೬ ॥

---

೬೨. ಎಲೈ, ಚತುರ್ಮುಖಬ್ರಹ್ಮನೇ! ನಿರಪರಾಧಿಯಾದ ನನಗೆ ನೀನು ಶಾಪವನ್ನು ಕೊಟ್ಟಿರುವೆಯಾದ್ದರಿಂದ ನಾನೂ ನಿನಗೆ ಶಾಪಕೊಡುವುದುಚಿತ. ಪಂಡಿತರೂ ಕೂಡ ಹಿಂಸಕನನ್ನು ಹಿಂಸಿಸದೇ ಬಿಡರು.

೬೩–೬೪. ಆದುದರಿಂದ ಪ್ರಪಂಚದಲ್ಲೆಲ್ಲೂ ನಿನ್ನ ಕವಚ ಸ್ತೋತ್ರಗಳನ್ನೂ, ಮಂತ್ರಪೂಜೆಗಳನ್ನೂ ಯಾರೂ ಆಚರಿಸದಿರಲಿ. ನನ್ನ ಶಾಪದಿಂದ ಮೂರು ಕಲ್ಪಗಳ ಕಾಲ ನಿನಗೆ ಎಲ್ಲೂ ಗೌರವ ಲಭಿಸದಿರಲಿ. ಮೂರುಕಲ್ಪಗಳು ಕಳೆದ ನಂತರ ನೀನು ಪುನಃ ಎಲ್ಲರಿಂದಲೂ ಪೂಜ್ಯನಾಗುವೆ.

೬೫. ಆದರೆ, ನೀನು ವ್ರತಪರಾಯಣನಾದುದರಿಂದ ಎಲ್ಲ ವ್ರತಗಳಲ್ಲೂ ಮತ್ತು ಯಾಗಗಳಲ್ಲೂ ನಿನ್ನ ಭಾಗವು ನಿನಗೆ ಸಲ್ಲುವುದು. ಮತ್ತು ದೇವತೆಗಳು ನಿನಗೆ ಪೂಜೆಯನ್ನೂ, ವಂದನೆಯನ್ನೂ ಮಾಡುವರು.

೬೬. ನಾರದನು ತಂದೆಯಾದ ಬ್ರಹ್ಮನ ಮುಂದೆ ಈ ಮಾತುಗಳನ್ನಾಡಿ ಸುಮ್ಮನಾದನು. ಆ ದೇವತೆಗಳ ಸಭೆಯಲ್ಲಿ ಬ್ರಹ್ಮನೂ ಮನಸ್ಸಿನಲ್ಲೇ ವ್ಯಥೆಪಡುತ್ತಾ ಸುಮ್ಮನೆ ನಿಂತನು.

ಉಪಬರ್ಹಣಗಂಧರ್ವೋ ನಾರದಸ್ತೇನ ಹೇತುನಾ ।
ದಾಸೀಪುತ್ರಶ್ಚ ಶಾಪೇನ ಪಿತುರೇವ ಚ ಶೌನಕ ॥ ೬೭ ॥

ತತಃ ಪುನರ್ನಾರದಶ್ಚ ಸ ಬಭೂವ ಮಹಾನೃಷಿಃ ।
ಜ್ಞಾನಂ ಪ್ರಾಪ್ಯ ಪಿತುಃ ಪಶ್ಚಾತ್ ಕಥಯಿಷ್ಯಾಮಿ ಚಾಧುನಾ ॥ ೬೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಸೌತಿ ಶೌನಕ ಸಂವಾದೇ
ಬ್ರಹ್ಮಖಂಡೇ ಬ್ರಹ್ಮನಾರದಶಾಪೋಪಲಂಭನಂ ನಾಮ
ಅಷ್ಟಮೋಽಧ್ಯಾಯಃ

೬೭-೬೮. ಆ ಕಾರಣದಿಂದ ನಾರದನು ಉಪಬರ್ಹಣನೆಂಬ ಗಂಧರ್ವನಾಗಿಯೂ, ಮತ್ತೆ ಬ್ರಹ್ಮನ ಶಾಪದಿಂದ ದಾಸೀಪುತ್ರನಾಗಿಯೂ ಜನಿಸಿ, ಶಾಪ ವಿಮುಕ್ತನಾಗಿ ಪುನಃ ಬ್ರಹ್ಮಪುತ್ರನಾಗಿ ನಾರದಮಹರ್ಷಿ ಎನಿಸಿಕೊಂಡು ಮೊದಲಿನ ದಿವ್ಯಜ್ಞಾನವನ್ನು ಪಡೆದನು. ಎಲೈ, ಶೌನಕನೇ! ಈ ವಿಷಯವನ್ನು ಮುಂದೆ ನಿನಗೆ ವಿಸ್ತರಿಸುವೆನು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಸೌತಿಶೌನಕ ಸಂವಾದರೂಪವಾದ
ಬ್ರಹ್ಮಖಂಡದಲ್ಲಿ ಬ್ರಹ್ಮ ನಾರದರಿಬ್ಬರಿಗೂ ಪರಸ್ಪರ ಶಾಪ ಸಂಭವಿಸುವ
ಎಂಟನೆಯ ಅಧ್ಯಾಯವು ಸಮಾಪ್ತವಾದುದು.

ಎಂಟನೆಯ ಅಧ್ಯಾಯದ ಸಾರಾಂಶವು

ಪ್ರಪಂಚವನ್ನು ಸೃಷ್ಟಿಮಾಡಿದ ಬ್ರಹ್ಮನು ಪ್ರಜಾಸೃಷ್ಟಿಗಾಗಿ, ಸಾವಿತ್ರಿಯ ಗರ್ಭದಲ್ಲಿ ತನ್ನ ವೀರ್ಯವನ್ನಿಟ್ಟನು. ನೂರುವರ್ಷಗಳು ಕಳೆದ ನಂತರ ಆಕೆಯ ಗರ್ಭದಿಂದ ಚತುರ್ವೇದಗಳೂ, ವೇದಾಂಗಗಳೂ, ದಿವ್ಯವಾದ ಗಾಂಧರ್ವರಾಗಗಳೂ, ಚತುರ್ಯುಗಗಳೂ, ವರ್ಷ ಮಾಸಾದಿಗಳೂ, ದೇವಸೇನಾದಿ ದೇವಿಯರೂ, ಬ್ರಾಹ್ಮಾದಿ ಕಲ್ಪಗಳೂ ಹೊರಬಂದುವು. ಬ್ರಹ್ಮನ ಪೃಷ್ಠಭಾಗದಿಂದ ಅಧರ್ಮನೂ, ನಾಭಿಪ್ರದೇಶದಿಂದ ವಿಶ್ವಕರ್ಮನೂ, ಅಷ್ಟವಸುಗಳೂ, ಕಾಣಿಸಿಕೊಂಡರು ಅನಂತರ ಬ್ರಹ್ಮನ ಮನಸ್ಸಿನಿಂದ ಸನಕ, ಸನಂದನ, ಸನಾತನ ಮತ್ತು ಸನತ್ಕುಮಾರರೆಂಬ ನಾಲ್ವರು ಪುತ್ರರೂ, ಮುಖದಿಂದ ಸ್ವಾಯಂಭುವಮನುವೂ ಆವಿರ್ಭವಿಸಿದರು. ಅವರೆಲ್ಲರಿಗೂ ಸೃಷ್ಟಿಮಾಡುವಂತೆ ಬ್ರಹ್ಮನು ಹೇಳಲು, ಸ್ವಾಯಂಭುವ ಮನುವನ್ನುಳಿದು, ಸನಕಾದಿ ನಾಲ್ವರೂ, ಸಂಸಾರಿಗಳಾಗಲಿಚ್ಛಿಸದೆ, ಕೃಷ್ಣಪರಾಯಣರಾಗಿ ತಪಸ್ಸಿಗೆ ಹೊರಟುಹೋದರು. ಆಗ ಕುಪಿತನಾದ ಬ್ರಹ್ಮನ ಲಲಾಟದಿಂದ ಏಕಾದಶರುದ್ರರು ಆವಿರ್ಭವಿಸಿದರು. ಅವರಲ್ಲೊಬ್ಬನಾದ ಕಾಲಾಗ್ನಿ ರುದ್ರನೆಂಬುವನೇ ತಾಮಸನು ಮತ್ತು ಜಗತ್ಸಂಹಾರಕನು. ಸತ್ವಗುಣ ಪ್ರಧಾನನಾದ ಶಿವನನ್ನು ತಾಮಸನೆಂದು ತಿಳಿಯುವುದು ತಪ್ಪು.

ಅನಂತರ ಬ್ರಹ್ಮನ ಅವಯವಗಳಿಂದ ಅಷ್ಟಾದಶ ಪ್ರಜಾಪತಿಗಳೂ ಆವಿರ್ಭವಿಸಿದರು. ಬ್ರಹ್ಮನು ಅವರೆಲ್ಲರಿಗೂ ಸೃಷ್ಟಿಮಾಡಲು ಆಜ್ಞಾಪಿಸಿದಾಗ ಅವರಲ್ಲೊಬ್ಬನಾದ ನಾರದನು ತಮ್ಮ ಪೂರ್ವಜರಾದ ಸನಕಾದಿಗಳನ್ನು ತಪಸ್ಸಿಗೆ ಕಳುಹಿಸಿ ತಮ್ಮನ್ನು ಮಾತ್ರ ಸಂಸಾರದಲ್ಲಿ ನಿಯಮಿಸುವುದುಚಿತವಲ್ಲವೆಂದು ಬಿನ್ನವಿಸಲು, ಕುಪಿತನಾದ ಬ್ರಹ್ಮನು ಅವನಿಗೆ ಸ್ತ್ರೀಲೋಲುಪನಾದ ಗಂಧರ್ವನಾಗಿಯೂ, ಪುನಃ ತನ್ನ ಶಾಪದಿಂದ ದಾಸೀಪುತ್ರನಾಗಿಯೂ ಜನಿಸುವಂತೆ ಶಾಪವಿತ್ತನು. ನಾರದನೂ ಅದಕ್ಕೆ ಪ್ರತಿಯಾಗಿ, ಕಲ್ಪತ್ರಯಗಳು ಕಳೆಯುವವರೆಗೆ ತ್ರಿಲೋಕದಲ್ಲೆಲ್ಲೂ ಬ್ರಹ್ಮನಿಗೆ ಪೂಜೆಯು ನಡೆಯದಂತೆ ಶಾಪವಿತ್ತನು.

ಅನಂತರ ಶಾಂತರಾದ ತಂದೆ ಮಕ್ಕಳಿಬ್ಬರೂ ಅವಧಿ ಕಳೆದಮೇಲೆ ಪರಸ್ಪರವಾಗಿ ಶಾಪವಿಮೋಚನೆಯಾಗುವಂತೆ ವರವನ್ನು ಪಡೆಯುವರು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ನವಮೋಽಧ್ಯಾಯಃ ॥

॥ ಸೌತಿರುವಾಚ ॥

ಅಥ ಬ್ರಹ್ಮಾ ಸ್ವಪುತ್ರಾಂಸ್ತಾನಾದಿದೇಶ ಚ ಸೃಷ್ಟಯೇ ।
ಸೃಷ್ಟಿಂ ಪ್ರಚಕ್ರುಸ್ತೇ ಸರ್ವೇ ವಿಪ್ರೇಂದ್ರ! ನಾರದಂ ವಿನಾ ॥ ೧ ॥

ಮರೀಚೇರ್ಮನಸೋ ಜಾತಃ ಕಶ್ಯಪಶ್ಚ ಪ್ರಜಾಪತಿಃ ।
ಅತ್ರೇರ್ನೇತ್ರಮಲಾಚ್ಚಂದ್ರಃ ಕ್ಷೀರೋದೇ ಚ ಬಭೂವಹ ॥ ೨ ॥

ಪ್ರಚೇತಸೋಽಪಿ ಮನಸೋ ಗೌತಮಶ್ಚ ಬಭೂವಹ ।
ಪುಲಸ್ತ್ಯಮಾನಸಃ ಪುತ್ರೋ ಮೈತ್ರಾವರುಣ ಏವ ಚ ॥ ೩ ॥

ಒಂಭತ್ತನೆಯ ಅಧ್ಯಾಯವು

೧. ಸೂತಪುತ್ರ:—ಅನಂತರದಲ್ಲಿ ಬ್ರಹ್ಮದೇವನು ತನ್ನ ಮಕ್ಕಳೆಲ್ಲರಿಗೂ ಸೃಷ್ಟಿಮಾಡಲು ಅಪ್ಪಣೆ ಮಾಡಿದನು. ಎಲೈ, ಶೌನಕನೇ! ಆಗ ನಾರದನೊಬ್ಬನನ್ನು ಬಿಟ್ಟು, ಉಳಿದ ಮಕ್ಕಳೆಲ್ಲರೂ ಸೃಷ್ಟಿಮಾಡಲು ಪ್ರಾರಂಭಿಸಿದರು.

೨. ಆಗ ಮರೀಚಿಮಹರ್ಷಿಯು ಮನಸ್ಸಿನಿಂದ ಕಶ್ಯಪಪ್ರಜಾಪತಿಯು ಜನಿಸಿದನು. ಅತ್ರಿಮಹರ್ಷಿಯ ಕಣ್ಣಿನಿಂದ ಹೊರಬಂದ ತೇಜಸ್ಸು ಕ್ಷೀರಸಮುದ್ರದಲ್ಲಿ ಬಿದ್ದು ಚಂದ್ರನ ಉತ್ಪತ್ತಿಯಾಯಿತು.

೩. ಪ್ರಚೇತಸ್ಸಿನ ಮನಸ್ಸಿನಿಂದ ಗೌತಮಮಹರ್ಷಿಯೂ, ಪುಲಸ್ತ್ಯಋಷಿಯ ಮನಸ್ಸಿನಿಂದ ಮೈತ್ರಾವರುಣನೂ ಜನಿಸಿದರು.

ಮನೋಶ್ಚ ಶತರೂಪಾಯಾಂ ತಿಸ್ರಃ ಕನ್ಯಾಃ ಪ್ರಜಜ್ಞಿರೇ ।
ಆಕೂತಿರ್ದೇವಹೂತಿಶ್ಚ ಪ್ರಸೂತಿಸ್ತಾಃ ಪತಿವ್ರತಾಃ ॥ ೪ ॥

ಪ್ರಿಯವ್ರತೋತ್ತಾನಪಾದೌ ದ್ವೌ ಚ ಪುತ್ರೌ ಮನೋಹರೌ ।
ಉತ್ತಾನಪಾದತನಯೋ ಧ್ರುವಃ ಪರಮಧಾರ್ಮಿಕಃ ॥ ೫ ॥

ಆಕೂತಿಂ ರುಚಯೇ ಪ್ರಾದಾದ್ದಕ್ಷಾಯಾಥ ಪ್ರಸೂತಿಕಾಂ ।
ದೇವಹೂತಿಂ ಕರ್ದಮಾಯ ಯತ್ಪುತ್ರಃ ಕಪಿಲಸ್ಸ್ವಯಂ ॥ ೬ ॥

ಪ್ರಸೂತ್ಯಾಂ ದಕ್ಷಬೀಜೇನ ಷಷ್ಟಿಕನ್ಯಾಃ ಪ್ರಜಜ್ಞಿರೇ ।
ಅಷ್ಟೌ ಧರ್ಮಾಯ ಸ ದದೌ ರುದ್ರಾಯೈಕಾದಶ ಸ್ಮೃತಾಃ ॥ ೭ ॥

ಶಿವಾಯೈಕಾಂ ಸತೀಂ ಪ್ರಾದಾತ್ಕಶ್ಯಪಾಯ ತ್ರಯೋದಶ ।
ಸಪ್ತವಿಂಶತಿ ಕನ್ಯಾಶ್ಚ ದಕ್ಷಶ್ಚಂದ್ರಾಯ ದತ್ತವಾನ್ ॥ ೮ ॥

---

೪. ಸ್ವಾಯಂಭುವಮನುವಿಗೆ, ತನ್ನ ಪತ್ನಿಯಾದ ಶತರೂಪಾ ಎಂಬುವಳಲ್ಲಿ ಆಕೂತಿ, ದೇವಹೂತಿ ಮತ್ತು ಪ್ರಸೂತಿ ಎಂಬ ಮೂರುಕನ್ಯೆಯರು ಜನ್ಮವೆತ್ತಿ ಪತಿವ್ರತೆಯರಾದರು.

೫. ಪ್ರಿಯವ್ರತ ಮತ್ತು ಉತ್ತಾನಪಾದ ಎಂಬ ಸುಂದರರಾದ ಇಬ್ಬರು ಗಂಡುಮಕ್ಕಳೂ ಸ್ವಾಯಂಭುವಮನುವಿನಿಂದ ಜನಿಸಿದರು. ಆ ಉತ್ತಾನಪಾದರಾಯನ ಮಗನೇ ಲೋಕಪ್ರಸಿದ್ಧನೂ, ಧಾರ್ಮಿಕ ಶಿರೋಮಣಿಯೂ ಆದ ಧ್ರುವನೆಂಬುವನು.

೬. ಸ್ವಾಯಂಭುವ ಮನುವು ತನ್ನ ಆ ಮೂವರು ಹೆಣ್ಣುಮಕ್ಕಳಲ್ಲಿ ರುಚಿ ಎಂಬ ಮಹರ್ಷಿಗೆ ಆಕೂತಿಯನ್ನೂ, ದಕ್ಷಬ್ರಹ್ಮನಿಗೆ ಪ್ರಸೂತಿಯನ್ನೂ, ಕರ್ದಮನಿಗೆ ದೇವಹೂತಿಯನ್ನೂ ಕೊಟ್ಟು ವಿವಾಹ ಮಾಡಿದನು. ಆ ಕರ್ದಮನ ಮಗನೇ ಕಪಿಲಮಹರ್ಷಿಯು

೭-೮. ದಕ್ಷಪ್ರಜಾಪತಿಯಿಂದ ಪ್ರಸೂತಿಯು ಹೊಟ್ಟೆಯಲ್ಲಿ ಅರವತ್ತು ಕನ್ಯೆಯರು ಜನಿಸಿದರು. ಅವರಲ್ಲಿ ಎಂಟು ಕನ್ಯೆಯರನ್ನು ಧರ್ಮದೇವನಿಗೂ, ಹನ್ನೊಂದು ಕನ್ಯೆಯರನ್ನು ರುದ್ರನಿಗೂ, ಸತೀ ಎಂಬಾಕೆಯನ್ನು ಶಿವನಿಗೂ, ಹದಿಮೂರು ಮಂದಿ ಕನ್ಯೆಯರನ್ನು ಕಶ್ಯಪಪ್ರಜಾಪತಿಗೂ, ಉಳಿದ ಇಪ್ಪತ್ತೇಳು ಕನ್ಯೆಯರನ್ನು ಚಂದ್ರನಿಗೂ ಕೊಟ್ಟು ವಿವಾಹಮಾಡಿದನು.

ನಾಮಾನಿ ಧರ್ಮಪತ್ನೀನಾಂ ಮತ್ತೋ ವಿಪ್ರ ನಿಶಾಮಯ ।
ಶಾಂತಿಃ ಪುಷ್ಟಿರ್ಧೃತಿಸ್ತುಷ್ಟಿಃ ಕ್ಷಮಾ ಶ್ರದ್ಧಾ ಮತಿಃ ಸ್ಮೃತಿಃ ॥ ೯ ॥

ಶಾಂತೇಃ ಪುತ್ರಶ್ಚ ಸಂತೋಷಃ ಪುಷ್ಟೇಃ ಪುತ್ರೋ ಮಹಾನಭೂತ್ ।
ಧೃತೇರ್ಧೈರ್ಯಂ ಚ ತುಷ್ಟೇಶ್ಚ ಹರ್ಷದರ್ಪೌ ಸುತೌ ಸ್ಮೃತೌ ॥ ೧೦ ॥

ಕ್ಷಮಾಪುತ್ರಃ ಸಹಿಷ್ಣುಶ್ಚ ಶ್ರದ್ಧಾಪುತ್ರಶ್ಚ ಧಾರ್ಮಿಕಃ ।
ಮತೇರ್ಜ್ಞಾನಾಭಿಧಃ ಪುತ್ರಃ ಸ್ಮೃತೇರ್ಜಾತಿಸ್ಮರೋ ಮಹಾನ್ ॥ ೧೧ ॥

ಪೂರ್ವಪತ್ನ್ಯಾಂ ಚ ಮೂರ್ತ್ಯಾಂ ಚ ನರನಾರಾಯಣಾವೃಷೀ ।
ಬಭೂವುರೇತೇ ಧರ್ಮಿಷ್ಠಾ ಧರ್ಮಪುತ್ರಾಶ್ಚ ಶೌನಕ ॥ ೧೨ ॥

ನಾಮಾನಿ ರುದ್ರಪತ್ನೀನಾಂ ಸಾವಧಾನಂ ನಿಬೋಧ ಮೇ ।
ಕಲಾ ಕಲಾವತೀ ಕಾಷ್ಠಾ ಕಾಲಿಕಾ ಕಲಹಪ್ರಿಯಾ ॥ ೧೩ ॥

ಕಂದಲೀ ಭೀಷಣಾ ರಾಸ್ನಾ ಪ್ರಮೋಚಾ ಭೂಷಣಾ ಶುಕೀ ।
ಏತಾಸಾಂ ಬಹವಃ ಪುತ್ರಾ ಬಭೂವುಃ ಶಿವಪಾರ್ಷದಾಃ ॥ ೧೪ ॥

---

೯. ಧರ್ಮದೇವನು ಪಾಣಿಗ್ರಹಣಮಾಡಿದ ಎಂಟು ಕನ್ಯೆಯರು ಕ್ರಮವಾಗಿ ಶಾಂತಿ, ಪುಷ್ಟಿ, ಧೃತಿ, ತುಷ್ಟಿ, ಕ್ಷಮಾ, ಶ್ರದ್ಧಾ, ಮತಿ, ಮತ್ತು ಸ್ಮೃತಿ ಎಂಬ ಹೆಸರಿನವರು.

೧೦-೧೧. ಇವರಲ್ಲಿ ಶಾಂತಿಗೆ ಸಂತೋಷನೆಂಬುವನೂ, ಪುಷ್ಟಿಗೆ ಮಹಾನ್ ಎಂಬುವನೂ, ಧೃತಿಗೆ ಧೈರ್ಯನೆಂಬುವನೂ, ತುಷ್ಟಿಗೆ ಹರ್ಷ, ದರ್ಪ ಎಂಬಿಬ್ಬರೂ ಮಕ್ಕಳಾದರು. ಹಾಗೆಯೇ ಸಹಿಷ್ಣು ಎಂಬುವನು ಕ್ಷಮೆಯ ಮಗನಾಗಿಯೂ, ಧಾರ್ಮಿಕನೆಂಬುವನು ಶ್ರದ್ಧೆಯ ಮಗನಾಗಿಯೂ, ಜ್ಞಾನ ಎಂಬುವನು ಮತಿಯ ಮಗನಾಗಿಯೂ, ಜಾತಿಸ್ಮರನೆಂಬುವನು ಸ್ಮೃತಿಯ ಮಗನಾಗಿಯೂ, ಜನಿಸಿದರು.

೧೨. ಧರ್ಮಪುರುಷನ ಮೊದಲನೆಯ ಹೆಂಡತಿಯಾದ ಮೂರ್ತಿ ಎಂಬುವಳಲ್ಲಿ ನರ ನಾರಾಯಣರೆಂಬ ಇಬ್ಬರು ಋಷಿಗಳು ಜನಿಸಿದರು. ಒಟ್ಟು ಹನ್ನೊಂದು ಮಂದಿ ಪುತ್ರರು ಧರ್ಮಪುರುಷನಿಗೆ ಜನಿಸಿ ಧರ್ಮಿಷ್ಠರಾದರು.

೧೩-೧೪. ಎಲೈ ಶೌನಕನೇ! ಈಗ ರುದ್ರಪತ್ನಿಯರ ಹೆಸರನ್ನೆಲ್ಲಾ ವಿವರಿಸುವೆನು. ಸಾವಧಾನದಿಂದ ಕೇಳುವವನಾಗು. ಕಲಾ, ಕಲಾವತಿ, ಕಾಷ್ಠಾ, ಕಾಲಿಕಾ, ಕಲಹಪ್ರಿಯಾ, ಕಂದಲೀ, ಭೀಷಣಾ, ರಾಸ್ನಾ, ಪ್ರಮೋಚಾ, ಭೂಷಣಾ, ಶುಕೀ ಎಂದು ಕ್ರಮವಾಗಿ ಹೆಸರುಳ್ಳ ಹನ್ನೊಂದು ಮಂದಿ ಕನ್ಯೆಯರು ರುದ್ರನ ಪತ್ನಿಯರಾದರು. ಇವರೆಲ್ಲರಿಗೂ ಅನೇಕ ಮಕ್ಕಳಾಗಿ ಅವರೆಲ್ಲರೂ ಶಿವನ ಪಾರ್ಷದರೆನಿಸಿಕೊಂಡರು.

ಸಾ ಸತೀ ಸ್ವಾಮಿನಿಂದಾಯಾಂ ತನುಂ ತತ್ಯಾಜ ಯಜ್ಞತಃ ।
ಪುನರ್ಭೂತ್ವಾ ಶೈಲಪುತ್ರೀ ಲೇಭೇ ಸಾ ಶಂಕರಂ ಪತಿಂ ॥ ೧೫ ॥

ಕಶ್ಯಪಸ್ಯ ಪ್ರಿಯಾಣಾಂ ಚ ನಾಮಾನಿ ಶ್ರುಣು ಧಾರ್ಮಿಕ ।
ಅದಿತಿರ್ದೇವಮಾತಾ ವೈ ದೈತ್ಯಮಾತಾ ದಿತಿಸ್ತಥಾ ॥ ೧೬ ॥

ಸರ್ಪಮಾತಾ ತಥಾ ಕದ್ರೂರ್ವಿನತಾ ಪಕ್ಷಿಸೂಸ್ತಥಾ ।
ಸುರಭಿಶ್ಚ ಗವಾಂ ಮಾತಾ ಮಹಿಷಾಣಾಂ ಚ ನಿಶ್ಚಿತಂ ॥ ೧೭ ॥

ಸಾರಮೇಯಾದಿ ಜಂತೂನಾಂ ಸರಮಾಸೂಶ್ಚತುಷ್ಪದಾಂ ।
ದನುಃ ಪ್ರಸೂರ್ದಾನವಾನಾಮನ್ಯಾಶ್ಚೈತ್ಯೇವಮಾದಿಕಾಃ ॥ ೧೮ ॥

---

೧೫. ಶಿವನನ್ನು ವರಿಸಿದ ಸತೀದೇವಿಯಾದರೋ, ತನ್ನ ಪತಿಯ ನಿಂದೆಯನ್ನು ಸಹಿಸಲಾರದೆ ದಕ್ಷಯಜ್ಞಕುಂಡದಲ್ಲಿ ದೇಹತ್ಯಾಗಮಾಡಿ, ಹಿಮವಂತನ ಮಗಳಾಗಿ, "ಪಾರ್ವತೀ" ಎಂಬ ಹೆಸರಿನಿಂದ ಜನಿಸಿ. ಮತ್ತೆ ಶಂಕರನನ್ನೇ ಪತಿಯಾಗಿ ವರಿಸಿದಳು.

೧೬–೧೮. ಧರ್ಮಿಷ್ಠನಾದ, ಶೌನಕಮಹರ್ಷಿಯೇ! ಈಗ ಕಶ್ಯಪ ಪ್ರಜಾಪತಿಯ ಪತ್ನಿಯರ ಹೆಸರುಗಳನ್ನೂ ಮತ್ತು ಅವರ ಸಂತತಿಯನ್ನೂ, ವಿವರಿಸುವೆನು. ಸಾವಧಾನದಿಂದ ಕೇಳು. ದೇವತೆಗಳಿಗೆ ತಾಯಿಯಾದ ಅದಿತಿಯೂ, ದೈತ್ಯರಿಗೆ ತಾಯಿಯೆನಿಸಿದ ದಿತಿಯೂ, ಸರ್ಪಗಳಿಗೆ ಮಾತೃವಾದ ಕದ್ರುವೂ, ಅರುಣ ಮತ್ತು ಗರುಡನಿಗೆ ತಾಯಿಯಾದ ವಿನತೆಯೂ, ಕಶ್ಯಪನ ಪತ್ನಿಯರು. ಅಲ್ಲದೆ ಗೋವು ಮತ್ತು ಎಮ್ಮೆಗಳಿಗೆ ಮಾತೆಯಾದ ಸುರಭಿಯೂ, (ಕಪಿಲಾ), ನಾಯಿ ಮುಂತಾದ ಚತುಷ್ಪಾದ ಜಂತುಗಳಿಗೆ ತಾಯಿಯಾದ ಸರಮೆಯೂ, ದಾನವರ ತಾಯಿಯಾದ ದನು ಎಂಬುವಳೂ, ಮತ್ತು ದನಾಯು, ಪ್ರಧಾ, ಮುನಿ, ಸುರಸಾ, ಇಲಾ, ಕ್ರೋಧವಶಾ ಎಂಬುವರೂ ಕಶ್ಯಪನ ಪತ್ನಿಯರು.

ಇಂದ್ರಶ್ಚ ದ್ವಾದಶಾದಿತ್ಯಾ ಉಪೇಂದ್ರಾದ್ಯಾಃ ಸುರಾ ಮುನೇ ।
ಕಥಿತಾಶ್ಚಾದಿತೇಃ ಪುತ್ರಾ ಮಹಾಬಲಪರಾಕ್ರಮಾಃ ॥ ೧೯ ॥

ಇಂದ್ರಪುತ್ರೋ ಜಯಂತಶ್ಚ ಬ್ರಹ್ಮನ್ ಶಚ್ಯಾಮಜಾಯತ ।
ಆದಿತ್ಯಸ್ಯ ಸವರ್ಣಾಯಾಂ ಕನ್ಯಾಯಾಂ ವಿಶ್ವಕರ್ಮಣಃ ॥ ೨೦ ॥

ಶನೈಶ್ಚರಯಮೌ ಪುತ್ರೌ ಕಾಲಿಂದೀ ಕನ್ಯಕಾ ತಥಾ ।
ಉಪೇಂದ್ರವೀರ್ಯಾತ್ ಪೃಥ್ವ್ಯಾಂ ತು ಮಂಗಲಃ ಸಮಜಾಯತ ॥ ೨೧ ॥

॥ ಶೌನಕ ಉವಾಚ ॥

ಕಥಂ ಸೌತೇ ಸ ಚೋಪೇಂದ್ರಾನ್ಮಂಗಲಃ ಸಮಜಾಯತ ।
ವಸುಂಧರಾಯಾಂ ಬಲವಾನ್ ತನ್ಮೇ ವ್ಯಾಖ್ಯಾತುಮರ್ಹಸಿ ॥ ೨೨ ॥

---

೧೯. ಇಂದ್ರನೂ, *ದ್ವಾದಶಾದಿತ್ಯರೂ, ಉಪೇಂದ್ರನೇ ಮೊದಲಾದ ಮಹಾ ಪರಾಕ್ರಮಶಾಲಿಗಳಾದ ಇನ್ನೂ ಅನೇಕ ದೇವತೆಗಳೂ ಅದಿತಿಯ ಗರ್ಭದಲ್ಲಿ ಜನಿಸಿ ಆದಿತೇಯರೆನಿಸಿ (ದೇವತೆಗಳು) ಕೊಂಡರು.

೨೦-೨೧. ಇಂದ್ರನಿಗೆ ಶಚೀದೇವಿಯಲ್ಲಿ ಜಯಂತನೆಂಬ ಮಗನು ಜನಿಸಿದನು. ಆದಿತ್ಯನು ವಿಶ್ವಕರ್ಮನ ಮಗಳನ್ನು ಮದುವೆಯಾಗಿ ಶನಿ, ಯಮ ಎಂಬಿಬ್ಬರು ಗಂಡು ಮಕ್ಕಳನ್ನೂ, ಕಾಲಿಂದೀ ಎಂಬ ಹೆಣ್ಣುಮಗಳನ್ನೂ ಪಡೆದನು. ಭೂದೇವಿಯು ಉಪೇಂದ್ರನ ವೀರ್ಯಸಂಬಂಧದಿಂದ ಮಂಗಳ (ಅಂಗಾರಕ) ನನ್ನು ಹೆತ್ತಳ.

೨೨. ಶೌನಕ :—ಎಲೈ, ಸೂತಪುತ್ರನೇ! ಉಪೇಂದ್ರನಿಂದ ಬಲಿಷ್ಠನಾದ ಮಂಗಳನು ಭೂದೇವಿಯಲ್ಲಿ ಹೇಗೆ ಜನಿಸಿದನೆಂಬುದನ್ನು ವಿಸ್ತರಿಸಿ ಹೇಳು.

ದ್ವಾದಶಾದಿತ್ಯರು :—ಧಾತೃ, ಮಿತ್ರ, ಅರ್ಯಮ, ಶಕ್ರ, ವರುಣ, ಅಂಶ, ಭಗ, ವಿವಸ್ವಂತ, ಪೂಷ ತ್ವಷ್ಟೃ, ವಿಷ್ಣು" ಎಂದು ಭಾರತದ ಆದಿಪರ್ವದಲ್ಲಿ ಹೇಳಿದೆ.

|| ಸೌತಿರುವಾಚ ||

ಉಪೇಂದ್ರರೂಪಮಾಲೋಕ್ಯ ಕಾಮಾರ್ತಾ ಚ ವಸುಂಧರಾ ।
ವಿಧಾಯ ಸುಂದರೀವೇಷಮುಕ್ತಾ ಪ್ರೌಢಯೌವನಾ || ೨೩ ||

ಮಲಯೇ ನಿರ್ಜನೇ ರಮ್ಯೇ ಚಾರುಚಂದನಪಲ್ಲವೇ ।
ಚಂದನೋಕ್ಷಿತಸರ್ವಾಂಗಂ ರತ್ನಭೂಷಣಭೂಷಿತಂ || ೨೪ ||

ತಂ ಸುಶೀಲಂ ಶಯಾನಂ ಚ ಶಾಂತಂ ಸಸ್ಮಿತವಿಸ್ಮಿತಂ ।
ಸಸ್ಮಿತಾ ತಸ್ಯ ತಲ್ಪೇ ಚ ಸಹಸಾ ಸಮುಪಸ್ಥಿತಾ || ೨೫ ||

ಸುರಮ್ಯಾಂ ಮಾಲತೀಮಾಲಾಂ ದದೌ ತಸ್ಮೈ ವರಾನನಾ ।
ಸುಗಂಧಿ ಚಂದನಂ ಚಾರು ಕಸ್ತೂರೀಕುಂಕುಮಾನ್ವಿತಂ || ೨೬ ||

೨೩–೨೫. ಸೂತಪುತ್ರ :—ಹಿಂದೊಮ್ಮೆ ವಸುಂಧರೆಯು ಉಪೇಂದ್ರನ ರೂಪವನ್ನು ನೋಡಿ, ಕಾಮುಪರವಶಳಾದಳು. ಕೂಡಲೇ ನವಯುವತಿಯೂ, ಸುಂದರ ವೇಷಭೂಷಿತಳೂ ಆದಳು. ಉಪೇಂದ್ರನಾದರೋ ಮಲಯಪರ್ವತದ ನಿರ್ಜನ ಪ್ರದೇಶದಲ್ಲಿ, ಸರ್ವಾಂಗಗಳಿಗೂ ಶ್ರೀಗಂಧವನ್ನು ಲೇಪಿಸಿಕೊಂಡು, ರತ್ನಭೂಷಣಗಳನ್ನು ಅಲಂಕರಿಸಿಕೊಂಡು, ಚಂದನದ ಚಿಗುರುಗಳನ್ನು ಹಾಸಿಕೊಂಡು, ಮುಗುಳುನಗೆ ನಗುತ್ತಾ ಮಲಗಿದ್ದನು. ಅದೇ ಸಮಯದಲ್ಲಿ ವಸುಂಧರೆಯೂ ಕೂಡ ನಗೆ ಬೀರುತ್ತಾ ಅಲ್ಲಿಗೆ ಬಂದು ಸೇರಿದಳು.

೨೬. ಆ ಸುಂದರಿಯು ಸುಂದರವಾದ ಜಾಜೀಹೂವಿನ ಮಾಲೆಯೊಂದನ್ನೂ, ಕಸ್ತೂರೀ ಕುಂಕುಮ ಕೇಸರಿಗಳನ್ನು ಬೆರೆಸಿರುವ ದಿವ್ಯಗಂಧವನ್ನೂ, ಉಪೇಂದ್ರನಿಗಿತ್ತಳು.

ಉಪೇಂದ್ರಸ್ತನ್ಮನೋ ಜ್ಞಾತ್ವಾ ಕಾಮಿನೀಂ ಕಾಮಪೀಡಿತಾಂ ।
ನಾನಾಪ್ರಕಾರಂ ಶೃಂಗಾರಂ ಚಕಾರ ಚ ತಯಾ ಸಹ । ೨೭ ॥

ತದಂಗಸಂಗಸಂಸಕ್ತಾ ಮೂರ್ಛಾಂ ಪ್ರಾಪ ಸತೀ ತದಾ ।
ಮೃತೇವ ನಿದ್ರಿತೇವಾಸೌ ಬೀಜಾಧಾನಂ ಕೃತೇ ಹರೌ ॥ ೨೮ ॥

ತಾಂ ವಿಲಗ್ನಾಂ ಚ ಸುಶ್ರೋಣೀಂ ಸುಖಸಂಭೋಗಮೂರ್ಛಿತಾಂ ।
ಬೃಹನ್ಮುಕ್ತನಿತಂಬಾಂ ಚ ಸಸ್ಮಿತಾಂ ವಿಪುಲಸ್ತನೀಂ ॥ ೨೯ ॥

ಕ್ಷಣಂ ವಕ್ಷಸಿ ಕೃತ್ವಾ ತಾಂ ತದೋಷ್ಠಂ ಚ ಚುಚುಂಬ ಹ ।
ವಿಹಾಯ ತತ್ರ ರಹಸಿ ಜಗಾಮ ಪುರುಷೋತ್ತಮಃ ॥ ೩೦ ॥

ಉರ್ವಶೀ ಪಥಿ ಗಚ್ಛಂತೀ ಬೋಧಯಾಮಾಸ ತಾಂ ಮುನೇ ।
ಸಾ ಚ ಪಪ್ರಚ್ಛ ವೃತ್ತಾಂತಂ ಕಥಯಾಮಾಸ ಭೂಶ್ಚ ತಾಂ ॥ ೩೧ ॥

---

೨೭. ವಸುಂಧರೆಯು ಕಾಮಪೀಡಿತಳಾಗಿರುವಳೆಂದು, ಅವಳ ಹಾವ, ಭಾವ ವಿಲಾಸಗಳಿಂದ ಉಪೇಂದ್ರನು ಅರಿತು, ಅವಳೊಡನೆ ವಿಧವಿಧ ಶೃಂಗಾರಭೋಗಗಳನ್ನು ಅನುಭವಿಸಿದನು.

೨೮. ಉಪೇಂದ್ರನ ಅವಯವ ಸಂಸರ್ಗದಿಂದ ವಸುಂಧರಾದೇವಿಯು ಆನಂದ ಪರವಶಳಾಗಿ ಮೂರ್ಛೆಗೊಂಡಳು. ಉಪೇಂದ್ರನು ಅವಳಲ್ಲಿ ಗರ್ಭಾದಾನಮಾಡಿದಾಗ ಅವಳು ನಿದ್ರೆಮಾಡುತ್ತಿದ್ದವಳಂತೆ ಮಲಗಿದ್ದಳು.

೨೯–೩೦. ಸಂಭೋಗಸುಖದಿಂದ ಮೂರ್ಛೆಗೊಂಡು ಮಲಗಿರುವಾಗ ಅವಳ ಉಡುಪೆಲ್ಲವೂ ಅಸ್ತವ್ಯಸ್ತವಾಗಿದ್ದಿತು. ಅವಳ ವಿಸ್ತಾರವಾದ ನಿತಂಬಭಾಗವೂ, ವಿಪುಲವಾದ ಸ್ತನಗಳೂ ಸ್ಪಷ್ಟವಾಗಿ ಕಾಣುತ್ತಿದ್ದುವು. ಸ್ಮಿತವದನೆಯಾದ ಆಕೆಯನ್ನು ಕ್ಷಣಕಾಲ ಎದೆಯಲ್ಲಿ ಆಲಿಂಗಿಸಿಕೊಂಡು ಮುದ್ದಿಸಿ, ಏಕಾಕಿನಿಯಾಗಿ ಅವಳನ್ನು ಬಿಟ್ಟು ಉಪೇಂದ್ರನು ಹೊರಟುಹೋದನು.

೩೧. ಆ ಸಮಯದಲ್ಲಿ ಅದೇ ಮಾರ್ಗವಾಗಿ ಹೋಗುತ್ತಿದ್ದ ಊರ್ವಶಿಯು ಬಂದು ವಸುಂಧರೆಯನ್ನು ಎಚ್ಚರಗೊಳಿಸಿದಳು. ಅನಂತರ ಸಮಾಚಾರವೇನೆಂದು ಕೇಳಲು ಭೂದೇವಿಯು ಎಲ್ಲವನ್ನೂ ವಿವರಿಸಿದಳು.

ವೀರ್ಯಸಂವರಣಂ ಕರ್ತುಂ ಸಾ ಚಾಶಕ್ತಾ ಚ ದುರ್ಬಲಾ ।
ಪ್ರವಾಲಸ್ಯಾಕರೇ ತ್ರಸ್ತಾ ವೀರ್ಯನ್ಯಾಸಂ ಚಕಾರ ಸಾ ॥ ೨೨ ॥

ತೇನ ಪ್ರವಾಲವರ್ಣಶ್ಚ ಕುಮಾರಸ್ಸಮುಪದ್ಯತ ।
ತೇಜಸಾ ಸೂರ್ಯಸದೃಶೋ ನಾರಾಯಣಸುತೋ ಮಹಾನ್ ॥ ೩೩ ॥

ಮಂಗಳಸ್ಯ ಪ್ರಿಯಾ ಮೇಧಾ ತಸ್ಯ ಘಂಟೇಶ್ವರೋ ಮಹಾನ್ ।
ವ್ರಣದಾತಾತಿತೇಜಸ್ವೀ ವಿಷ್ಣುತುಲ್ಯೋ ಬಭೂವ ಹ ॥ ೩೪ ॥

ದಿತೇರ್ಹಿರಣ್ಯಕಶಿಪುಹಿರಣ್ಯಾಕ್ಷೌ ಮಹಾಬಲೌ ।
ಕನ್ಯಾ ಚ ಸಿಂಹಿಕಾ ವಿಪ್ರ ಸೈಂಹಿಕೇಯಶ್ಚ ತತ್ಸುತಃ ॥ ೩೫ ॥

---

೩೨. ಭೂದೇವಿಯು ಉಪೇಂದ್ರನ ವೀರ್ಯವನ್ನು ಸಹಿಸಲಶಕ್ತಳಾಗಿ ಅದು ನಷ್ಟವಾಗುವುದೆಂಬ ಭಯದಿಂದ ಅಲ್ಲೇ ಸಮೀಪದಲ್ಲಿದ್ದ ಹವಳದ ಗಣಿಯಲ್ಲಿ ಆ ವೀರ್ಯವನ್ನಿರಿಸಿದಳು.

೩೩. ಆದ್ದರಿಂದಲೇ ಹವಳವರ್ಣದ ಕುಮಾರನು ಜನಿಸಿದನು. ನಾರಾಯಣನಿಂದ (ಉಪೇಂದ್ರ) ಹುಟ್ಟಿದ ಆ ಮಹಾತ್ಮನು ಸೂರ್ಯನಿಗೆ ಸಮನಾದ ತೇಜೋವಂತನಾದನು. ಅವನೇ ಮಂಗಳನು.

೩೪. ಮಂಗಳನ ಪತ್ನಿಯು ಮೇಧೆ ಎಂಬುವಳು. ಅವನಿಗೆ, ಹುಣ್ಣು ಮುಂತಾದುವುಗಳನ್ನುಂಟುಮಾಡುವವನೂ, ವಿಷ್ಣುಸದೃಶನೂ, ಬಹಳ ತೇಜಸ್ವಿಯೂ ಆದ ಘಂಟೇಶ್ವರನೆಂಬೊಬ್ಬ ಮಗನು ಜನಿಸಿದನು.

೩೫. ಅನಂತರ ದಿತಿಯ ಗರ್ಭದಲ್ಲಿ ಮಹಾಪರಾಕ್ರಮಶಾಲಿಗಳಾದ ಹಿರಣ್ಯಾಕ್ಷ, ಹಿರಣ್ಯಕಶಿಪುಗಳೆಂಬ ಇಬ್ಬರು ರಾಕ್ಷಸರೂ, ಸಿಂಹಿಕೆಯೆಂಬೊಬ್ಬ ರಾಕ್ಷಸಿಯೂ ಜನಿಸಿದರು. ಆ ಸಿಂಹಿಕೆಯ ಮಗನೇ ಸೈಂಹಿಕೇಯನು. ಅವನನ್ನೇ ರಾಹುವೆನ್ನುವರು.

ನಿರ್ಋತಿಃ ಸಿಂಹಿಕಾ ಸಾ ಚ ತೇನ ರಾಹುಶ್ಚ ನೈರ್ಋತಃ ।
ಸೂಕರೇಣ ಹಿರಣ್ಯಾಕ್ಷೋಽಪ್ಯನಪತ್ಯೋ ಮೃತೋ ಯುವಾ ॥ ೩೬ ॥

ಹಿರಣ್ಯಕಶಿಪೋಃ ಪುತ್ರಃ ಪ್ರಹ್ಲಾದೋ ವೈಷ್ಣವಾಗ್ರಣೀಃ ।
ವಿರೋಚನಶ್ಚ ತತ್ಪುತ್ರಃ ತತ್ಪುತ್ರಶ್ಚ ಬಲಿಃ ಸ್ವಯಂ ॥ ೩೭ ॥

ಬಲೇಃ ಪುತ್ರೋ ಮಹಾಯೋಗೀ ಜ್ಞಾನೀ ಶಂಕರಕಿಂಕರಃ ।
ದಿತೇರ್ವಂಶಶ್ಚ ಕಥಿತಃ ಕದ್ರೂವಂಶಂ ನಿಬೋಧ ಮೇ ॥ ೩೮ ॥

ಅನಂತಂ ವಾಸುಕಿಂ ಚೈವ ಕಾಳೀಯಂ ಚ ಧನಂಜಯಂ ।
ಕರ್ಕೋಟಕಂ ತಕ್ಷಕಂ ಚ ಪದ್ಮಮೈರಾವತಂ ತಥಾ ॥ ೩೯ ॥

ಮಹಾಪದ್ಮಂ ಚ ಶಂಕುಂ ಚ ಶಂಖಂ ಸಂವರಣಂ ತಥಾ ।
ಧೃತರಾಷ್ಟ್ರಂ ಚ ದುರ್ಧರ್ಷಂ ದುರ್ಜಯಂ ದುರ್ಮುಖಂ ಬಲಂ ॥ ೪೦ ॥

---

೩೬. ಆ ಸಿಂಹಿಕೆಯನ್ನು ನಿರ್ಋತಿಯೆಂದೂ, ಆದ್ದರಿಂದಲೇ ರಾಹುವನ್ನು ನೈರ್ಋತನೆಂದೂ ಕರೆಯುವರು. ಮೇಲೆ ಹೇಳಿದ ಇಬ್ಬರು ರಾಕ್ಷಸರಲ್ಲಿ ಹಿರಣ್ಯಾಕ್ಷನು ಇನ್ನೂ ಯುವಕನಾಗಿದ್ದಾಗಲೇ ವರಾಹರೂಪಿಯಾದ ಪರಮಾತ್ಮನಿಂದ ನಾಶಗೊಂಡನು. ಅವನಿಗೆ ಮಕ್ಕಳಿರಲಿಲ್ಲ.

೩೭. ಹಿರಣ್ಯಕಶಿಪುವಿನ ಮಗನೇ ವಿಷ್ಣುಭಕ್ತಾಗ್ರೇಸರನಾದ ಪ್ರಹ್ಲಾದನು. ಅವನ ಮಗ ವಿರೋಚನನು. ವಿರೋಚನನ ಪುತ್ರನೇ ಬಲಿಚಕ್ರವರ್ತಿಯು.

೩೮. ಬಲಿಚಕ್ರವರ್ತಿಯ ಮಗನೇ ಮಹಾಯೋಗಿಶ್ರೇಷ್ಠನೂ, ಶಿವಭಕ್ತನೂ ಆದ ಬಾಣಾಸುರನು. ಇದುವರೆಗೆ ದಿತಿಯ ವಂಶವನ್ನು ತಿಳಿಸಿದ್ದಾಯಿತು. ಮುಂದೆ ಕದ್ರುವಿನ ವಂಶವನ್ನು ವಿವರಿಸುವೆನು, ಸಾವಧಾನದಿಂದ ಕೇಳು.

೩೯–೪೧. ಅನಂತವಾಸುಕಿಯರೂ, ಕಾಳೀಯಧನಂಜಯರೂ, ಕರ್ಕೋಟಕ ತಕ್ಷಕರೂ, ಪದ್ಮ ಮತ್ತು ಐರಾವತರೂ, ಕದ್ರುವಿನ ಮಕ್ಕಳು. ಅಂತೆಯೇ ಮಹಾಪದ್ಮ, ಶಂಕು, ಶಂಖ, ಸಂವರಣ, ಧೃತರಾಷ್ಟ್ರ, ದುರ್ಧರ್ಷ, ದುರ್ಜಯ,

ಗೋಕ್ಷ್ಣಂ ಗೋಕಾಮುಖಂ ಚ್ಚೈವ ವಿರೂಪಾದೀಂಶ್ಚ ಶೌನಕ ।
ಏತೇಷಾಂ ಪ್ರವರಾಂಶ್ಚೈವ ಯೊವತ್ಯಃ ಸರ್ಪಜಾತಯಃ ॥ ೪೧ ॥

ಕನ್ಯಕಾ ಮನಸಾ ದೇವೀ ಕಮಲಾಂಶಸಮುದ್ಭವಾ ।
ತಪಸ್ವಿನೀನಾಂ ಪ್ರವರಾ ಮಹಾತೇಜಸ್ವಿನೀ ಶುಭಾ ॥ ೪೨ ॥

ಯತ್ಪತಿಶ್ಚ ಜರತ್ಕಾರುರ್ನಾರಾಯಣಕುಲೋದ್ಭವಃ ।
ಆಸ್ತೀಕಸ್ತನಯೋ ಯಸ್ಯ ವಿಷ್ಣುತುಲ್ಯಶ್ಚ ತೇಜಸಾ ॥ ೪೩ ॥

ಏತೇಷಾಂ ನಾಮಮಾತ್ರೇಣ ನಾಸ್ತಿ ನಾಗಭಯಂ ನೃಣಾಂ ।
ಕದ್ರೂವಂಶೋ ನಿಗದಿತೋ ವಿನತಾಯೊಃ ಶ್ರುಣುಷ್ವ ಮೇ ॥ ೪೪ ॥

ವೈನತೇಯಾರುಣೌ ಪುತ್ರೌ ವಿಷ್ಣುತುಲ್ಯಪರಾಕ್ರಮೌ ।
ತೌ ಬಭೂವುಃ ಕ್ರಮೇಣೈವ ಯೊವತ್ಯಃ ಪಕ್ಷಿಜಾತಯಃ ॥ ೪೫ ॥

ದುರ್ಮುಖ, ಬಲ, ಗೋಕ್ಷ್ಣ, ಗೋಕಾಮುಖ, ವಿರೂಪ ಮುಂತಾದ ಇನ್ನೂ ಅನೇಕ ಮಂದಿ ಪುತ್ರರು ಕದ್ರುವಿನಲ್ಲಿ ಜನಿಸಿದರು. ಈ ಶ್ರೇಷ್ಠಸರ್ಪಗಳು ಮಾತ್ರವಲ್ಲದೆ ವಿಶಿಷ್ಟವಾದ ಸರ್ಪಜಾತಿಯೂ ಅವಳಲ್ಲೇ ಜನಿಸಿತು.

೪೨–೪೩. ಅಲ್ಲದೆ ಲಕ್ಷ್ಮೀದೇವಿಯ ಅಂಶದಿಂದ ಮನಸಾ ಎಂಬ ಕನ್ಯೆಯೊಬ್ಬಳು ಜನಿಸಿದಳು ಇವಳಿಗೇ ಜರಾತ್ಕಾರುವೆಂಬ ನಾಮಾಂತರ ಈಕೆ ಮಹಾ ತಪಸ್ವಿನಿ. ಇವಳನ್ನು ನಾರಾಯಣ ವಂಶದಲ್ಲಿ ಜನಿಸಿದ ಜರತ್ಕಾರುವೆಂಬುವನು ಮದುವೆಯಾದನು. ಆ ಜರತ್ಕಾರುವಿನ ಮಗನೇ, ವಿಷ್ಣುಸದೃಶ ತೇಜಸ್ವಿಯಾದ ಆಸ್ತೀಕನೆಂಬುವನು.

೪೪. ಮೇಲೆ ಹೇಳಿದ ಸರ್ಪಗಳ ಹೆಸರನ್ನು ಹೇಳಿದ ಮಾತ್ರದಿಂದಲೇ ಮನುಜರಿಗೆ ಸರ್ಪಭಯನಿವಾರಣೆಯಾಗುವುದು. ಇನ್ನು ವಿನತೆಯ ಚರಿತ್ರೆಯನ್ನು ವಿವರಿಸುವೆನು.

೪೫. ವಿಷ್ಣುವಿಗೆ ಸಮಬಲರಾದ ಗರುಡ ಮತ್ತು ಅರುಣರು ವಿನತೆಯ ಪುತ್ರರು. ಅಲ್ಲಿಂದ ಮುಂದೆ ಪಕ್ಷಿಗಳೆಲ್ಲಾ ಅದೇ ವಂಶದಲ್ಲಿ ಕ್ರಮವಾಗಿ ಜನಿಸಿದರು.

ಗಾವಶ್ಚ ಮಹಿಷಾಶ್ಚೈವ ಸುರಭಿಪ್ರವರಾ ಇಮೇ ।
ಸರ್ವೇ ವೈ ಸಾರಮೇಯಾಶ್ಚ ಬಭೂವುಃ ಸರಮಾ ಸುತಾಃ ॥ ೪೬ ॥

ದಾನವಾಶ್ಚ ದನೋರ್ವಂಶಾ ಅನ್ಯಾಸ್ಸಾಮಾನ್ಯಜಾತಯಃ ।
ಉಕ್ತಃ ಕಶ್ಯಪವಂಶಶ್ಚ ಚಂದ್ರಾಖ್ಯಾನಂ ನಿಬೋಧ ಮೇ ॥ ೪೭ ॥

ನಾಮಾನಿ ಚಂದ್ರಪತ್ನೀನಾಂ ಸಾವಧಾನಂ ನಿಶಾಮಯ ।
ಅತ್ಯಪೂರ್ವಂ ಚ ಚರಿತಂ ಪುರಾಣೇಷು ಪುರಾತನಂ ॥ ೪೮ ॥

ಅಶ್ವಿನೀ ಭರಣೀ ಚೈವ ಕೃತ್ತಿಕಾ ರೋಹಿಣೀ ತಥಾ ।
ಮೃಗಶೀರ್ಷಾ ತಥಾದ್ರಾ ಚ ಪೂಜ್ಯಾ ಸಾಧ್ವೀ ಪುನರ್ವಸುಃ ॥ ೪೯ ॥

ಪುಷ್ಯಾಶ್ಲೇಷಾ ಮಘಾ ಪೂರ್ವಫಲ್ಗುನ್ಯುತ್ತರಫಲ್ಗುನೀ ।
ಹಸ್ತ ಚಿತ್ರಾ ತಥಾ ಸ್ವಾತೀ ವಿಶಾಖಾ ಚಾನುರಾಧಿಕಾ ॥ ೫೦ ॥

ಜ್ಯೇಷ್ಠಾ ಮೂಲಾ ತಥಾ ಪೂರ್ವಾಷಾಢಾ ಚೈವೋತ್ತರಾ ಸ್ಮೃತಾ ।
ಶ್ರವಣಾ ಚ ಧನಿಷ್ಠಾ ಚ ತಥಾ ಶತಭಿಷಾ ಶುಭಾ ॥ ೫೧ ॥

ಪೂರ್ವಾಭಾದ್ರೋತ್ತರಾಭಾದ್ರಾ ರೇವತ್ಯಂತಾ ವಿಧುಪ್ರಿಯಾಃ ।

---

೪೬. ಸುರಭಿಯಿಂದ ಎಲ್ಲಾ ಹಸುಗಳೂ ಮತ್ತು ಎಮ್ಮೆಗಳೂ, ಸರಮೆಯಿಂದ ಸಾರಮೇಯುಗಳೂ (ಬೇಟೆನಾಯಿಗಳು) ಕ್ರಮವಾಗಿ ಜನಿಸಿದುವು.

೪೭. ದನುವಿನ ವಂಶದಲ್ಲಿ ಜನಿಸಿದವರು ದಾನವರೆನಿಸಿಕೊಂಡರು ಇಲ್ಲಿಗೆ ಕಶ್ಯಪನ ಪ್ರಧಾನ ವಂಶ ವಿವರಣೆಯಾಯಿತು. ಉಳಿದವರ ವಂಶವು ಸಾಮಾನ್ಯವಾದದ್ದು. ಈಗ ಚಂದ್ರವಂಶವನ್ನು ವಿವರಿಸುವೆನು.

೪೮. ಚಂದ್ರಪತ್ನಿಯರ ಹೆಸರೂ, ಅವರ ಚರಿತ್ರೆಯೂ, ಅಪರೂಪವಾದುದರಿಂದಲೂ, ಪುರಾಣಗಳಿಗಿಂತ ಪುರಾತನವಾದುದರಿಂದಲೂ, ಗಮನಿಸಿ ಕೇಳು.

೪೯-೫೧. ಚಂದ್ರಪತ್ನಿಯರು ಇಪ್ಪತ್ತೇಳುಮಂದಿ. ಅವರು ಕ್ರಮವಾಗಿ, ಅಶ್ವಿನಿ, ಭರಣಿ, ಕೃತ್ತಿಕೆ, ರೋಹಿಣಿ, ಮೃಗಶಿರೆ, ಆರಿದ್ರೆ, ಪುನರ್ವಸು, ಪುಷ್ಯ, ಆಶ್ಲೇಷ, ಮಖೆ, ಪುಬ್ಬೆ, ಉತ್ತರೆ, ಹಸ್ತ, ಚಿತ್ತೆ, ಸ್ವಾತಿ, ವಿಶಾಖೆ, ಅನೂರಾಧೆ, ಜ್ಯೇಷ್ಠೆ, ಮೂಲ, ಪೂರ್ವಾಷಾಢಾ, ಉತ್ತರಾಷಾಢಾ, ಶ್ರವಣ, ಧನಿಷ್ಠೆ, ಶತಭಿಷ, ಪೂರ್ವಾಭಾದ್ರೇ, ಉತ್ತರಾಭಾದ್ರೆ, ರೇವತಿ' ಎಂಬ ಹೆಸರಿನವರು.

ತಾಸಾಂ ಮಧ್ಯೇ ಚ ಸುಭಗಾ ರೋಹಿಣೀ ರಸಿಕಾ ವರಾ ॥ ೫೨ ॥

ಸಂತತಂ ರಸಭಾವೇನ ಚಕಾರ ಶಶಿನಂ ವಶಂ ।
ರೋಹಿಣ್ಯುಪಗತಶ್ಚಂದ್ರೋ ನಯೊತ್ಯನ್ಯಾಂ ಚ ಕಾಮಿನೀಂ ॥ ೫೩ ॥

ಸರ್ವಾ ಭಗಿನ್ಯಃ ಪಿತರಂ ಕಥಯಾಮಾಸುರಾದೃತಾ ।
ಸಪತ್ನೀಕೃತ ಸಂತಾಪಂ ಪ್ರಾಣನಾಶಕರಂ ಪರಂ ॥ ೫೪ ॥

ದಕ್ಷಃ ಪ್ರಕುಪಿತಶ್ಚಂದ್ರಮಶಪನ್ಮಂತ್ರಪೂರ್ವಕಂ ।
ದ್ರುತಂ ಶ್ವಶುರಶಾಪೇನ ಯಕ್ಷ್ಮಗ್ರಸ್ತೋ ಬಭೂವ ಸಃ ॥ ೫೫ ॥

ದಿನೇ ದಿನೇ ಯಕ್ಷ್ಮಣಾ ಸ ಕ್ಷೀಯಮಾಣಶ್ಚ ದುಃಖಿತಃ ।
ವಪುಷ್ಯರ್ಧಂ ಕ್ಷೀಯಮಾಣೇ ಶಂಕರಂ ಶರಣಂ ಯಯೌ ॥ ೫೬ ॥

೫೨–೫೩. ಅವರಷ್ಟು ಜನಗಳಲ್ಲಿ ವಿಲಾಸಪರಳಾದ ರೋಹಿಣಿ ಎಂಬುವಳು ಯಾವಾಗಲೂ ತನ್ನ ಹಾವಭಾವಗಳಿಂದಲೂ, ಸೌಂದರ್ಯದಿಂದಲೂ, ಚಂದ್ರನನ್ನು ತನ್ನ ವಶಪಡಿಸಿಕೊಂಡಳು ರೋಹಿಣಿಯ ಶೃಂಗಾರಕ್ಕೆ, ಮೆಚ್ಚಿ ಅವಳ ವಶನಾದ ಚಂದ್ರನು ಮಿಕ್ಕಪತ್ನಿಯರನ್ನು ಅಸಡ್ಡೆಮಾಡಿದನು.

೫೪. ರೋಹಿಣಿಯಿಂದ ಅವಮಾನಿತರಾದ ಸಹೋದರಿಯರೆಲ್ಲರೂ, ಪ್ರಾಣ ಹಾನಿಕರವಾದ ತಮ್ಮ ದುಃಖವನ್ನು ತಮ್ಮ ಪ್ರೀತಿಯ ತಂದೆಗೆ ದೂರು ಹೇಳಿ ಕೊಂಡರು.

೫೫. ದಕ್ಷಬ್ರಹ್ಮನು ಕೋಪಗೊಂಡು ಮಂತ್ರಶಕ್ತಿಯಿಂದ ಚಂದ್ರನಿಗೆ ಶಾಪ ಕೊಟ್ಟನು. ಕೂಡಲೇ ಮಾವನ ಶಾಪದಿಂದ ಚಂದ್ರನು ಕ್ಷಯರೋಗಿಯಾದನು.

೫೬. ಹೀಗೆ ಕ್ಷಯರೋಗದಿಂದ ದಿನದಿನಕ್ಕೂ ಕ್ಷೀಣನಾದ ಚಂದ್ರನು ಅರ್ಧ ಶರೀರದಷ್ಟು ಕೃಶನಾದಾಗ ಮುಂದೇನುಗತಿ ಎಂದು ಶಂಕರನ ಮರೆಹೊಕ್ಕನು.

ದೃಷ್ಟ್ವಾ ಚಂದ್ರಂ ಶಂಕರಶ್ಚ ಕ್ಲೇಶಿತಂ ಶರಣಾಗತಂ ।
ಕರುಣಾಸಾಗರಸ್ತಸ್ಮೈ ಕೃಪಯಾ ಚಾಭಯಂ ದದೌ ॥ ೫೭ ॥

ನಿರ್ಮುಕ್ತಂ ಯಕ್ಷ್ಮಣಾ ಕೃತ್ವಾ ಸ್ವಕಪೋಲೇ ಸ್ಥಲಂ ದದೌ ।
ಅಮರೋ ನಿರ್ಭಯೋ ಭೂತ್ವಾ ಸ ತಸ್ಥೌ ಶಿವಶೇಖರೇ ॥ ೫೮ ॥

ತಂ ಶಿವಶ್ಶೇಖರೇ ಕೃತ್ವಾ ಚಾಭವಚ್ಚಂದ್ರಶೇಖರಃ ।
ನಾಸ್ತಿ ದೇವೇಷು ಲೋಕೇಷು ಶಿವಾಚ್ಛರಣಪಂಜರಃ ॥ ೫೯ ॥

ದಕ್ಷಕನ್ಯಾಃ ಪತಿಂ ಮುಕ್ತಂ ದೃಷ್ಟ್ವಾ ಚ ರುರುದುಃ ಪುನಃ ।
ಆಜಗ್ಮುಃ ಶರಣಂ ತಾತಂ ದಕ್ಷಂ ತೇಜಸ್ವಿನಾಂ ವರಂ ॥ ೬೦ ॥

ಉಚ್ಚೈಶ್ಚ ರುರುದುರ್ಗತ್ವಾ ನಿಹತ್ಯಾಂಗಂ ಪುನಃ ಪುನಃ ।
ತಮೂಚುಃ ಕಾತರಂ ದೀನಾ ದೀನನಾಥಂ ವಿಧೇಸ್ಸುತಂ ॥ ೬೧ ॥

---

೫೭. ದುಃಖಾರ್ತನೂ, ಶರಣಾಗತನೂ ಆದ ಚಂದ್ರನನ್ನು ನೋಡಿ ದಯಾಮಯನಾದ ಶಂಕರನು ಚಂದ್ರನಿಗೆ ಅಭಯದಾನ ಮಾಡಿದನು.

೫೮. ಅಲ್ಲದೆ ಚಂದ್ರನ ಕ್ಷಯರೋಗವನ್ನು ಪರಿಹರಿಸಿ ತನ್ನ ಶಿರಃಕಪಾಲದಲ್ಲಿ ಅವನಿಗೆ ಸ್ಥಳವನ್ನು ಕೊಟ್ಟನು. ಚಂದ್ರನೂ ಕೂಡ ನಿರ್ಭಯವಾಗಿ, ಈಶ್ವರನ ತಲೆಯಲ್ಲಿ ವಾಸಮಾಡಿಕೊಂಡಿದ್ದನು.

೫೯. ಆ ಚಂದ್ರನನ್ನೇ ತಲೆಯಲ್ಲಿ ಧರಿಸಿಕೊಂಡು ಶಿವನು ಚಂದ್ರಶೇಖರನಾದುದು. ಲೋಕದಲ್ಲಿ ಶಿವನಂಥ ಶರಣಾಗತರಕ್ಷಕರು ಮತ್ತೊಬ್ಬರಿಲ್ಲವೆಂದು ಅಂದು ಸಿದ್ಧವಾಯಿತು.

೬೦–೬೧. ಪತಿಯು ರೋಗದಿಂದ ಬಿಡುಗಡೆಯಾದದ್ದನ್ನೂ, ಈಶ್ವರನ ತಲೆಯಲ್ಲಿಯೇ ನೆಲಸಿದ್ದನ್ನೂ, ದಕ್ಷಬ್ರಹ್ಮನ ಹೆಣ್ಣುಮಕ್ಕಳು ನೋಡಿ ಪುನಃ ಗೋಳಾಡಿಕೊಂಡು ತಂದೆಯ ಮರೆಹೊಕ್ಕರು. ಮತ್ತು ತಲೆಯನ್ನು ಚಚ್ಚಿಕೊಳ್ಳುತ್ತಾ, ಗಟ್ಟಿಯಾಗಿ ಅಳುತ್ತಾ ತಮ್ಮ ಕಷ್ಟವನ್ನು ತಂದೆಗೆ ಹೇಳಿಕೊಂಡರು.

|| ದಕ್ಷಕನ್ಯಾ ಊಚುಃ ||

ಸ್ವಾಮಿಸೌಭಾಗ್ಯಲಾಭಾಯ ತ್ವಮುಕ್ತೋಽಸ್ಮಾಭಿರೇವ ಚ |
ಸೌಭಾಗ್ಯಮಸ್ತು ನಸ್ತಾತ ಗತಃ ಸ್ವಾಮೀ ಗುಣಾನ್ವಿತಃ || ೬೨ ||

ಸ್ಥಿತೇ ಚಕ್ಷುಷಿ ಹೇ ತಾತ ! ದೃಷ್ಟಂ ಧ್ವಾಂತಮಯಂ ಜಗತ್ !
ವಿಜ್ಞಾತೆ ಮಧುನಾ ಸ್ತ್ರೀಣಾಂ ಪತಿರೇವ ಹಿ ಲೋಚನಮ್ || ೬೩ ||

ಪತಿರೇವ ಗತಿಸ್ತ್ರೀಣಾಂ ಪತಿಃ ಪ್ರಾಣಾಶ್ಚ ಸಂಪದಃ |
ಧರ್ಮಾರ್ಥಕಾಮಮೋಕ್ಷಾಣಾಂ ಹೇತುಃ ಸೇತುರ್ಭವಾರ್ಣವೇ || ೬೪ ||

ಪತಿರ್ನಾರಾಯಣಃ ಸ್ತ್ರೀಣಾಂ ವ್ರತಂ ಧರ್ಮಃ ಸನಾತನಃ |
ಸರ್ವಂ ಕರ್ಮ ವೃಥಾ ತಾಸಾಂ ಸ್ವಾಮಿನಾಂ ವಿಮುಖಾಶ್ಚ ಯಾಃ || ೬೫ ||

---

೬೨. ದಕ್ಷಕನ್ಯೆಯರು:—ಎಲೈ, ತಂದೆಯೇ! ನಾವು ಪತಿಯ ಸೌಭಾಗ್ಯವನ್ನು ಬಯಸಿ ನಿನ್ನ ಸಮೀಪಕ್ಕೆ ಬಂದಿವೇ ಹೊರತು ಪತಿಗೆ ಕೇಡು ಬಯಸುವುದಿಲ್ಲ ಆದ್ದರಿಂದ ನಮಗೆ ಪತಿಯ ಸೌಭಾಗ್ಯವನ್ನು ಅನುಗ್ರಹಿಸು. ಗುಣವಂತನಾದ ನಮ್ಮ ಪತಿದೇವನು ನಮ್ಮನ್ನು ಬಿಟ್ಟು ಹೋಗಿರುವನು.

೬೩. ಪಿತನೇ! ನಮಗೆ ಕಣ್ಣಿದ್ದರೂ ಜಗತ್ತೆಲ್ಲವೂ ಅಂಧಕಾರಮಯವಾಗಿ ಕಾಣುತ್ತಿದೆ. ಇದರಿಂದ ' ಹೆಂಗಸಿಗೆ ತನ್ನ ಪತಿಯೇ ಕಣ್ಣು. ಅವನಿಲ್ಲದಿದ್ದರೆ ಎಲ್ಲವೂ ವ್ಯರ್ಥ ' ಎಂಬುದು ತಿಳಿಯಿತು.

೬೪. ಸ್ತ್ರೀಯರಿಗೆ ಪತಿಯೇ ದಿಕ್ಕು. ಪತಿಯೇ ಪ್ರಾಣ. ಪತಿಯೇ ಸರ್ವ ಸಂಪತ್ತು, ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಯಾವುದು ಸಿದ್ಧಿಸಬೇಕಾದರೂ ಪತಿಯಿಂದಲೇ. ಸಂಸಾರಸಮುದ್ರವನ್ನು ದಾಟಿ ಬಯಸುವ ಸ್ತ್ರೀಯರಿಗೆ ಪತಿಯೇ ಸೇತುವೆಯು.

೬೫. ಪತಿಯೇ ನಾರಾಯಣ ಸದೃಶನು. ಸ್ತ್ರೀಯರಿಗೆ ಪತಿಯ ಪೂಜೆಗಿಂತ ದೊಡ್ಡವ್ರತವು ಬೇರೆ ಇಲ್ಲ. ಪತಿಸೇವೆಯೇ ಸ್ತ್ರೀಯರ ಅನಾದಿಯಾದ ಧರ್ಮ. ಯಾರು ಪತಿಗೆ ವಿರೋಧವಾಗಿರುವರೋ ಅವರು ಮಾಡಿದ ಸತ್ಕರ್ಮಗಳೆಲ್ಲವೂ ವ್ಯರ್ಥವಾಗುವುದು

ಸ್ನಾನಂ ಚ ಸರ್ವತೀರ್ಥೇಷು ಸರ್ವಯಜ್ಞೇಷು ದಕ್ಷಿಣಾ ।
ಸರ್ವದಾನಾನಿ ಪುಣ್ಯಾನಿ ವ್ರತಾನಿ ನಿಯಮಾಶ್ಚ ಯೇ ॥ ೬೬ ॥

ದೇವಾರ್ಚನಂ ಚಾನಶನಂ ಸರ್ವಾಣಿ ಚ ತಪಾಂಸಿ ಚ ।
ಸ್ವಾಮಿನಃ ಪಾದಸೇವಾಯಾಃ ಕಲಾಂ ನಾರ್ಹಂತಿ ಷೋಡಶೀಂ ॥ ೬೭ ॥

ಸರ್ವೇಷಾಂ ಬಾಂಧವಾನಾಂ ಚ ಪ್ರಿಯಃ ಪುತ್ರಶ್ಚ ಯೋಷಿತಾಂ ।
ಸ ಏವ ಸ್ವಾಮಿನೋಂಽಶಶ್ಚ ಶತಪುತ್ರಾತ್ಪರಃ ಪತಿಃ ॥ ೬೮ ॥

ಅಸದ್ವಂಶಪ್ರಸೂತಾ ಯಾ ಸಾ ದ್ವೇಷ್ಟಿ ಸ್ವಾಮಿನಂ ಸದಾ ।
ಯಸ್ಯಾ ಮನಶ್ಚಲಂ ದುಷ್ಟಂ ಸತತಂ ಪರಪೂರುಷೇ ॥ ೬೯ ॥

೬೬-೬೭. ಅನೇಕ ಪುಣ್ಯನದಿಗಳಲ್ಲಿ ಸ್ನಾನಮಾಡುವುದು, ಅನೇಕ ಯಜ್ಞಯಾಗಾದಿಗಳಲ್ಲಿ ದಕ್ಷಿಣೆಕೊಡುವುದು, ಪುಣ್ಯಕರವಾದ ಅನೇಕ ವ್ರತನಿಯಮಗಳನ್ನು ಆಚರಿಸಿ ದ್ರವ್ಯದಾನಮಾಡುವುದು, ಉಪವಾಸವ್ರತಗಳನ್ನು ಆಚರಿಸುವುದು, ಅನೇಕ ದೇವತೆಗಳನ್ನು ಪೂಜಿಸುವುದು, ಶರೀರವನ್ನು ತಪಸ್ಸಿಗಾಗಿ ಸವೆಸುವುದೂ, ಇವೆಲ್ಲವೂ ಪತಿಸೇವೆ ಮಾಡುವುದರ ಹದಿನಾರನೆಯ ಒಂದಂಶದ ಸತ್ಫಲವನ್ನೂ ಸ್ತ್ರೀಯರಿಗೆ ಕೊಡಲೊಲ್ಲವು.

೬೮. ಹೆಂಗಸರಿಗೆ ಬಂಧುಗಳೆಲ್ಲರಿಗಿಂತಲೂ ತಮ್ಮ ಮಗನಲ್ಲಿ ಪ್ರೀತಿ ಜಾಸ್ತಿ. ಏಕೆಂದರೆ ಅವನು ಪತಿಯ ಅಂಶದಿಂದ ಜನಿಸಿದವನು. ಆದರೂ ನೂರುಜನ ಗಂಡು ಮಕ್ಕಳಿಗಿಂತಲೂ ಪತಿಯೇ ಸರ್ವಶ್ರೇಷ್ಠನೆಂಬುದು ಸಿದ್ಧವಾದುದು.

೬೯. ಯಾವ ಸ್ತ್ರೀಯು ದುಷ್ಟವಂಶದಲ್ಲಿ ಜನಿಸಿರುವಳೋ, ಯಾರ ಮನಸ್ಸು ಚಂಚಲವೂ, ಪರಪುರುಷನಲ್ಲಿ ಆಸಕ್ತಿಯುಳ್ಳದ್ದೂ, ಆಗಿರುವುದೋ ಆಕೆಯು ಯಾವಾಗಲೂ ತನ್ನ ಪತಿದೇವನನ್ನು ನಿಂದಿಸುವಳು.

ಪತಿತಂ ರೋಗಿಣಂ ದುಷ್ಟಂ ನಿರ್ಧನಂ ಗುಣಹೀನಕಂ ।
ಯುವಾನಂ ಚೈವ ವೃದ್ಧಂ ವಾ ಭಜೇತ್ತಂ ನ ತ್ಯಜೇತ್ಸತೀ ॥ ೭೦ ॥

ಸಗುಣಂ ನಿರ್ಗುಣಂ ವಾಪಿ ದ್ವೇಷ್ಟಿ ಯಾ ಸಂತ್ಯಜೇತ್ಪತಿಂ ।
ಪಚ್ಯತೇ ಕಾಲಸೂತ್ರೇ ಸಾ ಯಾವಚ್ಚಂದ್ರದಿವಾಕರೌ ॥ ೭೧ ॥

ಕೀಟೈಃ ಶುನಕ ತುಲ್ಯೈಶ್ಚ ಭಕ್ಷಿತಾ ಸಾ ದಿವಾನಿಶಂ ।
ಭುಙ್ಕ್ತೇ ಮೃತವಸಾಮಾಂಸಂ ಪಿಬೇನ್ಮೂತ್ರಂ ಚ ತೃಷ್ಣಯಾ ॥ ೭೨ ॥

ಗೃಧ್ರಃ ಕೋಟಿಸಹಸ್ರಾಣಿ ಶತಜನ್ಮಾನಿ ಸೂಕರಃ ।
ಶ್ವಾಪದಃ ಶತಜನ್ಮಾನಿ ಸಾ ಭವೇದ್ಬಂಧುಹಾ ತತಃ ॥ ೭೩ ॥

ತತೋ ಮಾನವಜನ್ಮಾನಿ ಲಭೇಚ್ಚೇತ್ಪೂರ್ವಕರ್ಮಣಃ ।
ವಿಧವಾ ಧನಹೀನಾ ಚ ರೋಗಯುಕ್ತಾ ಭವೇದ್ಧ್ರುವಂ ॥ ೭೪ ॥

೭೦–೭೧. ಪತಿದೇವನು ತನ್ನ ದುಷ್ಕರ್ಮಗಳಿಂದ ಪತಿತನಾಗಿರಲಿ, ರೋಗಿಯಾಗಿರಲಿ ಅಥವಾ ಕೆವಕಿಯಾಗಲಿ, ದರಿದ್ರನಾಗಲಿ ಅಥವಾ ಗುಣಹೀನನಾಗಲೀ, ಪ್ರಾಯದವನಾಗಲಿ ಅಥವಾ ಮುದುಕನಾಗಲೀ, ಪತಿವ್ರತೆಯೆನಿಸಿಕೊಳ್ಳಬೇಕಾದವಳು ಅವನನ್ನು ಸೇವಿಸಲೇಬೇಕು. ದೂರಮಾಡಕೂಡದು. ಪತಿಯು ಎಂಥವನಾದರೂ, ಅವನನ್ನು ದೂಷಿಸುವುದು, ಮತ್ತು ಬಿಡುವುದು ಸತಿಯ ಧರ್ಮವಲ್ಲ. ಹಾಗೆ ಪತಿಯನ್ನು ದೂಷಿಸಿ ಬಿಟ್ಟ ಹೆಂಗಸು ಸೂರ್ಯಚಂದ್ರರಿರುವವರೆಗೂ ಕಾಲಸೂತ್ರವೆಂಬ ನರಕದಲ್ಲಿ ನರಳುತ್ತಿರುವಳು.

೭೨. ಪತಿದೂಷಕಳಾದ ಹೆಂಗಸು ನಾಯಿನರಿಗಳಿಗಿಂತ ನೀಚವಾದ ಕ್ರಿಮಿಗಳಿಂದ ಹಗಲೂ ರಾತ್ರಿ ಭಕ್ಷಿತಳಾಗಿ, ಸತ್ತ ಪ್ರಾಣಿಗಳ ಮಾಂಸ, ಮೇದಸ್ಸುಗಳಿಂದ ಹಸಿವನ್ನಡಗಿಸಿಕೊಂಡು, ಮೂತ್ರಪಾನದಿಂದ ಬಾಯಾರಿಕೆಯನ್ನು ನೀಗಿಕೊಳ್ಳುವಳು.

೭೩–೭೪. ಅನಂತರ ಕೋಟಿ ಸಹಸ್ರ ಜನ್ಮಗಳು ಹದ್ದಾಗಿಯೂ, ನೂರಾರು ಜನ್ಮಗಳು ಹಂದಿಯಾಗಿಯೂ, ನೂರಾರು ಜನ್ಮಗಳು ದುಷ್ಟಮೃಗಗಳಾಗಿಯೂ, ಜನಿಸಿ ತನ್ನ ಬಂಧುಗಳನ್ನೇ ನಾಶಗೊಳಿಸುತ್ತಿರುವಳು. ಮುಂದೆ ಒಂದುವೇಳೆ ಪೂರ್ವಜನ್ಮಗಳ ಸುಕೃತ ವಿಶೇಷದಿಂದ ಮನುಷ್ಯ ಜನ್ಮವನ್ನು ಪಡೆದರೂ ವಿಧವೆಯೂ ಧನಹೀನಳೂ ಆಗಿ ಯಾವಾಗಲೂ ರೋಗದಲ್ಲೇ ನರಳುತ್ತಿರುವಳು.

ದೇಹಿ ನಃ ಕಾಂತದಾನಂ ಚ ಕಾಮಪೂರಂ ವಿಧೇಃ ಸುತ।
ವಿಧಾತ್ರಾ ಸದೃಶಸ್ತ್ವಂ ಚ ಪುನಃ ಸ್ರಷ್ಟುಂ ಕ್ಷಮೋ ಜಗತ್ ॥ ೭೫ ॥

ಕನ್ಯಾನಾಂ ವಚನಂ ಶ್ರುತ್ವಾ ದಕ್ಷಃ ಶಂಕರಸಂನಿಧಿಂ।
ಜಗಾಮ ಶಂಭುಸ್ತಂ ದೃಷ್ಟ್ವಾ ಸಮುತ್ಥಾಯ ನನಾಮ ಚ ॥ ೭೬ ॥

ದಕ್ಷಸ್ತಸ್ಯಾಶಿಷಂ ಕೃತ್ವಾ ತಮುವಾಚ ಕೃಪಾನಿಧಿಂ।
ತತ್ಯಾಜ ಕೋಪಂ ದುರ್ಧರ್ಷೋ ದೃಷ್ಟ್ವಾ ಚ ಪ್ರಣತಂ ಶಿವಂ ॥ ೭೭ ॥

॥ ದಕ್ಷ ಉವಾಚ ॥

ದೇಹಿ ಜಾಮಾತರಂ ಶಂಭೋ ಮದೀಯಂ ಪ್ರಾಣವಲ್ಲಭಂ।
ಮತ್ಸುತಾನಾಂ ಚ ಪ್ರಾಣಾನಾಂ ಪರಮೇವ ಪ್ರಿಯಂ ಪತಿಂ ॥ ೭೮ ॥

---

೭೫. "ಎಲೈ ಬ್ರಹ್ಮಪುತ್ರನಾದ ದಕ್ಷನೇ, ಪ್ರಾಣಿಗಳಿಗೆ ಅವರ ಇಷ್ಟಾರ್ಥವನ್ನು ಸಲ್ಲಿಸುವುದರಿಂದ ತೃಪ್ತಿಯಾಗುವುದಲ್ಲವೇ? ನೀನೂ ಬ್ರಹ್ಮನಿಗೆ ಸದೃಶನು ಅವನಂತೆ ಜಗತ್ತನ್ನು ಸೃಷ್ಟಿಮಾಡಬಲ್ಲ ಶಕ್ತನು. ಆದ್ದರಿಂದ ನಮಗೆ ಪತಿಭಿಕ್ಷೆಯನ್ನು ನೀಡುವವನಾಗು.

೭೬. ದಕ್ಷಪ್ರಜಾಪತಿಯು ತನ್ನ ಹೆಣ್ಣುಮಕ್ಕಳ ಮಾತನ್ನು ಲಾಲಿಸಿ ಶಂಕರ ನಿದ್ದೆಡೆಗೆ ಹೋದನು. ಶಂಕರನು ತನ್ನೆಡೆಗೆ ಬಂದ ದಕ್ಷನಿಗೆ ವಿನಯದಿಂದ ವಂದಿಸಿ ಆಸನವನ್ನು ಕೊಟ್ಟು ಕುಳ್ಳಿರಿಸಿದನು.

೭೭. ಬಹಳ ಕೋಪಿಸಿಕೊಂಡು ಹೋಗಿದ್ದ ದಕ್ಷನಿಗೆ ಶಂಕರನು ನಮಿಸಿದ ಕೂಡಲೇ ಕೋಪ ಶಾಂತವಾಯಿತು. ಕೂಡಲೇ ದಯಾಮಯನಾದ ಶಿವನಿಗೆ ಮನಃ ಪೂರ್ವಕವಾಗಿ ಆಶೀರ್ವದಿಸಿ ಮುಂದಿನ ಮಾತುಗಳನ್ನು ಹೇಳಿದನು.

೭೮-೮೦. ದಕ್ಷ:—"ಎಲೈ ಶಂಭುವೇ, ನನ್ನ ಪ್ರೀತಿಯ ಅಳಿಯನೂ, ನನ್ನ ಹೆಣ್ಣುಮಕ್ಕಳ ಪ್ರಾಣಪ್ರಿಯನೂ ಆದ ಚಂದ್ರನನ್ನು ನನಗೆ ಪ್ರತ್ಯರ್ಪಿಸು. ಹಾಗೆ

ನ ಚೇದ್ದದಾಸಿ ಜಾಮಾತಃ ಮಮ ಜಾಮಾತರಂ ವಿಧುಂ ।
ದಾಸ್ಯಾಮಿ ದಾರುಣಂ ಶಾಪಂ ತುಭ್ಯಂ ತ್ವಂ ಕೇನ ಮುಚ್ಯಸೇ ॥ ೭೯ ॥

ದಕ್ಷಸ್ಯ ವಚನಂ ಶ್ರುತ್ವಾ ತಮುವಾಚ ಕೃಪಾನಿಧಿಃ ।
ಸುಧಾಧಿಕಂ ಚ ವಚನಂ ಬ್ರಹ್ಮನ್ ಶರಣಪಂಜರಃ ॥ ೮೦ ॥

॥ ಶಿವ ಉವಾಚ ॥

ಕರೋಷಿ ಭಸ್ಮಸಾಚ್ಚೇನ್ಮಾಂ ದದ್ಯಾವಾಶಾಪಮೇವ ಚ ।
ನಾಹಂ ದಾತುಂ ಸಮರ್ಥಶ್ಚ ಚಂದ್ರಂ ಚ ಶರಣಾಗತಂ ॥ ೮೧ ॥

ಶಿವಸ್ಯ ವಚನಂ ಶ್ರುತ್ವಾ ದಕ್ಷಸ್ತಂ ಶಪ್ತುಮುದ್ಯತಃ ।
ಶಿವಃ ಸಸ್ಮಾರ ಗೋವಿಂದಂ ವಿಪನ್ಮೋಕ್ಷಣಕಾರಕಂ ॥ ೮೨ ॥

ಏತಸ್ಮಿನ್ನಂತರೇ ಕೃಷ್ಣೋ ವೃದ್ಧಬ್ರಾಹ್ಮಣ ರೂಪಧೃಕ್ ।
ಸಮಾಯಯೌ ತಯೋರ್ಮೂಲಂ ತೌ ತಂ ಚ ನಮತುಃ ಕ್ರಮಾತ್ ॥ ೮೩ ॥

ಚಂದ್ರನನ್ನು ಹಿಂದಕ್ಕೆ ಕೊಡದಿದ್ದರೆ, ಅಳಿಯನಾದ ನಿನಗೆ ಕ್ರೂರವಾದ ಶಾಪವನ್ನು ಕೊಡುವೆನು. ಆಗ ನೀನು ಬಿಡುಗಡೆ ಹೊಂದಲಾರೆ." ಈ ಮಾತನ್ನು ಕೇಳಿ ಶರಣಾಗತರಕ್ಷಕನಾದ ಶಂಭುವು ಅಮೃತದಂತೆ ಆಹ್ಲಾದಕವಾದ ಕೆಲವು ಮಾತುಗಳನ್ನಾಡಿದನು.

೮೧. ಶಿವ:—ನೀನು ನನ್ನನ್ನು ಶಪಿಸಿ ಬೂದಿಮಾಡಿದರೂ, ಶರಣಾಗತನಾದ ಚಂದ್ರನನ್ನು ನಾನು ಹಿಂದಕ್ಕೆ ಕೊಡಲಾರೆ. ಶರಣಾಗತರಕ್ಷಣೆಯೇ ನನ್ನ ಪರಮ ಧರ್ಮ.

೮೨. ಶಿವನ ವಚನವನ್ನು ಕೇಳಿ ದಕ್ಷನು ಶಾಪಕೊಡಲು ಸಿದ್ಧನಾದನು. ಆಗ ಶಿವನು ಸಕಲಕಷ್ಟಗಳನ್ನೂ ನಿವಾರಿಸಬಲ್ಲ ಗೋವಿಂದನನ್ನು ಭಕ್ತಿಯಿಂದ ಸ್ಮರಿಸಿಕೊಂಡನು.

೮೩. ಕೂಡಲೇ ಭಕ್ತಪರಾಧೀನನಾದ ಕೃಷ್ಣಪರಮಾತ್ಮನು ವೃದ್ಧಬ್ರಾಹ್ಮಣನ ವೇಷಧಾರಿಯಾಗಿ ಅಲ್ಲಿಗೆ ಬಂದನು. ಶಿವನೂ ಮತ್ತು ದಕ್ಷಬ್ರಹ್ಮನೂ ವಿನಯ ಭಕ್ತಿಗಳಿಂದ ಅವನಿಗೆ ವಂದಿಸಿದರು.

ದತ್ವಾ ಶುಭಾಶಿಷಂ ತೌ ಸ ಬ್ರಹ್ಮಜ್ಯೋತಿಃ ಸನಾತನಃ ।
ಉವಾಚ ಶಂಕರಂ ಪೂರ್ವಂ ಪರಿಪೂರ್ಣತಮೋ ದ್ವಿಜ ॥ ೮೪ ॥

॥ ಶ್ರೀ ಭಗವಾನುವಾಚ ॥

ನ ಚಾತ್ಮನಃ ಪ್ರಿಯಃ ಕಶ್ಚಿತ್ ಶರ್ವ ಸರ್ವೇಷು ಬಂಧುಷು ।
ಆತ್ಮಾನಂ ರಕ್ಷ ದಕ್ಷಾಯ ದೇಹಿ ಚಂದ್ರಂ ಸುರೇಶ್ವರ ॥ ೮೫ ॥

ತಪಸ್ವಿನಾಂ ವರಃ ಶಾಂತಸ್ತ್ವಮೇವಂ ವೈಷ್ಣವಾಗ್ರಣೀಃ ।
ಸಮಃ ಸರ್ವೇಷು ಜೀವೇಷು ಹಿಂಸಾಕ್ರೋಧವಿವರ್ಜಿತಃ ॥ ೮೬ ॥

ದಕ್ಷಃ ಕ್ರೋಧೀ ಚ ದುರ್ಧರ್ಷಸ್ತೇಜಸ್ವೀ ಬ್ರಹ್ಮಣಃ ಸುತಃ ।
ಶಿಷ್ಟೋ ಬಿಭೇತಿ ದುರ್ಧರ್ಷಂ ನ ದುರ್ಧರ್ಷಶ್ಚ ಕಂಚನ ॥ ೮೭ ॥

---

೮೪. ಅನಾದಿಯೂ, ಪರಿಪೂರ್ಣತಮನೂ, ಜ್ಯೋತಿಃಸ್ವರೂಪನೂ ಆದ ಪರಬ್ರಹ್ಮನು ಅವರಿಬ್ಬರಿಗೂ ಆಶೀರ್ವದಿಸಿ, ಮೊದಲು ಶಂಕರನನ್ನು ಕುರಿತು ಕೆಲವು ಮಾತುಗಳನ್ನಾಡಿದನು.

೮೫. ಭಗವಾನ್ :—ಎಲೈ ಶಂಕರನೇ! ಯಾರಿಗಾದರೂ ತನ್ನ ಆತ್ಮಕ್ಕಿಂತ ಪ್ರಿಯನಾದ ಬಂಧುವು ಬೇರೊಬ್ಬನಿಲ್ಲದುದರಿಂದ, ಸುರಶ್ರೇಷ್ಠನಾದ ನೀನು ದಕ್ಷನಿಗೆ ಚಂದ್ರನನ್ನು ಕೊಟ್ಟು ನಿನ್ನ ಆತ್ಮವನ್ನು ಉಳಿಸಿಕೋ.

೮೬. ನೀನಾದರೋ ಶಮದಮಾದಿ ತಪಃಸಂಪತ್ತುಳ್ಳವನು. ವಿಷ್ಣುಭಕ್ತಾಗ್ರೇಸರನು. ಎಲ್ಲ ಪ್ರಾಣಿಗಳಲ್ಲೂ ಸಮನಾಗಿರಬಲ್ಲವನು. ಹಿಂಸೆ ಕೋಪಗಳನ್ನರಿಯದವನು.

೮೭. ಬ್ರಹ್ಮಪುತ್ರನಾದ ದಕ್ಷನಾದರೋ ಬಹಳ ಕೋಪಿಷ್ಠನು. ಪರಾಕ್ರಮಶಾಲಿ ಮತ್ತು ಎದುರಿಸಲಸಾಧ್ಯನು. ಸಾಧುವು ದುಷ್ಟನಿಗೆ ಹೆದರಬೇಕೇ ಹೊರತು ದುಷ್ಟನು ಸಾಧುವಿಗೆ ಎಂದಿಗೂ ಅಂಜನು.

ನಾರಾಯಣವಚಃ ಶ್ರುತ್ವಾ ಹಸಿತ್ವಾ ಶಂಕರಃ ಸ್ವಯಂ |
ಉವಾಚ ನೀತಿಸಾರಂ ಚ ನೀತಿಬೀಜಂ ಪರಾತ್ಪರಂ || ೮೮ ||

|| ಶಂಕರ ಉವಾಚ ||

ತಪೋ ದಾಸ್ಯಾಮಿ ತೇಜಶ್ಚ ಸರ್ವಸಿದ್ಧಿಂ ಚ ಸಂಪದಂ |
ಪ್ರಾಣಾಂಶ್ಚ ನ ಸಮರ್ಥೋಽಹಂ ಪ್ರದಾತುಂ ಶರಣಾಗತಂ || ೮೯ ||

ಯೋ ದದಾತಿ ಭಯೇನೈವ ಪ್ರಪನ್ನಂ ಶರಣಾಗತಂ |
ತಂ ಚ ಧರ್ಮಃ ಪರಿತ್ಯಜ್ಯ ಯಾತಿ ಶಪ್ತ್ವಾ ಸುದಾರುಣಂ || ೯೦ ||

ಸರ್ವಂ ತ್ಯಕ್ತುಂ ಸಮರ್ಥೋಽಹಂ ನ ಸ್ವಧರ್ಮಂ ಜಗತ್ಪ್ರಭೋ |
ಯಃ ಸ್ವಧರ್ಮವಿಹೀನಶ್ಚ ಸ ಚ ಸರ್ವಬಹಿಷ್ಕೃತಃ || ೯೧ ||

---

೮೮. ಶಂಕರನು ಶ್ರೀಕೃಷ್ಣನಾಡಿದ ಮಾತನ್ನು ಕೇಳಿ ನಗುತ್ತಾ, ನ್ಯಾಯ ಸಮ್ಮತವಾದ ಕೆಲವು ಮಾತುಗಳನ್ನು ಪರಮಾತ್ಮನ ಮುಂದೆ ವಿನಯದಿಂದ ಬಿನ್ನವಿಸಿದನು.

೮೯–೯೦. ಶಂಕರ:—ನನ್ನ ತಪೋಮಹಿಮೆಯನ್ನಾಗಲೀ, ತೇಜಸ್ಸನ್ನಾಗಲೀ, ನನ್ನ ತಪಸ್ಸಿನ ಸಂಪೂರ್ಣಫಲವನ್ನಾಗಲೀ, ಸರ್ವಸಂಪತ್ತನ್ನಾಗಲೀ, ಕಡೆಗೆ ನನ್ನ ಪ್ರಾಣವನ್ನಾಗಲೀ, ದಕ್ಷಬ್ರಹ್ಮನಿಗೆ ಅರ್ಪಿಸಬಲ್ಲೆನು. ಆದರೆ ಶರಣಾಗತನನ್ನು ಎಂದೆಂದಿಗೂ ಬಿಟ್ಟು ಕೊಡಲಾರೆನು. ಯಾವ ಮನುಷ್ಯನು ಹೆದರಿಕೆಯಿಂದ ಮರೆ ಹೊಕ್ಕವನನ್ನು ಕೈಬಿಡುವನೋ ಆತನನ್ನು ಧರ್ಮವು ಮನಬಂದಂತೆ ಕ್ರೂರವಾಗಿ ಶಪಿಸಿ, ಬಿಟ್ಟು ಹೋಗುವುದು.

೯೧. ಜಗದೊಡೆಯನೇ! ನಾನೆಲ್ಲವನ್ನೂ ಬಿಡಲು ಸಿದ್ಧನಿದ್ದೇನೆ. ಆದರೆ ಸ್ವಧರ್ಮವನ್ನು ಬಿಡಲಾರೆ. ಯಾರು ಸ್ವಧರ್ಮವಿಹೀನರೋ ಅವರು ಎಲ್ಲೆಡೆಯಲ್ಲೂ ಬಹಿಷ್ಕಾರ ಹೊಂದುವರು.

ಯಶ್ಚ ಧರ್ಮಂ ಸದಾ ರಕ್ಷೇತ್ ಧರ್ಮಸ್ತಂ ಪರಿರಕ್ಷತಿ ।
ಧರ್ಮಂ ವೇದೇಶ್ವರ ತ್ವಂ ಚ ಕಿಂ ಮಾಂ ಬ್ರೂಹಿ ಸ್ವಮಾಯಯಾ ॥ ೯೨ ॥

ತ್ವಂ ಸರ್ವಮಾತಾ ಸ್ರಷ್ಟಾ ಚ ಹಂತಾ ಚ ಪರಿಣಾಮತಃ ।
ತ್ವಯಿ ಭಕ್ತಿರ್ದೃಢಾ ಯಸ್ಯ ತಸ್ಯ ಕಸ್ಮಾದ್ಭಯಂ ಭವೇತ್ ॥ ೯೩ ॥

ಶಂಕರಸ್ಯ ವಚಃ ಶ್ರುತ್ವಾ ಭಗವಾನ್ ಸರ್ವಭಾವವಿತ್ ।
ಚಂದ್ರಂ ಚಂದ್ರಾದ್ದ್ವಿನಿಷ್ಕೃಷ್ಯ ದಕ್ಷಾಯ ಪ್ರದದೌ ಹರಿಃ ॥ ೯೪ ॥

ಪ್ರತಸ್ಥಾವರ್ಧಚಂದ್ರಶ್ಚ ನಿರ್ವ್ಯಾಧಿಃ ಶಿವಶೇಖರೇ ।
ನಿಜಗ್ರಾಹ ಪರಂ ಚಂದ್ರಂ ವಿಷ್ಣುದತ್ತಂ ಪ್ರಜಾಪತಿಃ ॥ ೯೫ ॥

---

೯೨. ಯಾರು ಯಾವಾಗಲೂ ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳುವರೋ ಅವರನ್ನು ಧರ್ಮವೂ ಕಾಪಾಡುವುದು. ಸರ್ವೇಶ್ವರನಾದ ನೀನು ಧರ್ಮಸ್ವರೂಪವನ್ನು ಅರಿತೂ ನಿನ್ನ ಮಾಯೆಗೆ ನನ್ನನೇಕೆ ಸಿಲುಕಿಸುವೆ?

೯೩. ನೀನು ಎಲ್ಲರನ್ನೂ ಸೃಜಿಸಿ, ರಕ್ಷಿಸತಕ್ಕವನು. ಕೊನೆಯಲ್ಲಿ ಸಂಹರಿಸತಕ್ಕವನೂ ನೀನೇ. ನಿನ್ನಲ್ಲಿ ಯಾರಿಗೆ ದೃಢಭಕ್ತಿಯುಂಟೋ ಅವರಿಗೆ ಭಯವೇತರದು?

೯೪. ಶಂಕರನ ಮಾತುಗಳಿಂದ ಪರಮಾತ್ಮನಿಗೆ ಅವನ ಅಭಿಪ್ರಾಯವು ವ್ಯಕ್ತವಾಯಿತು. ಆಗ ಚಂದ್ರನನ್ನು ಅರ್ಧಭಾಗಮಾಡಿ ದಕ್ಷನಿಗೆ ಒಂದರ್ಧವನ್ನು ಕೊಟ್ಟನು.

೯೫. ರೋಗರಹಿತನಾದ ಅರ್ಧಚಂದ್ರನು ಶಿವನ ತಲೆಯಲ್ಲಿಯೇ ಉಳಿದುಕೊಂಡನು. ಪರಮಾತ್ಮನು ಕೊಟ್ಟ ಉಳಿದರ್ಧ ಚಂದ್ರನನ್ನು ದಕ್ಷಪ್ರಜಾಪತಿಯು ಸ್ವೀಕರಿಸಿದನು.

ಯಕ್ಷ್ಮಗ್ರಸ್ತಂ ಚ ತಂ ದೃಷ್ಟ್ವಾ ದಕ್ಷಸ್ತುಷ್ಟಾವ ಮಾಧವಂ ।
ಪಕ್ಷೇ ಪೂರ್ಣಂ ಕ್ಷತಂ ಪಕ್ಷೇ ತಂ ಚಕಾರ ಹರಿಃ ಸ್ವಯಂ ॥ ೯೬ ॥

ಕೃಷ್ಣಸ್ತೇಭ್ಯೋ ವರಂ ದತ್ವಾ ಜಗಾಮ ಸ್ವಾಲಯಂ ದ್ವಿಜ ।
ದಕ್ಷಶ್ಚಂದ್ರಂ ಗೃಹೀತ್ವಾ ಚ ಕನ್ಯಾಭ್ಯಃ ಪ್ರದದೌ ಪುನಃ ॥ ೯೭ ॥

ಚಂದ್ರಸ್ತಾಶ್ಚ ಪರಿಪ್ರಾಪ್ಯ ವಿಜಹಾರ ದಿವಾನಿಶಂ ।
ಸಮಂ ದದರ್ಶ ತಾಃ ಸರ್ವಾಸ್ತತ್ರಭೃತ್ಯೇವ ಕಂಪಿತಃ ॥ ೯೮ ॥

॥ ಸೌತಿರುವಾಚ ॥

ಇತ್ಯೇವಂ ಕಥಿತಂ ಸರ್ವಂ ಕಿಂಚಿತ್ಸೃಷ್ಟಿಕ್ರಮಂ ಮುನೇ ।
ಶ್ರುತಂ ಚ ಗುರುವಕ್ತ್ರೇಣ ಪುಷ್ಕರೇ ಮುನಿಸಂಸದಿ ॥ ೯೯ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಸೌತಿಶೌನಕ ಸಂವಾದೇ
ಬ್ರಹ್ಮಖಂಡೇ ನವಮೋಽಧ್ಯಾಯಃ

---

೯೬. ತನ್ನ ಭಾಗಕ್ಕೆ ಬಂದ ಅರ್ಧಚಂದ್ರನು ಕ್ಷಯರೋಗಿಯಾದುದರಿಂದ ದಕ್ಷನು ಅವನ ರೋಗಪರಿಹಾರಕ್ಕಾಗಿ ಪರಮಾತ್ಮನನ್ನು ಭಜಿಸಿದನು. ಆಗ ಪರಮಾತ್ಮನು ಅನುಗ್ರಹಮಾಡಿ ಒಂದು ಪಕ್ಷದಲ್ಲಿ ಪೂರ್ಣವಾಗುವಂತೆಯೂ, ಮತ್ತೊಂದು ಪಕ್ಷದಲ್ಲಿ ಕ್ಷೀಣವಾಗುವಂತೆಯೂ ಚಂದ್ರನಿಗೆ ವರವಿತ್ತನು.

೯೭. ಕೃಷ್ಣಪರಮಾತ್ಮನು ಅವರಿಗೆ ವರವನ್ನು ಕೊಟ್ಟು ತನ್ನ ಲೋಕಕ್ಕೆ ಹಿಂತಿರುಗಿದನು. ಇತ್ತ ದಕ್ಷಬ್ರಹ್ಮನೂ ಚಂದ್ರನನ್ನು ಕರೆದುಕೊಂಡು ಹೋಗಿ ತನ್ನ ಹೆಣ್ಣುಮಕ್ಕಳಿಗೆ ಒಪ್ಪಿಸಿದನು.

೯೮. ಆಗ ಚಂದ್ರನು ತನ್ನೆಲ್ಲಾ ಪತ್ನಿಯರೊಡನೆ ಹಗಲಿರುಳೂ ಕ್ರೀಡಿಸಿಕೊಂಡಿದ್ದನು. ಅಲ್ಲದೆ ಅಂದಿನಿಂದ ದಕ್ಷಬ್ರಹ್ಮನ ಬೆದರಿಕೆಗಾಗಿ ಎಲ್ಲಾ ಪತ್ನಿಯರನ್ನೂ ಸಮದೃಷ್ಟಿಯಿಂದ ನೋಡತೊಡಗಿದನು.

೯೯. ಸೂತಪುತ್ರ :—ಪುಷ್ಕರಕ್ಷೇತ್ರದಲ್ಲಿ, ಋಷಿಗಳ ಸಭೆಯಲ್ಲಿ ಗುರುಮುಖದಿಂದ ನಾನು ಕೇಳಿದ ಸೃಷ್ಟಿಕ್ರಮವನ್ನು ಯಥಾಮತಿ ವಿವರಿಸಿರುವೆನು. ನೀನೂ ಇದನ್ನವಧರಿಸು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಸೌತಿಶೌನಕ ಸಂವಾದರೂಪವಾದ
ಬ್ರಹ್ಮಖಂಡದ ಒಂಭತ್ತನೆಯ ಅಧ್ಯಾಯವು
ಸಂಪೂರ್ಣವಾಯಿತು.

ಒಂಭತ್ತನೆಯ ಅಧ್ಯಾಯದ ಸಾರಾಂಶವು

ನಾರದನು ಶಾಪಗ್ರಸ್ತನಾದಮೇಲೆ, ಚತುರ್ಮುಖ ಬ್ರಹ್ಮನು, ಉಳಿದ ತನ್ನ ಮಕ್ಕಳನ್ನು ಕುರಿತು ಸೃಷ್ಟಿಮಾಡಲು ಹೇಳುವನು. ಅದರಂತೆ ಮರೀಚಿಯ ಮನಸ್ಸಿನಿಂದ ಕಶ್ಯಪನೂ, ಅತ್ರಿನೇತ್ರದಿಂದ ಚಂದ್ರನೂ, ಪ್ರಚೇತಸ ಮತ್ತು ಪುಲಸ್ತ್ಯರ ಮನಸ್ಸಿನಿಂದ ಗೌತಮ ಮೈತ್ರಾವರುಣರೂ ಜನಿಸುವರು. ಸ್ವಾಯಂಭುವ ಮನುವಿಗೆ ಆಕೂತಿ, ದೇವಹೂತಿ, ಪ್ರಸೂತಿ ಎಂಬ ಮೂವರು ಕನ್ಯೆಯರೂ, ಪ್ರಿಯವ್ರತ ಮತ್ತು ಉತ್ತಾನಪಾದ ಎಂಬಿಬ್ಬರು ಕುಮಾರರೂ ಜನಿಸುವರು. ಉತ್ತಾನಪಾದನಿಂದ ಧ್ರುವನು ಜನಿಸುವನು. ದಕ್ಷಪ್ರಜಾಪತಿಯು ಪ್ರಸೂತಿಯನ್ನು ಮದುವೆಯಾಗಿ ಅರವತ್ತು ಕನ್ಯೆಯರನ್ನು ಪಡೆದು, ಅವರಲ್ಲಿ ಎಂಟು ಕನ್ಯೆಯರನ್ನು ಧರ್ಮ ಪುರುಷನಿಗೂ, ಹನ್ನೊಂದು ಕನ್ಯೆಯರನ್ನು ರುದ್ರನಿಗೂ, ಸತಿ ಎಂಬಾಕೆಯನ್ನು ಶಿವನಿಗೂ, ಹದಿಮೂರು ಕನ್ಯೆಯರನ್ನು ಕಶ್ಯಪನಿಗೂ, ಉಳಿದ ಇಪ್ಪತ್ತೇಳು ಕನ್ಯೆಯರನ್ನು ಚಂದ್ರನಿಗೂ ಕೊಟ್ಟು ವಿವಾಹ ಮಾಡುವನು. ಅನಂತರ ಧರ್ಮಪುರುಷನ ಪ್ರತಿಯೊಬ್ಬ ಪತ್ನಿಯರಲ್ಲೂ ಸಂತೋಷನೇ ಮುಂತಾದ ಒಬ್ಬೊಬ್ಬ ಪುತ್ರರು ಜನಿಸುವರು. ಧರ್ಮನ ಹಿರಿಯ ಪತ್ನಿಯಾದ ಮೂರ್ತಿ ಎಂಬುವಳಲ್ಲಿ ನರನಾರಾಯಣ ಮಹರ್ಷಿಗಳು ಜನಿಸುವರು. ರುದ್ರನ ಹನ್ನೊಂದು ಮಂದಿ ಪತ್ನಿಯರಲ್ಲೂ ಶಿವನ ಪಾರ್ಷದರು ಜನ್ಮವೆತ್ತುವರು. ಶಿವನ ಪತ್ನಿಯಾದ ಸತಿಯು ಪತಿಯ ಅವಮಾನದಿಂದ ಖಿನ್ನಳಾಗಿ ಯಜ್ಞಕುಂಡದಲ್ಲಿ ದೇಹತ್ಯಾಗಮಾಡಿ, ಹಿಮವಂತನ ಹೊಟ್ಟೆಯಲ್ಲಿ ಪಾರ್ವತಿಯಾಗಿ ಜನಿಸಿ ಶಿವನನ್ನೇ ವರಿಸುವಳು. ಕಶ್ಯಪಪತ್ನಿಯರಲ್ಲಿ, ಅದಿತಿಯಿಂದ ದೇವತೆಗಳೂ, ದಿತಿಯಿಂದ ರಾಕ್ಷಸರೂ, ವಿನತೆಯಿಂದ ಗರುಡನೇ ಮೊದಲಾದ ಪಕ್ಷಿಗಳೂ, ಸುರಭಿಯಿಂದ ಹಸು, ಎಮ್ಮೆ ಮುಂತಾದುವೂ, ಸರಮೆಯಿಂದ ನಾಯಿ ಮೊದಲಾದವುಗಳೂ, ದನುವಿನಿಂದ ದಾನವರೂ, ಹಾಗೆಯೇ, ದನಾಯುವಿನಿಂದ ಸಿದ್ಧರೂ, ಪ್ರಧೆಯಿಂದ ಗಂಧರ್ವರೂ, ಮುನಿಯಿಂದ ಅಪ್ಸರಸಿಯರೂ, ಸುರಸೆಯಿಂದ ಯಕ್ಷರೂ, ಇಲೆಯಿಂದ ವೃಕ್ಷ

ಲತಾದಿಗಳೂ, ಕ್ರೋಧವಶಾ ಎಂಬುವಳಿಂದ ದುಷ್ಟಮೃಗಗಳೂ, ಉತ್ಪತ್ತಿ ಪಡೆಯು ವರು. ದೇವತೆಗಳಲ್ಲಿ ಇಂದ್ರನಿಗೆ ಜಯಂತನೂ, ಸೂರ್ಯನಿಗೆ ಶನಿ, ಯಮ ಎಂಬಿಬ್ಬರು ಗಂಡುಮಕ್ಕಳೂ, ಕಾಳಿಂದೀ ಎಂಬ ಹೆಣ್ಣುಮಗಳೂ ಜನಿಸುವರು. ಉಪೇಂದ್ರನ ಸೌಂದರ್ಯವನ್ನು ನೋಡಿ ಮೋಹಗೊಂಡ ಭೂದೇವಿಯು ಅವನ ಸಂಗಮದಿಂದ ಅಂಗಾರಕನನ್ನು ಪಡೆಯುವಳು.

ದಿತಿಯ ಮಕ್ಕಳಲ್ಲಿ ಹಿರಣ್ಯಾಕ್ಷ, ಹಿರಣ್ಯಕಶಿಪು ಎಂಬಿಬ್ಬರು ರಾಕ್ಷಸರೂ, ಸಿಂಹಿಕೆಯೆಂಬ ರಾಕ್ಷಸಿಯೂ, ಮುಖ್ಯವಾದರು. ಸಿಂಹಿಕೆಯ ಮಗನೇ ರಾಹುವು. ಹಿರಣ್ಯಕಶಿಪುವಿನ ಮಗನೇ ಭಕ್ತಪ್ರಹ್ಲಾದನು. ಪ್ರಹ್ಲಾದನ ಪುತ್ರನೇ ವಿರೋ ಚನನು. ವಿರೋಚನನ ಮಗನೇ ಬಲಿಚಕ್ರವರ್ತಿಯು. ಆತನ ಮಗನೇ ಶಿವ ಸೇವಕನಾದ ಬಾಣಾಸುರನು.

ಚಂದ್ರನು ಅಶ್ವಿನ್ಯಾದಿ ಇಪ್ಪತ್ತೇಳು ಕನ್ಯೆಯರಲ್ಲಿ ರೋಹಿಣಿಯೊಬ್ಬಳನ್ನು ಮಾತ್ರ ಹೆಚ್ಚು ಪ್ರೀತಿಸಿ ಉಳಿದವರನ್ನು ಉದಾಸೀನಮಾಡಿದುದರ ಫಲವಾಗಿ ದಕ್ಷಪ್ರಜಾಪತಿಯಿಂದ ಕ್ಷಯರೋಗಿಯಾಗುವ ಶಾಪವನ್ನು ಪಡೆದು, ಈಶ್ವರನನ್ನು ಮರೆಹೊಕ್ಕು, ರೋಗದಿಂದ ಮುಕ್ತನಾಗುವನು. ಆದರೂ ದಕ್ಷಬ್ರಹ್ಮನು ಕನ್ಯೆಯರ ಪ್ರಾರ್ಥನೆಯಂತೆ ಬಂದು ಈಶ್ವರನೊಡನೆ ವಾಗ್ವಾದ ಮಾಡ ತೊಡಗಿದಾಗ, ಪರಬ್ರಹ್ಮನು ಇವರಿಬ್ಬರಿಗೂ ಚಂದ್ರನನ್ನು ಅರ್ಧಭಾಗ ಮಾಡಿಕೊಡುವನು. ಅಲ್ಲದೆ ದಕ್ಷಬ್ರಹ್ಮನ ಭಾಗಕ್ಕೆ ಬಂದ ಅರ್ಧ ಚಂದ್ರನು ಶುಕ್ಲಪಕ್ಷದಲ್ಲಿ ವೃದ್ಧಿಯನ್ನೂ, ಕೃಷ್ಣಪಕ್ಷದಲ್ಲಿ ಕ್ಷಯವನ್ನೂ ಅನುಭವಿಸುವಂತೆ ವರವನ್ನು ಕೊಟ್ಟು ಸಮಾಧಾನ ಗೊಳಿಸುವನು. ಅನಂತರ ಚಂದ್ರನು ಎಲ್ಲ ಪತ್ನಿಯರೊಡನೆಯೂ ಸುಖದಿಂದಿರುವನು. ಸ್ತ್ರೀಯರಿಗೆ ಪತಿಯೇ ಪರದೈವವೆಂಬುದೂ, ಶರಣಾಗತರಕ್ಷಣೆಯು ಶ್ರೇಷ್ಠಧರ್ಮ ವೆಂಬುದೂ, ಈ ಅಧ್ಯಾಯದಲ್ಲಿ ಮುಖ್ಯವಾಗಿ ತಿಳಿಯುವುದು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ದಶಮೋಽಧ್ಯಾಯಃ ॥

॥ ಸೌತಿರುವಾಚ ॥

ಭೃಗೋಃ ಪುತ್ರಶ್ಚ ಚ್ಯವನಃ ಶುಕ್ರಶ್ಚ ಜ್ಞಾನಿನಾಂ ವರ।
ಕ್ರತೋರಪಿ ಕ್ರಿಯಾ ಭಾರ್ಯಾ ವಾಲಖಿಲ್ಯಾನಸೂಯತ ॥ ೧ ॥

ಹತ್ತನೆಯ ಅಧ್ಯಾಯವು

೧. ಸೌತಿ:—ಜ್ಞಾನಿಶ್ರೇಷ್ಠನಾದ ಶೌನಕನೇ, ನಾನು ಹೇಳುವುದನ್ನು ಸಾವಧಾನವಾಗಿ ಕೇಳು. ಚತುರ್ಮುಖಬ್ರಹ್ಮನ ವಾಮಪಾರ್ಶ್ವದಿಂದ ಹುಟ್ಟಿದ ಭೃಗುಮಹರ್ಷಿಯ ಮಕ್ಕಳೇ ಚ್ಯವನ ಮತ್ತು ಶುಕ್ರಮಹರ್ಷಿಗಳು ಬ್ರಹ್ಮನ ಎಡಗಣ್ಣಿನಿಂದ ಹುಟ್ಟಿದ ಕ್ರತುವಿಗೆ, ಅವನ ಪತ್ನಿಯಾದ ಕ್ರಿಯೆ ಎಂಬುವಳಲ್ಲಿ *ವಾಲಖಿಲ್ಯರು ಜನಿಸಿದರು.

---

*ವಾಲಖಿಲ್ಯರು:— ಇವರು ಅರವತ್ತುಸಾವಿರಮಂದಿ. ಇವರು ರೂಪದಲ್ಲಿ ತುಂಬ ಚಿಕ್ಕವರು. ಒಮ್ಮೆ ಕಶ್ಯಪಮುನಿ ನೆರವೇರಿಸಿದ ಯಜ್ಞಕಾರ್ಯದಲ್ಲಿ ಇವರು ಒತ್ತಾಸೆಮಾಡಿ ಬಳಲಿದ್ದಾಗ ಇಂದ್ರನು ಇವರನ್ನು ಪರಿಹಾಸಮಾಡಲು, ಕ್ರುದ್ಧರಾಗಿ 'ಕಶ್ಯಪನಿಂದ ಜನಿಸುವ ಗರುಡನು ಇಂದ್ರನ ಗರ್ವವನ್ನು ಮುರಿಯಲೆಂದು' ಶಾಪವಿತ್ತು, ಗರುಡನ ಉತ್ಪತ್ತಿಗಾಗಿ ತಪಸ್ಸು ಮಾಡಿದರು. [ಭಾರತ. ಆದಿಪರ್ವ. ೩೧]

ತ್ರಯಃ ಪುತ್ರಾಶ್ಚಾಂಗಿರಸೋ ಬಭೂವುರ್ಮುನಿಸತ್ತಮಾಃ ।
ಬೃಹಸ್ಪತಿರುತಥ್ಯಶ್ಚ ಶಂಬರಶ್ಚಾಪಿ ಶೌನಕ ॥ ೨ ॥

ವಸಿಷ್ಠಸ್ಯ ಸುತಃ ಶಕ್ತಿಃ ಶಕ್ತೇಃ ಪುತ್ರಃ ಪರಾಶರಃ ।
ಪರಾಶರಸುತಃ ಶ್ರೀಮಾನ್ ಕೃಷ್ಣದ್ವೈಪಾಯನೋ ಹರಿಃ ॥ ೩ ॥

ವ್ಯಾಸಪುತ್ರಃ ಶಿವಾಂಶಶ್ಚ ಶುಕಶ್ಚ ಜ್ಞಾನಿನಾಂ ವರಃ ।
ವಿಶ್ವಶ್ರವಾಃ ಪುಲಸ್ತ್ಯಸ್ಯ ಯಸ್ಯ ಪುತ್ರೋ ಧನೇಶ್ವರಃ ॥ ೪ ॥

॥ ಶೌನಕ ಉವಾಚ ॥

ಅಹೋ ಪುರಾಣವಿದುಷಾಮತ್ಯಂತಂ ದುರ್ಗಮಂ ವಚಃ ।
ನ ಬುದ್ಧಂ ವಚನಂ ಕಿಂಚಿದ್ಧನೇಶೋತ್ಪತ್ತಿಪೂರ್ವಕಂ ॥ ೫ ॥

---

೨. ಎಲೈ, ಶೌನಕನೇ? ಬ್ರಹ್ಮನ ನಾಸಿಕಾದ್ವಾರದಿಂದ ಅವತರಿಸಿದ ಆಂಗಿರಸನಿಗೆ, ಬೃಹಸ್ಪತಿ, ಉತಥ್ಯ ಮತ್ತು ಶಂಬರನೆಂಬ ಮೂವರು ಮುನಿಶ್ರೇಷ್ಠರು ಪುತ್ರರಾಗಿ ಜನಿಸಿದರು.

೩. ವಸಿಷ್ಠಪುತ್ರನೇ ಶಕ್ತಿಯು. ಶಕ್ತಿ ಎಂಬುವನ ಮಗ ಪರಾಶರನು. ಆ ಪರಾಶರ ಮಹರ್ಷಿಯ ಮಗನೇ ಕೃಷ್ಣದ್ವೈಪಾಯನನು.* ಇವನಿಗೆ ವ್ಯಾಸ ಮಹರ್ಷಿಯೆಂಬ ಬೇರೊಂದು ಹೆಸರು.

೪. ವ್ಯಾಸನಿಗೆ ಬಹುಕಾಲ ಮಕ್ಕಳಿಲ್ಲದೆ ತಪಸ್ಸುಮಾಡಿದ ಮೇಲೆ ಜ್ಞಾನಿ ಶ್ರೇಷ್ಠನಾದ ಶುಕಮಹರ್ಷಿಯು ಶಿವಾಂಶದಿಂದ ವ್ಯಾಸನಲ್ಲಿ ಜನಿಸಿದನು. ಪುಲಸ್ತ್ಯ ಪ್ರಜಾಪತಿಗೆ ವಿಶ್ವಶ್ರವನೂ, ವಿಶ್ವಶ್ರವನಿಗೆ ಧನೇಶ್ವರನೂ (ಕುಬೇರನೂ) ಮಕ್ಕಳಾಗಿ ಜನಿಸಿದರು.

೫-೬. ಶೌನಕ:—ಪುರಾಣವನ್ನು ಬಲ್ಲ ವಿದ್ವಾಂಸರ ಗೂಢವಾದ ಮಾತನ್ನು ಅರಿತುಕೊಳ್ಳುವುದೇ ಬಹಳ ಕಷ್ಟ...ಕುಬೇರನ ಉತ್ಪತ್ತಿ ವಿಚಾರವಾಗಿ ಒಂದು

*ಕೃಷ್ಣದ್ವೈಪಾಯನ:— ಕೃಷ್ಣವರ್ಣದ ಯಮುನಾನದಿಯ ಒಂದು ದ್ವೀಪದಲ್ಲಿ ಜನಿಸಿದವನಾದ-ದರಿಂದ ವ್ಯಾಸಮಹರ್ಷಿಗೆ ಈ ಹೆಸರು ಬಂದಿತು. ಕೃಷ್ಣವರ್ಣದ ಮೈಬಣ್ಣ ವುಳ್ಳವನಾದುದರಿಂದ ಕೃಷ್ಣ, ಹರಿ, ಎಂದೂ ಈತನನ್ನು ಕರೆಯುವರು.

ಅಧುನಾ ಕಥಿತಂ ಜನ್ಮ ಧನೇಶಸ್ಯೇಶ್ವರಾದಿದಂ ।
ಪುನರ್ಭಿನ್ನಕ್ರಮಂ ಜನ್ಮ ಬ್ರವೀಷಿ ಕಥಮೇವ ಮಾಂ ॥ ೬ ॥

॥ ಸೌತಿರುವಾಚ ॥

ಬಭೂವುರೇತೇ ದಿಕ್ಪಾಲಾಃ ಪುರಾ ಚ ಪರಮೇಶ್ವರಾತ್ ।
ಪುನಶ್ಚ ಬ್ರಹ್ಮಶಾಪೇನ ಸ ಚ ವಿಶ್ವಶ್ರವಸ್ಸುತಃ ॥ ೭ ॥

ಗುರವೇ ದಕ್ಷಿಣಾಂ ದಾತುಮುತಥ್ಯಶ್ಚ ಧನೇಶ್ವರಂ ।
ಯಯಾಚೇ ಕೋಟಿ ಸೌವರ್ಣಂ ಯತ್ನತಶ್ಚ ಪ್ರಚೇತಸೇ ॥ ೮ ॥

ಧನೇಶೋ ವಿರಸೋ ಭೂತ್ವಾ ತಸ್ಮೈ ತದ್ದಾತುಮುದ್ಯತಃ ।
ಚಕಾರ ಭಸ್ಮಸಾದ್ವಿಪ್ರ ಪುನರ್ಜನ್ಮ ಲಲಾಭ ಸಃ ॥ ೯ ॥

ಮಾತೂ ಸ್ಪಷ್ಟವಾಗಲಿಲ್ಲ. ಮೊದಲು ಕುಬೇರನು ಈಶ್ವರನಿಂದ ಜನಿಸಿದನೆಂದು ಹೇಳಿದಿರಿ. ಈಗ ವಿಶ್ವಶ್ರವನಿಂದ ಹುಟ್ಟಿದನ್ನೆನುವಿರಿ. ಇದು ಹೇಗೆ ಸಮಂಜಸ ವಾಗುವುದು. ವಿಶದವಾಗಿ ತಿಳಿಯಪಡಿಸಿ.

೭. ಸೌತಿ :—ಎಲೈ ಶೌನಕನೇ! ಸೃಷ್ಟಿಯ ಆದಿಯಲ್ಲಿ ದಿಕ್ಪಾಲಕರೆಲ್ಲರೂ ಪರಮೇಶ್ವರನಿಂದ ಜನಿಸಿದುದು ನಿಜ. ಆದರೆ ಕುಬೇರನು ಬ್ರಹ್ಮನ ಶಾಪದಿಂದ ವಿಶ್ವಶ್ರವನ ಮಗನಾಗಿ ಮತ್ತೆ ಜನಿಸಿದನು.

೮. ಆಂಗಿರಸಪುತ್ರನಾದ ಉತಥ್ಯನು, ತನ್ನ ಗುರುವಾದ ಪ್ರಚೇತಸನಿಗೆ ದಕ್ಷಿಣೆ ಕೊಡಲೋಸುಗ ಕೋಟಿಸುವರ್ಣ ನಾಣ್ಯಗಳನ್ನು ಕೊಡಬೇಕೆಂದು ಕುಬೇರ ನನ್ನು ಬೇಡಿದನು.

೯. ಆಗ ಕುಬೇರನು ಬೇಸರಗೊಂಡ ಮನಸ್ಸಿನಿಂದ ಹಣವನ್ನು ಕೊಡಲು ಹೋದನು. ಉತಥ್ಯನು ಅದನ್ನು ಸ್ವೀಕರಿಸದೆ ಕುಬೇರನನ್ನು ತನ್ನ ಶಾಪಬಲದಿಂದ ಬೂದಿಮಾಡಿದನು. ಮತ್ತೆ ಕುಬೇರನು ಜನ್ಮ ಹೊಂದಬೇಕಾಯಿತು.

ತೇನ ವಿಶ್ರವಸಃ ಪುತ್ರಃ ಕುಬೇರಶ್ಚ ಧನಾಧಿಪಃ ।
ರಾವಣಃ ಕುಂಭಕರ್ಣಶ್ಚ ಧಾರ್ಮಿಕಶ್ಚ ವಿಭೀಷಣಃ ॥ ೧೦ ॥

ಪುಲಹಸ್ಯ ಸುತೋ ವಾತ್ಸ್ಯಃ ಶಾಂಡಿಲ್ಯಶ್ಚ ರುಚೇಃ ಸುತಃ ।
ಸಾವರ್ಣಿರ್ಗೌತಮಾಜ್ಜಜ್ಞೇ ಮುನಿಪ್ರವರ ಏವ ಸಃ ॥ ೧೧ ॥

ಕಾಶ್ಯಪಃ ಕಶ್ಯಪಾಜ್ಜಾತೋ ಭರದ್ವಾಜೋ ಬೃಹಸ್ಪತೇಃ ।
ಸ್ವಯಂ ವಾತ್ಸ್ಯಶ್ಚ ಪುಲಹಾತ್ಸಾವರ್ಣಿರ್ಗೌತಮಾತ್ತಥಾ ॥ ೧೨ ॥

ಶಾಂಡಿಲ್ಯಶ್ಚ ರುಚೇಃ ಪುತ್ರೋ ಮುನಿಸ್ತೇಜಸ್ವಿನಾಂ ವರಃ ।
ಬಭೂವುಃ ಪಂಚಗೋತ್ರಾಶ್ಚ ಏತೇಷಾಂ ಪ್ರವರಾ ಇಮೇ ॥ ೧೩ ॥

ಬಭೂವುರ್ಬ್ರಹ್ಮಣೋ ವಕ್ತ್ರಾದನ್ಯಾ ಬ್ರಾಹ್ಮಣಜಾತಯಃ ।
ತಾಃ ಸ್ಥಿತಾ ದೇಶಭೇದೇಷು ಗೋತ್ರಶೂನ್ಯಾಶ್ಚ ಶೌನಕ ॥ ೧೪ ॥

---

೧೦. ಆದ್ದರಿಂದಲೇ ಧನಾಧಿಪತಿಯಾದ ಕುಬೇರನು ವಿಶ್ರವಸ್ಸಿನ ಮಗನಾದನು. ರಾವಣ, ಕುಂಭಕರ್ಣರೂ, ಧರ್ಮಪರಾಯಣನಾದ ವಿಭೀಷಣನೂ. ಕುಬೇರನ ಸಹೋದರರು. (ವಿಶ್ರವಸ್ಸಿಗೆ ಹಿರಿಯ ಹೆಂಡತಿಯಲ್ಲಿ ಕುಬೇರನೂ, ಕಿರಿಯವಳಲ್ಲಿ ರಾವಣಾದಿಗಳೂ ಜನಿಸುವರು.

೧೧. ವಾತ್ಸ್ಯನು ಪುಲಹಮಹರ್ಷಿಯಿಂದಲೂ, ಶಾಂಡಿಲ್ಯನು ರುಚಿಮಹರ್ಷಿಯಿಂದಲೂ, ಸಾವರ್ಣಿ ಎಂಬುವನು ಮುನಿಶ್ರೇಷ್ಠನಾದ ಗೌತಮನಿಂದಲೂ ಜನಿಸಿದರು.

೧೨–೧೩. ಕಶ್ಯಪ ಪ್ರಜಾಪತಿಯಿಂದ ಕಾಶ್ಯಪನೂ, ಬೃಹಸ್ಪತಿಯಿಂದ ಭರದ್ವಾಜನೂ ಜನಿಸಿದರು. ಪುಲಹನಿಂದ ವಾತ್ಸ್ಯನೂ, ಗೌತಮನಿಂದ ಸಾವರ್ಣಿಯೂ, ರುಚಿಯಿಂದ ಶಾಂಡಿಲ್ಯನೂ ಜನಿಸಿದರು. ಕಾಶ್ಯಪ, ಭರದ್ವಾಜ, ವಾತ್ಸ್ಯ, ಸಾವರ್ಣಿ, ಶಾಂಡಿಲ್ಯ ಈ ಐವರಿಂದ ಐದು ಗೋತ್ರಗಳು ಮೊದಲಾದುವು.

೧೪. ಬ್ರಹ್ಮನ ಮುಖದಿಂದ ಇನ್ನೂ ಕೆಲವು ಬ್ರಾಹ್ಮಣ ಜಾತಿಗಳ ಉತ್ಪತ್ತಿಯಾಯಿತು. ಆದರೆ ಅವು ಬೇರೆ ಬೇರೆ ದೇಶಗಳಲ್ಲಿ ಸೇರಿಕೊಂಡು ಗೋತ್ರಶೂನ್ಯವಾದವು.

ಚಂದ್ರಾದಿತ್ಯಮನೂನಾಂ ಚ ಪ್ರವರಾಃ ಕ್ಷತ್ರಿಯಾಃ ಸ್ಮೃತಾಃ ।
ಬ್ರಹ್ಮಣೋ ಬಾಹುದೇಶಾಚ್ಚೈವಾನ್ಯಾಃ ಕ್ಷತ್ರಿಯಜಾತಯಃ ॥ ೧೫ ॥

ಊರುದೇಶಾಚ್ಚ ವೈಶ್ಯಾಶ್ಚ ಪಾದತಃ ಶೂದ್ರಜಾತಯಃ ।
ತಾಸಾಂ ಸಂಕರಜಾತೇನ ಬಭೂವುರ್ವರ್ಣಸಂಕರಾಃ ॥ ೧೬ ॥

ಗೋಪನಾಪಿತಭಿಲ್ಲಾಶ್ಚ ತಥಾ ಮೋದಕಕೂಬರೌ ।
ತಾಂಬೂಲಿಸ್ವರ್ಣಕಾರೌ ಚ ವಣಿಗ್ಜಾತಯ ಏವ ಚ ॥ ೧೭ ॥

ಇತ್ಯೇವಮಾದ್ಯಾ ವಿಪ್ರೇಂದ್ರ ಸಚ್ಛೂದ್ರಾಃ ಪರಿಕೀರ್ತಿತಾಃ ।
ಶೂದ್ರಾವಿಶೋಸ್ತು ಕರಣೋಽಂಬಷ್ಠೋ ವೈಶ್ಯಾದ್ವಿಜನ್ಮನೋಃ ॥ ೧೮ ॥

---

೧೫. ಕೆಲವು ಕ್ಷತ್ರಿಯರಿಗೆ ಚಂದ್ರ, ಸೂರ್ಯ ಮತ್ತು ಸ್ವಾಯಂಭುವ ಮನುಗಳು ಮೂಲಪುರುಷರಾದರು. ಉಳಿದ ಹಲವು ಕ್ಷತ್ರಿಯರು ಬ್ರಹ್ಮನ ಬಾಹು ಪ್ರದೇಶದಿಂದ ಜನಿಸಿದರು.

೧೬. ಬ್ರಹ್ಮನ ತೊಡೆಯ ಪ್ರದೇಶದಿಂದ ವೈಶ್ಯರೂ, ಕಾಲುಗಳಿಂದ ಶೂದ್ರರೂ, ಜನಿಸಿದರು. ಮೇಲೆ ಹೇಳಿದ ಜಾತಿಯ ಅನ್ಯೋನ್ಯ ಸಂಪರ್ಕದಿಂದ ಸಂಕರ ಜಾತಿಯು ಮೊದಲಾಯಿತು. ಅಂದರೆ ಶೂದ್ರರು ತಮಗಿಂತ ಉತ್ತಮರಾದ ಬ್ರಹ್ಮ, ಕ್ಷತ್ರಿಯ ಮತ್ತು ವೈಶ್ಯ ಸ್ತ್ರೀಯರ ಸಹವಾಸಮಾಡಿ ಅವರಿಂದ ಜನಿಸಿದವರೆಲ್ಲರೂ ಜಾತಿಹೀನರಾದರು.

೧೭–೧೮. 'ಗೋಪರು, ನಾಪಿತರು (ಹಜಾಮರು), ಭಿಲ್ಲರು, ಮೋದಕರು, ಕೂಬರರು, ತಾಂಬೂಲಿಗಳು, (ವಿಳ್ಳೆದೆಲೆ ಮಾರುವವರು), ಸ್ವರ್ಣಕಾರರು (ಅಕ್ಕಸಾಲೆ ಗಳು),' ಇವರಿಷ್ಟು ಜನಮಾತ್ರ ಶೂದ್ರರಲ್ಲಿ ಉತ್ತಮರೆನಿಸಿಕೊಂಡರು. ಶೂದ್ರ ಸ್ತ್ರೀಯಲ್ಲಿ ವೈಶ್ಯನಿಂದ ಹುಟ್ಟಿದವನಿಗೆ ಕರಣನೆಂದೂ, ವೈಶ್ಯಸ್ತ್ರೀಯರಲ್ಲಿ ಬ್ರಾಹ್ಮಣ ನಿಂದ ಜನಿಸಿದವನಿಗೆ ಅಂಬಷ್ಠನೆಂದೂ ಹೆಸರಾಯಿತು.

---

*['ಬ್ರಾಹ್ಮಣೋಽಸ್ಯ ಮುಖಮಾಸೀತ್ । ಬಾಹೂರಾಜನ್ಯಃ ಕೃತಃ । ಊರೂತ ದಸ್ಯ ಯದ್ವೈಶ್ಯಃ । ಪದ್ಭ್ಯಾಂ ಶೂದ್ರೋ ಅಜಾಯತ ' ॥ ಎಂದು ಶ್ರುತಿವಚನ.]

ವಿಶ್ವಕರ್ಮಾ ಚ ಶೂದ್ರಾಯಾಂ ವೀರ್ಯಾಧಾನಂ ಚಕಾರ ಸಃ ।
ತತೋ ಬಭೂವುಃ ಪುತ್ರಾಶ್ಚ ನವೈತೇ ಶಿಲ್ಪಕಾರಿಣಃ ॥ ೧೯ ॥

ಮಾಲಾಕಾರಃ ಕರ್ಮಕಾರಃ ಶಂಖಕಾರಃ ಕುವಿಂದಕಃ ।
ಕುಂಭಕಾರಃ ಕಾಂಸ್ಯಕಾರಃ ಷಡೈತೇ ಶಿಲ್ಪಿನಾಂ ವರಾಃ ॥ ೨೦ ॥

ಸೂತ್ರಧಾರಶ್ಚಿತ್ರಕಾರಃ ಸ್ವರ್ಣಕಾರಸ್ತಥೈವ ಚ ।
ಪತಿತಾಸ್ತೇ ಬ್ರಹ್ಮಶಾಪಾದಯಾಜ್ಯಾ ವರ್ಣಸಂಕರಾಃ ॥ ೨೧ ॥

॥ ಶೌನಕ ಉವಾಚ ॥

ಕಥಂ ದೇವೋ ವಿಶ್ವಕರ್ಮಾ ವೀರ್ಯಾಧಾನಂ ಚಕಾರ ಸಃ ।
ಶೂದ್ರಾಯಾಮಧಮಾಯಾಂ ಚ ಕಥಂ ತೇ ಪತಿತಾಸ್ತ್ರಯಃ ॥ ೨೨ ॥

ಕಥಂ ತೇಷು ಬ್ರಹ್ಮಶಾಪೋ ಹ್ಯಭವತ್ಕೇನ ಹೇತುನಾ ।
ಹೇ ಪುರಾಣವಿದಾಂ ಶ್ರೇಷ್ಠ ತನ್ನಃ ಶಂಸಿತುಮರ್ಹಸಿ ॥ ೨೩ ॥

---

೧೯. ದೇವಶಿಲ್ಪಿಯಾದ ವಿಶ್ವಕರ್ಮನು ಶೂದ್ರಸ್ತ್ರೀಯು ಸಂಬಂಧಮಾಡಿದುದರ ಫಲವಾಗಿ ಶಿಲ್ಪಿಚತುರರಾದ ಒಂಭತ್ತು ಮಂದಿ ಪುತ್ರರು ಅವಳಲ್ಲಿ ಜನಿಸಿದರು.

೨೦–೨೧. ಅವರಲ್ಲಿ ಹೂವಾಡಿಗ, ಕಮ್ಮಾರ, ಶಂಖಕಾರ (ಬಳೆಗಾರ), ನೇಯ್ಗೆಗಾರ, ಕುಂಬಾರ, ಕಂಚುಗಾರ ಈ ಆರು ಜನರೂ ಉತ್ತಮ ಶಿಲ್ಪಿಗಳು. ಉಳಿದ ಚಿಪ್ಪಿಗ, (ಬಡಗಿ) ಚಿತ್ರಗಾರ ಮತ್ತು ಸ್ವರ್ಣಕಾರ (ಅಕ್ಕಸಾಲೆ) ಈ ಮೂವರೂ ಬ್ರಾಹ್ಮಣ ಶಾಪದಿಂದ ಪತಿತರಾಗಿ ಯಾಗಾದಿಕರ್ಮಗಳಿಗೆ ಅರ್ಹತೆಯಿಲ್ಲದ ಸಂಕರ ಜಾತಿಗೆ ಸೇರಿದರು.

೨೨–೨೩. ಶೌನಕ :—" ಪುರಾಣ ಬಲ್ಲವರಲ್ಲಿ ಅಗ್ರಗಣ್ಯನಾದ ಸೂತಪುತ್ರನೇ ! ದೇವವಂಶಜನಾದ ವಿಶ್ವಕರ್ಮನು ಅಧಮಳಾದ ಶೂದ್ರಸ್ತ್ರೀಯ ಸಂಗಮಮಾಡಲು ಕಾರಣವೇನು ? ಅವಳ ಗರ್ಭದಲ್ಲಿ ಜನಿಸಿದ ಚಿಪ್ಪಿಗ, ಚಿತ್ರಗಾರ ಮತ್ತು ಅಕ್ಕಸಾಲೆಗಳು ಮಾತ್ರ ಪತಿತರಾಗಲು ಕಾರಣವೇನು ?---ಇವರಿಗೆ ಯಾವ ಕಾರಣದಿಂದ ಬ್ರಾಹ್ಮಣ ಶಾಪಪ್ರಾಪ್ತವಾಯಿತು ?" ಎಂಬುದನ್ನು ಕೃಪೆಯಿಟ್ಟು ನಮಗೆ ವಿವರಿಸು.

॥ ಸೌತಿರುವಾಚ ॥

ಘೃತಾಚೀ ಕಾಮತಃ ಕಾಮಂ ವೇಷಂ ಚಕ್ರೇ ಮನೋಹರಂ ।
ತಾಮಪಶ್ಯದ್ವಿಶ್ವಕರ್ಮಾ ಗಚ್ಛಂತೀಂ ಪುಷ್ಕರೇ ಪಥಿ ॥ ೨೪ ॥

ಆಗಚ್ಛತ್ತದ್ವಿಲೋಕಾಚ್ಚ ಪ್ರಸಾದೋತ್ಫುಲ್ಲಮಾನಸಃ ।
ತಾಂ ಯಯಾಚೇ ಸ ಶೃಂಗಾರಂ ಕಾಮೇನ ಹೃತಚೇತನಃ ॥ ೨೫ ॥

ರತ್ನಾಲಂಕಾರಭೂಷಾಢ್ಯಾಂ ಸರ್ವಾವಯವಕೋಮಲಾಂ ।
ಯಥಾ ಷೋಡಶವರ್ಷೀಯಾಂ ಶಶ್ವತ್ಸುಸ್ಥಿರಯೌವನಾಂ ॥ ೨೬ ॥

ಬೃಹನ್ನಿತಂಬಭಾರಾರ್ತಾಂ ಮುನಿಮಾನಸ ಮೋಹಿನೀಂ ।
ಅತಿವೇಗಕಟಾಕ್ಷೇಣ ಲೋಲಾಂ ಕಾಮಾತಿಪೀಡಿತಾಂ ॥ ೨೭ ॥

---

೨೪. ಸೂತಪುತ್ರ :—ಒಮ್ಮೆ ಘೃತಾಚಿ ಎಂಬ ಅಪ್ಸರಸ್ತ್ರೀಯು ಮನೋಹರವಾದ ವೇಷವನ್ನು ಧರಿಸಿಕೊಂಡು ಪುಷ್ಕರಕ್ಷೇತ್ರದ ಮಾರ್ಗವಾಗಿ ಹೋಗುತ್ತಿದ್ದಳು. ಆಗ ವಿಶ್ವಕರ್ಮನು ಅವಳನ್ನು ನೋಡಿದನು.

೨೫. ನೋಡಿದೊಡನೆಯೇ ಕಾಮಪೀಡಿತನಾಗಿ ಅಲ್ಲಿಗೆ ಬಂದು: ನಸುನಗುತ್ತಲೂ, ಶೃಂಗಾರಚೇಷ್ಟೆಗಳನ್ನು ಮಾಡುತ್ತಲೂ ಅವಳನ್ನು ಬಯಸಿದನು.

೨೬–೨೭. ಘೃತಾಚಿಯಾದರೋ ರತ್ನಾಲಂಕಾರಗಳನ್ನು ಧರಿಸಿದ್ದಾಳೆ. ಅವಳ ಸುಕೋಮಲವಾದ ಅವಯವಗಳು ಮನಮೋಹಕವಾಗಿವೆ. ಹದಿನಾರು ವರ್ಷದ ಸ್ಥಿರಪ್ರಾಯದವಳೂ, ನಿತಂಬಭಾರದಿಂದ ಮಂದಗಮನೆಯೂ ಆಗಿದ್ದಾಳೆ. ಎಂಥ ಸಂಯಮಿಗಳ ಮನಸ್ಸನ್ನೂ ಮೋಹಗೊಳಿಸುವ ರೂಪವತಿಯಾದ ಆಕೆಯು ಅತಿ ಚಂಚಲವಾದ ಕಟಾಕ್ಷವನ್ನು ಎಲ್ಲೆಡೆಯಲ್ಲೂ ಬೀರುತ್ತಿದ್ದಾಳೆ. ವಿಶ್ವಕರ್ಮನನ್ನು ನೋಡಿದ ಆಕೆಯು ಮನಸ್ಸು ಕಾಮತಪ್ತವಾಗಿದೆ.

ತೇಜೋ್ಫ್ರೇಣೀಂ ಕಠಿನಾಂ ದೃಷ್ಟ್ವಾ ವಾಯುನಾಪಹೃತಾಂಶುಕಾಂ ।
ಅತೀವೋಚ್ಚೈಸ್ತನಯುಗಂ ಕಠಿನಂ ವರ್ತುಲಂ ಪರಂ ॥ ೨೮ ॥

ಸುಸ್ಮಿತಂ ಚಾರುವಕ್ತ್ರಂ ಚ ಶರಚ್ಚಂದ್ರವಿನಿಂದಕಂ ।
ಪಕ್ವಬಿಂಬಫಲಾರಕ್ತಸ್ವೋಷ್ಠಾಧರಮನೋಹರಂ ॥ ೨೯ ॥

ಸಿಂಧೂರಬಿಂದುಸಂಯುಕ್ತಂ ಕಸ್ತೂರೀಬಿಂದುಸಂಯುತಂ ।
ಕಪೋಲಮುಜ್ಜ್ವಲಂ ಶಶ್ವನ್ಮಹಾರ್ಹಮಣಿಕುಂಡಲಂ ॥ ೩೦ ॥

ತಾಮುವಾಚ ಪ್ರಿಯಾಂ ಶಾಂತಾಂ ಕಾಮಶಾಸ್ತ್ರವಿಶಾರದಃ ।
ಕಾಮಾಗ್ನಿವರ್ಧನೋದ್ಯೋಗಿವಚನಂ ಶ್ರುತಿಸುಂದರಂ ॥ ೩೧ ॥

೨೮–೩೧. ಆ ಸಮಯಕ್ಕೆ ಸರಿಯಾಗಿ ವಿಶ್ವಕರ್ಮನ ಕಾಮವಿಕಾರಕ್ಕೆ ಉದ್ದೀಪಕವಾಗಿ, ವಾಯುದೇವನು ಘೃತಾಚಿಯ ಕಠಿನವಾದ ನಿತಂಬಸ್ಥಳದಿಂದ ಬಟ್ಟೆಯನ್ನು ಹಾರಿಸಿದನು. ಆಕೆಯ ನಿತಂಬಭಾಗವೂ, ಕಠಿನವಾಗಿಯೂ, ದುಂಡಾಗಿಯೂ ಇರುವ ಸ್ತನಯುಗಗಳೂ ವಿಶ್ವಕರ್ಮನ ದೃಷ್ಟಿಗೆ ಗೋಚರವಾದವು. ಘೃತಾಚಿಯ ಮುಖದಕಡೆ ಕಟಾಕ್ಷವನ್ನು ಬೀರಿದನು. ಶರದೃತುವಿನ ಚಂದ್ರನನ್ನು ಅಣಕಿಸುವ ಆಕೆಯ ಮುಖದಲ್ಲಿ ನಗೆಮಲ್ಲಿಗೆಯು ಅರಳುತ್ತಿತ್ತು. ತೊಂಡೆಹಣಿಗಿಂತಲೂ ಕೆಂಪಾಗಿರುವ ಕೆಳದುಟಿಯು ಅದುರುತ್ತಿತ್ತು. ಹಣೆ ಮತ್ತು ಕಪೋಲಗಳಲ್ಲಿ ಚಂದ್ರ, ಕುಂಕುಮ ಮತ್ತು ಕಸ್ತೂರಿಗಳಿಂದ ರಚಿತವಾದ ಬೊಟ್ಟುಗಳು ಮುಖಕ್ಕೆ ಕಳೆಯೇರಿಸುತ್ತಿದ್ದವು. ಕನ್ನಡಿಯಂತಿರುವ ಕಪೋಲಗಳಲ್ಲಿ, ತೂಗಾಡುತ್ತಿರುವ ಕರ್ಣಕುಂಡಲಗಳು ಪ್ರತಿಫಲಿಸಿದ್ದವು. ಯೋಗಿಗಳಿಗೂ ಮೋಹಕವಾದ ಆಕೆಯ ರೂಪವನ್ನು ನೋಡಿ ಕಾಮಶಾಸ್ತ್ರತತ್ವಜ್ಞನಾದ ವಿಶ್ವಕರ್ಮನು, ಆಕೆಯ ಕಾಮಾಭಿಲಾಷೆಯು ಅಭಿವೃದ್ಧಿಯಾಗುವಂಥ ಕೆಲವು ಮಾತುಗಳನ್ನು ಹೇಳತೊಡಗಿದನು.

॥ ವಿಶ್ವಕರ್ಮೋವಾಚ ॥

ಅಯಿ! ಕ್ವ ಯಾಸಿ ಲಲಿತೇ! ಮಮ ಪ್ರಾಣಾಧಿಕೇ ಪ್ರಿಯೇ ।
ಮಮ ಪ್ರಾಣಾಂಶ್ಚಾಪಹೃತ್ಯ ತಿಷ್ಠ! ಕಾಂತೇ ಕ್ಷಣಂ ಶುಭೇ ॥ ೩೨ ॥

ತವೈವಾನ್ವೇಷಣಂ ಕೃತ್ವಾ ಭ್ರಮಾಮಿ ಜಗತೀತಲಂ ।
ಸ್ವಪ್ರಾಣಾಂಸ್ತ್ಯಕ್ತುಮಿಷ್ಟೋಽಹಂ ತ್ವಾಂ ನ ದೃಷ್ಟ್ವಾ ಹುತಾಶನೇ ॥ ೩೩ ॥

ತ್ವಂ ಕಾಮಲೋಕಂ ಯಾಸೀತಿ ಶ್ರುತ್ವಾ ರಂಭಾಮುಖಾನ್ಮಯಾ ।
ಆಗಚ್ಛಮಹಮೇವಾದ್ಯ ಚಾಸ್ಮಿನ್ವರ್ತ್ಮನ್ಯವಸ್ಥಿತಃ ॥ ೩೪॥

ಅಹೋ ಸರಸ್ವತೀತೀರೇ ಪುಷ್ಪೋದ್ಯಾನೇ ಮನೋಹರೇ ।
ಸುಗಂಧಿಮಂದಶೀತೇನ ವಾಯುನಾ ಸುರಭೀಕೃತೇ ॥ ೩೫ ॥

ಯೆಭ ಕಾಂತೇ ಮಯಾಸಾರ್ಧಂ ಯೂನಾಕಾಂತೇನ ಶೋಭನೇ ।
ವಿದಗ್ಧಾಯಾ ವಿದಗ್ಧೇನ ಸಂಗಮೋ ಗುಣವಾನ್ಭವೇತ್ ॥ ೩೬ ॥

---

೩೨. ವಿಶ್ವಕರ್ಮ:—ನನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಪಾತ್ರಳಾದ ಸುಂದರಿಯೇ! ನೀನೆಲ್ಲಿಗೆ ಹೋಗುವೆ? ನನ್ನ ಪ್ರಾಣಗಳನ್ನೂ ನಿನ್ನೊಡನೆಯೇ ಸೆಳೆದು ಕೊಂಡು ಹೋಗುತ್ತಿರುವೆಯಲ್ಲ? ಎಲೌ, ಕಾಂತೆಯೇ, ನನಗಾಗಿ ನೀನು ಒಂದು ಕ್ಷಣಕಾಲ ನಿಲ್ಲು.

೩೩. ನಿನ್ನನ್ನೇ ಅರಸಿಕೊಂಡು ಪ್ರಪಂಚದಲ್ಲೆಲ್ಲಾ ಅಲೆದಾಡುತ್ತಿದ್ದೆ. ನಿನ್ನನ್ನು ಕಾಣದಿದ್ದರೆ ನನ್ನ ಪ್ರಾಣಗಳನ್ನು ಅಗ್ನಿದೇವನಿಗೆ ಅರ್ಪಿಸಲು ಅಣಿ ಯಾಗುತ್ತಿದ್ದೆ.

೩೪. ನೀನು ಮನ್ಮಥನ ಲೋಕಕ್ಕೆ ಹೋಗುವಿ ಎಂದು ರಂಭೆಯ ಬಾಯಿ ನಿಂದ ಕೇಳಿ ನಿನ್ನ ನಿರೀಕ್ಷಣೆಗಾಗಿ ಸ್ವತಃ ನಾನೇ ಈ ಮಾರ್ಗದಲ್ಲಿ ಬಂದು ಕುಳಿತಿದ್ದೆನು.

೩೫–೩೬. ಇಲ್ಲಿಯೇ ಸರಸ್ವತೀ ನದಿಯ ದಡದಲ್ಲಿ ಸುಂದರವಾದ ಪುಷ್ಪೋ ದ್ಯಾನ ವೊಂದಿದೆ. ಅಲ್ಲಿ ಶೀತಲವಾಯುವು ಘಮಘಮ ವಾಸನೆಯನ್ನು ಬೀರುತ್ತಾ ನಿಧಾನವಾಗಿ ಬೀಸುತ್ತಿದೆ. ಅಲ್ಲಿ ನವಯೌವನವುಳ್ಳ ನಾವಿಬ್ಬರೂ ಏಕೆ ಕ್ರೀಡಿಸ ಬಾರದು? ಕಾಮಕಲೆಯಲ್ಲಿ ನುರಿತವರು ತಮಗೆ ಉಚಿತವಾದವರೊಡನೆ ಸೇರುವುದೊಂದು ಭಾಗ್ಯವಲ್ಲವೇ?

ಸ್ಥಿರಯೌವನಸಂಯುಕ್ತಾ ತ್ವಮೇವ ಚಿರಜೀವಿನೀ ।
ಕಾಮುಕೀ ಕೋಮಲಾಂಗೀ ಚ ಸುಂದರೀಷು ಚ ಸುಂದರೀ　　॥ ೩೭ ॥

ಮೃತ್ಯುಂಜಯವರೇಣೈವ ಮೃತ್ಯುಕನ್ಯಾ ಜಿತಾ ಮಯಾ ।
ಕುಬೇರ ಭವನಂ ಗತ್ವಾ ಧನಂ ಲಬ್ಧಂ ಕುಬೇರತಃ　　॥ ೩೮ ॥

ರತ್ನಮಾಲಾ ಚ ವರುಣಾತ್ ವಾಯೋಃ ಸ್ತ್ರೀರತ್ನಭೂಷಣಂ ।
ವಹ್ನಿಶುದ್ಧಂ ವಸ್ತ್ರಯುಗಂ ವಹ್ನೇಃ ಪ್ರಾಪ್ತೋ ಮಹೌಜಸಃ　　॥ ೩೯ ॥

ಕಾಮಶಾಸ್ತ್ರಂ ಕಾಮದೇವಾದ್ಯೋಽಷಿದ್ರಂಜನಕಾರಣಂ ।
ಶೃಂಗಾರಶಿಲ್ಪಂ ಯತ್ಕಿಂಚಿಲ್ಲಬ್ಧಂ ಚಂದ್ರಾಚ್ಚ ದುರ್ಲಭಂ　　॥ ೪೦ ॥

೩೭. ಆಯುಷ್ಮತಿಯಾದ ನೀನಾದರೋ ಅಚಲವಾದ ಯೌವನ ಸಂಪತ್ತುಳ್ಳವಳು. ಕುಸುಮ ಸುಕುಮಾರವಾದ ನಿನ್ನ ಅವಯವಗಳು ನಿನ್ನ ಸೌಂದರ್ಯವನ್ನು ಪೋಷಿಸುತ್ತದೆ. ಕಾಮುಕಿಯಾದ ನೀನು ನನ್ನ ಅಭಿಲಾಷೆಗಳನ್ನು ಪೂರ್ತಿಗೊಳಿಸದಿದ್ದರೆ ಫಲವೇನು.

೩೮–೪೦. ನಾನೂ ಕೂಡ ಮೃತ್ಯುಂಜಯನ ವರಪ್ರಸಾದದಿಂದ ಮೃತ್ಯುಕನ್ಯೆಯನ್ನು ಜಯಿಸಿರುವೆನು. ಕುಬೇರನ ಮನೆಗೆ ಹೋಗಿ ಅವನಿಂದ ಬೇಕಾದಷ್ಟು ಧನವನ್ನು ಪಡೆದಿರುವೆನು. ವರುಣನಿಂದೊಂದು ರತ್ನಮಾಲೆಯನ್ನೂ, ವಾಯುವಿನಿಂದ, ಉತ್ತಮ ಸ್ತ್ರೀಯರಿಗೆ ಉಚಿತವಾದ ಒಡವೆಗಳನ್ನೂ, ಮಹಾತೇಜಸ್ವಿಯಾದ ಅಗ್ನಿದೇವನಿಂದ ಪರಿಶುದ್ಧವಾದ ಎರಡು ವಸ್ತ್ರಗಳನ್ನೂ ಹೊಂದಿರುವೆನು. ಅಲ್ಲದೆ ವಿದಗ್ಧೆಯಾದ ಹೆಂಗಸಿನ ತೃಪ್ತಿಗೆ ಕಾರಣವಾದ ಕಾಮಶಾಸ್ತ್ರವನ್ನೂ ಕಾಮದೇವನಿಂದ ಅರಿತಿರುವೆನು. ಇತರರು ತಿಳಿಯಲಾರದ ಕೆಲವು ಶೃಂಗಾರಕಲೆಗಳನ್ನೂ ಚಂದ್ರನಿಂದ ಪಡೆದು ನಿನಗೆ ಪ್ರಿಯವಾಗಲು ಯೋಗ್ಯನಾಗಿರುವೆನು.

ರತ್ನಮಾಲಾಂ ವಸ್ತ್ರಯುಗ್ಮಂ ಸರ್ವಾಣ್ಯಾಭರಣಾನಿ ಚ ।
ತುಭ್ಯಂ ದಾತುಂ ಹೃದಿಕೃತಂ ಪ್ರಾಪ್ತಂ ತತ್ಕ್ಷಣಮೇವ ಚ ॥ ೪೧ ॥

ಗೃಹೇ ತಾನಿ ಚ ಸಂಸ್ಥಾಪ್ಯ ಚಾಗತೋಽನ್ವೇಷಣೇ ಭವೇ ।
ವಿರಾಮೇ ಸುಖಸಂಭೋಗೇ ತುಭ್ಯಂ ದಾಸ್ಯಾಮಿ ಸಾಂಪ್ರತಂ ॥ ೪೨ ॥

ಕಾಮುಕಸ್ಯ ವಚಃ ಶ್ರುತ್ವಾ ಘೃತಾಚೀ ಸಸ್ಮಿತಾ ಮುನೇ ।
ದದೌ ಪ್ರತ್ಯುತ್ತರಂ ಶೀಘ್ರಂ ನೀತಿಯುಕ್ತಂ ಮನೋಹರಂ ॥ ೪೩ ॥

॥ ಘೃತಾಚ್ಯುವಾಚ ॥

ತ್ವಯಾ ಯದುಕ್ತಂ ಭದ್ರಂ ತತ್ಸ್ವೀಕರೋಮ್ಯಧುನಾ ಪರಂ ।
ಕಿಂ ತು ಸಾಮಯಿಕಂ ವಾಕ್ಯಂ ಬ್ರವೀಷ್ಯಾಮಿ ಸ್ಮರಾತುರ ॥ ೪೪ ॥

---

೪೧. ರತ್ನಮಾಲೆಯನ್ನೂ, ದಿವ್ಯವಸ್ತ್ರಗಳನ್ನೂ, ಮನೋಹರವಾದ ಆಭರಣಗಳನ್ನೂ ನಿನಗೆ ಕೊಡಬೇಕೆಂದು ಮನಸ್ಸಿನಲ್ಲಿ ಯೋಚಿಸಿದ್ದೆ. ಕೂಡಲೇ ಅವೆಲ್ಲವೂ ಸಿದ್ಧವಾದವು.

೪೨. ಅಷ್ಟರಲ್ಲೇ ನಿನಗಾಗಿ ಅಲೆದಾಡುತ್ತಾ ಮನೆಯಲ್ಲೇ ಅವುಗಳನ್ನು ಮರೆತು ಬಂದೆ. ಈಗ ನೀನು ಸಿಕ್ಕಿರುವೆ. ನಮ್ಮ ಸುಖಸಂಭೋಗಗಳು ಮುಗಿದ ನಂತರ ನಾನು ಆ ಒಡವೆಗಳೆಲ್ಲವನ್ನೂ ನಿನಗೆ ತಂದುಕೊಡುವೆನು.

೪೩. ಸೂತಪುತ್ರ :—ಎಲೈ ಶೌನಕ ಮಹರ್ಷಿಯೇ! ಕಾಮುಕನಾದ ವಿಶ್ವಕರ್ಮನ ಮಾತುಗಳನ್ನು ಕೇಳಿ ಘೃತಾಚಿಯು ನಸುನಗುತ್ತಾ, ನೀತಿಬೋಧಕವಾದ ಕೆಲವು ಮನೋಹರ ಮಾತುಗಳನ್ನಾಡಿದಳು.

೪೪. ಘೃತಾಚಿ :—ಎಲೈ, ವಿಶ್ವಕರ್ಮನೇ! ನೀನು ಹೇಳಿದ ಹಿತಕರವಾದ ಮಾತನ್ನು ನಾನು ಅಂಗೀಕರಿಸುವೆನು. ಆದರೆ ಈಗ ನಾನು ಹೇಳುವ ಅವಧಿಯ ವಾಕ್ಯವನ್ನು ಅವಧರಿಸು. ಸುಮ್ಮನೆ ನಿನ್ನ ಕಾಮಾತುರತೆಯನ್ನು ಪ್ರಕಟಿಸಿ ಪ್ರಯೋಜನವಿಲ್ಲ.

ಕಾಮದೇವಾಲಯಂ ಯಾಮಿ ಕೃತವೇಷಾ ಚ ತತ್ಕೃತೇ ।
ಯದ್ದಿನೇ ಯತ್ಕೃತೇ ಯಾಮೋ ವಯಂ ತೇಷಾಂ ಚ ಯೋಷಿತಃ ॥ ೪೫ ॥

ಅದ್ಯಾಹಂ ಕಾಮಪತ್ನೀ ಚ ಗುರುಪತ್ನೀ ತವಾಧುನಾ ।
ತ್ವಯೋಕ್ತಮಧುನೇದಂ ಚ ಪಠಿತಂ ಕಾಮದೇವತಃ ॥ ೪೬ ॥

ವಿದ್ಯಾದಾತಾ ಮಂತ್ರದಾತಾ ಗುರುರ್ಲಕ್ಷಗುಣೈಃ ಪಿತುಃ ।
ಮಾತುಃ ಸಹಸ್ರಗುಣವಾನ್ನಾಸ್ತ್ಯನ್ಯಸ್ತತ್ಸಮೋ ಗುರುಃ ॥ ೪೭ ॥

ಗುರೋಃ ಶತಗುಣೈಃ ಪೂಜ್ಯಾ ಗುರುಪತ್ನೀ ಶ್ರುತೌ ಶ್ರುತಾ ।
ಪಿತುಃ ಶತಗುಣಂ ಪೂಜ್ಯಾ ಯಥಾ ಮಾತಾ ವಿಚಕ್ಷಣ ॥ ೪೮ ॥

---

೪೫. ನಾವೇನೋ ಜಾತಿಯಲ್ಲಿ ವೇಶ್ಯೆಯರು. ಆದರೂ ಇಂದು ನಾನು ಮನ್ಮಥನಿಗಾಗಿ ಅಲಂಕರಿಸಿಕೊಂಡು ಅವನಿರುವೆಡೆಗೆ ಹೋಗುತ್ತಿದ್ದೇನೆ. ಎಂದು, ಯಾರಿಗಾಗಿ ನಾವು ಅಭಿಸರಣಮಾಡುವೆವೋ, ಅಂದು ಅವರಿಗೆ ಮಾತ್ರ ಮಾಸ ಲಾಗಿರುವೆವು. ಅನ್ಯರು ಅಂದು ನಮ್ಮನ್ನು ಬಯಸಕೂಡದು.

೪೬. ನಾನಿಂದು ನಿನ್ನ ಗುರುವಾದ ಕಾಮದೇವನ ಪತ್ನಿಯಾದುದರಿಂದ, ನಿನಗೆ ಗುರುಪತ್ನಿಯಾದೆನು. ಕಾಮದೇವನು ಸರ್ವಸಾಮಾನ್ಯವಾದ ನೀತಿವಾಕ್ಯ ವೊಂದನ್ನು ಹೇಳಿರುವನು. ಅದೇನೆಂದರೆ–

೪೭. ವಿದ್ಯೋಪದೇಶಕನೂ, ಮತ್ತು ಮಂತ್ರೋಪದೇಶಕನೂ, ಮನುಜನ ಹೆತ್ತ ತಂದೆತಾಯಿಯರಿಗಿಂತ ಕ್ರಮವಾಗಿ ಲಕ್ಷ ಮತ್ತು ಸಾವಿರದಷ್ಟು ಶ್ರೇಷ್ಠನೆನಿಸಿ ಕೊಳ್ಳುವನು. ಅಷ್ಟೇಕೆ, ಅವನಿಗೆ ಸದೃಶವಾದ ಬೇರೊಬ್ಬ ಗುರುವಿಲ್ಲ.

೪೮. ಎಲೈ, ಕುಶಲಿಯೇ! ತಂದೆಗಿಂತ ತಾಯಿಯು ನೂರರಷ್ಟು ಮಾನ್ಯ ಳಾಗಿರುವಂತೆ, ಗುರುವಿಗಿಂತ ಗುರುಪತ್ನಿಯು ನೂರರಷ್ಟು ಮಾನ್ಯಳು. (ಆದ್ದರಿಂದಲೇ ನಮಸ್ಕಾರಮಾಡುವಾಗಲೂ 'ಮಾತೃಭ್ಯೋ ನಮಃ, ಪಿತೃಭ್ಯೋ ನಮಃ, ಎಂಬ ಕ್ರಮವಿರುವುದು.')

ಮಾತ್ರಾ ಸಮಾಗಮೇ ಸೂನೋರ್ಯೋವಾನ್ದೋಷಃ ಶ್ರುತೌ ಶ್ರುತಃ ।
ತತೋ ಲಕ್ಷಗುಣೋ ದೋಷೋ ಗುರುಪತ್ನೀಸಮಾಗಮೇ ॥ ೪೯ ॥

ಮಾತರಿತ್ಯೇವ ಶಬ್ದೇನ ಯಾಂ ಚ ಸಂಭಾಷತೇ ನರಃ ।
ಸಾ ಮಾತೃತುಲ್ಯಾ ಸತ್ಯೇನ ಧರ್ಮಃ ಸಾಕ್ಷೀ ಸತಾಮಪಿ ॥ ೫೦ ॥

ತಯಾ ಹಿ ಸಂಗತೋ ಯಸ್ಸ್ಯಾತ್ ಕಾಲಸೂತ್ರಂ ಪ್ರಯಾತಿ ಸಃ ।
ತತ್ರ ಘೋರೇ ವಸತ್ಯೇವ ಯಾವಚ್ಚಂದ್ರದಿವಾಕರೌ ॥ ೫೧ ॥

ಮಾತ್ರಾ ಸಹ ಸಮಾಯೋಗೇ ತತೋ ದೋಷಶ್ಚತುರ್ಗುಣಃ ।
ಸಾರ್ಧಂ ಚ ಗುರುಪತ್ನ್ಯಾ ಚ ತಲ್ಲಕ್ಷಗುಣ ಏವ ಚ ॥ ೫೨ ॥

---

೪೯. ಮಗನಾದವನು ತಾಯಿಯ ಸಮಾಗಮ ಮಾಡುವುದರಿಂದ ಪತಿತನಾಗುವನೆಂಬುದು ಸರ್ವರಿಗೂ ತಿಳಿದಿದೆ. ಅವನಿಗಿಂತಲೂ ಗುರುಪತ್ನಿಯೊಡನೆ ಸಂಗಮಿಸಿದವನು ಲಕ್ಷದಷ್ಟು ಪಾತಕಿಯಾಗುವನು. ಇದು ವೇದೋಕ್ತವಾಗಿದೆ.

೫೦. ಮನುಜನು ಯಾವಾಕೆಯನ್ನು 'ತಾಯಿ' ಎಂದು ಸಂಬೋಧಿಸುವನೋ, ಆಕೆಯು ತಾಯಿಗೆ ಸಮಾನಳಾಗುವಳು. ಅವನು ಆಕೆಗೆ ಪುತ್ರಸದೃಶನಾಗುವನು. ಇದು ಸತ್ಪುರುಷರು ಆಚರಿಸುತ್ತಿರುವ ಧರ್ಮವು.

೫೧. ಆದ್ದರಿಂದ ತಾಯಿಗೆ ಸಮಾನಳೊಡನೆ ಸಂಗಮಿಸಿದವನು ಚಂದ್ರಸೂರ್ಯರಿರುವವರೆಗೂ ಘೋರವಾದ ಕಾಲಸೂತ್ರವೆಂಬ ನರಕದಲ್ಲಿ ಮುಳುಗಿ ದಡವನ್ನು ಕಾಣದೆ ತೊಳಲುವನು.

೫೨. ಹೀಗಿರುವಾಗ ಹೆತ್ತತಾಯಿಯೊಡನೆ ಸಂಗಮಿಸಿದವನ ದೋಷವು ಅದರ ನಾಲ್ಕರಷ್ಟು ಅಧಿಕವೆಂಬುದೂ, ಗುರುಪತ್ನಿಯೊಡನೆ ಸಂಗಮಿಸಿದವನ ದೋಷವು ಲಕ್ಷದಷ್ಟು ಅಧಿಕವೆಂಬುದೂ ಸ್ವತಃ ಸಿದ್ಧವಾಗಿದೆ.

ಕುಂಭೀಪಾಕೇ ಪತೇತ್ಸೋಽಪಿ ಯಾವದ್ವೈ ಬ್ರಹ್ಮಣೋ ವಯಃ ।
ಪ್ರಾಯಶ್ಚಿತ್ತಂ ಪಾಪಿನಶ್ಚ ತಸ್ಯ ನೈವ ಶ್ರುತೌ ಶ್ರುತಂ ॥ ೫೩ ॥

ಚಕ್ರಾಕಾರಂ ಕುಲಾಲಸ್ಯ ತೀಕ್ಷ್ಣಧಾರಂ ಚ ಖಡ್ಗವತ್ ।
ವಸಾಮೂತ್ರಪುರೀಷೈಶ್ಚ ಪರಿಪೂರ್ಣಂ ಸುದುಸ್ತರಂ ॥ ೫೪ ॥

ಶೂಲವತ್ಕೃಮಿಸಂಯುಕ್ತಂ ತಪ್ತಮಗ್ನಿಸಮುದ್ರವತ್ ।
ಪಾಪಿನಾಂ ತದ್ವಿಹಾರಂ ಚ ಕುಂಭೀಪಾಕಂ ಪ್ರಕೀರ್ತಿತಂ ॥ ೫೫ ॥

ಯಾವಾನ್ದೋಷೋ ಹಿ ಪುಂಸಾಂ ಚ ಗುರುಪತ್ನೀಸಮಾಗಮೇ ।
ತಾವಾಂಶ್ಚ ಗುರುಪತ್ನ್ಯಾಂ ವೈ ತತ್ರ ಚೇತ್ಕಾಮುಕೀ ಯದಿ ॥ ೫೬ ॥

---

೫೩. ಆ ಪಾಪಿಯು, ಬ್ರಹ್ಮನ ಆಯುಃಪರಮಿತಿ ಇರುವಷ್ಟು ದೀರ್ಘಕಾಲ ಕುಂಭೀಪಾಕನರಕದಲ್ಲಿ ನರಳುವನು. ಆ ಪಾಪಿಗೆ ಪ್ರಾಯಶ್ಚಿತ್ತವು ವೇದವಿಹಿತ ವಾಗಿಲ್ಲ. ಅಂದರೆ ಅವನು ಪ್ರಾಯಶ್ಚಿತ್ತದಿಂದ ಶುದ್ಧಿಹೊಂದಲಾರನು.

೫೪–೫೫. ಕುಂಭೀಪಾಕನರಕವು ಕುಂಬಾರನ ಚಕ್ರದಂತೆ ವರ್ತುಲಾಕಾರ ವಾಗಿಯೂ, ಕತ್ತಿಯ ಅಲುಗಿನಂತೆ ಹರಿತವಾಗಿಯೂ, ಕೆಟ್ಟರಕ್ತ ಮತ್ತು ಮಲ, ಮೂತ್ರಗಳಿಂದ ತುಂಬಿ ದಾಟಲಸಾಧ್ಯವಾಗಿಯೂ ಇದೆ. ಅಲ್ಲಿ ಕ್ರಿಮಿಗಳು ಮುಳ್ಳಿ ನಂತೆ ಶರೀರವನ್ನು ಚುಚ್ಚಿ ತಿನ್ನುವುವು. ಅಗ್ನಿತಪ್ತವಾದ ಸಮುದ್ರದಂತೆ ಕಾಲಿಟ್ಟರೆ ಸುಡುವುದು. ಗುರುಪತ್ನಿ ಸಂಗಮಮಾಡಿದ ಪಾಪಿಗಳಿಗೆ ಸತ್ತಮೇಲೆ ಆ ನರಕವೇ ವಿಹಾರಸ್ಥಾನ.

೫೬. ಗುರುಪತ್ನಿಯೊಡನೆ ಸಂಗಮಿಸಿದ ಪುರುಷನಿಗೆ ಎಷ್ಟು ದೋಷವುಂಟೋ ಅಷ್ಟೇ ದೋಷವು, ಪರಪುರುಷನೊಡನೆ ಸೇರಲು ಬಯಸುವ ಗುರುಪತ್ನಿಗೂ ಸಿದ್ಧವಾಗಿಯೇ ಇರುವುದು.

ಅದ್ಯ ಯಾಸ್ಯಾಮಿ ಕಾಮಸ್ಯ ಮಂದಿರಂ ತಸ್ಯ ಕಾಮಿನೀ ।
ವೇಷಂ ಕೃತ್ವಾ ಗಮಿಷ್ಯಾಮಿ ತ್ವತ್ಕೃತೇಽಹಂ ದಿನಾಂತರೇ ॥ ೫೭ ॥

ಘೃತಾಚೀವಚನಂ ಶ್ರುತ್ವಾ ವಿಶ್ವಕರ್ಮಾ ರುರೋಷ ತಾಂ ।
ಶಶಾಪ ಶೂದ್ರಯೋನಿಂ ಚ ವ್ರಜೇತಿ ಜಗತೀತಲೇ ॥ ೫೮ ॥

ಘೃತಾಚೀ ತದ್ವಚಃ ಶ್ರುತ್ವಾ ತಂ ಶಶಾಪ ಸುದಾರುಣಂ ।
ಲಭ ಜನ್ಮ ಭವೇ ತ್ವಂ ಚ ಸ್ವರ್ಗಭ್ರಷ್ಟೋ ಭವೇತಿ ಚ ॥ ೫೯ ॥

ಘೃತಾಚೀ ಕಾರುಮುಕ್ತ್ವಾ ಚ ಸಾಗಚ್ಛತ್ಕಾಮಮಂದಿರಂ ।
ಕಾಮೇನ ಸುರತಂ ಕೃತ್ವಾ ಕಥಯಾಮಾಸ ತಾಂ ಕಥಾಂ ॥ ೬೦ ॥

---

೫೭. ಇಂದು, ಮನ್ಮಥನನ್ನು ಕಾಮಿಸಿ ಅವನಮನೆಗೆ ಹೋಗುತ್ತಿದ್ದೇನೆ. ಇನ್ನೊಂದು ದಿವಸ ನಿನಗಾಗಿ ನಾನು *ಅಭಿಸಾರಿಕೆಯ ವೇಷಧಾರಿಣಿಯಾಗಿ ಬರಲು ಸಿದ್ಧನಿದ್ದೇನೆ.

೫೮. ಘೃತಾಚಿಯಾಡಿದ ಮಾತುಗಳು ವಿಶ್ವಕರ್ಮನಿಗೆ ಕ್ರೋಧಜನಕವಾಗಿದ್ದುವು. ಕೂಡಲೇ ಅವನು ' ನೀನು ಭೂಮಿಯಲ್ಲಿ ಶೂದ್ರಳಾಗಿ ಜನಿಸು ' ಎಂದು ಆಕೆಗೆ ಶಾಪವಿತ್ತನು.

೫೯. ಆ ಕ್ರೂರಶಾಪವನ್ನು ಕೇಳಿದ ಘೃತಾಚಿಯು ' ಸ್ವರ್ಗದಿಂದ ನೀನೂ ಪತಿತನಾಗಿ ಭೂಲೋಕದಲ್ಲಿ ಮನುಜನಾಗಿ ಹುಟ್ಟು ' ಎಂದು ಪ್ರತಿಶಾಪವಿತ್ತಳು.

೬೦. ದೇವಶಿಲ್ಪಿಯಾದ ವಿಶ್ವಕರ್ಮನೊಡನೆ ಈ ರೀತಿಯಾಗಿ ವಾಗ್ವಾದವನ್ನು ಮುಗಿಸಿಕೊಂಡು ಆಕೆಯು ಮನ್ಮಥನ ಮಂದಿರಕ್ಕೆ ಹೋದಳು. ಅಲ್ಲಿ ಆತನೊಡನೆ ರತಿಕ್ರೀಡೆಗಳಾಡಿ, ಅವನಿಗೆ ನಡೆದ ಸಮಾಚಾರವೆಲ್ಲವನ್ನೂ ತಿಳಿಸಿದಳು.

*ಅಭಿಸಾರಿಕಾ :—' ಕಾಂತಾರ್ಥಿನೀ ತು ಯಾ ಯಾತಿ ಸಂಕೇತಂ ಸಾಭಿಸಾರಿಕಾ ' (ಪತಿಯನ್ನು ಬಯಸಿ ಅವನಿಗಾಗಿ ಸೂಚಿತವಾದ ಸ್ಥಳಕ್ಕೆ ಹೋಗುವವಳು.)

ಸಾ ಭಾರತೇ ಚ ಕಾಮೋಕ್ತ್ಯಾ ಗೋಪಸ್ಯ ಮದನಸ್ಯ ಚ ।
ಪತ್ನ್ಯಾಂ ಪ್ರಯೋಗೇ ನಗರೇ ಲೇಭೇ ಜನ್ಮ ಚ ಶೌನಕ ॥ ೬೧ ॥

ಜಾತಿಸ್ಮರಾ ತತ್ರ ಸೂತಾ ಬಭೂವ ಚ ತಪಸ್ವಿನೀ ।
ವರಂ ನ ವವ್ರೇ ಧರ್ಮಿಷ್ಠಾ ತಪಸ್ಯಾಯಾಂ ಮನೋದಧೌ ॥ ೬೨ ॥

ತಪಶ್ಚಚಾರ ತಪಸಾ ತಪ್ತಕಾಂಚನಸನ್ನಿಭಾ ।
ದಿವ್ಯಂ ಚ ಶತವರ್ಷಂ ಸಾ ಗಂಗಾತೀರೇ ಮನೋರಮೇ ॥ ೬೩ ॥

ವೀರ್ಯೇಣ ಸುರಕಾರೋಶ್ಚ ನವ ಪುತ್ರಾನ್ಪ್ರಸೂಯ ಸಾ ।
ಪುನಃ ಸ್ವರ್ಲೋಕಂ ಗತ್ವಾ ಚ ಸಾಘೃತಾಚೀ ಬಭೂವ ಹ ॥ ೬೪ ॥

---

೬೧. ಅನಂತರ ಮನ್ಮಥನ ಮಾತಿನಂತೆ ಆಕೆಯು ಭರತಖಂಡದ ಪ್ರಯಾಗ ಕ್ಷೇತ್ರದಲ್ಲಿ ಮದನನೆಂಬ ಗೊಲ್ಲನ ಪತ್ನಿಯಲ್ಲಿ ಜನಿಸಿದಳು.

೬೨. ಶೂದ್ರಯೋನಿಯಲ್ಲಿ ಹುಟ್ಟಿದರೂ ಆಕೆಗೆ ತನ್ನ ಹಿಂದಿನ ಜಾತಿ ಸ್ಮರಣೆ ಯಿತ್ತು. ಆದ್ದರಿಂದ ಶೂದ್ರಜಾತಿಯಲ್ಲಿ ವಿವಾಹವಾಗಲಿಷ್ಟವಿಲ್ಲದೆ ತಪಸ್ಸಿನಲ್ಲಿ ಮನಸ್ಸಿಟ್ಟು ಧರ್ಮಿಷ್ಠಳೆನಿಸಿಕೊಂಡಿದ್ದಳು.

೬೩. ತಪಸ್ಸಿನಿಂದ ಪುಟಕ್ಕೆ ಹಾಕಿದ ಚಿನ್ನದಂತೆ ಪವಿತ್ರಳಾದ ಆಕೆಯು ಮನೋಹರವಾದ ಗಂಗಾನದಿಯ ದಡದಲ್ಲಿ ಒಂದುನೂರು ವರ್ಷ ತಪಸ್ಸನ್ನಾಚರಿಸಿದಳು.

೬೪. ಕಡೆಗೆ ಅಲ್ಲಿಯೇ ಜನ್ಮವೆತ್ತಿದ್ದ ವಿಶ್ವಕರ್ಮನನ್ನು ವರಿಸಿ, ಅವನ ಸಂಗಮದಿಂದ ಒಂಭತ್ತು ಮಕ್ಕಳನ್ನು ಪಡೆದು, ಆಕೆಯು ಪುನಃ ಸ್ವರ್ಗಲೋಕಕ್ಕೆ ಹೋಗಿ ಘೃತಾಚಿಯಾದಳು.

॥ ಶೌನಕ ಉವಾಚ ॥

ಕಥಂ ವೀರ್ಯಂ ಸಾ ದಧಾರ ಸುರಕಾರೋಸ್ತಪಸ್ವಿನೀ ।
ಪುತ್ರಾನ್ನವ ಪ್ರಸೂತಾ ಚ ಕುತ್ರ ವಾ ಕತಿ ವಾಸರಾನ್ ॥ ೬೫ ॥

॥ ಸೌತಿರುವಾಚ ॥

ವಿಶ್ವಕರ್ಮಾ ತು ತಚ್ಛಾಪಂ ಸಮಾಕರ್ಣ್ಯ ರುಷಾನ್ವಿತಃ ।
ಜಗಾಮ ಬ್ರಹ್ಮಣಃ ಸ್ಥಾನಂ ಶೋಕೇನ ಹೃತಚೇತನಃ ॥ ೬೬ ॥

ನತ್ವಾ ಸ್ತುತ್ವಾ ಚ ಬ್ರಹ್ಮಾಣಂ ಕಥಯಾಮಾಸ ತಾಂ ಕಥಾಂ ।
ಲಲಾಭ ಜನ್ಮ ಬ್ರಾಹ್ಮಣ್ಯಾಂ ಪೃಥಿವ್ಯಾಂ ಚಾಜ್ಞಯಾ ವಿಧೇಃ ॥ ೬೭ ॥

ಸ ಏವ ಬ್ರಾಹ್ಮಣೋ ಭೂತ್ವಾ ಭುವಿ ಕಾರುರ್ಬಭೂವ ಹ ।
ನೃಪಾಣಾಂ ಚ ಗೃಹಸ್ಥಾನಾಂ ನಾನಾಶಿಲ್ಪಂ ಚಕಾರ ಹ ॥ ೬೮ ॥

---

೬೫. ಶೌನಕ :—ಗೋಪಕನ್ಯೆಯಾಗಿ ತಪಸ್ವಿನಿಯಾಗಿದ್ದ ಘೃತಾಚಿಯು ದೇವಶಿಲ್ಪಿಯಾದ ವಿಶ್ವಕರ್ಮನ ವೀರ್ಯಧಾರಣೆ ಮಾಡಿದುದು ಹೇಗೆ? ಎಲ್ಲಿ ಒಂಭತ್ತು ಜನ ಮಕ್ಕಳನ್ನು ಹಡೆದಳು. ಎಷ್ಟು ದಿವಸ ಭೂಲೋಕದಲ್ಲಿ ಜೀವಿಸಿ ಕೊಂಡಿದ್ದಳು.

೬೬. ಸೌತಿ :—ಘೃತಾಚಿಯು ತನಗಿತ್ತ ಶಾಪವನ್ನು ವಿಶ್ವಕರ್ಮನು ಕೇಳಿ ಕೋಪಗೊಂಡು ಏನೂ ತೋಚದೆ ಬ್ರಹ್ಮನಿರುವೆಡೆಗೆ ಬಂದು ತನ್ನ ದುಃಖವನ್ನು ಹೇಳಿಕೊಂಡನು.

೬೭. ಬ್ರಹ್ಮನಿಗೆ ವಂದಿಸಿ, ಸ್ತುತಿಸಿ, ತನ್ನ ಶಾಪವೃತ್ತಾಂತವನ್ನು ತಿಳುಹಿ ಅವನ ಅಪ್ಪಣೆಯನ್ನು ಪಡೆದು ಪೃಥಿವಿಯಲ್ಲಿ ಬ್ರಾಹ್ಮಣಪುತ್ರನಾಗಿ ಜನಿಸಿದನು.

೬೮–೬೯. ಆ ಬ್ರಾಹ್ಮಣಪುತ್ರನೇ, ಮುಂದೆ ಪ್ರಸಿದ್ಧನಾದ ಶಿಲ್ಪಿಯಾಗಿ ರಾಜರ ಮತ್ತು ಇತರ ಗೃಹಸ್ಥರ ಎಷ್ಟೋ ಶಿಲ್ಪ ಕೆಲಸಗಳನ್ನು ಮಾಡಿಕೊಂಡಿ

ಶಿಲ್ಪಂ ಚ ಕಾರಯಾಮಾಸ ಸರ್ವೇಭ್ಯಃ ಸರ್ವತಃ ಸದಾ ।
ವಿಚಿತ್ರಂ ವಿವಿಧಂ ಶಿಲ್ಪಮಾಶ್ಚರ್ಯಂ ಸುಮನೋಹರಂ ॥ ೧೯ ॥

ಏಕದಾ ತು ಪ್ರಯಾಗೇ ಚ ಶಿಲ್ಪಂ ಕೃತ್ವಾ ನೃಪಸ್ಯ ಚ ।
ಸ್ನಾತುಂ ಜಗಾಮ ಗಂಗಾಂ ಸ ಚಾಪಶ್ಯತ್ತತ್ರ ಕಾಮಿನೀಂ ॥ ೨೦ ॥

ಘೃತಾಚೀಂ ನವರೂಪಾಂ ಚ ಯುವತಿಂ ತಾಂ ತಪಸ್ವಿನೀಂ ।
ಜಾತಿಸ್ಮರಾಂ ತಾಂ ಬುಬುಧೇ ಸ ಚ ಜಾತಿಸ್ಮರೋ ದ್ವಿಜ ॥ ೨೧ ॥

ದೃಷ್ಟ್ವಾ ಸಕಾಮಃ ಸಹಸಾ ಬಭೂವ ಹೃತಚೇತನಃ ।
ಉವಾಚ ಮಧುರಂ ಶಾಂತಃ ಶಾಂತಾಂ ತಾಂ ಚ ತಪಸ್ವಿನೀಂ ॥ ೨೨ ॥

॥ ಬ್ರಾಹ್ಮಣ ಉವಾಚ ॥

ಅಹೋಧುನಾ ತ್ವಮತ್ರೈವ ಘೃತಾಚಿ ಸುಮನೋಹರೇ ।
ಮಾ ಮಾಂ ಸ್ಮರಸಿ ರಂಭೋರು ! ವಿಶ್ವಕರ್ಮಾಹಮೇವ ಚ ॥ ೨೩ ॥

ದ್ದನು. ಅಲ್ಲದೆ ಅನೇಕರಿಗೆ ತನ್ನ ದಿವ್ಯಕಲೆಯನ್ನು ಬೋಧಿಸಿ. ಆಶ್ಚರ್ಯಕರವಾದ ಶಿಲ್ಪವನ್ನು ಮಾಡಿಸುತ್ತಿದ್ದನು. ವಿವಿಧವಾದ ಅವನ ಶಿಲ್ಪಕಲೆಯು ಎಲ್ಲರನ್ನೂ ಸಂತೋಷಗೊಳಿಸುತ್ತಿತ್ತು.

೨೦-೨೧. ಹೀಗಿರಲು ಒಮ್ಮೆ ಅವನು ಪ್ರಯಾಗ ಕ್ಷೇತ್ರದಲ್ಲಿ ರಾಜನೊಬ್ಬನ ಶಿಲ್ಪಕಾರ್ಯವನ್ನು ಮುಗಿಸಿಕೊಂಡು, ಗಂಗಾನದಿಗೆ ಸ್ನಾನಮಾಡಲು ಹೋದನು. ಅಲ್ಲಿ ತಪೋನಿರತಳೂ, ನವಯೌವನವತಿಯೂ ಆದ ಗೋಪಕನ್ಯೆಯನ್ನು ನೋಡಿದನು. ಕೂಡಲೇ ಇಬ್ಬರಿಗೂ ತಮ್ಮ ಹಿಂದಿನ ಜನ್ಮದ ನೆನಪುಂಟಾಯಿತು.

೨೨. ಆಕೆಯನ್ನು ನೋಡಿದೊಡನೆಯೇ ಈತನ ಚಂಚಲವಾದ ಮನಸ್ಸು ಆಕೆಯನ್ನು ಕಾಮಿಸಿತು. ಆಗ ಶಾಂತಳಾದ ಆಕೆಯನ್ನು ಕುರಿತು ಮಧುರವಾದ ಕೆಲವು ಮಾತುಗಳನ್ನಾಡಿದನು.

೨೩-೨೪. ಬ್ರಾಹ್ಮಣ :—ಓಹೋ! ನೀನೇ ಅಲ್ಲವೆ ಘೃತಾಚಿ ಎಂಬುವಳು. ಎಲೌ ಸುಂದರಾಂಗಿಯೇ! ನಿನಗಾಗಿ ಬಹುಕಾಲದಿಂದ ಅನೇಕ ಕಷ್ಟಗಳನ್ನು

ಶಾಪಮೋಕ್ಷಂ ಕರಿಷ್ಯಾಮಿ ಭಜ ಮಾಂ ತವ ಸುಂದರಿ ।
ತ್ವತ್ಕೃತೇಽತಿದಹತ್ಯೇವ ಮನೋ ಮೇ ಸ ಚ ಮನ್ಮಥಃ ॥ ೭೪ ॥

ದ್ವಿಜಸ್ಯ ವಚನಂ ಶ್ರುತ್ವಾ ಘೃತಾಚೀ ನವರೂಪಿಣೀ ।
ಉವಾಚ ಮಧುರಂ ಶಾಂತಾ ನೀತಿಯುಕ್ತಂ ಪರಂ ವಚಃ ॥ ೭೫ ॥

॥ ಗೋಪಿಕೋವಾಚ ॥

ತದ್ದಿನೇ ಕಾಮಕಾಂತಾಹಮಧುನಾ ಚ ತಪಸ್ವಿನೀ ।
ಕಥಂ ತ್ವಯಾ ಸಂಗತಾಸ್ಯಾಂ ಗಂಗಾತೀರೇ ಚ ಭಾರತೇ ॥ ೭೬ ॥

ವಿಶ್ವಕರ್ಮನ್ನಿದಂ ಪುಣ್ಯಂ ಕರ್ಮಕ್ಷೇತ್ರಂ ಚ ಭಾರತಂ ।
ಅತ್ರ ಯತ್ಕ್ರಿಯತೇ ಕರ್ಮ ಭೋಗೋಽನ್ಯತ್ರ ಶುಭಾಶುಭಂ ॥ ೭೭ ॥

ಅನುಭವಿಸುತ್ತಿರುವ ವಿಶ್ವಕರ್ಮನು ನಾನೆಂಬುದನ್ನು ಮರೆತೆಯಾ! ಈಗ ನೀನು ನನ್ನೊಡಗೂಡಿದರೆ ನಿನ್ನ ಶಾಪ ವಿಮೋಚನೆಯಾಗುವುದು. ನಿನ್ನ ಸಂಗಮವಾದ ಹೊರತು ನನ್ನ ಮನ್ಮಥವ್ಯಥೆ ಪರಿಹಾರವಾಗುವಂತಿಲ್ಲ ಆದ್ದರಿಂದ ನನ್ನ ಮನೋಭಿಲಾಷೆಯನ್ನು ಪೂರೈಸು.

೭೫. ನವಯೌವನಾಂಗಿಯಾದ ಘೃತಾಚಿಯು ಬ್ರಾಹ್ಮಣನ ವಚನವನ್ನು ಕೇಳಿ ಶಾಂತಳಾಗಿ ನೀತಿಯುತವಾದ ಕೆಲವು ಮಾತುಗಳನ್ನಾಡಿದಳು.

೭೬. ಗೋಪಿಕಾ:—ಅಂದು ನಾನು ಕಾಮಪತ್ನಿಯಾಗಿದ್ದೆ. ಇಂದಾದರೋ ತಪಸ್ವಿನಿಯಾಗಿರುವೆನು. ಹೀಗಿರುವಾಗ ಪುಣ್ಯದೇಶವಾದ ಭರತಖಂಡದ ಪವಿತ್ರವಾದ ಗಂಗಾತೀರದಲ್ಲಿ ನಿನ್ನೊಡನೆ ನಾನು ಸೇರಬಹುದೇ? (ಬೇರೆಡೆ ಮಾಡಿದ ಪಾಪವು ಗಂಗೆಯಲ್ಲಿ ಮಿಂದರೆ ಪರಿಹಾರವಾಗುವುದು. ಗಂಗಾತೀರದಲ್ಲಿ ಮಾಡಿದ ಪಾಪವು ಎಂದೆಂದಿಗೂ ಪರಿಹಾರವಾಗದು.)

೭೭. ಎಲೈ, ವಿಶ್ವಕರ್ಮನೇ! ಈ ಭರತಖಂಡವು ಪುಣ್ಯಕರವಾದ ಕರ್ಮಭೂಮಿ. ಮನುಜನು ಇಲ್ಲಿ ಆಚರಿಸುವ ಕರ್ಮವು ಶುಭವಾಗಲೀ, ಅಶುಭವಾಗಲೀ ಅದರ ಫಲವನ್ನು ಇಹಪರಗಳೆರಡರಲ್ಲೂ ಅನುಭವಿಸಬೇಕಾಗುವುದು.

ಧರ್ಮಿಷ್ಠೋ ಮೋಕ್ಷಕೃತೇ ಜನ್ಮ ಪ್ರಲಭ್ಯ ತಪಸಃ ಫಲಾತ್ ।
ನಿಬದ್ಧಃ ಕುರುತೇ ಕರ್ಮ ಮೋಹಿತೋ ವಿಷ್ಣುಮಾಯಯಾ ॥ ೭೮ ॥

ಮಾಯಾ ನಾರಾಯಣೀಶಾನಾ ಪರಿತುಷ್ಟಾ ಚ ಯಂ ಭವೇತ್ ।
ತಸ್ಮೈ ದದಾತಿ ಶ್ರೀಕೃಷ್ಣೇ ಭಕ್ತಿಂ ತನ್ಮಂತ್ರಮೀಪ್ಸಿತಂ ॥ ೭೯ ॥

ಯೋ ಮೂಢೋ ವಿಷಯಾಸಕ್ತೋ ಲಬ್ಧಜನ್ಮಾ ಚ ಭಾರತೇ ।
ವಿಹಾಯ ಕೃಷ್ಣಂ ಸರ್ವೇಶಂ ಸ ಮುಗ್ಧೋ ವಿಷ್ಣುಮಾಯಯಾ ॥ ೮೦ ॥

ಸರ್ವಂ ಸ್ಮರಾಮಿ ದೇವಾಹಮಹೋ ಜಾತಿಸ್ಮರಾ ಪುರಾ ।
ಘೃತಾಚೀ ಸುರವೇಶ್ಯಾಹಮಧುನಾ ಗೋಪಕನ್ಯಕಾ ॥ ೮೧ ॥

ತಪಃ ಕರೋಮಿ ಮೋಕ್ಷಾರ್ಥಂ ಗಂಗಾತೀರೇ ಸುಪುಣ್ಯದೇ ।
ನಾತ್ರ ಸ್ಥಲಂ ಚ ಕ್ರೀಡಾಯಾಃ ಸ್ಥಿರಸ್ತ್ವಂ ಭವ ಕಾಮುಕ ॥ ೮೨ ॥

---

೭೮. ಧರ್ಮಿಷ್ಠನು ಎಷ್ಟೋ ಜನ್ಮದ ತಪಸ್ಸಿನ ಫಲವಾಗಿ ಮೋಕ್ಷೋಚಿತವಾದ ಜನ್ಮವನ್ನು ಪಡೆದಿದ್ದರೂ, ವಿಷ್ಣುಮಾಯೆಗೊಳಗಾಗಿ ಕರ್ಮಬಂಧನಕ್ಕೆ ಸಿಲುಕುವನು.

೭೯-೮೦. ಯಾರು ಕರ್ಮಬಂಧನಕ್ಕೊಳಗಾಗದೆ ಇರುವರೋ ಅವರ ವಿಷಯದಲ್ಲಿ ಮಾಯೆಯು ತುಷ್ಟಳಾಗುವಳು. ಆಗ ಅವರಿಗೆ ಶ್ರೀಕೃಷ್ಣನಲ್ಲಿ ಅಚಲವಾದ ಭಕ್ತಿಯೂ, ಅದಕ್ಕೆ ತಕ್ಕ ಸಾಧನಗಳೂ ಸಿದ್ಧಿಸುವುವು. ಭರತಖಂಡದಲ್ಲಿ ಜನ್ಮವೆತ್ತಿಯೂ, ಯಾರು ಕೃಷ್ಣಪರಮಾತ್ಮನ ಸೇವೆಯನ್ನು ಬಿದು ಸಂಸಾರಸುಖದಲ್ಲಿ ಆಸಕ್ತರಾಗಿರುವರೋ ಅವರನ್ನು ಮಾಯೆಯು ಸರ್ವದಾ ಆವರಿಸಿರುವುದು.

೮೧-೮೨. ಎಲೈ, ವಿಶ್ವಕರ್ಮನೇ! ನನಗೆ ನಿನ್ನ ಶಾಪವಿದ್ದರೂ, ಹಿಂದಿನ ಜನ್ಮಸ್ಮರಣೆಯ ಶಕ್ತಿಯನ್ನು ನೀನೇ ದಯಪಾಲಿಸಿರುವೆ. ನಾನು ದೇವವೇಶ್ಯೆ ಘೃತಾಚಿ ಎಂಬುದನ್ನೂ, ಈಗ ಗೋಪಕನ್ಯೆಯಾಗಿ ಜನಿಸಿರುವೆನೆಂಬುದನ್ನೂ, ಅರಿತಿರುವೆನು. ಆದರೆ ಈಗ ನಾನು ಪುಣ್ಯಕರವಾದ ಗಂಗಾತೀರದಲ್ಲಿ ಮೋಕ್ಷಕ್ಕಾಗಿ ತಪಸ್ಸುಮಾಡುತ್ತಿದ್ದೇನೆ. ಒಂದುವೇಳೆ ನಿನ್ನ ಮನೋಭಿಲಾಷೆಯನ್ನು ಪೂರೈಸುವುದು ಅಷ್ಟು ದೋಷವಲ್ಲವೆಂದು ಎಣಿಸಿದರೂ ನಮ್ಮ ರತಿಕ್ರೀಡೆಗೆ ಇಲ್ಲಿ ಉಚಿತವಾದ ಸ್ಥಳವಿಲ್ಲ. ಆದ್ದರಿಂದ ಕಾಮುಕನಾದ ನೀನು ನಿನ್ನ ಮನಸ್ಸನ್ನು ಬಿಗಿಹಿಡಿಯುವುದು ಒಳಿತು.

ಅನ್ಯತ್ರ ಕೃತಪಾಪಂ ಚ ಗಂಗಾಯಾಂ ಚ ವಿನಶ್ಯತಿ ।
ಗಂಗಾತೀರೇ ಕೃತಂ ಪಾಪಂ ಸದ್ಯೋ ಲಕ್ಷಗುಣಂ ಭವೇತ್ ॥ ೮೩ ॥

ತತ್ತು ನಾರಾಯಣಕ್ಷೇತ್ರೇ ತಪಸಾ ಚ ವಿನಶ್ಯತಿ ।
ಯದ್ಯೇವ ಕಾಮತಃ ಕೃತ್ವಾ ನಿವೃತ್ತಶ್ಚ ಭವೇತ್ಪುನಃ ॥ ೮೪ ॥

ಘೃತಾಚೀವಚನಂ ಶ್ರುತ್ವಾ ವಿಶ್ವಕರ್ಮಾನಿಲಾಕೃತಿಃ ।
ಜಗಾಮ ತಾಂ ಗೃಹೀತ್ವಾ ಚ ಮಲಯಂ ಚಂದನಾಲಯಂ ॥ ೮೫ ॥

ರಮ್ಯಾಯಾಂ ಮಲಯದ್ರೋಣ್ಯಾಂ ಪುಷ್ಪತಲ್ಪೇ ಮನೋರಮೇ ।
ಪುಷ್ಪಚಂದನವಾತೇನ ಸಂತತಂ ಸುರಭೀಕೃತೇ ॥ ೮೬ ॥

ಚಕಾರ ಸುಖಸಂಭೋಗಂ ತಯಾ ಸ ವಿಜನೇ ವನೇ ।
ಪೂರ್ಣಂ ದ್ವಾದಶವರ್ಷಂ ಚ ಬುಬುಧೇ ನ ದಿವಾನಿಶಂ ॥ ೮೭ ॥

---

೮೩. ಬೇರೆ ಸ್ಥಳದಲ್ಲಿ ಮಾಡಿದ ಪಾಪವು ಗಂಗೆಯಲ್ಲಿ ಮಿಂದರೆ ಪರಿಹಾರವಾಗುವುದು. ಗಂಗೆಯ ದಡದಲ್ಲೇ ಪಾಪಮಾಡಿದರೆ ಆ ಪಾಪವು ಲಕ್ಷದಷ್ಟು ಹೆಚ್ಚುವುದು.

೮೪. ಆಕಸ್ಮಿಕವಾಗಿ ಪುಣ್ಯಕ್ಷೇತ್ರದಲ್ಲಿ ಮಾಡಿದ ಪಾಪವನ್ನು ಪರಿಹರಿಸಿಕೊಳ್ಳಬೇಕಾದರೂ ನಾರಾಯಣ (ಬದರಿಕಾಶ್ರಮ) ಕ್ಷೇತ್ರದಲ್ಲಿ ತಪಸ್ಸುಮಾಡಿ ಪರಮಾತ್ಮನನ್ನು ಮೆಚ್ಚಿಸಬೇಕು.

೮೫. ಘೃತಾಚಿಯ ಮಾತುಗಳನ್ನು ಕೇಳಿದ ವಿಶ್ವಕರ್ಮನು ಕೂಡಲೇ ವಾಯುರೂಪವನ್ನು ಧರಿಸಿ ಆಕೆಯನ್ನೆತ್ತಿಕೊಂಡು ಚಂದನವೃಕ್ಷಗಳಿಂದ ರಮ್ಯವಾಗಿರುವ ಮಲಯಪರ್ವತಕ್ಕೆ ಹೋದನು.

೮೬-೮೭. ಮಲಯಪರ್ವತದ ತಪ್ಪಲಿನಲ್ಲಿ ಯಾವಾಗಲೂ ಗಂಧದ ಮರದ ಗಾಳಿಯು ಬೀಸುತ್ತಾ ಎಲ್ಲೆಡೆಯಲ್ಲೂ ಪರಿಮಳವನ್ನು ಪಸರಿಸಿರುತ್ತದೆ. ಅಲ್ಲೊಂದು ಜಾಗದಲ್ಲಿ ಮನೋಹರವಾದ ಹೂವಿನ ಹಾಸಿಗೆಯನ್ನು ರಚಿಸಿ ಘೃತಾಚಿಯೊಡನೆ ರಮಿಸಿದನು. ನಿರ್ಜನವಾದ ವನ. ಯಾರ ಅಡ್ಡಿ ಆತಂಕಗಳೂ ಇಲ್ಲ. ಮನಬಂದಂತೆ ಕ್ರೀಡಿಸಬಹುದು. ಹೀಗಾಗಿ ಅವರಿಬ್ಬರೂ ಹಗಲೂ ರಾತ್ರಿ ಎನ್ನದೆ ಹನ್ನೆರಡು ವರ್ಷಗಳನ್ನು ನಿರಾತಂಕವಾಗಿ ಸುಖಸಂಭೋಗದಿಂದ ಕಳೆದರು.

ಬಭೂವ ಗರ್ಭಃ ಕಾಮಿನ್ಯಾಃ ಪರಿಪೂರ್ಣಃ ಸುದುರ್ವಹಃ ।
ಸಾ ಸುಷಾವ ಚ ತತ್ರೈವ ಪುತ್ರಾನ್ನವ ಮನೋಹರಾನ್ ॥ ೮೮ ॥

ಕೃತಶಿಕ್ಷಿತಶಿಲ್ಪಾಂಶ್ಚ ಜ್ಞಾನಯುಕ್ತಾಂಶ್ಚ ಶೌನಕ ।
ಪೂರ್ಣಪ್ರಾಕ್ತನತೋ ಯುಗ್ಯಾನ್ಬಲಯುಕ್ತಾನ್ವಿಚಕ್ಷಣಾನ್ ॥ ೮೯ ॥

ಮಾಲಾಕಾರಾನ್ಕರ್ಮಕಾರಾನ್ ಶಂಖಕಾರಾನ್ಕುವಿಂದಕಾನ್ ।
ಕುಂಭಕಾರಾನ್ಸೂತ್ರಕಾರಾನ್ ಸ್ವರ್ಣಚಿತ್ರಕರಾಂಸ್ತಥಾ ॥ ೯೦ ॥

ತೌ ಚ ತೇಭ್ಯೋ ವರಂ ದತ್ವಾ ತಾನ್ ಸಂಸ್ಥಾಪ್ಯ ಮಹೀತಲೇ ।
ಮಾನವೀಂ ತನುಮುತ್ಸೃಜ್ಯ ಜಗ್ಮತುರ್ನಿಜಮಂದಿರಂ ॥ ೯೧ ॥

ಸ್ವರ್ಣಕಾರ ಸ್ವರ್ಣಚೌರ್ಯಾದ್ಬ್ರಾಹ್ಮಣಾನಾಂ ದ್ವಿಜೋತ್ತಮ ।
ಬಭೂವ ಪತಿತಃ ಸದ್ಯೋ ಬ್ರಹ್ಮಶಾಪೇನ ಕರ್ಮಣಾ ॥ ೯೨ ॥

---

೮೮. ಅನಂತರ ಘೃತಾಚಿಯು ಗರ್ಭಿಣಿಯಾಗಿ ಪ್ರಸವಕಾಲ ಸಮೀಪಿಸಲು ಮಲಯಪರ್ವತದಲ್ಲೇ ಒಂಭತ್ತು ಜನ ಮನೋಹರರಾದ ಮಕ್ಕಳನ್ನು ಹಡೆದಳು.

೮೯–೯೦. ಆ ಮಕ್ಕಳಾದರೋ ಹುಟ್ಟುವಾಗಲೇ ಒಂದೊಂದು ಶಿಲ್ಪಕಲೆಯಲ್ಲಿ ಪೂರ್ಣಪರಿಶ್ರಮವುಳ್ಳವರಾಗಿದ್ದರು. ಒಳ್ಳೆಯ ದೃಢಕಾಯರೂ, ಕುಶಲರೂ ಆಗಿದ್ದರು. ಜನ್ಮಾಂತರ ಸಂಸಾರವು ಅವರಲ್ಲಿ ತುಂಬಿತ್ತು. ಅವರು ಕ್ರಮವಾಗಿ ಹೂವಾಡಿಗ, ಕಮ್ಮಾರ, ಬಳೆಗಾರ, ನೆಯ್ಗೆಗಾರ, ಕುಂಬಾರ, ಚಿಪ್ಪಿಗ, (ಬಡಗಿ) ಸ್ವರ್ಣಕಾರ (ಅಕ್ಕಸಾಲಿ), ಚಿತ್ರಗಾರ ಮತ್ತು ಕಂಚುಗಾರ ಎಂದು ಖ್ಯಾತಿ ಪಡೆದರು.

೯೧. ವಿಶ್ವಕರ್ಮ ಮತ್ತು ಘೃತಾಚಿಯರು, ಆ ಮಕ್ಕಳಿಗೆ ಇಷ್ಟಬಂದ ವರವನ್ನು ಕೊಟ್ಟು, ಭೂಮಿಯಲ್ಲೇ ವಾಸಿಸಲು ಅಪ್ಪಣೆ ಮಾಡಿ ಮಾನುಷದೇಹವನ್ನು ಬಿಟ್ಟು ಪೂರ್ವಸ್ಥಿತಿಯನ್ನು ಪಡೆದು ತಮ್ಮ ಲೋಕಕ್ಕೆ ಹಿಂತಿರುಗಿದರು.

೯೨. ಬ್ರಾಹ್ಮಣೋತ್ತಮನಾದ, ಎಲೈ, ಶೌನಕನೇ! ಆ ಒಂಭತ್ತು ಮಂದಿಯಲ್ಲಿ, ಸ್ವರ್ಣಕಾರನು ಬ್ರಾಹ್ಮಣರ ಚಿನ್ನವನ್ನು ಕದ್ದು, ಆ ದುಷ್ಕರ್ಮದ ಫಲವಾಗಿ ಅವರ ಶಾಪಹೊಂದಿ ಪತಿತನಾದನು.

ಸೂತ್ರಧಾರೋ ದ್ವಿಜಾನಾಂ ತು ಶಾಪೇನ ಪತಿತೋ ಭುವಿ।
ಶೀಘ್ರಂ ಚ ಯಜ್ಞಕಾಷ್ಠಾನಿ ನ ದದೌ ತೇನ ಹೇತುನಾ ॥ ೯೩ ॥

ವ್ಯತಿಕ್ರಮೇಣ ಚಿತ್ರಾಣಾಂ ಸದ್ಯಶ್ಚಿತ್ರಕರಸ್ತಥಾ।
ಪತಿತೋ ಬ್ರಹ್ಮಶಾಪೇನ ಬ್ರಾಹ್ಮಣಾನಾಂ ಚ ಕೋಪತಃ। ॥ ೯೪ ॥

ಕಶ್ಚಿದ್ವಣಿಗ್ವಿಶೇಷಶ್ಚ ಸಂಸರ್ಗಾತ್ ಸ್ವರ್ಣಕಾರಿಣಃ।
ಸ್ವರ್ಣಚೌರ್ಯಾದಿದೋಷೇಣ ಪತಿತೋ ಬ್ರಹ್ಮಶಾಪತಃ ॥ ೯೫ ॥

ಕುಲಟಾಯಾಂ ಚ ಶೂದ್ರಾಯಾಂ ಚಿತ್ರಕಾರಸ್ಯ ವೀರ್ಯತಃ।
ಬಭೂವಾಟ್ಟಾಲಿಕಾಕಾರಃ ಪತಿತೋ ಜಾರದೋಷತಃ ॥ ೯೬ ॥

---

೯೩. ಸೂತ್ರಧಾರನು ಬ್ರಾಹ್ಮಣರಿಗೆ ಅರಣಿ ಮುಂತಾದ ಯಜ್ಞಕಾಷ್ಠವನ್ನು ಸಕಾಲದಲ್ಲಿ ತಂದುಕೊಡದಿದ್ದುದರಿಂದ, ಅವರ ಶಾಪಕ್ಕೊಳಗಾಗಿ ಪತಿತನಾದನು. ಈ ದೃಷ್ಟಿಯಿಂದ 'ಸೂತ್ರಧಾರ' ನೆಂಬುವಕ್ಕೆ ಬಡಗಿ ಎಂದು ಅರ್ಥಮಾಡುವುದು ಉತ್ತಮವೆಂದು ತೋರುತ್ತದೆ.

೯೪. ಬ್ರಾಹ್ಮಣರ ಚಿತ್ರಕೆಲಸವನ್ನು ಕೆಡಿಸಿದುದರ ಫಲವಾಗಿ ಚಿತ್ರಗಾರನೂ ಬ್ರಾಹ್ಮಣರ ಶಾಪಕ್ಕೊಳಗಾಗಿ, ಪತಿತನಾದನು.

೯೫. ವರ್ತಕನೊಬ್ಬನು (ಶೆಟ್ಟಿ) ಅಕ್ಕಸಾಲೆಯ ಸಹವಾಸ ಮಾಡಿ, ಅವನಂತೆಯೇ ಬ್ರಾಹ್ಮಣರ ಚಿನ್ನವನ್ನು ಕದ್ದು ಬ್ರಹ್ಮಶಾಪಗ್ರಸ್ತನಾಗಿ, ಪತಿತನಾದನು.

೯೬. ಜಾರೆಯಾದ ಶೂದ್ರಸ್ತ್ರೀಯೊಬ್ಬಳಲ್ಲಿ ಚಿತ್ರಕಾರನ ವೀರ್ಯದಿಂದ ಅಟ್ಟಾಲಿಕಾಕಾರನು (ಗಾರೆ ಕೆಲಸದವನು) ಜನಿಸಿದನು. ಜಾರಜನಾದುದರಿಂದ ಅವನೂ ಪತಿತನಾದನು.

ಅಟ್ಟಾಲಿಕಾಕಾರಬೀಜಾತ್ ಕುಂಭಕಾರಸ್ಯ ಯೋಷಿತಿ ।
ಬಭೂವ ಕೋಟಿಕಃ ಸದ್ಯಃ ಪತಿತೋ ಗೃಹಕಾರಕಃ ॥ ೯೭ ॥

ಕುಂಭಕಾರಸ್ಯ ಬೀಜೇನ ಸದ್ಯಃ ಕೋಟಿಕಯೋಷಿತಿ ।
ಬಭೂವ ತೈಲಕಾರಶ್ಚ ಕುಟಿಲಃ ಪತಿತೋ ಭುವಿ ॥ ೯೮ ॥

ಸದ್ಯಃ ಕ್ಷತ್ರಿಯಬೀಜೇನ ರಾಜಪುತ್ರಸ್ಯ ಯೋಷಿತಿ ।
ಬಭೂವ ತೀವರಶ್ಚೈವ ಪತಿತೋ ಜಾರದೋಷತಃ ॥ ೯೯ ॥

ತೀವರಸ್ಯ ತು ಬೀಜೇನ ತಲಕಾರಸ್ಯ ಯೋಷಿತಿ ।
ಬಭೂವ ಪತಿತೋ ದಸ್ಯುರ್ನಟಶ್ಚ ಪರಿಕೀರ್ತಿತಃ ॥ ೧೦೦ ॥

ನಟಸ್ತೀವರಕನ್ಯಾಯಾಂ ಜನಯಾಮಾಸ ಷಟ್ಸುತಾನ್ ।
ಮಲ್ಲಂ ಮಂತ್ರಂ ಮಾತರಂ ಚ ಭಂಡಂ ಕೋಲಂ ಕಲಂಧರಂ ॥ ೧೦೧ ॥

---

೯೭. ಗಾರೆಯವನ ವೀರ್ಯದಿಂದ ಕುಂಬಾರ ಸ್ತ್ರೀಯೊಳಗೆ ಜನಿಸಿದವನೇ, ಕೋಟಕನು. ಮನೆ ಕಟ್ಟುವುದರಲ್ಲಿ ಚತುರನಾದ ಅವನೂ ಪತಿತರ ಗುಂಪಿಗೇ ಸೇರಿದನು.

೯೮. ಕುಂಬಾರನ ವೀರ್ಯದಿಂದ ಕೋಟಕಹೆಂಗಸಿನಲ್ಲಿ ಹುಟ್ಟಿದವನೇ ತೈಲಕಾರನು (ಗಾಣಿಗ). ಅವನೂ ಜಾರದೋಷದಿಂದ ಪತಿತನಾದನು.

೯೯. ಕ್ಷತ್ರಿಯನೊಬ್ಬನ ವೀರ್ಯದಿಂದ ರಾಜಪುತ್ರಸ್ತ್ರೀಯಲ್ಲಿ ತೀವರ (ಬೇಡರದನು) ಜಾತಿಯವನು ಹುಟ್ಟಿ ಜಾರದೋಷದಿಂದ ಪತಿತನಾದನು.

೧೦೦. ತೀವರನ ಬೀಜದಿಂದ ತಳಕಾರನ ಹೆಂಗಸಿನಲ್ಲಿ ದಸ್ಯುವು ಹುಟ್ಟಿ ಪತಿತನಾದನು. ಇವನನ್ನೇ ನಟನೆನ್ನುವರು.

೧೦೧. ನಟನು ತೀವರ ಸ್ತ್ರೀಯಲ್ಲಿ ಆರು ಜನ ಮಕ್ಕಳನ್ನು ಪಡೆದನು. ಅವರೇ ಮಲ್ಲ (ಜಟ್ಟಿ), ಮಂತ್ರ, ಮಾತಾ (ಮಾಟವಗ), ಭಂಡ (ಹಾಸ್ಯಗಾರ), ಕೋಲ, ಕಲಂಧರರೆನಿಸಿಕೊಂಡರು.

ಬ್ರಾಹ್ಮಣ್ಯಾಂ ಶೂದ್ರವೀರ್ಯೇಣ ಪತಿತೋ ಜಾರದೋಷತಃ ।
ಸದ್ಯೋ ಬಭೂವ ಚಂಡಾಲಃ ಸರ್ವಸ್ಮಾದಧಮೋಽಶುಚಿಃ ॥ ೧೦೨ ॥

ತೀವರೇಣ ಚ ಚಂಡಾಲ್ಯಾಂ ಚರ್ಮಕಾರೋ ಬಭೂವಹ ।
ಚರ್ಮಕಾರ್ಯಾಂ ಚ ಚಂಡಾಲಾತ್ ಮಾಂಸಚ್ಛೇದೋ ಬಭೂವಹ ॥ ೧೦೩ ॥

ಮಾಂಸಚ್ಛೇದ್ಯಾಂ ತೀವರೇಣ ಕೋಂಚಶ್ಚ ಪರಿಕೀರ್ತಿತಃ ।
ಕೋಂಚಸ್ತ್ರಿಯಾಂ ತು ಕೈವರ್ತಾತ್ಕರ್ತಾರಃ ಪರಿಕೀರ್ತಿತಃ ॥ ೧೦೪ ॥

ಸದ್ಯಶ್ಚಂಡಾಲಕನ್ಯಾಯಾಂ ನಟವೀರ್ಯೇಣ ಶೌನಕ ।
ಬಭೂವತುಸ್ತೌ ದ್ವೌ ಪುತ್ರೌ ದುಷ್ಟೌ ಹಡ್ಡಿಡಮೌ ತಥಾ ॥ ೧೦೫ ॥

ಕ್ರಮೇಣ ಹಡ್ಡಿಕನ್ಯಾಯಾಂ ಸದ್ಯಶ್ಚಂಡಾಲವೀರ್ಯತಃ ।
ಬಭೂವುಃ ಪಂಚಪುತ್ರಾಶ್ಚ ದುಷ್ಟಾ ವನಚರಾಶ್ಚ ತೇ ॥ ೧೦೬ ॥

---

೧೦೨. ಶೂದ್ರನ ವೀರ್ಯದಿಂದ ಬ್ರಾಹ್ಮಣ ಸ್ತ್ರೀಯಲ್ಲಿ ಹುಟ್ಟಿದವನೇ ಚಂಡಾಲನು. ಇವನು ಜಾರ ಪುತ್ರನಾದುದರಿಂದ ಪತಿತನಾದನು. ಅಲ್ಲದೆ ಎಲ್ಲ ಜಾತಿಗಿಂತಲೂ ಹೀನನೂ, ಅಶುಚಿಯೂ ಆದನು.

೧೦೩. ಬೇಡರವನಿಂದ ಚಂಡಾಲ ಸ್ತ್ರೀಯಲ್ಲಿ ಜನಿಸಿದವನೇ ಚಮ್ಮಾರನು, ಚಂಡಾಲನಿಂದ ಚಮ್ಮಾರ ಹೆಂಗಸಿನಲ್ಲಿ ಹುಟ್ಟಿದವನೇ ಕಟುಕರವನು.

೧೦೪. ಕಟುಕರ ಹೆಂಗಸಿನಲ್ಲಿ ಬೇಡರವನ ವೀರ್ಯದಿಂದ ಕೋಂಚನು ಹುಟ್ಟಿದನು. ಕೋಂಚ ಹೆಂಗಸಿನಲ್ಲಿ ಬೆಸ್ತರವನ ವೀರ್ಯದಿಂದ ಹುಟ್ಟಿದವನೇ ಕರ್ತಾರನೆನಿಸಿಕೊಂಡನು.

೧೦೫. ಎಲೈ ಶೌನಕನೇ, ನಟನ ವೀರ್ಯದಿಂದ ಚಂಡಾಲ ಕನ್ಯೆಯಲ್ಲಿ, ದುಷ್ಟರಿಬ್ಬರು ಜನಿಸಿದರು. ಅವರನ್ನೇ ಹಡ್ಡಿ, ಡಮ ಎಂದು ಕರೆಯುವರು.

೧೦೬. ಕಾಲಕ್ರಮೇಣ ಹಡ್ಡಿ ಹೆಂಗಸಿನಲ್ಲಿ ಚಂಡಾಲನ ವೀರ್ಯದಿಂದ ಐವರು ಪುತ್ರರು ಜನಿಸಿದರು. ಇವರೇ ದುಷ್ಟರಾದ ವನಚರ ಜಾತಿಯುವರು.

ನಟಾತ್ತೀವರಕನ್ಯಾಯಾಂ ಗಂಗಾತೀರೇ ಚ ಶೌನಕ ।
ಬಭೂವ ಸದ್ಯೋ ಯೋ ಬಾಲೋ ಗಂಗಾಪುತ್ರಃ ಪ್ರಕೀರ್ತಿತಃ　　॥ ೧೦೭ ॥

ಗಂಗಾಪುತ್ರಸ್ಯ ಕನ್ಯಾಯಾಂ ವೀರ್ಯಾದ್ವೈ ವೇಷಧಾರಿಣಃ ।
ಬಭೂವ ವೇಷಧಾರೀ ಚ ಪುತ್ರೋ ಯುಂಗೀ ಪ್ರಕೀರ್ತಿತಃ　　॥ ೧೦೮ ॥

ವೈಶ್ಯಾತ್ತೀವರಕನ್ಯಾಯಾಂ ಸದ್ಯಃ ಶುಂಡೀ ಬಭೂವ ಹ ।
ಶುಂಡೀಯೋಷಿತಿ ವೈಶ್ಯಾತ್ತು ಪೌಂಡ್ರಕಶ್ಚ ಬಭೂವ ಹ　　॥ ೧೦೯ ॥

ಕ್ಷತ್ರಾತ್ಕರಣಕನ್ಯಾಯಾಂ ರಾಜಪುತ್ರೋ ಬಭೂವ ಹ ।
ರಾಜಪುತ್ರ್ಯಾಂ ತು ಕರಣಾದಾಗರೀತಿ ಪ್ರಕೀರ್ತಿತಃ　　॥ ೧೧೦ ॥

ಕ್ಷತ್ರವೀರ್ಯೇಣ ವೈಶ್ಯಾಯಾಂ ಕೈವರ್ತಃ ಪರಿಕೀರ್ತಿತಃ ।
ಕಲೌ ತೀವರಸಂಸರ್ಗಾದ್ಧೀವರಃ ಪತಿತೋ ಭುವಿ　　॥ ೧೧೧ ॥

---

೧೦೭. ನಟನ ವೀರ್ಯದಿಂದ ತೀವರ ಕನ್ಯೆಯಲ್ಲಿ, ಗಂಗಾತೀರದಲ್ಲಿ ಜನಿಸಿದವನು ಗಂಗಾಪುತ್ರನೆನಿಸಿಕೊಂಡನು.

೧೦೮. ಗಂಗಾಪುತ್ರನ ಕುಲದಲ್ಲಿ ಹುಟ್ಟಿದ ಕನ್ಯೆಯಲ್ಲಿ ವೇಷಧಾರಿಯ ವೀರ್ಯದಿಂದ ಹುಟ್ಟಿದವನನ್ನು ಯುಂಗೀ ಎಂದು ಕರೆಯುವರು.

೧೦೯. ವೈಶ್ಯನ ಸಂಪರ್ಕದಿಂದ ತೀವರಸ್ತ್ರೀಯಲ್ಲಿ ಜನಿಸಿದವನೇ ಶುಂಡಿ ಎನಿಸಿಕೊಂಡನು. ಶುಂಡೀಸ್ತ್ರೀಯಲ್ಲಿ ವೈಶ್ಯನ ವೀರ್ಯದಿಂದ ಪೌಂಡ್ರಕನು ಜನಿಸಿದನು.

೧೧೦. ಕರಣಸ್ತ್ರೀಯಲ್ಲಿ ಕ್ಷತ್ರಿಯನ ಸಂಪರ್ಕದಿಂದ ಹುಟ್ಟಿದವನು ರಾಜಪುತ್ರನೆನಿಸಿಕೊಂಡನು. ರಾಜಪುತ್ರಸ್ತ್ರೀಯಲ್ಲಿ ಕರಣನ ವೀರ್ಯದಿಂದ ಹುಟ್ಟಿದವನು ಆಗರೀ ಎಂದು ಹೆಸರಾಂತನು.

೧೧೧. ಕ್ಷತ್ರಿಯನ ವೀರ್ಯದಿಂದ ವೈಶ್ಯಸ್ತ್ರೀಯಲ್ಲಿ ಹುಟ್ಟಿದವನು ಕೈವರ್ತ (ಬೆಸ್ತ) ನಾದನು. ಕಲಿಯುಗದಲ್ಲಿ ತೀವರನ ಸಹವಾಸಮಾಡಿ ಧೀವರನೂ (ಬೆಸ್ತ) ಪತಿತನಾದನು.

ತೀವರ್ಯಾಂ ಧೀವರಾತ್ಪುತ್ರೋ ಬಭೂವ ರಜಕಃ ಸ್ಮೃತಃ ।
ರಜಕ್ಯಾಂ ತೀವರಾಚ್ಚೈವ ಕೋಯಾಲೀತಿ ಬಭೂವ ಹ ॥ ೧೧೨ ॥

ನಾಪಿತಾದ್ಗೋಪಕನ್ಯಾಯಾಂ ಸರ್ವಸ್ವೀ ತಸ್ಯ ಯೋಷಿತಿ ।
ಕ್ಷತ್ರಾದ್ಬಭೂವ ವ್ಯಾಧಶ್ಚ ಬಲವಾನ್ ಮೃಗಹಿಂಸಕಃ ॥ ೧೧೩ ॥

ತೀವರಾಚ್ಛುಂಡಿಕನ್ಯಾಯಾಂ ಬಭೂವುಃ ಸಪ್ತ ಪುತ್ರಕಾಃ ।
ತೇ ಕಲೌ ಹಡ್ಡಿಸಂಸರ್ಗಾದ್ಬಭೂವುಃ ದಸ್ಯವಃ ಸದಾ ॥ ೧೧೪ ॥

ಬ್ರಾಹ್ಮಣ್ಯಾಮೃಷಿವೀರ್ಯೇಣ ಋತೋಃ ಪ್ರಥಮವಾಸರೇ ।
ಕುತ್ಸಿತಶ್ಚೋದರೇ ಜಾತಃ ಕೂದರಸ್ತೇನ ಕೀರ್ತಿತಃ ॥ ೧೧೫ ॥

ತದಶೌಚಂ ವಿಪ್ರತುಲ್ಯಂ ಗತಿತೋ ಋತುದೋಷತಃ ।
ಸದ್ಯಃ ಕೋಟಕಸಂಸರ್ಗಾದಧಮೋ ಜಗತೀತಲೇ ॥ ೧೧೬ ॥

---

೧೧೨. ಧೀವರನಿಂದ ತೀವರಸ್ತ್ರೀಯಲ್ಲಿ ಹುಟ್ಟಿದವನೇ ರಜಕನು (ಅಗಸ). ಅಗಸಿತಿಯಲ್ಲಿ ತೀವರನ ವೀರ್ಯದಿಂದ ಕೋಯಾಲೀ ಎಂಬುವನು ಜನಿಸಿದನು.

೧೧೩. ಗೋಪಸ್ತ್ರೀಯಲ್ಲಿ ನಾಪಿತನ (ಹಜಾಮ) ವೀರ್ಯದಿಂದ ಸರ್ವಸ್ವಿಯು ಹುಟ್ಟಿದನು. ಕ್ಷತ್ರಿಯನ ಸಂಬಂಧಮಾಡಿದ ಸರ್ವಸ್ವಿಯೊಳಗೆ ಪ್ರಾಣಿಹಿಂಸಕನಾದ ವ್ಯಾಧ (ಬೇಡ)ನು ಹುಟ್ಟಿದನು.

೧೧೪. ತೀವರನ ವೀರ್ಯದಿಂದ ಶುಂಡಿಸ್ತ್ರೀಯಲ್ಲಿ ಏಳು ಜನ ಪುತ್ರರು ಜನಿಸಿದರು. ಅವರೆಲ್ಲರೂ ಕಲಿಯುಗದಲ್ಲಿ ಹಡ್ಡಿಯ ಸಹವಾಸಮಾಡಿ ದಸ್ಯುಗಳಾದರು.

೧೧೫. ಬ್ರಾಹ್ಮಣಸ್ತ್ರೀಯೊಬ್ಬಳು ಋತುಮತಿಯಾದ ಮೊದಲನೆಯ ದಿವಸ ಋಷಿಯೊಬ್ಬನ ಸಂಸರ್ಗಮಾಡಿ ಜನಿಸಿದವನು, ಕುತ್ಸಿತವಾದ ಉದರದಲ್ಲಿ (ಕೆಟ್ಟ ಹೊಟ್ಟೆ) ಹುಟ್ಟಿದುದರಿಂದ ಕೂದರನೆನಿಸಿಕೊಂಡನು.

೧೧೬. ಬ್ರಾಹ್ಮಣಸ್ತ್ರೀಯಲ್ಲಿ ಹುಟ್ಟಿದುದರಿಂದ ಬ್ರಾಹ್ಮಣನಿಗೆ ಸಮನಾದರೂ, ಋತುದೋಷದಿಂದ ಅಶುಚಿಯೂ, ಪತಿತನೂ ಆದ ಅವನು ಕೋಟಕನ ಸಂಬಂಧದಿಂದ ಜಗತ್ತಿನಲ್ಲಿ ಅಧಮನೆನಿಸಿಕೊಂಡನು.

ಕ್ಷತ್ರವೀರ್ಯೇಣ ವೈಶ್ಯಾಯಾಮೃತೋಃ ಪ್ರಥಮವಾಸರೇ ।
ಜಾತಃ ಪುತ್ರೋ ಮಹಾದಸ್ಯುರ್ಬಲವಾಂಶ್ಚ ಧನುರ್ಧರಃ ॥ ೧೧೭ ॥

ಚಕಾರ ವಾಗತೀತಂ ಚ ಕ್ಷತ್ರಿಯೇಣಾಪಿ ವಾರಿತಃ ।
ತೇನ ಜಾತ್ಯಾ ಸ ಪುತ್ರಶ್ಚ ವಾಗತೀತಃ ಪ್ರಕೀರ್ತಿತಃ ॥ ೧೧೮ ॥

ಕ್ಷತ್ರವೀರ್ಯೇಣ ಶೂದ್ರಾಯಾಮೃತುದೋಷೇಣ ಪಾಪತಃ ।
ಬಲವಂತೋ ದುರಂತಾಶ್ಚ ಬಭೂವುರ್ಮ್ಲೇಚ್ಛಜಾತಯಃ ॥ ೧೧೯ ॥

ಅವಿದ್ಧಕರ್ಣಾಃ ಕ್ರೂರಾಶ್ಚ ನಿರ್ಭಯಾ ರಣದುರ್ಜಯಾಃ ।
ಶೌಚಾಚಾರವಿಹೀನಾಶ್ಚ ದುರ್ಧರ್ಷಾ ಧರ್ಮವರ್ಜಿತಾಃ ॥ ೧೨೦ ॥

ಮ್ಲೇಚ್ಛಾತ್ಕುವಿಂದಕನ್ಯಾಯಾಂ ಜೋಲಾಜಾತಿರ್ಬಭೂವ ಹ ।
ಜೋಲಾತ್ಕುವಿಂದಕನ್ಯಾಯಾಂ ಶರಾಂಕಃ ಪರಿಕೀರ್ತಿತಃ ॥ ೧೨೧ ॥

---

೧೧೭. ವೈಶ್ಯಸ್ತ್ರೀಯು ಋತುಮತಿಯಾದ ಪ್ರಥಮದಿವಸದಲ್ಲಿ ಕ್ಷತ್ರಿಯನ ಸಂಪರ್ಕಮಾಡಿದುದರಿಂದ ಹುಟ್ಟಿದವನೇ ಬಲಿಷ್ಠನೂ, ಧನುರ್ಧಾರಿಯೂ ಆದ ಮಹಾದಸ್ಯುವೆನಿಸಿಕೊಂಡನು.

೧೧೮. ಕ್ಷತ್ರಿಯನಿಂದ ನಿವಾರಿಸಲ್ಪಟ್ಟರೂ, ಆ ಪುತ್ರನು ಮಾತನ್ನು ಮೀರಿದುದರಿಂದ ಅವನು ಜಾತಿಯಲ್ಲಿ ವಾಗತೀತನೆಂದು ಹೆಸರಾಂತನು.

೧೧೯–೧೨೦. ಬಲಯುತರೂ, ಅವಿದ್ಧಕರ್ಣರೂ (ಕಿವಿಚುಚ್ಚದಿರುವವರೂ) ಕ್ರೂರಿಗಳೂ, ನಿರ್ಭಯರೂ, ಶೌಚಾಚಾರಹಿತರೂ, ಧರ್ಮಭ್ರಷ್ಟರೂ, ಆದ ಮ್ಲೇಚ್ಛರು ಋತುದುಷ್ಟಳಾದ ಶೂದ್ರಸ್ತ್ರೀಯಲ್ಲಿ ಪಾಪಿಯಾದ ಕ್ಷತ್ರಿಯನ ವೀರ್ಯದಿಂದ ಜನಿಸಿ, ದುರಂತರೂ, ದುರ್ಧರ್ಷರೂ, ಮತ್ತು ದುರ್ಜಯರೂ ಆದರು.

೧೨೧. ಮ್ಲೇಚ್ಛನಿಂದ ನೇಯ್ಗೆಯವರ ಕನ್ಯೆಯಲ್ಲಿ ಜನಿಸಿದವರು ಜೋಲಾ ಜಾತಿಗೆ ಸೇರಿದರು. ಜೋಲನು ನೆಯ್ಗೆಯವರ ಕನ್ಯಾಸಂಸರ್ಗಮಾಡಿ, ಶರಾಂಕರ ಉತ್ಪತ್ತಿಗೆ ಕಾರಣನಾದನು.

ವರ್ಣಸಂಕರದೋಷೇಣ ಬಹ್ವ್ಯಶ್ಚಾಶ್ರುತಜಾತಯಃ ।
ತಾಸಾಂ ನಾಮಾನಿ ಸಂಖ್ಯಾಶ್ಚ ಕೋ ವಾ ವಕ್ತುಂ ಕ್ಷಮೋ ದ್ವಿಜ ॥ ೧೨೨ ॥

ವೈದ್ಯೋಽಶ್ವಿನೀಕುಮಾರೇಣ ಜಾತೋ ವಿಪ್ರಸ್ಯ ಯೋಷಿತಿ ।
ವೈದ್ಯವೀರ್ಯೇಣ ಶೂದ್ರಾಯಾಂ ಬಭೂವುರ್ಬಹವೋ ಜನಾಃ ॥ ೧೨೩ ॥

ತೇ ಚ ಗ್ರಾಮ್ಯಗುಣಜ್ಞಾಶ್ಚ ಮಂತ್ರೌಷಧಿಪರಾಯಣಾಃ ।
ತೇಭ್ಯಶ್ಚ ಜಾತಾಃ ಶೂದ್ರಾಯಾಂ ಯೇ ವ್ಯಾಲಗ್ರಾಹಿಣೋ ಭುವಿ ॥ ೧೨೪ ॥

॥ ಶೌನಕ ಉವಾಚ ॥

ಕಥಂ ಬ್ರಾಹ್ಮಣಪತ್ನ್ಯಾಂ ತು ಸೂರ್ಯಪುತ್ರೋಽಶ್ವಿನೀಸುತಃ ।
ಅಹೋ ಕೇನಾವಿವೇಕೇನ ವೀರ್ಯಾಧಾನಂ ಚಕಾರ ಹ ॥ ೧೨೫ ॥

೧೨೨. ಈ ರೀತಿ ವರ್ಣಸಾಂಕರ್ಯದೋಷದಿಂದ, ನಾವು ಕೇಳದೇ ಇರುವ ಎಷ್ಟೋ ಜಾತಿಗಳು ಉತ್ಪತ್ತಿಯಾದುವು. ಅವುಗಳ ಹೆಸರನ್ನೂ, ಪರಿಮಿತಿಯನ್ನೂ ಇಷ್ಟೇ ಎಂದು ಯಾರುತಾನೇ ಹೇಳಲು ಸಾಧ್ಯ?

೧೨೩. ಅಶ್ವಿನೀಕುಮಾರನಿಂದ ಬ್ರಾಹ್ಮಣ ಸ್ತ್ರೀಯಲ್ಲಿ ಜನಿಸಿದವನೇ ವೈದ್ಯನೆನಿಸಿಕೊಂಡನು. ಆ ವೈದ್ಯನ ವೀರ್ಯದಿಂದ ಶೂದ್ರಸ್ತ್ರೀಯಲ್ಲಿ ಅನೇಕ ಜನರು ಜನಿಸಿದರು.

೧೨೪. ಅವರೆಲ್ಲರೂ ಮಂತ್ರ ಮತ್ತು ಔಷಧಿಗಳಲ್ಲಿ ನಿಪುಣರೂ, ಗ್ರಾಮ್ಯ ಗುಣವನ್ನು ಅರಿತವರೂ ಆದರು. ಅವರಿಂದ ಶೂದ್ರಸ್ತ್ರೀಯಲ್ಲಿ ಜನಿಸಿದವರೇ ಭೂಮಿಯಲ್ಲಿ ಹಾವಾಡಿಗರೆಂದು ಪ್ರಸಿದ್ಧಿಪಡೆದಿರುವರು.

೧೨೫. ಶೌನಕ:—ಎಲೈ ಮಹರ್ಷಿಯೇ, ಸೂರ್ಯಪುತ್ರನಾದ ಅಶ್ವಿನೀ ಕುಮಾರನು ಬ್ರಾಹ್ಮಣನ ಪತ್ನಿಯಲ್ಲಿ ವೀರ್ಯಾಧಾನಮಾಡುವಷ್ಟು ಅವಿವೇಕಿಯಾಗಲು ಕಾರಣವೇನು? ಎಂಬುದನ್ನು ದಯವಿಟ್ಟು ವಿವರಿಸು.

॥ ಸೌತಿರುವಾಚ ॥

ಗಚ್ಛಂತೀಂ ತೀರ್ಥಯಾತ್ರಾಯಾಂ ಬ್ರಾಹ್ಮಣೀಂ ರವಿನಂದನಃ ।
ದದರ್ಶ ಕಾಮುಕಃ ಶಾಂತಃ ಪುಷ್ಪೋದ್ಯಾನೇ ಚ ನಿರ್ಜನೇ ॥ ೧೨೬ ॥

ತಯಾ ನಿವಾರಿತೋ ಯತ್ನಾದ್ಬಲೇನ ಬಲವಾನ್ಸುರಃ ।
ಅತೀವ ಸುಂದರೀಂ ದೃಷ್ಟ್ವಾ ವೀರ್ಯಾಧಾನಂ ಚಕಾರ ಸಃ ॥ ೧೨೭ ॥

ದ್ರುತಂ ತತ್ಯಾಜ ಗರ್ಭಂ ಸಾ ಪುಷ್ಪೋದ್ಯಾನೇ ಮನೋಹರೇ ।
ಸದ್ಯೋ ಬಭೂವ ಪುತ್ರಶ್ಚ ತಪ್ತಕಾಂಚನಸನ್ನಿಭಃ ॥ ೧೨೮ ॥

ಸಪುತ್ರಾ ಸ್ವಾಮಿನೋ ಗೇಹಂ ಜಗಾಮ ವ್ರೀಡಿತಾ ತದಾ ।
ಸ್ವಾಮಿನಂ ಕಥಯಾಮಾಸ ಯನ್ಮಾರ್ಗೇ ದೈವಸಂಕಟಂ ॥ ೧೨೯ ॥

---

೧೨೬. ಸೌತಿ :—ಬ್ರಾಹ್ಮಣಸ್ತ್ರೀಯೊಬ್ಬಳು ತೀರ್ಥಯಾತ್ರೆಗಾಗಿ ಹೊರಟು ನಿರ್ಜನವಾದೊಂದು ಪುಷ್ಪೋದ್ಯಾನದ ಸಮೀಪಕ್ಕೆ ಬಂದಳು. ಆಗ ಕಾಮುಕನೂ. ಶಾಂತನೂ ಆದ ಸೂರ್ಯಪುತ್ರನು ಆಕೆಯನ್ನು ನೋಡಿ ಕಾಮಿಸಿದನು.

೧೨೭. ಆಕೆಯು ಬೇಡವೆಂದು ಎಷ್ಟು ಹೇಳಿದರೂ ಅವಳ ಸೌಂದರ್ಯಕ್ಕೆ ಮರುಳಾಗಿ ಬಲಿಷ್ಠನಾದ ಆತನು ಬಲಾತ್ಕಾರದಿಂದ ಆಕೆಯೊಡನೆ ರಮಿಸಿ, ತನ್ನ ವೀರ್ಯವನ್ನು ಆಕೆಯ ಗರ್ಭದಲ್ಲಿ ಸೇರಿಸಿದನು.

೧೨೮. ಪ್ರೇಮವು ಬಲಾತ್ಕಾರಕ್ಕೆ ಸಿಗುವುದೇ? ಆಕೆಯಾದರೋ ಕೋಪ ಗೊಂಡು ಮನೋಹರವಾದ ಆ ಪುಷ್ಪೋದ್ಯಾನದಲ್ಲೇ ತನ್ನ ಗರ್ಭವನ್ನು ಬಿಟ್ಟಳು. ಕೂಡಲೇ ಪುಟಕ್ಕೆ ಹಾಕಿದ ಚಿನ್ನದಂತೆ ಪ್ರಕಾಶಿಸುವ ಬಾಲನೊಬ್ಬನು ಜನಿಸಿದನು.

೧೨೯. ಹೊಟ್ಟೆಯಲ್ಲಿ ಹುಟ್ಟಿದ ಹಸುಮಗುವನ್ನು ಬಿಟ್ಟುಹೋಗಲು ಹೆತ್ತ ಕರುಳು ಹಿಂದೆಗೆಯುವುದು. ಜತೆಯಲ್ಲಿ ಪತಿಗೃಹಕ್ಕೆ ಕರೆದುಕೊಂಡು ಹೋಗಲು ಲಜ್ಜೆ. ಆದರೂ ಧೈರ್ಯಮಾಡಿ ಪತಿಗೃಹಕ್ಕೆ ಕರೆತಂದು, ದಾರಿಯಲ್ಲಿ ನಡೆದ ಅನರ್ಥ ಗಳನ್ನು ಪತಿದೇವನಿಗೆ ಬಿನ್ನವಿಸಿದಳು.

ವಿಪ್ರೋ ರೋಷೇಣ ತತ್ಯಾಜ ತಂ ಚ ಪುತ್ರಂ ಸ್ವಕಾಮಿನೀಂ ।
ಸರಿದ್ಬಭೂವ ಯೋಗೇನ ಸಾ ಚ ಗೋದಾವರೀ ಸ್ಮೃತಾ ॥ ೧೩೦ ॥

ಪುತ್ರಂ ಚಿಕಿತ್ಸಾಶಾಸ್ತ್ರಂ ಚ ಪಾಠಯಾಮಾಸ ಯತ್ನತಃ ।
ನಾನಾಶಿಲ್ಪಂ ಚ ಮಂತ್ರಂ ಚ ಸ್ವಯಂ ಸ ರವಿನಂದನಃ ॥ ೧೩೧ ॥

ವಿಪ್ರಶ್ಚ ವೇತನಾಜ್ಜ್ಯೋತಿರ್ಗಣನಾಚ್ಚ ನಿರಂತರಂ ।
ವೇದಧರ್ಮಪರಿತ್ಯಕ್ತೋ ಬಭೂವ ಗಣಕೋ ಭುವಿ ॥ ೧೩೨ ॥

ಲೋಭೀ ವಿಪ್ರಶ್ಚ ಶೂದ್ರಾಣಾಮಗ್ರೇ ದಾನಂ ಗೃಹೀತವಾನ್ ।
ಗ್ರಹಣೇ ಮೃತದಾನಾನಾಮಗ್ರದಾನೀ ಬಭೂವ ಸಃ ॥ ೧೩೩ ॥

---

೧೩೦. ಆಕೆಯ ಪತಿಯಾದರೋ, ತಪ್ಪನ್ನು ಒಪ್ಪಿಕೊಂಡಮಾತ್ರಕ್ಕೆ ನಿರಪರಾಧಿಗಳೆಂದು ತೀರ್ಮಾನಿಸುವಷ್ಟು ಶಾಂತಸ್ವಭಾವದವನಲ್ಲ. ಆಕೆಯನ್ನು ಪುತ್ರನೊಡನೆ ಹೊರದೂಡಿದನು. ಆಗ ಆಕೆಯು ಯೋಗಶಕ್ತಿಯಿಂದ ಹೊಳೆಯಾಗಿ ಪರಿಣಮಿಸಿದಳು. ಅದೇ ಈಗ ಪ್ರಸಿದ್ಧವಾಗಿರುವ ಗೋದಾವರೀ ನದಿಯು.

೧೩೧. ಇತ್ತ ಮಗನು ಗತಿವಿಹೀನನಾದುದನ್ನು ಕಂಡು ಸೂರ್ಯಪುತ್ರನು ಬಂದು ಅವನಿಗೆ ವೈದ್ಯಶಾಸ್ತ್ರವನ್ನೂ, ಅನೇಕ ಶಿಲ್ಪಕಲೆಗಳನ್ನೂ, ದಿವ್ಯಮಂತ್ರಗಳನ್ನೂ ಪ್ರಯತ್ನಪೂರ್ವಕವಾಗಿ ತಾನೇ ಉಪದೇಶಮಾಡಿದನು.

೧೩೨, ಆ ಬ್ರಾಹ್ಮಣಸ್ತ್ರೀಯ ಮಗನು ತಂದೆಯು ಉಪದೇಶಿಸಿದ ವಿದ್ಯೆಯಿಂದ ಹಣಸಂಪಾದನೆ ಮಾಡಿದನು. ಹಾಗೆಯೇ ಜ್ಯೋತಿಃಶಾಸ್ತ್ರದಲ್ಲೂ ಪ್ರವೀಣನಾಗಿ ನಕ್ಷತ್ರಗಳ ಗಣನೆಯಲ್ಲಿ ನಿರತನಾಗಿ ವೇದಧರ್ಮಗಳನ್ನು ಬಿಟ್ಟು ಜೋಯಿಸನೆನಿಸಿಕೊಂಡನು.

೧೩೩. ಹಣದಾಸೆಯಿಂದ ಆತನು ದಾನಮಾಡಲು ಅರ್ಹತೆಯಿಲ್ಲದ ಶೂದ್ರನಿಂದ ಮೊದಲು ದಾನವನ್ನು ಸ್ವೀಕರಿಸಿದನು. ಅಷ್ಟೇ ಅಲ್ಲದೆ ಸತ್ತವರಿಗಾಗಿ ಕೊಡುವ ದಾನಗಳಿಗೂ ಇವನೇ ಮೊದಲು ಕೈಯೊಡ್ಡಿದನು.

ಕಶ್ಚಿತ್ಪುಮಾನ್ ಬ್ರಹ್ಮಯಜ್ಞೇ ಯಜ್ಞಕುಂಡಾತ್ಸಮುತ್ಥಿತಃ ।
ಸ ಸೂತೋ ಧರ್ಮವಕ್ತಾ ಚ ಮತ್ಪೂರ್ವಪುರುಷಃ ಸ್ಮೃತಃ ॥ ೧೩೪ ॥

ಪುರಾಣಂ ಪಾಠಯಾಮಾಸ ತಂ ಚ ಬ್ರಹ್ಮಾ ಕೃಪಾನಿಧಿಃ ।
ಪುರಾಣವಕ್ತಾ ಸೂತಶ್ಚ ಯಜ್ಞಕುಂಡಸಮುದ್ಭವಃ ॥ ೧೩೫ ॥

ವೈಶ್ಯಾಯಾಂ ಸೂತವೀರ್ಯೇಣ ಪುಮಾನೇಕೋ ಬಭೂವ ಹ ।
ಸ ಭಟ್ಟೋ ವಾವದೂಕಶ್ಚ ಸರ್ವೇಷಾಂ ಸ್ತುತಿಪಾಠಕಃ ॥ ೧೩೬ ॥

ಏವಂ ತೇ ಕಥಿತಃ ಕಿಂಚಿತ್ ಪೃಥಿವ್ಯಾಂ ಜಾತಿನಿರ್ಣಯಃ ।
ವರ್ಣಸಂಕರದೋಷೇಣ ಬಹ್ವ್ಯೋಽನ್ಯಾಃ ಸಂತಿ ಜಾತಯಃ ॥ ೧೩೭ ॥

ಸಂಬಂಧೋ ಯೇಷು ಯೇಷಾಂ ಯಃ ಸರ್ವಜಾತಿಷು ಸರ್ವತಃ ।
ತತ್ವಂ ಬ್ರವೀಮಿ ವೇದೋಕ್ತಂ ಬ್ರಹ್ಮಣಾ ಕಥಿತಂ ಪುರಾ ॥ ೧೩೮ ॥

---

೧೩೪. ಬ್ರಾಹ್ಮಣನೊಬ್ಬನು ಬ್ರಹ್ಮಯಜ್ಞಮಾಡುವಾಗ ಯಜ್ಞಕುಂಡದಿಂದ ಜನಿಸಿದವನೇ ಸರ್ವರಿಗೂ ಧರ್ಮಬೋಧಕನೂ, ನನಗೆ ತಂದೆಯೂ ಆದ ಸೂತ ಪುರಾಣೀಕನು.

೧೩೫. ದಯಾಸಾಗರನಾದ ಬ್ರಹ್ಮನು ಸೂತನಿಗೆ ಪುರಾಣಗಳನ್ನು ಬೋಧಿಸಿದನು. ಪುರಾಣಗಳನ್ನೆಲ್ಲಾ ಹೇಳುವ ಸೂತನೇ ಯಜ್ಞಕುಂಡದಲ್ಲಿ ಹುಟ್ಟಿದವನು.

೧೩೬. ಸೂತನು ವೈಶ್ಯಸ್ತ್ರೀಯೊಬ್ಬಳ ಸಮಾಗಮಮಾಡಿದುದರಿಂದ ಹುಟ್ಟಿದವನೇ–ಎಲ್ಲೆಲ್ಲೂ ಹೊಗಳುಭಂಟನೆಂದು ಪ್ರಸಿದ್ಧನಾಗಿರುವ ವಾಚಾಳಿಯು.

೧೩೭. 'ಪ್ರಪಂಚದಲ್ಲಿರುವ ಅನೇಕ ಜಾತಿಗಳು ಹೇಗಾದವು' ಎಂಬುವನ್ನು ತಿಳಿದಷ್ಟು ವಿವರಿಸಿಯಾಯಿತು. ಹೀಗೆಯೇ ವರ್ಣಸಾಂಕರ್ಯದಿಂದ ಇನ್ನೂ ಅನೇಕ ಜಾತಿಗಳು ಜನಿಸಿದುವು.

೧೩೮. ಇದುವರೆಗೆ ಅನೇಕ ಜಾತಿಗಳ ಉತ್ಪತ್ತಿಯನ್ನು ವಿವರಿಸಿದುದಾಯಿತು. ಈಗ ಜನ್ಮವೆತ್ತಿದವರ ಪರಸ್ಪರ ಸಂಬಂಧವನ್ನು ವಿವರಿಸುವೆನು. ಈ ಸಂಬಂಧವು ವೇದದಲ್ಲಿ ನಿರೂಪಿತವಾಗಿದೆ. ಸೃಷ್ಟಿಕರ್ತನಾದ ಬ್ರಹ್ಮನೇ ಈ ಸಂಬಂಧಗಳನ್ನೂ ನಿರ್ಣಯಿಸಿರುವನು.

ಪಿತಾ ತಾತಸ್ತು ಜನಕೋ ಜನ್ಮದಾತಾ ಪ್ರಕೀರ್ತಿತಃ ।
ಅಂಬಾ ಮಾತಾ ಚ ಜನನೀ ಜನಯಿತ್ರೀ ಪ್ರಸೂರಪಿ ॥ ೧೩೯ ॥

ಪಿತಾಮಹಃ ಪಿತೃಪಿತಾ ತತ್ಪಿತಾ ಪ್ರಪಿತಾಮಹಃ ।
ಅತ ಊರ್ಧ್ವಂ ಜ್ಞಾತಯಶ್ಚ ಸಗೋತ್ರಾಃ ಪರಿಕೀರ್ತಿತಾಃ ॥ ೧೪೦ ॥

ಮಾತಾಮಹಃ ಪಿತಾ ಮಾತುಃ ಪ್ರಮಾತಾಮಹ ಏವ ಚ ।
ಮಾತಾಮಹಸ್ಯ ಜನಕಸ್ತತ್ಪಿತಾ ವೃದ್ಧಪೂರ್ವಕಃ ॥ ೧೪೧ ॥

ಪಿತಾಮಹೀ ಪಿತುರ್ಮಾತಾ ತಚ್ಛ್ವಶ್ರೂಃ ಪ್ರಪಿತಾಮಹೀ ।
ತಚ್ಛ್ವಶ್ರೂಶ್ಚ ಪರಿಜ್ಞೇಯಾ ಸಾ ವೃದ್ಧಪ್ರಪಿತಾಮಹೀ ॥ ೧೪೨ ॥

---

೧೩೯. ಮನುಷ್ಯನ ಪಾರ್ಥಿವಶರೀರೋತ್ಪತ್ತಿಗೆ ಕಾರಣನಾದವನನ್ನು, ಪಿತ, ತಾತ, ಜನಕ, ಜನ್ಮದಾತ, ತಂದೆ ಮುಂತಾಗಿ ಕರೆಯುವರು. ಹೆತ್ತಾಕೆಯನ್ನು ಅಂಬ, ಮಾತೆ, ಜನನೀ, ಜನಯಿತ್ರಿ, ಪ್ರಸೂ, (ತಾಯಿ) ಎಂದು ಹಲವು ಶಬ್ದಗಳಿಂದ ಕೂಗುವರು.

೧೪೦. ತಂದೆಯ ತಂದೆಯನ್ನು ಪಿತಾಮಹ (ಅಜ್ಜ) ನೆಂತಲೂ, ಅವನ ತಂದೆಯನ್ನು ಪ್ರಪಿತಾಮಹ (ಮುತ್ತಜ್ಜ) ನೆಂತಲೂ ಹೇಳುವರು. ಮುತ್ತಜ್ಜನಿಗಿಂತಲೂ ಹಿರಿಯರನ್ನು ಸಗೋತ್ರರು, ಜ್ಞಾತಿಗಳು ಮುಂತಾಗಿ ಕರೆಯುವರು.

೧೪೧. ತಾಯಿಯ ತಂದೆಯು ಮಾತಾಮಹನೆನಿಸಿಕೊಳ್ಳುವನು. ಆತನ ತಂದೆಯೇ ಪ್ರಮಾತಾಮಹನು. (ತಾಯಿಯ ಅಜ್ಜ). ಆತನ ತಂದೆಯು ವೃದ್ಧಪ್ರಮಾತಮಹನಾಗುವನು. (ಮಾತಾಮಹನ ಅಜ್ಜ)

೧೪೨. ತಂದೆಯ ತಾಯಿ 'ಪಿತಾಮಹಿ' ಎನಿಸುವಳು. ಪಿತಾಮಹಿಯ ಅತ್ತೆ ಪ್ರಪಿತಾಮಹಿಯಾಗುವಳು. ಪ್ರಪಿತಾಮಹಿಯ ಅತ್ತೆಯೇ ವೃದ್ಧಪ್ರಪಿತಾಮಹಿಯು.

ಮಾತಾಮಹೀ ಮಾತೃಮಾತಾ ಮಾತೃತುಲ್ಯಾ ಚ ಪೂಜಿತಾ ।
ಪ್ರಮಾತಾಮಹೀತಿ ಜ್ಞೇಯಾ ಪ್ರಮಾತಾಮಹಕಾಮಿನೀ ॥ ೧೪೩ ॥

ವೃದ್ಧಮಾತಾಮಹೀ ಜ್ಞೇಯಾ ತತ್ಪಿತುಃ ಕಾಮಿನೀ ತಥಾ ।
ಪಿತೃಭ್ರಾತಾ ಪಿತೃವ್ಯಶ್ಚ ಮಾತೃಭ್ರಾತಾ ಚ ಮಾತುಲಃ ॥ ೧೪೪ ॥

ಪಿತೃಷ್ವಸಾ ಪಿತುರ್ಮಾತೃಷ್ವಸಾ ಮಾತುಸ್ಸ್ವಸಾ ಸ್ಮೃತಾ ।
ಸೂನುಶ್ಚ ತನಯಃ ಪುತ್ರೋ ದಾಯಾದಶ್ಚಾತ್ಮಜಸ್ತಥಾ ॥ ೧೪೫ ॥

ಧನಭಾಗ್ವೀರ್ಯಜಶ್ಚೈವ ಪುಂಸಿ ಜನ್ಯೇ ಚ ವರ್ತತೇ ।
ಜನ್ಯಾಯಾಂ ದುಹಿತಾ ಕನ್ಯಾ ಚಾತ್ಮಜಾ ಪರಿಕೀರ್ತಿತಾ ॥ ೧೪೬ ॥

---

೧೪೩. ತಾಯಿಯ ತಾಯಿಯು ಮಾತಾಮಹಿ ಎನಿಸುವಳು. ಆಕೆಯೂ ತಾಯಿಯಂತೆಯೇ ಪೂಜ್ಯಳು. ಪ್ರಮಾತಾಮಹನ ಹೆಂಡತಿಯು ಪ್ರಮಾತಾಮಹಿಯಾಗುವಳು.

೧೪೪. ವೃದ್ಧಮಾತಾಮಹನ ಹೆಂಡತಿಯು ವೃದ್ಧಮಾತಾಮಹಿಯಾದಳು. ತಂದೆಯ ಸಹೋದರರು ಪಿತೃವ್ಯರು (ಚಿಕ್ಕಪ್ಪ, ದೊಡ್ಡಪ್ಪಂದಿರು) ತಾಯಿಯ ಸಹೋದರರು ಸೋದರಮಾವಂದಿರು–ಎಂದು ಖ್ಯಾತಿವೆತ್ತರು.

೧೪೫. ತಂದೆಯ ಸಹೋದರಿಯರು ಸೋದರತ್ತೆಯರೂ, ತಾಯಿಯ ಸಹೋದರಿಯರು. ಚಿಕ್ಕಮ್ಮ ದೊಡ್ಡಮ್ಮಂದಿರೂ ಆಗುವರು. ಹೊಟ್ಟೆಯಲ್ಲಿ ಹುಟ್ಟಿದವನನ್ನು ಸೂನು, ತನಯ, ದಾಯಾದ, ಆತ್ಮಜ, ಮಗ ಮುಂತಾಗಿ ಕರೆಯುವರು.

೧೪೬. ತನ್ನ ವೀರ್ಯದಿಂದ ಜನಿಸಿದವನೇ ತನ್ನ ಆಸ್ತಿಗೆ ಹಕ್ಕುದಾರನು. ಆತನೇ ತನ್ನ ಪಿತೃವನ್ನು ಪುನ್ನರಕದಿಂದ ಪಾರುಗಾಣಿಸುವವನು. ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣುಮಗಳನ್ನು ಕನ್ಯಾ, ದುಹಿತಾ, ಆತ್ಮಜಾ ಮೊದಲಾದ ಹೆಸರುಗಳಿಂದ ಕರೆಯುವರು.

ಪುತ್ರಪತ್ನೀ ವಧೂರ್ಜ್ಞೇಯಾ ಜಾಮಾತಾ ದುಹಿತುಃ ಪತಿಃ ।
ಪತಿಃ ಪ್ರಿಯಶ್ಚ ಭರ್ತಾ ಚ ಸ್ವಾಮೀ ಕಾಂತೇ ಚ ವರ್ತತೇ ॥ ೧೪೭ ॥

ದೇವರಃ ಸ್ವಾಮಿನೋ ಭ್ರಾತಾ ನನಾಂದಾ ಸ್ವಾಮಿನಃ ಸ್ವಸಾ ।
ಶ್ವಶುರಃ ಸ್ವಾಮಿನಸ್ತಾತಃ ಶ್ವಶ್ರೂಶ್ಚ ಸ್ವಾಮಿನಃ ಪ್ರಸೂಃ ॥ ೧೪೮ ॥

ಭಾರ್ಯಾ ಜಾಯಾ ಪ್ರಿಯಾ ಕಾಂತಾ ಸ್ತ್ರೀಶ್ಚ ಪತ್ನೀ ಪ್ರಕೀರ್ತಿತಾಃ ।
ಪತ್ನೀ ಭ್ರಾತಾ ಶ್ಯಾಲಕಶ್ಚ ಸ್ವಸಾ ಪತ್ನ್ಯಾಶ್ಚ ಶ್ಯಾಲಿಕಾ ॥ ೧೪೯ ॥

ಪತ್ನೀಮಾತಾ ತಥಾ ಶ್ವಶ್ರೂಸ್ತತ್ಪಿತಾ ಶ್ವಶುರಃ ಸ್ಮೃತಃ ।
ಸಗರ್ಭಃ ಸೋದರೋ ಭ್ರಾತಾ ಸಗರ್ಭಾ ಭಗಿನೀ ಸ್ಮೃತಾ ॥ ೧೫೦ ॥

---

೧೪೭. ಮಗನ ಹೆಂಡತಿಯನ್ನು ವಧುವೆಂದೂ (ಸೊಸೆ), ಮಗಳ ಗಂಡನನ್ನು ಜಾಮಾತಾ (ಅಳಿಯ) ಎಂದೂ ಕರೆಯುವರು. 'ಪತಿ, ಪ್ರಿಯ, ಭರ್ತ, ಸ್ವಾಮಿ, ಕಾಂತ' ಇವೆಲ್ಲವೂ ಗಂಡನೆಂಬುವುದಕ್ಕೆ ಸಮಾನಶಬ್ದಗಳು.

೧೪೮. ಪತಿಯ ಸಹೋದರರು ದೇವರ (ಭಾವ, ಮೈದ)ರೆಂದೂ, ಸಹೋದರಿಯರು ನನಾಂದರೆಂದೂ (ನಾದಿನಿ) .ಹೆಸರು ಪಡೆಯುವರು. ಪತಿಯ ತಂದೆಯು ಮಾವನೆಂದೂ, ತಾಯಿಯು ಅತ್ತೆಯೆಂದೂ ಎನಿಸಿಕೊಳ್ಳುವರು.

೧೪೯. 'ಭಾರ್ಯಾ, ಜಾಯಾ, ಪ್ರಿಯಾ, ಕಾಂತಾ, ಪತ್ನೀ' ಇವೆಲ್ಲವೂ ಹೆಂಡತಿ ಎಂಬ ಅರ್ಥವನ್ನು ಕೊಡುವುವು. ಹೆಂಡತಿಯ ಸಹೋದರನು ಶ್ಯಾಲಕ (ಭಾವಮೈದ)ನೆಂದೂ, ಸಹೋದರಿಯು ಶ್ಯಾಲಿಕೆ (ನಾದಿನೀ) ಎಂದೂ ಕರೆಯಲ್ಪಡುವರು.

೧೫೦. ಹೆಂಡತಿಯ ತಾಯಿಯು ಅತ್ತೆ, ತಂದೆಯು ಮಾವ ಎನಿಸಿಕೊಳ್ಳುವರು. 'ಸಗರ್ಭ, ಸೋದರ, ಭ್ರಾತಾ' ಎಂದರೆ ಅಣ್ಣತಮ್ಮಂದಿರು. 'ಸಗರ್ಭಾ, ಭಗಿನೀ, ಸ್ವಸಾ' ಇವೆಲ್ಲವೂ ಒಡಹುಟ್ಟಿದವಳನ್ನು ತಿಳಿಸುವುವು.

ಭಗಿನೀಜೋ ಭಾಗಿನೇಯೋ ಭ್ರಾತೃಜೋ ಭ್ರಾತೃಪುತ್ರಕಃ ।
ಆವುತ್ತೋ ಭಗಿನೀಕಾಂತೋ ಭಗಿನೀಪತಿರೇವ ಚ ॥ ೧೫೧ ॥

ಶ್ಯಾಲೀ ಪತಿಸ್ತು ಭ್ರಾತಾ ಚ ಶ್ವಶುರೈಕತ್ವಹೇತುನಾ ।
ಶ್ವಶುರಸ್ತು ಪಿತಾ ಜ್ಞೇಯೋ ಜನ್ಮದಾತುಃ ಸಮೋ ಮುನೇ ॥ ೧೫೨ ॥

ಅನ್ನದಾತಾ ಭಯೆತ್ರಾತಾ ಪತ್ನೀತಾತಸ್ತಥೈವ ಚ ।
ವಿದ್ಯಾದಾತಾ ಜನ್ಮದಾತಾ ಪಂಚೈತೇ ಪಿತರೋ ನೃಣಾಂ ॥ ೧೫೩ ॥

ಅನ್ನದಾತುಶ್ಚ ಯಾ ಪತ್ನೀ ಭಗಿನೀ ಗುರುಕಾಮಿನೀ ।
ಮಾತಾ ಚ ತತ್ಸಪತ್ನೀ ಚ ಕನ್ಯಾ ಪುತ್ರಪ್ರಿಯಾ ತಥಾ ॥ ೧೫೪ ॥

---

೧೫೧. ಸಹೋದರಿಯ ಹೊಟ್ಟೆಯಲ್ಲಿ ಹುಟ್ಟಿದವನನ್ನು ಭಾಗಿನೇಯನೆಂದೂ (ಸೋದರಳಿಯ), ಸಹೋದರನ ಪುತ್ರನನ್ನು ಭ್ರಾತೃಜನೆಂದೂ ಹೇಳುವರು. ಸಹೋದರಿಯ ಗಂಡನು ಆವುತ್ತ (ಭಾವ)ನೆನಿಸಿಕೊಳ್ಳುವನು. 'ಭಗಿನೀಕಾಂತ. ಭಗಿನೀಪತಿ' ಇವೆಲ್ಲವೂ ಅದಕ್ಕೆ ಸಮಾನಪದಗಳು.

೧೫೨ ಹೆಂಡತಿಯ ಸಹೋದರಿಯ (ನಾದಿನಿಯ) ಪತಿಯು ತನಗೆ ಸಹೋದರ ಸಮಾನನು. ಇಬ್ಬರಿಗೂ ಮಾವನೊಬ್ಬನಾಗುವುದೇ ಅದಕ್ಕೆ ಕಾರಣವು. ಆ ಮಾವನೂ ತನ್ನ ವಂಶೋದ್ಧಾರಕನಾಗುವುದರಿಂದ ತಂದೆಗೆ ಸಮಾನನು.

೧೫೩. 'ಹಸಿದು ಬಳಲಿದಾಗ ಅನ್ನವಿಕ್ಕುವವನು, ಪ್ರಾಣಭಯದಿಂದ ಪಾರುಗಾಣಿಸುವವನು, ಹೆಂಡತಿಯ ತಂದೆಯಾದವನು, ಮೋಕ್ಷಸಾಧನವಾದ ವಿದ್ಯೆಯನ್ನು ಉಪದೇಶಿಸುವವನು, ತನ್ನ ಜನನಕ್ಕೆ ಕಾರಣನು' ಈ ಐವರೂ ತಂದೆ ಎನಿಸಿಕೊಳ್ಳುವರು.

೧೫೪–೧೫೫. ಅನ್ನವಿಕ್ಕಿದವನ ಪತ್ನಿ, ತನ್ನ ಸಹೋದರಿ, ಗುರುಪತ್ನೀ, ತಾಯಿ, ತಾಯಿಯ ಸವತಿ, (ಓರಗಿತ್ತಿ), ಹೊಟ್ಟೆಯಲ್ಲಿ ಹುಟ್ಟಿದ ಮಗಳು, ಮಗನ ಹೆಂಡತಿ (ಸೊಸೆ), ತಾಯಿಯ ತಾಯಿ (ಅಜ್ಜಿ), ತಂದೆಯ ತಾಯಿ, ಹೆಣ್ಣು ಕೊಟ್ಟ

ಮಾತುರ್ಮಾತಾ ಪಿತುರ್ಮಾತಾ ಶ್ವಶ್ರೂಃ ಪಿತ್ರೋಃ ಸ್ವಸಾ ತಥಾ ।
ಪಿತೃವ್ಯಸ್ತ್ರೀ ಮಾತುಲಾನೀ ಮಾತರಶ್ಚ ಚತುರ್ದಶ ॥ ೧೫೫ ॥

ಪೌತ್ರಸ್ತು ಪುತ್ರ ಪುತ್ರೀ ಚ ಪ್ರಪೌತ್ರಸ್ತತ್ಸುತೋಽಪಿ ಚ ।
ತತ್ಪುತ್ರಾದ್ಯಾಶ್ಚ ಯೇ ವಂಶ್ಯಾಃ ಕುಲಜಾಶ್ಚ ಪ್ರಕೀರ್ತಿತಾಃ ॥ ೧೫೬ ॥

ಕನ್ಯಾಪುತ್ರಶ್ಚ ದೌಹಿತ್ರಸ್ತತ್ಪುತ್ರಾದ್ಯಾಶ್ಚ ಬಾಂಧವಾಃ ।
ಭಾಗಿನೇಯ ಸುತಾದ್ಯಾಶ್ಚ ಪುರುಷಾ ಬಾಂಧವಾಃ ಸ್ಮೃತಾಃ ॥ ೧೫೭ ॥

ಭ್ರಾತೃಪುತ್ರಸ್ಯ ಪುತ್ರಾದ್ಯಾಸ್ತೇ ಪುನರ್ಜ್ಞಾತಯಃ ಸ್ಮೃತಾಃ ।
ಗುರುಪುತ್ರಸ್ತಥಾ ಭ್ರಾತಾ ಪೋಷ್ಯಃ ಪರಮಬಾಂಧವಃ ॥ ೧೫೮ ॥

ಗುರುಕನ್ಯಾ ಚ ಭಗಿನೀ ಪೋಷ್ಯಾ ಮಾತೃಸಮಾ ಮುನೇ ।
ಪುತ್ರಸ್ಯ ಚ ಗುರುರ್ಭ್ರಾತಾ ಪೋಷ್ಯಃ ಸುಸ್ನಿಗ್ಧಬಾಂಧವಃ ॥ ೧೫೯ ॥

ಅತ್ತೆ, ತಾಯಿತಂದೆಯರ ಸಹೋದರಿಯರು (ಸೋದರತ್ತೆ ಮತ್ತು ಚಿಕ್ಕಮ್ಮ ದೊಡ್ಡಮ್ಮಂದಿರು) ಚಿಕ್ಕಪ್ಪದೊಡ್ಡಪ್ಪಂದಿರ ಹೆಂಡತಿ, ಸೋದರಮಾವನ ಹೆಂಡತಿ ಈ ಹದಿನಾಲ್ಕು ಜನರೂ ತಾಯಿಗೆ ಸಮಾನರು.

೧೫೬. ಮಗನ ಮಗನು ಮೊಮ್ಮಗನು (ಪೌತ್ರ) ಮೊಮ್ಮಗನ ಮಗನು ಮರಿ ಮಗನು (ಪ್ರಪೌತ್ರ) ಅವನಿಂದ ಮುಂದಿನ ವಂಶದವರನ್ನೆಲ್ಲಾ ಕುಲಜರೆಂದು ಹೇಳುವರು.

೧೫೭ ಮಗಳ ಮಗನು ದೌಹಿತ್ರನು. ಅವನ ವಂಶದಲ್ಲಿ ಜನಿಸಿದವರೂ, ಸಹೋದರಿಯ ಮಗನ ವಂಶಜರೂ ಬಾಂಧವರೆನಿಸಿಕೊಳ್ಳುವರು.

೧೫೮. ಸಹೋದರನ ಮಗನ ವಂಶಜರೆಲ್ಲರೂ ಜ್ಞಾತಿಗಳೆನಿಸುವರು. ಗುರುಗಳ ಮಗನು ಸಹೋದರನಿಗೆ ಸಮಾನನು. ನಮ್ಮ ಪೋಷಣೆಗೆ ಒಳಗಾಗುವವನೂ ನಮ್ಮ ಪರಮ ಬಂಧುವೆನಿಸಿಕೊಳ್ಳುವನು.

೧೫೯. ಗುರುಪುತ್ರಿಯು ಸಹೋದರಿ ಮತ್ತು ತಾಯಿಯರಿಗೆ ಸಮಾನಳು. ಮಗನ ಗುರುವು ತಂದೆಗೆ ಸಹೋದರ ಸಮಾನನು. ಇವರುಗಳೂ ಪೋಷ್ಯವರ್ಗಕ್ಕೆ ಸೇರಿದವರು. ಆಪ್ತಬಂಧುಗಳು.

ಪುತ್ರಸ್ಯ ಶ್ವಶುರೋ ಭ್ರಾತಾ ಬಂಧುರ್ವೈವಾಹಿಕಃ ಸ್ಮೃತಃ ।
ಕನ್ಯಾಯೋಃ ಶ್ವಶುರೇ ಚೈವ ತತ್ಸಂಬಂಧಃ ಪ್ರಕೀರ್ತಿತಃ　　॥ ೧೬೦ ॥

ಗುರುಶ್ಚ ಕನ್ಯಕಾಯೋಶ್ಚ ಭ್ರಾತಾ ಸುಸ್ನಿಗ್ಧಬಾಂಧವಃ ।
ಗುರುಶ್ವಶುರಭ್ರಾತೄಣಾಂ ಗುರುತುಲ್ಯಃ ಪ್ರಕೀರ್ತಿತಃ　　॥ ೧೬೧ ॥

ಬಂಧುತಾ ಯೇನ ಸಾರ್ಧಂ ಚ ತನ್ಮಿತ್ರಂ ಪರಿಕೀರ್ತಿತಂ ।
ಮಿತ್ರಂ ಸುಖಪ್ರದಂ ಜ್ಞೇಯಂ ದುಃಖದೋ ರಿಪುರುಚ್ಯತೇ　　॥ ೧೬೨ ॥

ಬಾಂಧವೋ ದುಃಖದೋ ದೈವಾನ್ನಿಸ್ಸಂಬಂಧೋಽಸುಖಪ್ರದಃ ।
ಸಂಬಂಧಾಸ್ತ್ರಿವಿಧಾಃ ಪುಂಸಾಂ ವಿಪ್ರೇಂದ್ರ ಜಗತೀತಲೇ　　॥ ೧೬೩ ॥

ವಿದ್ಯಾಜೋ ಯೋನಿಜಶ್ಚೈವ ಪ್ರೀತಿಜಶ್ಚ ಪ್ರಕೀರ್ತಿತಃ ।
ಮಿತ್ರಂ ತು ಪ್ರೀತಿಜಂ ಜ್ಞೇಯಂ ಸಸಂಬಂಧಃ ಸುದುರ್ಲಭಃ　　॥ ೧೬೪ ॥

---

೧೬೦. ಮಗನ ಮಾವನೂ, ಮಗಳ ಮಾವನೂ ತನಗೆ ಸಹೋದರ ಸಮಾನರು. ಇವರನ್ನು ವಿವಾಹಸಂಬಂಧವಾದ ಬಂಧುಗಳೆನ್ನಬಹುದು.

೧೬೧. ಮಗಳ ವಿದ್ಯಾದಾತನಾದ ಗುರುವು ತನಗೆ ಸಹೋದರ ಸಮಾನನು ಸಹೋದರರ ಗುರುಗಳೂ, ಮಾವಂದಿರೂ, ತನಗೂ ಗುರುಸಮಾನರು.

೧೬೨. ಯಾರೊಡನೆ ಗೆಳೆತನವಿರುವುದೋ ಅವನು ಮಿತ್ರ. (ಸ್ನೇಹಿತನು) ಸುಖವನ್ನುಂಟುಮಾಡುವವನು ಸ್ನೇಹಿತ. ದುಃಖವನ್ನುಂಟುಮಾಡುವವನು ಶತ್ರು.

೧೬೩. ಬಾಂಧವನಾದರೂ ಕೆಲವು ವೇಳೆ ದೈವಿಕಸಂಬಂಧವಿಲ್ಲದಿದ್ದರೆ ನಮಗೆ ಕೆಡಕಿಯಾಗುವನು. ಯಾವಾಗಲೂ ನಮಗೆ ದುಃಖವನ್ನೇ ಒದಗಿಸುವನು. ಅಯ್ಯಾ ಶೌನಕನೇ! ಪ್ರಪಂಚದಲ್ಲಿ ಸಂಬಂಧವು ಮೂರುತೆರನಹುದು.

೧೬೪. ವಿದ್ಯೆಯಿಂದ ಉಂಟಾದುದು, ಒಬ್ಬ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದುದರಿಂದಾದುದು, ಪ್ರೀತಿಯಿಂದ ಒದಗಿದುದು. ಈ ಮೂರುತರಹ ಸಂಬಂಧದಲ್ಲಿ ಮಿತ್ರನ ಸಂಬಂಧವೇ ಪ್ರೀತಿಯುತವಾದುದು. ಪ್ರೀತಿಜವಾದ ಸಂಬಂಧವು ಸಿಗುವುದು ಕಷ್ಟ.

ಮಿತ್ರಮಾತಾ ಮಿತ್ರಭಾರ್ಯಾ ಮಾತೃತುಲ್ಯಾ ನ ಸಂಶಯಃ ।
ಮಿತ್ರಭ್ರಾತ ಮಿತ್ರಪಿತಾ ಭ್ರಾತೃತಾತಸಮೌ ನೃಣಾಂ ॥ ೧೬೫ ॥

ಚತುರ್ಥಂ ನಾಮಸಂಬಂಧಮಿತ್ಯಾಹ ಕಮಲೋದ್ಭವಃ ।
ಜಾರಶ್ಚೋಪಪತಿರ್ಬಂಧುರ್ದುಷ್ಟಾಸಂಭೋಗಕರ್ತರಿ ॥ ೧೬೬ ॥

ಉಪಪತ್ನ್ಯಾಂ ನವಜ್ಞಾ ಚ ಪ್ರೇಯಸೀ ಚಿತ್ತಹಾರಿಣೀ ।
ಸ್ವಾಮಿತುಲ್ಯಶ್ಚ ಜಾರಶ್ಚ ನವಜ್ಞಾ ಗೃಹಿಣೀಸಮಾ ॥ ೧೬೭ ॥

ಸಂಬಂಧೋ ದೇಶಭೇದೇ ಚ ಸರ್ವದೇಶೇ ವಿಗರ್ಹಿತಃ ।
ಅವೈದಿಕೋ ನಿಂದಿತಸ್ತು ವಿಶ್ವಾಮಿತ್ರೇಣ ನಿರ್ಮಿತಃ ॥ ೧೬೮ ॥

---

೧೬೫. ಸ್ನೇಹಿತನ ತಾಯಿಯೂ, ಅವನ ಪತ್ನಿಯೂ ತನ್ನ ತಾಯಿಗೆ ಸಮಾನರು. ಅಂತೆಯೇ ಸ್ನೇಹಿತನ ಸಹೋದರನು ತನಗೂ ಸಹೋದರನು. ಸ್ನೇಹಿತನ ತಂದೆ ತನಗೂ ತಂದೆಗೆ ಸಮಾನನು.

೧೬೬. ದುಷ್ಟಸ್ತ್ರೀಯ ಸಂಭೋಗಮಾಡುವ ಜಾರನೂ ಉಪಪತಿ ಎನಿಸಿಕೊಳ್ಳುವುದರಿಂದ ಅದು ನಾಮ (ಹೆಸರಿನ) ಸಂಬಂಧವೆಂಬ ನಾಲ್ಕನೆಯ ಪ್ರಭೇದವೆಂದು ಬ್ರಹ್ಮನ ನಿಯಮವು.

೧೬೭. ವೇಶ್ಯೆಯು ಮನಸ್ಸನ್ನು ಆಕರ್ಷಿಸುವಳಾದುದರಿಂದ ಪ್ರೇಯಸಿ ಉಪಪತ್ನೀ ಎನಿಸಿಕೊಳ್ಳುವಳು. ಜಾರನು ಆಕೆಗೆ ಪತಿಸಮಾನನು. ಆತನಿಗೆ ವೇಶ್ಯೆಯು ಗೃಹಿಣಿಗೆ ಸಮಾನಳು.

೧೬೮. ಮೇಲ್ಕಂಡ ಜಾರಸಂಬಂಧವು ಯಾವುದೋ ದೇಶದಲ್ಲಿ ಮಾತ್ರವಿದೆ. ಎಲ್ಲೆಡೆಯಲ್ಲೂ ಈ ಸಂಬಂಧಕ್ಕೆ ಪುರಸ್ಕಾರವಿಲ್ಲ. ಇದು ವೇದೋಕ್ತವಾದುದಲ್ಲ. ವಿಶ್ವಾಮಿತ್ರಋಷಿಯಿಂದ ರಚಿಸಲ್ಪಟ್ಟ ಸಂಬಂಧವಿದು.

ದುಸ್ತ್ಯಜಶ್ಚ ಮಹದ್ಭಿಸ್ತು ದೇಶಭೇದೇ ವಿಧೀಯತೇ ।
ಅಕೀರ್ತಿಜನಕಃ ಪುಂಸಾಂ ಯೋಷಿತಾಂ ಚ ವಿಶೇಷತಃ ॥ ೧೭೯ ॥

ತೇಜೀಯಸಾಂ ನ ದೋಷಾಯ ವಿದ್ಯಮಾನೇ ಯುಗೇ ಯುಗೇ ॥ ೧೭೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಸೌತಿಶೌನಕಸಂವಾದೇ
ಬ್ರಹ್ಮಖಂಡೇ ಜಾತಿಸಂಬಂಧ ನಿರ್ಣಯೋ ನಾಮ
ದಶಮೋಽಧ್ಯಾಯಃ

೧೭೯–೧೭೦. ಹಿಂದಿನಿಂದ ಬಂದಿರುವ ಈ ಸಂಬಂಧವನ್ನು ಕೆಲವರು ಬಿಡಲಾರದೆ ಕೆಲವು ದೇಶಗಳಲ್ಲಿ ಅನುಸರಿಸುತ್ತಿರುವರು. ಈ ಸಂಬಂಧದಿಂದ ಗಂಡಸರಿಗೂ, ಅದರಲ್ಲೂ ಹೆಂಗಸರಿಗೂ ಅಪಕೀರ್ತಿ ದೊರಕುವುದೇ ಹೊರತು ಸತ್ಕೀರ್ತಿ ದೊರೆಯುವುದಿಲ್ಲ. ಯೋಗ ಮತ್ತು ತಪಸ್ಸಿದ್ಧಿಯನ್ನು ಪಡೆದ ಮಹಾತ್ಮರು ಮೇಲ್ಕಂಡ ಜಾರಸಂಬಂಧವನ್ನು ಪ್ರತಿಯುಗದಲ್ಲೂ ಅನುಸರಿಸಿಕೊಂಡು ಬರುತ್ತಲಿರುವುದರಿಂದ ಅವರಿಗೆ ಮಾತ್ರ ಈ ಸಂಬಂಧವು ದೋಷವಲ್ಲ.

ಇಲ್ಲಿಗೆ ಶ್ರೀಬ್ರಹ್ಮವೈವರ್ತ ಮಹಾಪುರಾಣದ ಸೌತಿಶೌನಕ ಸಂವಾದರೂಪವಾದ
ಬ್ರಹ್ಮಖಂಡದಲ್ಲಿ ಜಾತಿಸಂಬಂಧ ನಿರ್ಣಯರೂಪವಾದ
ಹತ್ತನೆಯ ಅಧ್ಯಾಯವು ಮುಗಿದುದು.

ಹತ್ತನೆಯ ಅಧ್ಯಾಯದ ಸಾರಾಂಶವು

ಭೃಗುಮಹರ್ಷಿಗೆ ಚ್ಯವನ ಶುಕ್ರರೂ, ಕ್ರತುವಿಗೆ ವಾಲಖಿಲ್ಯರೂ, ಆಂಗಿರಸನಿಗೆ ಬೃಹಸ್ಪತಿ, ಉತಥ್ಯ ಮತ್ತು ಶಂಬರರೂ ಮಕ್ಕಳಾಗಿ ಜನಿಸಿದರು. ವಸಿಷ್ಠರ ವಂಶದಲ್ಲಿ ವ್ಯಾಸಮಹರ್ಷಿಗಳೂ ವಿಶ್ವಶ್ರವನಲ್ಲಿ ಕುಬೇರನೂ ಜನಿಸಿದರು. ದಿಕ್ಪಾಲಕನಾದ ಕುಬೇರನು ಉತಥ್ಯನ ಶಾಪಕ್ಕೊಳಗಾಗಿ ವಿಶ್ವಶ್ರವನಲ್ಲಿ ಜನ್ಮವೆತ್ತಿದನು. ಕಾಶ್ಯಪ, ಭರದ್ವಾಜ, ವಾತ್ಸ್ಯ, ಸಾವರ್ಣಿ ಮತ್ತು ಶಾಂಡಿಲ್ಯ ಈ ಐವರೂ ಕ್ರಮವಾಗಿ ಕಶ್ಯಪ, ಬೃಹಸ್ಪತಿ, ಪುಲಹ, ಗೌತಮ ಮತ್ತು ರುಚಿಮಹರ್ಷಿಗಳಿಗೆ ಪುತ್ರರಾಗಿ ಜನಿಸಿ ಆಯಾ ಗೋತ್ರದ ಮೂಲಪುರುಷರಾದರು. ಅಂತೆಯೇ ಬ್ರಹ್ಮನ ಮುಖದಿಂದ ಇತರ ಬ್ರಾಹ್ಮಣರೂ, ಬಾಹುವಿನಿಂದ ಕ್ಷತ್ರಿಯರೂ, ಊರುಪ್ರದೇಶದಿಂದ ವೈಶ್ಯರೂ, ಪಾದದಿಂದ ಶೂದ್ರರೂ ಜನಿಸಿದರು. ಈ ಚಾತುರ್ವರ್ಣ್ಯದ ಪರಸ್ಪರ ಸಾಂಕರ್ಯ ದಿಂದ ಸಂಕರಜಾತಿಯ ಉತ್ಪತ್ತಿಯಾಯಿತು.

ವಿಶ್ವಕರ್ಮನು ಒಮ್ಮೆ ಕಾಮಾಯತನಕ್ಕೆ ಹೋಗುತ್ತಿದ್ದ ಘೃತಾಚಿಯನ್ನು ಮೋಹಿಸಿ ಅವಳ ಶಾಪಕ್ಕೊಳಗಾಗಿ ಭೂಲೋಕದಲ್ಲಿ ಹುಟ್ಟಿ, ತನ್ನ ಶಾಪದಿಂದಲೇ ಶೂದ್ರಯೋನಿಯಲ್ಲಿ ಹುಟ್ಟಿದ್ದ ಘೃತಾಚಿಯ ಸಂಗಮಮಾಡಿ ನವಶಿಲ್ಪಿಗಳನ್ನು ಪಡೆದನು. ಅವರಲ್ಲಿ ಮಾಲಾಕಾರ, ಕರ್ಮಕಾರ, ಶಂಖಕಾರ, ಕುವಿಂದಕ, ಕುಂಭ ಕಾರ, ಕಾಂಸ್ಯಕಾರ ಈ ಆರುಜನವೂ ಶಿಲ್ಪಿಶ್ರೇಷ್ಠರೆನಿಸಿದರು. ಸೂತ್ರಧಾರ, ಚಿತ್ರ ಕಾರ, ಸ್ವರ್ಣಕಾರ ಈ ಮೂವರೂ ಬ್ರಹ್ಮಶಾಪದಿಂದ ಪತಿತರಾಗಿ ಯಜ್ಞಯಾಗಾದಿ ಕರ್ಮಗಳಿಗೆ ಅನರ್ಹರಾದರು. ಕುಶಲಕಲಾನಿರತರೆಲ್ಲರೂ ಇವರ ಸಂಪರ್ಕ ದಿಂದಲೇ ಜನಿಸಿದುದರಿಂದ ಅವರೆಲ್ಲರೂ ಪತಿತರೆನಿಸಿದರು. ಬ್ರಾಹ್ಮಣಸ್ತ್ರೀಯಲ್ಲಿ ಶೂದ್ರನ ವೀರ್ಯದಿಂದ ಜನಿಸಿದವನು ಚಂಡಾಲನೆನಿಸಿದನು. ಋತುದುಷ್ಟಳಾದ ಶೂದ್ರಸ್ತ್ರೀಯಲ್ಲಿ ಕ್ಷತ್ರಿಯನಿಂದ ಜನಿಸಿದವರೇ ಮ್ಲೇಚ್ಛರೆನಿಸಿದರು. ಈರೀತಿ ವರ್ಣ ಸಾಂಕರ್ಯದಿಂದ ಅಗಣಿತ ನೀಚಜಾತಿಗಳ ಉತ್ಪತ್ತಿಯಾಯಿತು.

ತೀರ್ಥಯಾತ್ರೆಗೆ ಹೋಗುತ್ತಿದ್ದ ಬ್ರಾಹ್ಮಣಸ್ತ್ರೀಯ ಸೌಂದರ್ಯಕ್ಕೆ ಮನಸೋತು ಅಶ್ವಿನೀಕುಮಾರನು ಬಲಾತ್ಕಾರದಿಂದ ಆಕೆಯೊಡನೆ ರಮಿಸಿ ಪುತ್ರೋತ್ಪತ್ತಿಮಾಡಿದನು. ಅವನೇ ವೈದ್ಯಜಾತಿಗೆ ಮೂಲಪುರುಷನಾದನು.

ಅನಂತರ ಈ ಸೃಷ್ಟಿಗೊಳಗಾದವರಿಗೆ ಪರಸ್ಪರ ಸಂಬಂಧಕಲ್ಪನೆಯಾಯಿತು. ವಿದ್ಯಾಸಂಬಂಧ, ಯೋನಿಸಂಬಂಧ ಮತ್ತು ಪ್ರೀತಿಸಂಬಂಧವೆಂಬ ಮೂರು ವಿಧದಲ್ಲಿ ಪ್ರೀತಿಸಂಬಂಧವೇ ಸುದುರ್ಲಭವಾದುದು. ವಿಶ್ವಾಮಿತ್ರನಿಂದ ಕಲ್ಪಿತವಾದ ಉಪಪತಿ ಮತ್ತು ಉಪಪತ್ನಿ ಎಂಬ ನಾಮಸಂಬಂಧವು ಅವೈದಿಕವಾದುದರಿಂದ ನಿಂದ್ಯವೆನಿಸಿದೆ.

॥ ಓಂ ॥

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಏಕಾದಶೋಽಧ್ಯಾಯಃ ॥

॥ ಶೌನಕ ಉವಾಚ ॥

ದ್ವಿಜಃ ಸ ಭಾರ್ಯಾಂ ಸಂತ್ಯಜ್ಯ ಕಿಂ ಚಕಾರ ವಿಶೇಷತಃ ।
ಅಶ್ವಿನೌ ವಾ ಮಹಾಭಾಗ ಕಿಂ ನಾಮಕಸ್ಯ ವಂಶಜೌ ॥ ೧ ॥

॥ ಸೌತಿರುವಾಚ ॥

ದ್ವಿಜಶ್ಚ ಸುತಪಾ ನಾಮ ಭಾರದ್ವಾಜೋ ಮಹಾಮುನಿಃ ।
ತಪಶ್ಚಕಾರ ಕೃಷ್ಣಸ್ಯ ಲಕ್ಷವರ್ಷಂ ಹಿಮಾಲಯೇ ॥ ೨ ॥

ಹನ್ನೊಂದನೆಯ ಅಧ್ಯಾಯವು

೧. ಶೌನಕ :— ಎಲೈ ಸೂತಪುತ್ರನೇ, ಪತ್ನಿಯನ್ನು ಪರಿತ್ಯಾಗಮಾಡಿದ ಆ ಬ್ರಾಹ್ಮಣನು ಅನಂತರ ಏನು ಮಾಡಿದನು? ಅಶ್ವಿನೀಕುಮಾರರೂ ಕೂಡ ಯಾರ ವಂಶದಲ್ಲಿ ಜನಿಸಿದವರು. ಈ ವಿಷಯವನ್ನು ವಿಸ್ತರಿಸಿ ಹೇಳು.

೨. ಸೌತಿ :— ಭರದ್ವಾಜಮುನಿಯ ವಂಶೋತ್ಪನ್ನನಾದ ಸುತಪನೆಂಬ ಬ್ರಾಹ್ಮಣನು ಹಿಮಾಲಯ ಪರ್ವತದಲ್ಲಿ ಕೃಷ್ಣನನ್ನು ಕುರಿತು ಒಂದು ಲಕ್ಷವರ್ಷಗಳ ಕಾಲ ತಪಸ್ಸನ್ನು ಮಾಡಿದನು.

ಮಹಾತಪಸ್ವೀ ತೇಜಸ್ವೀ ಪ್ರಜ್ವಲನ್ ಬ್ರಹ್ಮವರ್ಚಸಾ ।
ಜ್ಯೋತಿರ್ದದರ್ಶ ಕೃಷ್ಣಸ್ಯ ಗಗನೇ ಸಹಸಾ ಕ್ಷಣಂ　　　　॥ ೩ ॥

ವರಂ ಸ ವವ್ರೇ ನಿರ್ಲಿಪ್ತಮಾತ್ಮಾನಂ ಪ್ರಕೃತೇಃ ಪರಂ ।
ನ ಚ ಮೋಕ್ಷಂ ಯಯೋಚೇ ತಂ ದಾಸ್ಯಂ ಭಕ್ತಿಂ ಚ ನಿಶ್ಚಲಾಂ　　　　॥ ೪ ॥

ಬಭೂವಾಕಾಶವಾಣೀತಿ ಕುರು ದಾರಪರಿಗ್ರಹಂ ।
ಪಶ್ಚಾದ್ದಾಸ್ಯಂ ಪ್ರದಾಸ್ಯಾಮಿ ಭಕ್ತಿಂ ಭೋಗಕ್ಷಯೇ ದ್ವಿಜ　　　　॥ ೫ ॥

ಪಿತೄಣಾಂ ಮಾನಸೀಂ ಕನ್ಯಾಂ ದದೌ ತಸ್ಮೈ ವಿಧಿಃ ಸ್ವಯಂ ।
ತಸ್ಯಾಂ ಕಲ್ಯಾಣಮಿತ್ರಶ್ಚ ಬಭೂವ ಮುನಿಪುಂಗವಃ　　　　॥ ೬ ॥

---

೩. ಮಹಾತಪಸ್ವಿಯೂ, ಬ್ರಹ್ಮವರ್ಚಸ್ವಿಯೂ ಆದ ಆತನು ಒಮ್ಮೆ ಇದ್ದಕ್ಕಿದ್ದಂತೆಯೇ ಆಕಾಶದಲ್ಲಿ ಪರಮಾತ್ಮನ ದಿವ್ಯತೇಜಸ್ಸನ್ನು ಕ್ಷಣಕಾಲ ಕಂಡನು.

೪. ಯಾವ ಪುಣ್ಯಪಾಪ ಕರ್ಮಗಳ ಲೇಪವೂ ಇಲ್ಲದ, ಪ್ರಕೃತಿದೇವಿಗಿಂತಲೂ ಪರತರವಾದ ಆ ಪರಮಾತ್ಮನ ದಿವ್ಯತೇಜಸ್ಸನ್ನು ನೋಡಿ ಆತನಿಗೆ ಸೇವಾಬುದ್ಧಿಯುಂಟಾಯಿತು. ಆದ್ದರಿಂದ, ನಿರಂತರವಾದ ಪರಮಾತ್ಮನ ಭಕ್ತಿಯೂ, ಸೇವೆಯೂ ತನಗೆ ದೊರಕಬೇಕೆಂದು ವರವನ್ನು ಬೇಡಿದನು. ಮುಕ್ತಿಯು ಆತನಿಗೆ ರುಚಿಸಲಿಲ್ಲ.

೫. 'ಅಯ್ಯಾ ಬ್ರಾಹ್ಮಣನೇ! ಮೊದಲು ನೀನು ವಿವಾಹಿತನಾಗಿ ಇಂದ್ರಿಯಭೋಗಗಳನ್ನು ಅನುಭವಿಸು. ಇಂದ್ರಿಯಗಳ ಅಭಿಲಾಷೆ ಎಲ್ಲವೂ ಪೂರ್ತಿಯಾದ ಮೇಲೆ ನಿನಗೆ ಪರಮಾತ್ಮನಲ್ಲಿ ಭಕ್ತಿಯನ್ನೂ, ಸೇವೆಯನ್ನೂ ದಯಪಾಲಿಸುವೆ'. ಎಂದು ಆಕಾಶವಾಣಿಯಾಯಿತು.

೬. ಮುನಿಶ್ರೇಷ್ಠನಾದ ಶೌನಕನೇ, ಆ ಅಶರೀರ ವಾಣಿಯಂತೆ ಪಿತೃದೇವತೆಗಳ ಮಾನಸಪುತ್ರಿಯನ್ನು ಪರಮಾತ್ಮನು, ಆತನಿಗೆ ವರಿಸಲು ಕೊಟ್ಟನು. ಅಂತೆಯೇ ವರಿಸಿದ ಆಕೆಯಲ್ಲಿ ಕಲ್ಯಾಣಮಿತ್ರನೆಂಬುವನು ಜನಿಸಿದನು.

ಯಸ್ಯ ಸ್ಮರಣಮಾತ್ರೇಣ ನ ಭವೇತ್ಕಲಿಜಾದ್ಭಯಂ |
ನ ದ್ರುಷ್ಟವ್ಯಂ ಬಂಧುಮಾತ್ರಂ ನೂನಂ ತತ್ಸ್ಮರಣಾಲ್ಲಭೇತ್ || ೭ ||

ಕಲ್ಯಾಣಮಿತ್ರಜನನೀಂ ಪರಿತ್ಯಜ್ಯ ಮಹಾಮುನಿಃ |
ಶಶಾಪ ಸೂರ್ಯಪುತ್ರಂ ಚ ಯಜ್ಞಭಾಗ್ವರ್ಜಿತೋ ಭವ || ೮ ||

ಸಸೋದರಶ್ಚ ವಾ ಪೂಜ್ಯೋ ಭವೇತಿ ಚ ಸುರಾಧಮ |
ವ್ಯಾಧಿಗ್ರಸ್ತೋ ಜಡಾಂಗಶ್ಚ ಭೂಯಾತ್ತೇಽಕೀರ್ತಿಮಾನಿತಿ || ೯ ||

ಇತ್ಯುಕ್ತ್ವಾ ಸುತಪಾ ಗೇಹಂ ಪ್ರತಸ್ಥೇ ಸೂನುನಾ ಸಹ |
ಅಶ್ವಿಭ್ಯಾಂ ಸಹಿತಃ ಸೂರ್ಯಃ ಪ್ರಯಯೌ ಚ ತದಂತಿಕಂ || ೧೦ ||

---

೭. ಯಾವ ಕಲ್ಯಾಣಮಿತ್ರನ ಸ್ಮರಣೆಯಿಂದ ಮನುಜನಿಗೆ ಕಲಿಬಾಧೆಯು ತೊಲಗುವುದು. ಬಹುಕಾಲದಿಂದ ಅಗಲಿರುವ ನೆಂಟರಿಷ್ಟರೂ ಆತನ ಸ್ಮರಣೆಯಿಂದ ಪುನಃ ಸೇರುವರು.

೮. ಆ ಮಹಾಮುನಿಯಾದ ಭಾರದ್ವಾಜನು ಕಲ್ಯಾಣಮಿತ್ರನ ತಾಯಿಯನ್ನು ತ್ಯಜಿಸಿ, ಸೂರ್ಯಪುತ್ರನಿಗೆ (ಅಶ್ವಿನೀಕುಮಾರರಲ್ಲೊಬ್ಬನಿಗೆ) ಯಜ್ಞಭಾಗವು ಸಲ್ಲದಂತೆ ಶಾಪವಿತ್ತನು.

೯. ದೇವತೆಗಳಲ್ಲಿ ನೀಚನಾದ ನಿನಗೆ ಪ್ರತ್ಯೇಕವಾಗಿ ಗೌರವವು ಲಭಿಸುವುದಿಲ್ಲ. ನಿನ್ನ ಸಹೋದರನೊಡಗೂಡಿ ಒಂದುವೇಳೆ ಗೌರವ ಪಡೆಯಬಹುದು. ನೀನು ಜಡವಾದ ಶರೀರವುಳ್ಳವನೂ, ಸರ್ವದಾ ರೋಗಪೀಡಿತನೂ, ಅಪಕೀರ್ತಿಯುತನೂ ಆಗುವೆ.

೧೦. ಈ ರೀತಿಯಾಗಿ ಸೂರ್ಯಪುತ್ರನಿಗೆ ಶಾಪವಿತ್ತು, ಆ ಮಹಾಮುನಿಯು ತನ್ನ ಮಗನೊಡನೆ ಮನೆಗೆ ಹೋದನು. ಇತ್ತ ಸೂರ್ಯನು ತನ್ನ ಪುತ್ರರಾದ ಅಶ್ವಿನೀ ಕುಮಾರರೊಡನೆ ಆ ಮಹರ್ಷಿಯ ಸಮೀಪಕ್ಕೆ ಬಂದನು.

ಪುತ್ರಾಭ್ಯಾಂ ವ್ಯಾಧಿಯುಕ್ತಾಭ್ಯಾಂ ಸೂರ್ಯಸ್ತ್ರಿಜಗತಾಂಪತಿಃ ।
ಮುನೀಂದ್ರಂ ವೈ ಸುತಪಸಂ ಸ ತುಷ್ಟಾವ ಚ ಶೌನಕ ॥ ೧೧ ॥

॥ ಸೂರ್ಯ ಉವಾಚ ॥

ಕ್ಷಮಸ್ವ ಭಗವನ್ ವಿಪ್ರ ವಿಷ್ಣುರೂಪಯುಗೇ ಯುಗೇ ।
ಮಮ ಪುತ್ರಾಪರಾಧಂ ಚ ಭಾರದ್ವಾಜ ಮುನೀಶ್ವರ ॥ ೧೨ ॥

ಬ್ರಹ್ಮವಿಷ್ಣುಮಹೇಶಾದ್ಯಾಃ ಸುರಾಃ ಸರ್ವೇ ಚ ಸಂತತಂ ।
ಭುಂಜತೇ ವಿಪ್ರದತ್ತಂ ತು ಫಲಪುಷ್ಪಜಲಾದಿಕಂ ॥ ೧೩ ॥

ಬ್ರಾಹ್ಮಣಾವಾಹಿತಾ ದೇವಾಃ ಶಶ್ವದ್ವಿಶ್ವೇಷು ಪೂಜಿತಾಃ ।
ನ ಚ ವಿಪ್ರಾತ್ಪರೋ ದೇವೋ ವಿಪ್ರರೂಪೀ ಸ್ವಯಂ ಹರಿಃ ॥ ೧೪ ॥

---

೧೧. ಅಯ್ಯಾ, ಶೌನಕನೇ! ವಿಧಿಯ ನಿಯಮವನ್ನು ಮೀರುವವರು ಯಾರು? ಮೂರುಲೋಕಗಳಿಗೂ ಒಡೆಯನಾದ ಸೂರ್ಯನೂ ಕೂಡ ರೋಗಗ್ರಸ್ತ ರಾದ ತನ್ನಿಬ್ಬರು ಮಕ್ಕಳೊಡನೆ ಮುನಿಶ್ರೇಷ್ಠನಾದ ಸುತಪನನ್ನು ನುತಿಸಲು ಮೊದಲುಮಾಡಿದನು.

೧೨. ಸೂರ್ಯ :—ಅಯ್ಯಾ, ಪೂಜ್ಯನಾದ ಬ್ರಾಹ್ಮಣನೇ! ನಾನು ಬ್ರಾಹ್ಮಣರ ಮಹಿಮೆಯನ್ನು ಬಲ್ಲೆ. ವಿಷ್ಣುವು ಪ್ರತಿಯುಗದಲ್ಲೂ ಬ್ರಾಹ್ಮಣರೂಪನಾಗಿ ಎಲ್ಲೆಡೆಯಲ್ಲೂ ವ್ಯಾಪಿಸಿರುವನು. ವಿಷ್ಣುರೂಪನಾದ ನೀನು ನನ್ನ ಮಕ್ಕಳ ಅಪರಾಧವನ್ನು ಕ್ಷಮಿಸು.

೧೩. ಬ್ರಹ್ಮ, ವಿಷ್ಣು, ಮಹೇಶ್ವರ, ಮುಂತಾದ ದೇವತೆಗಳೆಲ್ಲರೂ ಯಾವಾಗಲೂ ಬ್ರಾಹ್ಮಣರು ಅರ್ಪಿಸಿದ ಹಣ್ಣು, ಹೂವು, ನೀರು ಮುಂತಾದುವುಗಳನ್ನು ಸ್ವೀಕರಿಸುವರು.

೧೪. ಪ್ರಪಂಚದಲ್ಲಿ ಯಾವಾಗಲೂ ಪೂಜಿತರಾದ ದೇವತೆಗಳೆಲ್ಲರೂ ಬ್ರಾಹ್ಮಣರಿಂದ ಆವಾಹನೆ ಹೊಂದಿದವರು. ಆದುದರಿಂದ ಬ್ರಾಹ್ಮಣನೂ ದೇವತಾಸ್ವರೂಪನು. ಪರಮಾತ್ಮನು ಬ್ರಾಹ್ಮಣರೂಪದಲ್ಲೇ ಇರುವನು.

ಬ್ರಾಹ್ಮಣೇ ಪರಿತುಷ್ಟೇ ಚ ತುಷ್ಟೋ ನಾರಾಯಣಃ ಸ್ವಯಂ ।
ನಾರಾಯಣೇ ಚ ಸಂತುಷ್ಟೇ ಸಂತುಷ್ಟಾಃ ಸರ್ವದೇವತಾಃ ॥ ೧೫ ॥

ನಾಸ್ತಿ ಗಂಗಾಸಮಂ ತೀರ್ಥಂ ನ ಚ ಕೃಷ್ಣಾತ್ಪರಃ ಸುರಃ ।
ನ ಶಂಕರಾದ್ವೈಷ್ಣವಶ್ಚ ನ ಸಹಿಷ್ಣುರ್ಧರಾ ಪರಾ ॥ ೧೬ ॥

ನ ಚ ಸತ್ಯಾತ್ಪರೋ ಧರ್ಮೋ ನ ಸಾಧ್ವೀ ಪಾರ್ವತೀ ಪರಾ ।
ನ ದೈವಾದ್ಬಲವಾನ್ಕಶ್ಚಿನ್ನ ಚ ಪುತ್ರಾತ್ಪರಃ ಪ್ರಿಯಃ ॥ ೧೭ ॥

ನ ಚ ವ್ಯಾಧಿಸಮಃ ಶತ್ರುರ್ನಚ ಪೂಜ್ಯೋ ಗುರೋಃ ಪರಃ ।
ನಾಸ್ತಿ ಮಾತೃಸಮೋ ಬಂಧುರ್ನ ಚ ಮಿತ್ರಂ ಪಿತುಃ ಪರಂ ॥ ೧೮ ॥

---

೧೫. ಬ್ರಾಹ್ಮಣನನ್ನು ತೃಪ್ತಿಗೊಳಿಸಿದರೆ ನಾರಾಯಣನನ್ನೇ ತೃಪ್ತಿಗೊಳಿಸಿದಂತಾಗುವುದು. ನಾರಾಯಣನು ತೃಪ್ತನಾದರೆ ಎಲ್ಲ ದೇವರೂ ತೃಪ್ತರಾದಂತೆಯೇ.

೧೬. ಗಂಗೆಯ ಸದೃಶವಾದ ಪುಣ್ಯತೀರ್ಥವು ಬೇರೊಂದಿಲ್ಲ. ಶ್ರೀಕೃಷ್ಣನಿಗಿಂತ ಉತ್ತಮನಾದ ದೇವನು ಬೇರೊಬ್ಬನಿಲ್ಲ. ಶಂಕರನಿಗಿಂತ ಮೇಲಾದ ವಿಷ್ಣುಭಕ್ತನು ಇನ್ನಿಲ್ಲ. ಭೂಮಿಯಷ್ಟು ಸಹನೆಯುಳ್ಳವರು ಬೇರಾರೂ ಇಲ್ಲ

೧೭. ಸತ್ಯವನ್ನು ನುಡಿಯುವುದಕ್ಕಿಂತ ಮೇಲಾದ ಧರ್ಮವೊಂದಿಲ್ಲ. ಪಾರ್ವತಿಗಿಂತ ಉತ್ತಮಳಾದ ಪತಿವ್ರತೆಯು ಬೇರೊಬ್ಬಳಿಲ್ಲ. ದೇವರಿಗಿಂತ ಬಲಿಷ್ಠರಾರು? ಪುತ್ರನಿಗಿಂತ ಪ್ರೀತಿಪಾತ್ರರು ಬೇರಾರಿರುವರು ?

೧೮ ಮನುಜನಿಗೆ ರೋಗಕ್ಕಿಂತ ಪ್ರಬಲನಾದ ಶತ್ರುವು ಬೇರೊಬ್ಬನಿಲ್ಲ. ಗುರುವಿಗಿಂತ ಪೂಜಾರ್ಹರು ಬೇರಾರೂ ಇಲ್ಲ. ತಾಯಿಯಂತೆ ಪ್ರೀತಿಯಿಂದ ಪೋಷಿಸುವ ಬಂಧುಗಳು ಬೇರೆ ಇರುವುದಿಲ್ಲ. ತಂದೆಗಿಂತ ಆಪ್ತಮಿತ್ರರು ಮತ್ತೊಬ್ಬರಿಲ್ಲ

ಏಕಾದಶೀವ್ರತಾನ್ನಾನ್ಯತ್ತಪೋ ನಾನಶನಾತ್ಪರಂ ।
ಪರಂ ಸರ್ವಧನಂ ರತ್ನಂ ವಿದ್ಯಾರತ್ನಂ ಪರಂ ತತಃ ॥ ೧೯ ॥

ಸರ್ವಾಶ್ರಮ್ಯೈಃ ಪರೋ ವಿಪ್ರೋ ನಾಸ್ತಿ ವಿಪ್ರಸಮೋ ಗುರುಃ ।
ವೇದವೇದಾಂಗ ತತ್ವಜ್ಞ ಇತ್ಯಾಹ ಕಮಲೋದ್ಭವಃ ॥ ೨೦ ॥

ಸೂರ್ಯಸ್ಯ ವಚನಂ ಶ್ರುತ್ವಾ ಭಾರದ್ವಾಜೋ ನನಾಮ ತಂ ।
ನೀರುಜೌ ಚಾಪಿ ತತ್ಪುತ್ರೌ ಚಕಾರ ತಪಸಃ ಫಲಾತ್ ॥ ೨೧ ॥

ಪಶ್ಚಾಚ್ಚ ತವ ಪುತ್ರೌ ಚ ಯಜ್ಞಭಾಜೌ ಭವಿಷ್ಯತಃ ।
ಇತ್ಯುಕ್ತ್ವಾ ತಂ ಚ ಸುತಪಾಃ ಪ್ರಣಮ್ಯಾಹಸ್ಕರಂ ಮುನಿಃ ॥ ೨೨ ॥

ಜಗಾಮ ಗಂಗಾಂ ಸಂತ್ರಸ್ತೋ ಹರಿಸೇವನತತ್ಪರಃ ।
ಪುತ್ರಾಭ್ಯಾಂ ಸಹಿತಃ ಸೂರ್ಯೋ ಜಗಾಮ ನಿಜಮಂದಿರಂ ॥ ೨೩ ॥

---

೧೯. ಏಕಾದಶೀದಿವಸ ಉಪವಾಸ ಮಾಡುವುದಕ್ಕಿಂತ ಬೇರೊಂದು ತಪಸ್ಸು ಅನವಶ್ಯಕವು. ಧನದಲ್ಲೆಲ್ಲಾ ರತ್ನವೇ ಶ್ರೇಷ್ಠವಾದದು. ಅದರಲ್ಲೂ ವಿದ್ಯೆಯೆಂಬ ರತ್ನವು ಪರಮೋತ್ಕೃಷ್ಟವಾದುದು.

೨೦. ಎಲ್ಲ ವರ್ಣದವರಿಗಿಂತಲೂ ಬ್ರಾಹ್ಮಣನು ಶ್ರೇಷ್ಠನು. ಬ್ರಾಹ್ಮಣರಿಗೆ ಸಮನಾದ ಗುರುವು ಬೇರೊಬ್ಬನಿಲ್ಲ. ಋಕ್, ಯಜುಸ್ಸು, ಸಾಮ, ಅಥರ್ವಣವೆಂಬ ನಾಲ್ಕು ವೇದಗಳನ್ನೂ, ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತಿ, ಜ್ಯೋತಿಷ, ಕಲ್ಪವೆಂಬ ವೇದಾಂಗಗಳನ್ನೂ ಅರಿತಿರುವ ಬ್ರಾಹ್ಮಣನ ಸಮನಾವ ಗುರುವು ಬೇರಾರೂ ಇಲ್ಲವೆಂದು ಬ್ರಹ್ಮದೇವನೇ ಹೇಳಿರುವನು.

೨೧. ಸೂರ್ಯನ ಸ್ತೋತ್ರವನ್ನು ಕೇಳಿ ಭಾರದ್ವಾಜನು ಅವನಿಗೆ ವಂದಿಸಿ, ತನ್ನ ತಪಸ್ಸಿನ ಫಲದಿಂದ ಆತನ ಮಕ್ಕಳಿಬ್ಬರನ್ನೂ ರೋಗರಹಿತರನ್ನಾಗಿ ಮಾಡಿದನು.

೨೨–೨೩. ನಿನ್ನ ಮಕ್ಕಳಿಬ್ಬರೂ ಯಜ್ಞಭಾಗಕ್ಕೆ ಅರ್ಹರಾಗುವರೆಂದು ಆ ಸುತಪಮುನಿಯು ಹೇಳಿ, ಸೂರ್ಯನಿಗೆ ನಮಿಸಿ, ತಪಸ್ಸಿಗೆ ವಿಘ್ನವಾದೀತೆಂಬ ಭಯದಿಂದ ಪರಮಾತ್ಮನ ಸೇವೆಗಾಗಿ ಗಂಗಾನದಿಯ ಕಡೆಗೆ ತೆರಳಿದನು. ಇತ್ತ ಸೂರ್ಯದೇವನು ತನ್ನಿಬ್ಬರು ಮಕ್ಕಳೊಡನೆ ತನ್ನಾಲಯಕ್ಕೆ ನಡೆತಂದನು.

ಬಭೂವತುಸ್ತೌ ಪೂಜ್ಯೌ ಚ ಯಜ್ಞಭಾಜೌ ದ್ವಿಜಾಶಿಷಾ ।
ಏತತ್ಸೂರ್ಯಕೃತಂ ವಿಪ್ರ ಸ್ತೋತ್ರಂ ಯೋ ಮಾನವಃ ಪಠೇತ್ ॥
ವಿಪ್ರಪಾದಪ್ರಸಾದೇನ ಸರ್ವತ್ರ ವಿಜಯೀ ಭವೇತ್ ॥ ೨೪ ॥

ಬ್ರಾಹ್ಮಣೇಭ್ಯೋ ನಮ ಇತಿ ಪ್ರಾತರುತ್ಥಾಯ ಯಃ ಪಠೇತ್ ।
ಸ ಸ್ನಾತಃ ಸರ್ವತೀರ್ಥೇಷು ಸರ್ವಯಜ್ಞೇಷು ದೀಕ್ಷಿತಃ ॥ ೨೫ ॥

ಪೃಥಿವ್ಯಾಂ ಯಾನಿ ತೀರ್ಥಾನಿ ತಾನಿ ತೀರ್ಥಾನಿ ಸಾಗರೇ ।
ಸಾಗರೇ ಯಾನಿ ತೀರ್ಥಾನಿ ವಿಪ್ರಪಾದೇಷು ತಾನಿ ಚ ॥ ೨೬ ॥

ವಿಪ್ರಪಾದೋದಕಂ ಪೀತ್ವಾ ಯಾವತ್ತಿಷ್ಠತಿ ಮೇದಿನೀ ।
ತಾವತ್ಪುಷ್ಕರ ಪಾತ್ರೇಷು ಪಿಬಂತಿ ಪಿತರೋ ಜಲಂ ॥ ೨೭ ॥

---

೨೪. ಬ್ರಾಹ್ಮಣನ ಆಶೀರ್ವಾದದಂತೆ ಅವರಿಬ್ಬರೂ ಪೂಜ್ಯರೂ, ಯಜ್ಞಭಾಗಕ್ಕೆ ಅರ್ಹರೂ ಆದರು. ಸೂರ್ಯದೇವಕೃತವಾದ ಈ ಸ್ತೋತ್ರವನ್ನು ಯಾವ ಮನುಜನು ಪ್ರತಿನಿತ್ಯವೂ ಪಠಿಸುವನೋ, ಅವನು ಬ್ರಾಹ್ಮಣನ ದಿವ್ಯಾನುಗ್ರಹದಿಂದ ಎಲ್ಲೆಲ್ಲೂ ಜಯಶಾಲಿಯಾಗುವನು. ಯಾವ ಕೆಲಸದಲ್ಲೂ ಅವನು ಹಿಂದೆಗೆಯುವುದಿಲ್ಲ.

೨೫. ಯಾರು ಪ್ರಾತಃಕಾಲ ಹಾಸಿಗೆಯಿಂದೆದ್ದು 'ಬ್ರಾಹ್ಮಣರಿಗೆ ವಂದನೆ ಎಂದು ಭಕ್ತಿಪೂರ್ವಕವಾಗಿ ಹೇಳುವರೋ, ಅವರು ಎಲ್ಲ ತೀರ್ಥಗಳಲ್ಲೂ ಸ್ನಾನ ಮಾಡಿದ ಮತ್ತು ಎಲ್ಲ ಯಜ್ಞಗಳಲ್ಲೂ ದೀಕ್ಷೆಗೈದ ಫಲವನ್ನು ಹೊಂದುವರು.

೨೬. ಪ್ರಪಂಚದಲ್ಲಿ ಎಷ್ಟು ಪುಣ್ಯತೀರ್ಥಗಳಿರುವುವೋ, ಅಷ್ಟು ಸಮುದ್ರದಲ್ಲಿವೆ. ಸಮುದ್ರದಲ್ಲಿರುವಷ್ಟು ಪುಣ್ಯತೀರ್ಥಗಳೂ ಬ್ರಾಹ್ಮಣನ ಪಾದದಲ್ಲಿವೆ. ಅಂದರೆ, ಬ್ರಾಹ್ಮಣರ ಪಾದಸೇವೆಯಿಂದ ಪುಣ್ಯತೀರ್ಥಗಳಲ್ಲೆಲ್ಲಾ ಸ್ನಾನ ಮಾಡಿದುದರ ಫಲವು ಲಭಿಸುವುದು.

೨೬-೨೭. ಭೂದೇವಿಯು ಬ್ರಾಹ್ಮಣನ ಪಾದೋದಕದಿಂದ ಎಂದಿನವರೆಗೆ ನೆನೆಯುತ್ತಿರುವಳೋ ಅದುತನಕ, ಪಿತೃದೇವತೆಗಳು ತಾವರೆ ಎಲೆಯ ಪಾತ್ರೆಗಳಲ್ಲಿ

ವಿಪ್ರಪಾದೋದಕಂ ಪುಣ್ಯಂ ಭಕ್ತಿಯುಕ್ತಶ್ಚ ಯಃ ಪಿಬೇತ್ ।
ಸ ಸ್ನಾತಃ ಸರ್ವತೀರ್ಥೇಷು ಸರ್ವಯಜ್ಞೇಷು ದೀಕ್ಷಿತಃ ॥ ೨೮ ॥

ಮಹಾರೋಗೀ ಯದಿ ಪಿಬೇದ್ವಿಪ್ರಪಾದೋದಕಂ ದ್ವಿಜ ।
ಮುಚ್ಯತೇ ಸರ್ವರೋಗಾಚ್ಚ ಮಾಸಮೇಕಂ ತು ಭಕ್ತಿತಃ ॥ ೨೯ ॥

ಅವಿದ್ಯೋ ವಾ ಸವಿದ್ಯೋ ವಾ ಸಂಧ್ಯಾಪೂತೋ ಹಿ ಯೋ ದ್ವಿಜಃ ।
ಸ ಏವ ವಿಷ್ಣುಸದೃಶೋ ನ ಹರೌ ವಿಮುಖೋ ಯದಿ ॥ ೩೦ ॥

ಘ್ನಂತಂ ವಿಪ್ರಂ ಶಪಂತಂ ವಾ ನ ಹನ್ಯಾನ್ನ ಚ ತಂ ಶಪೇತ್ ।
ಗೋಭ್ಯಃ ಶತಗುಣಂ ಪೂಜ್ಯೋ ಹರಿಭಕ್ತಶ್ಚ ಸ ಸ್ಮೃತಃ ॥ ೩೧ ॥

ಆನಂದದಿಂದ ನೀರು ಕುಡಿಯುವರು. ಪುಣ್ಯಕರವಾದ ಬ್ರಾಹ್ಮಣನ ಪಾದೋದಕವನ್ನು ಭಕ್ತಿಯಿಂದ ಕುಡಿಯುವವರು, ಅನೇಕ ತೀರ್ಥಯಾತ್ರೆ ಮತ್ತು ಯಾಗದ ಫಲಗಳನ್ನು ಪಡೆಯುವರು.

೨೯. ದೀರ್ಘರೋಗಿಯಾದವನು ಒಂದುತಿಂಗಳು ಮಾತ್ರ ಭಕ್ತಿಯಿಂದ ಬ್ರಾಹ್ಮಣನ ಪಾದೋದಕವನ್ನು (ಕಾಲುತೊಳೆದ ನೀರನ್ನ) ಕುಡಿಯುತ್ತಾ ಬಂದರೆ ಅವನ ಎಲ್ಲ ರೋಗಗಳೂ ಪರಿಹಾರವಾಗುವುವು.

೩೦. ಯಾವ ಬ್ರಾಹ್ಮಣನು ತನ್ನ ನಿತ್ಯಕರ್ಮಗಳಾದ ಸಂಧ್ಯಾವಂದನೆ, ದೇವತಾರ್ಚನೆಗಳನ್ನು ಬಿಡದ ಭಕ್ತಿಯಿಂದ ಆಚರಿಸಿಕೊಂಡು, ಪರಮಾತ್ಮನ ಸೇವೆಯಲ್ಲಿ ನಿರತನಾಗಿರುವನೋ, ಆತನು ವಿದ್ಯಾವಂತನಾಗಲೀ. ಅವಿದ್ಯಾವಂತನಾಗಲೀ ವಿಷ್ಣುವಿಗೆ ಸಮಾನನೆನಿಸುವನು.

೩೧. ಬ್ರಾಹ್ಮಣನು ಒಬ್ಬನನ್ನು ವಧಿಸಿದರೆ, ಅದಕ್ಕೆ ಪ್ರತಿಯಾಗಿ ಆತನನ್ನು ವಧಿಸಕೂಡದು. ಶಪಿಸಿದರೆ ಪ್ರತಿಶಾಪ ಕೊಡಕೂಡದು. ವಿಷ್ಣುಭಕ್ತನಾದ ಬ್ರಾಹ್ಮಣನು ಗೋವುಗಳಿಗಿಂತ ನೂರರಷ್ಟು ಅಧಿಕ ಪೂಜ್ಯನೆನಿಸಿಕೊಳ್ಳುವನು.

ಪಾದೋದಕಂ ಚ ನೈವೇದ್ಯಂ ಭುಂಕ್ತೇ ವಿಪ್ರಸ್ಯ ಯೋ ದ್ವಿಜ ।
ನಿತ್ಯಂ ನೈವೇದ್ಯಭೋಜೀ ಯೋ ರಾಜಸೂಯ ಫಲಂ ಲಭೇತ್ ॥ ೩೨ ॥

ಏಕಾದಶ್ಯಾಂ ನ ಭುಂಕ್ತೇ ಯೋ ನಿತ್ಯಂ ಕೃಷ್ಣಂ ಸಮರ್ಚಯೇತ್ ।
ತಸ್ಯ ಪಾದೋದಕಂ ಪ್ರಾಪ್ಯ ಸ್ಥಲಂ ತೀರ್ಥಂ ಭವೇದ್ಧ್ರುವಂ ॥ ೩೩ ॥

ಯೋ ಭುಂಕ್ತೇ ಭೋಜನೋಚ್ಛಿಷ್ಟಂ ನಿತ್ಯಂ ನೈವೇದ್ಯ ಭೋಜನಂ ।
ಕೃಷ್ಣದೇವಸ್ಯ ಪೂತೋಽಸೌ ಜೀವನ್ಮುಕ್ತೋ ಮಹೀತಲೇ ॥ ೩೪ ॥

ಅನ್ನಂ ವಿಷ್ಠಾ ಪಯೋ ಮೂತ್ರಂ ಯದ್ವಿಷ್ಣೋರನಿವೇದಿತಂ ।
ದ್ವಿಜಾನಾಂ ಕುಲಜಾತಾನಾಮಿತ್ಯಾಹ ಕಮಲೋದ್ಭವಃ ॥ ೩೫ ॥

---

೩೨. ಎಲೈ ಬ್ರಾಹ್ಮಣೋತ್ತಮನೇ, ಯಾವ ಕ್ಷತ್ರಿಯನು ಬ್ರಾಹ್ಮಣನ ಪಾದೋದಕವನ್ನು ಕುಡಿಯುವನೋ, ಬ್ರಾಹ್ಮಣನಿಗೆ ಅರ್ಪಿಸಿ ಮಿಕ್ಕುದನ್ನು ಭುಜಿಸುವನೋ ಮತ್ತು ನಿತ್ಯವೂ ಅದೇ ಪದ್ಧತಿಯನ್ನೇ ಅನುಸರಿಸುವನೋ ಅವನಿಗೆ ರಾಜಸೂಯಯಾಗದ ಫಲವು ಲಭಿಸುವುದು.

೩೩. ಏಕಾದಶೀ ದಿವಸ ಯಾವ ಬ್ರಾಹ್ಮಣನು ಊಟವನ್ನು ಬಿಡುವನೋ ಮತ್ತು ಪ್ರತಿದಿನವೂ ಪರಮಾತ್ಮನನ್ನು ಭಕ್ತಿಯಿಂದ ಪೂಜಿಸುವನೋ ಆತನ ಪಾದೋದಕವು ಬಿದ್ದ ಸ್ಥಳವೆಲ್ಲಾ ಪವಿತ್ರ ತೀರ್ಥವಾಗುವುದು.

೩೪, ಯಾವ ಮನುಜನು ಕೃಷ್ಣಪರಮಾತ್ಮನಿಗೆ ನಿವೇದಿಸಿ ಉಳಿದ ಅನ್ನವನ್ನು ಭಕ್ತಿಯಿಂದ ಊಟಮಾಡುವನೋ, ಅವನು ಪರಮಪವಿತ್ರನಾಗಿ ಭೂಮಿಯಲ್ಲೇ ಜೀವನ್ಮುಕ್ತನಾಗುವನು.

೩೫. ಪರಮಾತ್ಮನಿಗೆ ನಿವೇದಿಸದಿರುವ ಅನ್ನವು ಮಲಕ್ಕೆ ಸಮಾನ ನೀರು (ಹಾಲು) ಮೂತ್ರಕ್ಕೆ ಸಮಾನ. ಆದ್ದರಿಂದ ಸದ್ವಂಶದಲ್ಲಿ ಜನಿಸಿದ ಬ್ರಾಹ್ಮಣನು ಪರಮಾತ್ಮನಿಗೆ ಅರ್ಪಿಸದಿರುವ ವಸ್ತುವನ್ನು ಸೇವಿಸಕೂಡದೆಂದು ಬ್ರಹ್ಮದೇವನೇ ಹೇಳಿರುವನು.

ಬ್ರಹ್ಮಾ ಚ ಬ್ರಹ್ಮಪುತ್ರಾಶ್ಚ ಸರ್ವೇ ವಿಷ್ಣುಪರಾಯಣಾಃ ।
ಬ್ರಾಹ್ಮಣಸ್ತತ್ಕುಲೇ ಜಾತೋ ವಿಮುಖಶ್ಚ ಹರೌ ಕಥಂ ॥ ೩೬ ॥

ಪಿತ್ರೋರ್ಮಾತಾಮಹಾದೀನಾಂ ಸಂಸರ್ಗಸ್ಯ ಗುರೋಶ್ಚ ವಾ ।
ದೋಷೇಣ ವಿಮುಖಾಃ ಕೃಷ್ಣೇ ವಿಪ್ರಾ ಜೀವನ್ಮೃತಾಶ್ಚ ತೇ ॥ ೩೭ ॥

ಸ ಕಿಂ ಗುರುಃ ಸ ಕಿಂ ತಾತಃ ಸ ಕಿಂ ಪುತ್ರಃ ಸ ಕಿಂ ಸಖಾ ।
ಸ ಕಿಂ ರಾಜಾ ಸ ಕಿಂ ಬಂಧುರ್ನದದಾ ದ್ಯೋ ಹರೌ ಮತಿಂ ॥ ೩೮ ॥

ಅವೈಷ್ಣವಾದ್ವಿಜಾದ್ವಿಪ್ರ ಚಂಡಾಲೋ ವೈಷ್ಣವೋ ನರಃ ।
ಸಗಣಃ ಶ್ವಪಚೋ ಮುಕ್ತೋ ಬ್ರಾಹ್ಮಣೋ ನರಕಂ ವ್ರಜೇತ್ ॥ ೩೯ ॥

---

೩೬. ಬ್ರಹ್ಮನೂ, ಬ್ರಹ್ಮನ ಮಕ್ಕಳೂ ಯಾವಾಗಲೂ ವಿಷ್ಣುವಿನಲ್ಲಿ ಭಕ್ತಿಯುಳ್ಳವರು. ಹೀಗಿರುವಾಗ ಬ್ರಹ್ಮನ ವಂಶದಲ್ಲೇ ಜನಿಸಿದ ಬ್ರಾಹ್ಮಣನು ವಿಷ್ಣುವನ್ನು ದೂರಮಾಡುವುದೆಂದರೇನು?

೩೭. ಸಾಮಾನ್ಯವಾಗಿ ಮಕ್ಕಳು ಬಾಲ್ಯದಲ್ಲಿ ತನ್ನ ತಾಯಿಯ ತೌರುಮನೆಯಲ್ಲೇ ಬೆಳೆಯುವರು. ಆದುದರಿಂದ ಮಕ್ಕಳನ್ನು ಸನ್ಮಾರ್ಗಕ್ಕೆ ತರುವ ಭಾರವು ತಂದೆ, ತಾಯಿ, ಮತ್ತು ತಾಯಿಯ ತಂದೆ (ಅಜ್ಜ) ಗಳಿಗೆ ಸೇರುವುದು. ಸ್ವಲ್ಪ ವಯಸ್ಸಾದ ಮೇಲೆ ಗುರುವಿಗೂ ಆ ಬಾಧ್ಯತೆಯುಂಟು. ಗುರುಹಿರಿಯರ ದೋಷದಿಂದ ಪರಮಾತ್ಮನಲ್ಲಿ ಭಕ್ತಿವಿಮುಖರಾದ ಬ್ರಾಹ್ಮಣರು ಬದುಕಿದ್ದರೂ ಸತ್ತಂತೆಯೇ.

೩೮. ಗುರುವಾಗಲೀ, ತಂದೆಯಾಗಲೀ, ಮಗನಾಗಲೀ, ಮಿತ್ರನಾಗಲೀ, ರಾಜನಾಗಲೀ, ಬಂಧುವಾಗಲಿ, ತನ್ನ ಅಧೀನದಲ್ಲಿರುವವರಿಗೆ ದೈವಭಕ್ತಿಯನ್ನು ಹುಟ್ಟಿಸುವುದು ಅವರ ಕರ್ತವ್ಯ. ಅಲ್ಲದಿದ್ದರೆ ತಮ್ಮ ಸ್ಥಾನಮರ್ಯಾದೆಯನ್ನು ಕಳೆದುಕೊಳ್ಳುವರು.

೩೯. ವಿಷ್ಣುಭಕ್ತನಲ್ಲದ ಬ್ರಾಹ್ಮಣನಿಗಿಂತ, ವಿಷ್ಣುಭಕ್ತನಾದ ಚಂಡಾಲನು ಮೇಲು. ಅಂತಹ ಚಂಡಾಲನು ತನ್ನ ಕುಲದವರೊಡನೆ ಸ್ವರ್ಗವನ್ನೈದುವನು. ಮೇಲ್ಕಂಡ ಬ್ರಾಹ್ಮಣನಿಗಾದರೋ ನರಕವೇ ಗತಿ.

ಸಂಧ್ಯಾಹೀನೋಽಶುಚಿರ್ನಿತ್ಯಂ ಕೃಷ್ಣೇ ವಾ ವಿಮುಖೋ ದ್ವಿಜಃ ।
ಸ ಏವ ಬ್ರಾಹ್ಮಣಾಭಾಸೋ ವಿಷಹೀನೋ ಯಥೋರಗಃ ॥ ೪೦ ॥

ಗುರುವಕ್ತ್ರಾದ್ವಿಷ್ಣುಮಂತ್ರೋ ಯಸ್ಯ ಕರ್ಣೇ ಪ್ರವಿಶ್ಯತಿ ।
ತಂ ವೈಷ್ಣವಂ ಮಹಾಪೂತಂ ಜೀವನ್ಮುಕ್ತಂ ವದೇದ್ವಿಧಿಃ ॥ ೪೧ ॥

ಪುಂಸಾಂ ಮಾತಾಮಹಾದೀನಾಂ ಶತೈಃ ಸಾರ್ಧಂ ಹರೇಃ ಪದಂ ।
ಪ್ರಯಾತಿ ವೈಷ್ಣವಃ ಪುಂಸಾಮಾತ್ಮನಃ ಕುಲಕೋಟಿಭಿಃ ॥ ೪೨ ॥

ಬ್ರಹ್ಮಕ್ಷತ್ರಿಯವಿಟ್ ಶೂದ್ರಾಶ್ಚತಸ್ರೋ ಜಾತಯೋ ಯಥಾ ।
ಸ್ವತಂತ್ರಾ ಜಾತಿರೇಕಾ ಚ ವಿಶ್ವಸ್ಮಿನ್ ವೈಷ್ಣವಾಭಿದಾ ॥ ೪೩ ॥

---

೪೦. ಯಾವ ಬ್ರಾಹ್ಮಣನು ಪ್ರತಿನಿತ್ಯವೂ ಕಾಲಾನುಗುಣವಾಗಿ ಸ್ನಾನ, ಸಂಧ್ಯಾವಂದನೆ, ದೇವತಾರ್ಚನೆಗಳನ್ನು ಮಾಡದೆ, ಪರಮಾತ್ಮನಲ್ಲಿ ವಿಮುಖನಾಗಿ ಇರುವನೋ, ಅವನು ವಿಷವಿಲ್ಲದ ಹಾವಿನಂತೆ ನೋಡುವುದಕ್ಕೆ ಮಾತ್ರ ಬ್ರಾಹ್ಮಣನು. ಅವನಲ್ಲಿ ನಿಶ್ಚಯವಾಗಿಯೂ ಬ್ರಹ್ಮತೇಜಸ್ಸಿರುವುದಿಲ್ಲ.

೪೧. ಯಾವನ ಕಿವಿಯಲ್ಲಿ ಗುರುವು ವಿಷ್ಣುಮಂತ್ರವನ್ನು ಉಪದೇಶಿಸುವನೋ, ಯಾವಾತನು ವಿಷ್ಣುಭಕ್ತನೋ, ಆತನು ಪರಮಪವಿತ್ರನೆಂದೂ, ಜೀವನ್ಮುಕ್ತನೆಂದೂ ಬ್ರಹ್ಮನು ಹೇಳಿರುವನು.

೪೨. ವಿಷ್ಣುಭಕ್ತನಾದವನು ತನ್ನ ಅಜ್ಜ, ಮುತ್ತಜ್ಜಂದಿರು ಮೊದಲಾದ ಕುಲಕೋಟಿಗಳೊಡನೆ ವಿಷ್ಣುವಿನ ಸ್ಥಾನವನ್ನು ಹೊಂದಿ ನಿರಂತರ ಸೇವೆಗೈಯುತ್ತಿರುವನು.

೪೩. ಜಗತ್ತಿನಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರನೆಂದು ಹೇಗೆ ನಾಲ್ಕು ಜಾತಿಗಳಿರುವುವೋ, ಹಾಗೆಯೇ ವಿಷ್ಣುಭಕ್ತರದೊಂದು ಸ್ವತಂತ್ರವಾದ ಜಾತಿಯುಂಟು.

ಧ್ಯಾಯಂತಿ ವೈಷ್ಣವಾಃ ಶಶ್ವದ್ಗೋವಿಂದಪದಪಂಕಜಂ ।
ಧ್ಯಾಯತೇ ತಾಂಶ್ಚ ಗೋವಿಂದಃ ಶಶ್ವತ್ತೇಷಾಂ ಚ ಸನ್ನಿಧೌ ॥ ೪೪ ॥

ಸುದರ್ಶನಂ ಸನ್ನಿಯೋಜ್ಯ ಭಕ್ತಾನಾಂ ರಕ್ಷಣಾಯ ಚ ।
ತಥಾಪಿ ನ ಹಿ ನಿಶ್ಚಿಂತೋಽವತಿಷ್ಠೇದ್ಭಕ್ತಸಂನಿಧೌ ॥ ೪೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಸೌತಿಶೌನಕಸಂವಾದೇ
ಬ್ರಹ್ಮಖಂಡೇ ವಿಷ್ಣು ವೈಷ್ಣವ ಬ್ರಾಹ್ಮಣಪ್ರಶಂಸಾ
ನಾಮ್ನೈಕಾದಶೋಽಧ್ಯಾಯಃ

೪೪–೪೫. ವಿಷ್ಣುಭಕ್ತರು ಯಾವಾಗಲೂ ಪರಮಾತ್ಮನ ಪಾದಾರವಿಂದಗಳನ್ನು ನೆನೆಯುತ್ತಿರುವರು. ಪರಮಾತ್ಮನು ತನ್ನ ಭಕ್ತರ ಪರಿಪಾಲನೆಗಾಗಿ ಸುದರ್ಶನ ಚಕ್ರಕ್ಕೆ ನಿಯಮಿಸಿರುವನು. ಆದರೂ ತೃಪ್ತನಾಗದೆ ತಾನೇ ಭಕ್ತನ ಸಮಿೂಪದಲ್ಲಿ ಅದೃಶ್ಯನಾಗಿ ಯಾವಾಗಲೂ ರಕ್ಷಣೆ ಕೊಡುತ್ತಿರುವನು.

ಇಲ್ಲಿಗೆ ಸೌತಿಶೌನಕ ಸಂವಾದರೂಪವಾದ ಬ್ರಹ್ಮವೈವರ್ತ ಮಹಾಪುರಾಣದ
ಬ್ರಹ್ಮಖಂಡದಲ್ಲಿ ವಿಷ್ಣು, ವೈಷ್ಣವ, ಬ್ರಾಹ್ಮಣರ ಪ್ರಶಂಸಾರೂಪವಾದ
ಹನ್ನೊಂದನೆಯ ಅಧ್ಯಾಯವು ಮುಗಿದುದು.

ಹನ್ನೊಂದನೆಯ ಅಧ್ಯಾಯದ ಸಾರಾಂಶವು

ಪತ್ನೀಪರಿತ್ಯಾಗಮಾಡಿದ ಆ ಬ್ರಾಹ್ಮಣನಾರೆಂದು ಶೌನಕರು ಕೇಳಲು, ಸೂತಪುತ್ರರು ಇಂತು ನುಡಿಯುವರು. ಭರದ್ವಾಜವಂಶೋತ್ಪನ್ನನಾದ ಸುತಪನೆಂಬ ಮುನಿಯು ಹಿಮಾಲಯಪರ್ವತದಲ್ಲಿ ಒಂದು ಲಕ್ಷವರ್ಷಗಳು ತಪಸ್ಸುಮಾಡಿ ಪರಮಾತ್ಮನ ದರ್ಶನವನ್ನು ಪಡೆದನು. ಮತ್ತು ಪರಮಾತ್ಮನ ನಿರಂತರವಾದ ಭಕ್ತಿ ಮತ್ತು ಸೇವೆಗಳನ್ನು ಬೇಡಿದನು. ಆದರೆ 'ಪತ್ನಿಯನ್ನು ಪರಿಗ್ರಹಿಸು' ಎಂದು ಆ ಮುನಿಯನ್ನು ಕುರಿತು ಅಶರೀರವಾಣಿಯಾಗಲು, ಪರಮಾತ್ಮನು ಪಿತೃಗಳ ಮಾನಸಕನ್ಯೆಯನ್ನು ಅವನಿಗಿತ್ತನು. ಆಕೆಯು ಅಶ್ವಿನೀಕುಮಾರನಿಂದ ಕಲ್ಯಾಣ ಮಿತ್ರನೆಂಬ ಮಗನನ್ನು ಪಡೆದು ಬರಲು, ಅವನು ಆಕೆಯನ್ನೂ, ಆ ಶಿಶುವನ್ನೂ ತ್ಯಜಿಸಿದುದಲ್ಲದೆ ಅಶ್ವಿನೀಕುಮಾರನಿಗೆ ರೋಗಗ್ರಸ್ತನೂ, ಯಜ್ಞಭಾಗವಿಲ್ಲದವನೂ ಆಗುವಂತೆ ಶಾಪವಿತ್ತನು. ಇದನ್ನು ತಿಳಿದು ಸೂರ್ಯದೇವನು ತನ್ನ ಪುತ್ರರೊಡನೆ ಆ ಸುತಪನ ಬಳಿಗೆ ಬಂದು ಬ್ರಾಹ್ಮಣರ ಮಹಿಮೆಯನ್ನು ವರ್ಣಿಸಿ, ತನ್ನ ಮಕ್ಕಳಿಬ್ಬರನ್ನೂ ವಿಶಾಪಗೊಳಿಸಬೇಕೆಂದು ಬೇಡಿದನು. ಸೂರ್ಯದೇವನ ಸ್ತುತಿಗೆ ಆ ಮುನಿಯು ಪ್ರಸನ್ನನಾಗಿ ಅವರ ಶಾಪವನ್ನು ಪರಿಹರಿಸಿದನು.

ಈ ಅಧ್ಯಾಯದಲ್ಲಿ, ಪರಮಭಕ್ತಿಯಿಂದ ನಿತ್ಯಕರ್ಮವನ್ನು ಆಚರಿಸುವ ಬ್ರಾಹ್ಮಣರು ಮಹಾಮಹಿಮರೆಂದೂ, ಅವರ ದರ್ಶನಸ್ಪರ್ಶನಾದಿಗಳೂ ಕೂಡ ಪುಣ್ಯದಾಯಕವೆಂದೂ, ಹೇಳಿರುವರು. ವಿಷ್ಣುವು ತನ್ನ ಭಕ್ತರ ಪರಿಪಾಲನೆಗಾಗಿ ಯಾವಾಗಲೂ ತನ್ನ ಸುದರ್ಶನಚಕ್ರವನ್ನು ನಿಯಮಿಸಿರುವನು.

—|| ಓಂ ||—

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

|| ದ್ವಾದಶೋಽಧ್ಯಾಯಃ ||

|| ಶೌನಕ ಉವಾಚ ||

ಋಷಿವಂಶಪ್ರಸಂಗೇನ ಬಭೂವುರ್ವಿವಿಧಾಃ ಕಥಾಃ |
ಉಪಾಲಂಭೇನ ಪ್ರಸ್ತಾವಾತ್ ಕೌತುಕೇನ ಶ್ರುತಾ ಮಯಾ || ೧ ||

ಪ್ರಜಾ ವಾ ಸಸೃಜುಃ ಕೇ ವಾ ಊರ್ಧ್ವರೇತಾಶ್ಚ ಕಶ್ಚನ |
ಪಿತ್ರಾ ಸಹ ವಿರೋಧೇನ ನಾರದಃ ಕಿಂ ಚಕಾರ ಸಃ || ೨ ||

ಪಿತುಃ ಶಾಪೇನ ಪುತ್ರಸ್ಯ ಕಿಂ ಬಭೂವ ವಿರೋಧತಃ |
ಪಿತುರ್ವಾ ಪುತ್ರಶಾಪೇನ ಸೌತೇ ತತ್ಕಥ್ಯತಾಂ ಶುಭಂ || ೩ ||

ಹನ್ನೆರಡನೆಯ ಅಧ್ಯಾಯವು

೧. ಶೌನಕ:—ಬ್ರಹ್ಮಪುತ್ರರಾದ ಋಷಿಗಳ ವಂಶವರ್ಣನೆಯು ಮೊದಲಾಗಿ ಯಾವು ಯಾವುದೋ ವಿಷಯಗಳು ಬಂದು ಹೋದವು. ಬ್ರಹ್ಮನು ತನ್ನ ಪುತ್ರನಾದ ನಾರದನಿಗೆ ಶಾಪಕೊಟ್ಟದ್ದು ಮೊದಲಾಗಿ ನನಗೂ ಮುಂದೆ ಮುಂದೆ ಕೇಳಲು ಕುತೂಹಲ ಜಾಸ್ತಿಯಾಗಿದೆ.

೨-೩. 'ಬ್ರಹ್ಮನ ಮಕ್ಕಳಲ್ಲಿ ಯಾರು ಪ್ರಜೆಗಳನ್ನು ಸೃಜಿಸಿದರು? ಯಾರು ವಿಷ್ಣುಭಕ್ತರಾಗಿ ಸಂಯಮಿಗಳಾದರು? ತಂದೆಯೊಡನೆ ವಿರೋಧಮಾಡಿಕೊಂಡ ನಾರದನಿಗೆ ತಂದೆಯ ಶಾಪದ ಪರಿಣಾಮವೇನಾಯ್ತು? ಮಗನ ಶಾಪದಿಂದ ತಂದೆಯಾದ ಬ್ರಹ್ಮನಿಗೇನಾಯ್ತು' ಎಲ್ಲವನ್ನೂ ವಿಸ್ತಾರವಾಗಿ ಅರುಹು.

॥ ಸೌತಿರುವಾಚ ॥

ಹಂಸೋ ಯತಿಶ್ಚಾರಣಿಶ್ಚ ವೋಢುಃ ಪಂಚಶಿಖಸ್ತಥಾ ।
ಅಪಾಂತರತಮಾಶ್ಚೈವ ಸನಕಾದ್ಯಾಶ್ಚ ಶೌನಕ ॥ ೪ ॥

ಏತೈರ್ವಿನಾನ್ಯೇ ಬಹವೋ ಬ್ರಹ್ಮಪುತ್ರಾಶ್ಚ ಸಂತತಂ ।
ಸಾಂಸಾರಿಕಾಃ ಪ್ರಜಾವಂತೋ ಗುರ್ವಾಜ್ಞಾಪರಿಪಾಲಕಾಃ ॥ ೫ ॥

ಅಪೂಜ್ಯಃ ಪುತ್ರಶಾಪೇನ ಸ್ವಯಂ ಬ್ರಹ್ಮಾ ಪ್ರಜಾಪತಿಃ ।
ತೇನೈವ ಬ್ರಹ್ಮಣೋ ಮಂತ್ರಂ ನೋಪಾಸಂತೇ ವಿಪಶ್ಚಿತಃ ॥ ೬ ॥

ನಾರದೋ ಗುರುಶಾಪೇನ ಗಂಧರ್ವಶ್ಚ ಬಭೂವ ಸಃ ।
ಕಥಯಾಮಿ ಸುವಿಸ್ತೀರ್ಣಂ ತದ್ವೃತ್ತಾಂತಂ ನಿಶಾಮಯ ॥ ೭ ॥

ಗಂಧರ್ವರಾಜಃ ಸರ್ವೇಷಾಂ ಗಂಧರ್ವಾಣಾಂ ವರೋ ಮಹಾನ್ ।
ಪರಮೈಶ್ವರ್ಯಸಂಯುಕ್ತಃ ಪುತ್ರಹೀನೋ ಹಿ ಕರ್ಮಣಾ ॥ ೮ ॥

ಗುರ್ವಾಜ್ಞಯಾ ಪುಷ್ಕರೇ ಸ ಪರಮೇಣ ಸಮಾಧಿನಾ ।
ತಪಶ್ಚಕಾರ ಶಂಭೋಶ್ಚ ಕೃಪಣೋ ದೀನಮಾನಸಃ ॥ ೯ ॥

೪–೫. ಸೌತಿ :—ಬ್ರಹ್ಮಪುತ್ರರಲ್ಲಿ 'ಹಂಸ, ಯತಿ, ಅರಣಿ, ವೋಢು, ಪಂಚಶಿಖ, ಅಪಾಂತರತಮ, ಸನಕ, ಸನಂದ, ಸನಾತನ, ಸನತ್ಕುಮಾರ ಇವರನ್ನು ಬಿಟ್ಟು ಉಳಿದವರೆಲ್ಲರೂ ಬ್ರಹ್ಮನ ಅಪ್ಪಣೆಯನ್ನು ಅಂಗೀಕರಿಸಿ, ಸಂಸಾರಿಗಳಾಗಿ ಪ್ರಜೆಗಳ ಉತ್ಪತ್ತಿಗೆ ಕಾರಣರಾದರು.

೬. ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನಾದರೋ, ಮಗನಾದ ನಾರದನ ಶಾಪದಿಂದ ಎಲ್ಲಿಲ್ಲೂ ಪೂಜಾರಹಿತನಾದನು. ಆದ್ದರಿಂದಲೇ ಬ್ರಾಹ್ಮಣರು ಬ್ರಹ್ಮನ ಮಂತ್ರವನ್ನು ಜಪಿಸುವುದಿಲ್ಲ. ಬ್ರಹ್ಮನನ್ನು ಪೂಜಿಸುವುದೂ ಇಲ್ಲ.

೭. ನಾರದನೂ ಕೂಡ ತಂದೆಯ ಶಾಪದಿಂದ ಗಂಧರ್ವನಾದನು. ಅವನ ವೃತ್ತಾಂತವನ್ನು ಈಗ ವಿಸ್ತಾರವಾಗಿ ವಿವರಿಸುವೆನು. ಸಾವಧಾನದಿಂದ ಕೇಳು.

೮–೯. ಗಂಧರ್ವರಿಗೆಲ್ಲಾ ಶ್ರೇಷ್ಠನಾದವನೊಬ್ಬ ಗಂಧರ್ವರಾಜನಿದ್ದನು. ಆತನಿಗೆ ಅಮಿತವಾದ ಸಂಪತ್ತು ಇದ್ದರೂ, ಜನ್ಮಾಂತರ ಪಾಪಶೇಷದಿಂದ ಮಕ್ಕಳಾಗಲಿಲ್ಲ. ಪುತ್ರಪ್ರಾಪ್ತಿಗಾಗಿ ಆತನು ಗುರುವಿನ ಅಪ್ಪಣೆ ಪಡೆದು ಪುಷ್ಕರಕ್ಷೇತ್ರದಲ್ಲಿ ಏಕಾಗ್ರತೆಯಿಂದ ತಪಸ್ಸುಮಾಡಿ ಬಹಳ ದೈನ್ಯದಿಂದ ಪರಮೇಶ್ವರನನ್ನು ಬೇಡಿದನು.

ಶಿವಸ್ಯ ಕವಚಂ ಸ್ತೋತ್ರಂ ಮಂತ್ರಂ ಚ ದ್ವಾದಶಾಕ್ಷರಂ।
ದದೌ ಗಂಧರ್ವರಾಜಾಯ ವಸಿಷ್ಠಶ್ಚ ಕೃಪಾನಿಧಿಃ ॥ ೧೦ ॥

ಜಜಾಪ ಪರಮಂ ಮಂತ್ರಂ ದಿವ್ಯಂ ವರ್ಷಶತಂ ಮುನೇ।
ಪುಷ್ಕರೇ ಸ ನಿರಾಹಾರಃ ಪುತ್ರದುಃಖೇನ ತಾಪಿತಃ ॥ ೧೧ ॥

ನಿರಾಮೋ ಶತವರ್ಷಸ್ಯ ದದರ್ಶ ಪುರತಃ ಶಿವಂ।
ಭಾಸಯಂತಂ ದಶದಿಶೋ ಜ್ವಲಂತಂ ಬ್ರಹ್ಮತೇಜಸಾ ॥ ೧೨ ॥

ಮಹತ್ತೇಜಸ್ವರೂಪಂ ಚ ಭಗವಂತಂ ಸನಾತನಂ।
ಈಷದ್ಧಾಸಂ ಪ್ರಸನ್ನಾಸ್ಯಂ ಭಕ್ತಾನುಗ್ರಹಕಾರಕಂ ॥ ೧೩ ॥

ತಪೋರೂಪಂ ತಪೋಬೀಜಂ ತಪಸ್ಯಾಫಲದಂ ಫಲಂ।
ಶರಣಾಗತಭಕ್ತಾಯ ದಾತಾರಂ ಸರ್ವಸಂಪದಾಂ ॥ ೧೪ ॥

---

೧೦. ದಯಾಮಯನಾದ ವಸಿಷ್ಠಮಹರ್ಷಿಯು, ಆತನಲ್ಲಿ ಕೃಪೆಯಿಟ್ಟು ಪರಮೇಶ್ವರನ ಕವಚ, ಸ್ತೋತ್ರ, ಮತ್ತು ದ್ವಾದಶಾಕ್ಷರಮಂತ್ರಗಳನ್ನು ಆತನಿಗೆ ಉಪದೇಶಿಸಿದನು.

೧೧. ಎಲೈ ಶೌನಕಮುನಿಯೇ, ಆ ಗಂಧರ್ವರಾಜನು ಆ ದಿವ್ಯಮಂತ್ರವನ್ನು ನೂರುವರ್ಷಗಳ ಕಾಲ ಜಪಿಸುತ್ತಾ, ಪುಷ್ಕರಕ್ಷೇತ್ರದಲ್ಲಿ ಆಹಾರವನ್ನು ಬಿಟ್ಟು ಮಕ್ಕಳಿಗಾಗಿ ತಪಿಸಿದನು.

೧೨-೧೫. ನೂರು ವರ್ಷಗಳು ಕಳೆದನಂತರ ಆ ಗಂಧರ್ವನು ಕಣ್ಣುಬಿಟ್ಟನು. ಎದುರಿನಲ್ಲಿ ಪರಶಿವನು ತನ್ನ ದಿವ್ಯ ತೇಜಸ್ಸಿನಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಾ ನಿಂತಿದ್ದಾನೆ. ಎಲ್ಲೆಲ್ಲೂ ಆತನ ತೇಜಸ್ಸು ತುಂಬಿದೆ. ಮುಖವು ನಸುನಗೆಯಿಂದ ನಲಿಯುತ್ತಿದೆ. ಕೈಯಲ್ಲಿ ಅಭಯಮುದ್ರೆಯಿದೆ. ತಪೋರೂಪನೂ ಅವನೇ. ತಪಸ್ಸಿನ ಫಲದಾತನೂ ಆತನೇ. ಶರಣಾಗತನಾದ ಭಕ್ತನಿಗೆ ಬೇಡಿದ ಇಷ್ಟಾರ್ಥವನ್ನು ಕೊಡಬಲ್ಲ ಶಕ್ತನೂ ಅವನೇ. ಆ ಪರಶಿವನು ಕೈಯಲ್ಲಿ ತ್ರಿಶೂಲ, ಪಟ್ಟಿಶ ಮುಂತಾದ

ತ್ರಿಶೂಲಪಟ್ಟಿಶಧರಂ ವೃಷಭಸ್ಥಂ ದಿಗಂಬರಂ ।
ಶುದ್ಧ ಸ್ಫಟಿಕಸಂಕಾಶಂ ತ್ರಿನೇತ್ರಂ ಚಂದ್ರಶೇಖರಂ ॥ ೧೫ ॥

ತಪ್ತಸ್ವರ್ಣಪ್ರಭಾಜುಷ್ಟಜಟಾಜಾಲಧರಂ ವರಂ ।
ನೀಲಕಂಠಂ ಚ ಸರ್ವಜ್ಞಂ ನಾಗಯಜ್ಞೋಪವೀತಕಂ ॥ ೧೬ ॥

ಸಂಹರ್ತಾರಂ ಚ ಸರ್ವೇಷಾಂ ಕಾಲಂ ಮೃತ್ಯುಂಜಯಂ ಪರಂ ।
ಗ್ರೀಷ್ಮಮಧ್ಯಾಹ್ನಮಾರ್ತಂಡಕೋಟಿಸಂಕಾಶಮೀಶ್ವರಂ ॥ ೧೭ ॥

ತತ್ವಜ್ಞಾನಪ್ರದಂ ಶಾಂತಂ ಮುಕ್ತಿದಂ ಹರಿಭಕ್ತಿದಂ ।
ದೃಷ್ಟ್ವಾ ನನಾಮ ಸಹಸಾ ಗಂಧರ್ವೋ ದಂಡವದ್ಭುವಿ ॥ ೧೮ ॥

ಆಯುಧಗಳನ್ನು ಹಿಡಿದು ದಿಗಂಬರನೂ, ವೃಷಭವಾಹನನೂ ಆಗಿದ್ದಾನೆ. ಶುದ್ಧ ಸ್ಫಟಿಕಮಣಿಯಂತೆ ಶರೀರವು ಹೊಳಪಾಗಿದೆ. ಮುಖದಲ್ಲಿ ಮೂರು ಕಣ್ಣುಗಳಿವೆ. ತಲೆಯಲ್ಲಿ ತಾಪಹಾರಕನಾದ ತಾರಾಪತಿ (ಚಂದ್ರ)ಯಿದ್ದಾನೆ.

೧೬-೧೮. ಪುಟಕ್ಕೆ ಹಾಕಿದ ಚಿನ್ನದಂತೆ ಹೊಂಬಣ್ಣವಾದ ಜಟೆಯಿಂದ ಶಿವನ ಶೀರ್ಷವು (ತಲೆ) ಭೂಷಿತವಾಗಿದೆ. ಕಂಠದಲ್ಲಿ ವಿಷಪಾನಮಾಡಿದ ಗುರುತು ಕಪ್ಪಗಿದೆ. ಹಾವನ್ನೇ ಜನಿವಾರಮಾಡಿಕೊಂಡಿದ್ದಾನೆ. ಸಕಲ ಜಗತ್ತನ್ನೂ ಸಂಹರಿಸ ಬಲ್ಲ ಕಾಲಸ್ವರೂಪನಾದರೂ ತಾನು ಮಾತ್ರ ಮೃತ್ಯುವಿಗೆ ಸಿಲುಕದ ಆತನು ಗ್ರೀಷ್ಮ ಋತುವಿನ ಮಧ್ಯಾಹ್ನದಲ್ಲಿ ಏಕಕಾಲದಲ್ಲಿ ಪ್ರಕಾಶಿಸುವ ಕೋಟಿಸೂರ್ಯರ ತೇಜಸ್ಸಿಗೆ ಸಮನಾದ ತೇಜಸ್ವಿಯಾಗಿದ್ದಾನೆ. ನೋಡಿ, ಬೇಡಿದವರಿಗೆಲ್ಲಾ ತತ್ವಜ್ಞಾನವನ್ನೂ, ಹರಿಭಕ್ತಿಯನ್ನೂ, ಕೊನೆಗೆ ಮುಕ್ತಿಯನ್ನೂ ಕೊಡಬಲ್ಲ ಶಕ್ತನವನು. ಇಂಥ ಪರಶಿವನನ್ನು ದರ್ಶನಮಾಡಿದ ಗಂಧರ್ವನು ಕೂಡಲೇ ಭೂಮಿಯ ಮೇಲೆ ಆತನಿಗೆ ಸಾಷ್ಟಾಂಗವೆರಗಿದನು.

ವಸಿಷ್ಠದತ್ತಸ್ತೋತ್ರೇಣ ತುಷ್ಟಾವ ಪರಮೇಶ್ವರಂ ।
ವರಂ ವೃಣುಷ್ವೇತಿ ಶಿವಸ್ತಮುವಾಚ ಕೃಪಾನಿಧಿಃ ॥
ಸ ಯಯಾಚೇ ಹರೇರ್ಭಕ್ತಂ ಪುತ್ರಂ ಪರಮವೈಷ್ಣವಂ ॥ ೧೯ ॥

ಗಂಧರ್ವಸ್ಯ ವಚಃ ಶ್ರುತ್ವಾ ಜಹಾಸೇಚ್ಚಂದ್ರಶೇಖರಃ ।
ಉವಾಚ ದೀನಂ ದೀನೇಶೋ ದೀನಬಂಧುಃ ಸನಾತನಂ ॥ ೨೦ ॥

॥ ಶ್ರೀ ಮಹಾದೇವ ಉವಾಚ ॥

ಕೃತಾರ್ಥಸ್ತ್ವಂ ವರಾದೇಕಾದನ್ಯಚ್ಚ ಕ್ವಿತೆಚರ್ವಣಂ ।
ಗಂಧರ್ವರಾಜ ವೃಣುಷೇ ಕೋ ವಾ ತೃಪ್ತೋಽತಿಮಂಗಲೇ ॥ ೨೧ ॥

ಯಸ್ಯ ಭಕ್ತಿರ್ಹರೌ ವತ್ಸ ಸುದೃಢಾ ಸರ್ವಮಂಗಲಾ ।
ಸ ಸಮರ್ಥಃ ಸರ್ವವಿಶ್ವಂ ಪಾತುಂ ಕರ್ತುಂ ಚ ಲೀಲಯಾ ॥ ೨೨ ॥

---

೧೯. ಅನಂತರ ವಸಿಷ್ಠಮಹರ್ಷಿಯು ಉಪದೇಶಿಸಿದ ಸ್ತೋತ್ರದಿಂದ ಪರಮೇಶ್ವರನನ್ನು ಸ್ತುತಿಸಿ ತೃಪ್ತಿಗೊಳಿಸಿದನು. ದಯಾಮಯನಾದ ಪರಶಿವನೂ ಕೂಡ ತೃಪ್ತನಾಗಿ ‘ ನಿನಗೆ ಬೇಕಾದ ವರವನ್ನು ಬೇಡೆ'ಂದನು. ಆಗ ಗಂಧರ್ವ ರಾಜನೂ ಪರಮವಿಷ್ಣುಭಕ್ತನಾದ ಪುತ್ರನೊಬ್ಬನನ್ನು ಬೇಡಿದನು.

೨೦. ಗಂಧರ್ವನ ನುಡಿಯನ್ನು ಕೇಳಿದ ಚಂದ್ರಶೇಖರನಿಗೆ (ಶಿವನಿಗೆ) ನಗು ಬಂದಿತು. ದೀನಬಂಧುವಾದಾತನು ದೀನನಾದ ಗಂಧರ್ವನನ್ನು ಕುರಿತು ಕೆಲವು ಹಿತವಚನಗಳನ್ನಾಡಿದನು.

೨೧. ಮಹಾದೇವ :—ಅಯ್ಯಾ, ಗಂಧರ್ವರಾಜನೇ, ಎಲ್ಲ ಇಷ್ಟಾರ್ಥಗಳೂ ಪರಮಾತ್ಮನ ದಾಸನಾದ ಪುತ್ರನೊಬ್ಬನಿಂದಲೇ ಸಿದ್ಧಿಸಿ, ಕೃತಾರ್ಥನಾಗಬಹುದೆಂದು ಬಯಸಿದೆಯಲ್ಲವೆ ? ಪರಮ ಮಂಗಳಕರವಾದ ಪರಮಾತ್ಮನ ದಾಸ್ಯವನ್ನು ಯಾರು ತಾನೇ ಬಿಡಲು ಸಾಧ್ಯ ?

೨೨. ಯಾರಿಗೆ ಶ್ರೀಕೃಷ್ಣನಲ್ಲಿ ಅಚಲವೂ, ಮಂಗಳಜನಕವೂ ಆದ ಭಕ್ತಿ ಯುಂಟೋ ಆತನು ಸಮಸ್ತ ಪ್ರಪಂಚವನ್ನೂ ಸುಲಭವಾಗಿ ಸೃಜಿಸಿ ಸುಖಿಸಬಲ್ಲ ಶಕ್ತನಾಗುವನು.

ಆತ್ಮನಃ ಕುಲಕೋಟಿಂ ಚ ಶತಂ ಮಾತಾಮಹಸ್ಯ ಚ ।
ಪುರುಷಾಣಾಂ ಸಮುದ್ಧೃತ್ಯ ಗೋಲೋಕಂ ಯಾತಿ ನಿಶ್ಚಿತಂ ॥ ೨೩ ॥

ತ್ರಿವಿಧಾನಿ ಚ ಪಾಪಾನಿ ಕೋಟಿಜನ್ಮಾರ್ಜಿತಾನಿ ಚ ।
ನಿಹತ್ಯ ಪುಣ್ಯಭೋಗಂ ಚ ಹರಿದಾಸ್ಯಂ ಲಭೇದ್ಧ್ರುವಂ ॥ ೨೪ ॥

ತಾವತ್ಪತ್ನೀ ಸುತಸ್ತಾವತ್ತಾವದೈಶ್ವರ್ಯಮೀಪ್ಸಿತಂ ।
ಸುಖಂ ದುಃಖಂ ನೃಣಾಂ ತಾವದ್ಯಾವತ್ಕೃಷ್ಣೇ ನ ಮಾನಸಂ ॥ ೨೫ ॥

ಕೃಷ್ಣೇ ಮನಸಿ ಸಂಜಾತೇ ಭಕ್ತಿಖಡ್ಗೋ ದುರತ್ಯಯಃ ।
ನರಾಣಾಂ ಕಾಮವೃಕ್ಷಾಣಾಂ ಮೂಲಚ್ಛೇದಂ ಕರೋತ್ಯಹೋ ॥ ೨೬ ॥

---

೨೩. ತನ್ನ ಮತ್ತು ತನ್ನ ಮಾತಾಮಹನ ಕುಲದಲ್ಲಿ ಜನಿಸಿದ ಕೋಟಿಪುರುಷರನ್ನು ನರಕದಿಂದ ಪಾರುಗಾಣಿಸಿ ವಿಷ್ಣುಭಕ್ತನು ಗೋಲೋಕಕ್ಕೆ ಹೋಗಿ ಸೇರುವನು. ಇದು ನಿಶ್ಚಯವು.

೨೪. ಕೋಟಿಜನ್ಮಗಳಿಂದ ಸಂಗ್ರಹಿಸಿಕೊಂಡಿರುವ ಸಂಚಿತ, ಪ್ರಾರಬ್ಧ ಮತ್ತು ಕ್ರಿಯಮಾಣರೂಪವಾದ ಮೂರುವಿಧ ಪಾಪಗಳನ್ನೂ ಪರಿಹರಿಸಿಕೊಂಡು, ಪುಣ್ಯಕರ್ಮದ ಫಲಭೋಗವನ್ನೂ ಬಿಟ್ಟು ಶಾಶ್ವತವಾದ ವಿಷ್ಣುದಾಸ್ಯವನ್ನು ಹೊಂದುವನು.

೨೫. ಕೃಷ್ಣಪರಮಾತ್ಮನಲ್ಲಿ ಭಕ್ತಿಯು ಜನಿಸುವವರೆಗೆ ಪತ್ನೀಪುತ್ರರೂ, ಅಷ್ಟೈಶ್ವರ್ಯವೂ, ಸುಖದುಃಖಗಳೂ ಮನುಜನಿಗೆ ಬೇಕಾಗಿರುವುವು. ಹರಿದಾಸನಿಗೆ ಇವು ಯಾವೂ ಬೇಕಿಲ್ಲ.

೨೬. ಕೃಷ್ಣಭಕ್ತಿಯೆಂಬ ತಡೆಯಿಲ್ಲದ ಕತ್ತಿಯು ಭಕ್ತನ ಪ್ರಾರಬ್ಧಕರ್ಮವೆಂಬ ಮರದ ಬುಡವನ್ನು ಕತ್ತರಿಸಿ ಅವನನ್ನು ಪುನರ್ಜನ್ಮರಹಿತನನ್ನಾಗಿ ಮಾಡಬಲ್ಲದು.

ಭವೇದ್ಯೇಷಾಂ ಸುಕೃತಿನಾಂ ಪುತ್ರಾಃ ಪರಮವೈಷ್ಣವಾಃ ।
ಕುಲಕೋಟಿಂ ಚ ತೇಷಾಂ ತೇ ಉದ್ಧರಂತ್ಯೇವ ಲೀಲಯಾ ॥ ೨೭ ॥

ಚರಿತಾರ್ಥಃ ಪುಮಾನೇಕೋ ದ್ವಾರಮಿಚ್ಛುರ್ವರಾದಹೋ ।
ಕಿಂ ವರೇಣ ದ್ವಿತೀಯೇನ ಪುಂಸಾಂ ತೃಪ್ತಿರ್ನ ಮಂಗಲೇ ॥ ೨೮ ॥

ಧನಂ ಸಂಚಿತಮಸ್ಮಾಕಂ ವೈಷ್ಣವಾನಾಂ ಸುದುರ್ಲಭಂ ।
ಶ್ರೀಕೃಷ್ಣೇ ಭಕ್ತಿದಾಸ್ಯಂ ಚ ನ ವಯಂ ದಾತುಮುತ್ಸುಕಾಃ ॥ ೨೯ ॥

ವರಯಾನ್ಯಂ ವರಂ ವತ್ಸ ಯತ್ತೇ ಮನಸಿ ವಾಂಛಿತಂ ।
ಇಂದ್ರತ್ವಮಮರತ್ವಂ ವಾ ಬ್ರಹ್ಮತ್ವಂ ಲಭ ದುರ್ಲಭಂ ॥ ೩೦ ॥

---

೨೭. ಜನ್ಮಾಂತರದಲ್ಲಿ ಪುಣ್ಯಕರ್ಮವನ್ನಾಚರಿಸಿದವರಿಗೆ ವಿಷ್ಣುಭಕ್ತರಾದ ಗಂಡುಮಕ್ಕಳು ಜನಿಸಿ, ಅವರ ಕುಲಕೋಟಿಯನ್ನು ಪಾಪಕೂಪದಿಂದ ಸುಲಭವಾಗಿ ಉದ್ಧರಿಸುವರು.

೨೮. ವಿಷ್ಣುದಾಸ್ಯವನ್ನೀಯುವ ವರದಿಂದ ತನ್ನ ಸ್ವಾರ್ಥವನ್ನು ಪೂರ್ತಿಗೊಳಿಸಿಕೊಳ್ಳುವ ಮನುಜನೇ ಕೃತಕೃತ್ಯನು. ಮಂಗಳಕರವಾದ ಈ ವರದಿಂದ ಯಾರು ತೃಪ್ತರಾಗುವುದಿಲ್ಲವೋ, ಅವರಿಗೆ ಬೇರೆ ವರದಿಂದಾಗುವ ಪ್ರಯೋಜನವೇನು ?

೨೯. ವಿಷ್ಣುಭಕ್ತರೆಲ್ಲರಿಗೂ ಸುಲಭವಾಗಿ ಲಭಿಸದ ಶ್ರೀಕೃಷ್ಣಪರಮಾತ್ಮನ ಭಕ್ತಿ, ದಾಸ್ಯಗಳೆಂಬ ಸಂಪತ್ತು ನನಗೆ ಲಭಿಸಿದೆ. ಹೀಗಿರುವಾಗ ಅದನ್ನು ನಿನಗೆ ಬಿಟ್ಟುಕೊಡುವುದು ಯಾವ ನ್ಯಾಯ ? ನಾನು ಕೊಡಲಾರೆ ?

೩೦. ಆದ್ದರಿಂದ ಇದೊಂದು ವರವನ್ನುಳಿದು ನಿನಗೆ ಬೇಕಾದ ವರಗಳನ್ನು ಕೇಳಿಕೋ. ಇಂದ್ರಪದವಿಯನ್ನಾಗಲೀ, ಅಮರಪದವಿಯನ್ನಾಗಲೀ ಅಥವಾ ದುರ್ಲಭವಾದ ಬ್ರಹ್ಮಪದವಿಯನ್ನೇ ಬೇಕಾದರೂ ನಿನಗೆ ನಾನು ಕೊಡಬಲ್ಲೆನು.

ಸರ್ವಸಿದ್ಧಿಂ ಮಹಾಯೋಗಂ ಜ್ಞಾನಂ ಮೃತ್ಯುಜಯಾದಿಕಂ ।
ಸುಖೇನ ಸರ್ವಂ ದಾಸ್ಯಾಮಿ ಹರಿದಾಸ್ಯಂ ತ್ಯಜ ಧ್ರುವಂ ॥ ೩೧ ॥

ಶಂಕರಸ್ಯ ವಚಃ ಶ್ರುತ್ವಾ ಶುಷ್ಕಕಂಠೋಷ್ಠತಾಲುಕಃ ।
ಉವಾಚ ದೀನೋ ದೀನೇಶಂ ದಾತಾರಂ ಸರ್ವಸಂಪದಾಂ ॥ ೩೨ ॥

॥ ಗಂಧರ್ವ ಉವಾಚ ॥

ಯತ್ಪಕ್ಷ್ಮಚಾಲನೇನೈವ ಬ್ರಹ್ಮಣಃ ಪತನಂ ಭವೇತ್ ।
ತದ್ಬ್ರಹ್ಮತ್ವಂ ಸ್ವಪ್ನತುಲ್ಯಂ ಕೃಷ್ಣಭಕ್ತೋ ನ ಚೇಚ್ಛತಿ ॥ ೩೩ ॥

ಇಂದ್ರತ್ವಮಮರತ್ವಂ ವಾ ಸಿದ್ಧಿಯೋಗಾದಿಕಂ ಶಿವ ।
ಜ್ಞಾನಂ ಮೃತ್ಯುಜಯಾದ್ಯಂ ವಾ ನ ಹಿ ಭಕ್ತಸ್ಯ ವಾಂಛಿತಂ ॥ ೩೪ ॥

---

೩೧. ನೀನು ಬಯಸಿದುದು ಕೈಗೂಡುವ ಶಕ್ತಿಯನ್ನೂ, ದಿವ್ಯಜ್ಞಾನವನ್ನೂ ಕಡೆಗೆ ಮೃತ್ಯುವನ್ನೇ ಜಯಿಸುವ ಶಕ್ತಿಯನ್ನೂ ನಿನಗೆ ಸುಖವಾಗಿ ಕೊಡಬಲ್ಲೆನು. ಆದರೆ ವಿಷ್ಣುದಾಸ್ಯವೊಂದನ್ನು ಮಾತ್ರ ಬೇಡುವುದನ್ನು ಬಿಡು.

೩೨. ಪರಶಿವನ ಮಾತನ್ನು ಕೇಳುತಿದ್ದಂತೆಯೇ ಗಂಧರ್ವರಾಜನಿಗೆ ತುಟಿ, ಗಂಟಲುಗಳೆಲ್ಲಾ ಒಣಗಿದುವು. ಸರ್ವಸಂಪತ್ತನ್ನೂ ಕೊಡಲು ಶಕ್ತನಾದ ಶಂಕರನನ್ನು ಕುರಿತು ಆತನು ಬಹಳ ದೈನ್ಯದಿಂದ ಮತ್ತೆ ಕೆಲವು ಮಾತುಗಳನ್ನಾಡಿದನು.

೩೩. ಗಂಧರ್ವ:— ಯಾವ ಕೃಷ್ಣಪರಮಾತ್ಮನ ಕಣ್ಣುಸನ್ನೆಯಿಂದ ಮಾತ್ರವೇ ಬ್ರಹ್ಮನ ನಾಶವು ಸಂಭವಿಸುವಾಗ, ಸ್ವಪ್ನದಲ್ಲಿ ಕಾಣುವ ವಸ್ತುಗಳಂತೆ ಚಂಚಲವಾದ ಬ್ರಹ್ಮಪದವಿಯನ್ನು ಕೃಷ್ಣಭಕ್ತನು ಎಂದಿಗೂ ಬಯಸುವುದಿಲ್ಲ.

೩೪. ಹೀಗಿರುವಾಗ ಇನ್ನುಳಿದ ಇಂದ್ರಪದವಿಯನ್ನಾಗಲೀ, ಅಮರಪದವಿಯನ್ನಾಗಲೀ, ಯೋಗಸಿದ್ಧಿ, ದಿವ್ಯಜ್ಞಾನ, ಮೃತ್ಯುವನ್ನು ಜಯಿಸುವ ಶಕ್ತಿ, ಮುಂತಾದುವುಗಳನ್ನಾಗಲೀ, ಪರಮಾತ್ಮನ ಭಕ್ತನು ಎಂದೆಂದಿಗೂ ಬಯಸನು.

ಸಾಲೋಕ್ಯಸಾರ್ಷ್ಟಿಸಾಮೀಪ್ಯಸಾಯುಜ್ಯಂ ಶ್ರೀಹರೇರಪಿ ।
ತತ್ರ ನಿರ್ವಾಣಮೋಕ್ಷಂ ಚ ನ ಹಿ ವಾಂಛಂತಿ ವೈಷ್ಣವಾಃ　　॥ ೩೫ ॥

ಶಶ್ವತ್ತತ್ರ ದೃಢಾ ಭಕ್ತಿರ್ಹರಿದಾಸ್ಯಂ ಸುದುರ್ಲಭಂ ।
ಸ್ವಪ್ನೇ ಜಾಗರಣೇ ಭಕ್ತ್ಯಾ ವಾಂಛಂತ್ಯೇವಂ ವರಂ ವರಂ　　॥ ೩೬ ॥

ತದ್ದಾಸ್ಯಂ ವೈಷ್ಣವಸುತಂ ದೇಹಿ ಕಲ್ಪತರೋ ವರಂ ।
ತ್ವಾಂ ಪ್ರಾಪ್ಯ ಲಭತೇ ತುಷ್ಟಂ ವರಂ ಸರ್ವವರೋಽಪರಃ　　॥ ೩೭ ॥

ನ ದಾಸ್ಯಸೀದಂ ಚೇಚ್ಛಂಭೋ ವರಂ ದುಷ್ಕೃತಿನಂ ಚ ಮಾಂ ।
ಕೃತ್ವಾ ಹಿ ಸ್ವಶಿರಚ್ಛೇದಂ ಪ್ರದಾಸ್ಯಾಮಿ ಹುತಾಶನೇ　　॥ ೩೮ ॥

೩೫. ವಿಷ್ಣುಭಕ್ತರಿಗೆ ಸಾಲೋಕ್ಯ, ಸಾರ್ಷ್ಟಿ, ಸಾಮೀಪ್ಯ, ಸಾಯುಜ್ಯ, ನಿರ್ವಾಣವೆಂಬ ಐದು ವಿಧವಾದ ಮೋಕ್ಷಗಳಲ್ಲೂ ಬಯಕೆ ಇರುವುದಿಲ್ಲ.

೩೬. ಜಾಗ್ರದವಸ್ಥೆಯಲ್ಲೂ, ಸ್ವಪ್ನಾವಸ್ಥೆಯಲ್ಲೂ, ಪರಮಾತ್ಮನಲ್ಲಿ ದೃಢವಾದ ಭಕ್ತಿಯನ್ನೂ, ಅನವರತವಾದ ದಾಸ್ಯವನ್ನೂ ಬೇಡುವುದೇ ಭಕ್ತರ ಅಭಿಲಾಷೆ.

೩೭. ಭಕ್ತರಿಗೆ ಕಲ್ಪವೃಕ್ಷದಂತೆ ಬೇಡಿದ್ದನ್ನು ನೀಡುವ ಎಲೈ ಪರಶಿವನೇ! ಆದುದರಿಂದ ವಿಷ್ಣುಭಕ್ತನೂ, ವಿಷ್ಣುದಾಸನೂ ಆದ ಮಗನೊಬ್ಬನನ್ನು ನನಗೆ ಕರುಣಿಸು. ಪ್ರತಿಯೊಬ್ಬ ಮನುಜನೂ, ನಿನ್ನನ್ನು ತುಷ್ಟಿಪಡಿಸಿ ತಾನು ಬಯಸುವ ವರವನ್ನು ನಿನ್ನಿಂದ ಪಡೆದು ಹಿಂತಿರುಗುವನು.

೩೮ ಶಂಕರನೇ! ಹೆಚ್ಚು ಹೇಳುವುದರಿಂದೇನು? ಈ ವರವನ್ನು ನನಗೆ ನೀನು ನೀಡದಿದ್ದರೆ ಪಾಪಿಯಾದ ನನ್ನ ತಲೆಯನ್ನು ಕತ್ತರಿಸಿ ಅಗ್ನಿದೇವನಿಗೆ ಸಮರ್ಪಿಸುವೆನು.

ಗಂಧರ್ವವಚನಂ ಶ್ರುತ್ವಾ ತಮುವಾಚ ಕೃಪಾನಿಧಿಃ ।
ಭಕ್ತಂ ದೀನಂ ಚ ಭಕ್ತೇಶೋ ಭಕ್ತಾನುಗ್ರಹಕಾರಕಃ ॥ ೩೯ ॥

॥ ಶ್ರೀ ಶಂಕರ ಉವಾಚ ॥

ಹರಿಭಕ್ತಂ ಹರೇರ್ದಾಸಂ ಪುತ್ರಂ ಪರಮವೈಷ್ಣವಂ ।
ಚಿರಾಯುಷಂ ಚ ಗುಣಿನಂ ಶಶ್ವತ್ಸುಸ್ಥಿರಯೌವನಂ ॥ ೪೦ ॥

ಜ್ಞಾನಿನಂ ಸುಂದರವರಂ ಗುರುಭಕ್ತಂ ಜಿತೇಂದ್ರಿಯಂ ।
ಗಂಧರ್ವರಾಜಪ್ರವರಂ ಲಭೇಮಂ ವರಂ ಮಾ ಶುಚಃ ॥ ೪೧ ॥

ಇತ್ಯುಕ್ತ್ವಾ ಶಂಕರಸ್ತಸ್ಮಾಜ್ಜಗಾಮ ಸ್ವಾಲಯಂ ಮುನೇ ।
ಗಂಧರ್ವರಾಜಸ್ಸಂತುಷ್ಟ ಆಜಗಾಮ ಸ್ವಮಂದಿರಂ ॥ ೪೨ ॥

---

೩೯. ದಯಾಮಯನೂ, ಭಕ್ತಾನುಗ್ರಹದಾಯಕನೂ, ಆದ ಪರಶಿವನು ದೀನನಾದ ಗಂಧರ್ವನ ದೀನ ನುಡಿಗಳನ್ನು ಕೇಳಿ ಕನಿಕರಗೊಂಡು ಹೀಗೆ ನುಡಿದನು.

೪೦–೪೧. ಶಂಕರ:—ಗಂಧರ್ವರಾಜನೇ! ನಿನ್ನ ಏಕನಿಷ್ಠೆಗೆ ಮೆಚ್ಚಿದೆನು. ನೀನು ಬೇಡಿದಂತೆ, ಹರಿಭಕ್ತಿಯಲ್ಲೂ, ದಾಸ್ಯದಲ್ಲೂ ನಿರತನಾದ ಪರಮವೈಷ್ಣವನು ನಿನಗೆ ಪುತ್ರನಾಗಿ ಜನಿಸುವನು. ಅವನು ಗುಣವಂತನೂ, ಯುವಕನೂ, ಸುಂದರನೂ ಆಗಿ ಚಿರಕಾಲ ಬಾಳುವನು. ಅವನು ಗುರುಭಕ್ತನೆನಿಸಿಕೊಂಡು ಇಂದ್ರಿಯಗಳನ್ನು ನಿಗ್ರಹಿಸಿ ದಿವ್ಯಜ್ಞಾನವನ್ನೂ ಸಂಪಾದಿಸುವನು. ನಿನ್ನ ಇಷ್ಟಾರ್ಥವು ಕೈಗೂಡುವುದು. ನೀನಿನ್ನು ವ್ಯಥೆಪಡದೆ ಹೋಗು.

೪೨. ಈ ಮಾತುಗಳನ್ನಾಡಿ ಶಂಕರನು ಅಲ್ಲಿಂದ ತನ್ನ ವಾಸಸ್ಥಾನಕ್ಕೆ ಹಿಂತಿರುಗಿದನು. ತೃಪ್ತನಾದ ಗಂಧರ್ವರೊಡೆಯನೂ ತನ್ನ ಮನೆಗೆ ಬಂದು ಸೇರಿದನು.

ಪ್ರಫುಲ್ಲ ಮಾನಸಾಃ ಸರ್ವೇ ಮಾನವಾಃ ಸಿದ್ಧಕರ್ಮಣಃ ।
ನಾರದಸ್ತಸ್ಯ ಭಾರ್ಯಾಯಾಂ ಲೇಭೇ ಜನ್ಮ ಚ ಭಾರತೇ ॥ ೪೩ ॥

ಸುಷಾವ ಪುತ್ರಂ ಸಾ ವೃದ್ಧಾ ಪರ್ವತೇ ಗಂಧಮಾದನೇ ।
ಗುರುರ್ವಸಿಷ್ಠೋ ಭಗವಾನ್ನಾಮ ಚಕ್ರೇ ಯಥೋಚಿತಂ ॥ ೪೪ ॥

ಬಾಲಕಸ್ಯ ಚ ತಸ್ಯೈವ ಮಂಗಲಂ ಮಂಗಲೇ ದಿನೇ ।
ಉಪಶಬ್ದೋಽಧಿಕಾರ್ಥಶ್ಚ ಪೂಜ್ಯೇ ಚ ಬರ್ಹಣಃ ಪುಮಾನ್ ॥
ಪೂಜ್ಯಾನಾಮಧಿಕೋ ಬಾಲಸ್ತೇನೋಪಬರ್ಹಣಾಭಿಧಃ ॥ ೪೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಸೌತಿ ಶೌನಕ ಸಂವಾದೇ
ಬ್ರಹ್ಮಖಂಡೇ ನಾರದ ಜನ್ಮಕಥನಂ ನಾಮ
ದ್ವಾದಶೋಽಧ್ಯಾಯಃ

---

೪೩. ಇಷ್ಟಾರ್ಥವು ಕೈಗೂಡಿದ ಮೇಲೆ ಪ್ರತಿಯೊಬ್ಬ ಮನುಜನೂ, ಸಂತೋಷದಿಂದಿರುವುದು ಎಲ್ಲರಿಗೂ ಸಹಜ. ಅಂತೆಯೇ ತುಷ್ಟನಾದ ಗಂಧರ್ವರಾಜನ ಪತ್ನಿಯಲ್ಲಿ ಪುಣ್ಯಕ್ಷೇತ್ರವಾದ ಭರತಖಂಡದಲ್ಲಿ ನಾರದನ ಜನನವಾಯಿತು.

೪೪. ಗಂಧರ್ವರಾಜನ ವೃದ್ಧಳಾದ ಗೃಹಿಣಿಯು, ಗಂಧಮಾದನಪರ್ವತದಲ್ಲಿ ಪುತ್ರನಿಗೆ ಜನ್ಮವನ್ನು ಕೊಟ್ಟಳು. ಅವರ ಗುರುವಾದ ವಸಿಷ್ಠನು ಬಾಲಕನಿಗೆ ಉಚಿತವಾದ ನಾಮಕರಣಮಾಡಿದನು.

೪೫. ವಸಿಷ್ಠನು ಮಂಗಳಕರವಾದ ದಿನದಲ್ಲಿ ಆ ಬಾಲಕನಿಗೆ ಉಪಬರ್ಹಣನೆಂಬ ಮಂಗಳಾಭಿಧಾನ ಮಾಡಿದನು. 'ಉಪ' ಎಂದರೆ ಅಧಿಕವೆಂದೂ, 'ಬರ್ಹಣ' ಎಂದರೆ ಪೂಜ್ಯನೆಂದೂ, ಪೂಜ್ಯರಿಗೆಲ್ಲಾ ಅಧಿಕನೇ ಉಪಬರ್ಹಣನೆಂದೂ ಆ ಹೆಸರಿಗೆ ಅರ್ಥವಾಗುವುದು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಸೌತಿಶೌನಕ ಸಂವಾದರೂಪವಾದ
ಬ್ರಹ್ಮಖಂಡದಲ್ಲಿ ನಾರದನ "ಜನ್ಮವೃತ್ತಾಂತ"ವನ್ನು ತಿಳಿಸುವ
ಹನ್ನೆರಡನೆಯ ಅಧ್ಯಾಯವು ಮುಗಿದುದು.

ಹನ್ನೆರಡನೆಯ ಅಧ್ಯಾಯದ ಸಾರಾಂಶವು

ಶೌನಕರು ಸೂತಪುತ್ರನನ್ನು ಕುರಿತು 'ಬ್ರಹ್ಮಪುತ್ರರಲ್ಲಿ ಸಂಸಾರಿಗಳಾದವರು ಯಾರು ಯಾರು? ನಾರದನು ಬ್ರಹ್ಮನ ಶಾಪದಿಂದ ಗಂಧರ್ವನಾಗಿ ಎಲ್ಲಿ ಜನಿಸಿದನು? ನಾರದನ ಶಾಪದಿಂದ ಬ್ರಹ್ಮನಿಗೇನಾಯ್ತು?' ಎಂದು ಕೇಳುವರು. ಸೂತಪುತ್ರರು ಆ ಪ್ರಶ್ನೆಗಳಿಗೆ ಈ ರೀತಿ ಉತ್ತರವೀಯುವರು. 'ಬ್ರಹ್ಮನ ಮಕ್ಕಳಲ್ಲಿ ಹಂಸನೇ ಮೊದಲಾದ ಹತ್ತು ಜನಗಳು ಮಾತ್ರ ಪರಮ ವೈಷ್ಣವರಾದರು. ಉಳಿದವರು ಸಂಸಾರಿಗಳಾಗಿ ಬ್ರಹ್ಮನ ಅಪ್ಪಣೆಯಂತೆ ಪ್ರಜೆಗಳನ್ನು ಸೃಜಿಸಿದರು. ಬ್ರಹ್ಮನು ನಾರದನ ಶಾಪದಿಂದ ಎಲ್ಲಿಡೆಯಲ್ಲೂ ಪೂಜೆ ಇಲ್ಲದವನಾದನು.

ಗಂಧರ್ವರಾಜನೊಬ್ಬನು ಸಂತತಿಯಿಲ್ಲದೆ ಗುರುವಾದ ವಸಿಷ್ಠನಿಂದ ಮಂತ್ರೋಪದೇಶವನ್ನು ತೆಗೆದುಕೊಂಡು ಪುಷ್ಕರಕ್ಷೇತ್ರದಲ್ಲಿ ಪರಶಿವನನ್ನು ಕುರಿತು ತಪಸ್ಸು ಮಾಡಿದನು. ನೂರುವರ್ಷಗಳ ತನಕ ಅವನ ಭಕ್ತಿಯನ್ನು ಪರೀಕ್ಷಿಸಿ ಮೆಚ್ಚಿದ ಪರಶಿವನು ಅವನ ಮುಂದೆ ಬಂದನು. ಶಂಕರನ ದಿವ್ಯರೂಪವನ್ನು ಕಂಡು, ಗಂಧರ್ವರಾಜನು ಬೆಕ್ಕಸಬೆರಗಾಗಿ, ಸಾಷ್ಟಾಂಗವೆರಗಿ, ಪರಮವೈಷ್ಣವನಾದ ಪುತ್ರನನ್ನು ಬೇಡಿದನು. ಮಹಾದೇವನಾದರೋ ಅವನ ಏಕನಿಷ್ಠೆಯನ್ನು ಪರೀಕ್ಷಿಸಲೋಸುಗ, 'ತನ್ನಲ್ಲಿರುವ ಅಚಲವಾದ ವಿಷ್ಣುಭಕ್ತಿಯನ್ನೂ, ದಾಸ್ಯವನ್ನೂ ಮತ್ತೊಬ್ಬರಿಗೆ ಕೊಡಲಾರೆನೆಂದೂ, ಆ ವರವನ್ನುಳಿದು ಬೇಕಾದ ವರವನ್ನು ಬೇಡಿದರೂ ಕೊಡುವೆ' ನೆಂದೂ ಹೇಳಿದನು. ಆದರೆ ಗಂಧರ್ವರಾಜನು ಅದೊಂದೇ ತನಗೆ ಬೇಕಾದ ವರವೆಂದೂ, ಅದನ್ನು ದಯಪಾಲಿಸದಿದ್ದರೆ ತನ್ನ ತಲೆಯನ್ನು ಕತ್ತರಿಸಿ, ಅಗ್ನಿದೇವನಿಗೆ ಅರ್ಪಣೆಮಾಡುವುದಾಗಿಯೂ, ಹೇಳಿದಾಗ ಅವನ ನಿಶ್ಚಲತೆಗೆ ಮೆಚ್ಚಿ ಪರಶಿವನು ಪರಮವೈಷ್ಣವನು ಪುತ್ರನಾಗಿ ಜನಿಸುವಂತೆ ವರವಿತ್ತನು. ಅಂತೆಯೇ ಗಂಧರ್ವರಾಜನ ವೃದ್ಧಪತ್ನಿಯಲ್ಲಿ ನಾರದನು ಜನಿಸಿ, ಗುರುವಾದ ವಸಿಷ್ಠನ ಅಪ್ಪಣೆಯಂತೆ 'ಉಪಬರ್ಹಣ'ನೆಂಬ ಹೆಸರಿನಿಂದ ಪರಮವೈಷ್ಣವನಾಗಿ ಪ್ರಖ್ಯಾತಿಗೊಂಡನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

|| ತ್ರಯೋದಶೋಽಧ್ಯಾಯಃ ||

|| ಸೌತಿರುವಾಚ ||

ಪುತ್ರೋತ್ಸವೇ ಚ ರತ್ನಾನಿ ಧನಾನಿ ವಿವಿಧಾನಿ ಚ |
ಗಂಧರ್ವರಾಜಃ ಪ್ರದದೌ ಬ್ರಾಹ್ಮಣೇಭ್ಯೋ ಮುದಾನ್ವಿತಃ || ೧ ||

ಉಪಬರ್ಹಣಸ್ತು ಕಾಲೇನ ಹರೇರ್ಮಂತ್ರಂ ಸುದುರ್ಲಭಂ |
ವಸಿಷ್ಠೇನ ತು ಸಂಪ್ರಾಪ್ಯ ಸ ಚಕ್ರೇ ದುಷ್ಕರಂ ತಪಃ || ೨ ||

ಹದಿಮೂರನೆಯ ಅಧ್ಯಾಯವು

೧. ಸೌತಿ :—ಗಂಧರ್ವರಾಜನಿಗೆ ಪರಶಿವನ ವರದಿಂದ ಪುತ್ರನು ಜನಿಸಿದಾಗ, ಅಮಿತಾನಂದಭರಿತನಾಗಿ ಬ್ರಾಹ್ಮಣರಿಗೆಲ್ಲಾ ರತ್ನಗಳನ್ನೂ, ವಿವಿಧಾಭರಣಗಳನ್ನೂ ಯಥೇಚ್ಛವಾಗಿ ದಾನಮಾಡಿದನು.

೨. ಬಾಲಕನಾದ ಉಪಬರ್ಹಣನು ದಿನೇದಿನೇ ಅಭಿವೃದ್ಧಿ ಹೊಂದಿ, ವಸಿಷ್ಠ ಮಹರ್ಷಿಯಿಂದ ಎಲ್ಲರಿಗೂ ಸುಲಭವಲ್ಲದ ವಿಷ್ಣುಮಂತ್ರೋಪದೇಶವನ್ನು ಪಡೆದು, ದಾರುಣವಾದ ತಪಸ್ಸನ್ನು ಮಾಡಿದನು.

ಏಕದಾ ಗಂಡಕೀತೀರೇ ತಂ ಚ ಸಂಪ್ರಾಪ್ತಯೌವನಂ ।
ಗಂಧರ್ವಪತ್ನ್ಯೋ ದದೃಶುರ್ಮೂರ್ಛಾಮಾಪುಶ್ಚ ತತ್ಕ್ಷಣಂ ॥ ೩ ॥

ತಾಶ್ಚ ತೀವ್ರಂ ತಪಃ ಕೃತ್ವಾ ಪ್ರಾಣಾನ್ ಸಂತ್ಯಜ್ಯ ಯೋಗತಃ ।
ಪಂಚಾಶತ್ತಾ ಬಭೂವುಶ್ಚ ಕನ್ಯಾಶ್ಚಿತ್ರರಥಸ್ಯ ಚ ॥ ೪ ॥

ಉಪಬರ್ಹಣಗಂಧರ್ವಂ ತಾಶ್ಚ ತಂ ವವ್ರಿರೇ ಪತಿಂ ।
ಮುದಾ ಮಾಲಾ ದದುಸ್ತಸ್ಮೈ ಕಾಮುಕ್ಯಃ ಪಿತುರಾಜ್ಞಯಾ ॥ ೫ ॥

ಗೃಹೀತ್ವಾ ತಾಶ್ಚ ಗಂಧರ್ವೋ ಯುವಾ ಸುಸ್ಥಿರಯೌವನಃ ।
ದಿವ್ಯಂ ತ್ರಿಲಕ್ಷವರ್ಷಂ ಚ ರೇಮೇ ರಹಸಿ ಕಾಮುಕಃ ॥ ೬ ॥

---

೩. ತಪಸ್ಸಿನ ತೇಜಸ್ಸಿನಿಂದಲೂ, ನವಯೌವನದ ಸೌಂದರ್ಯದಿಂದಲೂ, ಮನೋಹರನಾದ ಆ ಉಪಬರ್ಹಣನನ್ನು ಒಮ್ಮೆ ಗಂಡಕೀನದಿಯ ತೀರದಲ್ಲಿ ಗಂಧರ್ವಸ್ತ್ರೀಯರು ನೋಡಿ ಮೋಹಗೊಂಡರು.

೪. ಅಲ್ಲಿದ್ದ ಐವತ್ತು ಮಂದಿ ಗಂಧರ್ವಸ್ತ್ರೀಯರೂ, ತೀವ್ರವಾದ ತಪಸ್ಸು ಮಾಡಿ, ಯೋಗಶಕ್ತಿಯಿಂದ ತಮ್ಮ ಪ್ರಾಣಗಳನ್ನು ಬಿಟ್ಟು, ಗಂಧರ್ವರಾಜನಾದ ಚಿತ್ರರಥನೆಂಬೊಬ್ಬನಿಗೆ ಕನ್ಯೆಯರಾಗಿ ಜನಿಸಿದರು.

೫. ಆ ಕನ್ಯೆಯರೆಲ್ಲರೂ ಗಂಧರ್ವನಾದ ಉಪಬರ್ಹಣನನ್ನು ಪ್ರೀತಿಯಿಂದ ವರಿಸಿ, ತಂದೆಯ ಅಪ್ಪಣೆಯಂತೆ ಅವನಿಗೆ ಪುಷ್ಪಮಾಲೆಯನ್ನು ಅರ್ಪಿಸಿದರು.

೬. ನವಯುವಕನಾದ ಉಪಬರ್ಹಣನು ಆ ಐವತ್ತುಮಂದಿ ಕನ್ಯೆಯರನ್ನೂ ಸ್ವೀಕರಿಸಿ, ಮೂರುದಿವ್ಯಲಕ್ಷ ವರ್ಷಕಾಲ ಅವರೊಡನೆ ಏಕಾಂತದಲ್ಲಿ ಕಾಮುಕನಾಗಿ ಕ್ರೀಡಿಸಿದನು.

ತತೋಽಪಿ ಸುಚಿರಂ ರಾಜ್ಯಂ ಕೃತ್ವಾ ತಾಭಿಃ ಸಹಾನಿಶಂ ।
ಜಗಾಮ ಬ್ರಹ್ಮಣಃ ಸ್ಥಾನಂ ಹರಿಗಾಥಾಂ ಜಗೌ ಮುನೇ ॥ ೭ ॥

ದೃಷ್ಟ್ವಾ ಸ ರಂಭಾರಂಭೋರುವರ್ತನೇ ಕಠಿನಂ ಸ್ತನಂ ।
ಬಭೂವ ಸ್ಖಲನಂ ತಸ್ಯ ಗಂಧರ್ವಸ್ಯ ಮಹಾತ್ಮನಃ ॥ ೮ ॥

ದ್ರುತಂ ತತ್ಯಾಜ ಸಂಗೀತಂ ಮೂರ್ಛಾಂ ಪ್ರಾಪ ಸಭಾತಲೇ ।
ಉಚ್ಚೈಃ ಪ್ರಜಹಸುರ್ದೇವಾ ಬ್ರಹ್ಮಾ ಕೋಪಾಚ್ಛಶಾಪ ತಂ ॥ ೯ ॥

ವ್ರಜ ತ್ವಂ ಶೂದ್ರಯೋನಿಂ ಚ ಗಾಂಧರ್ವೀಂ ತನುಮುತ್ಸೃಜ ।
ಕಾಲೇ ವೈಷ್ಣವಸಂಸರ್ಗಾನ್ಮತ್ಪುತ್ರಸ್ತ್ವಂ ಭವಿಷ್ಯಸಿ ॥ ೧೦ ॥

---

೭. ಅನಂತರ ಅವರೊಡನೆ ಬಹುಕಾಲ ರಾಜ್ಯವನ್ನಾಳಿಕೊಂಡಿದ್ದು, ಕೊನೆಗೆ ಬ್ರಹ್ಮನ ಆಸ್ಥಾನಕ್ಕೊಮ್ಮೆ ಹೋಗಿ ವಿಷ್ಣುವಿನ ಸ್ತೋತ್ರವನ್ನು ಹಾಡಿದನು.

೮. ಗಂಧರ್ವರು ಅತಿಕಾಮುಕರು. ಅದರಲ್ಲೂ ಉಪಬರ್ಹಣನು ಕಾಮುಕಲೆಯಲ್ಲಿ ನುರಿತವನು. ಅಂದು ಬ್ರಹ್ಮನ ಆಸ್ಥಾನದಲ್ಲಿ ತ್ರಿಪುರ ಸುಂದರಿಯಾದ ರಂಭೆಯ ನಾಟ್ಯವಾಗುತ್ತಿತ್ತು. ಆಕೆಯ ಅಂಗಾಂಗಗಳ ಚಲನವಲನಗಳನ್ನು ನೋಡಿದ ಉಪಬರ್ಹಣನಿಗೆ ಮನ್ಮಥೋದ್ರೇಕವಾಗಿ ರೇತಸ್ಸು ಹೊರಬಂದಿತು.

೯. ಒಡನೆಯೇ ಹಾಡುತ್ತಿದ್ದ ವಿಷ್ಣುಗೀತೆಯನ್ನು ನಿಲ್ಲಿಸಿ, ಸಭಾಂಗಣದಲ್ಲೇ ಮೂರ್ಛೆಗೊಂಡನು. ಅಲ್ಲಿದ್ದ ದೇವತೆಗಳೆಲ್ಲರೂ ಅವನ ಸ್ಥಿತಿಯನ್ನು ನೋಡಿ ಹಾಸ್ಯಮಾಡಿದರು. ಕುಪಿತನಾದ ಬ್ರಹ್ಮನು ಅವನನ್ನು ಶಪಿಸಿದನು.

೧೦. ಬ್ರಹ್ಮ:—ನಿನ್ನ ಕಾಮುಕತೆಯ ಫಲವಾಗಿ ನೀನು ಗಂಧರ್ವನ ಶರೀರವನ್ನು ಬಿಟ್ಟು ಶೂದ್ರಯೋನಿಯಲ್ಲಿ ಜನಿಸು. ಮುಂದೆ ವಿಷ್ಣುಭಕ್ತರ ಸಹವಾಸ ಹೊಂದಿ ಮೊದಲಿನಂತೆ ನನ್ನ ಮಗನಾಗಿ ಜನಿಸುವೆ.

ವಿನಾ ವಿಪತ್ತೇರ್ಮಹಿಮಾ ಪುಂಸಾಂ ನೈವ ಭವೇತ್ಸುತ ।
ಸುಖಂ ದುಃಖಂ ಚ ಸರ್ವೇಷಾಂ ಕ್ರಮೇಣ ಪ್ರಭವೇದಿತಿ ॥ ೧೧ ॥

ಇತ್ಯೇವಮುಕ್ತ್ವಾ ಸ ವಿಧಿರಗಚ್ಛತ್ಪುಷ್ಕರಾದ್ಗೃಹಂ ।
ಉಪಬರ್ಹಣಗಂಧರ್ವಸ್ಸಜಹೌ ತಾಂ ತನುಂ ತದಾ ॥ ೧೨ ॥

ಮೂಲಾಧಾರಂ ಸ್ವಾಧಿಷ್ಠಾನಂ ಮಣಿಪೂರಮನಾಹತಂ ।
ವಿಶುದ್ಧಮಾಜ್ಞಾಖ್ಯಂ ಚೇತಿ ಭಿತ್ವಾ ಷಟ್ಚಕ್ರಮೇವ ಚ ॥ ೧೩ ॥

ಇಡಾಂ ಸುಷುಮ್ನಾಂ ಮೇಧಾಂ ಚ ಪಿಂಗಲಾಂ ಪ್ರಾಣಹಾರಿಣೀಂ ।
ಸರ್ವಜ್ಞಾನಪ್ರದಾಂ ಚೈವ ಮನಸ್ಸಂಯಮಿನೀಂ ತಥಾ ॥ ೧೪ ॥

ವಿಶುದ್ಧಾಂ ಚ ನಿರುದ್ಧಾಂ ಚ ವಾಯುಸಂಚಾರಿಣೀಂ ತಥಾ ।
ತೇಜಶ್ಶುಷ್ಕಕರೀಂ ಚೈವ ಬಲಪುಷ್ಟಿಕರೀಂ ತಥಾ ॥ ೧೫ ॥

ಬುದ್ಧಿಸಂಚಾರಿಣೀಂ ಚೈವ ಜ್ಞಾನಜೃಂಭನಕಾರಿಣೀಂ ।
ಸರ್ವಪ್ರಾಣಹರಾಂ ಚೈವ ಪುನರ್ಜೀವನಕಾರಿಣೀಂ ॥ ೧೬ ॥

---

೧೧. ವಿಪತ್ತೆಂಬುದು ಮನುಜನ ಗುಣಗಳನ್ನು ಒರೆಹಚ್ಚಿ ತೋರಿಸುವ ಒರೆಗಲ್ಲು. ವಿಪತ್ತು ಬಂದ ಹೊರತೂ ಮಾನವನು ಮಹಿಮಾವಂತನಾಗಲಾರನು. ಸುಖದುಃಖಗಳು ಚಕ್ರದಾರೆಯಂತೆ ಎಲ್ಲರಿಗೂ ಒಂದರಮೇಲೊಂದು ಸಂಭವಿಸುತ್ತಿರುವುವು.

೧೨. ಈ ಮಾತುಗಳನ್ನಾಡಿ ಬ್ರಹ್ಮದೇವನು ಸಭೆಯಿಂದ ತನ್ನ ಮಂದಿರಕ್ಕೆ ಹಿಂತಿರುಗಿದನು. ಗಂಧರ್ವನಾದ ಉಪಬರ್ಹಣನೂ ಕೂಡ ಆಗಲೇ ತನ್ನ ಗಾಂಧರ್ವ ತನುವನ್ನು ತ್ಯಜಿಸಿದನು.

೧೩–೧೮. ಪೃಷ್ಠಭಾಗದಿಂದ, ಶಿರಸ್ಸಿನವರೆಗೆ ಬೆನ್ನಿನ ಹುರಿಯಲ್ಲಿರುವ 'ಮೂಲಾಧಾರ, ಸ್ವಾದಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ' ಎಂಬ ಆರುಚಕ್ರಗಳನ್ನು ಭೇದಿಸಿಕೊಂಡು 'ಇಡಾ, ಸುಷುಮ್ನಾ, ಮೇಧಾ, ಪಿಂಗಲಾ,

ನಿತಾಃ ಷೋಡಶಧಾ ನಾಡೀರ್ಭಿತ್ವಾ ವೆ ಹಂಸಮೇವ ಚ ।
ಮನಸಾ ಸಹಿತಂ ಬ್ರಹ್ಮರಂಧ್ರಮಾನೀಯ ಯೋಗತಃ ॥ ೧೭ ॥

ಸ್ಥಿತ್ವಾ ಮುಹೂರ್ತಮಾತ್ಮಾನಮಾತ್ಮನ್ಯೇವ ಯುಯೋಜ ಹ ।
ಜಾತಿಸ್ಮರಶ್ಚ ಯೋಗೀಂದ್ರಃ ಸಂಪ್ರಾಪ ಬ್ರಹ್ಮ ಶೌನಕ ॥ ೧೮ ॥

ವೀಣಾಂ ತ್ರಿತಂತ್ರೀಂ ದುಷ್ಪ್ರಾಪ್ಯಾಂ ವಾಮಸ್ಕಂಧೇ ನಿಧಾಯ ಚ ।
ಶುದ್ಧಸ್ಫಟಿಕಮಾಲಾಂ ಚ ವಿಧೃತ್ವಾ ದಕ್ಷಿಣೇ ಕರೇ ॥ ೧೯ ॥

ಸಂಜಲ್ಪನ್ ಪರಮಂ ಬ್ರಹ್ಮ ವೇದಸಾರಂ ಪರಾತ್ಪರಂ ।
ಪರಂ ನಿಸ್ತಾರಬೀಜಂ ಚ ಕೃಷ್ಣ ಇತ್ಯಕ್ಷರದ್ವಯಂ ॥ ೨೦ ॥

ಪ್ರಾಚ್ಯಾಂ ಕೃತ್ವಾ ಶಿರಃ ಸ್ಥಾನಂ ಪಶ್ಚಿಮೇ ಚರಣದ್ವಯಂ ।
ನಿಧಾಯ ದರ್ಭಶಯನೇ ಶಯಾನಃ ಪುರುಷೋ ಯಥಾ ॥ ೨೧ ॥

ಪ್ರಾಣಹಾರಿಣೀ, ಸರ್ವಜ್ಞಾನಪ್ರದಾ, ಮನಸ್ಸಂಯಮಿನೀ, ವಿಶುದ್ಧಾ ನಿರುದ್ಧಾ, ವಾಯುಸಂಚಾರಿಣೀ, ತೇಜಃಶುಷ್ಕಕರೀ, ಬಲಪುಷ್ಟಕರೀ, ಬುದ್ಧಿಸಂಚಾರಿಣೀ, ಜ್ಞಾನಜೃಂಭನಕಾರಿಣೀ, ಸರ್ವಪ್ರಾಣಹರಾ, ಪುನರ್ಜೀವನಕಾರಿಣೀ' ಎಂಬ ಹದಿನಾರು ನಾಡಿಗಳನ್ನೂ ಉಪಸಂಹಾರಮಾಡಿಕೊಂಡು, ಯೋಗಶಕ್ತಿಯಿಂದ ಮನಸ್ಸನ್ನು ಬ್ರಹ್ಮರಂಧ್ರಕ್ಕೆ ತಂದು, ಮುಹೂರ್ತಕಾಲ ಸುಮ್ಮನಿದ್ದು ಆ ಜೀವಾತ್ಮನು ಸ್ವಸ್ವರೂಪವಾದ ಪರಮಾತ್ಮನಾದನು. ಎಲೈ ಶೌನಕನೆ , ಬ್ರಹ್ಮನ ಶಾಪದಂತೆ ಜಾತಿಸ್ಮರನಾದ ದಾಸೀಪುತ್ರನಾಗಲು ಯೋಗಿ ಶ್ರೇಷ್ಠನಾದ ಉಪಬರ್ಹಣನು ಬ್ರಹ್ಮಭೂಯನಾದನು.

೧೯-೨೧. ಉಪಬರ್ಹಣನು ಬ್ರಹ್ಮಭೂಯನಾಗುವಾಗಲೂ, ಅಕಾರ, ಉಕಾರ ಮಕಾರ ರೂಪವಾದ ತಂತ್ರೀತ್ರಯಗಳಿಂದ ಕೂಡಿದ ಓಂಕಾರಾತ್ಮಕವಾದ ವೀಣೆಯನ್ನು ವಾಮಹಸ್ತದಲ್ಲೂ, ನಾದಬ್ರಹ್ಮದ ವರ್ಣಮಾಲಾರೂಪವಾದ ಸ್ಫಟಿಕಾಕ್ಷರಮಾಲೆಯನ್ನು ದಕ್ಷಿಣ ಹಸ್ತದಲ್ಲೂ, ಧರಿಸಿ, ವೇದಸಾರವೂ, ಪರಾತ್ಪರವೂ, ಜ್ಞಾನಾಂಧಕಾರ ನಾಶಕವೂ ಆದ ಪರಬ್ರಹ್ಮವನ್ನು ಸೋಽಹಂಭಾವದಿಂದ ಜಪಿಸುತ್ತ, ಪೂರ್ವದಿಕ್ಕಿಗೆ ತಲೆಯನ್ನೂ, ಪಶ್ಚಿಮಕ್ಕೆ ಕಾಲನ್ನೂ ಇಟ್ಟು ದರ್ಭಶಯನದಲ್ಲಿ ಪವಡಿಸಿ ಜ್ಞಾನಾನಂದಮಯನಾದ ಪುರುಷನಂತಿದ್ದನು.

ಗಂಧರ್ವರಾಜಸ್ತಂ ದೃಷ್ಟ್ವಾ ಭಾರ್ಯಯಾ ಸಹ ತತ್ಕ್ಷಣಂ ।
ಯೋಗೇನ ಬ್ರಹ್ಮ ಸಂಪ್ರಾಪ ಶ್ರೀಕೃಷ್ಣಂ ಮನಸಾ ಸ್ಮರನ್ ॥ ೨೨ ॥

ಪತ್ನ್ಯಶ್ಚ ಬಾಂಧವಾಸ್ಸರ್ವೇ ವಿಲಪ್ಯರುರುದುರ್ಭೃಶಂ ।
ಜಗ್ಮುಃ ಕ್ರಮೇಣ ಶೋಕಾರ್ತಾ ಮೋಹಿತಾ ವಿಷ್ಣುಮಾಯಯಾ ॥ ೨೩ ॥

ಪಂಚಾಶದ್ಯೋಷಿತಾಂ ಮಧ್ಯೇ ಪ್ರಧಾನಾ ಮಹಿಷೀ ಚ ಯಾ ।
ಸಾಧ್ವೀ ಮಾಲಾವತೀ ನಾಮ್ನಾ ಪರಮಾ ಪ್ರೇಯಸೀ ವರಾ ॥ ೨೪ ॥

ಉಚ್ಚೈಃ ರುರೋದ ಸಾ ತೀವ್ರಂ ಕಾಂತಂ ಕೃತ್ವಾ ಚ ವಕ್ಷಸಿ ।
ಇತ್ಯುವಾಚ ಚ ಶೋಕಾರ್ತಾ ಕಾಂತಂ ಸಂಬೋಧ್ಯ ಚೈವ ಹಿ ॥ ೨೫ ॥

ಮಾಲಾವತ್ಯುವಾಚ ॥

ಹೇ ನಾಥ ರಮಣಶ್ರೇಷ್ಠ ವಿದಗ್ಧ ರಸಿಕೇಶ್ವರ ।
ದರ್ಶನಂ ದೇಹಿ ಮಾಂ ಬಂಧೋ ನಿಮಗ್ನಾಂ ಶೋಕಸಾಗರೇ ॥ ೨೬ ॥

---

೨೨. ಮಗನ ಪರಿಣಾಮವನ್ನು ನೋಡಿದ ಗಂಧರ್ವರಾಜನೂ ತನ್ನ ಪತ್ನಿಯೊಡನೇ, ಶ್ರೀಕೃಷ್ಣನನ್ನು ಮನಸ್ಸಿನಲ್ಲೇ ಧ್ಯಾನಿಸುತ್ತಾ ಯೋಗಶಕ್ತಿಯಿಂದ ಪರಬ್ರಹ್ಮಸ್ವರೂಪದಲ್ಲಿ ಸೇರಿದನು.

೨೩. ಉಪಬರ್ಹಣನ ಪತ್ನಿಯರೂ, ಬಂಧುಗಳೂ ಬಹಳವಾಗಿ ಅತ್ತು ಗೋಳಾಡಿದರು. ಕೊನೆಗೆ ಅತ್ತು ಬೇಸತ್ತು ವಿಷ್ಣುವಿನ ಮಾಯೆಗೊಳಗಾಗಿ ಪುನಃ ತಮ್ಮ ತಮ್ಮ ಮಂದಿರಕ್ಕೆ ತೆರಳಿದರು.

೨೪–೨೫. ಆತನ ಐವತ್ತು ಜನ ಪತ್ನಿಯರೊಳಗೆ ಪಟ್ಟಮಹಿಷಿಯೂ, ಪರಮ ಪತಿವ್ರತೆಯೂ, ಪ್ರೀತಿಪಾತ್ರಳೂ ಆದ ಮಾಲಾವತೀ ಎಂಬಾಕೆಯು ತನ್ನ ಪತಿಯ ದೇಹವನ್ನೂ ಎದೆಗೆ ಅಪ್ಪಿಕೊಂಡು, ಗಟ್ಟಿಯಾಗಿ ಅಳುತ್ತಾ ದುಃಖದೀನಳಾಗಿ ತನ್ನ ಪತಿ ಎಂದೇ ಆ ದೇಹವನ್ನು ಸಂಬೋಧಿಸಿ, ಕೆಲವು ಮಾತುಗಳನ್ನಾಡಿದಳು.

೨೬. ಮಾಲಾವತೀ :—' ಪತಿದೇವನೇ ! ರಸಿಕಶಿಖಾಮಣಿಯೇ ! ರತಿ ನಿಪುಣನೇ ! ನಿನ್ನನ್ನು ಅಗಲಿ ನಾನಿರಲಾರೆ. ದುಃಖಸಾಗರದಲ್ಲಿ ಮುಳುಗಿರುವ ನನಗೆ ನಿನ್ನ ದರ್ಶನವನ್ನು ಕೊಟ್ಟು ಉದ್ಧರಿಸು.

ವಿಸ್ರಂಭಕೇ ಸುವಸನೇ ರಮ್ಯೇ ಚಂದನಕಾನನೇ ।
ಪುಷ್ಪಭದ್ರಾನದೀತೀರೆ ಪುಷ್ಪೋದ್ಯಾನೇ ಮನೋಹರೇ ॥ ೨೭ ॥

ಚಂದನಾಚಲಸಾನ್ನಿಧ್ಯೇ ಚಾರುಚಂದನಕಾನನೆ ।
ಪುಷ್ಪಚಂದನತಲ್ಪೇ ಚ ಚಂದನಾನಿಲವಾಸಿತೇ ॥ ೨೮ ॥

ಗಂಧಮಾದನಶೈಲೈಕದೇಶೇ ರಮ್ಯೇ ನದೀತಟೇ ।
ಪುಂಸ್ಕೋಕಿಲನಿನಾದೇ ಚ ಮಾಲತೀಜಲಶಾಲಿನೀ ॥ ೨೯ ॥

ಶ್ರೀಶೈಲೇ ಶ್ರೀವನೇ ದಿವ್ಯೇ ಶ್ರೀನಿವಾಸನಿಷೇವಿತೇ ।
ಶ್ರೀಯುಕ್ತೇ ಶ್ರೀಪದಾಂಭೋಜ ಪೂತೇಽಚ್ಯುತಕೃತೇ ಶುಭೇ ॥ ೩೦ ॥

ಪುರಾ ಯಾ ಯಾ ಕೃತಾ ಕ್ರೀಡಾ ವಸಂತೇ ರಹಸಿ ತ್ವಯಾ ।
ಮಯಾ ಚ ದುರ್ಹೃದಾ ಸಾರ್ಧಂ ತಯಾ ವೈ ದೂಯತೇ ಮನಃ ॥ ೩೧ ॥

೨೭–೨೮. ಹಿಂದಿನ ನಮ್ಮ ವಿಹಾರಗಳನ್ನು ನೆನೆಸಿಕೊಂಡು ನನ್ನ ಮನವು ನಿನಗಾಗಿ ಕಾತರಿಸುತ್ತಿದೆ. ಒಮ್ಮೆ ವಸಂತಋತುವಿನಲ್ಲಿ ಏಕಾಂತವಾಸಕ್ಕೆ ಯೋಗ್ಯವಾದ ಪುಷ್ಪಭದ್ರಾನದಿಯ ದಡದ ಪುಷ್ಪೋದ್ಯಾನದಲ್ಲಿ, ಸುತ್ತಲಿನ ಚಂದನವೃಕ್ಷಗಳ ನಡುವೆ ಇದ್ದ ಮನೋಹರವಾದ ಮಂಟಪದಲ್ಲೂ, ಮತ್ತೊಮ್ಮೆ ಮಲಯಾಚಲದ ಚಂದನವನದಲ್ಲಿ, ಮಲಯಮಾರುತವನ್ನು ಸೇವಿಸುತ್ತಾ, ಚಂದನತಳಿರುಗಳಿಂದ ರಚಿತವಾದ ಹಾಸಿಗೆಯಲ್ಲೂ, ಮನದಣಿಯುವಂತೆ ಕ್ರೀಡಿಸಿದೆವು.

೨೯–೩೧. ಮತ್ತೊಂದು ವಸಂತಋತುವಿನಲ್ಲಿ ಗಂಧಮಾದನಪರ್ವತದಲ್ಲೊಂದು ಕಡೆ, ಮನೋಹರವಾದ ಮಾಲತೀನದಿಯ ದಡದಲ್ಲಿ ಕೋಗಿಲೆಗಳ ಇಂಚರವನ್ನಾಲಿಸುತ್ತಲೂ, ಶ್ರೀನಿವಾಸನ ವಾಸಸ್ಥಾನವಾದ ಶ್ರೀಶೈಲದ ಶ್ರೀವನದಲ್ಲೊಮ್ಮೆ ಪವಿತ್ರವಾದ ಸುಂದರ ವನಗಳ ಸೌಭಾಗ್ಯವನ್ನು ಅನುಭವಿಸುತ್ತಲೂ, ಅದೃಷ್ಟಹೀನಳಾದ ನನ್ನೊಡನೆ ನೀನು ರಮಿಸಿದುದನ್ನು ನೆನೆಸಿಕೊಂಡರೆ ನನಗಾಗುವ ವ್ಯಥೆಯನ್ನು ಹೇಳತೀರದು.

ಸುಧಾತುಲ್ಯೇನ ವಚಸಾ ಸಿಕ್ತಾಹಂ ಚ ಪುರಾತ್ವಯಾ ।
ದೂಯತೇ ಸತತಂ ತೇನ ಪರಮಾತ್ಮಾತಿದಾರುಣಂ ॥ ೩೨ ॥

ಸಾಧುನಾ ಸಹ ಸಂಸರ್ಗೋ ವೈಕುಂಠಾದಪಿ ದುರ್ಲಭಃ ।
ಅಹೋ ತತೋಽತಿ ವಿಚ್ಛೇದೋ ಮರಣಾದಪಿ ದುಷ್ಕರಃ ॥ ೩೩ ॥

ತಸ್ಮಾತ್ತೇಷಾಂ ಚ ವಿಚ್ಛೇದಃ ಸಾಧುಶೋಕಕರಃ ಪರಃ ।
ತತೋಽಪಿ ಬಂಧುವಿಚ್ಛೇದಃ ಶೋಕಃ ಪರಮದಾರುಣಃ ॥ ೩೪ ॥

ತತೋಽಪತ್ಯವಿಯೋಗೋ ಹಿ ಮರಣಾದತಿರಿಚ್ಯತೇ ।
ಸರ್ವಸ್ಮಾತ್ಪತಿಭೇದೋ ಹಿ ತತ್ಪರಂ ನಾಸ್ತಿ ಸಂಕಟಂ ॥ ೩೫ ॥

ಶಯನೇ ಭೋಜನೇ ಸ್ನಾನೇ ಸ್ವಪ್ನೇ ಜಾಗರಣೇಽಪಿ ಚ ।
ಸ್ವಾಮಿವಿಚ್ಛೇದದುಃಖಂ ಚ ನೂತನಂ ಚ ದಿನೇ ದಿನೇ ॥ ೩೬ ॥

---

೩೨. ಹಿಂದೆ ನೀನಾಡುತ್ತಿದ್ದ ಅಮೃತದಂತಹ ಚಾಟೂಕ್ತಿಗಳನ್ನು ಕೇಳಿ ನಾನು ಆನಂದಪರವಶಳಾಗುತ್ತಿದ್ದೆ. ಈಗ ಅವುಗಳನ್ನು ನೆನೆಸಿಕೊಂಡಷ್ಟೂ ನನಗೆ ಸಂಕಟವು ಇಮ್ಮಡಿಯಾಗುತ್ತಿದೆ.

೩೩. ಸತ್ಪುರುಷರ ಸಂಸರ್ಗವು ವೈಕುಂಠವಾಸಕ್ಕಿಂತ ಸುಖಕರವಾದುದು. ಅಂತೆಯೇ ಅವರ ಅಗಲಿಕೆಯು ಸಾವಿಗಿಂತಲೂ ದುಃಖಕರವಾದುದು.

೩೪–೩೫. ಸಾಧುಗಳ ಸಹವಾಸವನ್ನು ಬಿಡುವುದೇ ಕಷ್ಟ. ಅದಕ್ಕಿಂತಲೂ ನೆಂಟರಿಷ್ಟರನ್ನಗಲುವುದು ಬಹಳ ಕಷ್ಟ. ಹೊಟ್ಟೆಯಲ್ಲಿ ಹುಟ್ಟಿದ ಮಗನ ಅಗಲಿಕೆಗಿಂತಲೂ ಮರಣವೇ ಲೇಸೆನಿಸುವುದು. ಹೀಗಿರುವಾಗ ಎಲ್ಲರಿಗಿಂತಲೂ ಪ್ರೀತಿಪಾತ್ರನಾದ ಪತಿಯ ವಿರಹವನ್ನು ಸಹಿಸಿ ಬದುಕಬಲ್ಲವರಾರು ?

೩೬. ಪತಿವಿರಹದಿಂದಾಗುವ ದುಃಖವು ಮಲಗುವಾಗಲೂ, ಊಟಮಾಡುವಾಗಲೂ, ನಿದ್ರೆಯಲ್ಲೂ, ಎಚ್ಚರದಲ್ಲೂ, ಪ್ರತಿದಿನವೂ ಹೊಸಹೊಸದಾಗುವುದು.

ಸರ್ವಶೋಕಂ ವಿಸ್ಮರೇತ್ ಸ್ತ್ರೀ ಸ್ವಾಮಿಸಂಯೋಗಮಾತ್ರತಃ ।
ಬಂಧುಮನ್ಯಂ ನ ಪಶ್ಯಾಮಿ ಯಂ ದೃಷ್ಟ್ವಾ ವಿಸ್ಮರೇತ್ಪತಿಂ ॥ ೩೭ ॥

ನಾತೋ ವಿಶಿಷ್ಟಂ ಪಶ್ಯಾಮಿ ಬಾಂಧವಂ ಸ್ವಾಮಿನಾ ವಿನಾ ।
ಸಾಧ್ವೀನಾಂ ಕುಲಜಾತಾನಾಮಿತ್ಯಾಹ ಕಮಲೋದ್ಭವಃ ॥ ೩೮ ॥

ಹೇ ದಿಗೀಶಾಶ್ಚ ದಿಕ್ಪಾಲಾ ಹೇ ಧರ್ಮ ತ್ವಂ ಪ್ರಜಾಪತೇ ।
ಗಿರೀಶ ಕಮಲಾಕಾಂತ ಪತಿದಾನಂ ಚ ದೇಹಿ ಮೇ ॥ ೩೯ ॥

ಇತ್ಯುಕ್ತ್ವಾ ವಿರಹಾರ್ತಾ ಸಾ ಕನ್ಯಾ ಚಿತ್ರರಥಸ್ಯ ಚ ।
ಮೂರ್ಛಾಂ ಸಂಪ್ರಾಪ ತತ್ರೈವ ದುರ್ಗಮೇ ಗಹನೇ ವನೇ ॥ ೪೦ ॥

---

೩೭. ಹೆಂಗಸಿಗೆ ಯಾವ ದುಃಖವಿದ್ದರೂ, ಪತಿಸಂಗಮದಿಂದ ಅದು ದೂರ ವಾಗುವುದು. ಆದರೆ ಪತಿಯ ವಿರಹದುಃಖವನ್ನು ದೂರಮಾಡುವಂಥ ಆಪ್ತಬಂಧು ಗಳು ಬೇರೊಬ್ಬರಿಲ್ಲ.

೩೮. ಸತ್ಕುಲದಲ್ಲಿ ಹುಟ್ಟಿದ ಸಾಧ್ವೀಶಿರೋಮಣಿಯರಿಗೆ, ಪತಿಗಿಂತಲೂ ಪರಮಾಪ್ತನಾದ ಬಂಧುವು ಬೇರೊಬ್ಬನಿಲ್ಲವೆಂದು ಬ್ರಹ್ಮದೇವನೂ ನುಡಿದಿದ್ದಾನೆ.

೩೯. ಎಷ್ಟು ವಿಲಪಿಸಿದರೂ ತನ್ನ ಪತಿದೇವನು ಮಾತನಾಡದಿರುವುದನ್ನು ನೋಡಿ–ಮಾಲಾವತಿಯು, ಪತಿದೇವನು ಮೃತನಾಗಿರುವನೆಂದರಿತು “ ಎಲೈ ದಿಕ್ಪಾಲ ಕರೇ! ಅಯ್ಯಾ, ಧರ್ಮದೇವನೇ! ಸೃಷ್ಟಿಕರ್ತನಾದ ಪ್ರಜಾಪತಿಯೇ! ಪಾರ್ವತೀ ಪ್ರಿಯನೇ! ರಮಾಕಾಂತನೇ! ನಿಮ್ಮಲ್ಲಿ ಯಾರಾದರೂ ನನ್ನ ಪತಿಯನ್ನು ಬದುಕಿಸಿ ನನಗೆ ಪತಿದಾನ ಮಾಡಲಾರಿರಾ” ಎಂದು ಗೋಳಾಡಿದಳು.

೪೦. ಚಿತ್ರರಥನ ಪುತ್ರಿಯಾದ ಮಾಲಾವತಿಯು ಹೀಗೆ ಗೋಳಾಡುತ್ತಾ ವಿರಹತಾಪವನ್ನು ಸಹಿಸಲಾರದೆ ಭಯಂಕರವಾದ ಆ ವನದಲ್ಲಿಯೇ ಮೂರ್ಛೆ ಹೋದಳು.

ವಿಚೇತನಾ ತತ್ರ ತಸ್ಥೌ ಕಾಂತಂ ಕೃತ್ವಾ ಸ್ವವಕ್ಷಸಿ ।
ಪರಿಪೂರ್ಣಂ ದಿವಾನಕ್ತಂ ಸರ್ವೈರ್ದೇವೈಶ್ಚ ರಕ್ಷಿತಾ ॥ ೪೧ ॥

ಪ್ರಭಾತೇ ಚೇತನಾಂ ಪ್ರಾಪ್ಯ ವಿಲಲಾಪ ಭೃಶಂ ಮುಹುಃ ।
ಇತ್ಯುವಾಚ ಪುನಸ್ತತ್ರ ಹರಿಂ ಸಂಬೋಧ್ಯ ಸಾ ಸತೀ ॥ ೪೨ ॥

॥ ಮಾಲಾವತ್ಯುವಾಚ ॥

ಹೇ ಕೃಷ್ಣ ಜಗತಾಂ ನಾಥ ನಾಥ ನಾಹಂ ಜಗದ್ಬಹಿಃ ।
ತ್ವಮೇವ ಜಗತಾಂ ಪಾತಾ ಮಾಂ ನ ಪಾಸಿ ಕಥಂ ಪ್ರಭೋ ॥ ೪೩ ॥

ಅಯಂ ಭರ್ತಾಸ್ಯ ಭಾರ್ಯಾಹಂ ಮಮೇತಿ ತವ ಮಾಯಯಾ ।
ತ್ವಮೇವ ಸಂಭವೋ ಭರ್ತಾ ಸರ್ವೇಷಾಂ ಸರ್ವಕಾರಣಃ ॥ ೪೪ ॥

---

೪೧. ತನ್ನ ಪತಿದೇವನನ್ನು ಎದೆಯಲ್ಲಿಯೇ ಅಪ್ಪಿಕೊಂಡು ಒಂದು ಹಗಲೂ ಮತ್ತು ಒಂದು ರಾತ್ರಿ ಪೂರ್ಣವಾಗಿ ಮೂರ್ಛಿತಳಾಗಿ ಬಿದ್ದಿದ್ದಳು. ಅವಳ ಸುದೈವವು ಆಕೆಯ ಪ್ರಾಣಗಳನ್ನು ಕಾಪಾಡಿತು.

೪೨. ಪ್ರಾತಃಕಾಲದಲ್ಲಿ ತಂಪಾದಗಾಳಿ ಬೀಸಿ ಆಕೆಗೆ ಜ್ಞಾನೋದಯ ವಾಯಿತು. ಜತೆಯಲ್ಲೇ ದುಃಖವೂ ಉಕ್ಕಿ ಬರಲಾರಂಭಿಸಿತು. ಆಗ ಪರಮಾತ್ಮ ನನ್ನು ಕುರಿತು ಆಕೆಯು ಕೆಲವು ಮಾತಗಳನ್ನು ಆಡಿದಳು.

೪೩. ಮಾಲಾವತೀ:—ಎಲೈ, ಜಗದೊಡೆಯನಾದ ಕೃಷ್ಣಪರಮಾತ್ಮನೇ! ನಾನು ನಿನ್ನ ಜಗತ್ತಿಗೆ ಹೊರಗಿನವಳೇ? ಜಗತ್ತಿನ ಪ್ರಜೆಗಳ ಕಷ್ಟ ನಿಷ್ಠೂರಗಳನ್ನು ನಿವಾರಣೆಮಾಡುವ ನೀನು ನನ್ನ ಕಷ್ಟವನ್ನೇಕೆ ನಿವಾರಿಸಲೊಲ್ಲೆ?

೪೪. 'ಇವನು ನನ್ನ ಪತಿದೇವನು. ಇವನಿಗೆ ನಾನು ಪತ್ನಿಯು' ಎಂಬ ಈ ಅನ್ಯೋನ್ಯ ಸಂಬಂಧವನ್ನು ನಿನ್ನ ಮಾಯಾಶಕ್ತಿಯಿಂದ ನಮಗೆ ಕಲ್ಪಿಸಿರುವೆ. ಈ ಕಲ್ಪನೆಗಳಿಗೆಲ್ಲಾ ನೀನೇ ಮೂಲಕಾರಣನು.

ಗಂಧರ್ವಃ ಕರ್ಮಣಾ ಕಾಂತಃ ಕಾಂತಾಹಂ ಚಾಸ್ಯ ಕರ್ಮಣಾ ।
ಕ್ವಗತಃ ಕರ್ಮಭೋಗಾಂತೇ ಕುತ್ರ ಸಂಸ್ಥಾಪ್ಯ ಮಾಂ ಪ್ರಿಯಾಂ ॥ ೪೫ ॥

ಕೋ ವಾ ಕಸ್ಯಾಃ ಪತಿಃ ಪುತ್ರಃ ಕಾ ವಾ ಕಸ್ಯ ಪ್ರಿಯಾ ಪ್ರಭೋ ।
ಸಂಯುನಕ್ತಿ ವಿಧಾತಾ ಚ ವಿಯುನಕ್ತಿ ಚ ಕರ್ಮಣಾ ॥ ೪೬ ॥

ಸಂಯೋಗೇ ಪರಮಾನಂದಂ ವಿಯೋಗೇ ಪ್ರಾಣಸಂಕಟಂ ।
ಶಶ್ವಜ್ಜಗತಿ ಮೂರ್ಖಸ್ಯ ನಾತ್ಮಾರಾಮಸ್ಯ ನಿಶ್ಚಿತಂ ॥ ೪೭ ॥

ನಶ್ವರೋ ವಿಷಯಃ ಸತ್ಯಂ ಭುವಿ ಭೋಗಶ್ಚ ಬಾಂಧವಃ ।
ಸ್ವಯಂ ತ್ಯಕ್ತಃ ಸುಖಾಯೈವ ದುಃಖಾಯ ತ್ಯಾಜಿತಃ ಪರೈಃ ॥ ೪೮ ॥

---

೪೫. ನನ್ನ ಜನ್ಮಾಂತರದ ಕರ್ಮವಿಶೇಷದಿಂದ ಗಂಧರ್ವನು ನನಗೆ ಪತಿಯಾದನು. ನಾನೂ ಅವನ ಕರ್ಮಾನುಗುಣವಾಗಿ ಆತನ ಪತ್ನಿಯಾದೆನು. ನಮ್ಮ ನಮ್ಮ ಕರ್ಮದ ಫಲವನ್ನು ಅನುಭವಿಸಿಯಾಯಿತು. ಈಗ ಪತ್ನಿಯನ್ನೆಲ್ಲೋ ಉಳಿದು ಪತಿದೇವನೆಲ್ಲೋ ತೆರಳಿದನಲ್ಲಾ.

೪೬. ಪತಿಯಾರು? ಪುತ್ರನಾರು? ಪ್ರಿಯಳಾರು? ಯಾರು ಯಾರಿಗೆ ಯಾವ ಯಾವ ಸಂಬಂಧ! ಬ್ರಹ್ಮದೇವನು ಕರ್ಮಾನುಗುಣವಾಗಿ ಇವರನ್ನು ಒಂದೆಡೆ ಸೇರಿಸಿ ಸಂಬಂಧ ಬೆಳೆಸಿ, ಕರ್ಮಕ್ಷಯವಾದ ನಂತರ ಬೇರ್ಪಡಿಸುವನು.

೪೭. ಜಗತ್ತಿನಲ್ಲಿ ಆತ್ಮಸ್ವರೂಪವನ್ನರಿಯದ ಮೂರ್ಖನಿಗೆ, ಆಪ್ತೇಷ್ಟರೊಡನೆ ಸೇರುವಾಗ ಆನಂದವೂ, ಅಗಲಿದಾಗ ಸಂಕಟವೂ ಸಂಭವಿಸುವುದು ನಿಯತಿ ಸಿದ್ಧವಾದುದು.

೪೮. ಪ್ರಪಂಚದಲ್ಲಿರುವ ಸುಖಸಾಮಗ್ರಿಗಳೂ, ನೆಂಟರಿಷ್ಟರೂ, ಶಾಶ್ವತವಲ್ಲವೆಂಬುದು ಸತ್ಯ. ತಿಳಿದವರು ಭೋಗಸಾಮಗ್ರಿಗಳನ್ನು ತಾವಾಗಿಯೇ ತ್ಯಜಿಸಿ ಸುಖಿಗಳಾಗುವರು. ಅಜ್ಞರು ವಿಧಿಯ ನಿರ್ಬಂಧದಿಂದ ಬಿಡಬೇಕಾಗಿ ಬಂದು ದುಃಖಿಗಳಾಗುವರು.

ತಸ್ಮಾತ್ಸಂತಃ ಸ್ವಯಂ ತ್ಯಕ್ತ್ವಾ ಪರಮೈಶ್ವರ್ಯಮೀಪ್ಸಿತಂ ।
ಧ್ಯಾಯಂತೇ ಸತತಂ ಕೃಷ್ಣಪಾದಪದ್ಮಂ ನಿರಾಪದಂ ॥ ೪೯ ॥

ಸರ್ವತ್ರ ಜ್ಞಾನಿನಃ ಸಂತಃ ಕಾ ಸ್ತ್ರೀ ಜ್ಞಾನವತೀ ಭುವಿ ।
ತತೋ ಮಹ್ಯಂ ವಿಮೂಢಾಯೈ ದಾತುಮರ್ಹತಿ ವಾಂಛಿತಂ ॥ ೫೦ ॥

ನ ಮೇ ವಾಂಛಾಮರತ್ವೇ ಚ ಶಕ್ರತ್ವೇ ಮೋಕ್ಷವರ್ತ್ಮನಿ ।
ಇಮಂ ಕಾಂತಂ ವರಂ ದೇಹಿ ಚತುರ್ವರ್ಗಕರಂ ಪರಂ ॥ ೫೧ ॥

ಯಾವತೀ ಕಾಮಿನೀಜಾತಿರ್ಜಗತ್ಯಾಂ ಜಗದೀಶ್ವರ ।
ಕಸ್ಮೈಚಿನ್ನಹಿ ದತ್ತಶ್ಚ ತೇನ ಧಾತ್ರೇದೃಶಃ ಪತಿಃ ॥ ೫೨ ॥

ತಸ್ಮೈ ದತ್ತಾ ಗುಣಾಃ ಸರ್ವೇ ರೂಪಾಣಿ ವಿವಿಧಾನಿ ಚ ।
ಸುಶೀಲಾನಿ ಚ ಸರ್ವಾಣಿ ಚಾಮರತ್ವಂ ವಿನಾ ಹರೇ ॥ ೫೩ ॥

---

೪೯. ಆದ್ದರಿಂದ ಸಾಧುಗಳು ತಮಗೆ ಒದಗಿದ ಸಂಪತ್ತೆಲ್ಲವನ್ನೂ ತಾವಾಗಿಯೇ ತ್ಯಜಿಸಿ, ಯಾವಾಗಲೂ ಸುಖಕರವಾದ ಕೃಷ್ಣಪರಮಾತ್ಮನ ದಿವ್ಯಪಾದಪದ್ಮಗಳನ್ನು ಸ್ಮರಿಸುತ್ತಿರುವರು.

೫೦. ಆದರೆ ಪುರುಷರಿಗೆ ಜ್ಞಾನಾರ್ಜನೆಯು ಸುಲಭ. ಸ್ತ್ರೀಯರಿಗೆ ಜ್ಞಾನಾರ್ಜನೆ ಮಾಡಲು ಸಾಕಾದಷ್ಟು ಅವಕಾಶ ಸಾಲದು. ಆದ್ದರಿಂದ ಮೂಢಳಾದ ನನಗೆ ನನ್ನಿಷ್ಟಾರ್ಥವು ಫಲಿಸುವಂತೆ ಮಾಡಿ ನನ್ನನ್ನು ಕಾಪಾಡು.

೫೧. ನನಗೆ ದೇವತಾಸ್ತ್ರೀಯಾಗಬೇಕೆಂದಾಗಲೀ, ಇಂದ್ರಪತ್ನಿಯಾಗಬೇಕೆಂದಾಗಲೀ, ಮುಕ್ತಿಹೊಂದಬೇಕೆಂದಾಗಲೀ, ಅಭಿಲಾಷೆ ಇಲ್ಲ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳ ಸಿದ್ಧಿಗೆ ಕಾರಣನಾದ ಈ ಪತಿದೇವನನ್ನು ನನಗೆ ಉಳಿಸಿಕೊಟ್ಟರೆ ನನ್ನ ಅಭಿಲಾಷೆ ಎಲ್ಲವೂ ಕೈಗೂಡಿದಂತಾಗುವುದು.

೫೨. ಎಲೈ ಕೃಷ್ಣಪರಮಾತ್ಮನೇ! ಜಗತ್ಸೃಷ್ಟಿಯಲ್ಲಿರುವ ಯಾವ ಹೆಂಗಸಿಗೂ ನನ್ನ ಪತಿಗೆ ಸದೃಶನಾದ ಪತಿಯನ್ನು ಬ್ರಹ್ಮದೇವನು ಕರುಣಿಸಿಲ್ಲ.

೫೩. ನನ್ನ ಪತಿದೇವನಿಗೆ, ದಿವ್ಯಸುಂದರರೂಪವನ್ನೂ, ಒಳ್ಳೆಯ ಗುಣಗಳನ್ನೂ, ಒಳ್ಳೆಯ ನಡತೆಗಳನ್ನೂ, ವಿಧಿಯು ಕರುಣಿಸಿದ್ದನು. ಅಷ್ಟೇಕೆ ? ಅಮರತ್ವವೊಂದು ಬಿಟ್ಟರೆ ಉಳಿದ ಗುಣಗಳೆಲ್ಲವೂ ನನ್ನ ಪತಿಯಲ್ಲಿದ್ದವು.

ರೂಪೇಣ ಚ ಗುಣೇನೈವ ತೇಜಸಾ ವಿಕ್ರಮೇಣ ಚ ।
ಜ್ಞಾನೇನ ಶಾಂತ್ಯಾ ಸಂತುಷ್ಟ್ಯಾ ಹರಿತುಲ್ಯಃ ಪ್ರಭುರ್ಮಮ ॥ ೫೪ ॥

ಹರಿಭಕ್ತೋ ಹರಿಸಮೋ ಗಾಂಭೀರ್ಯೇ ಸಾಗರೋ ಯಥಾ ।
ದೀಪ್ತಿಮಾನ್ ಸೂರ್ಯತುಲ್ಯಶ್ಚ ಶುದ್ಧೋ ವಹ್ನಿಸಮಸ್ತಥಾ ॥ ೫೫ ॥

ಚಂದ್ರತುಲ್ಯಃ ಸುದೃಶ್ಯಶ್ಚ ಕಂದರ್ಪಸಮಸುಂದರಃ ।
ಬುದ್ಧ್ಯಾ ಬೃಹಸ್ಪತಿಸಮಃ ಕಾವ್ಯೇ ಕವಿಸಮಸ್ತಥಾ ॥ ೫೬ ॥

ವಾಣೀ ಚ ಸರ್ವಶಾಸ್ತ್ರಜ್ಞಾ ಪ್ರತಿಭಾಯಾಂ ಭೃಗೋರಿವ ।
ಕುಬೇರತುಲ್ಯೋ ಧನವಾನ್ ಮಹಾನ್ ದಾತಾ ಮನೋರಿವ ॥ ೫೭ ॥

ಧರ್ಮೇ ಧರ್ಮಸಮೋ ಧರ್ಮೀ ಸತ್ಯೇ ಸತ್ಯವ್ರತಾಧಿಕಃ ।
ಕುಮಾರತುಲ್ಯಸ್ತಪಸಾ ಸ್ವಾಚಾರೇ ಬ್ರಹ್ಮಣಾ ಸಮಃ ॥ ೫೮ ॥

ಐಶ್ವರ್ಯೇ ಶಕ್ರತುಲ್ಯಶ್ಚ ಸಹಿಷ್ಣುಃ ಪೃಥಿವೀಸಮಃ ।
ಏವಂ ಭೂತೋ ಮೃತಃ ಕಾಂತಃ ಪ್ರಾಣಾ ಯಾಂತಿ ನ ಮೇ ಕಥಂ ॥ ೫೯ ॥

---

೫೪. ರೂಪದಲ್ಲಾಗಲೀ, ಗುಣದಲ್ಲಾಗಲೀ, ತೇಜಸ್ಸಿನಲ್ಲಾಗಲೀ, ಪರಾಕ್ರಮದಲ್ಲಾಗಲೀ, ಜ್ಞಾನ, ಶಾಂತಿ, ತೃಪ್ತಿಗಳಲ್ಲಾಗಲೀ ನನ್ನ ಪತಿಯು ವಿಷ್ಣುವಿಗೆ ಸಮಾನನು.

೫೫. ವಿಷ್ಣುಭಕ್ತನಾದ ನನ್ನ ಪತಿಯು ವಿಷ್ಣುಸಮಾನನೂ, ಸಾಗರದಂತೆ ಗಂಭೀರನೂ, ಸೂರ್ಯನಂತೆ ತೇಜಸ್ವಿಯೂ, ಅಗ್ನಿಯಂತೆ ಪರಿಶುದ್ಧನೂ ಆದವನು.

೫೬–೫೯. ಅಲ್ಲದೆ, ಚಂದ್ರನಂತೆ ಆಹ್ಲಾದಜನಕನೂ, ಮನ್ಮಥನಂತೆ ಸುಂದರನೂ, ಬುದ್ಧಿಯಲ್ಲಿ ಬೃಹಸ್ಪತಿಸಮನೂ, ಕಾವ್ಯರಚನೆಯಲ್ಲಿ ಶುಕ್ರಾಚಾರ್ಯಸದೃಶನೂ, ಸರಸ್ವತೀದೇವಿಯಂತೆ ಸರ್ವಶಾಸ್ತ್ರತತ್ವಜ್ಞನೂ, ಭೃಗುಮಹರ್ಷಿಯಂತೆ ಪ್ರತಿಭಾವಂತನೂ, ಕುಬೇರನಂತೆ ಹಣವಂತನೂ, ಮನುವಿನಂತೆ ತ್ಯಾಗಿಯೂ, ಧರ್ಮಪುರುಷನಂತೆ ಧರ್ಮಿಷ್ಠನೂ, ಹರಿಶ್ಚಂದ್ರನಂತೆ ಸತ್ಯವಂತನೂ, ತಪಸ್ಸಿನಲ್ಲಿ ಷಣ್ಮುಖನಿಗೆಣೆಯಾದವನೂ, ಬ್ರಹ್ಮನಂತೆ ಆಚಾರಪರನೂ, ಇಂದ್ರನಂತೆ ಐಶ್ವರ್ಯವಂತನೂ, ಭೂದೇವಿಯಂತೆ ಸಹನೆವಂತನೂ ಆದ ನನ್ನ ಪತಿದೇವನನ್ನು ಕಳೆದುಕೊಂಡು ನನ್ನ ಪ್ರಾಣವನ್ನು ಹೇಗೆ ಧರಿಸಿಕೊಂಡಿರಲಿ?

ಅರೇ ಸುರಾ ಯಜ್ಞಭಾಜೋ ಘೃತಂ ಭೋಕ್ತುಂ ಕ್ಷಮಾ ಭುವಿ ।
ಕ್ಷಣೇನಾಯಜ್ಞಭಾಜಶ್ಚ ಕರಿಷ್ಯಾಮಿ ಸ್ವಲೀಲಯಾ ॥ ೬೦ ॥

ನಾರಾಯಣ ಜಗತ್ಕಾಂತೆ ನಾಹಮೇವ ಜಗದ್ಬಹಿಃ ।
ಶೀಘ್ರಂ ಜೀವಯ ಮತ್ಕಾಂತಮನ್ಯಥಾ ತ್ವಾಂ ಶಪಾಮ್ಯಹಂ ॥ ೬೧ ॥

ಪ್ರಜಾಪತೇ ಪುತ್ರಶಾಪಾತ್ತ್ವಮಪೂಜ್ಯೋ ಮಹೀತಲೇ ।
ತವೈವಾನಧಿಕಾರಿತ್ವಂ ಕರಿಷ್ಯಾಮ್ಯಧುನಾ ಭವೇ ॥ ೬೨ ॥

ಹೇ ಶಂಭೋ ಜ್ಞಾನಲೋಪಂ ತೇ ಕರಿಷ್ಯಾಮಿ ಶಪೇ ನ ಚ ।
ಧರ್ಮಲೋಪಂ ಚ ಧರ್ಮಸ್ಯ ಕರಿಷ್ಯಾಮ್ಯೇವ ಲೀಲಯಾ ॥ ೬೩ ॥

೬೦. ಹೀಗೆ ವ್ಯಥೆಪಡುತ್ತಿದ್ದ ಮಾಲಾವತಿಯ ದುಃಖವು ಕೋಪರೂಪವನ್ನು ತಾಳಿತು. ಆಗ ತನ್ನ ಪಾತಿವ್ರತ್ಯದ ಮಹಿಮೆಯನ್ನು ಎಲ್ಲರಿಗೂ ಮನಗಾಣಿಸಲು ಮೊದಲುಮಾಡಿದಳು. "ಎಲೈ ದೇವತೆಗಳೇ! ನೀವೆಲ್ಲರೂ ಯಜ್ಞದ ಹವಿರ್ಭಾಗಕ್ಕೂ, ತುಪ್ಪವನ್ನು ತಿನ್ನುವುದಕ್ಕೂ, ಯೋಗ್ಯರೇ ಹೊರತು ಮತ್ತೊಬ್ಬರಿಗೆ ಉಪಕಾರಿಗಳಲ್ಲ. ಇನ್ನೊಂದರೆಕ್ಷಣದಲ್ಲಿ ಯಜ್ಞಭಾಗವು ನಿಮಗೆ ಲಭಿಸದಂತೆ ಮಾಡಬಲ್ಲೆನು.

೬೧. ಜಗದ್ರಕ್ಷಕನಾದ ನಾರಾಯಣನೇ! ನನ್ನನ್ನು ಜಗತ್ತಿಗೆ ಹೊರಗಿನವಳೆಂದು ಬಗೆದೆಯಾ? ಜಾಗ್ರತೆ ನನ್ನ ಪತಿಯನ್ನು ಜೀವಿಸುವೆಯೋ, ಅಥವಾ ಪತಿವ್ರತೆಯ ಶಾಪಕ್ಕೊಳಗಾಗುವೆಯೋ ?

೬೨. ಸೃಷ್ಟಿಕರ್ತನಾದ ಬ್ರಹ್ಮದೇವನೇ! ನೀನು ನಿನ್ನ ಮಗನ ಶಾಪವೊಂದರಿಂದಲೇ ಎಲ್ಲಿಲ್ಲೂ ಪೂಜೆ ಇಲ್ಲದವನಾಗಿರುವೆ. ಇನ್ನು ನನ್ನ ಶಾಪಕ್ಕೆ ಒಳಗಾಗಿ ನಿನ್ನ ಅಧಿಕಾರವನ್ನು ಬೇರೆ ಕಳೆದುಕೊಳ್ಳಬೇಕೆ?

೬೩. ಜ್ಞಾನಿಶ್ರೇಷ್ಠನಾದ ಶಂಕರನೇ! ನಿನ್ನ ದಿವ್ಯಜ್ಞಾನವು ಲೋಪವಾಗುವಂತೆ ಮಾಡಲಾರೆನೆಂದು ತಿಳಿದಿರುವೆಯಾ? ಅಷ್ಟೇಕೆ? ನಾನು ಧರ್ಮಪುರುಷನ ಧರ್ಮವನ್ನೂ ಲೀಲೆಯಿಂದಲೇ ನಾಶಗೊಳಿಸಬಲ್ಲೆನು.

ಯಮಾಧಿಕಾರಂ ದೂರೇ ಚ ಕರಿಷ್ಯಾಮಿ ನ ಸಂಶಯಃ ।
ಸರ್ವಂ ಕಾಲಂ ಶಪಿಷ್ಯಾಮಿ ಮೃತ್ಯುಕನ್ಯಾಂ ಸುನಿಷ್ಠುರಾಂ ॥ ೬೪ ॥

ಶಪಾಮಿ ಸರ್ವಾನತ್ರೈವ ಜರಾಂ ವ್ಯಾಧಿಂ ವಿನಾಽಧುನಾ ।
ವ್ಯಾಧಿನಾ ಜರಯಾ ಮೃತ್ಯುರ್ನಹ್ಯಭೂಚ್ಚ ಪತೇರ್ಮಮ ॥ ೬೫ ॥

ಇತ್ಯುಕ್ತ್ವಾ ಕೌಶಿಕೀತೀರೇ ಚಾಗಚ್ಛಚ್ಛಪ್ತುಮೇವ ತಾನ್ ।
ಮಾಲಾವತೀ ಮಹಾಸಾಧ್ವೀ ಶವಂ ಕೃತ್ವಾ ಸ್ವವಕ್ಷಸಿ ॥ ೬೬ ॥

ತಾಂ ಶಪ್ತುಮುದ್ಯತಾಂ ದೃಷ್ಟ್ವಾ ಬ್ರಹ್ಮಾ ದೇವಪುರೋಗಮಃ ।
ಜಗಾಮ ಶರಣಂ ವಿಷ್ಣುಂ ತೀರಂ ಕ್ಷೀರಪಯೋನಿಧೇಃ ॥ ೬೭ ॥

ತತ್ರ ಸ್ನಾತ್ವಾ ಚ ತುಷ್ಟಾವ ಪರಮಾತ್ಮಾನಮೀಶ್ವರಂ ।
ವಿಷ್ಣುಂ ಬ್ರಹ್ಮಾ ಜಗತ್ಕಾಂತಮಿತ್ಯುವಾಚ ಹ ಭೀತವತ್ ॥ ೬೮ ॥

---

೬೪. ಯಮನ ಅಧಿಕಾರವನ್ನೂ ದೂರಮಾಡಬಲ್ಲೆನು. ಕಾಲಪುರುಷನನ್ನೂ, ಮೃತ್ಯುದೇವತೆಯನ್ನೂ ಶಪಿಸಿ ಮುಂದೆಂದೂ, ಅವರ ನಿಷ್ಠುರಕೃತ್ಯವು ನಡೆಯದಂತೆ ಮಾಡಿಬಿಡಬಲ್ಲೆನು.

೬೫. ರೋಗದಿಂದಾಗಲೀ, ಮುಪ್ಪಿನಿಂದಾಗಲೀ, ನನ್ನ ಪತಿಯು ಮರಣ ಹೊಂದದಿರುವುದರಿಂದ ಅವನ ಮೃತ್ಯುವಿಗೆ ನೀವೇ ಕಾರಣರು. ಆದ್ದರಿಂದ ಜರಾ ವ್ಯಾಧಿಗಳನ್ನುಳಿದು ನಿಮ್ಮೆಲ್ಲರನ್ನೂ ಒಟ್ಟಿಗೇ ಶಪಿಸುವೆನು."

೬೬. ಹೀಗೆ ಹೇಳುತ್ತಾ, ಪತಿವ್ರತಾಶಿರೋಮಣಿಯಾದ ಮಾಲಾವತಿಯು, ತನ್ನ ಪತಿದೇವನ ಶವವನ್ನು ಎದೆಯಲ್ಲಿಯೇ ಅಪ್ಪಿಕೊಂಡು, ಕೌಶಿಕೀನದಿಯ ದಡದಲ್ಲಿ ದೇವತೆಗಳನ್ನು ಶಪಿಸಲುದ್ಯುಕ್ತಳಾದಳು.

೬೭. ಹೀಗೆ ತಮ್ಮೆಲ್ಲರಿಗೂ ಶಾಪಕೊಡಲು ಸಿದ್ಧಳಾದ ಆ ಸಾಧ್ವೀಮಣಿಗೆ ಹೆದರಿ, ಬ್ರಹ್ಮನು ದೇವತೆಗಳೆಲ್ಲರೊಡಗೂಡಿ, ಕ್ಷೀರಸಾಗರದಲ್ಲಿ ಮಲಗಿರುವ ವಿಷ್ಣುವಿನ ಶರಣುಹೊಕ್ಕನು.

೬೮. ಬ್ರಹ್ಮನು ಕ್ಷೀರಸಮುದ್ರದಲ್ಲಿ ಸ್ನಾನಮಾಡಿ ಪರಿಶುದ್ಧನಾಗಿ ಪರಮಾತ್ಮನನ್ನು ಸ್ತುತಿಸಲಾರಂಭಿಸಿದನು. ತನಗೊದಗಿರುವ ಪತಿವ್ರತೆಯ ಭಯವನ್ನು ಜಗದೊಡೆಯನಿಗೆ ವಿಜ್ಞಾಪಿಸಿದನು.

॥ ಬ್ರಹ್ಮೋವಾಚ ॥

ಉಪಬರ್ಹಣಪತ್ನೀ ಸಾ ಕನ್ಯಾ ಚಿತ್ರರಥಸ್ಯ ಚ ।
ಕಾಂತಹೇತೋಶ್ಚ ಮಾಂ ದೇವಾನ್ ಶಪೇತ್ತ್ವಂ ರಕ್ಷ ಮಾಧವ ॥ ೧೯ ॥

ಸ್ಮರಂತಿ ಸಾಧವಃ ಸಂತೋ ಜಪಂತಿ ಮುನಯೋ ಮುದಾ ।
ಸ್ವಪ್ನೇ ಜಾಗರಣೇ ಚೈವ ಸರ್ವಕಾರ್ಯೇಷು ಮಾಧವಂ ॥ ೨೦ ॥

ಶರಣಾಗತದೀನಾರ್ತಪರಿತ್ರಾಣಪರಾಯಣ ।
ರಕ್ಷ ರಕ್ಷ ಹೃಷೀಕೇಶ ಪ್ರಜಾಮಃ ಶರಣಂ ವಯಂ ॥ ೨೧ ॥

ಪೂಜಾ ಮೇ ಪುತ್ರಶಾಪೇನ ವಿಹತಾ ಸಾಂಪ್ರತಂ ಪ್ರಭೋ ।
ಅಧಿಕಾರಹತಂ ಮಾಂ ಚ ಕುರುತೇ ಮಾಲತೀ ಸತೀ ॥ ೨೨ ॥

ಸರ್ವಾಧಿಕಾರೋ ಬ್ರಹ್ಮಾಂಡೇ ತ್ವಯಾ ದತ್ತಃ ಪುರಾ ಪ್ರಭೋ ।
ಸಂಪದೇತಾದೃಶೀ ನಾಥ ಯಾಸ್ಯತ್ಯೇವಾಧುನಾ ಮಮ ॥ ೨೩ ॥

---

೧೯. ಬ್ರಹ್ಮ:—ಎಲೈ, ಲಕ್ಷ್ಮೀರಮಣನೇ, ಉಪಬರ್ಹಣನ ಪತ್ನಿಯೂ, ಚಿತ್ರರಥನ ಕನ್ಯೆಯೂ ಆದ ಮಾಲಾವತಿಯು ತನ್ನ ಪತಿಯನ್ನು ಉಳಿಸದಿದ್ದರೆ ನಮ್ಮೆಲ್ಲರಿಗೂ ಶಾಪಕೊಡುವುದಾಗಿ ಹಟತೊಟ್ಟು ನಿಂತಿದ್ದಾಳೆ. ಪತಿವ್ರತೆಯ ಶಾಪಕ್ಕೊಳಗಾಗದಂತೆ ನಮ್ಮನ್ನು ಕಾಪಾಡು.

೨೦. ನಿನ್ನ ದಿವ್ಯ ನಾಮವನ್ನು ಸತ್ಪುರುಷರು ಯಾವಾಗಲೂ ಸ್ಮರಿಸುವರು. ಮುನಿಗಳು ಸಂತೋಷದಿಂದ ಜಪಿಸುವರು. ನಿದ್ದೆಯಲ್ಲಾಗಲೀ, ಎಚ್ಚರದಲ್ಲಾಗಲೀ, ಅನ್ಯಕಾರ್ಯದಲ್ಲಿ ತೊಡಗಿರುವಾಗಾಗಲೀ, ಪರಮಾತ್ಮನಲ್ಲೇ ಅವರ ಮನಸ್ಸಿರುವುದು.

೨೧. ಮರೆಹೊಕ್ಕವರನ್ನೂ, ದಿಕ್ಕಿಲ್ಲದವರನ್ನೂ, ದೀನರನ್ನೂ, ನೀನಲ್ಲದೆ ಇನ್ನಾರು ಕಾಪಾಡುವರು? ಎಲೈ, ಹೃಷೀಕೇಶನೇ! ನಾವೆಲ್ಲರೂ ನಿನ್ನನ್ನು ಶರಣು ಬೇಡುವೆವು. ನಮ್ಮನ್ನು ಕಾಪಾಡು.

೨೨–೨೩. ಮೊದಲೇ ನನ್ನ ಮಗನ ಶಾಪದಿಂದ ನನಗೆ ಎಲ್ಲಿಯೂ ಪೂಜೆ ಇಲ್ಲದಂತಾಗಿದೆ. ಈಗ ಮಾಲಾವತೀದೇವಿಯು ನನ್ನ ಅಧಿಕಾರವನ್ನೂ ನಾಶಗೊಳಿಸುವಳು. ನನ್ನನ್ನು ಸೃಷ್ಟಿಮಾಡಿ ಬ್ರಹ್ಮಾಂಡದ ಒಡೆತನವನ್ನು ನೀನು ನನಗೆ ಕೊಟ್ಟೆ. ಈ ಅಧಿಕಾರ, ಸಂಪತ್ತುಗಳ ಯೋಗ್ಯತೆಯೇ ಇಷ್ಟು. ಈಗ ಅನ್ನಧಿಕಾರವು ನನ್ನಿಂದ ದೂರವಾಗುವುದು. ದಯಮಾಡಿ ಅದನ್ನುಳಿಸಲಾರೆಯಾ?

|| ಮಹಾದೇವ ಉವಾಚ ||

ತ್ವಯಾ ದತ್ತಂ ಮಹಾ ಜ್ಞಾನಂ ಗುಪ್ತಂ ಸರ್ವೇಷು ದುರ್ಲಭಂ |
ಶತಮನ್ವಂತರತಪಃ ಫಲೇನ ಪುಷ್ಕರೇ ಪುರಾ || ೭೪ ||

ಐಶ್ವರ್ಯಂ ವಾ ಧನಂ ವಾಪಿ ವಿದ್ಯಾ ವಾ ವಿಕ್ರಮೋಽಥವಾ |
ಜ್ಞಾನಸ್ಯ ಪರಮಾರ್ಥಸ್ಯ ಕಲಾಂ ನಾರ್ಹಂತಿ ಷೋಡಶೀಂ || ೭೫ ||

ಸರ್ವಾಜ್ಞಾತಂ ಸರ್ವಗುಪ್ತಮತ್ಯಂತಂ ದುರ್ಲಭಂ ಪರಂ |
ಮಮ ತವ ಜ್ಞಾನರತ್ನಂ ಶಾಪಾನ್ನಿಯಾತಿ ಯೋಷಿತಃ || ೭೬ ||

ಅಹೋ ಪತಿವ್ರತಾ ತೇಜಃ ಸರ್ವೇಷಾಂ ತೇಜಸಾಂ ಪರಂ |
ತೇಜೋಽನಲೇನ ದಗ್ಧಂ ಮಾಂ ರಕ್ಷ ರಕ್ಷ ಹರೇ ಹರೇ || ೭೭ ||

|| ಧರ್ಮ ಉವಾಚ ||

ಸರ್ವರತ್ನಾತ್ಪರಂ ರತ್ನಂ ಧರ್ಮ ಏವ ಸನಾತನಃ |
ಯೋಸ್ಯತ್ಯೇವಂ ವಿಧೋ ಧರ್ಮಸ್ತ್ವಯಾ ದತ್ತಃ ಪುರಾ ಪ್ರಭೋ || ೭೮ ||

೭೪–೭೫. ಮಹಾದೇವ:—ಪೂರ್ವದಲ್ಲಿ ನಾನು ಪುಷ್ಕರಕ್ಷೇತ್ರದಲ್ಲಿ ನಿನ್ನ ಅಪ್ಪಣೆಯಂತೆ ನೂರು ಮನ್ವಂತರಕಾಲ ತಪಸ್ಸುಮಾಡಿದುದರ ಫಲವಾಗಿ, ಇತರರಿಗೆ ದುರ್ಲಭವಾದ ಜ್ಞಾನವನ್ನು ನೀನು ನನಗೆ ದಯಪಾಲಿಸಿರುವೆ. ಐಶ್ವರ್ಯವಾಗಲೀ, ಹಣವಾಗಲೀ, ವಿದ್ಯೆಯಾಗಲೀ, ವಿಕ್ರಮವಾಗಲೀ, ದಿವ್ಯಜ್ಞಾನದ ಹದಿನಾರನೆಯ ಒಂದು ಭಾಗಕ್ಕೂ ಸರಿದೂಗಲಾರದು.

೭೬. ನಿನ್ನ ಅನುಗ್ರಹದಿಂದ ಲಭಿಸಿದ, ಯಾರಿಗೂ ತಿಳಿಯದ, ಮತ್ತು ಅತ್ಯಂತ ಗೂಢವಾದ ನನ್ನ ದಿವ್ಯಜ್ಞಾನವು ಒಬ್ಬ ಹೆಂಗಸಿನ ಶಾಪದಿಂದ ದೂರ ವಾಗುವುದಲ್ಲ! ನಿನ್ನ ಅನುಗ್ರಹವು ವ್ಯರ್ಥವಾಗದಂತೆ ಮಾಡು.

೭೭. ಪತಿವ್ರತೆಯ ತೇಜಸ್ಸಿನ ಮುಂದೆ ಯಾರ ತೇಜಸ್ಸೂ ನಿಲ್ಲಲಾರದು. ಆ ತೇಜಸ್ಸೆಂಬ ಅಗ್ನಿಗೆ ನಾನು ಸಿಲುಕಿರುವೆನು! ಜಗದೀಶ! ನನ್ನನ್ನು ಕಾಪಾಡು.

೭೮. ಧರ್ಮದೇವ:—ಧರ್ಮವು ಅನಾದಿಯಾದುದು. ರತ್ನಗಳಲ್ಲೆಲ್ಲಾ ಧರ್ಮವೆಂಬುದೇ ಅತ್ಯುತ್ತಮವಾದ ರತ್ನವು. ಇಂಥ ಧರ್ಮದ ರಕ್ಷಣೆಯನ್ನು ನೀನು ನನಗೆ ವಹಿಸಿರುವೆ. ಈಗ ಅದು ಪತಿವ್ರತೆಯ ಶಾಪದಿಂದ ಕೈಬಿಟ್ಟುಹೋಗುವುದು.

ಸಪ್ತಮನ್ವಂತರತಪಃಫಲೇನ ಪರಮೇಶ್ವರ ।
ಪ್ರಾಪ್ತೋ ಧರ್ಮೋಽಧುನಾ ಯಾತಿ ಶಾಪೇನ ಯೋಷಿತಃ ಪ್ರಭೋ ॥ ೭೯ ॥

॥ ದೇವಾ ಊಚುಃ ॥

ಯಜ್ಞಭಾಜೋ ಘೃತಭಾಜೋ ವಯಮೇವ ತ್ವಯಾ ಕೃತಾಃ ।
ಯೋಷಿಚ್ಛಾಪೇನ ತತ್ಸರ್ವಮಧುನಾ ಯಾತಿ ಮಾಧವ ॥ ೮೦ ॥

ಇತ್ಯುಕ್ತ್ವಾ ಸಂಯತಾಃ ಸರ್ವೇ ತಸ್ಥುಸ್ತತ್ರ ಭಯಾರ್ದಿತಾಃ ।
ಏತಸ್ಮಿನ್ನಂತರೇಽಕಸ್ಮಾದ್ವಾಗ್ಬಭೂವಾಶರೀರಿಣೀ ॥ ೮೧ ॥

ಯೂಯಂ ಗಚ್ಛತ ತನ್ಮೂಲಂ ವಿಪ್ರರೂಪೀ ಜನಾರ್ದನಃ ।
ಪಶ್ಚಾದ್ಯಾಸ್ಯತಿ ಶಾಂತ್ಯರ್ಥಮಿತಿ ವೋ ರಕ್ಷಣಾಯ ಚ ॥ ೮೨ ॥

ಶ್ರುತ್ವಾ ತದ್ವಚನಂ ದೇವಾಃ ಪ್ರಹೃಷ್ಟಮನಸೋನ್ಮುಖಾಃ ।
ಜಗ್ಮುರ್ಮಾಲಾವತೀಸ್ಥಾನಂ ಕೌಶಿಕೀತೀರವಿಶ್ವರಾಃ ॥ ೮೩ ॥

---

೭೯. ಜಗನ್ನಿಯಾಮಕನೇ! ಏಳು ಮನ್ವಂತರಗಳ ಕಾಲ ತಪಸ್ಸುಮಾಡಿದುದರ ಫಲವಾಗಿ ಈ ಧರ್ಮವನ್ನು ನಾನು ಪಡೆದನು. ಈಗ ಒಬ್ಬ ಹೆಂಗಸಿನ ಶಾಪದಿಂದ ಅದು ನಾಶವಾಗದಂತೆ ಮಾಡು.

೮೦. ದೇವತೆಗಳು:—ಎಲೈ, ಪರಮಾತ್ಮನೇ! ನಮಗೆ ಯಜ್ಞಭಾಗವು ಲಭಿಸುವಂತೆಯೂ, ಅಗ್ನಿಯಲ್ಲಿ ಹೋಮಮಾಡಿದ ತುಪ್ಪವನ್ನು ನಾವು ತಿನ್ನು ವಂತೆಯೂ, ನೀನೇ ಅನುಗ್ರಹಿಸಿದೆ. ನಿನ್ನ ಅನುಗ್ರಹವೆಲ್ಲವೂ ಹೆಂಗಸೊಬ್ಬಳ ಶಾಪದಿಂದ ವ್ಯರ್ಥವಾಗದಂತೆ ಮಾಡು.

೮೧. ಹೀಗೆ ಹೇಳಿ ಯಾರೂ ಮಾತನಾಡದೆ ಭಯದಿಂದ ನಿಂತಿರುವಾಗ ಅಶರೀರವಾಣಿಯೊಂದು ಇವರೆಲ್ಲರನ್ನೂ ಕುರಿತು ಇಂತು ನುಡಿಯಿತು.

೮೨. 'ನೀವೆಲ್ಲರೂ ಅಲ್ಲಿಗೇ ಹೋಗಿ. ಜನಾರ್ದನನು ಬ್ರಾಹ್ಮಣರೂಪದಲ್ಲಿ ಬಂದು ಆಕೆಯ ಕೋಪವನ್ನು ಶಾಂತಗೊಳಿಸಿ ನಿಮ್ಮನ್ನು ರಕ್ಷಿಸುವನು.'

೮೩. ಅಶರೀರವಾಣಿಯನ್ನು ಕೇಳಿ ದೇವತೆಗಳೆಲ್ಲರೂ ಸಂತೋಷಗೊಂಡು ಕೌಶಿಕೀತೀರದಲ್ಲಿ ಮಾಲಾವತಿಯಿದ್ದೆಡೆಗೆ ಹಿಂತಿರುಗಿ ಬಂದರು.

ತಾಮೇವ ದದೃಶುರ್ದೇವಾ ದೇವೀಂ ಮಾಲಾವತೀಂ ಸತೀಂ ।
ರತ್ನಸಾರೇಂದ್ರಭೂಷಾಭಿರುಜ್ವಲಾಂ ಕಮಲಾಕಲಾಂ ॥ ೮೪ ॥

ವಹ್ನಿಶುದ್ಧಾಂಶುಕಾಧಾನಾಂ ಸಿಂಧೂರಬಿಂದುಭೂಷಿತಾಂ ।
ಶರಚ್ಚಂದ್ರಪ್ರಭಾಂ ಶಾಂತಾಂ ದ್ಯೋತಯಂತೀ ದಿಶಸ್ತ್ವಿಷಾ ॥ ೮೫ ॥

ಪತಿಸೇವಾಮಹಾಧರ್ಮಚಿರಸಂಚಿತತೇಜಸಾ ।
ಪ್ರಜ್ವಲಂತೀಂ ಸುಪ್ರದೀಪ್ತಶಿಖಾಂ ವಹ್ನೇರಿವೋತ್ತಮಾಂ ॥ ೮೬ ॥

ಯೋಗಾಸನಂ ಕುರ್ವತೀಂ ಚ ಶವವಕ್ಷಸ್ಥಲಸ್ಥಿತಾಂ ।
ಸುರಮ್ಯಾಂ ಸ್ವಾಮಿನೋ ವೀಣಾಂ ಬಿಭ್ರತೀಂ ದಕ್ಷಿಣೇ ಕರೇ ॥ ೮೭ ॥

ತರ್ಜನ್ಯಂಗುಷ್ಠ ಕೋಟಿಭ್ಯಾಂ ಶುದ್ಧಸ್ಫಟಿಕಮಾಲಿಕಾಂ ।
ಭಕ್ತ್ಯಾ ಸ್ನೇಹೇನ ಕಾಂತಸ್ಯ ಬಿಭ್ರತೀಂ ಯೋಗಮುದ್ರಯಾ ॥ ೮೮ ॥

೮೪–೮೬. ಬಂದುನೋಡಿದರೆ, ಮಾಲಾವತೀದೇವಿಯು ಎಡಬಿಡದೆ ಪತಿಯ ಶವವನ್ನೇ ಪೂಜಿಸುತ್ತಿದ್ದಾಳೆ. ದಿವ್ಯವಾದ ರತ್ನಾಭರಣಗಳಿಂದ, ಭೂಷಿತಳಾಗಿ ಲಕ್ಷ್ಮೀದೇವಿಯಂತೆ ಬೆಳಗುತ್ತ ಅಗ್ನಿದೇವನಂತೆ ಪರಿಶುದ್ಧವಾದ ಬಟ್ಟೆಯನ್ನು ಧರಿಸಿ, ಹಣೆಯಲ್ಲಿ ಚಂದ್ರದ ಬೊಟ್ಟನ್ನಿಟ್ಟು, ಶರತ್ಕಾಲದ ಚಂದ್ರನ ಕಾಂತಿಯಂತಿರುವ ತನ್ನ ತೇಜಸ್ಸಿನಿಂದ ದಿಕ್ಕುಗಳೆಲ್ಲವನ್ನೂ ಬೆಳಗುತ್ತಾ, ಪತಿಸೇವೆಮಾಡಿ ಸಂಪಾದಿಸಿರುವ ದಿವ್ಯತೇಜಸ್ಸಿನಿಂದ ಅಗ್ನಿಜ್ವಾಲೆಯಂತೆ ಪ್ರಕಾಶಿಸುತ್ತಾ, ಪತಿದೇವನ ಶವವನ್ನು ತನ್ನ ಎದೆಯಲ್ಲಿ ಅಪ್ಪಿಕೊಂಡು ಯೋಗಾಸನದಲ್ಲಿ ಮಂಡಿಸಿದ್ದಾಳೆ.

೮೭–೯೧. ಬಲಗೈನಲ್ಲಿ ಪತಿದೇವನ ಸುಂದರವಾದ ವೀಣೆಯನ್ನು ಹಿಡಿದು, ಹೆಬ್ಬೆರಳು ಮತ್ತು ತೋರುಬೆರಳುಗಳಿಂದ ಸ್ಫಟಿಕದ ಜಪಸರವನ್ನು ತಿರುಗಿಸುತ್ತಿದ್ದಾಳೆ. ಸಂಪಿಗೆಯ ಬಣ್ಣದ ಮೈ. ಬಿಂಬಫಲದಂತಿರುವ ತುಟಿ. ರತ್ನಮಾಲೆಯಿಂದ ಹೊಳೆಯುವ ಕಂಠ. ಹದಿನಾರು ವರ್ಷದ ನವಯುವತಿ. ಸೌಂದರ್ಯಕ್ಕೆ ಉಚಿತವಾದ ನಿತಂಬ ಮತ್ತು ಪಯೋಧರಗಳು. ಇಂಥ ಸುಂದರಿಗೂ ಒದಗಿದ ಕಷ್ಟವನ್ನು

ಚಾರುಚಂಪಕವರ್ಣಾಭಾಂ ಬಿಂಬೋಷ್ಠೀಂ ರತ್ನಮಾಲಿನೀಂ ।
ಯಥಾ ಷೋಡಶವರ್ಷೀಯಾಂ ಶಶ್ವತ್ಸುಸ್ಥಿರಯೌವನಾಂ ॥ ೮೯ ॥

ಬೃಹನ್ನಿತಂಬಭಾರಾರ್ತಾಂ ಪೀನಶ್ರೋಣಿ ಪಯೋಧರಾಂ ।
ಪಶ್ಯಂತೀಂ ಶವವಿಾಶಸ್ಯ ಶುಭದೃಷ್ಟ್ಯಾ ಪುನಃ ಪುನಃ ॥ ೯೦ ॥

ಏವಂ ಭೂತಾಂ ಚ ತಾಂ ದೃಷ್ಟ್ವಾ ದೇವಾಸ್ತೇ ವಿಸ್ಮಯಂ ಯಯುಃ ।
ಸ್ಥಗಿತಾಂ ಚ ಕ್ಷಣಂ ತತ್ರ ಧಾರ್ಮಿಕಾ ಧರ್ಮಭೀರವಃ ॥ ೯೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಸೌತಿಶೌನಕಸಂವಾದೇ
ಮಾಲಾವತೀ ವಿಲಾಪೋ ನಾಮ
ತ್ರಯೋದಶೋಽಧ್ಯಾಯಃ

ನೋಡಿ ಯಾರು ತಾನೇ ಸಹಿಸಲಾದೀತು? ಪತಿದೇವನನ್ನೇ ದೃಷ್ಟಿಸಿ ನೋಡುತ್ತಿರುವ ಆ ಮಾಲಾವತೀ ದೇವಿಯನ್ನು ದೇವತೆಗಳೆಲ್ಲರೂ ಮರೆಯಲ್ಲೇ ನಿಂತು ನೋಡಿ ಮನಮರುಗಿದರು. ಆಕೆಯ ಪಾತಿವ್ರತ್ಯವು ಎಲ್ಲರನ್ನೂ ವಿಸ್ಮಯಗೊಳಿಸಿತು. ಆಕೆಯ ಪತಿಯು ಉಳಿಯದಿದ್ದರೆ, ದೇವತೆಗಳ ಧರ್ಮವು ಉಳಿಯುವಂತಿಲ್ಲ. ಆದುದರಿಂದ ದೇವತೆಗಳು ಯೋಚಿಸುತ್ತಾ ನಿಂತರು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಸೌತಿಶೌನಕಸಂವಾದರೂಪವಾದ
ಬ್ರಹ್ಮಖಂಡದಲ್ಲಿ ಮಾಲಾವತಿಯ ವಿಲಾಪವೆಂಬ
ಹದಿಮೂರನೆಯ ಅಧ್ಯಾಯವು ಮುಗಿದುದು.

ಹದಿಮೂರನೆಯ ಅಧ್ಯಾಯದ ಸಾರಾಂಶವು

ಉಪಬರ್ಹಣನು ಕ್ರಮೇಣ ಪ್ರಾಪ್ತವಯಸ್ಕನಾದನು. ಒಮ್ಮೆ ಗಂಡಕೀ ನದಿಯಲ್ಲಿ ಮಿಾಯಲು ಬಂದಿದ್ದ ಐವತ್ತು ಜನ ಗಂಧರ್ವಸ್ತ್ರೀಯರು, ಮನ್ಮಥನನ್ನೂ ಅಣಕಿಸುವ ಆತನ ರೂಪವನ್ನು ನೋಡಿ ಮೋಹಗೊಂಡರು. ಅನಂತರ ತೀವ್ರ ತಪಸ್ಸುಮಾಡಿ ಯೋಗಶಕ್ತಿಯಿಂದ ಪ್ರಾಣತ್ಯಾಗಮಾಡಿ ಚಿತ್ರರಥನಿಗೆ ಮಕ್ಕಳಾಗಿ ಜನಿಸಿದರು. ತಮ್ಮ ತಂದೆಯ ಅಪ್ಪಣೆಯನ್ನು ಪಡೆದು ಆತನನ್ನು ವರಿಸಿದುದೂ ಆಯಿತು. ಅವರೊಡನೆ ಮೂರುಲಕ್ಷ ವರ್ಷಗಳಕಾಲ ಉಪಬರ್ಹಣನು ಸುಖ ದಿಂದಿದ್ದನು. ಹೀಗಿರುವಾಗ ಆತನು ಒಮ್ಮೆ ಬ್ರಹ್ಮನ ಆಸ್ಥಾನದಲ್ಲಿ ರಂಭೆಯ ನರ್ತನವನ್ನು ನೋಡುತ್ತಾ ಆಕೆಗೆ ಮನಸೋತನು. ಕೂಡಲೇ ಅವನ ರೇತಸ್ಸು ಹೊರಬಂದುದಲ್ಲದೆ ಆತನು ಮೂರ್ಛೆಗೊಂಡನು. ಕುಪಿತನಾದ ಬ್ರಹ್ಮನು 'ಶೂದ್ರ ಯೋನಿಯಲ್ಲಿ ಜನಿಸುವಂತೆ' ಅವನನ್ನು ಶಪಿಸಿದನು. ಶಾಪಹೊಂದಿದ ಉಪಬರ್ಹ ಣನು ಯೋಗಶಕ್ತಿಯಿಂದ ತನ್ನ ಶರೀರವನ್ನು ತ್ಯಜಿಸಿದನು. ಆತನ ತಂದೆತಾಯಿ ಗಳೂ ದುಃಖವನ್ನು ತಡೆಯಲಾರದೆ ದೇಹತ್ಯಾಗಮಾಡಿದರು. ಉಪಬರ್ಹಣನ ಐವತ್ತು ಮಂದಿ ಪತ್ನಿಯರಲ್ಲಿ ಪಟ್ಟಮಹಿಷಿಯಾದ ಮಾಲಾವತಿಯೊಬ್ಬಳನ್ನು ಬಿಟ್ಟು ಉಳಿದವರು ಗೋಳಾಡಿಕೊಂಡು ತಮ್ಮ ಮನೆಗೆ ಹಿಂತಿರುಗಿದರು. ಮಾಲಾವತಿಯು ಮಾತ್ರ ತನ್ನ ಪತಿಯ ವಿರಹವನ್ನು ಸಹಿಸಲಾರದೆ ಬಹಳ ಗೋಳಾಡಿ ಕೊನೆಗೆ ಅಲ್ಲಿಯೇ ಮೂರ್ಛೆಹೋದಳು. ಬೆಳಗಾಗುತ್ತಲೂ ಮೂರ್ಛೆತಿಳಿದೆದ್ದು ಕೃಷ್ಣಪರ ಮಾತ್ಮನನ್ನು ಕುರಿತು–'ಸ್ತ್ರೀಯರಿಗೆ ಪತಿಯೇ ಪರದೈವನೆಂದೂ, ತನ್ನ ಪತಿಯನ್ನು ಬದುಕಿಸಿಕೊಡಬೇಕೆಂದೂ, ಉಳಿದ ಯಾವ ಪದವಿಯೂ ತನಗೆ ಬೇಕಿಲ್ಲವೆಂದೂ' ಬೇಡುತ್ತ ತನ್ನ ಪತಿಯ ಗುಣ, ರೂಪಗಳನ್ನು ಕೊಂಡಾಡಿದಳು. ಆದರೂ ದೇವತಾನುಗ್ರಹವಾಗದಿರಲು ಕಡೆಗೆ ಮಾಲಾವತಿಯು ಕೋಪಗೊಂಡು ಅಲ್ಲಿದ್ದ ದೇವತೆಗಳೆಲ್ಲರನ್ನೂ ತನ್ನ ಪಾತಿವ್ರತ್ಯದ ಮಹಿಮೆಯಿಂದ ಶಪಿಸುವುದಾಗಿ ಹೇಳಿದಳು. ಆಗ ಎಲ್ಲರೊಡನೆ ಬ್ರಹ್ಮದೇವನು ಕ್ಷೀರಸಮುದ್ರಕ್ಕೆ ಹೋಗಿ ಶ್ರೀಕೃಷ್ಣಪರಮಾತ್ಮ ನನ್ನು ಸ್ತುತಿಸಿದನು. ಮತ್ತು ತಮ್ಮ ಕಷ್ಟವನ್ನು ಬಿನ್ನವಿಸಿದನು. 'ಪರಮಾತ್ಮನು ಬ್ರಾಹ್ಮಣರೂಪದಲ್ಲಿ ಬಂದು ನಿಮ್ಮ ಕಷ್ಟವನ್ನು ಪರಿಹರಿಸುವನು, ನೀವು ಹಿಂತಿರುಗಿ' ಎಂದು ಅಶರೀರವಾಣಿಯಾಯಿತು. ಆಗ ಎಲ್ಲರೂ ಹಿಂತಿರುಗಿ ಬಂದು ಮಾಲಾವತಿಯು ತನ್ನ ಪತಿದೇವನ ಶವಕ್ಕೆ ಸೇವೆ ಸಲ್ಲಿಸುತ್ತಿದ್ದುದನ್ನು ನೋಡಿ ಅಚ್ಚರಿಗೊಂಡರು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಚತುರ್ದಶೋಽಧ್ಯಾಯಃ ॥

॥ ಸೌತಿರುವಾಚ ॥

ತತ್ರ ಸ್ಥಿತ್ವಾ ಕ್ಷಣಂ ದೇವಾ ಬ್ರಹ್ಮೇಶಾನಪುರೋಗಮಾಃ ।
ಯಯುರ್ಮಾಲಾವತೀ ಮೂಲಂ ಪರಂ ಮಂಗಲದಾಯಕಾಃ ॥ ೧ ॥

ಮಾಲಾವತೀ ಸುರಾನ್ ದೃಷ್ಟ್ವಾ ಪ್ರಣನಾಮ ಪತಿವ್ರತಾ ।
ರುರೋದ ಕಾಂತಂ ಸಂಸ್ಥಾಪ್ಯ ದೇವಾನಾಂ ಸನ್ನಿಧೌ ಮುನೇ ॥ ೨ ॥

ಏತಸ್ಮಿನ್ನಂತರೇ ತತ್ರ ಕಶ್ಚಿದ್ಬ್ರಾಹ್ಮಣಬಾಲಕಃ ।
ಆಜಗಾಮ ಸುರಾಣಾಂ ಚ ಸಭಾಮತಿಮನೋಹರಃ ॥ ೩ ॥

ಹದಿನಾಲ್ಕನೆಯ ಅಧ್ಯಾಯವು

೧. ಸೌತಿ:—ಬ್ರಹ್ಮ, ಈಶ್ವರ ಮೊದಲಾದ ದೇವತೆಗಳೆಲ್ಲರೂ ಕ್ಷಣಕಾಲ ಮಾಲಾವತಿಯ ಪತಿಸೇವೆಯನ್ನು ನಿಂತು ನೋಡಿ, ಆಕೆಗೆ ಸೌಮಂಗಲ್ಯವನ್ನು ಹಾರೈಸುತ್ತಾ ಆಕೆ ಇದ್ದೆಡೆಗೆ ಬಂದರು.

೨, ಆಗ ಪತಿವ್ರತೆಯಾದ ಮಾಲಾವತಿಯು ದೇವತೆಗಳಿಗೆ ವಂದಿಸಿ, ತನ್ನ ಪತಿಯ ದೇಹವನ್ನು ದೇವತೆಗಳ ಮುಂದಿರಿಸಿ, ಗೋಳಾಡಲಾರಂಭಿಸಿದಳು.

೩–೬. ಈ ಸಮಯಕ್ಕೆ ಸರಿಯಾಗಿ ಸುಂದರನಾದ ಒಬ್ಬ ಬ್ರಾಹ್ಮಣವಟುವು ಆ ದೇವತೆಗಳ ಸಭೆಗೆ ಬಂದನು. ಅವನು ಬಲಗೈನಲ್ಲಿ ಒಂದು ದಂಡವನ್ನೂ, ಎಡಗೈನಲ್ಲಿ ಛತ್ರಿಯೊಂದನ್ನೂ ಧರಿಸಿ, ಬಿಳುಪಾದ ಬಟ್ಟೆಯನ್ನುಟ್ಟು, ಹಣೆಯಲ್ಲಿ ತಿಲಕಧಾರಿ

ದಂಡೀ ಛತ್ರೀ ಶುಕ್ಲವಾಸಾ ಬಿಭ್ರತ್ತಿಲಕಮುಜ್ವಲಂ ।
ದೀರ್ಘಪುಸ್ತಕಹಸ್ತಶ್ಚ ಸುಪ್ರಶಾಂತಶ್ಚ ಸುಸ್ಮಿತಃ ॥ ೪ ॥

ಚಂದನೋಕ್ಷಿತಸರ್ವಾಂಗಃ ಪ್ರಜ್ವಲನ್ ಬ್ರಹ್ಮತೇಜಸಾ ।
ಸುರಾನ್ ಸಂಭಾಷ್ಯ ತತ್ರೈವ ವಿಸ್ಮಿತಾನ್ ವಿಷ್ಣುಮಾಯಯಾ ॥ ೫ ॥

ತತ್ರೋವಾಸ ಸಭಾಮಧ್ಯೇ ತಾರಾಮಧ್ಯೇ ಯಥಾ ಶಶೀ ।
ಉವಾಚ ದೇವಾನ್ ಸರ್ವಾಂಶ್ಚ ಮಾಲತೀಂ ಚ ವಿಚಕ್ಷಣಃ ॥ ೬ ॥

॥ ಬ್ರಾಹ್ಮಣ ಉವಾಚ ॥

ಕಥಮತ್ರ ಸುರಾಸ್ಸರ್ವೇ ಬ್ರಹ್ಮೇಶಾನಪುರೋಗಮಾಃ ।
ಸ್ವಯಂ ವಿಧಾತಾ ಜಗತಾಂ ಸ್ರಷ್ಟಾ ವೈ ಕೇನ ಕರ್ಮಣಾ ॥ ೭ ॥

ಸರ್ವಬ್ರಹ್ಮಾಂಡಸಂಹರ್ತಾ ಶಂಭುರತ್ರ ಸ್ವಯಂ ವಿಭುಃ ।
ಅಹೋ ತ್ರಿಜಗತಾಂ ಸಾಕ್ಷೀ ಧರ್ಮೋ ವೈ ಸರ್ವಕರ್ಮಣಾಂ ॥ ೮ ॥

ಯಾಗಿದ್ದನು. ಕೈಯಲ್ಲಿ ದೊಡ್ಡದಾದೊಂದು ಪುಸ್ತಕವಿತ್ತು. ಹಸನ್ಮುಖನಾಗಿದ್ದಾತನು ಮೈಗೆಲ್ಲಾ ದಿವ್ಯಗಂಧವನ್ನು ಲೇಪಿಸಿಕೊಂಡಿದ್ದನು. ಆತನ ಮುಖದಲ್ಲಿ ಬ್ರಹ್ಮತೇಜಸ್ಸು ಬೆಳಗುತ್ತಿತ್ತು. ನಕ್ಷತ್ರಗಳ ಮಧ್ಯದಲ್ಲಿರುವ ಚಂದ್ರನಂತೆ ಪ್ರಕಾಶಿಸುತ್ತ, ದೇವತೆಗಳನ್ನೂ ಮಾಲಾವತೀ ದೇವಿಯನ್ನೂ ಕುರಿತು ಆತನು ಕೆಲವು ಮಾತುಗಳನ್ನಾಡಿದನು.

೭–೮. ಬ್ರಾಹ್ಮಣ:—ಇದೇನು? ಬ್ರಹ್ಮ, ಈಶ್ವರ ಮುಂತಾದ ದೇವತೆಗಳೆಲ್ಲರೂ ಇಲ್ಲಿಗೆ ಬಂದಿದ್ದೀರಿ? ಜಗತ್ಸೃಷ್ಟಿಕರ್ತನಾದ ಬ್ರಹ್ಮದೇವನಿಗೆ ಇದೇನು ಹಣೆಯ ಬರೆಹ. ಬ್ರಹಾಂಡವೆಲ್ಲವನ್ನೂ ನಾಶಗೊಳಿಸಲು ಸಮರ್ಥನಾದ ಪರಮೇಶ್ವರನೂ, ಸರ್ವರ ಕರ್ಮಕ್ಕೂ ಸಾಕ್ಷೀಭೂತನಾದ ಧರ್ಮದೇವನೂ ಇಲ್ಲಿ ಬರಲು ಕಾರಣವೇನು?

ಕಥಂ ರವಿಃ ಕಥಂ ಚಂದ್ರಃ ಕಥಮತ್ರ ಹುತಾಶನಃ ।
ಕಥಂ ಕಾಲೋ ಮೃತ್ಯುಕನ್ಯಾ ಕಥಂ ವಾತ್ರ ಯಮಾದಯಃ ॥ ೯ ॥

ಹೇ ಮಾಲಾವತಿ! ತೇ ಕ್ರೋಡೇ ಕೋಽತಿಶುಷ್ಕಶ್ಶವೋಽನಘೇ ।
ಜೀವಿಕಾಯೋಃ ಕಥಂ ಮೂಲೇ ಯೋಷಿತಶ್ಚ ಪುಮಾನ್ಶವಃ ॥ ೧೦ ॥

ಇತ್ಯುಕ್ತ್ವಾ ತಾಂಶ್ಚ ತಾಂ ವಿಪ್ರೋ ವಿರರಾಮ ಸಭಾತಲೇ ।
ಮಾಲಾವತೀ ತಂ ಪ್ರಣಮ್ಯ ಸಮುವಾಚ ವಿಚಕ್ಷಣಂ ॥ ೧೧ ॥

॥ ಮಾಲಾವತ್ಯುವಾಚ ॥

ಆನಂದಪೂರ್ವಕಂ ವಂದೇ ವಿಪ್ರರೂಪಂ ಜನಾರ್ದನಂ ।
ತುಷ್ಟಾ ದೇವಾ ಹರಿಸ್ತುಷ್ಟೋ ಯಸ್ಯ ಪುಷ್ಪಜಲೇನ ಚ ॥ ೧೨ ॥

---

೯. ಇದೇನು? ಸೂರ್ಯಚಂದ್ರರೂ, ಅಗ್ನಿ, ಯಮ ಮೊದಲಾದ ಅಷ್ಟ ದಿಕ್ಪಾಲಕರೂ, ಮೃತ್ಯುಕನ್ಯೆಯೂ, ಇಲ್ಲಿಯೇ ಬಂದಿರುವರಲ್ಲಾ ? ಇದಕ್ಕೆ ಕಾರಣವೇನು?

೧೦. ಎಲೈ, ಮಾಲಾವತೀ ದೇವಿಯೇ! ಗಂಡಸರಿಗೆ ಜೀವಿಕಾಸಮರು ಹೆಂಗಸರು. ಹೀಗಿರುವಾಗ ಹೆಂಗಸಾದ ನಿನ್ನ ಎದೆಯಲ್ಲಿ ಬಹಳ ಬಾಡಿ ಹೋಗಿರುವ ಗಂಡುಶವವೊಂದನ್ನು ಅಪ್ಪಿಕೊಂಡಿರುವೆಯಲ್ಲಾ. ಇದಕ್ಕೆ ಕಾರಣವೇನು ?

೧೧. ಆ ಬ್ರಹ್ಮಚಾರಿಯು ಮಾಲಾವತಿಯನ್ನೂ, ದೇವತೆಗಳನ್ನೂ ಕುರಿತು ಹೀಗೆ ನುಡಿದು ಸುಮ್ಮನಾದಾಗ, ಮಾಲಾವತಿಯು ಕುಶಲಿಯಾದ ಆತನಿಗೆ ವಂದಿಸಿ ಇಂತು ನುಡಿದಳು.

೧೨. ಮಾಲಾವತೀ:—ಯಾವ ಬ್ರಾಹ್ಮಣರು ಭಕ್ತಿಯಿಂದ ಅರ್ಪಿಸಿದ ಹೂವಿನಿಂದಲೂ, ಅಭಿಷೇಕಮಾಡಿದ ನೀರಿನಿಂದಲೂ, ಕೃಷ್ಣಪರಮಾತ್ಮನೂ, ಇತರ ದೇವತೆಗಳೂ, ತೃಪ್ತರಾಗುವರೋ ಅಂಥ ಜನಾರ್ದನರೂಪಿಯಾದ ಬ್ರಾಹ್ಮಣನಾದ ನಿನಗೆ ಸಂತೋಷದಿಂದ ವಂದಿಸುವೆನು.

ಅವಧಾನಂ ಕುರು ವಿಭೋ ಶೋಕಾರ್ತಾಯಾ ನಿವೇದನೇ ।
ಸಮಾ ಕೃಪಾ ಸತಾಂ ಶಶ್ವದ್ಯೋಗ್ಯಾಯೋಗ್ಯೇ ಕೃಪಾವತಾಂ ॥ ೧೩ ॥

ಉಪಬರ್ಹಣಭಾರ್ಯಾಹಂ ಕನ್ಯಾ ಚಿತ್ರರಥಸ್ಯ ಚ ।
ಸರ್ವೇ ಮಾಲಾವತೀಂ ಕೃತ್ವಾ ವದಂತೇ ವಿಪ್ರಪುಂಗವ ॥ ೧೪ ॥

ದಿವ್ಯಂ ಲಕ್ಷಯುಗಂ ರಮ್ಯೇ ಸ್ಥಾನೇ ಸ್ಥಾನೇ ಮನೋಹರೇ ।
ಕೃತಾ ಸ್ವಚ್ಛಂದತಃ ಕ್ರೀಡಾ ಚಾನೇನ ಸ್ವಾಮಿನಾ ಸಹ ॥ ೧೫ ॥

ಪ್ರಿಯಸ್ನೇಹೋ ಹಿ ಸಾಧ್ವೀನಾಂ ಯೋವಾನ್ನಿಪ್ರೇಂದ್ರ ಯೋಷಿತಾಂ ।
ಸರ್ವಂ ಶಾಸ್ತ್ರಾನುಸಾರೇಣ ಜಾನಾಸಿ ತ್ವಂ ವಿಚಕ್ಷಣ ॥ ೧೬ ॥

---

೧೩. ದಯಾಶಾಲಿಗಳ ದಯೆಯು ಯೋಗ್ಯರಲ್ಲೂ ಅಯೋಗ್ಯರಲ್ಲೂ, ಒಂದೇ ಸಮನಾಗಿರಬೇಕಲ್ಲವೇ ? ಅಂದಮೇಲೆ, ಎಲೈ ದಯಾಮಯನೇ ! ದೀನಳಾದ ನನ್ನ ಬೇಡಿಕೆಯನ್ನು ಸಾವಧಾನದಿಂದ ಕೇಳುವಷ್ಟು ಕೃಪೆಮಾಡು.

೧೪. ಎಲೈ ಬ್ರಾಹ್ಮಣಶ್ರೇಷ್ಠನೇ, ನಾನು ಉಪಬರ್ಹಣನ ಧರ್ಮಪತ್ನಿ. ಚಿತ್ರರಥನ ಪ್ರೇಮ ಪುತ್ರಿಯಾದ ನನ್ನನ್ನು 'ಮಾಲಾವತೀ' ಎಂದು ಎಲ್ಲರೂ ಕರೆಯುವರು.

೧೫. ನನ್ನ ಪತಿದೇವನೊಡನೆ, ಪ್ರಕೃತಿಸುಂದರವಾದ ಅನೇಕ ಸ್ಥಳಗಳಲ್ಲಿ ದಿವ್ಯಲಕ್ಷಯುಗಗಳ ಕಾಲ ಮನಬಂದಂತೆ ಕ್ರೀಡಿಸಿದೆನು. ಮತ್ತು ಇಂದ್ರಿಯ ಸುಖ ಗಳನ್ನು ಅನುಭವಿಸಿದೆನು.

೧೬. ಎಲೈ, ಬ್ರಾಹ್ಮಣೋತ್ತಮನೇ ! 'ಪತಿವ್ರತಾಸ್ತ್ರೀಯರಿಗೆ ತಮ್ಮ ಪತಿ ದೇವನಲ್ಲಿ ಎಷ್ಟು ಪ್ರೇಮವಿರುವುದು. ಎಷ್ಟು ಭಕ್ತಿ, ಪ್ರೇಮಗಳು ಪತಿಯಲ್ಲಿರ ಬೇಕೆಂದು ಶಾಸ್ತ್ರವಿಹಿತವಾಗಿರುವುದು.' ಎಂಬುದನ್ನು ಕುಶಲಿಯಾದ ನೀನು ಬಲ್ಲೆ.

ಅಕಸ್ಮಾದ್ಬ್ರಹ್ಮಣಃ ಶಾಪಾತ್ಪ್ರಾಣಾಂಸ್ತತ್ಯಾಜ ಮತ್ಪತಿಃ ।
ದೇವಾನುದ್ದಿಶ್ಯ ವಿಲಪೇ ಯಥಾ ಜೀವತಿ ಮತ್ಪತಿಃ ॥ ೧೭ ॥

ಸ್ವಕಾರ್ಯಸಾಧನೇ ಸರ್ವೇ ವ್ಯಗ್ರಾಶ್ಚ ಜಗತೀತಲೇ ।
ಭಾವಾಭಾವಂ ನ ಜಾನಂತಿ ಕೇವಲಂ ಸ್ವಾರ್ಥತತ್ಪರಾಃ ॥ ೧೮ ॥

ಸುಖಂ ದುಃಖಂ ಭಯಂ ಶೋಕಃ ಸಂತಾಪಃ ಕರ್ಮಣಾಂ ನೃಣಾಂ ।
ಐಶ್ವರ್ಯಂ ಪರಮಾನಂದೋ ಜನ್ಮಮೃತ್ಯುಶ್ಚ ಮೋಕ್ಷಣಂ ॥ ೧೯ ॥

ದೇವಾಶ್ಚ ಸರ್ವಜನಕಾ ದಾತಾರಃ ಕರ್ಮಣಾಂ ಫಲಂ ।
ಕರ್ತಾರಃ ಕರ್ಮವೃಕ್ಷಾಣಾಂ ಮೂಲಚ್ಛೇದಂ ಚ ಲೀಲಯಾ ॥ ೨೦ ॥

---

೧೭. ಹೀಗಿರುವಾಗ, ನನ್ನ ಜನ್ಮಾಂತರ ಪಾಪಕರ್ಮವಿಶೇಷದಿಂದ ನನ್ನ ಪತಿಯು ಬ್ರಹ್ಮನ ಶಾಪಕ್ಕೊಳಗಾಗಿ ಗತಜೀವಿತನಾದನು ನಾನಾದರೋ ನನ್ನ ಪತಿಯನ್ನು ಬದುಕಿಸಿಕೊಳ್ಳಲು ದೇವತೆಗಳನ್ನು ಕುರಿತು ದೈನ್ಯದಿಂದ ಬೇಡಿಕೊಳ್ಳುತ್ತಿರುವೆನು.

೧೮. ಈ ಜಡಜಗತ್ತಿನ ಜನರೆಲ್ಲರೂ, ತಮ್ಮ ತಮ್ಮ ಕೆಲಸ ಮಾಡಿಕೊಳ್ಳುವುದರಲ್ಲಿ ನಿಪುಣರು. ತಮ್ಮ ಸ್ವಾರ್ಥಪರತೆಯ ಆವೇಶದಲ್ಲಿ ಮತ್ತೊಬ್ಬರ ಮನೋಭಿಪ್ರಾಯವನ್ನೂ, ಕಷ್ಟಸುಖಗಳನ್ನೂ ಅರಿಯಲಾರರು.

೧೯. ಮನುಷ್ಯರಿಗೆ ಸುಖದುಃಖಗಳಾಗಲೀ, ಭಯಶೋಕಗಳಾಗಲೀ, ಆಧ್ಯಾತ್ಮಿಕ, ಆದಿಭೌತಿಕ ಮತ್ತು ಆದಿದೈವಿಕವಾದ ಸಂತಾಪಗಳಾಗಲೀ, ಜನನ ಮರಣಗಳಾಗಲೀ, ಐಶ್ವರ್ಯ, ಜೀವನದ ಆನಂದ ಮತ್ತು ಮೋಕ್ಷಗಳಾಗಲೀ, ಅವರವರ ಜನ್ಮಾಂತರದ ಕರ್ಮಕ್ಕೆ ಅನುಸಾರವಾಗಿ ಒದಗುವುವು.

೨೦. ಮನುಜರಿಗೆ ತಂದೆಯಂತಿರುವ ದೇವತೆಗಳು ಆಯಾಯ ಕರ್ಮಗಳ ಸದಸತ್ಫಲಗಳನ್ನು ಕೊಡುವರು. ಅವರು ಇಚ್ಛೆಪಟ್ಟರೆ ಮನುಜರ ಕರ್ಮವೃಕ್ಷದ ಮೂಲವನ್ನು ನಿರ್ಮೂಲಗೊಳಿಸಬಲ್ಲರು.

ನ ಹಿ ದೇವಾತ್ಪರೋ ಬಂಧುರ್ನ ಹಿ ದೇವಾತ್ಪರೋ ಬಲೀ ।
ದಯಾವಾನ್ನ ಹಿ ದೇವಾಚ್ಚ ನ ಚ ದಾತಾ ತತಃ ಪರಃ　　॥ ೨೧ ॥

ಸರ್ವಾನ್ದೇವಾನಹಂ ಯಾಚೇ ಪತಿದಾನಂ ಮಮೇಪ್ಸಿತಂ ।
ಧರ್ಮಾರ್ಥಕಾಮಮೋಕ್ಷಾಣಾಂ ಫಲದಾಂಶ್ಚ ಸುರದ್ರುಮಾನ್　　॥ ೨೨ ॥

ಯದಿ ದಾಸ್ಯಂತಿ ದೇವಾ ಮೇ ಕಾಂತದಾನಂ ಯಥೇಪ್ಸಿತಂ ।
ಭದ್ರಂ ತದಾನ್ಯಥಾ ತೇಭ್ಯೋ ದಾಸ್ಯಾಮಿ ಸ್ತ್ರೀವಧಂ ಧ್ರುವಂ　　॥ ೨೩ ॥

ಶಪಿಷ್ಯಾಮಿ ಚ ಸರ್ವಾಂಶ್ಚ ದಾರುಣಂ ದುರ್ನಿವಾರಕಂ ।
ದುರ್ನಿವಾರ್ಯಃ ಸತೀಶಾಪಸ್ತಪಸಾ ಕೇನ ವಾರ್ಯತೇ　　॥ ೨೪ ॥

---

೨೧. ದೇವತೆಗಳಿಗಿಂತ ಮನುಜರಿಗೆ ಬೇರಾರು ಬಂಧುಗಳಿರುವರು ? ದೇವತೆಗಳಿಗಿಂತ ಬಲಿಷ್ಠರಾರು ? ದಯಾವಂತರೂ, ದಾನಶೀಲರೂ ದೇವತೆಗಳಲ್ಲದೆ ಮತ್ತಾರು ?

೨೨. ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವರ್ಗಗಳ ಫಲವನ್ನು ಕೊಡಲು ಕಲ್ಪವೃಕ್ಷದಂತಿರುವ ದೇವತೆಗಳನ್ನು ಕುರಿತು ನನ್ನ ಪುರುಷಾರ್ಥಕ್ಕೆ ಮೂಲಕಾರಣನಾದ ಪತಿದೇವನನ್ನು ಉಳಿಸಿಕೊಡಬೇಕೆಂದು ಬೇಡಿಕೊಳ್ಳುವೆನು.

೨೩. ನನ್ನ ಬೇಡಿಕೆಯಂತೆ ನನ್ನ ಕಾಂತನನ್ನು ಜೀವಿಸಿಕೊಟ್ಟರೆ ನನಗೂ ಕ್ಷೇಮ. ದೇವತೆಗಳಿಗೂ ಕ್ಷೇಮ. ಇಲ್ಲವಾದರೆ ನಾನೂ ಆತ್ಮತ್ಯಾಗಮಾಡಿ ಸ್ತ್ರೀವಧೆ ರೂಪವಾದ ಮಹಾಪಾಪವನ್ನು ದೇವತೆಗಳಿಗೆ ಗಂಟಿಕ್ಕುವೆನು.

೨೪. ಅಲ್ಲದೆ ಎಲ್ಲಾ ದೇವತೆಗಳಿಗೂ ಭಯಂಕರವಾದ ಶಾಪವನ್ನು ಕೊಡುವೆನು. ಪತಿವ್ರತೆಯ ಶಾಪವು ಅಮೋಘವಾದುದು. ಎಷ್ಟು ತಪಸ್ಸು ಮಾಡಿದರೂ ಆ ಶಾಪದಿಂದ ಬಿಡುಗಡೆ ಹೊಂದಲಾಗದು.

ಇತ್ಯುಕ್ತ್ವಾ ಮಾಲತೀ ಸಾಧ್ವೀ ಶೋಕಾರ್ತಾ ಸುರಸಂಸದಿ ।
ವಿರರಾಮ ದ್ವಿಜಶ್ರೇಷ್ಠಸ್ತಾಮುವಾಚ ಚ ಶೌನಕ ॥ ೨೫ ॥

॥ ಬ್ರಾಹ್ಮಣ ಉವಾಚ ॥

ಕರ್ಮಣಾಂ ಫಲದಾತಾರೋ ದೇವಾಃ ಸತ್ಯಂ ಚ ಮಾಲತೀ ।
ನ ಸದ್ಯಃ ಸುಚಿರೇಣೈವ ಧಾನ್ಯಂ ಕೃಷಕವನ್ನೃಣಾಂ ॥ ೨೬ ॥

ಗೃಹೀ ಚ ಕೃಷಕದ್ವಾರಾ ಕ್ಷೇತ್ರೇ ಧಾನ್ಯಂ ವಪೇತ್ಸತಿ ।
ತದಂಕುರೋ ಭವೇತ್ಕಾಲೇ ಕಾಲೇ ವೃಕ್ಷಃ ಫಲತ್ಯಪಿ ॥ ೨೭ ॥

ಕಾಲೇ ಸುಪಕ್ವಂ ಭವತಿ ಕಾಲೇ ಪ್ರಾಪ್ನೋತಿ ತದ್ಗೃಹೀ ।
ಏವಂ ಸರ್ವಂ ಸಮುನ್ನೇಯಂ ಚಿರೇಣ ಕರ್ಮಣಃ ಫಲಂ ॥ ೨೮ ॥

---

೨೫. ಸಾಧ್ವೀಶಿರೋಮಣಿಯಾದ ಮಾಲಾವತೀದೇವಿಯು ಆ ಬ್ರಹ್ಮಚಾರಿಯನ್ನು ಕುರಿತು ಹೀಗೆ ಹೇಳಿ ದುಃಖಪೂರಿತಳಾಗಿ ಸುಮ್ಮನೆ ಕುಳಿತಳು. ಆಗ ಆ ಬ್ರಹ್ಮಚಾರಿಯು ಆಕೆಯನ್ನು ಕುರಿತು ಇಂತೆಂದನು.

೨೬. ಬ್ರಾಹ್ಮಣ:–ಎಲೌ, ಮಾಲಾವತೀದೇವಿಯೇ, ದೇವತೆಗಳು ಮನುಜರ ಪುಣ್ಯಪಾಪಕರ್ಮಗಳ ಫಲವನ್ನು ಕೊಡುವರೆಂಬುದು ಸತ್ಯ. ಆದರೆ ಇಂದಿನ ಕರ್ಮಕ್ಕೆ ಇಂದೇ ಫಲದೊರೆಯದು. ರೈತನು ತಾನು ಬಿತ್ತಿದ ಧಾನ್ಯದ ಫಸಲನ್ನು ಬಹುಕಾಲದ ಮೇಲೆ ಪಡೆಯುವನಲ್ಲವೇ?

೨೭–೨೮. ಗೃಹಸ್ಥನೊಬ್ಬನು ರೈತನಿಗೆ ಕಾಳುಕೊಟ್ಟು, ತನ್ನ ಜಮೀನಿನಲ್ಲಿ ಬಿತ್ತಿಸಿದರೆ, ಅದು ಕೆಲವು ದಿವಸಗಳ ಮೇಲೆ ಮೊಳೆತು ಕ್ರಮೇಣ ಸಸಿ, ಮರವಾಗಿ, ಹೂತು, ಹಣ್ಣುಬಿಡುವುದು. ಅದು ಮಾಗಿ ಗೃಹಸ್ಥನ ಕೈಸೇರಬೇಕಾದರೆ ಇನ್ನೂ ಎಷ್ಟೋ ದಿವಸಗಳಾಗುವುವು. ಅಂತೆಯೇ ಎಲ್ಲಾ ಕರ್ಮಗಳ ಫಲವೂ ಕೈಗೂಡಬೇಕಾದರೆ ಬಹಳಕಾಲ ಬೇಕಾಗುವುದು.

ಅಸ್ಮಿನ್ ವಪತಿ ಸಂಸಾರೇ ಗೃಹಸ್ಥೋ ವಿಷ್ಣು ಮಾಯಯಾ ।
ಕಾಲೇ ತದಂಕುರೋ ವೃಕ್ಷಃ ಕಾಲೇ ಪ್ರಾಪ್ನೋತಿ ತತ್ಫಲಂ ॥ ೨೯ ॥

ಪುಣ್ಯವಾನ್ ಪುಣ್ಯಭೂಮೌ ಚ ಕರೋತಿ ಸುಚಿರಂ ತಪಃ ।
ತೇಷಾಂ ಚ ಫಲದಾತಾರೋ ದೇವಾಃ ಸತ್ಯಂ ನ ಸಂಶಯಃ ॥ ೩೦ ॥

ಬ್ರಾಹ್ಮಣಾನಾಂ ಮುಖೇ ಕ್ಷೇತ್ರೇ ಶ್ರೇಷ್ಠೇಽನೂಷರ ಏವ ಚ ।
ಯೋ ಯಜ್ಜುಹೋತಿ ಭಕ್ತ್ಯಾ ಚ ಸ ತತ್ಪ್ರಾಪ್ನೋತಿ ನಿಶ್ಚಿತಂ ॥ ೩೧ ॥

ನ ಬಲಂ ನ ಚ ಸೌಂದರ್ಯಂ ನೈಶ್ವರ್ಯಂ ನ ಧನಂ ಸುತಃ ।
ನೈವ ಸ್ತ್ರೀ ನ ಚ ಸತ್ಕಾಂತೇಃ ಕಿಂ ಭವೇತ್ತಪಸಾ ವಿನಾ ॥ ೩೨ ॥

ಸೇವತೇ ಪ್ರಕೃತಿಂ ಯೋ ಹಿ ಭಕ್ತ್ಯಾ ಜನ್ಮನಿ ಜನ್ಮನಿ ।
ಸ ಲಭೇತ್ ಸುಂದರೀಂ ಕಾಂತಾಂ ವಿನೀತಾಂ ಚ ಗುಣಾನ್ವಿತಾಂ ॥ ೩೩ ॥

---

೨೯. ಗೃಹಸ್ಥನು ಸಂಸಾರದಲ್ಲಿ ವಿಷ್ಣುಮಾಯೆಗೊಳಗಾಗಿ ಬೀಜಾವಾಪ ಮಾಡುವನು. ಆ ಬೀಜವು ಮೊಳೆತು ಮರವಾಗಿ ಕಾಲದಲ್ಲಿ ಫಲಪ್ರದವಾಗುವುದು.

೩೦. ಪುಣ್ಯವಂತನು ಪುಣ್ಯಕ್ಷೇತ್ರದಲ್ಲಿ ಬಹುಕಾಲ ತಪಸ್ಸುಮಾಡಿ, ಆ ತಪಸ್ಸಿನ ಫಲವನ್ನು ದೇವತೆಗಳಿಂದ ಪಡೆಯುವನೆಂಬುದು ಸತ್ಯ. ಇದರಲ್ಲಿ ಸಂಶಯ ಲೇಶವೂ ಇಲ್ಲ.

೩೧. ಫಲವತ್ತಾದ ಮತ್ತು ಅತ್ಯುತ್ತಮವಾದ ಬ್ರಾಹ್ಮಣರ ಮುಖವೆಂಬ ಕ್ಷೇತ್ರದಲ್ಲಿ ಯಾರು ಭಕ್ತಿಯಿಂದ ಏನನ್ನು ಹೋಮಮಾಡುವರೋ ಅದರ ಫಲವನ್ನು ಖಂಡಿತವಾಗಿ ಪಡೆಯುವರು. ಅಂದರೆ, ಭಕ್ತಿಯಿಂದ ಬ್ರಾಹ್ಮಣರಿಗೆ ಸದ್ವಸ್ತುಗಳನ್ನು ದಾನಮಾಡುವುದರಿಂದ ಸತ್ಫಲಗಳು ದೊರೆಯುವುವು.

೩೨. ಬಲ, ಸೌಂದರ್ಯ, ಐಶ್ವರ್ಯ, ಹೆಂಡತಿ, ಮಕ್ಕಳು ಮತ್ತು ಗಂಡ ಇವುಗಳಲ್ಲಿ ಯಾವುದು ಲಭಿಸಬೇಕಾದರೂ ಜನ್ಮಾಂತರದಲ್ಲಿ ಒಳ್ಳೆಯ ತಪಸ್ಸನ್ನು ಮಾಡಿರಬೇಕು.

೩೩. ಯಾವ ಮನುಜನು ಭಕ್ತಿಯಿಂದ ಅನೇಕ ಜನ್ಮಗಳಲ್ಲಿ ಪ್ರಕೃತಿದೇವಿಯನ್ನಾರಾಧಿಸುವನೋ, ಆತನಿಗೆ ಸುಂದರಿಯೂ, ವಿನೀತೆಯೂ, ಗುಣವಂತೆಯೂ ಆದ ಪತ್ನಿಯು ದೊರೆಯುವಳು.

ಶ್ರಿಯಂ ಚ ನಿಶ್ಚಲಾಂ ಪುತ್ರಂ ಪೌತ್ರಂ ಭೂಮಿಂ ಧನಂ ಪ್ರಜಾಂ ।
ಪ್ರಕೃತೇಶ್ಚ ವರೇಣೈವ ಲಭೇದ್ಭಕ್ತೋऽವಲೀಲಯಾ ॥ ೩೪ ॥

ಶಿವಂ ಶಿವಸ್ವರೂಪಂ ಚ ಶಿವದಂ ಶಿವಕಾರಣಂ ।
ಜ್ಞಾನಾನಂದಂ ಮಹಾತ್ಮಾನಂ ಪರಂ ಮೃತ್ಯುಂಜಯಂ ಪರಂ ॥ ೩೫ ॥

ತಮೀಶಂ ಸೇವತೇ ಯೋऽಹಿ ಭಕ್ತ್ಯಾ ಜನ್ಮನಿ ಜನ್ಮನಿ ।
ಪುಮಾನ್ ಪ್ರಾಪ್ನೋತಿ ಸತ್ಕಾಂತಾಂ ಕಾಮಿನೀ ಚಾಪಿ ಸತ್ಪತಿಂ ॥ ೩೬ ॥

ವಿದ್ಯಾಂ ಜ್ಞಾನಂ ಸುಕವಿತಾಂ ಪುತ್ರಂ ಪೌತ್ರಂ ಪರಾಂ ಶ್ರಿಯಂ ।
ಬಲಂ ಧನಂ ವಿಕ್ರಮಂ ಚ ಲಭೇದ್ಧರವರೇಣ ಸಃ ॥ ೩೭ ॥

ಬ್ರಹ್ಮಾಣಂ ಭಜತೇ ಯೋऽಹಿ ಲಭೇತ್ಸೋऽಪಿ ಪ್ರಜಾಂ ಶ್ರಿಯಂ ।
ವಿದ್ಯಾಮೈಶ್ವರ್ಯಮಾನಂದಂ ವರೇಣ ಬ್ರಹ್ಮಣೋ ನರಃ ॥ ೩೮ ॥

---

೩೪. ಪ್ರಕೃತಿದೇವಿಯನ್ನು ಭಕ್ತಿಯಿಂದ ಸೇವಿಸಿದರೆ, ನಿಶ್ಚಲವಾದ ಸಂಪತ್ತೂ, ಪುತ್ರಪೌತ್ರರೂ, ಧನಧಾನ್ಯಗಳೂ, ಸತ್ಪ್ರಜೆಗಳೂ, ಭಕ್ತರಿಗೆ ದೊರೆಯುವರು.

೩೫–೩೬. ಯಾವ ಮನುಜನು ಮಂಗಳಸ್ವರೂಪನೂ, ಮಂಗಳಕಾರಕನೂ, ನಿತ್ಯಾನಂದಮಹಿಮನೂ, ಮತ್ತು ಮೃತ್ಯುಂಜಯನೂ ಆದ ಪರಶಿವನನ್ನು ಭಕ್ತಿಯಿಂದ ಅನೇಕ ಜನ್ಮಗಳಲ್ಲಿ ಸೇವಿಸುವನೋ ಅವನು ತನಗನುರೂಪಳಾದ ಸತಿಯನ್ನೂ, ಅಂತೆಯೇ ಭಕ್ತಿಯಿಂದ ಭಜಿಸುವಾಕೆಯು ಅನುರೂಪಪತಿಯನ್ನೂ ಹೊಂದುವುದರಲ್ಲಿ ಸಂದೇಹವಿಲ್ಲ.

೩೭. ಈಶ್ವರನ ಭಕ್ತನು ಸದ್ವಿದ್ಯೆಯನ್ನೂ, ದಿವ್ಯಜ್ಞಾನವನ್ನೂ, ಒಳ್ಳೆಯ ಕವಿತಾಶಕ್ತಿಯನ್ನೂ, ಪುತ್ರಪೌತ್ರರನ್ನೂ, ವಿಪುಲೈಶ್ವರ್ಯವನ್ನೂ, ಬಲ, ಧನ, ವಿಕ್ರಮಗಳನ್ನೂ ಈಶ್ವರನ ವರಪ್ರಸಾದದಿಂದ ಹೊಂದುವನು.

೩೮. ಬ್ರಹ್ಮನನ್ನು ಭಕ್ತಿಯಿಂದ ಸೇವಿಸುವ ಮನುಜನೂ, ಉತ್ತಮವಾದ ಮಕ್ಕಳು, ಸಂಪತ್ತು, ವಿದ್ಯೆ, ಐಶ್ವರ್ಯ, ಮತ್ತು ಆನಂದ ಮುಂತಾದ ಅಭೀಷ್ಟಗಳನ್ನು ಬ್ರಹ್ಮನ ವರದಿಂದ ಪಡೆಯುವನು.

ಯೋ ನರೋ ಜಪತೇ ಭಕ್ತ್ಯಾ ದೀನನಾಥಂ ದಿನೇಶ್ವರಂ ।
ವಿದ್ಯಾಮಾನಂದಮಾರೋಗ್ಯಂ ಧನಂ ಪುತ್ರಂ ಲಭೇದ್ಧ್ರುತಂ ॥ ೩೯ ॥

ಗಣೇಶ್ವರಂ ಯೋ ಭಜತೇ ದೇವದೇವಂ ಸನಾತನಂ ।
ಸರ್ವಾಗ್ರಪೂಜ್ಯಂ ಸರ್ವೇಶಂ ಭಕ್ತ್ಯಾ ಜನ್ಮನಿ ಜನ್ಮನಿ ॥ ೪೦ ॥

ವಿಘ್ನನಾಶೋ ಭವೇತ್ತಸ್ಯ ಸ್ವಪ್ನೇ ಜಾಗರಣೇಽನಿಶಂ ।
ಪರಮಾನಂದಮೈಶ್ವರ್ಯಂ ಪುತ್ರಂ ಪೌತ್ರಂ ಧನಂ ಪ್ರಜಾಃ ॥ ೪೧ ॥

ಜ್ಞಾನಂ ವಿದ್ಯಾಂ ಸುಕವಿತಾಂ ಲಭತೇ ತದ್ವರೇಣ ಚ ।
ಭಜತೇ ಯೋಹಿ ವಿಷ್ಣುಂ ಚ ಲಕ್ಷ್ಮೀಕಾಂತಂ ಸುರೇಶ್ವರಂ ॥ ೪೨ ॥

ವರಾರ್ಥೀ ಚೇಲ್ಲಭೇತ್ಸರ್ವಂ ನಿರ್ವಾಣಮನ್ಯಥಾ ಧ್ರುವಂ ।
ಶಾಂತಂ ನಿಷೇವ್ಯ ಪಾತಾರಂ ಸತ್ಯಂ ಸತ್ಯಂ ಲಭೇನ್ನರಃ ॥ ೪೩ ॥

---

೩೯. ದೀನರಕ್ಷಕನಾದ ದಿನಮಣಿಯನ್ನು (ಸೂರ್ಯ) ಯಾರು ಭಕ್ತಿಯಿಂದ ಭಜಿಸುವರೋ ಅವರು ವಿದ್ಯೆ, ಆನಂದ, ಆರೋಗ್ಯ, ಧನ, ಮತ್ತು ಪುತ್ರ ಪೌತ್ರರು ಮೊದಲಾದ ಇಷ್ಟಾರ್ಥಗಳನ್ನು ಪಡೆಯುವರು.

೪೦–೪೧. ಎಲ್ಲ ದೇವತೆಗಳಿಗಿಂತಲೂ ಮೊದಲು ಪೂಜ್ಯನೂ, ಸರ್ವೇಶ್ವರನೂ ಆದ ಗಣೇಶ್ವರನನ್ನು ಯಾರು ಅನೇಕಜನ್ಮಗಳಲ್ಲಿ ಭಜಿಸುವರೋ ಅವರು ಬಯಸಿದ ಕಾರ್ಯವೆಲ್ಲವೂ ನಿರ್ವಿಘ್ನವಾಗಿ ನೆರವೇರುವುದು. ಗಣಪತಿಯ ಅನುಗ್ರಹವಾದರೆ ಮನುಜನಿಗೆ ಪುತ್ರಪೌತ್ರಧನಸಂಪತ್ತಿಯೂ, ಅಮಿತೈಶ್ವರ್ಯಾನಂದಗಳೂ, ಜ್ಞಾನ, ವಿದ್ಯೆ, ಮತ್ತು ಸುಕವಿತೆಗಳೂ ಕೈಗೂಡುವುವು.

೪೨–೪೩. ಲಕ್ಷ್ಮೀಪತಿಯೂ, ಶಾಂತಾತ್ಮನೂ ಆದ ಮಹಾವಿಷ್ಣುವನ್ನು ಭಜಿಸುವಾತನು ತಾನು ಬಯಸಿದ ಅಭಿಲಾಷೆಗಳನ್ನೂ, ನಿಷ್ಕಾಮನಾದರೆ ಶಾಶ್ವತವಾದ ಮುಕ್ತಿಪದವಿಯನ್ನೂ, ಸತ್ಯವಾಗಿಯೂ ಪಡೆಯುವನು.

ಸರ್ವಂ ತಪಃ ಸರ್ವಧರ್ಮಂ ಯಶಃ ಕೀರ್ತಿಮನುತ್ತಮಾಂ ।
ವಿಷ್ಣುಂ ನಿಷೇವ್ಯ ಸರ್ವೇಶಂ ಯೋ ಮೂಢೋ ಲಭತೇ ವರಂ ॥ ೪೪ ॥

ವಿಡಂಬಿತೋ ವಿಧಾತ್ರಾಸೌ ಮೋಹಿತೋ ವಿಷ್ಣುಮಾಯಯಾ ।
ಮಾಯಾ ನಾರಾಯಣೀಶಾನಾ ಸರ್ವಪ್ರಕೃತಿರೀಶ್ವರೀ ॥ ೪೫ ॥

ಸಾ ಕೃಪಾಂ ಕುರುತೇ ಯಂ ಚ ವಿಷ್ಣುಮಂತ್ರಂ ದದಾತಿ ತಂ ।
ಧರ್ಮಂ ಯೋ ಭಜತೇ ಧರ್ಮೀ ಸರ್ವಧರ್ಮಂ ಲಭೇದ್ಧ್ರುವಂ ॥ ೪೬ ॥

ಇಹಲೋಕೇ ಸುಖಂ ಭುಕ್ತ್ವಾ ಯಾತಿ ವಿಷ್ಣೋಃ ಪರಂ ಪದಂ ।
ಯೋ ಯಂ ದೇವಂ ಭಜೇದ್ಭಕ್ತ್ಯಾ ಸ ಚಾದೌ ಲಭತೇ ಚ ತಂ ॥ ೪೭ ॥

ಕಾಲೇ ಪಶ್ಚಾತ್ತೇನ ಸಾರ್ಧಂ ಪರಂ ವಿಷ್ಣೋಃ ಪದಂ ಲಭೇತ್ ।
ಶ್ರೀಕೃಷ್ಣಂ ಭಜತೇ ಯೋಹಿ ನಿರ್ಗುಣಂ ಪ್ರಕೃತೇಃ ಪರಂ ॥ ೪೮ ॥

೪೪–೪೫. ಮೂಢನಾದವನು ವಿಷ್ಣುಭಜನೆ ಮಾತ್ರದಿಂದಲೇ ಅನೇಕ ತಪಃ ಸಂಪತ್ತನ್ನೂ, ಸದ್ಧರ್ಮವನ್ನೂ ಆಚಂದ್ರಾರ್ಕವಾದ ಕೀರ್ತಿಯನ್ನೂ ಪಡೆಯುವನು. ಮಾನವನು ಬ್ರಹ್ಮವಿಷ್ಣುಗಳ ಮಾಯೆಗೆ ಸಿಲುಕಿರೂ, ಆ ಮಾಯಾದೇವಿಯು ಪ್ರಕೃತಿದೇವಿಯ ಕೃಪೆಯೊದಗಿದರೆ, ಆಕೆಯ ಮಹಿಮೆಯಿಂದ ವಿಷ್ಣುಮಂತ್ರವನ್ನು ಜಪಿಸಿ, ವಿಷ್ಣುವಿನ ಅನುಗ್ರಹಕ್ಕೆ ಪಾತ್ರನಾಗುವನು.

೪೬–೪೭. ಧರ್ಮ ಪುರುಷನನ್ನು ಭಜಿಸುವಾತನು ಎಲ್ಲಾ ಧರ್ಮಗಳನ್ನೂ ಪಡೆಯುವನು. ಇಹಲೋಕದಲ್ಲಿರುವವರೆಗೂ ಸುಖವನ್ನನುಭವಿಸಿ ಪರಲೋಕದಲ್ಲಿ ವಿಷ್ಣುವಿನ ಪರಮಪದವನ್ನು ಸೇರುವನು. ಯಾರು ಭಕ್ತಿಯಿಂದ ಯಾವ ದೇವರನ್ನು ಭಜಸುವರೋ ಆ ದೇವರಪದವಿಯನ್ನು ಮೊದಲು ಪಡೆಯುವರು.

೪೮–೫೦. ಅನಂತರ ಕಾಲಾನುಗುಣವಾಗಿ ಆಯಾಯ ದೇವತೆಗಳೊಡನೆ ವಿಷ್ಣುವಿನ ಪದವಿಯನ್ನು ಪಡೆಯುವರು. ಪ್ರಕೃತಿದೇವಿಗಿಂತ ಪರನೂ, ಬ್ರಹ್ಮ, ವಿಷ್ಣು, ಮಹೇಶಾದಿಗಳಿಂದ ಸೇವಿತನೂ, ನಾಶರಹಿತನೂ, ಅನಾದಿಯೂ,

ಬ್ರಹ್ಮವಿಷ್ಣುಶಿವಾದೀನಾಂ ಸೇವ್ಯಂ ಬೀಜಂ ಪರಾತ್ಪರಂ ।
ಅಕ್ಷರಂ ಪರಮಂ ಬ್ರಹ್ಮ ಭಗವಂತಂ ಸನಾತನಂ ॥ ೪೯ ॥

ಸಾಕಾರಂ ಚ ನಿರಾಕಾರಂ ಜ್ಯೋತಿಃ ಸ್ವೇಚ್ಛಾಮಯಂ ವಿಭುಂ ।
ಸರ್ವಾಧಾರಂ ಚ ಸರ್ವೇಶಂ ಪರಮಾನಂದಮೀಶ್ವರಂ ॥ ೫೦ ॥

ನಿರ್ಲಿಪ್ತಂ ಸಾಕ್ಷಿರೂಪಂ ಚ ಭಕ್ತಾನುಗ್ರಹವಿಗ್ರಹಂ ।
ಜೀವನ್ಮುಕ್ತಃ ಸ ಸತ್ಯಂ ಹಿ ನ ವರಂ ಲಭತೇ ಸುಧೀಃ ॥ ೫೧ ॥

ಸ ಸರ್ವಂ ಮನ್ಯತೇ ತುಚ್ಛಂ ಸಾಲೋಕ್ಯಾದಿ ಚತುಷ್ಟಯಂ ।
ಬ್ರಹ್ಮತ್ವಮಮರತ್ವಂ ವಾ ಮೋಕ್ಷಂ ಯತ್ತುಚ್ಛವತ್ಸತಿ ॥ ೫೨ ॥

ಐಶ್ವರ್ಯಂ ಲೋಷ್ಟತುಲ್ಯಂ ಚ ನಶ್ವರಂ ಚೈವ ಮನ್ಯತೇ ।
ಇಂದ್ರತ್ವಂ ಚ ಮನುತ್ವಂ ಚ ಚಿರಜೀವಿತ್ವಮೇವ ವಾ ॥ ೫೩ ॥

ಷಡ್ಗುಣೈಶ್ವರ್ಯಾಸಂಪನ್ನನೂ, ಭಕ್ತರ ದೃಷ್ಟಿಗೆ ಸಾಕಾರನಾಗಿ ಕಂಡರೂ, ವಸ್ತುತಃ ನಿರಾಕರಪರಂಜ್ಯೋತಿ ಸ್ವರೂಪನೂ, ಸ್ವೇಚ್ಛಾಮಯನೂ ಮತ್ತು ಆನಂದಸ್ವರೂಪನೂ ಆದ ಶ್ರೀಕೃಷ್ಣಪರಮಾತ್ಮನನ್ನು ಭಜಿಸುವಾತನು ವೈಷ್ಣವಪದವಿಯನ್ನು ಪಡೆಯುವನು.

೫೧. ಭಕಾನುಗ್ರಹಕಾರಕನೂ, ಕರ್ಮಸಂಪರ್ಕರಹಿತನೂ ಸಾಕ್ಷಿಭೂತನೂ ಆದ ಆ ಪರಮಾತ್ಮನನ್ನು ಭಜಿಸುವಾತನು ಜೀವನ್ಮುಕ್ತನಾಗುವನು. ವಿಷ್ಣುಭಕ್ತನಿಗೆ ಅದಕ್ಕಿಂತಲೂ ಉತ್ತಮವಾದ ಬೇರಾವ ಇಷ್ಟಾರ್ಥವುಂಟು?

೫೨. ಜೀವನ್ಮುಕ್ತನಿಗೆ ಸಾಲೋಕ್ಯ, ಸಾಮೀಪ್ಯ, ಸಾಯುಜ್ಯ ರೂಪವಾದ ಮುಕ್ತಿಗಳಲ್ಲೂ ಬ್ರಹಾದಿ ದೇವತೆಗಳ ಪದವಿಯಲ್ಲೂ, ಬಯಕೆಯುಂಟಾಗುವುದಿಲ್ಲ. ಆ ಸ್ಥಾನಗಳೆಲ್ಲವನ್ನೂ ಆತನು ತುಚ್ಛವಾಗಿ ಎಣಿಸುವನು.

೫೩–೫೪. ವಿಷ್ಣುಭಕ್ತನು ಸಂಪತ್ತೆಲ್ಲವನ್ನೂ ಮಣ್ಣಿನ ಹೆಂಟೆಗೆ ಸಮವೆಂದೂ, ಇಂದ್ರ, ಮನುಗಳ ಸ್ಥಾನವನ್ನು ಕ್ಷಣಿಕವೆಂದೂ ತಿಳಿಯುವನು. ಈ ಬದುಕು ನೀರ

ಜಲಬುದ್ಬುದಬುದ್ಧ್ಯಾ ಚಾತಿತುಚ್ಛಂ ನ ಗಣ್ಯತೇ ।
ಸ್ವಪ್ನೇ ಜಾಗರಣೇ ವಾಽಪಿ ಶಶ್ವತ್ಸೇವಾಂ ಚ ವಾಂಛತಿ ॥ ೫೪ ॥

ದಾಸ್ಯಂ ವಿನಾ ನ ಯಾಚೇತ ಶ್ರೀಕೃಷ್ಣಸ್ಯ ಪದಂ ಪರಂ ।
ತತ್ಪಾದಾಬ್ಜೇ ದೃಢಾಂ ಭಕ್ತಿಂ ಲಬ್ಧ್ವಾ ಪೂರ್ಣೋ ನಿರಂತರಂ ॥ ೫೫ ॥

ಪರಿಪೂರ್ಣತಮಂ ಬ್ರಹ್ಮ ನಿಷೇವ್ಯ ಸುಸ್ಥಿರಃ ಸದಾ ।
ಆತ್ಮನಃ ಕುಲಕೋಟಿಂ ಚ ಶತಂ ಮಾತಾಮಹಸ್ಯ ಚ ॥ ೫೬ ॥

ಶ್ವಶುರಸ್ಯ ಶತಂ ಪೂರ್ವಮುದ್ಧೃತ್ಯ ಚಾವಲೀಲಯಾ ।
ದಾಸಂ ದಾಸೀಂ ಪ್ರಸೂಂ ಭಾರ್ಯಾಂ ಪುತ್ರಾದಪಿ ಪರಂ ಶತಂ ॥ ೫೭ ॥

ಉದ್ಧರೇತ್ಕೃಷ್ಣಭಕ್ತಶ್ಚ ಗೋಲೋಕಂ ಯಾತಿ ನಿಶ್ಚಿತಂ ।
ತಾವದ್ಗರ್ಭೇ ವಸೇತ್ಕಾಮೀ ತಾವತೀ ಯಮಯಾತನಾ ॥ ೫೮ ॥

ತಾವದ್ಗೃಹೇ ಚ ಭೋಗಾರ್ಥೀ ಯಾವತ್ಕೃಷ್ಣಂ ನ ಸೇವತೇ ।

ಮೇಲಣ ಗುಳ್ಳೆಯಂತೆ ಕ್ಷಣಿಕವೆಂದರಿತು, ಚಿರಜೀವಿಯಾಗ ಬೇಕೆಂದು ಬಯಸದೆ, ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲೂ ಪರಮಾತ್ಮನ ಸೇವೆಯೊಂದನ್ನು ಬಯಸುವನು.

೫೫-೫೭. ಪರಮಾತ್ಮನ ಸೇವೆಯನ್ನುಳಿದು ಬೇರಾವುದನ್ನೂ ಭಕ್ತನು ಬಯಸನು. ನಿರಂತರವಾದ ಭಕ್ತಿಯನ್ನು ಪರಮಾತ್ಮನ ಪಾದಾರವಿಂದದಲ್ಲಿರಿಸಿ, ಸ್ಥಿರಮನಸ್ಸಿನಿಂದ ಪರಿಪೂರ್ಣನಾದ ಪರಬ್ರಹ್ಮನನ್ನು ಸೇವಿಸುವವನು, ತನ್ನ ಕುಲಕೋಟಿಗಳನ್ನೂ ತನ್ನ ಅಜ್ಜನ ಮತ್ತು ಮಾವನ ಕುಲದವರನ್ನೂ ಪಾಪಕೂಪದಿಂದ ಉದ್ಧರಿಸಿ, ತನ್ನ ತಾಯಿ, ಪತ್ನೀಪುತ್ರರೂ ಮತ್ತು ದಾಸದಾಸಿಯರೆಲ್ಲರನ್ನೂ ಉದ್ಧರಿಸಿ ನಿಶ್ಚಯವಾಗಿಯೂ ಗೋಲೋಕಕ್ಕೆ ಹೋಗಿ ಸೇರುವನು.

೫೮. ಕಾಮಿಯು ಕೃಷ್ಣನ ಸೇವೆಯು ದೊರಕುವವರೆಗೆ, ಆಶಾಪರನಾಗಿ, ಸಂಸಾರಗರ್ಭದಲ್ಲಿ ವಾಸಿಸುತ್ತಲೂ, ಯಮಯಾತನೆಯನ್ನನುಭವಿಸುತ್ತಲೂ, ಗೃಹಸ್ಥನಾಗಿ ಭೋಗಗಳನ್ನು ಬಯಸುತ್ತಲೂ ಇರುವನು.

ಗುರುವಕ್ತ್ರಾದ್ವಿಷ್ಣುಮಂತ್ರೋ ಯಸ್ಯ ಕರ್ಣೇ ಪ್ರವಿಶ್ಯತಿ ॥ ೫೯ ॥

ಯಮಸ್ತಲ್ಲಿಖನಂ ದೂರಂ ಕರೋತಿ ತತ್ಕ್ಷಣಂ ಭಿಯಾ ।
ಮಧುಪರ್ಕಾದಿಕಂ ಬ್ರಹ್ಮಾ ಪುರೈವತಸ್ಮಿಯೋಜಯೇತ್ ॥ ೬೦ ॥

ಅಹೋ ವಿಲಂಘ್ಯ ಮಲ್ಲೋಕಂ ಮಾರ್ಗೇಣಾನೇನ ಯಾಸ್ಯತಿ ।
ತಸ್ಯ ವೈ ನಿಷ್ಕೃತಿರ್ನಾಸ್ತಿ ಕಲ್ಪಕೋಟಿಶತೈರಪಿ ॥ ೬೧ ॥

ದುರಿತಾನಿ ಚ ಭೀತಾನಿ ಕೋಟಿಜನ್ಮಕೃತಾನಿ ಚ ।
ತಂ ವಿಹಾಯ ಪಲಾಯಂತೇ ವೈನತೇಯಮಿವೋರಗಾಃ ॥ ೬೨ ॥

ಪುರಾತನಂ ಕೃತಂ ಕರ್ಮ ಯದ್ಯತ್ತಸ್ಯ ಶುಭಾಶುಭಂ ।
ಭಿನತ್ತಿ ಕೃಷ್ಣಚಕ್ರೇಣ ತೀಕ್ಷ್ಣಧಾರೇಣ ಸಂತತಂ ॥ ೬೩ ॥

೫೯-೬೦. ಯಾರು ಗುರುಮುಖದಿಂದ ವಿಷ್ಣುಮಂತ್ರವನ್ನು ಶ್ರವಣಮಾಡಿರುವನೋ, ಆತನ ಹೆಸರನ್ನು ತನ್ನ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಯಮನು ಹೆದರುವನು. ವಿಷ್ಣುಭಕ್ತನಿಗೆ ಬ್ರಹ್ಮನೂ ಕೂಡ ಮಧುಪರ್ಕಾದಿಗಳನ್ನು ಸಮರ್ಪಿಸಿ ಸ್ವಾಗತ ವೀಯುವನು.

೬೧. ವಿಷ್ಣುಲೋಕದ ಮಾರ್ಗವಾಗಿ ಆತನು ಗೋಲೋಕಕ್ಕೆ ಹೋಗಿ ಸೇರುವನು. ನೂರಾರುಕೋಟಿ ಕಲ್ಪಗಳು ಕಳೆದರೂ ಕೂಡ ವಿಷ್ಣುಭಕ್ತನಿಗೆ ಗೋಲೋಕದಿಂದ ಚ್ಯುತಿಯಿಲ್ಲ.

೬೨. ಕೋಟಿಜನ್ಮಾಂತರಗಳಲ್ಲಿ ಮಾಡಿದ ಪಾಪಸಮೂಹವೂ ಕೂಡ, ಗರುಡನನ್ನು ಕಂಡ ಹಾವು ದೂರ ಓಡುವಂತೆ ಹರಿದಾಸನಿಗೆ ಹೆದರಿ ದೂರ ಓಡುವುದು.

೬೩. ವೈಷ್ಣವನ ಪುರಾತನವಾದ ಶುಭಾಶುಭಕರ್ಮಗಳನ್ನು ಶ್ರೀಕೃಷ್ಣಪರಮಾತ್ಮನು ತನ್ನ ಹರಿತವಾದ ಅಲುಗುಳ್ಳ ಚಕ್ರದಿಂದ ಕತ್ತರಿಸಿ ತುಂಡ.ಮಾಡಿ .ನುವಡುಬಿ

ತಂ ವಿಹಾಯ ಜರಾಮೃತ್ಯುರ್ಯಾತಿ ಚಕ್ರಭಿಯಾ ಸತಿ ।
ಅನ್ಯಥಾ ಶತಖಂಡಂ ತಾಂ ಕುರುತೇ ಚ ಸುದರ್ಶನಃ ॥ ೬೪ ॥

ನಿಃಶಂಕೋ ಯಾತಿ ಗೋಲೋಕಂ ವಿಹಾಯ ಮಾನವೀಂ ತನುಂ ।
ಗತ್ವಾ ದಿವ್ಯಾಂ ತನುಂ ಧೃತ್ವಾ ಶ್ರೀಕೃಷ್ಣಂ ಸೇವತೇ ಸದಾ ॥ ೬೫ ॥

ಯಾವತ್ಕೃಷ್ಣೋ ಹಿ ಗೋಲೋಕೇ ತಾವದ್ಭಕ್ತೋ ವಸೇತ್ಸದಾ ।
ನಿಮೇಷಂ ಮನ್ಯತೇ ದಾಸೋ ನಶ್ವರಂ ಬ್ರಹ್ಮಣೋ ವಯಃ ॥ ೬೬ ॥

**ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಸೌತಿಶೌನಕ
ಸಂವಾದೇ ವಿಷ್ಣುಮಾಲಾವತೀ ಸಂವಾದೋ ನಾಮ
ಚತುರ್ದಶೋಽಧ್ಯಾಯಃ**

---

೬೪. ಜರಾಮರಣಾದಿಗಳೂ ಕೂಡ ವಿಷ್ಣುಚಕ್ರದ ಭಯದಿಂದ ವಿಷ್ಣುಭಕ್ತನನ್ನು ಬಿಟ್ಟು ದೂರಹೋಗುವುವು. ಇಲ್ಲದಿದ್ದರೆ ಸುದರ್ಶನಚಕ್ರವು ಅವುಗಳನ್ನು ನೂರುತುಂಡು ಮಾಡುವುದು.

೬೫. ಮಾನುಷ ಶರೀರವನ್ನು ಬಿಟ್ಟು ಗೋಲೋಕಕ್ಕೆ ಹೋಗಿ, ದೇವತಾ ಶರೀರವನ್ನು ಧರಿಸಿ ಯಾವಾಗಲೂ ವಿಷ್ಣುಭಕ್ತನು ಶ್ರೀಕೃಷ್ಣನನ್ನು ಸೇವಿಸಿಕೊಂಡಿರುವುದರಲ್ಲಿ ಸಂಶಯವಿಲ್ಲ.

೬೬. ಗೋಲೋಕದಲ್ಲಿ ಕೃಷ್ಣನಿರುವವರೆಗೂ, ಭಕ್ತನೂ ಸೇವಿಸಿಕೊಂಡಿರುವನು. ಆಗ ಹರಿದಾಸನು ಬ್ರಹ್ಮನ ಆಯುಃಪ್ರಮಾಣವನ್ನೂ ಕೂಡ ಕ್ಷಣಿಕವೆಂದು ಭಾವಿಸುವನು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದಲ್ಲಿ ಸೌತಿಶೌನಕ ಸಂವಾದರೂಪವಾದ
ಬ್ರಹ್ಮಖಂಡದಲ್ಲಿ ವಿಷ್ಣುಮಾಲಾವತಿಯರ ಸಂವಾದರೂಪವಾದ
ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

ಹದಿನಾಲ್ಕನೆಯ ಅಧ್ಯಾಯದ ಸಾರಾಂಶವು

ಮಾಲಾವತಿಯು ಪತಿಯ ಶವವನ್ನು ದೇವತೆಗಳ ಮುಂದಿಟ್ಟುಕೊಂಡು ಗೋಳಾಡುತ್ತಿರುವಾಗ ಪರಮಾತ್ಮನು ಬಾಲಬ್ರಹ್ಮಚಾರಿಯ ರೂಪದಲ್ಲಿ ಅಲ್ಲಿಗೆ ಬಂದು ಬ್ರಹ್ಮಾದಿದೇವತೆಗಳೆಲ್ಲರೂ ಅಲ್ಲಿ ಬಂದು ಸೇರಲು ಕಾರಣವೇನೆಂದು ಕೇಳುವನು. ಹಾಗೆಯೇ, ಮೃತದೇಹವನ್ನು ತಬ್ಬಿ ಹಿಡಿದಿರಲು ಕಾರಣವೇನೆಂದು ಮಾಲಾವತಿಯನ್ನೂ ಪ್ರಶ್ನೆಮಾಡುವನು. ಮಾಲಾವತಿಯು ಬ್ರಹ್ಮಚಾರಿಗೆ ಭಕ್ತಿಯಿಂದ ವಂದಿಸಿ, ತನ್ನ ಉತ್ಪತ್ತಿ ಮೊದಲಾಗಿ ಉಪಬರ್ಹಣನಿಗೆ ಬ್ರಹ್ಮಶಾಪ ಬರುವವರೆಗೂ ನಡೆದ ಸಮಾಚಾರವನ್ನೂ, ಮೃತನಾದ ತನ್ನ ಪತಿಯನ್ನು ಎಷ್ಟು ಬೇಡಿದರೂ ಜೀವಿಸಿ ಕೊಡದಿರುವ ದೇವತೆಗಳ ಸ್ವಾರ್ಥಪರತೆಯನ್ನೂ, ವಿವರಿಸಿ–ತನ್ನ ಪುಣ್ಯಕರ್ಮಕ್ಕೆ ಯೋಗ್ಯಫಲವನ್ನು ಕೊಡದಿರುವ ದೇವತೆಗಳೆಲ್ಲರನ್ನೂ ಶಪಿಸುವುದಾಗಿ ಹೇಳುವಳು. ಬ್ರಹ್ಮಚಾರಿಯು ಇದನ್ನು ಕೇಳಿ–'ದೇವತೆಗಳು ಕರ್ಮಫಲವನ್ನು ಕೊಡುವವರಾದರೂ, ಆ ಕರ್ಮವು ಪರಿಪಕ್ವವಾಗಬೇಕೆಂಬುದನ್ನು ವಿವರಿಸಿ, ಯಾವ ಯಾವ ದೇವತೆಗಳ ಸೇವೆಯಿಂದ ಏನೇನು ಫಲ ದೊರೆಯುವುದೆಂಬುದನ್ನು' ವಿವರಿಸುವನು. ದೇವತೆಗಳ ಮಹಿಮಾವರ್ಣನ ಸಂದರ್ಭದಲ್ಲಿ ಶ್ರೀಕೃಷ್ಣಪರಮಾತ್ಮನ ಮಹಿಮೆಯೂ, ವಿಷ್ಣುಭಕ್ತನ ಶ್ರೇಷ್ಠತೆಯೂ ಚೆನ್ನಾಗಿ ವಿವರಿಸಲ್ಪಟ್ಟಿದೆ.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

|| ಪಂಚದಶೋಽಧ್ಯಾಯಃ ||

|| ಬ್ರಾಹ್ಮಣ ಉವಾಚ ||

ಕೇನ ರೋಗೇಣ ಹಿ ಮೃತೋಽಧುನಾ ಸಾಧ್ವಿ ತವ ಪ್ರಿಯಃ |
ಸರ್ವರೋಗ ಚಿಕಿತ್ಸಾಂ ಚ ಜಾನಾಮಿ ಚ ಚಿಕಿತ್ಸಕಃ || ೧ ||

ಮೃತತುಲ್ಯಂ ಮೃತಂ ರೋಗಾತ್ಸಪ್ತಾಹಾಭ್ಯಂತರೇ ಸತಿ |
ಮಹಾಜ್ಞಾನೇನ ತಂ ಜೀವಂ ಜೀವಯಾಮ್ಯೇವ ಲೀಲಯಾ || ೨ ||

ಹದಿನೈದನೆಯ ಅಧ್ಯಾಯವು

೧. ಬ್ರಾಹ್ಮಣ:—ಎಲೌ, ಸಾಧ್ವೀಶಿರೋಮಣಿಯೇ! ನಿನ್ನ ಪ್ರಾಣಕಾಂತನು ಯಾವ ರೋಗದಿಂದ ಮರಣ ಹೊಂದಿದನು? ನಾನು ಎಲ್ಲ ರೋಗಗಳನ್ನೂ ಗುಣಪಡಿಸ ಬಲ್ಲ ಉತ್ತಮ ವೈದ್ಯನಾಗಿರುವೆನು.

೨. ರೋಗದಿಂದ ನರಳಿ, ಸಾಯುವ ಸ್ಥಿತಿಗೆ ಬಂದಿರುವವನನ್ನೂ, ಒಂದು ವಾರದೊಳಗೆ ಸತ್ತಿರುವವನನ್ನೂ, ನನ್ನ ದಿವ್ಯಜ್ಞಾನದಿಂದ ಸುಲಭವಾಗಿ ಬದುಕಿಸ ಬಲ್ಲೆನು

ರಾಜಮೃತ್ಯುಂ ಯಮಂ ಕಾಲಂ ವ್ಯಾಧಿಮಾನೀಯ ತ್ವತ್ಪುರಃ ।
ನಿಬಧ್ಯ ದಾತುಂ ಶಕ್ತೋಽಹಂ ವ್ಯಾಧೋ ಬಧ್ವಾ ಪಶುಂ ಯಥಾ ॥ ೩ ॥

ಯತೋ ನ ಸಂಚರೇದ್ವ್ಯಾಧಿರ್ದೇಹೇಷು ದೇಹಧಾರಿಣಾಂ ।
ವ್ಯಾಧೀನಾಂ ಕಾರಣಂ ಯದ್ಯತ್ಸರ್ವಂ ಜಾನಾಮಿ ಸುಂದರಿ ॥ ೪ ॥

ಯತೋ ನ ಸಂಚರೇದ್ವ್ಯಾಧಿಬೀಜಂ ದುಷ್ಟಮಮಂಗಲಂ ।
ತದುಪಾಯಂ ವಿಜಾನಾಮಿ ಶಾಸ್ತ್ರತತ್ತ್ವಾನುಸಾರತಃ ॥ ೫ ॥

ಯೋ ವಾ ಯೋಗೇನ ಖೇದೇನ ದೇಹತ್ಯಾಗಂ ಕರೋತಿ ಚ ।
ತಸ್ಯ ತಂ ಜೀವನೋಪಾಯಂ ಜಾನಾಮಿ ಯೋಗಧರ್ಮತಃ ॥ ೬ ॥

ಬ್ರಾಹ್ಮಣಸ್ಯ ವಚಃ ಶ್ರುತ್ವಾ ಸ್ಮಿತಾ ಮಾಲಾವತೀ ಸತೀ ।
ಸಸ್ಮಿತಾ ಸ್ನಿಗ್ಧಚಿತ್ತಾ ಸಾ ತಮುವಾಚ ಪ್ರಹರ್ಷಿತಾ ॥ ೭ ॥

---

೩. ಬೇಡನೊಬ್ಬನು ದುಷ್ಟಪ್ರಾಣಿಗಳನ್ನು ತನ್ನ ಬಲೆಯಲ್ಲಿ ಹಿಡಿದು ತರುವಂತೆ, ಮೃತ್ಯುರಾಜನಾದ ಯಮನನ್ನೂ, ಕಾಲಪುರುಷನನ್ನೂ, ಸಕಲರೋಗಗಳನ್ನೂ ಹಿಡಿದು ಕಟ್ಟಿ ನಿನ್ನ ಮುಂದೆ ತಂದು ನಿಲ್ಲಿಸಬಲ್ಲೆನು.

೪. ಮನುಷ್ಯರ ದೇಹದಲ್ಲಿ ರೋಗವು ಉತ್ಪತ್ತಿಯಾಗಲು ಕಾರಣವೇನು? ಅದು ದೇಹದಲ್ಲೆಲ್ಲಾ ಹರಡುವುದೆಂತು? ಅದರ ನಿವಾರಣೆ ಹೇಗೆ? ಎಂಬ ವಿಚಾರಗಳನ್ನು ನಾನು ಚೆನ್ನಾಗಿ ಬಲ್ಲೆನು.

೫. ರೋಗಕ್ಕೆ ಮೂಲಕಾರಣವನ್ನೂ, ಆ ಅಮಂಗಲದ ನಿವಾರಣೋಪಾಯ, ವನ್ನೂ, ವೈದ್ಯಶಾಸ್ತ್ರತತ್ವಾನುಸಾರವಾಗಿ ನಾನು ಬಲ್ಲೆನು.

೬. ಯಾರು ಕಷ್ಟಸಾಧ್ಯವಾದ ಯೋಗಶಕ್ತಿಯಿಂದ ದೇಹತ್ಯಾಗಮಾಡುವರೋ ಅಂಥವರನ್ನೂ ಯೋಗಶಾಸ್ತ್ರ ಬಲದಿಂದಲೇ ಜೀವಿಸುವ ಉಪಾಯವನ್ನೂ ತಿಳಿದಿರುವೆನು.

೭. ಪತಿವ್ರತೆಯಾದ ಮಾಲಾವತೀದೇವಿಯು ಬ್ರಾಹ್ಮಣನ ಮಾತನ್ನು ಕೇಳಿ ಸಂತೋಷಭರಿತಳಾಗಿ ಕೂಡಲೇ ಭಕ್ತಿಯುತವಾದ ಮನಸ್ಸಿನಿಂದ ಬ್ರಹ್ಮಚಾರಿಯನ್ನು ಕುರಿತು ಈ ನುಡಿಗಳನ್ನಾಡಿದಳು.

॥ ಮಾಲಾವತ್ಯುವಾಚ ॥

ಅಹೋ ಶ್ರುತಂ ಕಿಮಾಶ್ಚರ್ಯಂ ವಚನಂ ಬಾಲವಕ್ತ್ರತಃ ।
ವಯಸಾತಿಶಿಶುರ್ದೃಷ್ಟೋ ಜ್ಞಾನಂ ಯೋಗವಿದಾಂ ಪರಂ ॥ ೮ ॥

ತ್ವಯಾ ಕೃತಾ ಪ್ರತಿಜ್ಞಾ ಚ ಕಾಂತಂ ಜೀವಯಿತುಂ ಮಮ ।
ವಿಪರೀತಂ ನ ಸದ್ವಾಕ್ಯಂ ತತ್ಕ್ಷಣಂ ಜೀವಿತಃ ಪತಿಃ ॥ ೯ ॥

ಜೀವಯಿಷ್ಯತಿ ಮತ್ಕಾಂತಂ ಪಶ್ಚಾದ್ವೇದವಿದಾಂ ವರಃ ।
ಯದ್ಯತ್ಪೃಚ್ಛಾಮಿ ಸಂದೇಹಾತ್ತದ್ಭವಾನ್ವಕ್ತುಮರ್ಹಸಿ ॥ ೧೦ ॥

ಸಭಾಯಾಂ ಜೀವಿತೇ ಕಾಂತೇ ತಸ್ಯ ತೀವ್ರಸ್ಯ ಸನ್ನಿಧೌ ।
ತ್ವಾಂ ಹಿ ಪ್ರಷ್ಟುಂ ನ ಶಕ್ತಾಹಂ ವಿದ್ಯಮಾನೇ ಮದೀಶ್ವರೇ ॥ ೧೧ ॥

ಏತೇ ಬ್ರಹ್ಮಾದಯೋ ದೇವಾ ವಿದ್ಯಮಾನಾಶ್ಚ ಸಂಸದಿ ।
ತ್ವಂ ಚ ವೇದವಿದಾಂ ಶ್ರೇಷ್ಠೋ ನ ಚ ಕಶ್ಚಿನ್ಮದೀಶ್ವರಃ ॥ ೧೨ ॥

---

೮. ಮಾಲಾವತೀ:—ಬಾಲಬ್ರಹ್ಮಚಾರಿಯಾದ ನಿನ್ನ ಬಾಯಿಂದ ಬರುವ ಮಾತುಗಳು ಅತ್ಯಾಶ್ಚರ್ಯಕರವಾಗಿದೆ. ನಿನ್ನ ವಯಸ್ಸನ್ನು ನೋಡಿದರೆ ಅತಿ ಕಿರಿದು. ಆದರೆ ಜ್ಞಾನವು ಯೋಗಿಗಳಿಗೂ ಹಿರಿದು.

೯. ನೀನು ನನ್ನ ಪತಿಯನ್ನು ಬದುಕಿಸುವೆನೆಂದು ಪ್ರತಿಜ್ಞೆಮಾಡಿರುವೆ. ಸತ್ಪುರುಷರ ಮಾತು ಎಂದಿಗೂ ಸುಳ್ಳಾಗಲಾರದು. ಇನ್ನೇನು? ನನ್ನ ಪತಿಯು ಜೀವಿತನಾಗುವನೆಂದು ನನಗೆ ನಂಬಿಕೆಯುಂಟಾಯಿತು.

೧೦. ವೇದವೇದಾಂಗ ಪಾರಂಗತನಾದ ನೀನು, ನಾನು ಕೇಳುವ ಪ್ರಶ್ನೆಗಳಿಗೆ ಉತ್ತರಕೊಟ್ಟು ನನ್ನ ಸಂಶಯವನ್ನು ಪರಿಹರಿಸಿ, ಅನಂತರ ನನ್ನ ಪತಿದೇವನನ್ನು ಜೀವಿಸಿಕೊಡು.

೧೧. ಈ ಸಭೆಯಲ್ಲಿ ನನ್ನ ಪತಿದೇವನು ಪುನರ್ಜೀವಿತನಾದ ಮೇಲೆ ಕೋಪಿಯಾದ ಅವನ ಎದುರಿನಲ್ಲಿ ನಿನ್ನನ್ನು ಪ್ರಶ್ನಿಸಲು ನಾನು ಅಸಮರ್ಥಳಾಗುವೆನು.

೧೨. ಈಗ ಬ್ರಹ್ಮಾದಿದೇವತೆಗಳೆಲ್ಲರೂ ಈ ಸಭೆಯಲ್ಲಿದ್ದಾರೆ. ವೇದವೇದಾಂಗ ಪಾರಂಗತನಾದ ನೀನೂ ಇಲ್ಲಿಯೇ ಇದ್ದೀಯೆ. ನಿಮ್ಮಲ್ಲಿ ಯಾರೂ ನನ್ನ ಪತಿದೇವನಂತೆ ಕೋಪಿಷ್ಠರಲ್ಲ.

ನಾರೀ ರಕ್ಷತಿ ಭರ್ತಾ ಚೇನ್ನ ಕೋಽಪಿ ಖಂಡಿತುಂ ಕ್ಷಮಃ ।
ಶಾಸ್ತಿಂ ಕರೋತಿ ಯದಿ ಸ ನ ಕೋಽಪಿ ರಕ್ಷಿತಾ ಭುವಿ ॥ ೧೩ ॥

ಏವಂ ದೇವೇಷು ನೋ ಶಕ್ತಿಃ ಶಕ್ರೇ ವಾ ಬ್ರಹ್ಮರುದ್ರಯೋಃ ।
ಸ್ತ್ರೀ ಪುಂಭಾವಶ್ಚ ಬೋದ್ಧವ್ಯಃ ಸ್ವಾಮೀ ಕರ್ತಾ ಚ ಯೋಷಿತಾಂ ॥ ೧೪ ॥

ಸ್ವಾಮೀ ಕರ್ತಾ ಚ ಹರ್ತಾ ವಾ ಶಾಸ್ತಾ ಪೋಷ್ಟಾ ಚ ರಕ್ಷಿತಾ ।
ಅಭೀಷ್ಟದೇವಃ ಪೂಜ್ಯಶ್ಚ ನ ಗುರುಃ ಸ್ವಾಮಿನಃ ಪರಃ ॥ ೧೫ ॥

ಕನ್ಯಾ ಸತ್ಕುಲಜಾತಾ ಯಾ ಸಾ ಕಾಂತವಶವರ್ತಿನೀ ।
ಯಾ ಸ್ವತಂತ್ರಾ ಚ ಸಾ ದುಷ್ಟಾ ಸ್ವಭಾವಾತ್ಕುಟಿಲಾ ಧ್ರುವಂ ॥ ೧೬ ॥

---

೧೩. ಪತಿಯು ತನ್ನ ಪತ್ನಿಯನ್ನು ರಕ್ಷಣೆ ಮಾಡಿದರೆ ಯಾರೇನೂ ತಪ್ಪೆಂದು ಆಕ್ಷೇಪಿಸುವಂತಿಲ್ಲ. ಅಂತಯೇ ಪತಿಯು ತನ್ನ ಪತ್ನಿಯನ್ನು ದಂಡಿಸಿದರೂ ಭೂಲೋಕದಲ್ಲಿ ರಕ್ಷಿಸುವವರಾರೂ ಇಲ್ಲ

೧೪. ಗಂಡನು ತನ್ನ ಹೆಂಡತಿಯನ್ನು ಶಿಕ್ಷಿಸಿದರೆ ದೇವತೆಗಳಾಗಲೀ,ಇಂದ್ರನಾಗಲೀ, ಬ್ರಹ್ಮರುದ್ರರಾಗಲೀ ಬಂದು ತಪ್ಪಿಸಲಾರರು. ಹೆಣ್ಣುಗಂಡುಗಳ ಸಂಬಂಧವೇ ಹೀಗಿರುವುದು. ಹೆಂಗಸಿಗೆ ಪತಿಯೇ ಸರ್ವವು. ರಕ್ಷಕನೂ ಅವನೇ, ಶಿಕ್ಷಕನೂ ಅವನೇ.

೧೫. ಹೆಂಗಸಿಗೆ ಪತಿಯೇ ಸುಖದಾಯಕನು. ಸುಖನಾಶಕನೂ ಅವನೇ. ಶಿಕ್ಷಣೆ, ಪೋಷಣೆ, ಮತ್ತು ರಕ್ಷಣೆಗಳಿಗೂ ಆತನೇ ಹೊಣೆಗಾರನು. ಗಂಡನಿಗಿಂತ ಬೇರೆ ಪೂಜ್ಯರಾದ ದೇವತೆಗಳಾಗಲೀ, ಗುರುಗಳಾಗಲೀ, ಹೆಂಗಸಿಗಿಲ್ಲ.

೧೬. ಸತ್ಕುಲದಲ್ಲಿ ಹುಟ್ಟಿದ ಕನ್ಯೆಯು ಪತಿಯ ಅಧೀನಳಾಗಿದ್ದು ಪತಿವ್ರತೆ ಎನಿಸುವಳು. ಯಾವ ಹೆಂಗಸು ಸ್ವತಂತ್ರಳಾಗಿರಲು ಬಯಸುವಳೋ ಆಕೆಯು ದುಷ್ಟಸ್ವಭಾವವುಳ್ಳವಳು.

ದುಷ್ಟಾ ಪರಪುಮಾಂಸಂ ಚ ಸೇವತೇ ಯಾ ನರಾಧಮಾ ।
ಸಾ ನಿಂದತಿ ಪತಿಂ ಶಶ್ವದಸದ್ವಂಶಪ್ರಸೂತಿಕಾ ॥ ೧೭ ॥

ಉಪಬರ್ಹಣಭಾರ್ಯಾಹಂ ಕನ್ಯಾ ಚಿತ್ರರಥಸ್ಯ ಚ ।
ವಧೂರ್ಗಂಧರ್ವರಾಜಸ್ಯ ಕಾಂತಭಕ್ತಾ ಸದಾ ದ್ವಿಜ ॥ ೧೮ ॥

ಸರ್ವಂ ಕಾಲಯಿತುಂ ಶಕ್ತಸ್ತ್ವಂ ಚ ವೇದವಿದಾಂ ವರ ।
ಕಾಲಂ ಯಮಂ ಮೃತ್ಯುಕನ್ಯಾಂ ಮದಭ್ಯಾಶಂ ಸಮಾನಯ ॥ ೧೯ ॥

ಮಾಲಾವತೀ ವಚಃ ಶ್ರುತ್ವಾ ವಿಪ್ರೋ ವೇದವಿದಾಂ ವರಃ ।
ಸಭಾಮಧ್ಯೇ ಸಮಾಹೂಯ ತಾನ್ ಪ್ರತ್ಯಕ್ಷಂ ಚಕಾರ ಹ ॥ ೨೦ ॥

---

೧೭. ಕೆಟ್ಟಕುಲದಲ್ಲಿ ಹುಟ್ಟಿದ ಹೆಣ್ಣು, ತನ್ನ ಪತಿಯನ್ನು ದೂಷಿಸಿ ಪರಪುರುಷನನ್ನು ಯಾವಾಗಲೂ ಸೇವಿಸಿಕೊಂಡು, ನೀಚಳಾಗುವಳು.

೧೮. ಎಲೈ, ಬ್ರಹ್ಮಚಾರಿಯೇ ! ನಾನು ಚಿತ್ರರಥನ ಮಗಳೂ, ಉಪಬರ್ಹಣನ ಧರ್ಮಪತ್ನಿಯೂ, ಗಂಧರ್ವರಾಜನ ಸೊಸೆಯೂ, ಆಗಿ ಯಾವಾಗಲೂ ನನ್ನ ಪತಿಯಲ್ಲೇ ಭಕ್ತಿ ಇಟ್ಟಿರುವವಳು.

೧೯. ವೇದಸಾರವನ್ನು ಬಲ್ಲ ನೀನು, ಭೂತಭವಿಷ್ಯದ್ವರ್ತಮಾನಗಳನ್ನು ಚೆನ್ನಾಗಿ ತಿಳಿದು, ಸಕಲಪ್ರಪಂಚವನ್ನೂ ನಿನ್ನ ವಶಪಡಿಸಿಕೊಳ್ಳಬಲ್ಲೆ. ಆದ್ದರಿಂದ ಈಗ ಕಾಲಪುರುಷನನ್ನೂ, ಯಮಧರ್ಮರಾಯನನ್ನೂ, ಮೃತ್ಯುಕನ್ಯೆಯನ್ನೂ ನನ್ನ ಹತ್ತಿರಕ್ಕೆ ಕರೆತರುವೆಯಾ ?

೨೦. ವೇದವೇದಾಂಗಪಾರಂಗತನಾದ ಆ ಬ್ರಹ್ಮಚಾರಿಯು ಮಾಲಾವತಿಯ ಮಾತನ್ನು ಕೇಳಿ, ಕಾಲ, ಯಮ ಮತ್ತು ಮೃತ್ಯುಕನ್ಯೆಯರನ್ನು ಕರೆದು ಆ ಸಭೆಯಲ್ಲಿ ಆಕೆಯ ಮುಂದೆ ನಿಲ್ಲಿಸಿದನು.

ದದರ್ಶ ಮೃತ್ಯುಕನ್ಯಾಂ ಚ ಪ್ರಥಮಂ ಮಾಲತೀ ಸತೀ ।
ಕೃಷ್ಣವರ್ಣಾಂ ಘೋರರೂಪಾಂ ರಕ್ತಾಂಬರಧರಾಂ ವರಾಂ ॥ ೨೧ ॥

ಸಸ್ಮಿತಾಂ ಷಡ್ಭುಜಾಂ ಶಾಂತಾಂ ದಯಾಯುಕ್ತಾಂ ಮಹಾಸತೀಂ ।
ಕಾಲಸ್ಯ ಸ್ವಾಮಿನೋ ವಾಮೇ ಚತುಷ್ಷಷ್ಟಿಸುತಾನ್ವಿತಾಂ ॥ ೨೨ ॥

ಕಾಲಂ ನಾರಾಯಣಾಂಶಂ ಚ ದದರ್ಶ ಪುರತಃ ಸತೀ ।
ಮಹೋಗ್ರರೂಪಂ ವಿಕಟಂ ಗ್ರೀಷ್ಮಸೂರ್ಯಸಮಪ್ರಭಂ ॥ ೨೩ ॥

ಷಡ್ವಕ್ತ್ರಂ ಷೋಡಶಭುಜಂ ಚತುರ್ವಿಂಶತಿಲೋಚನಂ ।
ಷಟ್ಪಾದಂ ಕೃಷ್ಣವರ್ಣಂ ಚ ರಕ್ತಾಂಬರಧರಂ ಪರಂ ॥ ೨೪ ॥

ದೇವಸ್ಯ ದೇವಂ ವಿಕೃತಂ ಸರ್ವಸಂಹಾರರೂಪಿಣಂ ।
ಕಾಲಾಧಿದೇವಂ ಸರ್ವೇಶಂ ಭಗವಂತಂ ಸನಾತನಂ ॥ ೨೫ ॥

೨೧–೨೨. ಪತಿವ್ರತೆಯಾದ ಮಾಲಾವತಿಯು ಅವರಲ್ಲಿ, ತನ್ನ ಪತಿಯಾದ ಕಾಲಪುರುಷನ ಎಡಭಾಗದಲ್ಲಿ ಅರವತ್ತುನಾಲ್ಕು ಮಕ್ಕಳೊಡನೆ ನಿಂತಿರುವ ಮೃತ್ಯು ಕನ್ಯೆಯನ್ನು ಮೊದಲು ನೋಡಿದಳು. ಕಪ್ಪುಬಣ್ಣವುಳ್ಳ ಆ ಮೃತ್ಯುಕನ್ಯೆಯು ಧರಿಸಿರುವ ಕೆಂಪುವಸ್ತ್ರದಿಂದಲೂ, ಆರು ಭುಜಗಳಿಂದಲೂ, ನೋಡಲು ಭಯಂಕರ ಳಾಗಿದ್ದರೂ, ಸ್ಮಿತವದನದಿಂದಲೂ, ದಯಾಮಯವಾದ ಹೃದಯದಿಂದಲೂ ಮನೋಹರಳಾಗಿದ್ದಳು.

೨೩–೨೬. ಅನಂತರ ನಾರಾಯಣಾಂಶ ಸಂಭೂತನೂ, ಗ್ರೀಷ್ಮ ಸೂರ್ಯನಂತೆ ಉಗ್ರವಾದ ತೇಜಸ್ಸುಳ್ಳವನೂ, ಆರು ಮುಖ, ಹದಿನಾರು ಬಾಹು, ಇಪ್ಪತ್ತನಾಲ್ಕು ಕಣ್ಣು ಮತ್ತು ಆರು ಕಾಲುಗಳಿಂದ ವಿಕಟಾಕಾರನೂ, ಆದ ಕಾಲಪುರುಷನನ್ನು ಮುಂದೆ ಕಂಡಳು. ಸರ್ವಸಂಹಾರಕನಾದ ಆತನೂ ತನ್ನ ಕಪ್ಪುಬಣ್ಣಕ್ಕೆ ತಕ್ಕ ಕೆಂಪುವಸ್ತ್ರವನ್ನು ಧರಿಸಿ, ಭಯಂಕರನಾಗಿದ್ದರೂ, ಸರ್ವದಾ ಮುಖದಲ್ಲಿ ಮಂದ

ಈಷದ್ಧಾಸ್ಯಪ್ರಸನ್ನಾಸ್ಯಮಕ್ಷಮಾಲಾಕರಂ ವರಂ ।
ಜಪಂತಂ ಪರಮಂ ಬ್ರಹ್ಮ ಕೃಷ್ಣಮಾತ್ಮಾನಮೀಶ್ವರಂ । ॥ ೨೬ ॥

ಸತೀ ದದರ್ಶ ಪುರತೋ ವ್ಯಾಧಿಸಂಘಾನ್ ಸುದುರ್ಜಯಾನ್ ।
ವಯಸಾತಿಮಹಾವೃದ್ಧಾನ್ ಸ್ತನಂಧಾನ್ ಮಾತೃಸನ್ನಿಧೌ ॥ ೨೭ ॥

ಸ್ಥೂಲಪಾದಂ ಕೃಷ್ಣವರ್ಣಂ ಧರ್ಮಿಷ್ಠಂ ರವಿನಂದನಂ ।
ಜಪಂತಂ ಪರಮಂ ಬ್ರಹ್ಮ ಭಗವಂತಂ ಸನಾತನಂ ॥ ೨೮ ॥

ಧರ್ಮಾಧರ್ಮವಿಚಾರಜ್ಞಂ ಪರಂ ಧರ್ಮಸ್ವರೂಪಿಣಂ ।
ಪಾಪಿನಾಮಪಿ ಶಾಸ್ತಾರಂ ದದರ್ಶ ಪುರತೋ ಯಮಂ ॥ ೨೯ ॥

ಹಾಸವನ್ನು ಸೂಸುತ್ತಿದ್ದನು. ಅಲ್ಲದೆ ಸರ್ವೇಶ್ವರನೂ, ಕಾಲಾಧಿದೇವತೆಯೂ ಆದ ಆ ಕಾಲಪುರುಷನು, ಕೈಯಲ್ಲಿ ಜಪಸರವನ್ನು ಹಿಡಿದು, ಷಡ್ಗುಣೈಶ್ವರ್ಯ ಪರಿಪೂರ್ಣನೂ, ಅನಾದಿಯೂ ಆದ ಶ್ರೀಕೃಷ್ಣಪರಮಾತ್ಮನನ್ನು ಅನನ್ಯ ಭಕ್ತಿಯಿಂದ ಜಪಿಸುತ್ತಿದ್ದನು.

೨೭. ಅನಂತರ, ಯಾರೂ ಜಯಿಸಲಾಗದ, ವಯಸ್ಸು ಹೆಚ್ಚಾಗಿದ್ದರೂ ತಾಯಿಯ ಹತ್ತಿರ ಹಾಲು ಕುಡಿಯುವ ಹಸುಮಕ್ಕಳಂತೆ ಕಾಣುವ, ಶರೀರಧಾರಿಗಳಾದ. ರೋಗಗಳ ಸಮೂಹವನ್ನು ಆಕೆಯು ನೋಡಿದಳು.

೨೮–೨೯. ಮುಂದೆ ಒಂದು ಕಡೆ, ದಪ್ಪವಾದ ಕಾಲುಗಳಿಂದಲೂ, ಕಪ್ಪುಬಣ್ಣದಿಂದಲೂ ಭಯಂಕರನಾದ ಯಮಧರ್ಮರಾಯನು ನಿಂತಿದ್ದನು. ಯಾವಾಗಲೂ ಅನಾದಿಯಾದ ಪರಬ್ರಹ್ಮನ ದಿವ್ಯನಾಮವನ್ನು ಸೂರ್ಯಪುತ್ರನಾದ ಆತನು ಜಪಿಸುತ್ತಿದ್ದನು. ತಾನು ಸ್ವತಃ ಧರ್ಮರೂಪನಾಗಿಯೂ, ಧರ್ಮಾಧರ್ಮವಿಚಾರಗಳನ್ನರಿತವನಾಗಿಯೂ, ಪಾಪಿಗಳಿಗೆ ತಕ್ಕ ಶಿಕ್ಷೆಮಾಡಬಲ್ಲವನಾಗಿಯೂ ಇದ್ದ ಆ ಯಮರಾಯನನ್ನು ಆ ಮಾಲಾವತಿಯು ನೋಡಿದಳು.

ತಾಂಶ್ಚ ದೃಷ್ಟ್ವಾ ಚ ನಿಃಶಂಕಾ ಪಪ್ರಚ್ಛ ಪ್ರಥಮಂ ಯಮಂ ।
ಮಾಲಾವತೀ ಮಹಾಸಾಧ್ವೀ ಪ್ರಹೃಷ್ಟವದನೇಕ್ಷಣಾ　　॥ ೩೦ ॥

॥ ಮಾಲಾವತ್ಯುವಾಚ ॥

ಹೇ ಧರ್ಮರಾಜ ಧರ್ಮಿಷ್ಠ ಧರ್ಮಶಾಸ್ತ್ರವಿಶಾರದ ।
ಕಾಲವ್ಯತಿಕ್ರಮೇ ಕಾಂತಂ ಕಥಂ ಹರಸಿ ಮೇ ವಿಭೋ　　॥ ೩೧ ॥

॥ ಯಮ ಉವಾಚ ॥

ಅಪ್ರಾಪ್ತಕಾಲೋ ಮ್ರಿಯತೇ ನ ಕಶ್ಚಿಜ್ಜಗತೀತಲೇ ।
ಈಶ್ವರಾಜ್ಞಾಂ ವಿನಾ ಸಾಧ್ವಿ ನಾಮೃತಂ ಚಾಲಯಾಮ್ಯಹಂ　　॥ ೩೨ ॥

ಅಹಂ ಕಾಲೋ ಮೃತ್ಯುಕನ್ಯಾ ವ್ಯಾಧಯಶ್ಚ ಸುದುರ್ಜಯಾಃ ।
ನಿಷೇಕೇಣ ಪ್ರಾಪ್ತಕಾಲಂ ಕಾಲಯಂತೀಶ್ವರಾಜ್ಞಯಾ　　॥ ೩೩ ॥

---

೩೦. ತನ್ನ ಮುಂದಿರುವವರೆಲ್ಲರನ್ನೂ ನೋಡಿ ಸಾಧ್ವೀಶಿರೋಮಣಿಯಾದ ಮಾಲಾವತಿಯು ಮುಖದಲ್ಲೂ, ನೇತ್ರಗಳಲ್ಲೂ ಸಂತೋಷವನ್ನು ವ್ಯಕ್ತಗೊಳಿಸುತ್ತಾ, ನಿರ್ಭಯಳಾಗಿ ಮೊದಲು ಯಮನನ್ನು ಕುರಿತು ಇಂತೆಂದಳು.

೩೧. ಮಾಲಾವತೀ:—ಎಲೈ, ಧರ್ಮರಾಜನೇ! ನಿನ್ನನ್ನು ಧರ್ಮಪರಾಯಣನೆಂದೂ, ಧರ್ಮಶಾಸ್ತ್ರಜ್ಞನೆಂದೂ ಬಲ್ಲವರು ಹೇಳುವರು. ಹೀಗಿರುವಾಗ ಅಕಾಲದಲ್ಲಿ ನನ್ನ ಪತಿಯನ್ನು ಕರೆದೊಯ್ಯುತ್ತಿರುವೆಯಲ್ಲಾ! ಇದು ಯಾವ ನ್ಯಾಯ?

೩೨. ಯಮ:—ಎಲೌ, ಸಾಧ್ವೀಶಿರೋಮಣಿಯೇ! ಜಗತ್ತಿನಲ್ಲಿ ಯಾರೊಬ್ಬರೂ ಅವರವರ ಅವಸಾನಕಾಲ ಒದಗದೆ ಸಾಯುವುದಿಲ್ಲ. ಈಶ್ವರನ ಅಪ್ಪಣೆ ಇಲ್ಲದೆ, ಬದುಕಿರುವವನನ್ನು ನಾನು ಕರೆತರಲಾರೆನು.

೩೩. ನಾನು, ಕಾಲಪುರುಷ, ಮೃತ್ಯುಕನ್ಯಾ ಮತ್ತು ವ್ಯಾಧಿಗಳು ಎಲ್ಲರೂ ಅಪ್ರತಿಮ ವೀರರೇ. ನಮ್ಮನ್ಯಾರೂ ಜಯಿಸಲಾರರು. ಆದರೆ ನಾವು ಈಶ್ವರನ ಅಪ್ಪಣೆಯಂತೆ, ಗರ್ಭೋತ್ಪತ್ತಿ ಮೊದಲ್ಗೊಂಡು ಮನುಜನ ಆಯುಃಕಾಲವನ್ನು ಗಣಿಸುತ್ತೇವೆ.

ಮೃತ್ಯುಕನ್ಯಾ ವಿಚಾರಜ್ಞಾ ಯಂ ಪ್ರಾಪ್ನೋತಿ ನಿಷೇಕತಃ ।
ತಮಹಂ ಕಾಲಯೋಮ್ಯೇವ ಪೃಚ್ಛತಾಂ ಕೇನ ಹೇತುನಾ ॥ ೩೪ ॥

॥ ಮಾಲಾವತ್ಯುವಾಚ ॥

ತ್ವಮಪಿ ಸ್ತ್ರೀ ಮೃತ್ಯುಕನ್ಯಾ ಜಾನಾಸಿ ಸ್ವಾಮಿವೇದನಾಂ ।
ಕಥಂ ಹರಸಿ ಮತ್ಕಾಂತಂ ಜೀವಿತಾಯಾಂ ಮಯಿ ಪ್ರಿಯೇ ॥ ೩೫ ॥

॥ ಮೃತ್ಯುಕನ್ಯೋವಾಚ ॥

ಪುರಾ ವಿಶ್ವಸೃಜಾ ಸೃಷ್ಟಾಪ್ಯಹಮೇವಾತ್ರ ಕರ್ಮಣಿ ।
ನ ಚ ಕ್ಷಮಾ ಪರಿತ್ಯಕ್ತುಂ ಬಹುನಾ ತಪಸಾ ಸತಿ ॥ ೩೬ ॥

ಸತೀ ಸತೀನಾಂ ಮಧ್ಯೇ ಚ ಕಾಚಿತ್ತೇಜಸ್ವಿನೀ ವರಾ ।
ಮಾಮೇವ ಭಸ್ಮಸಾತ್ಕರ್ತುಂ ಕ್ಷಮಾ ಯದಿ ಭವೇದ್ಧ್ರುವೇ ॥ ೩೭ ॥

---

೩೪. ವಿಚಾರಪರಳಾದ ಮೃತ್ಯುಕನ್ಯೆಯು, ಗರ್ಭೋತ್ಪತ್ತಿ ಮೊದಲ್ಗೊಂಡು ಯಾರನ್ನು ಸೇರುವಳೋ, ಆತನನ್ನು ನಾನು ಕಾಲಗಣನಾನುಸಾರವಾಗಿ ಕರೆದು ತರುವೆನು. ಆದ್ದರಿಂದ ನಿನ್ನ ಪತಿದೇವನನ್ನು ಕರೆದೊಯ್ಯಲು ಕಾರಣವೇನೆಂದು ಮೃತ್ಯುಕನ್ಯೆಯನ್ನೇ ಕೇಳು.

೩೫. ಮಾಲಾವತೀ :—ಎಲೌ, ಮೃತ್ಯುಕನ್ಯೆಯೇ! ನೀನೂ ನನ್ನಂತೆಯೇ ಹೆಂಗಸು. ಪತಿವಿರಹದ ತಾಪವನ್ನು ಅರಿಯಬಲ್ಲವಳು. ಹೀಗಿರುವಾಗ ನಾನು ಬದುಕಿರುವಂತೆಯೇ ನನ್ನ ಪತಿಯನ್ನು ನೀನು ಏಕೆ ಕರೆದೊಯ್ಯುವೆ? ತಿಳಿಸು.

೩೬. ಮೃತ್ಯುಕನ್ಯಾ :—ಎಲೌ, ಸತಿಯೇ! ಜಗತ್ಸೃಷ್ಟಿಕರ್ತನು ನನ್ನನ್ನು ಪ್ರಾಣಿವಧೆಮಾಡಲೆಂದೇ ಸೃಜಸಿದ್ದಾನೆ. ನಾನೆಷ್ಟು ತಪಸ್ಸುಮಾಡಿದರೂ ಈ ಕಾರ್ಯವನ್ನು ಬಿಡಲು ಶಕ್ತಳಾಗಲಿಲ್ಲ.

೩೭. ಪತಿವ್ರತೆಯರ ಗುಂಪಿನಲ್ಲಿ ಪರಮತೇಜಸ್ವಿನಿಯಾದ ಯಾವಳಾದರೂ ನನ್ನನ್ನು ಶಾಪಬಲದಿಂದ ನಾಶಗೊಳಿಸಲು ಶಕ್ತಳಾದರೆ ಆಗ ಎಲ್ಲರಿಗೂ ಕ್ಷೇಮವಾದೀತು.

ಸರ್ವಾಪಚ್ಛಾಂತಿರೇವೇಹ ತದಾ ಭವತಿ ಸುಂದರಿ ।
ಪುತ್ರಾಣಾಂ ಸ್ವಾಮಿನಃ ಪಶ್ಚಾತ್ ಭವಿತಾ ಯದ್ಭವಿಷ್ಯತಿ ॥ ೩೮ ॥

ಕಾಲೇನ ಪ್ರೇರಿತಾಹಂ ಚ ಮತ್ಪುತ್ರಾ ವ್ಯಾಧಯಶ್ಚ ವೈ ।
ನ ಮತ್ಸುತಾನಾಂ ದೋಷಶ್ಚ ನ ಚ ಮೇ ಶೃಣು ನಿಶ್ಚಿತಂ ॥ ೩೯ ॥

ಪೃಚ್ಛ ಕಾಲಂ ಮಹಾತ್ಮಾನಂ ಧರ್ಮಜ್ಞಂ ಧರ್ಮಸಂಸದಿ ।
ತದಾ ಯದುಚಿತಂ ಭದ್ರೇ ತತ್ಕರಿಷ್ಯಸಿ ನಿಶ್ಚಿತಂ ॥ ೪೦ ॥

॥ ಮಾಲಾವತ್ಯುವಾಚ ॥

ಹೇ ಕಾಲ ಕರ್ಮಣಾಂ ಸಾಕ್ಷಿನ್ ಕರ್ಮರೂಪ ಸನಾತನ ।
ನಾರಾಯಣಾಂಶೋ ಭಗವನ್ ನಮಸ್ತುಭ್ಯಂ ಪರಾಯ ಚ ॥ ೪೧ ॥

ಕಥಂ ಹರಸಿ ಮತ್ಕಾಂತಂ ಜೀವಿತಾಯಾಂ ಮಯಿ ಪ್ರಭೋ ।
ಜಾನಾಸಿ ಸರ್ವದುಃಖಂ ಚ ಸರ್ವಜ್ಞಸ್ತ್ವಂ ಕೃಪಾನಿಧೇ ॥ ೪೨ ॥

---

೩೮. ಎಲೌ ಸುಂದರಿಯೇ! ನನ್ನ ಪತಿ ಪುತ್ರರಿಗೆ ಮುಂದೆ ಏನಾದರೂ ಆಗಲಿ. ನಾನು ಮಾತ್ರ ಮೃತಳಾದರೆ ಎಲ್ಲರ ಆಪತ್ತೂ ಶಾಂತವಾದೀತು.

೩೯. ನಾನೂ, ನನ್ನ ಮಕ್ಕಳಾದ ವ್ಯಾಧಿಗಳೂ, ಕಾಲಪುರುಷನ ಪ್ರೇರಣೆಯಂತೆ ನಡೆಯುತ್ತಿದ್ದೇವೆ. ಆದ್ದರಿಂದ ನನ್ನದಾಗಲೀ, ನನ್ನ ಮಕ್ಕಳದಾಗಲೀ ಯಾವ ತಪ್ಪೂ ಇಲ್ಲ.

೪೦. ಆದುದರಿಂದ ಎಲೌ, ಮಂಗಳಕರಳೇ! ಧರ್ಮಜ್ಞನೂ ಮತ್ತು ಪೂಜ್ಯನೂ ಆದ ಕಾಲಪುರುಷನನ್ನೇ—ಈ ಧರ್ಮಿಷ್ಠರ ಸಭೆಯಲ್ಲಿ ಕೇಳಿಬಿಡು. ಅನಂತರ ನಿನಗೆ ಉಚಿತವಾಗಿ ತೋರಿದ್ದನ್ನು ಮಾಡುವೆಯಂತೆ.

೪೧–೪೨. ಮಾಲಾವತೀ :—ಎಲ್ಲರ ಕರ್ಮಗಳಿಗೂ ಸಾಕ್ಷಿಸ್ವರೂಪನೂ, ನಾರಾಯಣಾಂಶಸಂಭೂತನೂ, ಸನಾತನನೂ, ಪರಾತ್ಪರನೂ, ಕಾಲಪುರುಷನೂ ಆದ ನಿನಗೆ ವಂದನೆಗಳು. ಎಲೈ ಪ್ರಭುವೇ! ನೀನು ಎಲ್ಲರ ದುಃಖಗಳನ್ನೂ ತಿಳಿಯಬಲ್ಲ ಸರ್ವಜ್ಞನೆನಿಸಿಕೊಂಡಿರುವಾಗ, ನಾನು ಬದುಕಿರುವಾಗಲೇ ದಯಾಮಯನಾದ ನೀನು ನನ್ನ ಪತಿಯನ್ನು ಹೇಗೆ ಕರೆದುಕೊಂಡು ಹೋಗುವೆ? ಇದು ನ್ಯಾಯವೇ?

॥ ಕಾಲಪುರುಷ ಉವಾಚ ॥

ಕೋಽಹಂ ಕೋ ಯಮಃ ಕಾ ಚ ಮೃತ್ಯುಕನ್ಯಾ ಚ ವ್ಯಾಧಯಃ ।
ವಯಂ ಭ್ರಮಾಮಃ ಸತತಮೀಶಾಜ್ಞಾಪರಿಪಾಲಕಾಃ ॥ ೪೩ ॥

ಯಸ್ಯ ಸ್ರಷ್ಟಾ ಚ ಪ್ರಕೃತಿಬ್ರಹ್ಮವಿಷ್ಣುಶಿವಾದಯಃ ।
ಸುರಾ ಮುನೀಂದ್ರಾ ಮನವೋ ಮಾನವಾಃ ಸರ್ವಜಂತವಃ ॥ ೪೪ ॥

ಧ್ಯಾಯಂತೇ ತತ್ಪದಾಂಭೋಜಂ ಯೋಗಿನಶ್ಚ ವಿಚಕ್ಷಣಾಃ ।
ಜಪಂತಿ ಶಶ್ವನ್ನಾಮಾನಿ ಪುಣ್ಯಾನಿ ಪರಮಾತ್ಮನಃ ॥ ೪೫ ॥

ಯದ್ಭಯಾತ್ ವಾತಿ ವಾತೋಽಯಂ ಸೂರ್ಯಸ್ತಪತಿ ಯದ್ಭಯಾತ್ ।
ಸ್ರಷ್ಟಾ ಬ್ರಹ್ಮಾಜ್ಞಯಾ ಯಸ್ಯ ಪಾತಾ ವಿಷ್ಣುರ್ಯದಾಜ್ಞಯಾ ॥ ೪೬ ॥

---

೪೩. ಕಾಲಪುರುಷ:–ನನಗಾಗಲೀ, ಯಮನಿಗಾಗಲೀ, ಮೃತ್ಯುಕನ್ಯೆಗಾಗಲೀ, ವ್ಯಾಧಿಗಳಿಗಾಗಲೀ–ಏನು ಸ್ವಾತಂತ್ರ್ಯವಿದೆ? ಯಾವಾಗಲೂ ಈಶ್ವರನ ಆಜ್ಞೆಯನ್ನು ಶಿರಸಾವಹಿಸಿ ನಡೆಯುವವರು ನಾವು.

೪೪–೪೫. ಸೃಷ್ಟಿಕಾರಣಳಾದ ಪ್ರಕೃತಿದೇವಿಯೂ, ಬ್ರಹ್ಮ, ವಿಷ್ಣು, ಮಹೇಶ್ವರರೂ ಪರಮಾತ್ಮನ ಆಜ್ಞೆಯನ್ನು ಮೀರಲಾರರು. ದೇವತೆಗಳೂ, ಋಷಿಗಳೂ, ಮನುಗಳೂ ಮತ್ತು ಮಾನವರೂ, ಇತರ ಜಂತುಗಳೂ ಕೂಡ ಪರಮಾತ್ಮನ ಇಚ್ಛೆಯಂತೆ ನಡೆಯುವರು. ಯೋಗಿಗಳೂ ಕೂಡ ಪರಮಾತ್ಮನ ದಿವ್ಯನಾಮಗಳನ್ನು ಯಾವಾಗಲೂ ಜಪಿಸುತ್ತಾ, ಮನಸ್ಸಿನಲ್ಲೇ ಆತನ ಪಾದಾರವಿಂದಗಳನ್ನು ಧ್ಯಾನ ಮಾಡುವರು.

೪೬–೪೮. ಪರಮಾತ್ಮನ ಭಯದಿಂದಲೇ ವಾಯುದೇವನು ಎಲ್ಲೆಡೆಯಲ್ಲೂ ಚಲಿಸುವನು. ಸೂರ್ಯನು ಬೆಳಗುವುದೂ ಆತನ ಭಯದಿಂದಲೇ. ಬ್ರಹ್ಮ, ವಿಷ್ಣು ಮಹೇಶ್ವರರು ಪರಮಾತ್ಮನ ಆಜ್ಞಾನುಸಾರವಾಗಿ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಹೊಣೆಗಾರರಾಗಿರುವರು. ಕರ್ಮಸಾಕ್ಷಿಯಾದ ಧರ್ಮಪುರುಷನೂ ಆತನ ಆಜ್ಞೆ

ಸಂಹರ್ತಾ ಶಂಕರಃ ಸರ್ವಜಗತಾಂ ಯಸ್ಯ ಶಾಸನಾತ್ ।
ಧರ್ಮಶ್ಚ ಕರ್ಮಣಾಂ ಸಾಕ್ಷೀ ಯಸ್ಯಾಜ್ಞಾಪರಿಪಾಲಕಃ　　　　॥ ೪೭ ॥

ರಾಶಿಚಕ್ರಂ ಗ್ರಹಾಃ ಸರ್ವೇ ಭ್ರಮಂತಿ ಯಸ್ಯ ಶಾಸನಾತ್ ।
ದಿಗೀಶಾಶ್ಚೈವ ದಿಕ್ಪಾಲಾ ಯಸ್ಯಾಜ್ಞಾಪರಿಪಾಲಕಾಃ　　　　॥ ೪೮ ॥

ಯಸ್ಯಾಜ್ಞಯಾ ಚ ತರವಃ ಪುಷ್ಪಾಣಿ ಚ ಫಲಾನಿ ಚ ।
ಬಿಭ್ರತ್ಯೇವ ದದತ್ಯೇವ ಕಾಲೇ ಮಾಲಾವತೀ ಸತಿ　　　　॥ ೪೯ ॥

ಯಸ್ಯಾಜ್ಞಯಾ ಜಲಾಧಾರಾ ಸರ್ವಾಧಾರಾ ವಸುಂಧರಾ ।
ಕ್ಷಮಾವತೀ ಚ ಪೃಥಿವೀ ಕಂಪಿತಾ ನ ಭಯೇನ ಚ　　　　॥ ೫೦ ॥

ಸಹಸಾ ಮೋಹಿತಾ ಮಾಯಾ ಮಾಯಯಾ ಯಸ್ಯ ಸಂತತಂ ।
ಸರ್ವಪ್ರಸೂರ್ಯಾ ಪ್ರಕೃತಿಃ ಸಾಭೀತಾ ಯದ್ಭಯಾದಹೋ　　　　॥ ೫೧ ॥

ಯನ್ನು ಮೀರುವಂತಿಲ್ಲ. ಪರಮಾತ್ಮನ ಅಪ್ಪಣೆಯಂತೆಯೇ ರಾಶಿಚಕ್ರವೂ, ನವಗ್ರಹಗಳೂ, ಚಲಿಸುವುವು. ದಿಕ್ಪಾಲಕರೆಲ್ಲರೂ ಪರಮಾತ್ಮನ ಆಜ್ಞಾಧಾರಿಗಳೇ ಆಗಿರುವರು.

೪೯. ಎಲೌ, ಪತಿವ್ರತೆಯಾದ ಮಾಲಾವತಿಯೇ! ಮರಗಳು ಕಾಲಕಾಲದಲ್ಲಿ ಹೂವು, ಹಣ್ಣುಗಳನ್ನು ಧರಿಸಿ ಜನರಿಗೆ ಕೊಡುವುದೂ ಪರಮಾತ್ಮನ ನಿಯಮ ದಂತಯೇ.

೫೦. ನೀರಿಗೂ ಮತು ಎಲ್ಲಾ ವಸ್ತುಗಳಿಗೂ ಆಧಾರ ಭೂತವಾದ ವಸುಂಧರೆಯು (ಭೂದೇವಿಯು) ಚಲಿಸದೆ, ಸಹನಶೀಲಳಾಗಿರುವುದೂ ಪರಮಾತ್ಮನ ಆಜ್ಞೋಲ್ಲಂಘನೆಯ ಭಯದಿಂದಲೇ ಅಲ್ಲವೇ.

೫೧. ಪರಮಾತ್ಮನ ಮಾಯೆಗೆ ಮೋಹಗೊಂಡ ಪ್ರಕೃತಿದೇವಿಯೂ ಕೂಡ ಎಲ್ಲಕ್ಕೂ ಮೂಲಕಾರಣಳಾಗಿರುವುದೂ ಪರಮಾತ್ಮನ ನಿಯಮವನ್ನು ಮೀರಲಾಗದಿರು ವುದರಿಂದಲ್ಲವೇ!

ಯಸ್ಯಾಂತಂ ನ ವಿದುಃ ಸರ್ವೇ ವಸ್ತೂನಾಂ ಭಾವಗಾ ಅಪಿ ।
ಪುರಾಣಾನಿ ಚ ಸರ್ವಾಣಿ ಯಸ್ಯೈವ ಸ್ತುತಿಪಾಠಕಾಃ ॥ ೫೨ ॥

ಯಸ್ಯ ನಾಮ ವಿಧಿರ್ವಿಷ್ಣುಃ ಸೇವತೇ ಸುಮಹಾನ್ವಿರಾಟ್ ।
ಷೋಡಶಾಂಶೋ ಭಗವತಃ ಸ ಏವ ತೇಜಸೋ ವಿಭೋಃ ॥ ೫೩ ॥

ಸರ್ವೇಶ್ವರಃ ಕಾಲಕಾಲೋ ಮೃತ್ಯೋರ್ಮೃತ್ಯುಃ ಪರಾತ್ಪರಃ ।
ಸರ್ವವಿಘ್ನವಿನಾಶಾಯ ತಂ ಕೃಷ್ಣಂ ಪರಿಚಿಂತಯ ॥ ೫೪ ॥

ಸರ್ವಾಭೀಷ್ಟಂ ಚ ಭರ್ತಾರಂ ಪ್ರದಾಸ್ಯತಿ ಕೃಪಾನಿಧಿಃ ।
ಇಮೋ ಯತ್ಪ್ರೇರಿತಾಸ್ಸರ್ವೇ ಸ ದಾತಾ ಸರ್ವಸಂಪದಾಂ ॥ ೫೫ ॥

---

೫೨. ಎಲ್ಲಾ ಪ್ರಾಣಿಗಳ ಮನೋಭಿಪ್ರಾಯವನ್ನೂ ತಿಳಿಯಬಲ್ಲ ಇಂಗಿತಜ್ಞರೂ ಕೂಡ ಆ ಪರಮಾತ್ಮನ ಆದ್ಯಂತಗಳನ್ನು ಅರಿಯಲಾರರು. ಎಲ್ಲಾ ಪುರಾಣಗಳೂ ಕೂಡ ಆತನನ್ನು ಹೊಗಳಿ ಮುಗಿಯುವುವೇ ಹೊರತು ಆತನ ನೆಲೆಯನ್ನು ನಿಲುಕಲಾರವು.

೫೩. ಪರಮಾತ್ಮನ ಹದಿನಾರನೆಯ ಒಂದಂಶದಿಂದ ಅವತರಿಸಿ ವಿರಾಡ್ರೂಪಿಯಾದ ಮಹಾವಿಷ್ಣುವೂ, ಬ್ರಹ್ಮ, ವಿಷ್ಣು ಮುಂತಾದವರೂ ಕೂಡ, ಯಾವ ಪರಮಾತ್ಮನ ದಿವ್ಯನಾಮಗಳನ್ನು ಭಜಿಸಿ ನುತಿಸುವರು.

೫೪. ಆದುದರಿಂದ ಎಲ್ಲರೊಡೆಯನೂ, ಕಾಲಕಾಲನೂ, ಮೃತ್ಯುವಿಗೆ ಮೃತ್ಯುಸ್ವರೂಪನೂ, ಶ್ರೇಷ್ಠರಲ್ಲಿ ಶ್ರೇಷ್ಠನೂ ಆದ ಆ ಪರಮಾತ್ಮನನ್ನು ಭಜಿಸಿ, ನಿನ್ನ ಎಲ್ಲ ತೊಂದರೆಗಳನ್ನೂ ಪರಿಹರಿಸಿಕೋ,

೫೫. ದಯಾಮಯನಾದ ಆ ಪರಮಾತ್ಮನು ನಿನಗೆ ಸರ್ವಸ್ವನಾದ ಪತಿದೇವನನ್ನು ಜೀವಿಸಿಕೊಡುವನು. ದೇವತೆಗಳೆಲ್ಲರೂ ಅವನ ಪ್ರೇರಣೆಯಂತೆ ನಡೆಯುವರು. ಆ ಪರಮಾತ್ಮನೇ ಎಲ್ಲಾ ಸಂಪತ್ತುಗಳನ್ನೂ ಕೊಡುವವನು.

ಇತ್ಯುಕ್ತ್ವಾ ಕಾಲಪುರುಷೋ ವಿರರಾಮ ಚ ಶೌನಕ ।
ಕಥಾಂ ಕಥಿತುಮಾರೇಭೇ ಪುನರೇವ ತು ಬ್ರಾಹ್ಮಣಃ ॥ ೫೬ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ
ಮಾಲಾವತೀ–ಕಾಲಪುರುಷಸಂವಾದೇ
ಪಂಚದಶೋಽಧ್ಯಾಯಃ.

---

೫೬. ಸೂತ:–ಎಲೈ, ಶೌನಕಮಹರ್ಷಿಯೇ, ಕಾಲಪುರುಷನು ಮಾಲಾವತಿಗೆ ಇಂತು ನುಡಿದು ಸುಮ್ಮನಾಗಲು, ಆ ಬಾಲಬ್ರಹ್ಮಚಾರಿಯು ಮತ್ತೆ ಮಾಲಾವತಿಯೊಡನೆ ಪ್ರಸ್ತಾಪವನ್ನು ಬೆಳೆಸಿದನು.

ಇಲ್ಲಿಗೆ ಶ್ರೀಬ್ರಹ್ಮವೈವರ್ತ ಮಹಾಪುರಾಣದಲ್ಲಿ ಮಾಲಾವತೀ
ಕಾಲಪುರುಷರ ಸಂವಾದರೂಪವಾದ ಹದಿನೈದನೆಯ
ಅಧ್ಯಾಯವು ಮುಗಿದುದು.

ಹದಿನೈದನೆಯ ಅಧ್ಯಾಯದ ಸಾರಾಂಶವು

ಬ್ರಹ್ಮಚಾರಿಯು ತಾನು ಉತ್ತಮ ವೈದ್ಯನೆಂದೂ, ಎಲ್ಲರ ರೋಗಗಳನ್ನೂ ನಿವಾರಣೆಮಾಡಬಲ್ಲವನೆಂದೂ, ಕಡೆಗೆ, ಒಂದು ವಾರದೊಳಗೆ ಸತ್ತಿರುವವರನ್ನೂ ಕೂಡ ಬದುಕಿಸಬಲ್ಲೆನೆಂದೂ, ಹೇಳುತ್ತಾ, ಮಾಲಾವತಿಯ ಪತಿಯು ಯಾವ ರೋಗದಿಂದ ಮೃತನಾದನೆಂದು ಆಕೆಯನ್ನು ಪ್ರಶ್ನೆಮಾಡುವನು. ಆಗ ತನ್ನ ಪತಿಯ ಜೀವದಾನಮಾಡುವುದಾಗಿ ಆತನಿಂದ ಪ್ರತಿಜ್ಞೆಪಡೆದ ಮಾಲಾವತಿಯು ಸತಿಗೆ ಪತಿಯೇ ರಕ್ಷಕನು ಮತ್ತು ಶಿಕ್ಷಕನೆಂಬುದನ್ನೂ ಸತಿಗೆ ಪತಿಯೇ ಸರ್ವಸ್ವವೆಂಬುದನ್ನೂ, ವ್ಯಕ್ತಗೊಳಿಸಿ, ತನ್ನ ಪತಿಯು ಯಾವ ರೋಗಕ್ಕೂ ತುತ್ತಾಗಲಿಲ್ಲವೆನ್ನುವಳು. ಅನಂತರ ಬ್ರಹ್ಮಚಾರಿಯ ಮಹಿಮೆಯಿಂದ ತನ್ನ ಮುಂದೆ ಬಂದ ಮೃತ್ಯುಕನ್ಯೆ, ಕಾಲಪುರುಷ, ರೋಗಗಳ ಗುಂಪು ಮತ್ತು ಯಮಧರ್ಮರಾಯ, ಇವರುಗಳನ್ನು ಕಂಡು, ತನ್ನ ಪತಿಯನ್ನುಳುಹಬೇಕೆಂದು ಬೇಡುವಳು. ಯಮ, ಮೃತ್ಯುಕನ್ಯೆ ಮತ್ತು ವ್ಯಾಧಿಗಳು ತಾವು ಪರಮಾತ್ಮನ ಆಜ್ಞಾನುಸಾರಿಗಳೆಂದು ಹೇಳಿದ ಮೇಲೆ, ಕಾಲಪುರುಷನು, ಬ್ರಹ್ಮ ವಿಷ್ಣು ಮಹೇಶ್ವರಾದಿ ಎಲ್ಲಾ ದೇವತೆಗಳೂ, ಸೃಷ್ಟಿಯ ಸಮಸ್ತ ಸಚರಾಚರವಸ್ತುಗಳೂ ಪರಮಾತ್ಮನ ಅನುಜ್ಞೆಯಂತೆಯೇ ತಮ್ಮತಮ್ಮ ಕಾರ್ಯಗಳಲ್ಲಿ ತೊಡಗಿರುವರೆಂದೂ, ವಿಧಿನಿಯಮವನ್ನು ಯಾರೂ ಮೀರಲಾಗದೆಂದೂ ಹೇಳಿ 'ಭೀಷಾಸ್ಮಾದ್ವಾತಃ ಪವತೇ! ಭೀಷೋದೇತಿ ಸೂರ್ಯಃ! ಭೀಷಾಸ್ಮದಗ್ನಿಶ್ಚೇಂದ್ರಶ್ಚ! ಮೃತ್ಯುರ್ಧಾವತಿ ಪಂಚಮಇತಿ!' ಇತ್ಯಾದಿ ಉಪನಿಷತ್ಸಾರಗಳನ್ನು ವಿವರಿಸಿ, ಪತಿದಾನಕ್ಕಾಗಿ ಪರಮಾತ್ಮನನ್ನೇ ಶರಣಾಗಬೇಕೆಂದೂ ಮಾಲಾವತಿಗೆ ತಿಳಿಸುವನು. ಪುನಃ ಮಾಲಾವತೀ ಮತ್ತು ಬ್ರಹ್ಮಚಾರಿಗಳ ಮಾತುಕಥೆಗಾರಂಭವಾಗುವುದು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಷೋಡಶೋಽಧ್ಯಾಯಃ ॥

॥ ಬ್ರಾಹ್ಮಣ ಉವಾಚ ॥

ದೃಷ್ಟಃ ಕಾಲೋ ಯಮೋ ಮೃತ್ಯುಕನ್ಯಾ ವ್ಯಾಧಿಗಣಾ ಅಹೋ ।
ಕಸ್ತೇಽಧುನಾ ಚ ಸಂದೇಹಸ್ತಂ ಪೃಚ್ಛ ಕನ್ಯಕೇ ಶುಭೇ ॥ ೧ ॥

ಬ್ರಾಹ್ಮಣಸ್ಯ ವಚಃ ಶ್ರುತ್ವಾ ಹೃಷ್ಟ ಮಾಲಾವತೀ ಸತೀ ।
ಯನ್ಮನೋನಿಹಿತಂ ಪ್ರಶ್ನಂ ಚಕಾರ ಜಗದೀಶ್ವರಂ ॥ ೨ ॥

ಹದಿನಾರನೆಯ ಅಧ್ಯಾಯವು

೧. ಬ್ರಾಹ್ಮಣ:—ಎಲೌ, ಮಂಗಳಾಂಗಿಯೇ! ನಿನ್ನ ಬೇಡಿಕೆಯಂತೆ ಕಾಲ ಪುರುಷ, ಯಮ, ಮೃತ್ಯುಕನ್ಯೆ ಮತ್ತು ವ್ಯಾಧಿಗಣಗಳನ್ನು ನಿನ್ನ ಮುಂದೆ ಕರೆತಂದು ದಾಯಿತು. ಈಗ ನಿನಗಿನ್ನೇನು ಸಂಶಯವುಳಿದಿದೆ ಎಂಬುದನ್ನು ಕೇಳಬಹುದು.

೨. ಬ್ರಹ್ಮಚಾರಿಯ ಮಾತನ್ನು ಕೇಳಿ ಮಾಲಾವತೀದೇವಿಯು ಸಂತಸ ಗೊಂಡು ಜಗದೀಶ್ವರನಾದ ಆತನನ್ನು ಕುರಿತು ತನ್ನ ಮನಸ್ಸಿನಲ್ಲಿದ್ದ ಪ್ರಶ್ನೆಯನ್ನು ಕೇಳಿದಳು.

॥ ಮಾಲಾವತ್ಯುವಾಚ ॥

ತ್ವಯಾ ಯತ್ಕಥಿತೋ ವ್ಯಾಧಿಃ ಪ್ರಾಣಿನಾಂ ಪ್ರಾಣಹಾರಕಃ ।
ತತ್ಕಾರಣಂ ಚ ವಿವಿಧಂ ಸರ್ವಂ ವೇದೇ ನಿರೂಪಿತಂ ॥ ೩ ॥

ಯತೋ ನ ಸಂಚರೇದ್ವ್ಯಾಧಿರ್ದುರ್ನಿವಾರೋಽಶುಭಾವಹಃ ।
ತದುಪಾಯಂ ಚ ಸಾಕಲ್ಯಂ ಭವಾನ್ವಕ್ತುಮಿಹಾರ್ಹಸಿ ॥ ೪ ॥

ಯದ್ಯತ್ಪೃಷ್ಟಮಪೃಷ್ಟಂ ವಾ ಜ್ಞಾತಮಜ್ಞಾತಮೇವ ವಾ ।
ಸರ್ವಂ ಕಥಯ ತದ್ಭದ್ರಂ ತ್ವಂ ಗುರುರ್ದೀನವತ್ಸಲಃ ॥ ೫ ॥

ಮಾಲಾವತೀವಚಃ ಶ್ರುತ್ವಾ ವಿಪ್ರರೂಪೀ ಜನಾರ್ದನಃ ।
ಸಂಹಿತಾಂ ವಕ್ತುಮಾರೇಭೇ ಸಂಹಿತಾರ್ಥಂ ಚ ವೈದ್ಯಕೀಂ ॥ ೬ ॥

೩–೪. ಮಾಲಾವತೀ :—ರೋಗವು ಎಲ್ಲಾ ಪ್ರಾಣಿಗಳ ಪ್ರಾಣವನ್ನೂ ನಾಶಗೊಳಿಸುವುದೆಂದೂ, ಅದರ ಉತ್ಪತ್ತಿಗೆ ವಿವಿಧ ಕಾರಣಗಳು ವೇದದಲ್ಲಿ ವಿಶದವಾಗಿ ತಿಳಿಯುವುವೆಂದೂ ನೀನು ಹೇಳಿದೆಯಲ್ಲವೆ! ಇವೆಲ್ಲವನ್ನೂ ಮತ್ತು ಪಾಪಿಯಾದ ರೋಗವು ಮನುಜರ ಶರೀರವನ್ನು ಪ್ರವೇಶಿಸದಿರಲು ಮಾಡಬೇಕಾದುದನ್ನೂ ಸಂಪೂರ್ಣವಾಗಿ ನನಗೆ ವಿವರಿಸು.

೫. ದೀನಬಂಧುವಾದ ನೀನು ನಾನು ಕೇಳಿದ ಮತ್ತು ಕೇಳದಿರುವ, ನನಗೆ ತಿಳದ ಮತ್ತು ತಿಳಿಯದಿರುವ ಎಲ್ಲಾ ವಿಷಯಗಳನ್ನೂ ಸ್ಪಷ್ಟವಾಗಿ ವಿವರಿಸಿ ನನಗೆ ಗುರುವಾಗು.

೬. ಬ್ರಹ್ಮಚಾರಿಯ ವೇಷಧಾರಿಯಾದ ಜನಾರ್ದನನು ಮಾಲಾವತಿಯ ಮಾತುಗಳನ್ನು ಕೇಳಿ ವೈದ್ಯಸಂಹಿತೆಯನ್ನು ಸಂಗ್ರಹಿಸಿ ಹೇಳಲು ಪ್ರಾರಂಭಿಸಿದನು.

॥ ಬ್ರಾಹ್ಮಣ ಉವಾಚ ॥

ವಂದೇ ತಂ ಸರ್ವತತ್ವಜ್ಞಂ ಸರ್ವಕಾರಣಕಾರಣಂ ।
ವೇದವೇದಾಂಗಬೀಜಸ್ಯ ಬೀಜಂ ಶ್ರೀಕೃಷ್ಣಮೀಶ್ವರಂ ॥ ೭ ॥

ಸ ಈಶಶ್ಚತುರೋ ವೇದಾನ್ ಸಸೃಜೇ ಮಂಗಲಾಲಯಾನ್ ।
ಸರ್ವಮಂಗಲಮಂಗಲ್ಯಬೀಜರೂಪಃ ಸನಾತನಃ ॥ ೮ ॥

ಋಗ್ಯಜುಸ್ಸಾಮಾಥರ್ವಾಖ್ಯಾನ್ದೃಷ್ಟ್ವಾ ವೇದಾನ್ ಪ್ರಜಾಪತಿಃ ।
ವಿಚಿಂತ್ಯ ತೇಷಾಮರ್ಥಂ ಚೈವಾಯುರ್ವೇದಂ ಚಕಾರ ಸಃ ॥ ೯ ॥

ಕೃತ್ವಾ ತು ಪಂಚಮಂ ವೇದಂ ಭಾಸ್ಕರಾಯ ದದೌ ವಿಭುಃ ।
ಸ್ವತಂತ್ರಸಂಹಿತಾಂ ತಸ್ಮಾದ್ಭಾಸ್ಕರಶ್ಚ ಚಕಾರ ಸಃ ॥ ೧೦ ॥

---

೭. ಬ್ರಾಹ್ಮಣ: ಎಲ್ಲಾ ಶಾಸ್ತ್ರಗಳ ತತ್ವಜ್ಞನೂ, ಕಾರಣಗಳಿಗೆಲ್ಲಾ ಆದಿಕಾರಣನೂ, ವೇದವೇದಾಂಗಗಳಿಗೆಲ್ಲಾ ಬೀಜರೂಪನೂ, ಅಣು, ರೇಣು, ತೃಣಕಾಷ್ಟಗಳಲ್ಲೂ ವ್ಯಾಪಕನೂ, ಆದ ಶ್ರೀಕೃಷ್ಣಪರಮಾತ್ಮನ ಪಾದಾರವಿಂದಗಳಿಗೆ ಭಕ್ತಿಯಿಂದ ನಮಿಸಿ ವೈದ್ಯಶಾಸ್ತ್ರವನ್ನು ವಿವರಿಸುವೆನು.

೮. ಸರ್ವಮಂಗಳ ಸ್ವರೂಪಿಯೂ, ಅನಾದಿಯೂ ಆದ ಪರಮಾತ್ಮನು ಎಲ್ಲರ ಮಂಗಳಕ್ಕೂ ಕಾರಣವಾದ ಋಕ್, ಯಜಸ್ಸು, ಸಾಮ ಮತ್ತು ಅಥರ್ವಣ ಗಳೆಂಬ ನಾಲ್ಕು ವೇದಗಳನ್ನು ಸೃಜಿಸಿದನು.

೯. ಸೃಷ್ಟಿಕರ್ತನಾದ ಬ್ರಹ್ಮನು ಆ ಚತುರ್ವೇದಗಳನ್ನೂ, ಅವುಗಳ ಅರ್ಥ ವನ್ನೂ ಚೆನ್ನಾಗಿ ಪರ್ಯಾಲೋಚಿಸಿ ಆಯುರ್ವೇದವನ್ನು ಸೃಜಿಸಿದನು.

೧೦. ಋಗ್ವೇದದ ಅಂಗರೂಪವಾದ ಆಯುರ್ವೇದವೆಂಬ ಐದನೆಯ ವೇದ ವನ್ನು ಬ್ರಹ್ಮನು ಸೃಜಿಸಿ ಭಾಸ್ಕರ (ಸೂರ್ಯ) ನಿಗೆ ದಯಪಾಲಿಸಿದನು. ಅದರ ಆಧಾರದಿಂದ ಭಾಸ್ಕರನು ಭಾಸ್ಕರಸಂಹಿತೆ ಎಂಬ ಸ್ವತಂತ್ರವಾದ ಗ್ರಂಥವೊಂದನ್ನು ರಚಿಸಿದನು.

ಭಾಸ್ಕರಶ್ಚ ಸ್ವಶಿಷ್ಯೇಭ್ಯ ಆಯುರ್ವೇದಂ ಸ್ವಸಂಹಿತಾಂ ।
ಪ್ರದದೌ ಪಾಠಯಾಮಾಸ ತೇ ಚಕ್ರುಃ ಸಂಹಿತಾಸ್ತತಃ ॥ ೧೧ ॥

ತೇಷಾಂ ನಾಮಾನಿ ವಿದುಷಾಂ ತಂತ್ರಾಣಿ ತತ್ಕೃತಾನಿ ಚ ।
ವ್ಯಾಧಿಪ್ರಣಾಶಬೀಜಾನಿ ಸಾಧ್ವಿ ಮತ್ತೋ ನಿಶಾಮಯ ॥ ೧೨ ॥

ಧನ್ವಂತರಿರ್ದಿವೋದಾಸಃ ಕಾಶೀರಾಜೋಽಶ್ವಿನೀ ಸುತೌ ।
ನಕುಲಃ ಸಹದೇವೋಽರ್ಕಿಶ್ಚ್ಯವನೋ ಜನಕೋ ಬುಧಃ ॥ ೧೩ ॥

ಜಾಬಾಲೋ ಜಾಜಲಿಃ ಪೈಲಃ ಕರಥೋಽಗಸ್ತ್ಯ ಏವ ಚ ।
ಏತೇ ವೇದಾಂಗವೇದಜ್ಞಾಃ ಷೋಡಶ ವ್ಯಾಧಿನಾಶಕಾಃ ॥ ೧೪ ॥

ಚಿಕಿತ್ಸಾತತ್ವವಿಜ್ಞಾನಂ ನಾಮತಂತ್ರಂ ಮನೋಹರಂ ।
ಧನ್ವಂತರಿಶ್ಚ ಭಗವಾನ್ ಚಕಾರ ಪ್ರಥಮೋ ಸತಿ ॥ ೧೫ ॥

---

೧೧. ಭಾಸ್ಕರನು ತಾನು ರಚಿಸಿದ ಆಯುರ್ವೇದ ಸಂಹಿತೆಯನ್ನು ತನ್ನ ಶಿಷ್ಯರಿಗೆ ಕೊಟ್ಟು ಪಾಠ ಹೇಳಿದನು. ಅದರಿಂದ ಅವರೂ ಕೂಡ ಒಂದೊಂದು ಸಂಹಿತೆಯನ್ನು ರಚಿಸಿದರು.

೧೨. ಎಲೌ ಸಾಧ್ವೀಮಣಿಯೇ! ಭಾಸ್ಕರಶಿಷ್ಯರಾದ ಪಂಡಿತರ ಹೆಸರುಗಳನ್ನೂ, ಅವರು ರಚಿಸಿದ, ರೋಗನಾಶಕ್ಕೆ ಬೀಜರೂಪವಾದ ಶಾಸ್ತ್ರಗಳನ್ನೂ ನಾನು ವಿವರಿಸುವೆನು. ಸಾವಧಾನದಿಂದ ಕೇಳು.

೧೩-೧೪. 'ಧನ್ವಂತರಿ, ದಿವೋದಾಸ, ಕಾಶಿರಾಜ, ಅಶ್ವಿನೀಕುಮಾರರು, ನಕುಲಸಹದೇವರು, ಸೂರ್ಯಪುತ್ರನಾದ ಯಮ, ಚ್ಯವನಮಹರ್ಷಿ, ಜನಕ, ಚಂದ್ರಪುತ್ರನಾದ ಬುಧ, ಜಾಬಾಲ, ಜಾಜಲಿ, ಪೈಲ, ಕರಥ, ಅಗಸ್ತ್ಯ' ಈ ಹದಿನಾರು ಮಂದಿಗಳು ಸೂರ್ಯಶಿಷ್ಯರೂ, ಆಯುರ್ವೇದಪಂಡಿತರೂ ಎನಿಸಿಕೊಂಡು ರೋಗನಾಶಕರಾದರು.

೧೫. ಇವರಲ್ಲಿ ಮೊದಲನೆಯವನಾದ ಪೂಜ್ಯಧನ್ವಂತರಿಯು, ಬಹಳ ಮನೋಹರವಾದ 'ಚಿಕಿತ್ಸಾ ತತ್ವವಿಜ್ಞಾನ' ಎಂಬ ಆಯುರ್ವೇದಗ್ರಂಥವನ್ನು ರಚಿಸಿ ಕೀರ್ತಿವಂತನಾದನು.

ಚಿಕಿತ್ಸಾದರ್ಪಣಂ ನಾಮ ದಿವೋದಾಸಶ್ಚಕಾರ ಸಃ ।
ಚಿಕಿತ್ಸಾಕೌಮುದೀಂ ದಿವ್ಯಾಂ ಕಾಶಿರಾಜಶ್ಚಕಾರ ಸಃ ॥ ೧೬ ॥

ಚಿಕಿತ್ಸಾಸಾರತಂತ್ರಂ ಚ ಭ್ರಮಘ್ನಂ ಚಾಶ್ವಿನೀಸುತೌ ।
ತಂತ್ರಂ ವೈದ್ಯಕ ಸರ್ವಸ್ವಂ ನಕುಲಶ್ಚ ಚಕಾರ ಸಃ ॥ ೧೭ ॥

ಚಕಾರ ಸಹದೇವಶ್ಚ ವ್ಯಾಧಿಸಿಂಧುವಿಮರ್ದನಂ ।
ಜ್ಞಾನಾರ್ಣವಂ ಮಹಾತಂತ್ರಂ ಯಮರಾಜಶ್ಚಕಾರ ಹ ॥ ೧೮ ॥

ಚ್ಯವನೋ ಜೀವದಾನಂ ಚ ಚಕಾರ ಭಗವಾನೃಷಿಃ ।
ಚಕಾರ ಜನಕೋ ಯೋಗೀ ವೈದ್ಯಸಂದೇಹಭಂಜನಂ ॥ ೧೯ ॥

ಸರ್ವಸಾರಂ ಚಂದ್ರಸುತೋ ಜಾಬಾಲಸ್ತಂತ್ರಸಾರಕಂ ।
ವೇದಾಂಗಸಾರತಂತ್ರಂ ಚ ಚಕಾರ ಜಾಜಲಿರ್ಮುನಿಃ ॥ ೨೦ ॥

---

೧೬. ದಿವೋದಾಸನು 'ಚಿಕಿತ್ಸಾದರ್ಪಣ'ವೆಂಬ ಗ್ರಂಥವನ್ನೂ, ಕಾಶಿರಾಜನು 'ಚಿಕಿತ್ಸಾಕೌಮುದೀ' ಎಂಬ ಸುಂದರಗ್ರಂಥವನ್ನೂ ರಚಿಸಿ ಕೀರ್ತಿಗಳಿಸಿದರು.

೧೭. 'ಚಿಕಿತ್ಸಾಸಾರತಂತ್ರ', ಚಿಕಿತ್ಸಾಭ್ರಮಘ್ನ'ವೆಂಬೆರಡು ಗ್ರಂಥಗಳನ್ನು ಅಶ್ವಿನೀಕುಮಾರರೂ, 'ವೈದ್ಯಕಸರ್ವಸ್ವ'ವೆಂಬ ಗ್ರಂಥವನ್ನು ನಕುಲನೂ ವಿರಚಿಸಿ ಯಶಶ್ಶರೀರಿಗಳಾದರು.

೧೮. ಸಹದೇವನು 'ವ್ಯಾಧಿಸಿಂಧುವಿಮರ್ದನ'ವೆಂಬ ಗ್ರಂಥವನ್ನೂ, ಯಮನು 'ಜ್ಞಾನಾರ್ಣವ' ಎಂಬ ಮಹಾಗ್ರಂಥವನ್ನೂ ರಚಿಸಿ ಕೀರ್ತಿಶಾಲಿಗಳಾದರು.

೧೯. ಪೂಜ್ಯನಾದ ಚ್ಯವನಮಹರ್ಷಿಯು 'ಜೀವದಾನ'ವೆಂಬ ಗ್ರಂಥವನ್ನೂ, ಯೋಗಿಶ್ರೇಷ್ಠನಾದ ಜನಕನು 'ವೈದ್ಯಸಂದೇಹಭಂಜನ'ವೆಂಬ ಆಯುರ್ವೇದ ಗ್ರಂಥವನ್ನೂ ವಿರಚಿಸಿದರು.

೨೦. ಚಂದ್ರಪುತ್ರನಾದ ಬುಧನು 'ಸರ್ವಸಾರ'ವೆಂಬ ವೈದ್ಯಗ್ರಂಥವನ್ನೂ, ಜಾಬಾಲಋಷಿಯು 'ತಂತ್ರಸಾರ'ವೆಂಬ ಗ್ರಂಥವನ್ನೂ ಜಾಜಲಿಋಷಿಯು 'ವೇದಾಂಗಸಾರತಂತ್ರ'ವೆಂಬ ಗ್ರಂಥವನ್ನೂ ರಚಿಸಿ ಉಪಕಾರವೆಸಗಿದರು.

ಪೈಲೋ ನಿದಾನಂ ಕರಥಸ್ತಂತ್ರಂ ಸರ್ವಧರಂ ಪರಂ ।
ದ್ವೈಧನಿರ್ಣಯತಂತ್ರಂ ಚ ಚಕಾರ ಕುಂಭಸಂಭವಃ ॥ ೨೧ ॥

ಚಿಕಿತ್ಸಾಶಾಸ್ತ್ರಬೀಜಾನಿ ತಂತ್ರಾಣ್ಯೇತಾನಿ ಷೋಡಶ ।
ವ್ಯಾಧಿಪ್ರಣಾಶ ಬೀಜಾನಿ ಬಲಾಧಾನಕರಾಣಿ ಚ ॥ ೨೨ ॥

ಮಥಿತ್ವಾ ಜ್ಞಾನಮಂತ್ರೇಣೈವಾಯುರ್ವೇದಪಯೋನಿಧಿಂ ।
ತತಸ್ತಸ್ಮಾದುದಾಜಹ್ರುರ್ನವನೀತಾನಿ ಕೋವಿದಾಃ ॥ ೨೩ ॥

ಏತಾನಿ ಕ್ರಮಶೋ ದೃಷ್ಟ್ವಾ ದಿವ್ಯಾಂ ಭಾಸ್ಕರಸಂಹಿತಾಂ ।
ಆಯುರ್ವೇದಂ ಸರ್ವಬೀಜಂ ಸರ್ವಂ ಜಾನಾಸಿ ಸುಂದರಿ ॥ ೨೪ ॥

---

೨೧. ಪೈಲಋಷಿಯು 'ವೈದ್ಯನಿದಾನ' ವೆಂಬ ಗ್ರಂಥವನ್ನೂ, ಕರಥನು ಶ್ರೇಷ್ಠವಾದ 'ಸರ್ವಧರ' ವೆಂಬ ಗ್ರಂಥವನ್ನೂ ಅಗಸ್ತ್ಯಮಹರ್ಷಿಯು 'ದ್ವೈಧ ನಿರ್ಣಯತಂತ್ರ' ವೆಂಬ ಗ್ರಂಥವನ್ನೂ ವಿರಚಿಸಿದರು.

೨೨. ಮೇಲ್ಕಂಡ ಹದಿನಾರು ವೈದ್ಯಗ್ರಂಥಗಳೂ ವೈದ್ಯಶಾಸ್ತ್ರಕ್ಕೆ ಬೀಜರೂಪ ವಾಗಿಯೂ, ರೋಗನಾಶಕ್ಕೆ ಮೂಲಕಾರಣವಾಗಿಯೂ, ಮತ್ತು ಅದನ್ನು ಅನುಸರಿಸು ವವರಿಗೆ ಬಲವೃದ್ಧಿಕರವಾಗಿಯೂ ಇವೆ.

೨೩. ಮೇಲ್ಕಂಡ ಆಯುರ್ವೇದವೆಂಬ ಕ್ಷೀರಸಮುದ್ರವನ್ನು ಜ್ಞಾನವೆಂಬ ಮಂತ್ರದಿಂದಲೇ ವಿದ್ವಾಂಸರು ಕಡೆದು ಅದರಿಂದ ಹೊರಕ್ಕೆ ನವನೀತ(ಬೆಣ್ಣೆ) ವೆಂದು ಹೇಳಬಹುದಾದ ದಿವ್ಯೌಷಧಗಳನ್ನು ತೆಗೆದು ಉದಹರಿಸಿದರು.

೨೪. ಎಲೌ, ಮಂಗಳಾಂಗಿಯೇ! ಭಾಸ್ಕರಸಂಹಿತೆಯ ಆಧಾರದಿಂದ, ಕ್ರಮವಾಗಿ ವಿರಚಿತವಾದ ಈ ಹದಿನಾರುಗ್ರಂಥಗಳನ್ನೂ ಕ್ರಮವಾಗಿ ಓದಿದರೆ, ಆಯುರ್ವೇದದ ಮೂಲತತ್ವವೆಲ್ಲವೂ ಚೆನ್ನಾಗಿ ತಿಳಿಯುವುದು.

ವ್ಯಾಧೇಸ್ತತ್ವಪರಿಜ್ಞಾನಂ ವೇದನಾಯಾಶ್ಚ ನಿಗ್ರಹಃ ।
ಏತದ್ವೈದ್ಯಸ್ಯ ವೈದ್ಯತ್ವಂ ನ ವೈದ್ಯಃ ಪ್ರಭುರಾಯುಷಃ ॥ ೨೫ ॥

ಆಯುರ್ವೇದಸ್ಯ ವಿಜ್ಞಾತಾ ಚಿಕಿತ್ಸಾಸು ಯಥಾರ್ಥವಿತ್ ।
ಧರ್ಮಿಷ್ಠಶ್ಚ ದಯಾಲುಶ್ಚ ತೇನ ವೈದ್ಯಃ ಪ್ರಕೀರ್ತಿತಃ ॥ ೨೬ ॥

ಜನಕಃ ಸರ್ವರೋಗಾಣಾಂ ದುರ್ವಾರೋ ದಾರುಣೋ ಜ್ವರಃ ।
ಶಿವಭಕ್ತಶ್ಚ ಯೋಗೀ ಚ ನಿಷ್ಠುರೋ ವಿಕೃತಾಕೃತಿಃ ॥ ೨೭ ॥

ಭೀಮಸ್ತ್ರಿಪಾದಸ್ತ್ರಿಶಿರಾಃ ಷಡ್ಭುಜೋ ನವಲೋಚನಃ ।
ಭಸ್ಮಪ್ರಹರಣೋ ರೌದ್ರಃ ಕಾಲಾಂತಕಯಮೋಪಮಃ ॥ ೨೮ ॥

---

೨೫. ರೋಗದ ಸ್ವರೂಪವನ್ನೂ, ಮೂಲಕಾರಣವನ್ನೂ ಚೆನ್ನಾಗಿ ತಿಳಿದು, ರೋಗಿಯಸಂಕಟವನ್ನು ಪರಿಹರಿಸುವವನೇ ನಿಜವಾದ ವೈದ್ಯನೆನಿಸುವನು. ಮಾನವನ ಆಯುಸ್ಸಿಗೆ ಯಾವ ವೈದ್ಯನೂ ಹೊಣೆಗಾರನಾಗಲಾರನು.

೨೬. ಆಯುರ್ವೇದ ವಿದ್ಯೆಯನ್ನು ಚೆನ್ನಾಗಿ ತಿಳಿದು, ಚಿಕಿತ್ಸೆಮಾಡುವುದರಲ್ಲಿ ನುರಿತವನಾಗಿ, ಧರ್ಮಿಷ್ಠನೂ, ದಯಾಳುವೂ ಆದವನು ವೈದ್ಯನೆನಿಸಿಕೊಳ್ಳಲು ಅರ್ಹನು. ('ವಿದ್ಯಾಂ ಆಯುರ್ವೇದಂ ವೇತ್ತೀತಿ ವೈದ್ಯಃ' ಎಂದು ಶಾಸ್ತ್ರಕಾರರ ವ್ಯುತ್ಪತ್ತಿ).

೨೭-೨೮. ಎಲ್ಲ ರೋಗಗಳಿಗೂ ಮೂಲಕಾರಣವೂ, ತಡೆಯಲಸಾಧ್ಯವೂ, ಆದದ್ದು, ದಾರುಣಜ್ವರವು. ಇದರ ಅಭಿಮಾನಿದೇವತೆಯು ಶಿವಭಕ್ತನೂ, ಯೋಗಿಯೂ ಆಗಿದ್ದರೂ, ಬಹಳ ನಿಷ್ಠುರಸ್ವಭಾವದವನು. ಅವನಿಗೆ ವಿಕಾರವಾದ ರೂಪು, ಮೂರು ಕಾಲು, ಮೂರು ತಲೆ, ಆರುಭುಜಗಳು ಮತ್ತು ಒಂಬತ್ತು ಕಣ್ಣುಗಳಿವೆ. ಎಲ್ಲರನ್ನೂ ಮಣ್ಣುಗೂಡಿಸುವ ಬೂದಿಯೇ ಅವನ ಆಯುಧವಾಗಿದೆ. ನೋಡುವುದಕ್ಕೆ ಜಗತ್ಸಂಹಾರಕನಾದ ಯಮನಂತೆ ಭಯಂಕರನಾಗಿದ್ದಾನೆ.

ಮಂದಾಗ್ನಿಸ್ತಸ್ಯ ಜನಕೋ ಮಂದಾಗ್ನೇರ್ಜನಕಾಸ್ತ್ರಯಃ ।
ಪಿತ್ತಶ್ಲೇಷ್ಮಸಮೀರಾಶ್ಚ ಪ್ರಾಣಿನಾಂ ದುಃಖದಾಯಕಾಃ ॥ ೨೯ ॥

ವಾಯುಜಃ ಪಿತ್ತಜಶ್ಚೈವ ಶ್ಲೇಷ್ಮಜಶ್ಚ ತಥೈವ ಚ।
ಜ್ವರಭೇದಾಶ್ಚ ತ್ರಿವಿಧಾಶ್ಚತುರ್ಥಶ್ಚ ತ್ರಿದೋಷಜಃ ॥ ೩೦ ॥

ಪಾಂಡುಶ್ಚ ಕಾಮಲಃ ಕುಷ್ಠಃ ಶೋಥಃ ಪ್ಲೀಹಾ ಚ ಶೂಲಕಃ ।
ಜ್ವರಾತಿಸಾರಗ್ರಹಣೀ ಕಾಸ ವ್ರಣ ಹಲೀಮಕಾಃ ॥ ೩೧ ॥

ಮೂತ್ರಕೃಚ್ಛ್ರಶ್ಚ ಗುಲ್ಮಶ್ಚ ರಕ್ತದೋಷವಿಕಾರಜಃ ।
ವಿಷಮೇಹಶ್ಚ ಕುಬ್ಜಶ್ಚ ತೋದಶ್ಚ ಗಲಗಂಡಕಃ ॥ ೩೨ ॥

ಭ್ರಮರೀ ಸನ್ನಿಪಾತಶ್ಚ ವಿಷೂಚೀ ದಾರುಣೀ ಸತಿ ।
ಏಷಾಂ ಭೇದಪ್ರಭೇದೇನ ಚತುಃಷಷ್ಟೀ ರುಜಃ ಸ್ಮೃತಾಃ ॥ ೩೩ ॥

---

೨೯. ಶರೀರದಲ್ಲಿ ಅಗ್ನಿಮಾಂದ್ಯವುಂಟಾದರೆ ಜ್ವರ ಉತ್ಪತ್ತಿಯಾಗುವುದು ಪ್ರಾಣಿಗಳಿಗೆ ದುಃಖವನ್ನುಂಟುಮಾಡುವ ವಾತ, ಪಿತ್ತ, ಶ್ಲೇಷ್ಮಗಳೇ ಅಗ್ನಿಮಾಂದ್ಯಕ್ಕೆ ಮೂಲಕಾರಣವು.

೩೦. ಜ್ವರದಲ್ಲಿ ಮೂರು ವಿಧ. ಒಂದು ವಾಯುವಿನಿಂದ ಹುಟ್ಟುವುದು. ಇನ್ನೊಂದು ಪಿತ್ತದಿಂದ ಜನಿಸುವುದು. ಮತ್ತೊಂದು ಶ್ಲೇಷ್ಮದಿಂದ ಉಂಟಾಗುವುದು. ಈ ದೋಷತ್ರಯದಿಂದಲೂ ಒಟ್ಟಾಗಿ ಹುಟ್ಟುವುದು, ನಾಲ್ಕನೆಯ ವಿಧವಾದ ಜ್ವರವು. ಇದನ್ನು ತ್ರಿದೋಷ ಜ್ವರವೆನ್ನುವರು.

೩೧–೩೩. ಪಾಂಡು, ಕಾಮಾಲೆ, ಕುಷ್ಠ, ಶೋಥೆ, ಪ್ಲೀಹ (ಗೆಡ್ಡೆ), ಶೂಲೆ, ಜ್ವರ, ಭೇದಿ, ಹೊಟ್ಟೆಛಳಕು, ಕೆಮ್ಮು, ಹುಣ್ಣು, ಒಣಕಾಮಾಲೆ, ಉರಿಮೂತ್ರ ಗುಲ್ಮ (ಅಡ್ಡಕೈ), ರಕ್ತಪಿತ್ತ, ಪ್ರಾಣಿಗಳ ಸಂಬಂಧವಾದ ವಿಷವ್ಯಾಧಿ, ಮೂತ್ರವ್ಯಾಧಿ, ಗೂನು, ಉರಿವಾತ, ಗಲಗಂಡ, ಚಿತ್ತವಿಕಾರ, ಸನ್ನಿಪಾತಜ್ವರ, ಅಜೀರ್ಣವ್ಯಾಧಿ, ಇವಿಷ್ಟೂ ಪ್ರಧಾನವಾದ ರೋಗಗಳು. ಇವುಗಳ ಭೇದಪ್ರಭೇದದಿಂದ ಅರವತ್ತು ನಾಲ್ಕುವಿಧ ರೋಗವೆಂದು ಪ್ರಸಿದ್ಧವಾಗಿದೆ. ಇಷ್ಟು ರೋಗಗಳಿಗೂ ಪ್ರತ್ಯೇಕವಾದ ಅಭಿಮಾನಿದೇವತೆಗಳಿದ್ದಾರೆ.

ಮೃತ್ಯುಕನ್ಯಾಸುತಾಶ್ಚೈತೇ ಜರಾ ತಸ್ಯಾಶ್ಚ ಕನ್ಯಕಾ ।
ಜರಾ ಚ ಭ್ರಾತೃಭಿಃ ಸಾರ್ಧಂ ಶಶ್ವದ್ಭ್ರಮತಿ ಭೂತಲಂ ॥ ೩೪ ॥

ಏತೇ ಚೋಪಾಯವೇತ್ತಾರಂ ನ ಗಚ್ಛಂತಿ ಚ ಸಂಯತಂ ।
ಪಲಾಯಂತೇ ಚ ತಂ ದೃಷ್ಟ್ವಾ ವೈನತೇಯಮಿವೋರಗಾಃ ॥ ೩೫ ॥

ಚಕ್ಷುರ್ಜಲಂ ಚ ವ್ಯಾಯಾಮಃ ಪಾದಾಧಸ್ತೈಲಮರ್ದನಂ ।
ಕರ್ಣಯೋರ್ಮೂರ್ಧ್ನಿ ತೈಲಂ ಚ ಜರಾವ್ಯಾಧಿವಿನಾಶನಂ ॥ ೩೬ ॥

ವಸಂತೇ ಭ್ರಮಣಂ ವಹ್ನಿಸೇವಾಂ ಸ್ವಲ್ಪಾಂ ಕರೋತಿ ಯಃ ।
ಬಾಲಾಂ ಚ ಸೇವತೇ ಕಾಲೇ ಜರಾ ತಂ ನೋಪಗಚ್ಛತಿ ॥ ೩೭ ॥

---

೩೪. ಮೇಲೆ ಹೇಳಿದ ರೋಗಾಭಿಮಾನಿದೇವತೆಗಳೆಲ್ಲರೂ ಮೃತ್ಯುಕನ್ಯೆಯ ಮಕ್ಕಳು. ಜರೆ (ಮುಪ್ಪು) ಎಂಬುವಳು ಆಕೆಯ ಮಗಳು. ಆ ಜರೆಯು ತನ್ನ ಸಹೋದರರೊಡನೆ ಭೂಲೋಕದಲ್ಲಿ ಯಾವಾಗಲೂ ಸುತ್ತುತ್ತಿರುವಳು.

೩೫. ಈ ರೋಗಗಳು ಇಂದ್ರಿಯನಿಗ್ರಹಪರನನ್ನೂ, ರೋಗನಿವಾರಣೋಪಾಯ ಬಲ್ಲವನನ್ನೂ ನೋಡಿದ ಕೂಡಲೇ ಹೆದರಿ, ಗರುಡನನ್ನು ಕಂಡ ಹಾವುಗಳಂತೆ ದೂರವಾಗುವುವು.

೩೬. ಕಣ್ಣನ್ನು ಆಗಾಗ್ಗೆ ತಿಳಿನೀರಿನಿಂದ ತೊಳೆಯುವುದು, ತನ್ನ ಬಲಾನುಗುಣವಾಗಿ ವ್ಯಾಯಾಮಮಾಡುವುದು, ಅಂಗಾಲಿಗೆ ತಂಪಾದ ಎಣ್ಣೆಯನ್ನು ತಿಕ್ಕುವುದು, ಅಂತೆಯೇ ಕಿವಿಯ ರಂಧ್ರಗಳಿಗೂ, ನೆತ್ತಿಗೂ ಎಣ್ಣೆಯನ್ನು ಆಗಾಗ್ಯೆ ತಿಕ್ಕುವುದು. ಹೀಗೆ ಮಾಡುವುದರಿಂದ ಮನುಜನು ಮುಪ್ಪುರೋಗಗಳಿಗೆ ಸಿಲುಕನು.

೩೭. ಯಾವ ಮನುಜನು ವಸಂತಋತುವಿನಲ್ಲಿ ಅಲೆದಾಡುವುದನ್ನೂ, ಬೆಂಕಿಕಾಯಿಸುವುದನ್ನೂ ಕಮ್ಮಿಮಾಡಿ, ಯೌವನವತಿಯಾದ ಸ್ತ್ರೀಯೊಡನೆ ಕಾಲಾನುಗುಣವಾಗಿ ಕ್ರೀಡಿಸುವನೋ ಆತನಿಗೆ ಮುಪ್ಪು ಅಡಸುವುದಿಲ್ಲ.

ಖಾತಶೀತೋದಕಸ್ನಾಯೀ ಸೇವತೇ ಚಂದನದ್ರವಂ ।
ನೋಪಯಾತಿ ಜರಾ ತಂ ಚ ನಿದಾಘೇಽನಿಲ ಸೇವಕಂ ॥ ೩೮ ॥

ಪ್ರಾವೃಷ್ಯುಷ್ಣೋದಕಸ್ನಾಯೀ ಘನತೋಯಂ ನ ಸೇವತೇ ।
ಸಮಯೇ ಚ ಸಮಾಹಾರೀ ಜರಾ ತನ್ನೋಪಗಚ್ಛತಿ ॥ ೩೯ ॥

ಶರದ್ರೌದ್ರಂ ನ ಗೃಹ್ಣಾತಿ ಭ್ರಮಣಂ ತತ್ರ ವರ್ಜಯೇತ್ ।
ಖಾತಸ್ನಾಯೀ ಸಮಾಹಾರೀ ಜರಾ ತಂ ನೋಪಗಚ್ಛತಿ ॥ ೪೦ ॥

ಖಾತಸ್ನಾಯೀ ಚ ಹೇಮಂತೇ ಕಾಲೇವಹ್ನಿಂ ಚ ಸೇವತೇ ।
ಭುಂಕ್ತೇ ನವಾನ್ನಮುಷ್ಣಂ ಚ ಜರಾ ತಂ ನೋಪಗಚ್ಛತಿ ॥ ೪೧ ॥

---

೩೮. ಬೆಳಗಿನ ಹೊತ್ತು ಭಾವಿಯ ನೀರಿನಲ್ಲಿ ಸ್ನಾನಮಾಡುವುದು, ಮೈಗೆ ಚಂದನಗಂಧವನ್ನು ಲೇಪಿಸಿಕೊಳ್ಳುವುದು, ನಿರ್ಮಲವಾದ ಗಾಳಿಯನ್ನು ಸೇವಿಸುವುದು, ಗ್ರೀಷ್ಮಋತುವಿಗೆ ಅನುಗುಣವಾದುದು. ಮುಪ್ಪು ಹೀಗೆ ಮಾಡುವವನಿಂದಲೂ ದೂರವಾಗುವುದು.

೩೯. ವರ್ಷಋತುವಿನಲ್ಲಿ ಸುಖೋಷ್ಣವಾದ ನೀರಿನಲ್ಲಿ ಸ್ನಾನಮಾಡುವುದು, ಮಳೆಯ ನೀರನ್ನು ಕುಡಿಯದಿರುವುದು, ಕಾಲಾನುಗುಣವಾಗಿ ಮಿತಾಹಾರವನ್ನು ತೆಗೆದುಕೊಳ್ಳುವುದು, ಯಾರ ಪದ್ಧತಿಯೋ ಅಂಥವರೂ ಮುದುಕರಾಗುವುದಿಲ್ಲ.

೪೦. ಶರದೃತುವಿನಲ್ಲಿ ರೂಕ್ಷಾಹಾರವನ್ನು ತ್ಯಜಿಸಿ, ಅಲೆದಾಟವನ್ನು ಕಡಿಮೆ ಮಾಡಿ, ಕೂಪತಟಾಕೋದಕದಲ್ಲಿ ಸ್ನಾನಮಾಡುತ್ತಾ, ನಿಯಮಿತಾಹಾರವನ್ನು ಸೇವಿಸುವವನಿಗೆ ಮುಪ್ಪು ಅಡಸುವುದಿಲ್ಲ.

೪೧. ಹಿಮಂತ ಋತುವಿನಲ್ಲೂ ಭಾವಿಯ ನೀರಿನಲ್ಲಿ ಮಿಾಯುವುದು, ಛಳಿಯಾದಾಗ ಬೆಂಕಿಕಾಯಿಸುವುದು, ಆಗತಾನೆ ಮಾಡಿದ ಬಿಸಿಯಾದ ಮತ್ತು ಶುಚಿಯಾದ ಅನ್ನವನ್ನು ತಿನ್ನುವುದು ಮುಪ್ಪನ್ನು ದೂರಮಾಡುವ ಮಾರ್ಗಗಳು.

ಶಿಶಿರೇಂಽಶುಕವಹ್ನಿಂ ಚ ನವ್ಯೋಷ್ಣಾನ್ನಂ ಚ ಸೇವತೇ ।
ಯಶ್ಚ ವ್ಯೋಷ್ಣೋದಕಸ್ನಾಯಿೀ ಜರಾ ತಂ ನೋಪಗಚ್ಛತಿ ॥ ೪೨ ॥

ಸದ್ಯೋಮಾಂಸಂ ನವಾನ್ನಂ ಚ ಬಾಲಾಂ ಸ್ತ್ರೀಂ ಕ್ಷೀರಭೋಜನಂ ।
ಘೃತಂ ಚ ಸೇವತೇ ಯೋ ಹಿ ಜರಾ ತಂ ನೋಪಗಚ್ಛತಿ ॥ ೪೩ ॥

ಭುಂಕ್ತೇ ಸದನ್ನಂ ಕ್ಷುತ್ಕಾಲೇ ತೃಷ್ಣಾಯಾಂ ಪೀಯತೇ ಜಲಂ ।
ನಿತ್ಯಂ ಭುಂಕ್ತೇ ಚ ತಾಂಬೂಲಂ ಜರಾ ತಂ ನೋಪಗಚ್ಛತಿ ॥ ೪೪ ॥

ದಧಿ ಹೈಯ್ಯಂಗವೀನಂ ಚ ನವನೀತಂ ತಥಾ ಗುಡಂ ।
ನಿತ್ಯಂ ಭುಂಕ್ತೇ ಸಂಯಮೀ ಯೋ ಜರಾ ತಂ ನೋಪಗಚ್ಛತಿ ॥ ೪೫ ॥

---

೪೨. ಶಿಶಿರ ಋತುವಿನಲ್ಲಿ ಅತಿಚುರುಕಲ್ಲದ ಬೆಂಕಿಯನ್ನು ಕಾಯಿಸಿಕೊಳ್ಳುವುದು, ಬಿಸಿಯಾದ ಅನ್ನವನ್ನು ಸೇವಿಸುವುದು, ಬಿಸಿನೀರಿನಲ್ಲಿ ಸ್ನಾನ ಮಾಡುವುದು, ಇವು ಮೂರೂ ಮನುಜನನ್ನು ಮುಪ್ಪಿಲ್ಲದಂತೆ ಮಾಡುವುವು.

೪೩. ಹೊಸಹೊಸದಾದ ಮಾಂಸವನ್ನಾಗಲೀ, ಅನ್ನವನ್ನಾಗಲೀ, ತಿನ್ನುವವರಿಗೂ, ನವಯುವತಿಯರ ಸಂಗಮಾಡುವವರಿಗೂ, ಊಟಕ್ಕೆ ಹಾಲು, ತುಪ್ಪಗಳನ್ನು ಸಾಕಾದಷ್ಟು ಉಪಯೋಗಿಸುವವರಿಗೂ ವಾರ್ಧಕ್ಯವೆಂಬುವುದಿಲ್ಲ.

೪೪. ಹಸಿವಾದಾಗ ಹಿತಮಿತವಾದ ಅನ್ನವನ್ನು ಊಟಮಾಡುವುದು, ಬಾಯಾರಿದಾಗ ನಿರ್ಮಲೋದಕವನ್ನು ಕುಡಿಯುವುದು, ಪ್ರತಿ ನಿತ್ಯವೂ ಎಲೆಯಡಿಕೆಯನ್ನು ತಪ್ಪದೆ ಉಪಯೋಗಿಸುವುದು ಬಹಳ ಕಾಲ ಯೌವನವನ್ನುಳಿಸಿಕೊಳ್ಳುವದಾರಿಗಳು.

೪೫. ಒಳ್ಳೆಯ ಮೊಸರು, ಆಗತಾನೆ ಕಡೆದ ಬೆಣ್ಣೆಯನ್ನು ಕಾಯಿಸಿದ ತುಪ್ಪ, ಬೆಣ್ಣೆ ಮತ್ತು ಒಳ್ಳೆಯಬೆಲ್ಲ, ಇವುಗಳನ್ನು ಮಿತವಾಗಿ ಸೇವಿಸುವುದರಿಂದ ಯೌವನವು ದೃಢವಾಗುವುದು.

ಶುಷ್ಕಮಾಂಸಂ ಸ್ತ್ರಿಯಂ ವೃದ್ಧಾಂ ಬಾಲಾರ್ಕಂ ತರುಣಂ ದಧಿ ।
ಸಂಸೇವಂತಂ ಜರಾ ಯಾತಿ ಪ್ರಹೃಷ್ಟಾ ಭ್ರಾತೃಭಿಃ ಸಹ ॥ ೪೬ ॥

ರಾತ್ರೌ ಯೇ ದಧಿ ಸೇವಂತೇ ಪುಂಶ್ಚಲೀಶ್ಚ ರಜಸ್ವಲಾಃ ।
ತಾನುಪೈತಿ ಜರಾ ಹೃಷ್ಟಾ ಭ್ರಾತೃಭಿಃ ಸಹ ಸುಂದರಿ ॥ ೪೭ ॥

ರಜಸ್ವಲಾ ಚ ಕುಲಟಾ ಚಾವೀರಾ ಜಾರದೂತಿಕಾ ।
ಶೂದ್ರಯಾಜಕಪತ್ನೀ ಯಾ ಋತುಹೀನಾ ಚ ಯಾ ಸತಿ ॥ ೪೮ ॥

ಯೋಹಿ ತಾಸಾಮನ್ನಭೋಜೀ ಬ್ರಹ್ಮಹತ್ಯಾಂ ಲಭೇತ್ತು ಸಃ ।
ತೇನ ಪಾಪೇನ ಸಾರ್ಧಂ ಸಾ ಜರಾ ತಮುಪಗಚ್ಛತಿ ॥ ೪೯ ॥

---

೪೬. ಯಾರು ಒಣಗಿ ಹಳದಾದ ಮಾಂಸವನ್ನು ಸೇವಿಸುವರೋ, ಯಾರು ವೃದ್ಧಸ್ತ್ರೀಯೊಡನೆ ಸಂಭೋಗಿಸುವರೋ, ಎಳೆಬಿಸಿಲನ್ನೂ ಆಗತಾನೆ ಹೆಪ್ಪುಹಾಕಿರುವ ಮೊಸರನ್ನೂ ಯಾರು ಸೇವಿಸುವರೋ, ಅಂಥವರನ್ನು ಜರಾ (ಮುಪ್ಪು) ದೇವಿಯು ತನ್ನ ಸಹೋದರರಾದ ರೋಗಗಳೊಡನೆ ಸೇರಿ ನಾಶಗೊಳಿಸುವಳು.

೪೭. ಎಲೌ, ಸುಂದರಾಂಗಿಯಾದ ಮಾಲಾವತಿಯೇ! ರಾತ್ರಿಯ ಹೊತ್ತು ಮೊಸರನ್ನು ಯಾರು ಸೇವಿಸುವರೊ, ಸೂಳೆಯರನ್ನೂ, ಮುಟ್ಟಾದವರನ್ನೂ ಯಾರು ಉಪಭೋಗಿಸುವರೋ, ಅಂಥ ನೀಚರನ್ನು ಕಂಡರೆ ಮುಪ್ಪು ರೋಗಗಳಿಗೆ ಬಹಳ ಪ್ರೀತಿ. ಅವು ಎಂದಿಗೂ ಅವರನ್ನು ಎಡಬಿಡುವುದಿಲ್ಲ.

೪೮-೪೯. ಮುಟ್ಟಾದವರು, ಹಾದರಗಿತ್ತಿಯಾದವರು, ಪತಿಪುತ್ರರಿಲ್ಲದವರು, ಸೂಳೆಯ ಸೇವಕಿಯರು, ಮತ್ತು ಶೂದ್ರನಿಂದ ಯಾಗಮಾಡಿಸುವವನ ಹೆಂಡತಿ, ಋತುಮತಿಯಾಗದ ಹೆಂಗಸು, ಇಂಥವರು ಮಾಡಿದ ಅನ್ನವನ್ನು ಭುಜಿಸುವುದರಿಂದ ಬ್ರಹ್ಮಹತ್ಯೆಗೆ ಸಮನಾದ ಮಹಾಪಾಪವು ಬರುವುದಲ್ಲದೆ, ಅದರ ಜತೆಗೆ ಮುಪ್ಪೂ ಜಾಗ್ರತೆ ಒದಗುವುದು.

ಪಾಪಾನಾಂ ವ್ಯಾಧಿಭಿಃ ಸಾರ್ಧಂ ಮಿತ್ರತಾ ಸತತಂ ಧ್ರುವಂ |
ಪಾಪಂ ವ್ಯಾಧಿಜರಾಬೀಜಂ ವಿಘ್ನಬೀಜಂ ಚ ನಿಶ್ಚಿತಂ || ೫೦ ||

ಪಾಪೇನ ಜಾಯತೇ ವ್ಯಾಧಿಃ ಪಾಪೇನ ಜಾಯತೇ ಜರಾ |
ಪಾಪೇನ ಜಾಯತೇ ದೈನ್ಯಂ ದುಃಖಂ ಶೋಕೋ ಭಯಂಕರಃ || ೫೧ ||

ತಸ್ಮಾತ್ಪಾಪಂ ಮಹಾವೈರಂ ದೋಷಬೀಜಮಮಂಗಲಂ |
ಭಾರತೇ ಸತತಂ ಸಂತೋ ನಾಚರಂತಿ ಭಯಾತುರಾಃ || ೫೨ ||

ಸ್ವಧರ್ಮಾಚಾರಯುಕ್ತಂ ಚ ದೀಕ್ಷಿತಂ ಹರಿಸೇವಕಂ |
ಗುರುದೇವಾತಿಥೀನಾಂ ಚ ಭಕ್ತಂ ಸಕ್ತಂ ತಪಃಸು ಚ || ೫೩ ||

ವ್ರತೋಪವಾಸಯುಕ್ತಂ ಚ ಸದಾ ತೀರ್ಥನಿಷೇವಕಂ |
ರೋಗಾದ್ರವಂತಿ ತಂ ದೃಷ್ಟ್ವಾ ವೈನತೇಯಮಿವೋರಗಾಃ || ೫೪ ||

---

೫೦. ಪಾಪಕರ್ಮಗಳಿಗೂ, ರೊಗಗಳಿಗೂ, ಯಾವಾಗಲೂ ಬಹಳ ಸ್ನೇಹ. ಪಾಪವೇ ರೊಗಕ್ಕೂ, ಮುಪ್ಪಿಗೂ ಬೀಜವೆನ್ನಬಹುದು. ಮನುಜನ ಜೀವನಕ್ಕೆ ಬಂದೊದಗುವ ವಿಘ್ನಗಳೆಲ್ಲವೂ ಪಾಪ ಮೂಲಕವಾದದ್ದೇ.

೫೧. ಜನ್ಮಾಂತರದಲ್ಲಿ ಪಾಪಕರ್ಮಗಳನ್ನು ಮಾಡಿದ್ದರೆ ಅದರ ಫಲವಾಗಿ ಈ ಜನ್ಮದಲ್ಲಿ ರೋಗವನ್ನೂ, ಮುದಿತನದ ಸಂಕಟಗಳನ್ನೂ ಅನುಭವಿಸಬೇಕಾಗುವುದು. ಮನುಜನಿಗೆ ಬರುವ ಬಡತನ ಮತು ಭಯಂಕರವಾದ ದುಃಖಶೋಕಗಳೂ ಕೂಡ ಪಾಪಕರ್ಮದ ಫಲಗಳು.

೫೨. ಆದ್ದರಿಂದ ಪಾಪವು ಮನುಜನಿಗೆ ದೊಡ್ಡ ಶತ್ರುವು. ಮನುಜನಿಗೆ ಒದಗುವ ಅಮಂಗಲದೋಷಗಳೆಲ್ಲವೂ ಪಾಪಮೂಲಕವಾದದ್ದೇ. ಆದ್ದರಿಂದ ಭಾರತ ಭೂಮಿಯಲ್ಲಿ ಜನಿಸಿದ ಸತ್ಪುರುಷರು ತಮಗೆ ಪಾಪಸಂಘಟನೆಯಾಗದಂತೆ ಬಹಳ ಎಚ್ಚರಿಕೆಯಿಂದಿರುವರು.

೫೩–೫೪. ಯಾರು ಸ್ವಧರ್ಮಾಚರಣೆಯಲ್ಲಿ ನಿರತರಾಗಿ, ಪರಮಾತ್ಮನ ಸೇವೆಯಲ್ಲಿ ದೀಕ್ಷಾಬದ್ಧರಾಗಿ, ದೇವ, ಗುರು ಮತ್ತು ಅತಿಥಿಗಳ ಸೇವೆಯಲ್ಲಿ ಆಸಕ್ತರಾಗಿ, ತಪೋನಿಷ್ಠರಾಗಿ, ವ್ರತೋಪವಾಸಾದಿಗಳನ್ನೂ, ತೀರ್ಥಯಾತ್ರೆಯನ್ನೂ ಮಾಡುವರೋ ಅಂಥಹವರನ್ನು ನೋಡಿದಕೂಡಲೇ, ಗರುಡನನ್ನು ನೋಡಿದ ಹಾವುಗಳು ಓಡುವಂತೆ ರೋಗಗಳೆಲ್ಲವೂ ದೂರಹೋಗುವುವು.

ಏತಾನ್ ಜರಾ ನ ಸೇವೇತ ವ್ಯಾಧಿಸಂಘಶ್ಚ ದುರ್ಜಯಃ ।
ಸರ್ವಂ ಬೋಧ್ಯಮಸಮಯೇ ಕಾಲೇ ಸರ್ವಂ ಗ್ರಸಿಷ್ಯತಿ ॥ ೫೫ ॥

ಜ್ವರಶ್ಚ ಸರ್ವರೋಗಾಣಾಂ ಜನಕಃ ಕಥಿತಃ ಸತಿ ।
ಪಿತ್ತಶ್ಲೇಷ್ಮಸಮೀರಾಶ್ಚ ಜ್ವರಸ್ಯ ಜನಕಾಸ್ತ್ರಯಃ ॥ ೫೬ ॥

ಏತೇ ಯಥಾ ಸಂಚರಂತಿ ಸ್ವಯಂ ಯಾಂತಿ ಚ ದೇಹಿಷು ।
ತಮೇವ ವಿವಿಧೋಪಾಯಂ ಸಾಧ್ವಿ ಮತ್ತೋ ನಿಶಾಮಯ ॥ ೫೭ ॥

ಕ್ಷುಧಿ ಜಾಜ್ವಲ್ಯಮಾನಾಯಾಮಾಹಾರಾಭಾವ ಏವ ಚ ।
ಪ್ರಾಣಿನಾಂ ಜಾಯತೇ ಪಿತ್ತಂ ಚಕ್ರೇ ಚ ಮಣಿಪೂರಕೇ ॥ ೫೮ ॥

---

೫೫. ಮೇಲೆ ಹೇಳಿದ ಮಹಾತ್ಮರಿಗೆ, ಮುಪ್ಪು, ರೋಗಗಳೂ ಕೂಡ ಎಂದೆಂದಿಗೂ ಸಂಭವಿಸುವುದಿಲ್ಲ. ಇವೆಲ್ಲವನ್ನೂ ತಿಳಿದಿರಬೇಕು. ಇಲ್ಲದಿದ್ದರೆ ಅಕಾಲದಲ್ಲಿ ಎಲ್ಲರನ್ನೂ ಈ ಜರಾವ್ಯಾಧಿಗಳು ನುಂಗಿಬಿಡುವುವು.

೫೬. ಜ್ವರವು ಎಲ್ಲಾ ರೋಗಗಳಿಗೂ ಮೂಲವೆಂದೂ ವಾತ, ಪಿತ್ತ, ಶ್ಲೇಷ್ಮಗಳೆಂಬ ಮೂರು ವಿಕಾರಗಳು ಜ್ವರಕ್ಕೆ ಮೂಲಕಾರಣವೆಂದೂ ಹಿಂದೆ ಹೇಳಿದುದಾಯಿತು.

೫೭. ವಾತ, ಪಿತ್ತ, ಶ್ಲೇಷ್ಮಗಳು ಮನುಷ್ಯನ ಶರೀರದಲ್ಲಿ ಹೇಗೆ ಸೇರಿ ಸಂಚರಿಸುವುದು. ಇದನ್ನು ನಿಗ್ರಹಿಸುವ ಬಗೆ ಹೇಗೆ–ಎಂಬುದಕ್ಕೆ ಅನೇಕ ವಿಧವಾದ ಉಪಾಯವನ್ನು ಹೇಳುವೆನು. ಎಲೌ ಸಾಧ್ವೀಮಣಿಯೇ, ಸಾವಧಾನದಿಂದ ಕೇಳು.

೫೮. ಹೊಟ್ಟೆಗೆ ಆಹಾರವಿಲ್ಲದೆ ಜೀವಿಯು ಹಸಿದು ಬಳಲುತ್ತಿರುವಾಗ ನಾಭಿಯಲ್ಲಿರುವ ಮಣಿಪೂರಕವೆಂಬ ಚಕ್ರದಲ್ಲಿ ಪಿತ್ತವು ಉತ್ಪತ್ತಿಯಾಗುವುದು.

ತಾಲ ಬಿಲ್ವಫಲಂ ಭುಕ್ತ್ವಾ ಜಲಪಾನಂ ಚ ತತ್‌ಕ್ಷಣಂ ।
ತದೇವತು ಭವೇತ್ಪಿತ್ತಂ ಸದ್ಯಃ ಪ್ರಾಣಹರಂ ಪರಂ ॥ ೫೯ ॥

ತಪ್ತೋದಕಂ ಚ ಶಿರಸಿ ಭಾದ್ರೇ ತಿಕ್ತಂ ವಿಶೇಷತಃ ।
ದೈವಗ್ರಸ್ತಶ್ಚ ಯೋ ಭುಂಕ್ತೇ ಪಿತ್ತಂ ತಸ್ಯ ಪ್ರಜಾಯತೇ ॥ ೬೦ ॥

ಸಶರ್ಕರಂ ಚ ಧಾನ್ಯಾಕಂ ಪಿಷ್ಟಂ ಸೀತೋದಕಾನ್ವಿತಂ ।
ಚಣಕಂ ಸರ್ವಗವ್ಯಂ ಚ ದಧಿತಕ್ರವಿವರ್ಜಿತಂ ॥ ೬೧ ॥

ಬಿಲ್ವತಾಲಫಲಂ ಪಕ್ವಂ ಸರ್ವಮೈಕ್ಷವಮೇವ ಚ ।
ಆರ್ದ್ರಕಂ ಮುದ್ಗಯೂಷಂ ಚ ತಿಲಪಿಷ್ಟಂ ಸಶರ್ಕರಂ ॥ ೬೨ ॥

---

೫೯. ತಾಳೆಯಹಣ್ಣು ಮತ್ತು ಬಿಲ್ವದ ಹಣ್ಣುಗಳನ್ನು ತಿಂದು, ಕೂಡಲೇ ನೀರು ಕುಡಿದರೆ ಅದೇ ಪಿತ್ತವಾಗಿ ಪರಿಣಮಿಸಿ ಬಹಳ ಜಾಗ್ರತೆ ಪ್ರಾಣನಾಶಕ ವಾಗುವುದು.

೬೦. ನೆತ್ತಿಗೆ ಕುದಿಯುವ ನೀರನ್ನು ಹಾಕಿಕೊಳ್ಳುವವರಿಗೂ, ಭಾದ್ರಪದ ಮಾಸದಲ್ಲಿ ದುರ್ದೈವದಿಂದ ಕಹಿ ಪದಾರ್ಥವನ್ನು ಹೆಚ್ಚಾಗಿ ತಿನ್ನುವವರಿಗೂ ಪಿತ್ತವು ಜಾಸ್ತಿಯಾಗುವುದು.

೬೧–೬೩. ಸಕ್ಕರೆಯನ್ನು ಬೆರೆಸಿದ ಕೊತ್ತಂಬರೀ ಬಿಯನುಜದೇಹಡ್ಡಿ ಮತ್ತು ತಣ್ಣೀರಿನಲ್ಲಿ ಬೆರೆಸಿದ ಗೋಧುವೆ ಹಿಟ್ಟನ್ನೂ, ಸೇವಿಸುವುದರಿಂದಲೂ ಹಸುವಿನ ಗಂಜಲ, ಸಗಣಿ, ಹಾಲು ಮತ್ತು ತುಪ್ಪಗಳನ್ನು ಸೇವಿಸುವುದರಿಂದಲೂ, ಕಡಲೆ ಕಾಳನ್ನು ಸೇವಿಸುವುದರಿಂದಲೂ, ಕಬ್ಬಿನರಸ, ಬೆಲ್ಲ ಮುಂತಾದುವುಗಳನ್ನೂ, ಚೆನ್ನಾಗಿ ಮಾಗಿದ ಬಿಲ್ವ ಮತ್ತು ತಾಳೆಯ ಹಣ್ಣುಗಳನ್ನೂ ತಿನ್ನುವುದರಿಂದಲೂ, ಹಸಿ ಶುಂಠಿಯನ್ನೂ, ಹೆಸರುಕಾಳಿನ ಕಟ್ಟನ್ನೂ, ಸಕ್ಕರೆಯೊಡನೆ ಬೆರಸಿದ ಎಳ್ಳು

ಪಿತ್ತಕ್ಷಯಕರಂ ಸದ್ಯೋ ಬಲಪುಷ್ಟಿಪ್ರದಂ ಪರಂ ।
ಪಿತ್ತನಾಶಂ ಚ ತದ್ಬೀಜಮುಕ್ತಮನ್ಯನ್ನಿಬೋಧ ಮೇ ॥ ೬೩ ॥

ಭೋಜನಾನಂತರಂ ಸ್ನಾನಂ ಜಲಪಾನಂ ವಿನಾ ತೃಷಾ ।
ತಿಲತೈಲಂ ಸ್ನಿಗ್ಧತೈಲಂ ಸ್ನಿಗ್ಧಮಾಮಲಕೀದ್ರವಂ ॥ ೬೪ ॥

ಪರ್ಯುಷಿತಾನ್ನಂ ತಕ್ರಂ ಚ ಪಕ್ವಂ ರಂಭಾಫಲಂ ದಧಿ ।
ಮೇಘಾಂಬು ಶರ್ಕರಾತೋಯಂ ಸುಸ್ನಿಗ್ಧಜಲಸೇವನಂ ॥ ೬೫ ॥

ನಾರಿಕೇಲೋದಕಂ ರೂಕ್ಷಸ್ನಾನಂ ಪರ್ಯುಷಿತೇ ಜಲೇ ।
ತರುಮುಂಜಾಪಕ್ವಫಲಂ ಸುಪಕ್ವಂ ಕರ್ಕಟೀಫಲಂ ॥ ೬೬ ॥

ಖಾತಸ್ನಾನಂ ಚ ವರ್ಷಾಸು ಮೂಲಕಂ ಶ್ಲೇಷ್ಮಕಾರಕಂ ।
ಬ್ರಹ್ಮರಂಧ್ರೇ ಚ ತಜ್ಜನ್ಮ ಮಹದ್ವೀರ್ಯವಿನಾಶನಂ ॥ ೬೭ ॥

ಹಿಂಡಿಯನ್ನೂ ಸೇವಿಸುವುದರಿಂದಲೂ, ಮನುಜನಿಗೆ ಪಿತ್ತವು ಶಮನವಾಗಿ ದೇಹ ಬಲವೂ, ಪುಷ್ಟಿಯೂ, ಉಂಟಾಗುವುದು. ಪಿತ್ತೋತ್ಪತ್ತಿ ಕ್ರಮವನ್ನೂ, ಅದರ ನಾಶದ ವಿಧಾನವನ್ನೂ ವಿವರಿಸಿಯಾಯಿತು. ಈಗ ಶ್ಲೇಷ್ಮದ ವಿಷಯವನ್ನು ಹೇಳುವೆನು ಕೇಳು.

೬೪-೬೭. ಊಟವಾದ ಮೇಲೆ ಸ್ನಾನಮಾಡುವುದು, ಬಾಯಾರಿಕೆ ಇಲ್ಲದೆ ನೀರು ಕುಡಿಯುವುದು, ಎಳ್ಳೆಣ್ಣೆ, ಕೊಬ್ಬು ಬೆರಕೆಯಾದ ಎಣ್ಣೆ, ಜಿಡ್ಡು ಮಿಶ್ರಿತ ವಾದ ನೆಲ್ಲಿಕಾಯಿರಸ, ತಂಗಳನ್ನ, ಮಜ್ಜಿಗೆ, ಕಳಿತಬಾಳೆಹಣ್ಣು, ಮೊಸರು, ಮಳೆಯನೀರು, ಸಕ್ಕರೆಯ ನೀರು, ಜಿಡ್ಡು ಬೆರಸಿದ ನೀರು, ಎಳನೀರು ಇವುಗಳನ್ನು ಉಪಯೋಗಿಸುವುದು, ಮೈಗೆ ಎಣ್ಣೆಹಚ್ಚದೆ ಬಹಳ ಹಳದಾದ ನೀರಿನಲ್ಲಿ ಬಹುಹೊತ್ತು ಸ್ನಾನಮಾಡುವುದು, ಚೆನ್ನಾಗಿ ಪಕ್ವವಾಗಿರುವ ಮುಂಜಾ ಫಲವನ್ನೂ, ಕಲ್ಲಂಗಡಿ ಹಣ್ಣನ್ನೂ ತಿನ್ನುವುದು, ಮಳೆಗಾಲದಲ್ಲಿ ಭಾವಿಯನೀರಿನಲ್ಲಿ ಸ್ನಾನಮಾಡುವುದು, ಮೂಲಂಗಿಯನ್ನು ಸೇವಿಸುವುದು ಇವಿಷ್ಟೂ ಶ್ಲೇಷ್ಮೋತ್ಪತ್ತಿಗೆ ಕಾರಣಗಳು. ಈ ಶ್ಲೇಷ್ಮವು ಮನುಜನ ಬ್ರಹ್ಮರಂಧ್ರದಲ್ಲಿ ಹುಟ್ಟುತ್ತದೆ. ಶ್ಲೇಷ್ಮರೋಗದಿಂದ ಬಹಳ ವೀರ್ಯ ನಷ್ಟವಾಗುವುದು.

ವಹ್ನಿಸ್ವೇದಂ ದೃಷ್ಟಿಭಂಗಂ ಪಕ್ವತೈಲವಿಶೇಷಕಂ ।
ಭ್ರಮಣಂ ಶುಷ್ಕಭಕ್ಷಂ ಚ ಶುಷ್ಕಪಕ್ವಹರೀತಕೀ ॥ ೬೮ ॥

ಪಿಂಡಾರಕಮಪಕ್ವಂ ಚ ರಂಭಾಫಲಮಪಕ್ವಕಂ ।
ವೇಸವಾರಃ ಸಿಂಧುವಾರಮನಾಹಾರಮಪಾನಕಂ ॥ ೬೯ ॥

ಸಘೃತಂ ರೋಚನಾಚೂರ್ಣಂ ಸಘೃತಂ ಶುಷ್ಕಶರ್ಕರಂ ।
ಮರೀಚಂ ಪಿಪ್ಪಲಂ ಶುಷ್ಕಮಾರ್ದ್ರಕಂ ಜೀವಕಂ ಮಧು ॥ ೭೦ ॥

ದ್ರವ್ಯಾಣ್ಯೇತಾನಿ ಗಾಂಧರ್ವಿ ಸದ್ಯಃ ಶ್ಲೇಷ್ಮಹರಾಣಿ ಚ ।
ಬಲಪುಷ್ಟಿಕರಾಣ್ಯೇವ ವಾಯುಬೀಜಂ ನಿಶಾಮಯ ॥ ೭೧ ॥

೬೮–೭೧. ಬೆಂಕಿಯನ್ನು ಕಾಯಿಸಿ ಮೈಬೆವರಿಸಿಕೊಳ್ಳುವುದು, ಕಣ್ಣಿಗೆ ಅಂಜನ ಹಾಕಿಕೊಳ್ಳುವುದು, ಶ್ಲೇಷ್ಮಹಾರಕದ್ರವ್ಯಗಳಿಂದ ಪಕ್ವವಾದ ಎಣ್ಣೆಯನ್ನು ಉಪಯೋಗಿಸುವುದು, ಹೆಚ್ಚುಕಾಲ ತಿರುಗಾಡುವುದು, ಮಾಗಿ ಒಣಗಿದ ಪದಾರ್ಥಗಳನ್ನೂ ಚೆನ್ನಾಗಿ ಬಲಿತು ಒಣಗಿದ ಅಳಲೆಕಾಯನ್ನೂ ತಿನ್ನುವುದು, ಚೆನ್ನಾಗಿ ಮಾಗದಿರುವ ಪಿಂಡಾರಕ ಫಲವನ್ನೂ, ಬಾಳೆಯ ಹಣ್ಣನ್ನೂ ತಿನ್ನುವುದು, ಕೊತ್ತಂಬರೀ ಬೀಜ, ಲಕ್ಕಿಸೊಪ್ಪು ಮುಂತಾದವುಗಳ ಕಷಾಯವನ್ನೂ ಕುಡಿದು, ಅನ್ನಪಾನಾದಿಗಳನ್ನು ಬಿಡುವುದು, ತುಪ್ಪದಲ್ಲಿ ಕಲಸಿದ ಬೂರುಗದ ಚೂರ್ಣವನ್ನೂ, ತುಪ್ಪದಲ್ಲಿ ಕಲಸಿದ ಕಲ್ಲುಸಕ್ಕರೆ ಪುಡಿಯನ್ನೂ, ಮೆಣಸು, ಒಣಹಿಪ್ಪಲಿ, ಒಣಶುಂಠಿ, ಜೀವಕಬೇರು ಮತ್ತು ಜೇನುತುಪ್ಪ ಇವುಗಳನ್ನೂ ಸೇವಿಸುವುದು ಇವೆಲ್ಲಾ ಒಂದು ಕ್ಷಣಕಾಲದಲ್ಲಿ ಶ್ಲೇಷ್ಮವನ್ನು ನಾಶಗೊಳಿಸಬಲ್ಲ ಉತ್ತಮೌಷಧಗಳು. ಅಲ್ಲದೆ ಮನುಜನಿಗೆ ಇವುಗಳನ್ನು ಸೇವಿಸುವುದರಿಂದ ಬಲವೂ, ದೇಹಪುಷ್ಟಿಯೂ ಉಂಟಾಗುವುದು. ಎಲೌ, ಗಂಧರ್ವರಾಜಪುತ್ರಿಯೇ! ಈಗ ವಾಯುವು ಶರೀರದಲ್ಲಿ ಉತ್ಪನ್ನವಾಗಲು ನಾನು ಹೇಳುವ ಕಾರಣಗಳನ್ನು ಸಾವಧಾನದಿಂದ ಕೇಳು.

ಭೋಜನಾನಂತರಂ ಸದ್ಯೋ ಗಮನಂ ಧಾವನಂ ತಥಾ ।
ಛೇದನಂ ವಹ್ನಿತಾಪಶ್ಚ ಶಶ್ವದ್ಭ್ರಮಣಮೈಥುನಂ ॥ ೭೨ ॥

ವೃದ್ಧಸ್ತ್ರೀಗಮನಂ ಚೈವ ಮನಃ ಸಂತಾಪ ಏವ ಚ ।
ಅತಿರೂಕ್ಷಮನಾಹಾರಂ ಯುದ್ಧಂ ಕಲಹಮೇವ ಚ ॥ ೭೩ ॥

ಕಟುವಾಕ್ಯಂ ಭಯಂ ಶೋಕಃ ಕೇವಲಂ ವಾಯುಕಾರಣಂ ।
ಆಜ್ಞಾಖ್ಯ ಚಕ್ರೇ ತಜ್ಜನ್ಮ ನಿಶಾಮಯ ತದೌಷಧಂ ॥ ೭೪ ॥

ಪಕ್ವರಂಭಾಫಲಂ ಚೈವ ಸಬೀಜಂ ಶರ್ಕರೋದಕಂ ।
ನಾರಿಕೇಲೋದಕಂ ಚೈವ ಸದ್ಯಸ್ತಕ್ರಂ ಸುಪಿಷ್ಟಕಂ ॥ ೭೫ ॥

೭೨–೭೪. ಊಟವಾದ ಕೂಡಲೇ ನಡೆಯುವುದು, ಓಡುವುದು ಮತ್ತು ಕಟ್ಟಿಗೆ ಮುಂತಾದುವನ್ನು ಕತ್ತರಿಸುವುದು, ಬೆಂಕಿಯನ್ನು ಕಾಯಿಸುವುದು, ಹೆಚ್ಚು ಅಲೆಯುವುದು, ಪದೇ ಪದೇ ಸ್ತ್ರೀಸಂಗಮಾಡುವುದು, ಮುದಿಹೆಂಗಸಿನೊಡಗೂಡುವುದು, ಮನಸ್ಸಿನಲ್ಲಿ ಏನಾದರೊಂದು ಕೊರತೆಯನ್ನು ಹಚ್ಚಿಕೊಳ್ಳುವುದು, ಜಿಡ್ಡಿಲ್ಲದ ಆಹಾರವನ್ನು ತಿನ್ನುವುದು, ಹಸಿದಿರುವುದು, ಯಾವಾಗಲೂ ಕ್ರೂರಮಾತುಗಳನ್ನಾಡಿ ಜಗಳ ಕಾಯುತ್ತಿರುವುದು, ಭಯ, ದುಃಖಗಳಿಗೆ ಹೃದಯದಲ್ಲಿ ಎಡೆಕೊಡುವುದು ಇವೆಲ್ಲವೂ ವಾತೋತ್ಪತ್ತಿಗೆ ಕಾರಣಗಳು. ಇದು ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರದಲ್ಲಿ ಉತ್ಪತ್ತಿಯಾಗುವುದು. ಇದಕ್ಕೆ ನಾನು ಹೇಳುವ ಔಷಧವನ್ನು ಅವಧರಿಸು.

೭೫–೭೮. ಚೆನ್ನಾಗಿ ಕಳಿತ ಬಾಳೆಯ ಹಣ್ಣನ್ನು ತಿನ್ನುವುದು, ಮಾದಳದ ಹಣ್ಣನ್ನು ತಿಂದು ಸಕ್ಕರೆಯ ಪಾನಕವನ್ನು ಕುಡಿಯುವುದು, ಎಳನೀರು, ಅರಳು ಹಿಟ್ಟಿನೊಡಗೂಡಿದ ಹೊಸದಾಗಿ ಕಡೆದ ಮಜ್ಜಿಗೆ, ಎಮ್ಮೆಯ ಮೊಸರು–ಇವುಗಳನ್ನು ಕುಡಿಯುವುದು, ರುಚಿಕರವಾದ ವಸ್ತುಗಳನ್ನು ಸಕ್ಕರೆಯೊಡನೆಯಾಗಲೀ, ಹಾಗೆಯೇ ಆಗಲಿ ತಿನ್ನುವುದು, ಆಯಾ ದಿನದ ತಂಗಳನ್ನ ಮತ್ತು ಯಗಚಿ ಹಣ್ಣನ್ನು ತಿನ್ನುವುದು, ತಣ್ಣೀರನ್ನು ಕುಡಿಯುವುದು, ವಾತಹರಗಣದಿಂದ ಸಿದ್ಧವಾದ ತೈಲವನ್ನೂ,

ಮಾಹಿಷಂ ದಧಿ ಮಿಷ್ಟಂ ಚ ಕೇವಲಂ ವಾ ಸಶರ್ಕರಂ ।
ಸದ್ಯಃ ಪರ್ಯುಷಿತಾನ್ನಂ ಚ ಸೌವೀರಂ ಶೀತಲೋದಕಂ ॥ ೨೬ ॥

ಪಕ್ವ ತೈಲ ವಿಶೇಷಂ ಚ ತಿಲತೈಲಂ ಚ ಕೇವಲಂ ।
ಲಾಂಗಲೀತಾಲಖರ್ಜೂರಮುಷ್ಣಮಾಮಲಕೀದ್ರವಂ ॥ ೨೭ ॥

ಶೀತಲೋಷ್ಣೋದಕಸ್ನಾನಂ ಸುಸ್ನಿಗ್ಧಚಂದನದ್ರವಂ ।
ಸ್ನಿಗ್ಧಪದ್ಮಪತ್ರತಲ್ಪಂ ಸುಸ್ನಿಗ್ಧವ್ಯಜನಾನಿ ಚ ॥ ೨೮ ॥

ಏತತ್ತೇ ಕಥಿತಂ ವತ್ಸೇ ಸದ್ಯೋ ವಾಯುಪ್ರಣಾಶನಂ ।
ವಾಯವಸ್ತ್ರಿವಿಧಾಃ ಪುಂಸಾಂ ಕ್ಲೇಶಸಂತಾಪಕಾಮಜಾಃ ॥ ೨೯ ॥

ವ್ಯಾಧಿಸಂಘಶ್ಚ ಕಥಿತಸ್ತಂತ್ರಾಣಿ ವಿವಿಧಾನಿ ಚ ।
ತಾನಿ ವ್ಯಾಧಿಪ್ರಣಾಶಾಯ ಕೃತಾನಿ ಸದ್ಭಿರೇವ ಚ ॥ ೩೦ ॥

ತಂತ್ರಾಣ್ಯೇತಾನಿ ಸರ್ವಾಣಿ ವ್ಯಾಧಿಕ್ಷಯಕರಾಣಿ ಚ ।
ರಸಾಯನಾದಯೋ ಯೇಷು ಚೋಪಾಯಾಶ್ಚ ಸುದುರ್ಲಭಾಃ ॥ ೩೧ ॥

ಕೇವಲ ಎಳ್ಳೆಣ್ಣೆಯನ್ನೂ ಉಪಯೋಗಿಸುವುದು, ಕೋಳಿಕುಟುಮನಗೆಡ್ಡೆ, ತಾಳೆ ಹಣ್ಣು ಮತ್ತು ಖರ್ಜೂರಗಳನ್ನು ತಿನ್ನುವುದು, ನೆಲ್ಲಿಕಾಯಿರಸವನ್ನು ಬಿಸಿಮಾಡಿ ಕುಡಿಯುವುದು, ಸಾಮಾನ್ಯವಾಗಿ ಬಿಸಿಯಾಗಿರುವ ನೀರಿನಲ್ಲಿ ಸ್ನಾನಮಾಡುವುದು, ಸ್ವಲ್ಪ ಮಂದವಾಗಿರುವ ಚಂದನಗಂಧವನ್ನು ಮೈಗೆ ಲೇಪಿಸಿಕೊಳ್ಳುವುದು, ಚಿಗುರಾದ ತಾವರೆ ಎಲೆಯನ್ನು ಹಾಸಿಕೊಂಡು ಮಲಗುವುದು, ತಾಳೆಯ ಗರಿಯ-ಬೀಸಣಿಗೆಯಿಂದ ಬೀಸಿಕೊಳ್ಳುವುದು–ಇವಿಷ್ಟು ವಾಯುನಾಶಕವಾದ ಔಷಧಗಳು. ಮನುಜರಿಗೆ ಸಾಂಸಾರಿಕ ಕಷ್ಟ, ಮಾನಸಿಕ ಕಷ್ಟ ಮತ್ತು ಮನ್ಮಥನ ಸಂತಾಪದಿಂದ ವಾಯುವು ಉತ್ಪತ್ತಿಯಾಗಿ ಮೂರು ವಿಧವೆನಿಸಿಕೊಳ್ಳುವುದು.

೩೦–೩೧. ವಿವಿಧರೋಗಗಳ ಸಮೂಹವನ್ನೂ ಆ ರೋಗನಾಶಕ್ಕಾಗಿ ವಿದ್ವಾಂಸರಿಂದ ವಿರಚಿಸಲ್ಪಟ್ಟ ನಾನಾವಿಧಶಾಸ್ತ್ರಗಳನ್ನೂ ನಿನಗೆ ಇದುವರೆಗೆ ವಿವರಿಸಿದೆನು. ಆ ಶಾಸ್ತ್ರಗಳಲ್ಲಿ ಅನೇಕ ರೀತಿಯ ರಸಾಯನಗಳನ್ನು ತಯಾರಿಸುವ ಕ್ರಮವೂ, ರೋಗನಾಶಕೋಪಾಯಗಳೂ ವಿವರವಾಗಿ ತಿಳಿಯುತ್ತವೆ.

ನ ಶಕ್ತಃ ಕಥಿತುಂ ಸಾಧ್ವಿ ಯಥಾರ್ಥಂ ವತ್ಸರೇಣ ಚ ।
ತೇಷಾಂ ಚ ಸರ್ವತಂತ್ರಾಣಾಂ ಕೃತಾನಾಂ ಚ ವಿಚಕ್ಷಣೈಃ ॥ ೮೨ ॥

ಕೇನ ರೋಗೇಣ ತ್ವತ್ಕಾಂತೋ ಮೃತಃ ಕಥಯ ಶೋಭನೇ ।
ತದುಪಾಯಂ ಕರಿಷ್ಯಾಮಿ ಯೇನ ಜೀವೇದಯಂ ಸತಿ ॥ ೮೩ ॥

॥ ಸೌತಿರುವಾಚ ॥

ಬ್ರಾಹ್ಮಣಸ್ಯ ವಚಃ ಶ್ರುತ್ವಾ ಕನ್ಯಾ ಚಿತ್ರರಥಸ್ಯ ಚ ।
ಕಥಾಂ ಕಥಿತುಮಾರೇಭೇ ಸಾ ಗಾಂಧರ್ವೀ ಪ್ರಹರ್ಷಿತಾ ॥ ೮೪ ॥

॥ ಮಾಲಾವತ್ಯುವಾಚ ॥

ಯೋಗೇನ ಪ್ರಾಣಾಂಸ್ತತ್ಯಾಜ ಬ್ರಹ್ಮಣಃ ಶಾಪಹೇತುನಾ ।
ಸಭಾಯಾಂ ಲಜ್ಜಿತಃ ಕಾಂತೋ ಮಮ ವಿಪ್ರ ನಿಶಾಮಯ ॥ ೮೫ ॥

---

೮೨. ಒಳ್ಳೆಯ ಕುಶಲಿಗಳು ವಿರಚಿಸಿರುವ ಆ ವೈದ್ಯಗ್ರಂಥಗಳ ನಿಜತತ್ವವನ್ನು ಪೂರ್ಣವಾಗಿ ವಿವರಿಸಲು ಒಂದು ವರ್ಷವಾದರೂ ಸಾಧ್ಯವಾಗುವುದಿಲ್ಲ.

೮೩. ಇರಲಿ, ಎಲೌ ಮಂಗಳಾಂಗಿಯೇ! ನಿನ್ನ ಪತಿಯು ಯಾವ ರೋಗದಿಂದ ಮೃತನಾದನೆಂಬುದನ್ನು ನನಗೆ ಹೇಳಿದರೆ, ಅದಕ್ಕೆ ತಕ್ಕ ಔಷಧಿಮಾಡಿ ಅವನನ್ನು ಬದುಕಿಸಲು ಯತ್ನಿಸುವೆನು.

೮೪. ಸೌತಿ:—ಬ್ರಹ್ಮಚಾರಿಯ ಮಾತನ್ನು ಕೇಳಿ, ಗಂಧರ್ವರಾಜಪುತ್ರಿಯಾದ ಮಾಲಾವತಿಯು ಸಂತೋಷಗೊಂಡು, ತನ್ನ ಪತಿದೇವನು ಮರಣಹೊಂದಿದ ಕಥೆಯನ್ನು ಹೇಳಲು ಮೊದಲುಮಾಡಿದಳು.

೮೫. ಮಾಲಾವತೀ:—ನನ್ನ ಪತಿದೇವನು ಬ್ರಹ್ಮನ ಸಭೆಯಲ್ಲಿ ರಂಭೆಯನ್ನು ಮೋಹಿಸಿದ ತಪ್ಪಿಗಾಗಿ ಬ್ರಹ್ಮಶಾಪಕ್ಕೊಳಗಾಗಿ, ಲಜ್ಜಿತನಾಗಿ, ಯೋಗಶಕ್ತಿಯಿಂದ ತನ್ನ ಪ್ರಾಣಗಳನ್ನು ತ್ಯಜಿಸಿದನು.

ಸರ್ವಂ ಶ್ರುತಮಪೂರ್ವಂ ಚ ಶುಭಾಖ್ಯಾನಂ ಮನೋಹರಂ ।
ಭವೇದ್ಭವೇ ಕುತಃ ಕೇಷಾಂ ಮಹಲ್ಲಭ್ಯಂ ವಿಪದ್ವಿನಾ ॥ ೮೬ ॥

ಅಧುನಾ ಮತ್ಪ್ರಾಣಕಾಂತಂ ದೇಹಿ ದೇಹಿ ವಿಚಕ್ಷಣ ।
ನತ್ವಾ ವಃ ಸ್ವಾಮಿನಾಸಾರ್ಧಂ ಯಾಸ್ಯಾಮಿ ಸ್ವಗೃಹಂ ಪ್ರತಿ ॥ ೮೭ ॥

ಮಾಲಾವತೀವಚಃ ಶ್ರುತ್ವಾ ವಿಪ್ರರೂಪೀ ಜನಾರ್ದನಃ ।
ಸಭಾಂ ಜಗಾಮ ದೇವಾನಾಂ ಶೀಘ್ರಂ ವಿಪ್ರಸ್ತದಂತಿಕಾತ್ ॥ ೮೮ ॥

ಇತಿ ಶ್ರೀಬ್ರಹ್ಮವೈವರ್ತೇ ಮಹಾಪುರಾಣೇ ಸೌತಿಶೌನಕಸಂವಾದೇ ಬ್ರಹ್ಮ ಖಂಡೇ ಮಾಲಾವತೀ–ವಿಷ್ಣು ಸಂವಾದೇ ಚಿಕಿತ್ಸಾಪ್ರಣಯನೇ ಷೋಡಶೋಽಧ್ಯಾಯಃ

---

೮೬. ಅದು ಕಾರಣವಾಗಿ, ಬಹಳ ಅಪೂರ್ವವಾದ ಮತ್ತು ಮನೋಹರವಾದ ಎಷ್ಟೋ ವಿಷಯಗಳನ್ನು ನಿನ್ನಿಂದ ತಿಳಿದುದಾಯಿತು. ಸಂಸಾರದಲ್ಲಿ ಯಾರೊಬ್ಬರಿಗೂ ಕಷ್ಟ ಬಂದ ಹೊರತೂ ಮಹಾತ್ಮರ ದರ್ಶನವೂ, ಒಳ್ಳೆಯ ವಿಷಯಗಳ ತಿಳಿವಳಿಕೆಯೂ ದೊರೆಯುವುದಿಲ್ಲ.

೮೭. ಎಲೌ, ಕುಶಲಮತಿಯೇ! ಈಗ ನನ್ನ ಪ್ರಾಣಕಾಂತನನ್ನು ಬದುಕಿಸಿ ಕೊಟ್ಟರೆ ನಿಮಗೆಲ್ಲರಿಗೂ ವಂದಿಸಿ ನನ್ನ ಪತಿದೇವನೊಡನೆ ನನ್ನ ಮನೆಗೆ ಹಿಂತಿರುಗುತ್ತೇನೆ.

೮೮. ಮಾಲಾವತಿಯ ಮಾತನ್ನು ಕೇಳಿ ಬ್ರಾಹ್ಮಣರೂಪಿಯಾದ ಪರಮಾತ್ಮನು, ಆಕೆಯ ಹತ್ತಿರದಿಂದ ದೇವತೆಗಳಿದ್ದೆಡೆಗೆ ಸಮೀಪಿಸಿ ಬಂದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಬ್ರಹ್ಮಖಂಡದಲ್ಲಿ ಮಾಲಾವತೀ ಮತ್ತು ಬ್ರಹ್ಮಚಾರಿಯ ಸಂವಾದರೂಪವಾದ ವೈದ್ಯಶಾಸ್ತ್ರನಿರೂಪಣೆಯೆಂಬ ಹದಿನಾರನೆಯ ಅಧ್ಯಾಯವು ಮುಗಿದುದು.

ಹದಿನಾರನೆಯ ಅಧ್ಯಾಯದ ಸಾರಾಂಶವು

ಮಾಲಾವತಿಯು 'ಪ್ರಾಣಿಗಳಿಗೆ ರೋಗ ಬರಲು ಕಾರಣವನ್ನೂ ಅದರ ನಿವಾರಣೋಪಾಯಗಳನ್ನೂ ವಿಶದವಾಗಿ ಹೇಳಬೇಕೆಂ'ದು ಬ್ರಹ್ಮಚಾರಿಯನ್ನು ಬೇಡುವಳು. ಆಕೆಯ ಪ್ರಾರ್ಥನೆಯಂತೆ ಬ್ರಹ್ಮಚಾರಿಯು ವೈದ್ಯಶಾಸ್ತ್ರವನ್ನು ವಿವರಿಸುವನು. "ಸೃಷ್ಟಿಯ ಕಾಲದಲ್ಲಿ ಬ್ರಹ್ಮದೇವನು ಚತುರ್ವೇದಗಳನ್ನು ಸೃಜಿಸಿ, ಋಗ್ವೇದದ ಅಂಗವಾಗಿ ಆಯುರ್ವೇದವನ್ನು ರಚಿಸಿ, ಭಾಸ್ಕರನಿಗೆ ಕೊಟ್ಟನು. ಆಯುರ್ವೇದವನ್ನು ಮೂಲವಾಗಿಟ್ಟುಕೊಂಡು ಭಾಸ್ಕರನು ತಾನೊಂದು ಭಾಸ್ಕರಸಂಹಿತೆಯನ್ನು ರಚಿಸಿ, ತನ್ನ ಧನ್ವಂತರಿ ಮೊದಲಾದ ಹದಿನಾರುಜನ ಶಿಷ್ಯಂದಿರಿಗೆ ಉಪದೇಶಿಸಿದನು. ಆ ಶಿಷ್ಯರೊಬ್ಬೊಬ್ಬರೂ ಒಂದೊಂದು ಆಯುರ್ವೇದ ಗ್ರಂಥವನ್ನು ರಚಿಸಿದರು. ಇವೆಲ್ಲವನ್ನೂ ಓದುವುದರಿಂದ ರೋಗಕ್ಕೆ ಮೂಲಕಾರಣವೂ, ಅದರ ನಿವಾರಣೋಪಾಯವೂ ತಿಳಿಯುವುದು. ಈಗ ಸಂಗ್ರಹವಾಗಿ ಇಷ್ಟುಮಾತ್ರ ಹೇಳಬಲ್ಲೆನು. ಎಲ್ಲಾ ರೋಗಗಳಿಗೂ ಬಲಿಷ್ಠವಾದುದು ಜ್ವರವು. ಇದರ ಅಭಿಮಾನಿದೇವತೆಯು ಬಹಳ ಕ್ರೂರಿ. ಮನುಜನಿಗೆ ವಾತ, ಪಿತ್ತ, ಶ್ಲೇಷ್ಮಗಳು ಪ್ರಕೋಪಗೊಂಡು ಅಗ್ನಿಮಾಂದ್ಯವುಂಟಾದರೆ ಜ್ವರೋತ್ಪತ್ತಿಯಾಗುವುದು. ಆ ಜ್ವರದಲ್ಲಿ ವಾತಜ್ವರ, ಪಿತ್ತಜ್ವರ, ಶ್ಲೇಷ್ಮಜ್ವರ ಮತ್ತು ತ್ರಿದೋಷಜ್ವರವೆಂದು ನಾಲ್ಕು ವಿಧ. ರೋಗಗಳಲ್ಲಿ ಪಾಂಡು ಮೊದಲಾಗಿ ಅರವತ್ತುನಾಲ್ಕು ವಿಧಗಳಿವೆ. ಈ ರೋಗಗಳೆಲ್ಲವೂ ಮೃತ್ಯುಕನ್ಯೆಯ ಮಕ್ಕಳು. ಜರೆ(ಮುಪ್ಪು)ಯು ಮೃತ್ಯುಕನ್ಯೆಯ ಮಗಳು. ಸಾಮಾನ್ಯವಾಗಿ ಯಾರು ಇಂದ್ರಿಯನಿಗ್ರಹಿಗಳಾಗಿ ರೋಗನಿವಾರಣೋಪಾಯವನ್ನು ಅರಿತಿರುವರೋ ಅಂಥವರಿಗೆ ರೋಗಬರುವುದಿಲ್ಲ. ಷಡ್ಋತುವಿನಲ್ಲೂ ಕಾಲಾನುಗುಣವಾಗಿ ಅನುಸರಿಸಿಕೊಂಡಿರುವಾತನಿಗೆ ರೋಗ ಮುಪ್ಪುಗಳಿರುವುದಿಲ್ಲ. ಯಾರು ಸದಾಚಾರಶೀಲರಾಗಿ, ಪಾಪಕರ್ಮಗಳಿಗೆ ಎಡೆಕೊಡರೋ ಅಂಥವರಿಗೆ ಎಂದೆಂದಿಗೂ ರೋಗಮುಪ್ಪುಗಳಡಸುವುದಿಲ್ಲ. ಪಾಪಕರ್ಮವೇ ರೋಗಕ್ಕೆ ಮೂಲವು.

ಆದ್ದರಿಂದ ವಾತ, ಪಿತ್ತ ಮತ್ತು ಶ್ಲೇಷ್ಮಗಳ ಉತ್ಪತ್ತಿ ವಿನಾಶಕ್ರಮವನ್ನು ಅರಿತು ಎಚ್ಚರಿಕೆಯಿಂದ ವರ್ತಿಸುತ್ತಾ, ಸದಾಚಾರಶೀಲರಾಗಿದ್ದರೆ ಯಾರಿಗೂ ಯಾವ ರೋಗವೂ ಬರುವುದಿಲ್ಲ"ಎಂದು ಹೇಳಿ ಮಾಲಾವತಿಯ ಪತಿಯು ಯಾವ ರೋಗದಿಂದ ಮೃತನಾದನೆಂದು ಕೇಳುವನು. ಉಪಬರ್ಹಣನು ಬ್ರಹ್ಮಶಾಪಕ್ಕೊಳಗಾಗಿ ಯೋಗ ಶಕ್ತಿಯಿಂದ ಪ್ರಾಣವನ್ನು ತ್ಯಜಿಸಿದನೆಂದು ಮಾಲಾವತಿಯ ಮಾತಿನಿಂದ ತಿಳಿದು ಬ್ರಹ್ಮಚಾರಿಯು ದೇವತೆಗಳ ಸಮೀಪಕ್ಕೆ ಬರುವನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

|| ಸಪ್ತದಶೋಽಧ್ಯಾಯಃ ||

|| ಸೌತಿರುವಾಚ ||

ದೃಷ್ಟ್ವಾ ದ್ವಿಜಂ ದೇವಸಂಘಃ ಪ್ರತ್ಯುತ್ಥಾನಂ ಚಕಾರ ಚ |
ಪರಸ್ಪರಂ ಚ ಸಂಭಾಷಾ ಬಭೂವ ತತ್ರ ಸಂಸದಿ || ೧ ||

ಮಾ ತಂ ಬಬುಧಿರೇ ದೇವಾಃ ಶ್ರೀಹರಿಂ ವಿಪ್ರರೂಪಿಣಂ |
ಪೌರ್ವಾಪರ್ಯಂ ವಿಸ್ಮೃತಾಶ್ಚ ಮೋಹಿತಾ ವಿಷ್ಣುಮಾಯಯಾ || ೨ ||

ಹದಿನೇಳನೆಯ ಅಧ್ಯಾಯವು

೧. ಸೂತಪುತ್ರ :—ಬ್ರಹ್ಮಚಾರಿಯನ್ನು ಕಂಡು ದೇವತೆಗಳೆಲ್ಲರೂ ಎದುರುಗೊಂಡು ಗೌರವಿಸಿದರು. ಅನಂತರ ಆ ಸಭೆಯಲ್ಲಿ ದೇವತೆಗಳಿಗೂ, ಬ್ರಹ್ಮಚಾರಿಗೂ ಪರಸ್ಪರ ಮಾತುಕಥೆಗಾರಂಭವಾಯಿತು.

೨. ಬ್ರಾಹ್ಮಣರೂಪಿಯಾದ ಆತನೇ ಪರಮಾತ್ಮನೆಂಬುದು ದೇವತೆಗಳಿಗೆ ಅರ್ಥವಾಗಲಿಲ್ಲ. ಅವರೆಲ್ಲರೂ ವಿಷ್ಣುವಿನ ಮೋಹಕ್ಕೊಳಗಾಗಿ ಪೂರ್ವಾಪರ ಜ್ಞಾನವನ್ನು ಕಳೆದುಕೊಂಡರು.

ಸುರಾನ್ ಸಂಬೋಧ್ಯ ವಿಪ್ರಶ್ಚ ವಾಚಾ ಮಧುರಯಾ ದ್ವಿಜ ।
ಉವಾಚ ಸತ್ಯಂ ಪರಮಂ ಪ್ರಾಣಿನಾಂ ಯಚ್ಛುಭಾವಹಂ ॥ ೩ ॥

॥ ಬ್ರಾಹ್ಮಣ ಉವಾಚ ॥

ಉಪಬರ್ಹಣಭಾರ್ಯೇಯಂ ಕನ್ಯಾ ಚಿತ್ರರಥಸ್ಯ ಚ ।
ಯಯಾಚೇ ಜೀವದಾನಂ ಚ ಸ್ವಾಮಿನಃ ಶೋಕಕರ್ಷಿತಾ ॥ ೪ ॥

ಅಧುನಾ ಕಿಮನುಷ್ಠಾನಮಸ್ಯಕಾರ್ಯಸ್ಯ ನಿಶ್ಚಿತಂ ।
ತನ್ಮಾಂ ಬ್ರೂತ ಸುರಾಃ ಸರ್ವೇ ನಿತ್ಯಂ ಯತ್ಸಮಯೋಚಿತಂ ॥ ೫ ॥

ಶಪ್ತುಕಾಮಾ ಸುರಾನ್ ಸರ್ವಾನ್ ಸಾಧ್ವೀ ತೇಜಸ್ವಿನೀ ವರಾ ।
ಅಹಂ ಕ್ಷೇಮಾಯ ಯುಷ್ಮಾಕಮಾಗತೋ ಬೋಧಿತಾ ಸತೀ ॥ ೬ ॥

---

೩. ಆಗ ಬ್ರಹ್ಮಚಾರಿಯು ಮಧುರವಾದ ಮಾತುಗಳಿಂದಲೇ ದೇವತೆಗಳನ್ನು ಸಂಬೋಧಿಸಿ, ಪ್ರಾಣಿಗಳಿಗೆ ಶುಭಕರವೂ, ಪರಮಸತ್ಯವೂ ಆದ ಕೆಲವು ಮಾತುಗಳನ್ನಾಡಿದನು.

೪. ಬ್ರಾಹ್ಮಣ:—ಉಪಬರ್ಹಣನ ಧರ್ಮಪತ್ನಿಯೂ, ಚಿತ್ರರಥನ ಪ್ರಿಯ ಪುತ್ರಿಯೂ ಆದ ಮಾಲಾವತೀದೇವಿಯು, ಪತಿಯ ವಿರಹದಿಂದ ಬಹುದುಃಖಿತಳಾಗಿ ತನ್ನ ಪತಿಯ ಜೀವದಾನವನ್ನು ಬೇಡುತ್ತಿದ್ದಾಳೆ.

೫. ಈ ಸಂದಿಗ್ಧಸಮಯದಲ್ಲಿ ನಿಮ್ಮ ಅಭಿಪ್ರಾಯವೇನೆಂಬುದನ್ನು ಕಾಲಾನುಗುಣವಾಗಿ ಪರ್ಯಾಲೋಚಿಸಿ ನನಗೆ ನಿಶ್ಚಿತವಾದೊಂದು ಉತ್ತರವನ್ನು ಹೇಳಿರಿ.

೬. ಮಹಾಪತಿವ್ರತೆಯಾದ ಮಾಲಾವತೀದೇವಿಯು ದೇವತೆಗಳೆಲ್ಲರನ್ನೂ ತನ್ನ ಪಾತಿವ್ರತ್ಯದ ಬಲದಿಂದ ಶಪಿಸಲು ಸಿದ್ಧಳಾಗಿದ್ದಾಳೆ. ಅಷ್ಟರೊಳಗೆ ನಾನು ನಿಮ್ಮ ಭಾಗದ ದೇವರಂತೆ ಬಂದು ಆಕೆಗೆ ಬುದ್ಧಿವಾದವನ್ನು ಹೇಳಿ ಸಮಾಧಾನಗೊಳಿಸಿದ್ದೇನೆ.

ಸ್ತುತಿಃ ಕೃತಾ ಚ ಯುಷ್ಮಾಭಿಃ ಶ್ವೇತದ್ವೀಪೇ ಹರೇರಪಿ ।
ಯುಷ್ಮಾಕಮೀಶೋ ವಿಷ್ಣುಶ್ಚ ಕಥಮೇವಾತ್ರ ನಾಗತಃ ॥ ೭ ॥

ಬಭೂವಾಕಾಶವಾಣೀತಿ ಪಶ್ಚಾದ್ಯಾಸ್ಯತಿ ಕೇಶವಃ ।
ವಿಪರೀತಂ ಕಥಂ ಭೂತಂ ವಾಣೀವಾಕ್ಯಮಚಂಚಲಂ ॥ ೮ ॥

ಬ್ರಾಹ್ಮಣಸ್ಯ ವಚಃ ಶ್ರುತ್ವಾ ಸ್ವಯಂ ಬ್ರಹ್ಮಾ ಜಗದ್ಗುರುಃ ।
ಉವಾಚ ವಚನಂ ಸತ್ಯಂ ಹಿತಂ ಪರಮಮಂಗಲಂ ॥ ೯ ॥

॥ ಬ್ರಹ್ಮೋವಾಚ ॥

ಮತ್ಪುತ್ರೋ ನಾರದಃ ಶಪ್ತೋ ಗಂಧರ್ವಶ್ಚೋಪಬರ್ಹಣಃ ।
ಯೋಗೇನ ಪ್ರಾಣಾಂಸ್ತತ್ಯಾಜ ಪುನಃ ಶಾಪಾನ್ಮಮೈವ ಹಿ ॥ ೧೦ ॥

---

೭. ನೀವೆಲ್ಲರೂ ಶ್ವೇತದ್ವೀಪಕ್ಕೆ ಹೋಗಿ ಪರಮಾತ್ಮನನ್ನು ಪರಿಪರಿಯಾಗಿ ಸ್ತುತಿಸಿ ಬಂದಿರಿ. ಆದರೂ ನಿಮ್ಮ ಪ್ರಭುವಾದ ಕೃಷ್ಣಪರಮಾತ್ಮನು ಇಲ್ಲಿಗೆ ಬರದಿರಲು ಕಾರಣವೇನು ?

೮. 'ನೀವೆಲ್ಲರೂ ಹಿಂತಿರುಗಿ, ಹಿಂದಿನಿಂದ ಪರಮಾತ್ಮನು ಅಲ್ಲಿಗೆ ಬರುವನು' ಎಂದು ಅಶರೀರವಾಣಿಯಾಯಿತು. ಎಂದೆಂದಿಗೂ ಸುಳ್ಳಾಗದ ಅಶರೀರವಾಣಿಯೂ ಕೂಡ ಇಂದು ವ್ಯತ್ಯಾಸವಾಗಲು ಕಾರಣವೇನಿರಬಹುದು ?

೯. ಹೀಗೆ ಹೇಳಿದ ಬ್ರಾಹ್ಮಣನ ಮಾತನ್ನು ಕೇಳಿ ಜಗಮೊಡೆಯನಾದ ಚತುರ್ಮುಖಬ್ರಹ್ಮನು ಸತ್ಯವೂ, ಹಿತವೂ ಆದ ಕೆಲವು ಮಂಗಳವಚನಗಳನ್ನಾಡಿದನು.

೧೦. ಬ್ರಹ್ಮಾ:—ನನ್ನ ಮಗನಾದ ನಾರದನು ನನಗೆ ಅವಿಧೇಯನಾಗಿ ನನ್ನಿಂದ ಶಾಪಹೊಂದಿ, ಉಪಬರ್ಹಣನೆಂಬ ಗಂಧರ್ವನಾಗಿ ಜನಿಸಿದನು. ಪುನಃ ನನ್ನ ಸಭೆಯಲ್ಲಿ ಆತನು ಕಾಮಾತುರತೆಯನ್ನು ವ್ಯಕ್ತಪಡಿಸಿ ನನ್ನ ಶಾಪವನ್ನು ಹೊಂದಿ ಯೋಗಶಕ್ತಿಯಿಂದ ಪ್ರಾಣತ್ಯಾಗಮಾಡಿದನು.

ಕಾಲಂ ಲಕ್ಷಯುಗಂ ವ್ಯಾಪ್ಯ ಸ್ಥಿತಿರಸ್ಯ ಮಹೀತಲೇ ।
ಶೂದ್ರಯೋನಿಂ ತತಃ ಪ್ರಾಪ್ಯ ಭವಿತಾ ಮತ್ಸುತಃ ಪುನಃ ॥ ೧೧ ॥

ಅಸ್ಯ ಕಾಲಾವಶೇಷಸ್ಯ ಕಿಂಚಿದಸ್ತಿ ದ್ವಿಜೋತ್ತಮ ।
ತತ್ತು ವರ್ಷಸಹಸ್ರಂ ಚೈವಾಯುರಸ್ಯಾಸ್ತಿ ಸಾಂಪ್ರತಂ ॥ ೧೨ ॥

ದಾಸ್ಯಾಮಿ ಜೀವದಾನಂ ಚ ಸ್ವಯಂ ವಿಷ್ಣೋಃ ಪ್ರಸಾದತಃ ।
ಯಥೈನಂ ನ ಸ್ಪೃಶೇಚ್ಛಾಪಸ್ತತ್ಕರಿಷ್ಯಾಮಿ ನಿಶ್ಚಿತಂ ॥ ೧೩ ॥

ನಾಗತೋ ಹರಿರತ್ರೇತಿ ತ್ವಯಾ ಯತ್ಕಥಿತಂ ದ್ವಿಜ ।
ಹರಿಃ ಸರ್ವತ್ರ ಸರ್ವಾತ್ಮಾ ವಿಗ್ರಹಃ ಕುತ ಆತ್ಮನಃ ॥ ೧೪ ॥

ಸ್ವೇಚ್ಛಾಮಯಃ ಪರಂ ಬ್ರಹ್ಮ ಭಕ್ತಾನುಗ್ರಹವಿಗ್ರಹಃ ।
ಸರ್ವಂ ಪಶ್ಯತಿ ಸರ್ವಜ್ಞಃ ಸರ್ವತ್ರಾಸ್ತಿ ಸನಾತನಃ ॥ ೧೫ ॥

---

೧೧. ಅವನು ಲಕ್ಷಯುಗಗಳ ಕಾಲ ಭೂಮಿಯಲ್ಲಿ ಗಂಧರ್ವನಾಗಿ ಬಾಳಿ, ಅನಂತರ ಶೂದ್ರಯೋನಿಯಲ್ಲಿ ಹುಟ್ಟಿ, ಶಾಪವಿಮುಕ್ತನಾಗಿ ಪುನಃ ನನ್ನ ಮಗನಾಗಿಯೇ ಹುಟ್ಟುವನು.

೧೨. ಆ ನಿಯಮಿತ ಕಾಲದಂತೆ ಗಂಧರ್ವನಾದ ಇವನ ಜೀವಿತಕಾಲವು ಇನ್ನೂ ಸ್ವಲ್ಪ ಉಳಿದಿದೆ. ಅಂದರೆ ಒಂದು ಸಹಸ್ರವರ್ಷ ಆಯಸ್ಸು ಅವನಿಗಿನ್ನೂ ಇದೆ.

೧೩. ವಿಷ್ಣುವಿನ ಅನುಗ್ರಹದಿಂದ ನಾನು ಅವನಿಗೆ ಜೀವದಾನ ಮಾಡಿ, ನಾನು ಕೊಟ್ಟ ಶಾಪವು ಅವನಿಗೆ ತಗುಲದಂತೆ ಮಾಡಬಲ್ಲೆನು.

೧೪. ಅದಿರಲಿ. ಎಲೈ, ಬ್ರಾಹ್ಮಣಬಾಲಕನೆ! 'ಪರಮಾತ್ಮನು ಇಲ್ಲಿಗೆ ಬರಲಿಲ್ಲವಲ್ಲ' ಎಂದು ನೀನು ಕೇಳಿದೆಯಲ್ಲವೆ? ಅಯ್ಯೋ? ನಿನ್ನ ಮೂಢಬುದ್ಧಿಗೇನು ಹೇಳೋಣ? ಪರಮಾತ್ಮನು ಸರ್ವವ್ಯಾಪಿಯಲ್ಲವೆ? ಅವನಿಲ್ಲದಿರುವ ಸ್ಥಳವಾವುದು! ಅವನು ನಿರಾಕಾರನಾದುದರಿಂದ ನಿನ್ನಂಥವರ ಕಣ್ಣಿಗೆ ಕಾಣುವುದಿಲ್ಲ.

೧೫. ಪರಬ್ರಹ್ಮನು ತನ್ನ ಇಚ್ಛೆಬಂದಂತೆ ಇರಬಲ್ಲನು. ಭಕ್ತರ ಅನುಗ್ರಹಕ್ಕಾಗಿ ದಿವ್ಯಸುಂದರ ವಿಗ್ರಹವನ್ನು ಧರಿಸುವನು. ಆದರೆ ಅವನು ಮಾತ್ರ ನಿರಾಕಾರನು. ಎಲ್ಲೆಲ್ಲೂ ಇದ್ದುಕೊಂಡು ಎಲ್ಲವನ್ನೂ ನೋಡುವನು. ಮತ್ತು ಭೂತಭವಿಷ್ಯದ್ವರ್ತಮಾನಗಳನ್ನು ಬಲ್ಲ ಮಹಾಮಹಿಮನವನು.

ವಿಷಿಶ್ಚ ವ್ಯಾಪ್ತಿವಚನೋ ನುಶ್ಚ ಸರ್ವತ್ರ ವಾಚಕಃ ।
ಸರ್ವವ್ಯಾಪೀ ಚ ಸರ್ವಾತ್ಮಾ ತೇನ ವಿಷ್ಣುಃ ಪ್ರಕೀರ್ತಿತಃ ॥ ೧೬ ॥

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ ।
ಯಃ ಸ್ಮರೇತ್ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ ॥ ೧೭ ॥

ಕರ್ಮಾರಂಭೇ ಚ ಮಧ್ಯೇ ವಾ ಶೇಷೇ ವಿಷ್ಣುಂ ಚ ಯಃ ಸ್ಮರೇತ್ ।
ಪರಿಪೂರ್ಣಂ ತಸ್ಯ ಕರ್ಮ ವೈದಿಕಂ ಚ ಭವೇದ್ದ್ವಿಜ ॥ ೧೮ ॥

ಅಹಂ ಸ್ರಷ್ಟಾ ಚ ಜಗತಾಂ ವಿಧಾತಾ ಸಂಹರೋ ಹರಃ ।
ಧರ್ಮಶ್ಚ ಕರ್ಮಣಾಂ ಸಾಕ್ಷೀ ಯಸ್ಯಾಜ್ಞಾಪರಿಪಾಲಕಾಃ ॥ ೧೯ ॥

---

೧೬. 'ವಿಷ್ಣು' ಎಂಬ ಪದದಲ್ಲಿ 'ವಿಷ್' ಎಂದೂ 'ನು' ಎಂದೂ ಎರಡಕ್ಷರವಿರುವುದು. ಇದರಲ್ಲಿ 'ವಿಷ್, ಎಂದರೆ ವ್ಯಾಪಿಸಿರುವನೆಂದೂ, 'ನು' ಎಂದರೆ ಎಲ್ಲ ಸ್ಥಳಗಳಲ್ಲಿಂದೂ ಅರ್ಥವಾಗುವುದರಿಂದ 'ವಿಷ್ಣು' ಎಂದರೆ ಸರ್ವವ್ಯಾಪಿಯೂ, ಸರ್ವಾತ್ಮನೂ ಎಂದು ಅರ್ಥ ಸ್ಪಷ್ಟವಾಗುವುದು. ಆದ್ದರಿಂದಲೇ ಪರಮಾತ್ಮನನ್ನು ವಿಷ್ಣುವೆನ್ನುವರು.

೧೭. ಮನುಜನು ಶುದ್ಧನಾಗಿರಲೀ, ಅಶುದ್ಧನಾಗಿರಲೀ 'ಜಾಗ್ರತ್, ಸ್ವಪ್ನ, ಸುಷುಪ್ತಿ' ಎಂಬ ಮೂರರಲ್ಲಿ ಯಾವ ಅವಸ್ಥೆಯನ್ನಾದರೂ ಹೊಂದಿರಲೀ, ಪುಂಡರೀಕಾಕ್ಷ(ತಾವರೆ ಹೂವಿನಂತೆ ವಿಸ್ತಾರವಾದ ಕಣ್ಣುಳ್ಳವನು)ನಾದ ಪರಮಾತ್ಮನನ್ನು ಭಜಿಸಿದ ಮಾತ್ರದಿಂದಲೇ ದೇಹದ ಒಳಗೂ, ಹೊರಗೂ ಶುದ್ಧನಾಗುವನು.

೧೮. ಎಲೈ, ಬ್ರಾಹ್ಮಣನೇ! ಯಾವ ಕರ್ಮದ ಪ್ರಾರಂಭದಲ್ಲಾಗಲೀ, ಮಧ್ಯದಲ್ಲಾಗಲೀ, ಅಥವಾ ಕೊನೆಯಲ್ಲಾಗಲೀ, ವಿಷ್ಣುಸ್ಮರಣೆಮಾಡಿದರೂ, ಆ ಕರ್ಮವು ಪೂರ್ಣವಾಗಿ ಶಾಸ್ತ್ರೀಯವೆನಿಸಿಕೊಳ್ಳುವುದು.

೧೯. ಜಗತ್ಸೃಷ್ಟಿಕರ್ತನಾದ ನಾನೂ, ಜಗತ್ಸಂಹಾರಕನಾದ ಈಶ್ವರನೂ. ಕರ್ಮಸಾಕ್ಷಿಯಾದ ಧರ್ಮಪುರುಷನೂ ಆ ಪರಮಾತ್ಮನ ಅಪ್ಪಣೆಯನ್ನು ಎಳ್ಳಷ್ಟು ಮೀರಿ ನಡೆಯುವಂತಿಲ್ಲ.

ಕಾಲಃ ಸಂಹರತೇ ಲೋಕಾನ್ಯಮಃ ಶಾಸ್ತಾ ಚ ಪಾಪಿನಾಂ ।
ಉಪೈತಿ ಮೃತ್ಯುಃ ಸರ್ವಾಂಶ್ಚ ಭಿಯಾ ಯಸ್ಯಾಜ್ಞಯಾ ಸದಾ ॥ ೨೦ ॥

ಸರ್ವೇಶಾ ಯಾ ಚ ಸರ್ವಾದ್ಯಾ ಪ್ರಕೃತಿಃ ಸರ್ವಸೂಃ ಪುರಾ ।
ಸಾ ಭೀತಾ ಯಸ್ಯ ಪುರತೋ ಯಸ್ಯಾಜ್ಞಾ ಪರಿಪಾಲಿಕಾ ॥ ೨೧ ॥

॥ ಮಹೇಶ್ವರ ಉವಾಚ ॥

ಪುತ್ರಾಣಾಂ ಬ್ರಹ್ಮಣಸ್ತೇಷಾಂ ಕಸ್ಯ ವಂಶೋದ್ಭವೋ ಭವಾನ್ ।
ವೇದಾನಧೀತ್ಯ ಭವತಾ ಜ್ಞಾತಃ ಕಃ ಸಾರ ಏವ ಚ ॥ ೨೨ ॥

---

೨೦. ಆ ಪರಮಾತ್ಮನ ಅಜ್ಞೆಯನ್ನು ಮೀರಲಾಗದ ಭಯದಿಂದಲೇ ಕಾಲ ಪುರುಷನು ಜನರನ್ನು ಸಂಹರಿಸುತ್ತಿರುವುದು. ಪಾಪಿಗಳನ್ನು ಯಮನು ಶಿಕ್ಷಿಸುವುದಕ್ಕೂ, ಮೃತ್ಯುದೇವತೆಯು ಎಲ್ಲರನ್ನೂ ಸೆಳೆಸೊಯ್ಯುವುದಕ್ಕೂ ಪರಮಾತ್ಮನ ಭಯವೇ ಕಾರಣವು.

೨೧. ದೇವತೆಗಳಿಗೆಲ್ಲಾ ಒಡತಿಯೂ, ಜಗದುತ್ಪತ್ತಿಗೆ ಕಾರಣಳೂ, ಎಲ್ಲರಿಗೂ ಹಿರಿಯವಳೂ ಆದ ಪ್ರಕೃತಿದೇವಿಯೂ ಕೂಡ ಪರಮಾತ್ಮನ ಅಪ್ಪಣೆಯನ್ನು ಮೀರಿ ನಡೆಯಲಾರಳು.

೨೨. ಮಹೇಶ್ವರ:—ಎಲೈ, ಬ್ರಹ್ಮಚಾರಿಯೇ! ಬ್ರಹ್ಮನ ಅನೇಕ ಮಂದಿ ಪುತ್ರರಲ್ಲಿ ನೀನು ಯಾರ ವಂಶಜನಾಗಿರುವೆ? ಚತುರ್ವೇದಗಳನ್ನೂ ಅಧ್ಯಯನ ಮಾಡಿ ನೀನು ತಿಳಿದಿರುವ ತತ್ವಾಂಶವೇನು? ("ಷಟ್ಪದಃ ಪುಷ್ಪಮಧ್ಯಸ್ಥಃ ಯಥಾ ಸಾರಂ ಸಮುದ್ಧರೇತ್ । ತಥಾ ಸರ್ವೇಷು ಶಾಸ್ತ್ರೇಷು ಸಾರಂ ಗೃಹ್ಣಂತಿ ಪಂಡಿತಾಃ" ಅಂದರೆ ದುಂಬಿಯು ಹೂವಿನ ಮಧ್ಯದಲ್ಲಿರುವ ಮಕರಂದವನ್ನು ಮಾತ್ರ ಸೇವಿಸುವಂತೆ ಪಂಡಿತರು ಎಲ್ಲಾ ಶಾಸ್ತ್ರಗಳ ಸಾರವನ್ನು ಮಾತ್ರ ಅರಿತು ಅದರಂತೆ ನಡೆಯುವರಲ್ಲವೇ?)

ಶಿಷ್ಯಃ ಕಸ್ಯ ಮುನೀಂದ್ರಸ್ಯ ಕಸ್ತ್ವಂ ನಾಮ್ನಾ ಚ ಭೋ ದ್ವಿಜ ।
ಬಿಭರ್ತ್ಯರ್ಕಾತಿರಿಕ್ತಂ ಚ ಶಿಶುರೂಪೋಽಸಿ ಸಾಂಪ್ರತಂ ॥ ೨೩ ॥

ವಿಡಂಬಯಸಿ ದೇವಾಂಶ್ಚ ವಿಷ್ಣುಮಸ್ಮಾಕಮೀಶ್ವರಂ ।
ಹೃದಿಸ್ಥಂ ಚ ನ ಜಾನಾಸಿ ಪರಮಾತ್ಮಾನಮೀಶ್ವರಂ ॥ ೨೪ ॥

ಯಸ್ಮಿನ್ಗತೇ ಪತೇದ್ದೇಹೋ ದೇಹಿನಾಂ ಪರಮಾತ್ಮನಿ ।
ಪ್ರಯಾಂತಿ ಸರ್ವೇ ತತ್ಪಶ್ಚಾನ್ನರದೇವಾನುಗಾ ಇವ ॥ ೨೫ ॥

ಜೀವಸ್ತತ್ಪ್ರತಿಬಿಂಬಶ್ಚ ಮನೋ ಜ್ಞಾನಂ ಚ ಚೇತನಾ ।
ಪ್ರಾಣಾಶ್ಚೇಂದ್ರಿಯವರ್ಗಾಶ್ಚ ಬುದ್ಧಿರ್ಮೇಧಾ ಧೃತಿಃ ಸ್ಮೃತಿಃ ॥ ೨೬ ॥

---

೨೩. ನೀನು ಯಾವ ಮಹರ್ಷಿಯ ಶಿಷ್ಯನು ? ನಿನ್ನ ಹೆಸರೇನು ? ಸೂರ್ಯನಿಗಿಂತಲೂ ನಿನ್ನ ತೇಜಸ್ಸು ಮಿಗಿಲಾಗಿದೆ–ಆದರೆ ನೀನು ಈಗ ಬಾಲಕವೇಷಧಾರಿಯಾಗಿರುವೆ !

೨೪. ದೇವತೆಗಳನ್ನೂ, ನಮಗೆ ಒಡೆಯನಾದ ವಿಷ್ಣುವನ್ನೂ ನೀನು ಅಲ್ಲಗಳೆಯುವೆ ! ಆದರೆ ನಿನ್ನ ಹೃದಯಾಂತರಾಳದಲ್ಲಿರುವ ಪರಮಾತ್ಮನನ್ನೇ ನೀನರಿಯೆಯಲ್ಲಾ ? ಇದೇನಾಶ್ಚರ್ಯವು ?

೨೫. ಆತ್ಮನೊಬ್ಬನು ಶರೀರದಿಂದ ಹೊರಹೊರಟರೆ, ಪ್ರಾಣಿಗಳ ದೇಹವೆಲ್ಲವೂ ಶುಷ್ಕವೃಕ್ಷದಂತೆ ಅಗ್ನಿಗೆ ಆಹುತಿಯಾಗುವುದು. ಪ್ರಯಾಣ ಹೊರಟ ರಾಜನ ಹಿಂದೆ ಪರಿವಾರದವರು ಹೊರಡುವಂತೆ, ಪ್ರಾಣಗಳೆಲ್ಲವೂ ಪರಮಾತ್ಮನ ಹಿಂದೆಯೇ ಹೊರಡುವುವು.

೨೬–೨೮. ಪರಮಾತ್ಮನ ಪ್ರತಿಬಿಂಬವಾದ ಜೀವನೂ, ಮನಸ್ಸು, ಜ್ಞಾನ ಮತ್ತು ಚೇತನಾಶಕ್ತಿಯೂ, ಪಂಚಪ್ರಾಣಗಳೂ ಮತ್ತು ಪಂಚೇಂದ್ರಿಯಗಳೂ, ಬುದ್ಧಿಶಕ್ತಿಯೂ, ಧಾರಣಾಶಕ್ತಿಯೂ, ಧೈರ್ಯ ಮತ್ತು ಸ್ಮರಣಶಕ್ತಿಗಳೂ, ಪರಮಾತ್ಮನ ಅನುಯಾಯಿಗಳು. ಅಂತೆಯೇ ನಿದ್ರೆ, ದಯೆ, ಆಲಸ್ಯ, ಹಸಿವು, ಬಾಯಾರಿಕೆ,

ನಿದ್ರಾ ದಯಾ ಚ ತಂದ್ರಾ ಚ ಕ್ಷುತ್ತೃಷ್ಣಾ ಪುಷ್ಟಿರೇವ ಚ ।
ಶ್ರದ್ಧಾ ಸಂತುಷ್ಟಿರಿಚ್ಛಾ ಚ ಕ್ಷಮಾ ಲಜ್ಜಾದಿಕಾಃ ಸ್ಮೃತಾಃ　　॥ ೨೭ ॥

ಪ್ರಯಾತಿ ಯತ್ಪರಃ ಶಕ್ತಿರೀಶ್ವರೇ ಗಮನೋನ್ಮುಖೇ ।
ಏತೇ ಸರ್ವೇ ಚ ಶಕ್ತಿಶ್ಚ ಯಸ್ಯಾಜ್ಞಾಪರಿಪಾಲಕಾಃ　　॥ ೨೮ ॥

ಈಶ್ವರೇ ಚ ಸ್ಥಿತೇ ದೇಹೀ ಕ್ಷಮಶ್ಚ ಸರ್ವಕರ್ಮಸು ।
ಗತೇಽಸ್ಪೃಶ್ಯಃ ಶವಸ್ತ್ಯಾಜ್ಯಃ ಕಸ್ತಂ ದೇಹೀ ನ ಮನ್ಯತೇ　　॥ ೨೯ ॥

ಸ್ವಯಂ ಬ್ರಹ್ಮಾ ಚ ಜಗತಾಂ ವಿಧಾತಾ ಸರ್ವಕಾರಕಃ ।
ಪಾದಾರವಿಂದಮನಿಶಂ ಧ್ಯಾಯತೇ ದ್ರಷ್ಟುಮಕ್ಷಮಃ　　॥ ೩೦ ॥

ಯುಗಲಕ್ಷಂ ತಪಸ್ತಪ್ತಂ ಶ್ರೀಕೃಷ್ಣಸ್ಯ ಚ ವೇಧಸಾ ।
ತದಾ ಬಭೂವ ಜ್ಞಾನೀ ಚ ಜಗತ್ಸ್ರಷ್ಟುಂ ಕ್ಷಮಸ್ತದಾ　　॥ ೩೧ ॥

ಪುಷ್ಟಿ, ಶ್ರದ್ಧಾ ಮತ್ತು ಸಂತುಷ್ಟಿ, ಇಚ್ಛಾ, ಕ್ಷಮಾ, ಲಜ್ಜಾ ಮೊದಲಾದ ಎಲ್ಲ ಶಕ್ತಿಗಳೂ ಪರಮಾತ್ಮನನ್ನು ಅನುಸರಿಸುವುವು. ಪ್ರಧಾನಶಕ್ತಿಯಾದ ಪ್ರಕೃತಿಯು ಈಶ್ವರನ ಹಿಂದೆ ಹೊರಟರೆ, ಅಧೀನ ಶಕ್ತಿಗಳಾದ ಇವೆಲ್ಲವೂ ಅವಳನ್ನು ಹಿಂಬಾಲಿಸುವುದು ಆಶ್ಚರ್ಯವೇ ?

೨೯. ದೇಹದೊಳಗೆ ಈಶ್ವರನೊಬ್ಬನಿದ್ದರೆ ದೇಹಿಯು ಎಲ್ಲ ಕೆಲಸವನ್ನೂ ಮಾಡಲು ಶಕ್ತನಾಗುವನು. ಈಶ್ವರನು ದೇಹವನ್ನು ಬಿಟ್ಟು ಹೊರಟರೆ, ಆ ದೇಹವು ಶವವೆನಿಸಿಕೊಳ್ಳುವುದು. ಯಾರೂ ಅದನ್ನು ಮುಟ್ಟರು. ಆಪ್ತರೆಲ್ಲರೂ ಆ ದೇಹವನ್ನು ಬಿಟ್ಟು ದೂರಹೋಗುವರು. ಹೀಗಿರುವಾಗ ದೇಹಿಯು ಪರಮಾತ್ಮನನ್ನು ತಿಳಿಯದಿರುವುದುಚಿತವೇ ?

೩೦. ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಪ್ರಪಂಚವನ್ನೆಲ್ಲ ತನ್ನ ಇಚ್ಛೆಯಂತೆ ಪರಿವರ್ತಿಸಬಲ್ಲವನಾದರೂ, ಆ ಪರಮಾತ್ಮನನ್ನು ಕಾಣಲಾಗದೆ, ಯಾವಾಗಲೂ, ಅವನ ಪಾದಾರವಿಂದಗಳನ್ನು ನೆನೆಯುತ್ತಿರುವನು.

೩೧. ಚತುರ್ಮುಖಬ್ರಹ್ಮನು ಶ್ರೀಕೃಷ್ಣನನ್ನು ಕುರಿತು ಒಂದುಲಕ್ಷ ಯುಗಗಳ ಕಾಲ ಭಕ್ತಿಯಿಂದ ತಪಸ್ಸುಮಾಡಿ, ದಿವ್ಯಜ್ಞಾನವನ್ನು ಪಡೆದು, ಅನಂತರ ಜಗತ್ಸೃಷ್ಟಿ ಮಾಡಲು ಶಕ್ತನಾದನು.

ಅಸಂಖ್ಯಕಾಲಂ ಸುಚಿರಂ ತಪಸ್ತಪ್ತಂ ಹರೇರ್ಮಯಾ ।
ತೃಪ್ತಿಂ ಜಗಾಮ ನ ಮನಸ್ತೃಪ್ಯತೇ ಕೇನ ಮಂಗಲೇ ॥ ೩೨ ॥

ಅಧುನಾ ಪಂಚವಕ್ತ್ರೇಣ ಯನ್ನಾಮಗುಣಕೀರ್ತನಂ ।
ಗಾಯನ್ ಭ್ರಮಾಮಿ ಸರ್ವತ್ರ ನಿಸ್ಪೃಹಃ ಸರ್ವಕರ್ಮಸು ॥ ೩೩ ॥

ಮತ್ತೋ ಯಾತಿ ಚ ಮೃತ್ಯುಶ್ಚ ಯನ್ನಾಮಗುಣಕೀರ್ತನಾತ್ ।
ಶಶ್ವಜ್ಜಪಂತಂ ತನ್ನಾಮ ದೃಷ್ಟ್ವಾ ಮೃತ್ಯುಃ ಪಲಾಯತೇ ॥ ೩೪ ॥

ಸರ್ವಬ್ರಹ್ಮಾಂಡಸಂಹರ್ತಾsಪ್ಯಹಂ ಮೃತ್ಯುಂಜಯೋಭಿಧಃ ।
ಸುಚಿರಂ ತಪಸಾ ಯಸ್ಯ ಗುಣನಾಮಾನುಕೀರ್ತನಾತ್ ॥ ೩೫ ॥

---

೩೨. ನಾನೂ ಕೂಡ ಪರಮಾತ್ಮನನ್ನು ಕುರಿತು ಲೆಕ್ಕವಿಲ್ಲದಷ್ಟು ಕಾಲ ತಪಸ್ಸುಮಾಡಿದೆನು. ನನ್ನ ಮನಸ್ಸಿಗೆ ತೃಪ್ತಿಯೇ ಆಗಲಿಲ್ಲ. ಮಂಗಳಕಾರ್ಯದಲ್ಲಿ ಯಾರಿಗೆ ತಾನೇ ತೃಪ್ತಿಯಾಗುವುದು ?

೩೩. ಈಗ ಆ ಪರಮಾತ್ಮನ ದಿವ್ಯನಾಮಗಳನ್ನೂ, ಸದ್ಗುಣಗಳನ್ನೂ, ಹಗಲೂ ರಾತ್ರಿ ನನ್ನ ಐದು ಬಾಯಿಗಳಿಂದಲೂ ಹಾಡುತ್ತಾ ಯಾವಾಗಲೂ ಅವನಲ್ಲೇ ಆಸಕ್ತನಾಗಿದ್ದೇನೆ. ನನಗೆ ಮತ್ತೆ ಯಾವ ಕೆಲಸಗಳಲ್ಲೂ ಆಸಕ್ತಿಯೇ ಇಲ್ಲ.

೩೪. ಆ ಪರಮಾತ್ಮನ ದಿವ್ಯನಾಮವನ್ನು ನಾನು ಯಾವಾಗಲೂ ಜಪಿಸುತ್ತಿರುವುದರಿಂದ ಮೃತ್ಯುದೇವತೆಯು ನನ್ನಿಂದ ದೂರವಾಗಿರುವಳು. ಯಾರು ಪರಮಾತ್ಮನ ದಿವ್ಯನಾಮವನ್ನು ಯಾವಾಗಲೂ ಧ್ಯಾನಿಸುತ್ತಿರುವರೋ ಅವರ ಹತ್ತಿರಕ್ಕೂ ಕೂಡ ಮೃತ್ಯುದೇವತೆಯು ಸುಳಿಯುವುದಿಲ್ಲ.

೩೫. ನಾನು ಮೃತ್ಯುದೇವತೆಯನ್ನು ವಶಪಡಿಸಿಕೊಂಡು ಪ್ರಪಂಚವನ್ನೆಲ್ಲಾ ಸಂಹರಿಸಲು ಶಕ್ತನಾಗಿರುವುದರಿಂದ 'ಹಾವಾಡಿಗನಿಗೆ ಹಾವಿನಿಂದಲೇ ಮರಣ' ವೆಂಬಂತೆ ನನಗೆ ಮಾತ್ರ ಮೃತ್ಯುವಿನಿಂದ ಮರಣವಿಲ್ಲ. ಆದುದರಿಂದಲೇ ನಾನು ಮೃತ್ಯುಂಜಯನು. ಬಹುಕಾಲ ತಪಸ್ಸುಮಾಡಿ ಆ ಪರಮಾತ್ಮನ ಗುಣರೂಪಗಳನ್ನು ಕೀರ್ತಿಸಿದುದರ ಸತ್ಫಲವೇ ಇದು.

ಕಾಲೇ ತತ್ರ ವಿಲೀನೋಽಹಮಾವಿರ್ಭೂತಸ್ತತಃ ಪುನಃ ।
ನ ಕಾಲೋ ಮಮ ಸಂಹರ್ತಾ ನ ಮೃತ್ಯುರ್ಯತ್ಪ್ರಸಾದತಃ ॥ ೩೬ ॥

ಗೋಲೋಕೇ ಯಃ ಸ ವೈಕುಂಠೇ ಶ್ವೇತದ್ವೀಪೇ ಸ ಏವ ಚ ।
ಅಂಶಾಂಶಿನೋರ್ನಭೇದಶ್ಚ ಬ್ರಹ್ಮನ್ ವಹ್ನಿಸ್ಫುಲಿಂಗವತ್ ॥ ೩೭ ॥

ಮನ್ವಂತರಂ ತು ದಿವ್ಯಾನಾಂ ಯುಗಾನಾಮೇಕಸಪ್ತತಿಃ ।
ಅಷ್ಟಾವಿಂಶತಿಮೇ ಶಕ್ರೇ ಗತೇ ಚ ಬ್ರಹ್ಮಣೋ ದಿನಂ ॥ ೩೮ ॥

ಏತತ್ಸಂಖ್ಯಾವಿಶಿಷ್ಟಸ್ಯ ಶತವರ್ಷಾಯುಷೋ ವಿಧೇಃ ।
ಪಾತೇ ಲೋಚನಪಾತಶ್ಚ ಯದ್ವಿಷ್ಣೋಃ ಪರಮಾತ್ಮನಃ ॥ ೩೯ ॥

---

೩೬. ನಾನು ಪ್ರಲಯಕಾಲದಲ್ಲಿ ಆ ಪರಮಾತ್ಮನಲ್ಲೇ ಐಕ್ಯವಾಗಿದ್ದು, ಸೃಷ್ಟಿಯಲ್ಲಿ ಹೊರಕ್ಕೆ ಬರುವೆನು. ಪರಮಾತ್ಮನ ದಿವ್ಯಾನುಗ್ರಹದಿಂದ, ಕಾಲಪುರುಷನಿಗೂ, ಮೃತ್ಯುದೇವತೆಗೂ ನಾನು ಅಧೀನನಾಗುವುದಿಲ್ಲ.

೩೭. ಗೋಲೋಕದಲ್ಲಿರುವ ಪರಮಾತ್ಮನೇ ತನ್ನ ಅಂಶದಿಂದ ವೈಕುಂಠದಲ್ಲೂ ಶ್ವೇತದ್ವೀಪದಲ್ಲೂ ವ್ಯಾಪಿಸಿರುವನು. ಬೆಂಕಿಗೂ ಅದರ ಕಿಡಿಗೂ ಎಂತು ಭೇದವಿಲ್ಲವೋ ಅಂತೆಯೇ ಜಗದ್ವ್ಯಾಪಿಯಾದ ಪರಮಾತ್ಮನಿಗೂ, ಅವನ ಅಂಶಗಳಿಗೂ ಎಂದೂ ಭೇದವಿಲ್ಲವು.

೩೮. ಕೃತಾದಿಚತುರ್ಯುಗಗಳು ಎಪ್ಪತ್ತೊಂದು ಸಾರಿ ಮರಳಿದರೆ ಒಂದು ಮನ್ವಂತರವೆನಿಸಿಕೊಳ್ಳುವುದು. ಹದಿನಾಲ್ಕುಜನ ಮನುಗಳೂ, ಹದಿನಾಲ್ಕುಮಂದಿ ಇಂದ್ರರೂ ಬ್ರಹ್ಮನ ಒಂದು ಹಗಲಿನಲ್ಲಿ ರಾಜ್ಯಭಾರಮಾಡಿ ಮುಗಿಯುವರು.

೩೯. ಇಂಥ ಹಗಲುರಾತ್ರಿಗಳ ಲೆಕ್ಕದಂತೆ ಮುನ್ನೂರ ಅರವತ್ತೈದು ದಿವಸಗಳ ನೂರುವರ್ಷಗಳು ಕಳೆದರೆ ಬ್ರಹ್ಮನ ಆಯುಸ್ಸು ಮುಗಿಯುವುದು. ಈ ರೀತಿಯಾದ ಬ್ರಹ್ಮನ ಆಯುಃಕಾಲವು ವಿಷ್ಣುಪರಮಾತ್ಮನ ರೆಪ್ಪೆಹೊಡೆಯುವ ಕಾಲಕ್ಕೆ ಸಮವೆನಿಸುವುದು.

ಅಹಂ ಕಲಾನಾಮೃಷಭಃ ಕೃಷ್ಣಸ್ಯ ಪರಮಾತ್ಮನಃ ।
ಪರಂ ಮಹಿಮ್ನಃ ಕೋ ಗಚ್ಛೇನ್ನ ಜಾನಾಮಿ ಚ ಕಿಂಚನ ॥ ೪೦ ॥

ಇತ್ಯುಕ್ತ್ವಾ ಶಂಕರಸ್ತತ್ರ ವಿರರಾಮ ಚ ಶೌನಕ ।
ಧರ್ಮಶ್ಚ ವಕ್ತುಮಾರೇಭೇ ಯಃ ಸಾಕ್ಷೀ ಸರ್ವಕರ್ಮಣಾಂ ॥ ॥ ೪೧ ॥

॥ ಧರ್ಮ ಉವಾಚ ॥

ಯತ್ಪಾಣಿಪಾದೌ ಸರ್ವತ್ರ ಚಕ್ಷುಶ್ಚ ಸರ್ವದರ್ಶನಂ ।
ಸರ್ವಾಂತರಾತ್ಮಾ ಪ್ರತ್ಯಕ್ಷೋಽಪ್ರತ್ಯಕ್ಷಶ್ಚ ದುರಾತ್ಮನಃ ॥ ೪೨ ॥

ಅಧುನಾಽಪಿ ಸಭಾಂ ವಿಷ್ಣುರ್ನಾಯಾತಿ ಇತಿ ಯದ್ವಚಃ ।
ತ್ವಯೋಕ್ತಂ ಕತ್ಕಯಾ ಬುದ್ಧ್ಯಾ ಮುನೀನಾಂ ಚ ಮತಿಭ್ರಮಃ ॥ ೪೩ ॥

---

೪೦. ನಾನಾದರೋ ಶ್ರೀಕೃಷ್ಣಪರಮಾತ್ಮನ ಸಾವಿರಾರು ಕಲೆಗಳಲ್ಲೊಬ್ಬನಾಗಿದ್ದೇನೆ. ಹೀಗಿರುವಾಗ ಅಪಾರಮಹಿಮನಾದ ಆ ಪರಮಾತ್ಮನ ಪಾರವನ್ನೆಂತು ತಿಳಿಯಲಿ ! ನನಗೇನೂ ಹೆಚ್ಚಿಗೆ ತಿಳಿಯದು.

೪೧. ಸೌತಿ :—ಎಲೈ. ಶೌನಕಮಹರ್ಷಿಯೇ ! ಮಹೇಶ್ವರನು ಹೀಗೆ ಹೇಳಿ ಸುಮ್ಮನಾದ ಮೇಲೆ ಸರ್ವಕರ್ಮಗಳಿಗೂ ಸಾಕ್ಷಿಭೂತನಾದ ಧರ್ಮದೇವನು ಮಾತನಾಡಲು ಮೊದಲುಮಾಡಿದನು.

೪೨. ಧರ್ಮ:—ಯಾವ ಪರಮಾತ್ಮನ ಕೈಕಾಲುಗಳು ಎಲ್ಲೆಲ್ಲೂ ವ್ಯಾಪಿಸುವ ಶೀಲವುಳ್ಳದ್ದೋ ಮತ್ತು ಯಾವಾತನ ಕಣ್ಣುಗಳು ಸರ್ವಕೃತ್ಯಗಳನ್ನೂ ನೋಡಬಲ್ಲದೋ ಅಂಥ ಸರ್ವಾಂತರ್ಯಾಮಿಯಾದ ಪರಮಾತ್ಮನು ಜ್ಞಾನಿಗಳಿಗೆ ಮಾತ್ರ ಕಾಣುವನು. ದುರಾತ್ಮರಿಗೆ ಕಾಣನು

೪೩. ' ಇನ್ನೂ ಕೃಷ್ಣಪರಮಾತ್ಮನು ನಿಮ್ಮ ಸಭೆಗೆ ಬರಲಿಲ್ಲವೇ ? ಎಂದು ಕೇಳಿದ ನೀನು ಮಂದಮತಿಯಲ್ಲವೇ ? ಅಥವಾ ಜ್ಞಾನಿಗಳಿಗೂ ಬುದ್ಧಿಭ್ರಮಣೆಯಾಗುವುದುಂಟೇನು ?

ಮಹನ್ನಿಂದಾ ಭವೇದ್ಯತ್ರ ನೈವಸಾಧುಃ ಶೃಣೋತಿ ತಾಂ ।
ನಿಂದಕಃ ಶ್ರೋತೃಭಿಃ ಸಾರ್ಧಂ ಕುಂಭೀಪಾಕಂ ವ್ರಜೇದ್ಯುಗಂ　　॥ ೪೪ ॥

ಶ್ರುತ್ವಾ ದೈವಾನ್ಮಹನ್ನಿಂದಾಂ ಶ್ರೀವಿಷ್ಣೋಃ ಸ್ಮರಣಾದ್ಬುಧಃ ।
ಮುಚ್ಯತೇ ಸರ್ವಪಾಪೇಭ್ಯಃ ಪುಣ್ಯಂ ಪ್ರಾಪ್ನೋತಿ ದುರ್ಲಭಂ　　॥ ೪೫ ॥

ಕಾಮತೋಽಕಾಮತೋ ವಾಪಿ ವಿಷ್ಣುನಿಂದಾಂ ಕರೋತಿ ಯಃ ।
ಯಃ ಶೃಣೋತಿ ಹಸತಿ ವಾ ಸಭಾಮಧ್ಯೇ ನರಾಧಮಃ　　॥ ೪೬ ॥

ಕುಂಭೀಪಾಕೇ ಪಚತಿ ಸ ಯಾವದ್ಧಿ ಬ್ರಹ್ಮಣೋ ವಯಃ ।
ಸ್ಥಲಂ ಭವೇದಪೂತಂ ಚ ಸುರಾಪಾತ್ರಂ ಯಥಾದ್ವಿಜ　　॥ ೪೭ ॥

ಪ್ರಾಣೀ ಚ ನರಕಂ ಯಾತಿ ಶ್ರುತಂ ತತ್ರೈವ ಚೇದ್ಧ್ರುವಂ ।
ವಿಷ್ಣುನಿಂದಾ ಚ ತ್ರಿವಿಧಾ ಬ್ರಹ್ಮಣಾ ಕಥಿತಾ ಪುರಾ　　॥ ೪೮ ॥

---

೪೪. ಮಹಾತ್ಮರನ್ನು ನಿಂದಿಸುವ ಸ್ಥಳದಲ್ಲಿ ಸತ್ಪುರುಷನು ಕುಳಿತು ಕೇಳುವುದಿಲ್ಲ. ಮಹಾತ್ಮರ ದೂಷಕರೂ, ದೂಷಣೆಯನ್ನು ಕೇಳುವವರೂ, ಯುಗಗಳ ಕಾಲ ಕುಂಭೀಪಾಕ ನರಕದಲ್ಲಿ ತೊಳಲುವರು.

೪೫. ಒಂದು ವೇಳೆ ಜ್ಞಾನಿಯು, ತನ್ನ ದುರದೃಷ್ಟದಿಂದ ಮಹಾತ್ಮರ ದೂಷಣೆಯನ್ನು ಕೇಳಿದರೆ, ಕೂಡಲೇ ವಿಷ್ಣುವನ್ನು ಸ್ಮರಿಸಿ ಆ ಪಾಪದಿಂದ ಮುಕ್ತನಾಗಬಹುದು. ಅಲ್ಲದೆ ಅವನಿಗೆ ವಿಷ್ಣುಸ್ಮರಣೆಯಿಂದ ಪುಣ್ಯವೂ ಲಭಿಸುವುದು.

೪೬–೪೭. ಯಾವ ಮನುಜನು ತನ್ನ ಇಚ್ಛೆಯಿಂದಾಗಲೀ, ಇಚ್ಛೆಇಲ್ಲದೆಯಾಗಲೀ, ಪರಮಾತ್ಮನನ್ನು ನಿಂದಿಸುವನೋ, ಯಾವಾತನು ಆ ನಿಂದೆಯನ್ನು ಕೇಳುವನೋ ಮತ್ತು ಪರಮಾತ್ಮನನ್ನು ಪರಿಹಾಸ್ಯಮಾಡುವನೋ, ಆ ಪಾಪಿಗಳು ಬ್ರಹ್ಮನ ಆಯುಃಪರಿಮಿತಿಯಷ್ಟು ಕಾಲ ಕುಂಭಿಪಾಕನರಕದಲ್ಲಿ ನರಳುತ್ತಾರೆ. ವಿಷ್ಣು ನಿಂದೆಯನ್ನು ಮಾಡಿದ ಸ್ಥಳವೂ ಕೂಡ ಮದ್ಯದ ಪಾತ್ರೆಯಂತೆ ಅಪವಿತ್ರವಾಗುವುದು.

೪೮–೪೯. ವಿಷ್ಣುನಿಂದೆ ಮಾಡಿದ ಸ್ಥಳದಲ್ಲೇ ಆ ನಿಂದೆಯನ್ನು ಕೇಳಿದ ಪ್ರಾಣಿಯೂ ಕೂಡ ಖಂಡಿತವಾಗಿಯೂ ನರಕಕ್ಕೆ ಹೋಗುವನು. 'ವಿಷ್ಣುನಿಂದೆ'

ಅಪ್ರತ್ಯಕ್ಷಂ ಚ ಕುರುತೇ ಕಿಂ ವಾ ತಂ ಚ ನ ಮನ್ಯತೇ ।
ದೇವಾನ್ಯಸಾಮ್ಯಂ ಕುರುತೇ ಜ್ಞಾನಹೀನೋ ನರಾಧಮಃ ॥ ೪೯ ॥

ತಸ್ಯಾತ್ರ ನಿಷ್ಕೃತಿರ್ನಾಸ್ತಿ ಯಾವದ್ವೈ ಬ್ರಹ್ಮಣಃ ಶತಂ ।
ಗುರೋರ್ನಿಂದಾಂ ಯಃ ಕರೋತಿ ಪಿತುರ್ನಿಂದಾಂ ನರಾಧಮಃ ॥
ಸ ಯಾತಿ ಕಾಲಸೂತ್ರಂ ಚ ಯಾವಚ್ಚಂದ್ರದಿವಾಕರೌ ॥ ೫೦ ॥

ವಿಷ್ಣುರ್ಗುರುಶ್ಚ ಸರ್ವೇಷಾಂ ಜನಕೋ ಜ್ಞಾನದಾಯಕಃ ।
ಪೋಷ್ಟಾ ಪಾತಾ ಭಯತ್ರಾತಾ ವರದಾತಾ ಜಗತ್ರಯೇ ॥ ೫೧ ॥

ಏಷಾಂ ಚ ವಚನಂ ಶ್ರುತ್ವಾ ತ್ರಯಾಣಾಂ ವಿಪ್ರಪುಂಗವ ।
ಪ್ರಹಸ್ಯೋವಾಚ ತಾನ್ದೇವಾನ್ವಾಚಾ ಮಧುರಯಾ ಪುನಃ ॥ ೫೨ ॥

ಎಂಬುದು ಮೂರುವಿಧವೆಂದು ಬ್ರಹ್ಮನು ಪೂರ್ವದಲ್ಲಿ ಹೇಳಿರುವನು. ಜ್ಞಾನಹೀನನಾದ ನೀಚಮನುಜುನು, ವಿಷ್ಣುವು ' ಎಲ್ಲೂ, ಯಾರಿಗೂ, ಕಾಣಿಸುವುದಿಲ್ಲ' ಎಂದು ಹೇಳಿದರೂ, ವಿಷ್ಣುವನ್ನು ದೂಷಿಸಿದಂತಾಗುವುದು. 'ವಿಷ್ಣುವು ಇಲ್ಲವೇ ಇಲ್ಲ' ಎಂಬ ಚಾರ್ವಾಕ ತತ್ವವನ್ನು ಹೇಳುವವರೂ, 'ಶಿವ, ಬ್ರಹ್ಮರಂತೆ ವಿಷ್ಣುವೂ ಒಬ್ಬ ದೇವತಾ ಸಾಮಾನ್ಯ' ನೆಂದು ಹೇಳುವವರೂ ಕೂಡ ವಿಷ್ಣು ನಿಂದಕರೇ.

೫೦. ಮೇಲೆ ಹೇಳಿದ ಮೂರು ವಿಧವಾದ ವಿಷ್ಣುನಿಂದಕರಿಗೂ ಬ್ರಹ್ಮನ ಆಯುಃಪರಿಮಾಣದಷ್ಟು ಕಾಲ ನರಕದಿಂದ ಬಿಡುಗಡೆಯಿಲ್ಲ. ಯಾವನು ತನ್ನ ವಿದ್ಯಾಗುರುಗಳ ನಿಂದೆಯನ್ನೂ ಮತ್ತು ತಂದೆಯ ದೂಷಣೆಯನ್ನೂ ಮಾಡುವನೋ ಮತ್ತು ಕೇಳುವನೋ, ಆ ಪಾಪಿಯು ಚಂದ್ರಸೂರ್ಯರಿರುವವರೆಗೆ ಕಾಲಸೂತ್ರ ವೆಂಬ ನರಕದಲ್ಲಿ ತೊಳಲುತ್ತಿರುವನು.

೫೧. ಮನುಜನಿಗೆ ಹೆತ್ತತಂದೆಯೂ, ಜ್ಞಾನೋಪದೇಶಕನಾದ ಗುರುವೂ, ವಿಷ್ಣುವಿಗೆ ಸಮರು. ಅಂತೆಯೇ, ಪೋಷಕರೂ, ಪಾಲಕರೂ,ಭಯವನ್ನು ಪರಿಹರಿಸುವವರೂ, ವರವನ್ನು ಕೊಡುವವರೂ, ವಿಷ್ಣು ಸದೃಶರು.

೫೨. ಬ್ರಹ್ಮ, ಮಹೇಶ್ವರ ಮತ್ತು ಧರ್ಮ ಈ ಮೂವರ ಮಾತನ್ನು ಕೇಳಿದ ಆ ಬ್ರಹ್ಮಚಾರಿಯು ನಗುತ್ತ ಪುನಃ ಆ ದೇವತೆಗಳನ್ನು ಕುರಿತು ಕೆಲವು ಮಧುರ ನುಡಿಗಳನ್ನಾಡಿದನು.

|| ಬ್ರಾಹ್ಮಣ ಉವಾಚ ||

ಕಾ ಕೃತಾ ವಿಷ್ಣುನಿಂದಾಽಹೋ ಹೇ ದೇವಾ ಧರ್ಮಶಾಲಿನಃ |
ನಾಗತೋ ಹರಿರತ್ರೇತಿ ವ್ಯರ್ಥಾಕಾಶಸರಸ್ವತೀ || ೫೩ |

ಇತಿ ಪ್ರೋಕ್ತಂ ಮಯಾ ಭದ್ರಂ ಬ್ರೂತ ಧರ್ಮಾರ್ಥಮೀಶ್ವರಾಃ |
ಸಭಾಯಾಂ ಪಾಕ್ಷಿಕಾಸ್ಸಂತೋ ಘ್ನಂತಿಸ್ಮ ಶತಪೂರುಷಂ || ೫೪ ||

ಯೂಯಂ ಚ ಭಾವುಕಾ ಬ್ರೂತ ವಿಷ್ಣುಃ ಸರ್ವತ್ರ ಸಂತತಂ |
ಇತಿ ಚೇತ್ತತ್ಕಥಂ ಯಾತಾಃ ಶ್ವೇತದ್ವೀಪಂ ವರಾಯ ಚ || ೫೫ ||

ಅಂಶಾಂಶಿನೋರ್ನಭೇದಶ್ಚೇದಾತ್ಮನಶ್ಚೇತಿ ನಿಶ್ಚಿತಂ |
ಕಲಾಂ ಹಿತ್ವಾ ನಿಷೇವಂತೇ ಸಂತಃ ಪೂರ್ಣತಮಂ ಕಥಂ || ೫೬ ||

೫೩-೫೪. ಬ್ರಾಹ್ಮಣ:—ಎಲೈ, ದೇವತೆಗಳೇ! ನೀವೆಲ್ಲರೂ ಧರ್ಮಿಷ್ಠರು. ನಾನೇನು ವಿಷ್ಣುನಿಂದೆಮಾಡಿದೆನು? ವಿಷ್ಣುವು ‘ ಇಲ್ಲಿಗೆ ಬರಲಿಲ್ಲವಾದ್ದರಿಂದ ಆಕಾಶ ವಾಣಿಯು ವ್ಯರ್ಥವಾಯಿತು ’ ಎಂದು ನಾನು ಹೇಳಿದುದು ನಿಜ. ಇದರಲ್ಲಿ ತಪ್ಪೇನಿದೆ? ಎಂಬುದನ್ನು ಧರ್ಮಜ್ಞರಾದ ನೀವೇ ಹೇಳಿ. ಸಭೆಯಲ್ಲಿ ಪಕ್ಷಪಾತ ತೋರುವುದು, ತನ್ನ ವಂಶದ ನೂರಾರು ಪುರುಷರ ನಾಶಕ್ಕೆ ಕಾರಣವಾಗುವುದು.

೫೫. ನೀವೆಲ್ಲರೂ ಬಹಳ ಜ್ಞಾನಿಗಳಂತೆ ವಿಷ್ಣುವು ಎಲ್ಲೆಡೆಯಲ್ಲೂ, ಯಾವಾಗಲೂ ಇರುವನೆಂದು ಹೇಳಿದಿರಲ್ಲವೇ? ಹಾಗಾದರೆ ವಿಷ್ಣುವಿನ ಅನುಗ್ರಹ ಪಡೆಯಲು ನೀವೆಲ್ಲರೂ ಶ್ವೇತದ್ವೀಪಕ್ಕೆ ಏಕೆ ಓಡಿದಿರಿ?

೫೬. ಪರಿಪೂರ್ಣನಾದ ಆತ್ಮನಿಗೂ ಅವನ ಬೇರೆ ಬೇರೆ ಅಂಶಗಳಿಗೂ ಭೇದ ವಿಲ್ಲವೆಂಬುದು ನಿಶ್ಚಯವಾದರೆ, ಸತ್ಪುರುಷರು ಪರಮಾತ್ಮನ ಅಂಶಗಳನ್ನೆಲ್ಲಾ ಬಿಟ್ಟು ಪ್ರತ್ಯೇಕವಾದ ಅಂಶಿಯನ್ನೇ ಹೇಗೆ ಸೇವಿಸುವರು? ಗಡಿಗೆಯ ಹೋಳುಗಳು ಸೇರಿ ಪೂರ್ಣಘಟವೆನಿಸುವಂತೆ, ಅಂಶಗಳೆಲ್ಲವೂ ಸೇರಿದರಲ್ಲವೇ ಪರಮಾತ್ಮನು ಪೂರ್ಣನೆನಿಸುವುದು.

ಕೋಟಿಜನ್ಮದುರಾರಾಧ್ಯಮಸಾಧ್ಯಮಸತಾಮಪಿ ।
ಆಶಾ ಬಲವತೀ ಪುಂಸಾಂ ಕೃಷ್ಣಂ ಸೇವಿತುಮಿಚ್ಛತಿ ॥ ೫೭ ॥

ಕಿಂ ಕ್ಷುದ್ರಾಃ ಕಿಂ ಮಹಾಂತಶ್ಚ ವಾಂಛಂತಿ ಪರಮಂಪದಂ।
ಲಬ್ಧುಮಿಚ್ಛಂತಿ ಚಂದ್ರಂ ಚ ಬಾಹುಭ್ಯಾಂ ವಾಮನೋ ಯಥಾ ॥ ೫೮ ॥

ಯೋ ವಿಷ್ಣುರ್ವಿಷಯಿಾ ವಿಶ್ವೇ ಶ್ವೇತದ್ವೀಪನಿವಾಸಕೃತ್ ।
ಯೂಯಂ ಬ್ರಹ್ಮೇಶಧರ್ಮಾಶ್ಚ ದಿಕ್ಪಾಲಾಶ್ಚ ದಿಗೀಶ್ವರಾಃ ॥ ೫೯ ॥

ಬ್ರಹ್ಮವಿಷ್ಣುಶಿವಾದ್ಯಾಶ್ಚ ಸುರಲೋಕಾಶ್ಚರಾಚರಾಃ ।
ಏವಂ ಕತಿ ವಿಧಾಃ ಸಂತಿ ಪ್ರತಿವಿಶ್ವೇಷು ಸಂತತಂ ॥ ೬೦ ॥

---

೫೭. ಹೀಗಿರುವಾಗ, ಎಷ್ಟೋಜನ್ಮಗಳಲ್ಲಿ ಪೂಜಿಸಿದರೂ ಸುಲಭನಲ್ಲದ ಕೃಷ್ಣಪರಮಾತ್ಮನನ್ನೇ ಸೇವಿಸಬೇಕೆಂದು ಸತ್ಪುರುಷರಲ್ಲದವರಿಗೂ ಕೂಡ ಬಹಳ ಆಶೆಯುಂಟಾಗುವುದಲ್ಲ. ಇದು ಹೇಗೆ ?

೫೮. ನೀಚರೇನು ? ಮಹಾತ್ಮರೇನು ? ಎಲ್ಲರಿಗೂ ಆ ಪರಮಾತ್ಮನ ದಿವ್ಯ ಸ್ಥಾನವನ್ನು ಪಡೆಯಬೇಕೆಂದು ಆಸೆಯಿದ್ದೇ ಇರುವುದು. ಚಂದ್ರನ ಸೌಂದರ್ಯ ವನ್ನು ನೋಡಿ ಕುಳ್ಳನಿಗೂ ಅವನನ್ನು ಕೈಯಲ್ಲಿ ಹಿಡಿಯಬೆಂಕೆಂಬಾಸೆಯಾಗುವುದು.

೫೯. ಆದುದರಿಂದ ನಿಮಗೆಲ್ಲಾ ಆಧಾರಭೂತನಾದ ವಿಷ್ಣುವೊಬ್ಬನು ಶ್ವೇತ ದ್ವೀಪದಲ್ಲಿ ನೆಲಸಿರುವನು. ಬ್ರಹ್ಮ, ಈಶ್ವರ, ಧರ್ಮ ಮೊದಲಾದ ನೀವೆಲ್ಲರೂ ದಿಕ್ಪಾಲಕರೊಡಗೂಡಿ ಆ ಪರಮಾತ್ಮನ ಆಜ್ಞಾಧಾರಿಗಳಾಗಿದ್ದೀರಿ.

೬೦. ಹೀಗೆ ಹದಿನಾಲ್ಕು ಲೋಕಗಳಲ್ಲೂ ಬ್ರಹ್ಮ, ವಿಷ್ಣು, ಶಿವ, ದೇವತೆ ಗಳು ಮನುಜರು ಮತ್ತು ಚರಾಚರಗಳೆಂದು ಅದೆಷ್ಟು ವಿಧವಾದ ಸೃಷ್ಟಿಗಳಿವೆಯೋ ಎಣಿಸಲಾಗದು.

ವಿಶ್ವಾನಾಂ ಚ ಸುರಾಣಾಂ ಚ ಕಃ ಸಂಖ್ಯಾಂ ಕರ್ತುಮೀಶ್ವರಃ ।
ಸರ್ವೇಷಾಮೀಶ್ವರಃ ಕೃಷ್ಣೋ ಭಕ್ತಾನುಗ್ರಹವಿಗ್ರಹಃ ॥ ೬೧ ॥

ಊರ್ಧ್ವಂ ಚ ಸರ್ವಬ್ರಹ್ಮಾಂಡಾದ್ವೈಕುಂಠಂ ಸತ್ಯಮೀಪ್ಸಿತಂ ।
ತಸ್ಮಾದೂರ್ಧ್ವಂ ಚ ಗೋಲೋಕಃ ಪಂಚಾಶತ್ಕೋಟಿಯೋಜನಂ ॥ ೬೨ ॥

ಚತುರ್ಭುಜಶ್ಚ ವೈಕುಂಠೇ ಲಕ್ಷ್ಮೀಕಾಂತಃ ಸನಾತನಃ ।
ಸುನಂದನಂದಕುಮುದಪಾರ್ಷದಾದಿಭಿರಾವೃತಃ ॥ ೬೩ ॥

ಗೋಲೋಕೇ ದ್ವಿಭುಜಃ ಕೃಷ್ಣೋ ರಾಧಾಕಾಂತಃ ಸನಾತನಃ ।
ಗೋಪಾಂಗನಾದಿಭಿರ್ಯುಕ್ತೋ ದ್ವಿಭುಜೈರ್ಗೋಪಪಾರ್ಷದೈಃ ॥ ೬೪ ॥

ಪರಿಪೂರ್ಣತಮಂ ಬ್ರಹ್ಮ ಸಚಾತ್ಮಾ ಸರ್ವದೇಹಿನಾಂ ।
ಸ್ವೇಚ್ಛಾಮಯಶ್ಚ ವಿಹರೇದ್ರಾಸೇ ವೃಂದಾವನೇ ಸದಾ ॥ ೬೫ ॥

---

೬೧. ಪ್ರಪಂಚವನ್ನೂ, ದೇವತೆಗಳನ್ನೂ ಎಣಿಸಿ, ಇಷ್ಟೇ ಎಂದು ನಿಶ್ಚಯವಾಗಿ ಹೇಳಲಾಗುವುದಿಲ್ಲ. ಇವರೆಲ್ಲರಿಗೂ ಒಡೆಯನೂ, ಭಕ್ತಪರಾಧೀನನೂ ಆದವನು ಶ್ರೀಕೃಷ್ಣಪರಮಾತ್ಮನೊಬ್ಬನೇ ಎಂಬುದು ಸಿದ್ಧ ವಿಷಯ.

೬೨. ಪರಿಪೂರ್ಣವಾದ ಬ್ರಹ್ಮಾಂಡದ ಮೇಲುಭಾಗದಲ್ಲಿ ವೈಕುಂಠಲೋಕವಿರುವುದು. ಅದಕ್ಕಿಂತಲೂ ಐವತ್ತುಕೋಟಿಯೋಜನ ಮೇಲುಭಾಗದಲ್ಲಿ ಗೋಲೋಕವೆಂಬುದಿರುವುದು.

೬೩. ವೈಕುಂಠದಲ್ಲಿ, ನಿತ್ಯನೂ, ಚತುರ್ಭುಜನೂ ಆದ ಲಕ್ಷ್ಮೀರಮಣನು ನೆಲಸಿರುವನು. ಅವನ ಸುತ್ತಲೂ, ಸುನಂದ, ನಂದ, ಕುಮುದ ಮುಂತಾದ ಪಾರ್ಷದರು ನೆರೆದು ಅವನನ್ನು ಸೇವಿಸುತ್ತಿರುವರು.

೬೪. ಗೋಲೋಕದಲ್ಲಿ ಅನಾದ್ಯನಂತನೂ, ದ್ವಿಭುಜನೂ, ರಾಧಾರಮಣನೂ ಆದ ಕೃಷ್ಣಪರಮಾತ್ಮನು ನೆಲೆಸಿರುವನು. ಅವನೊಡನೆ ಗೋಪಿಕಾಸ್ತ್ರೀಯರೂ, ಗೋಪಪಾರ್ಷದರೂ ವಿಹರಿಸುವರು.

೬೫. ಎಲ್ಲರ ದೇಹದಲ್ಲೂ ಸೇರಿ ದೇಹಿ ಎನಿಸಿಕೊಳ್ಳುವ ಆ ಪೂರ್ಣಾತ್ಮನು ಸ್ವೇಚ್ಛಾಮಯನಾದುದರಿಂದಲೇ ಬೃಂದಾವನದ ರಾಸಮಂಡಲದಲ್ಲಿ ಯಾವಾಗಲೂ ಕ್ರೀಡಿಸುತ್ತಿರುವನು

ತೇಜೋಜ್ಯೋತಿರ್ಮಂಡಲಾಕಾರಂ ಸೂರ್ಯಕೋಟಿಸಮಪ್ರಭಂ ।
ಧ್ಯಾಯಂತೇ ಯೋಗಿನಃ ಸಂತಃ ಸಂತತಂ ಚ ನಿರಾಮಯಂ ॥ ೬೬ ॥

ನವೀನನೀರದಶ್ಯಾಮಂ ದ್ವಿಭುಜಂ ಪೀತವಾಸಸಂ ।
ಕೋಟಿಕಂದರ್ಪಲಾವಣ್ಯ ಲೀಲಾಧಾಮ ಮನೋಹರಂ ॥ ೬೭ ॥

ಕಿಶೋರನಯನಂ ಶಶ್ವಚ್ಛಾಂತಂ ಸಸ್ಮಿತವಿಗ್ರಹಂ ।
ಧ್ಯಾಯಂತೇ ವೈಷ್ಣವಾಃ ಸಂತಃ ಸೇವಂತೇ ಸತ್ಯವಿಗ್ರಹಂ ॥ ೬೮ ॥

ಯೂಯಂ ಚ ವೈಷ್ಣವಾ ಬ್ರೂತ ಕಸ್ಯವಂಶೋದ್ಭವೋ ಭವಾನ್ ।
ಶಿಷ್ಯಃ ಕಸ್ಯ ಮುನೀಂದ್ರಸ್ಯೇತ್ಯೇವಂ ಮಾಂ ಚ ಪುನಃ ಪುನಃ ॥ ೬೯ ॥

ಯಸ್ಯ ವಂಶೋದ್ಭವೋಽಹಂ ಚ ಯಸ್ಯ ಶಿಷ್ಯಶ್ಚ ಬಾಲಕಃ ।
ತಸ್ಯೇದಂ ವಚನಂ ಜ್ಞಾನಂ ದೇವಸಂಘಾ ನಿಬೋಧತ ॥ ೭೦ ॥

೬೬–೬೮. ಯೋಗಿಗಳು ಮತ್ತು ಸಂತರು ಆ ಪರಮಾತ್ಮನ ಸ್ವರೂಪವನ್ನು ವೃದ್ಧಿ ಕ್ಷಯರಹಿತವೂ, ಕೋಟಿಸೂರ್ಯರ ದಿವ್ಯತೇಜಸ್ಸನ್ನು ಮೀರಿದುದೂ, ಆದ ನಿರಾಕಾರಪರಂಜ್ಯೋತಿಯೆನ್ನುವರು. ಆದರೆ ವಿಷ್ಣುಭಕ್ತರು ಸೇವಿಸುವ ಪರಮಾತ್ಮನಿಗೆ ದಿವ್ಯಸುಂದರವಾದ ಆಕಾರಕಲ್ಪನೆಯುಂಟು. ನೀಲಮೇಘಮಂಡಲದಂತೆ ಶ್ಯಾಮಲವರ್ಣವೂ ಎರಡು ಭುಜಗಳೂ, ಕೋಟಿಮನ್ಮಥರನ್ನು ಮೀರುವ ಸೌಂದರ್ಯವೂ, ಹೊಳಪಾದ ಕಣ್ಣುಗಳೂ, ನಗುಮುಖವೂ ಉಳ್ಳ ಆ ಪರಮಾತ್ಮನ ಸಾಕಾರರೂಪವು ಶಾಂತವೂ, ನಿತ್ಯವೂ ಆದುದೆಂದು ವಿಷ್ಣುಭಕ್ತರ ನಂಬಿಕೆ.

೬೯. ನೀವು ವಿಷ್ಣುಭಕ್ತರೆನಿಸಿಕೊಂಡು ನನ್ನನ್ನು 'ನೀನು ಯಾರ ವಂಶದಲ್ಲಿ ಹುಟ್ಟಿದವನು? ಯಾವ ಮಹರ್ಷಿಯ ಶಿಷ್ಯನು ನೀನು?' ಎಂದು ಪದೇ ಪದೇ ಕೇಳುತ್ತಿರುವಿರಿ.

೭೦. ನನ್ನ ಮಾತಿನಿಂದಲೂ, ನನ್ನ ಜ್ಞಾನದಿಂದಲೂ–ನಾನು ಯಾರ ವಂಶಜನೆಂಬುದನ್ನೂ ಮತ್ತು ನಾನು ಯಾರ ಶಿಷ್ಯನೆಂಬುದನ್ನೂ ದೇವತೆಗಳಾದ ನೀವೇ ಊಹಿಸಿಕೊಳ್ಳಿರಿ.

ಶೀಘ್ರಂ ಜೀವಯ ಗಂಧರ್ವಂ ದೇವೇಶ್ವರ ಸುರೇಶ್ವರ ।
ವ್ಯಕ್ತೇ ವಿಚಾರೇ ಮೂರ್ಖಃ ಕೋ ವಾಗ್ಯುದ್ಧೇ ಕಿಂ ಪ್ರಯೋಜನಂ ॥ ೭೧ ॥

ಇತ್ಯುಕ್ತ್ವಾ ಬಾಲಕಸ್ತತ್ರ ವಿಪ್ರರೂಪೀ ಜನಾರ್ದನಃ ।
ವಿರರಾಮ ಸಭಾಮಧ್ಯೇ ಪ್ರಜಹಾಸ ಚ ಶೌನಕ ॥ ೭೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ
ವಿಷ್ಣು-ಸುರಸಂಘ ಸಂವಾದೇ ವಿಷ್ಣು ಪ್ರಶಂಸಾಪ್ರಣಯನೇ
ಸಪ್ತದಶೋಽಧ್ಯಾಯಃ

---

೭೧. ತತ್ವಜ್ಞಾನವನ್ನು ಅರಿತ ಮೇಲೆ ಮೂರ್ಖತೆ ಎಲ್ಲಿರುವುದು? ಇರಲಿ– ಕೇವಲ ಒಣಹರಟೆಯಿಂದ ಪ್ರಯೋಜನವೇನು? ಎಲೈ, ದೇವಾಧಿದೇವತೆಗಳೇ! ಕಾಲಕಳೆಯಲು ಇದು ಸಮಯವಲ್ಲ. ಜಾಗ್ರತೆಯಾಗಿ ಗಂಧರ್ವನಾದ ಉಪಬರ್ಹಣ ನನ್ನು ಬದುಕಿಸಿರಿ.

೭೨. ಸೌತಿ:—ಎಲೈ, ಶೌನಕನೇ! ಆ ಬಾಲಬ್ರಹ್ಮಚಾರಿಯ ವೇಷಧಾರಿಯಾದ ಪರಮಾತ್ಮನು ದೇವತೆಗಳ ಸಭೆಯಲ್ಲಿ ಹೀಗೆ ನುಡಿದು ನಸುನಗುತ್ತಾ ಸುಮ್ಮನೆ ನಿಂತುಕೊಂಡನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದಲ್ಲಿ ಬ್ರಹ್ಮಖಂಡದ ವಿಷ್ಣು ಮತ್ತು
ದೇವತೆಗಳ ಸಂವಾದಸಂದರ್ಭದಲ್ಲಿ ವಿಷ್ಣುಪ್ರಶಂಸಾರೂಪವಾದ
ಹದಿನೇಳನೆಯ ಅಧ್ಯಾಯವು ಮುಗಿದುದು.

ಹದಿನೇಳನೆಯ ಅಧ್ಯಾಯದ ಸಾರಾಂಶವು

ಬಾಲಬ್ರಹ್ಮಚಾರಿಯ ವೇಷಧಾರಿಯಾದ ಪರಮಾತ್ಮನು ದೇವತೆಗಳ ಸಮೀಪಕ್ಕೆ ಬರಲು ದೇವತೆಗಳು ಅವನನ್ನು ಸ್ವಾಗತಿಸಿದರು–ಆದರೆ ಇವನೇ ಪರಮಾತ್ಮನೆಂಬ ಅರಿವು ಅವರಲ್ಲಿ ಯಾರಿಗೂ ಹೊಳೆಯಲಿಲ್ಲ. ಪರಸ್ಪರ ಮಾತುಕಥೆಗಾರಂಭವಾಯಿತು. 'ಉಪಬರ್ಹಣನ ಪತ್ನಿಯಾದ ಮಾಲಾವತಿಯು ಮಹಾಪತಿವ್ರತೆ' ಎಂದೂ 'ತಾನು ಬರದಿದ್ದರೆ ಇಷ್ಟುಹೊತ್ತಿಗೆ ನಿಮ್ಮನ್ನೆಲ್ಲಾ ಶಪಿಸುತ್ತಿದ್ದಳೆಂ'ದೂ ಬ್ರಹ್ಮಚಾರಿಯಾಡಿದ ಮಾತುಗಳನ್ನು ಕೇಳಿ ದೇವತೆಗಳಿಗೆ ಕೋಪೋದ್ರೇಕವಾಯಿತು. ಅಲ್ಲದೆ 'ನೀವೆಲ್ಲರೂ ಶ್ವೇತದ್ವೀಪಕ್ಕೆ ಹೋಗಿ ಪರಮಾತ್ಮನನ್ನು ಭಜಿಸಿದರೆ–ಪರಮಾತ್ಮನು ಇಲ್ಲಿಗೇ ಬರುವನೆಂದು ಅಶರೀರವಾಣಿಯಾಯಿತಲ್ಲ! ಅದೆಷ್ಟು ಸತ್ಯ! ಪರಮಾತ್ಮನು ಅದೆಷ್ಟು ಬೇಗ ಇಲ್ಲಿಗೆ ಬಂದನು!' ಎಂದಾಡಿದ ಆತನ ಕಟಕಿಮಾತನ್ನು ಕೇಳಿ ಅಸಮಾಧಾನಗೊಂಡ ಬ್ರಹ್ಮದೇವನು ಇಂತು ಉತ್ತರಕೊಟ್ಟನು. "ನನ್ನ ಮಗನಾದ ನಾರದನಿಗೆ ಲಕ್ಷಯುಗಗಳಕಾಲ ಗಂಧರ್ವನಾಗಿ ಬಾಳಿ, ಅನಂತರ ದಾಸೀಪುತ್ರನಾಗಿ ಹುಟ್ಟುವಂತೆ ನಾನು ಶಾಪಕೊಟ್ಟಿರುವೆನು. ಅದರಂತೆ ಅವನಿಗೆ ಗಂಧರ್ವ ಜನ್ಮದಲ್ಲಿ ಇನ್ನೂ ಒಂದುಸಾವಿರವರ್ಷಗಳು ಬಾಕಿ ಇದೆ. ಆದ್ದರಿಂದ ನಾನು ಬದುಕಿಸಬಲ್ಲೆನು. ಅಷ್ಟೇಕೆ! ವಿಷ್ಣುವಿನ ಅನುಗ್ರಹದಿಂದ ಮುಂದೆ ನನ್ನ ಶಾಪದ ಸೋಂಕು ಅವನಿಗಿಲ್ಲದಂತೆ ಮಾಡಬಲ್ಲೆನು. ಅದಿರಲಿ–ಪರಮಾತ್ಮನು ಇಲ್ಲಿಗೆ ಬರಲಿಲ್ಲವೆಂದು ನೀನು ಕೇಳಿದೆಯಲ್ಲಾ! ಸರ್ವವ್ಯಾಪಿಯಾದ ಪರಮಾತ್ಮನು ಇಲ್ಲೂ ಇರುವನೆಂಬುದು ನಿನಗೆ ತಿಳಿಯದೇ? ನಾವೆಲ್ಲರೂ ಆತನ ಆಜ್ಞಾಧಾರಕರು. 'ವಿಷ್ಣು' ಎಂಬ ಪದವೇ ಪರಮಾತ್ಮನು ಎಲ್ಲೆಲ್ಲೂ ಇರುವನು ಎಂದು ಅರ್ಥಕೊಡುವಾಗ, ಇದನ್ನರಿಯದೆ ಪ್ರಶ್ನೆಮಾಡಿದ ನಿನ್ನ ಮೂಢಬುದ್ಧಿಗೆ ಏನು ಹೇಳೋಣ?"

ಅನಂತರ ಮಹೇಶ್ವರನು ಬ್ರಹ್ಮಚಾರಿಯನ್ನು ಆಕ್ಷೇಪಿಸಲು ಅನುವಾದನು. ಎಲೈ, ಬ್ರಹ್ಮಚಾರಿಯೇ! ನಿನ್ನನ್ನು ನೋಡಿದರೆ ವೇದಾಧ್ಯಯನ ಸಂಪನ್ನನಂತೆ ತೋರುವೆ! ನೀನು ಯಾವ ಮಹರ್ಷಿಯ ವಂಶಜನು? ನಿನಗೆ ಗುರುವಾರು? ದೇವತೆಗಳನ್ನೆಲ್ಲಾ ಅಲ್ಲಗಳೆಯುವೆ? ನಿನ್ನ ಹೃದಯದಲ್ಲಿರುವ ಪರಮಾತ್ಮನ ಅರಿವೇ ನಿನಗಿಲ್ಲವಲ್ಲ? ಅಯ್ಯೋ! ನಿನ್ನ ಮಂಕುಬುದ್ಧಿಗೆ ಏನು ಹೇಳೋಣ! ಪರಮಾತ್ಮನೊಬ್ಬನೆಂದೂ, ಅವನು ಎಲ್ಲೆಲ್ಲೂ ಇರುವನೆಂದೂ, ಪ್ರಪಂಚವೆಲ್ಲವೂ ಅವನ ಪ್ರತಿಬಿಂಬವೆಂದೂ, ಎಲ್ಲಾ ವಸ್ತುವಿನಲ್ಲೂ ಅಡಗಿರುವ ಪರಮಾತ್ಮನು ಉಪಾಧಿವಿಶೇಷ

ದಿಂದ ಬೇರೆ ಬೇರೆ ಹೆಸರು ಪಡೆದು ತನ್ನ ವಿಚಿತ್ರ ಲೀಲೆಗಳನ್ನು ತೋರಿಸಿ, ಕಡೆಗೆ ಆ ಉಪಾಧಿಗಳೆಲ್ಲವನ್ನೂ ಉಪಸಂಹಾರಮಾಡಿಕೊಂಡು, ಜ್ಯೋತಿರ್ಮಯನಾಗಿರುವನೆಂದೂ ನಿನಗೆ ತಿಳಿಯದಲ್ಲ! ಬ್ರಹ್ಮದೇವನೂ ಮತ್ತು ನಾನೂ ಪರಮಾತ್ಮನ ಸ್ವರೂಪವನ್ನರಿಯಲು ಎಷ್ಟೋ ಲಕ್ಷಯುಗಗಳಕಾಲ ತಪಸ್ಸುಮಾಡಬೇಕಾಯಿತು. ಹೀಗಿರುವಾಗ ನಿನ್ನಂಥ ಸಾಮಾನ್ಯರಿಗೆ ಹೇಗೆ ತಾನೇ ಆತ್ಮಜ್ಞಾನವಾದೀತು? ಹೋಗಲಿ. ನನ್ನಿಂದಲಾದರೂ, ನೀನು ಆತ್ಮಜ್ಞಾನವನ್ನು ತಿಳಿದುಕೋ! ಗೋಲೋಕ, ವೈಕುಂಠ, ಶ್ವೇತದ್ವೀಪಗಳಲ್ಲಿ ಎಲ್ಲಿ ನೋಡಿದರೂ ಇರುವವನು ಪರಮಾತ್ಮನೊಬ್ಬನೇ! ಅವನ ಅಂಶಗಳಿಗೂ, ಅವನಿಗೂ ಎಂದೂ ಭೇದವಿಲ್ಲ. ಅವನ ಅಂಶಸಂಭೂತರಾದ ನಾವೆಲ್ಲರೂ ಕಡೆಗೆ ಅವನಲ್ಲೇ ಐಕ್ಯವಾಗುವೆವು. ಆ ಪರಮಾತ್ಮನ ಮಹಿಮೆಯನ್ನು ಇಷ್ಟೆ ಎಂದು ಹೇಳಲಾಗದು. ಹೀಗಿರುವಾಗ ಅವನನ್ನು ನೀನು ಅಲ್ಲಗಳೆಯುವೆಯಾ?''

ಈಶನ ಮಾತು ಮುಗಿಯುವುದೇ ತಡ. ಧರ್ಮದೇವನು ಮಾತಿಗೆ ಸಿದ್ಧನಾದನು. ''ಎಲೈ, ವಟುವೇ, ಎಲ್ಲೆಲ್ಲೂ ವ್ಯಾಪಿಸಿರುವ ಕೃಷ್ಣಪರಮಾತ್ಮನು ಇಲ್ಲಿಲ್ಲವೆಂದು ನುಡಿದೆಯಲ್ಲಾ–ಪರಮಾತ್ಮನ ನಿಂದೆಯನ್ನು ಮಾಡಿದ ನಿನ್ನ ಮುಖದರ್ಶನ ಮಾಡಬಹುದೇ? ಮಹಾತ್ಮರ ನಿಂದೆಯನ್ನು ಮಾಡಿದವನೂ, ಕೇಳಿದವನೂ, ಅಷ್ಟೇಕೆ? ಆ ಸ್ಥಳದಲ್ಲಿ ಕುಳಿತವನೂ ಕೂಡ ಕುಂಭೀಪಾಕನರಕಕ್ಕೆ ಹೋಗುವರು. ತಂದೆಯನ್ನೂ, ಗುರುವನ್ನೂ ನಿಂದಿಸುವುದೇ–ಮಹಾಪಾಪ. ಹೀಗಿರುವಾಗ ನಿಖಿಲ ಲೋಕನಾಯಕನಾದ ಪರಮಾತ್ಮನನ್ನು ನಿಂದಿಸುವೆಯಾ? ವಿಷ್ಣುವು ಕಣ್ಣಿಗೆ ಕಾಣುವುದಿಲ್ಲವೆಂದಾಗಲೀ, ವಿಷ್ಣುವು ಎಲ್ಲೂ ಇಲ್ಲವೇಇಲ್ಲವೆಂದಾಗಲೀ, ಬ್ರಹ್ಮ, ಶಿವ, ನಾರಾಯಣ ಮುಂತಾದವರಂತೆ ವಿಷ್ಣುವೂ-ಒಬ್ಬನು ಎಂದು ಹೇಳಿದರಾಗಲೀ, ವಿಷ್ಣುನಿಂದೆ ಮಾಡಿದಂತಾಗುವುದು. ಈ ಮಹಾಪಾಪ ಪರಿಹಾರಕ್ಕೆ ತಕ್ಕ ಪ್ರಾಯಶ್ಚಿತ್ತವೇ ಇಲ್ಲ.''

ಹೀಗೆ ಆಡಿದ ಧರ್ಮದೇವನ ಮಾತನ್ನು ಕೇಳಿ ಬ್ರಹ್ಮಚಾರಿಯು ಶಾಂತನಾಗಿಯೇ ಉತ್ತರಕೊಟ್ಟನು. "ಆಹಾ! ನೀವೆಲ್ಲರೂ ಬಹಳ ಧರ್ಮಿಷ್ಠರು! ಒಳ್ಳೆಯ ಜ್ಞಾನಿಗಳು! 'ವಿಷ್ಣುವು ಇಲ್ಲಿಗೆ ಬರಲಿಲ್ಲ'ವೆಂದೂ 'ಆಕಾಶವಾಣಿಯು ಸುಳ್ಳಾಯಿತೆಂ'ದೂ ನಾನು ಹೇಳಿದುದು ವಿಷ್ಣುನಿಂದೆಯಾಯಿತೋ? ಇರಲಿ. ವಿಷ್ಣುವು

ಎಲ್ಲೆಲ್ಲೂ ಇರುವನೆಂಬ ತತ್ವವನ್ನರಿತ ನೀವೆಲ್ಲರೂ ಅದೇಕೆ ಶ್ವೇತದ್ವೀಪಕ್ಕೆ ವಿಷ್ಣುವನ್ನು ಹುಡುಕಿಕೊಂಡು ಓಡಿದ್ದಿರಿ? ಅಂಶಾಂಶಿಗಳಿಗೆ ಭೇದವಿಲ್ಲದ ಮೇಲೆ ನಿಮ್ಮನ್ನೆಲ್ಲಾ ಬಿಟ್ಟು ಆ ಪರಮಾತ್ಮನೊಬ್ಬನನ್ನೇ ಎಲ್ಲರೂ ಏಕೆ ಸೇವಿಸುವರು? ಆದ್ದರಿಂದ ಪರಮಾತ್ಮನು ನಿಮ್ಮೆಲ್ಲರಿಗಿಂತಲೂ ಶ್ರೇಷ್ಠನೆಂದೂ, ಯೋಗಿಗಳಿಗೆ ಜ್ಯೋತಿಃ ಸ್ವರೂಪನೂ, ಭಕ್ತರಿಗೆ ಸಾಕಾರನೂ ಆದ ಅವನು ಗೋಲೋಕದಲ್ಲಿ ನೆಲೆಸಿರುವನೆಂದೂ, ನೀವೆಲ್ಲರೂ ಅವನ ಅನುಯಾಯಿಗಳೆಂದೂ, ನಾನು ಬಲ್ಲೆನು. ನಿಮಗಿಂತಲೂ ನಾನೇನು ಅಜ್ಞನಲ್ಲ. ಇರಲಿ, ಏರಿಮಾತಿನಿಂದ ಪ್ರಯೋಜನವೇನು? ಮೊದಲು ಮಾಲಾವತಿಯ ಪತಿಯನ್ನು ಬದುಕಿಸಿಕೊಡಿ." ಎಂದು ಬ್ರಹ್ಮಚಾರಿಯು ನುಡಿದು ನಗುತ್ತಾ ನಿಂತನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಅಷ್ಟಾದಶೋಽಧ್ಯಾಯಃ ॥

॥ ಸೌತಿರುವಾಚ ॥

ದೇವಾಃ ಸಾರ್ಧಂ ಬ್ರಾಹ್ಮಣೇನ ಮೋಹಿತಾ ವಿಷ್ಣುಮಾಯಯಾ ।
ಪ್ರಯಯುರ್ಮಾಲತೀಮೂಲಂ ಬ್ರಹ್ಮೇಶಾನಪುರೋಗಮಾಃ ॥ ೧ ॥

ಬ್ರಹ್ಮಾ ಕಮಂಡಲುಜಲಂ ದದೌ ಗಾತ್ರೇ ಶವಸ್ಯ-ಚ ।
ಸಂಚಾರಂ ಮನಸಸ್ತಸ್ಯ ಚಕಾರ ಸುಂದರಂ ವಪುಃ ॥ ೨ ॥

ಹದಿನೆಂಟನೆಯ ಅಧ್ಯಾಯವು

೧. ಸೌತಿ:—ಅನಂತರ ಬ್ರಹ್ಮ, ಈಶ್ವರ ಮೊದಲಾದ ದೇವತೆಗಳೆಲ್ಲರೂ ವಿಷ್ಣುವಿನ ಮಾಯೆಗೆ ಮರುಳಾಗಿ ಬ್ರಾಹ್ಮಣನೊಡನೆ, ಮಾಲತಿಇದ್ದೆಡೆಗೆ ತಾವಾಗಿಯೇ ಬಂದರು.

೨. ಬ್ರಹ್ಮದೇವನು ಉಪಬರ್ಹಣನ ಶವದ ಮೇಲೆ ತನ್ನ ಕಮಂಡಲುವಿನ ನೀರನ್ನು ಚುಮುಕಿಸಿ ಶರೀರವು ಸುಂದರವಾಗುವಂತೆಯೂ, ಆತನ ಜಡವಾದ ಮನಸ್ಸು ಚಲಿಸುವಂತೆಯೂ ಮಾಡಿದನು.

ಜ್ಞಾನದಾನಂ ದದೌ ತಸ್ಮೈ ಜ್ಞಾನಾನಂದಃ ಶಿವಃ ಸ್ವಯಂ ।
ಧರ್ಮಜ್ಞಾನಂ ಸ್ವಯಂ ಧರ್ಮೋ ಜೀವದಾನಂ ಚ ಬ್ರಾಹ್ಮಣಃ ॥ ೩ ॥

ವಹ್ನಿದರ್ಶನಮಾತ್ರೇಣ ಬಭೂವ ಜಠರಾನಲಃ ।
ಕಾಮದರ್ಶನಮಾತ್ರೇಣ ಸರ್ವಕಾಮಃ ಸುನಿಶ್ಚಿತಂ ॥ ೪ ॥

ತಸ್ಯ ವಾಯೋರಧಿಷ್ಠಾನಾಜ್ಜಗತ್ಪ್ರಾಣಸ್ವರೂಪಿಣಃ ।
ನಿಶ್ವಾಸಸ್ಯ ಚ ಸಂಚಾರಃ ಪ್ರಾಣಾನಾಂ ಚ ಬಭೂವ ಹ ॥ ೫ ॥

ಸೂರ್ಯೋಧಿಷ್ಠಾನಮಾತ್ರೇಣ ದೃಷ್ಟಿಶಕ್ತಿರ್ಬಭೂವಹ ।
ವಾಕ್ಯಂ ವಾಣೀದರ್ಶನೇನ ಶೋಭಾ ಶ್ರೀದರ್ಶನೇನ ಚ ॥ ೬ ॥

---

೩. ಜ್ಞಾನಾನಂದಮಯನಾದ ಪರಶಿವನು ದಿವ್ಯಜ್ಞಾನವನ್ನೂ, ಧರ್ಮದೇವನು ಧರ್ಮಜ್ಞಾನವನ್ನೂ, ಬ್ರಾಹ್ಮಣರೂಪಿಯಾದ ಪರಮಾತ್ಮನು ಜೀವವನ್ನೂ ಉಪಬರ್ಹಣನಿಗೆ ಅನುಗ್ರಹಿಸಿದರು.

೪. ಅಗ್ನಿದೇವನನ್ನು ನೋಡಿದ ಮಾತ್ರದಿಂದಲೇ ಆತನಿಗೆ ಜಾಠರಾಗ್ನಿಯು ಉತ್ಪತ್ತಿಯಾಯಿತು. ಮನ್ಮಥನನ್ನು ನೋಡಿದ ಮಾತ್ರದಿಂದಲೇ ಎಲ್ಲ ತರಹ ಆಶೆಗಳೂ ಮೂಡಿದುವು.

೫. ಜಗತ್ತಿಗೆಲ್ಲಾ ಪ್ರಾಣರೂಪಿಯೂ, ಅಧಿಷ್ಠಾನರೂಪಿಯೂ ಆದ ವಾಯುದೇವನ ಅನುಗ್ರಹದಿಂದ ಆತನಿಗೆ ಪ್ರಾಣವಾಯುವೂ, ನಿಶ್ವಾಸೋಚ್ಛ್ವಾಸಗಳೂ ಸಂಚರಿಸುವಂತಾಯಿತು.

೬. ಸೂರ್ಯದೇವನ ಅನುಗ್ರಹದಿಂದ ಕಣ್ಣಿನ ದೃಷ್ಟಿಪಾಟವವೂ, ಸರಸ್ವತಿಯ ಪ್ರಸಾದದಿಂದ ವಾಕ್ಛಕ್ತಿಯೂ, ಲಕ್ಷ್ಮೀದೇವಿಯ ದರ್ಶನದಿಂದ ದಿವ್ಯಕಾಂತಿಯೂ ದೊರೆಯಿತು.

ಶವಸ್ತಥಾಪಿ ನೋತ್ತಸ್ಥೌ ಯಥಾ ಶೇತೇ ಜಡಸ್ತಥಾ ।
ವಿಶಿಷ್ಟಬೋಧನಂ ಪ್ರಾಪ ಚಾಧಿಷ್ಠಾನಂ ವಿನಾತ್ಮನಃ ॥ ೭ ॥

ಬ್ರಹ್ಮಣೋ ವಚನಾತ್ಸಾಧ್ವೀ ತುಷ್ಟಾವ ಪರಮೇಶ್ವರಂ ।
ಸ್ನಾತ್ವಾ ಶೀಘ್ರಂ ಸರಿತ್ತೋಯೇ ಧೃತ್ವಾ ಧೌತೇ ಚ ವಾಸಸೀ ॥ ೮ ॥

॥ ಮಾಲಾವತ್ಯುವಾಚ ॥

ವಂದೇ ತಂ ಪರಮಾತ್ಮಾನಂ ಸರ್ವಕಾರಣಕಾರಣಂ ।
ವಿನಾ ಯೇನ ಶವಾಃ ಸರ್ವೇ ಪ್ರಾಣಿನೋ ಜಗತೀತಲೇ ॥ ೯ ॥

ನಿರ್ಲಿಪ್ತಂ ಸಾಕ್ಷಿರೂಪಂ ಚ ಸರ್ವೇಷಾಂ ಸರ್ವಕರ್ಮಸು ।
ವಿದ್ಯಮಾನಂ ನ ದೃಷ್ಟಂ ಚ ಸರ್ವೈಃ ಸರ್ವತ್ರ ಸರ್ವದಾ ॥ ೧೦ ॥

ಯೇನ ಸೃಷ್ಟಾ ಚ ಪ್ರಕೃತಿಃ ಸರ್ವಾಧಾರಾ ಪರಾತ್ಪರಾ ।
ಬ್ರಹ್ಮವಿಷ್ಣುಶಿವಾದೀನಾಂ ಪ್ರಸೂರ್ಯಾ ತ್ರಿಗುಣಾತ್ಮಿಕಾ ॥ ೧೧ ॥

---

೭. ಇಷ್ಟಾದರೂ ಆ ಶವವು ಜಡವಾಗಿ ಬಿದ್ದಿದ್ದಿತೇ ಹೊರತು ಮೇಲಕೆ ಏಳಲಾಗಲಿಲ್ಲ. ಆತ್ಮಾಧಿಷ್ಠಾನವೊಂದಿಲ್ಲದ ಮೇಲೆ ಯಾವಶಕ್ತಿ ಇದ್ದರೂ ಏನೂ ಪ್ರಯೋಜನವಿಲ್ಲವಲ್ಲವೇ !

೮. ಅನಂತರ ಬ್ರಹ್ಮದೇವನ ಅಪ್ಪಣೆ ಪಡೆದು ಸಾಧ್ವೀಶಿರೋಮಣಿಯಾದ ಆ ಮಾಲಾವತಿಯು ಹೊಳೆಯ ನೀರಿನಲ್ಲಿ ಮಿಂದು ಶುಭ್ರವಾದ ಎರಡು ಬಟ್ಟೆಗಳನ್ನುಟ್ಟು ಪರಮಾತ್ಮನನ್ನು ಭಜಿಸಲು ಆರಂಭಿಸಿದಳು.

೯. ಮಾಲಾವತಿ :—ಯಾವ ಪರಮಾತ್ಮನು ಪ್ರಾಣಿಗಳ ದೇಹದಲ್ಲಿ ಅಧಿಷ್ಠಾನ ರೂಪನಾಗಿಲ್ಲದಿದ್ದರೆ, ಎಲ್ಲ ಪ್ರಾಣಿಗಳೂ ಜಡವಾದ ಶವಕ್ಕೆ ಸಮನಾಗುವರೋ, ಅಂಥ ಮೂಲಕಾರಣನಾದ ಆ ಪರಮಾತ್ಮನಿಗೆ ವಂದಿಸುವೆನು.

೧೦. ಯಾವ ಕರ್ಮದ ಸಂಬಂಧವೂ ಇಲ್ಲಪೆ, ಎಲ್ಲರ ಕರ್ಮಕ್ಕೂ ಸಾಕ್ಷಿ ಮಾತ್ರನಾಗಿ ಎಲ್ಲೆಲ್ಲೂ ಯಾವಾಗಲೂ ನೆಲೆಸಿದ್ದರೂ ಎಲ್ಲರಿಗೂ ಕಾಣದಿರುವ ಆ ಪರಮಾತ್ಮನಿಗೆ ವಂದನೆಗಳು.

೧೧. ಯಾವ ಪರಮಾತ್ಮನು ಸತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಿಂದ ಕೂಡಿದವಳೂ ವಿಷ್ಣು, ಬ್ರಹ್ಮ ಮತ್ತು ಶಿವನೆಂಬ ತ್ರಿಮೂರ್ತಿಗಳ ಉತ್ಪತ್ತಿಗೆ ಕಾರಣಳೂ ಮತ್ತು ಪರತರಳೂ ಆದ ಪ್ರಕೃತಿದೇವಿಯನ್ನು ಸರ್ವಕ್ಕೂ ಆಧಾರವಾಗಿ ಸೃಷ್ಟಿಮಾಡಿದನೋ ಆತನಿಗೆ ವಂದನೆಗಳು.

ಜಗತ್ಸ್ರಷ್ಟಾ ಸ್ವಯಂ ಬ್ರಹ್ಮಾ ನಿಯತೋ ಯಸ್ಯ ಸೇವಯಾ ।
ಪಾತಾ ವಿಷ್ಣುಶ್ಚ ಜಗತಾಂ ಸಂಹರ್ತಾ ಶಂಕರಃ ಸ್ವಯಂ ॥ ೧೨ ॥

ಧ್ಯಾಯಂತೇ ಯಂ ಸುರಾಸ್ಸರ್ವೇ ಮುನಯೋ ಮನವಸ್ತಥಾ ।
ಸಿದ್ಧಾಶ್ಚ ಯೋಗಿನಃ ಸಂತಃ ಸಂತತಂ ಪ್ರಕೃತೇಃ ಪರಂ ॥ ೧೩ ॥

ಸಾಕಾರಂ ಚ ನಿರಾಕಾರಂ ಪರಂ ಸ್ವೇಚ್ಛಾಮಯಂ ವಿಭುಂ ।
ವರಂ ವರೇಣ್ಯಂ ವರದಂ ವರಾರ್ಹಂ ವರಕಾರಣಂ ॥ ೧೪ ॥

ತಪಃ ಫಲಂ ತಪೋ ಬೀಜಂ ತಪಸಾಂ ಚ ಫಲಪ್ರದಂ ।
ಸ್ವಯಂ ತಪಃ ಸ್ವರೂಪಂ ಚ ಸರ್ವರೂಪಂ ಚ ಸರ್ವತಃ ॥ ೧೫ ॥

---

೧೨. ಜಗತ್ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನೂ, ರಕ್ಷಕನಾದ ವಿಷ್ಣುವೂ, ಸಂಹಾರಕನಾದ ಶಿವನೂ ಯಾವ ಪರಮಾತ್ಮನ ಸೇವೆಯಲ್ಲಿ ಅನವರತವೂ ಆಸಕ್ತರಾಗಿರುವರೋ ಅಂಥ ಪರಮಾತ್ಮನಿಗೆ ಇದೋ ಭಕ್ತಿಪೂರ್ವಕ ವಂದನೆಗಳು.

೧೩. ಪ್ರಕೃತಿದೇವಿಗಿಂತಲೂ ಪರತರನಾದ ಯಾವ ಪರಬ್ರಹ್ಮನನ್ನು, ದೇವತೆಗಳು, ಮುನಿಗಳು, ಚತುರ್ದಶಮನುಗಳು, ಸಿದ್ಧರು, ಯೋಗಿಗಳು ಮತ್ತು ಸಂತರು ಯಾವಾಗಲೂ ಭಜಿಸುವರೋ, ಅನಾದಿಯಾದ ಆ ಪರಮಾತ್ಮನನ್ನು ಭಜಿಸುವನು.

೧೪. ಭಕ್ತರಿಗೆ ಸಾಕಾರನೂ, ತಾನು ಮಾತ್ರ ನಿರಾಕಾರ ಪರಂಜ್ಯೋತಿಯೂ ಶ್ರೇಷ್ಠರಿಗೆಲ್ಲ ಶ್ರೇಷ್ಠನೂ, ಸರ್ವರಿಗೂ ವರದಾತನೂ ಆಗಿರುವ ಆ ಪರಮಪವಿತ್ರನಾದ ಪರಮಾತ್ಮನಿಗೆ ಇದೋ ವಂದನೆಗಳು.

೧೫. ತಪಸ್ಸು ಮಾಡಲು ಆಧಾರನೂ ಅವನೇ. ತಪೋರೂಪನೂ ಅವನೇ . ತಪಸ್ಸಿನ ಫಲದಾತೃವೂ ಅವನೇ. ಇಂಥ ಸರ್ವರೂಪಿಯಾದ ಆ ಪರಮಾತ್ಮನ ದಿವ್ಯಪಾದಾರವಿಂದಗಳಿಗೆ ಇದೋ ನಮಿಸುವೆನು.

ಸರ್ವಾಧಾರಂ ಸರ್ವಬೀಜಂ ಕರ್ಮ ತತ್ಕರ್ಮಣಾಂ ಫಲಂ ।
ತೇಷಾಂ ಚ ಫಲದಾತಾರಂ ತದ್ಬೀಜಂ ಕ್ಷಯಕಾರಣಂ ॥ ೧೬ ॥

ಸ್ವಯಂ ತೇಜಃಸ್ವರೂಪಂ ಚ ಭಕ್ತಾನುಗ್ರಹವಿಗ್ರಹಂ ।
ಸೇವಾ ಧ್ಯಾನಂ ನ ಘಟತೇ ಭಕ್ತಾನಾಂ ವಿಗ್ರಹಂ ವಿನಾ ॥ ೧೭ ॥

ತತ್ತೇಜೋ ಮಂಡಲಾಕಾರಂ ಸೂರ್ಯಕೋಟಿಸಮಪ್ರಭಂ ।
ಅತೀವ ಕಮನೀಯಂ ಚ ರೂಪಂ ತತ್ರ ಮನೋಹರಂ ॥ ೧೮ ॥

ನವೀನನೀರದಶ್ಯಾಮಂ ಶರತ್ಪಂಕಜಲೋಚನಂ ।
ಶರತ್ಪಾರ್ವಣಚಂದ್ರಾಸ್ಯಮೀಷದ್ಧಾಸ್ಯಸಮನ್ವಿತಂ ॥ ೧೯ ॥

ಕೋಟಿಕಂದರ್ಪಲಾವಣ್ಯಲೀಲಾಧಾಮಮನೋಹರಂ ।
ಚಂದನೋಕ್ಷಿತಸರ್ವಾಂಗಂ ರತ್ನಭೂಷಣಭೂಷಿತಂ ॥ ೨೦ ॥

---

೧೬. ಎಲ್ಲಕ್ಕೂ ಆಧಾರನೂ, ಕಾರಣನೂ, ಕರ್ಮಸ್ವರೂಪನೂ, ಕರ್ಮಫಲ ದಾತೃವೂ ಮತ್ತು ಕರ್ಮಕ್ಷಯಕ್ಕೆ ಮೂಲಕಾರಣನೂ ಆದ ಪರಮಾತ್ಮನನ್ನು ಅಭಿವಂದಿಸುವೆನು.

೧೭. ತಾನು ಮಾತ್ರ ನಿರಾಕಾರಪರಂಜ್ಯೋತಿ ಸ್ವರೂಪನಾದರೂ ಭಕ್ತರ ಸೇವೆಗೂ, ಧ್ಯಾನಕ್ಕೂ ಅವಲಂಬನವಾದ ದಿವ್ಯಸುಂದರಾಕಾರವನ್ನು ಧರಿಸಿ ಭಕ್ತರಿಗೆ ಅನುಗ್ರಹಮಾಡುವ ಪರಮಾತ್ಮನನ್ನು ನಮಿಸುವೆನು.

೧೮. ಆ ಪರಮಾತ್ಮನ ತೇಜಸ್ಸು ವರ್ತುಳಾಕಾರವೂ, ಕೋಟಿಸೂರ್ಯರ ಕಾಂತಿಯುತವೂ ಆದುದು. ಆ ತೇಜೋಮಂಡಲದೊಳಗಿನ ರೂಪವು ಬಹಳ ಸುಂದರವಾಗಿಯೂ, ಮನೋಹರವಾಗಿಯೂ ಇರುವುದು.

೧೯–೨೧. ಪರಮಾತ್ಮನ ಸಾಕಾರಮೂರ್ತಿಯು, ಮೇಘಶ್ಯಾಮಲವರ್ಣ ದಿಂದ ಕಂಗೊಳಿಸುವುದು. ಶರದೃತುವಿನ ತಾವರೆಯ ಎಸಳನ್ನು ಹೋಲುವ ಕಣ್ಣು ಗಳಿಂದಲೂ, ಪೂರ್ಣಿಮೆಯ ಚಂದ್ರನಂತೆ ಹೊಳೆಯುವ ನಗುಮುಖದಿಂದಲೂ, ಕೋಟಿಮನ್ಮಥರ ಮನೋಹರವಾದ ಲಾವಣ್ಯವನ್ನು ಧಿಕ್ಕರಿಸುವಂತಿರುವುದು

ದ್ವಿಭುಜಂ ಮುರಲೀಹಸ್ತಂ ಪೀತಕೌಶೇಯವಾಸಸಂ ।
ಕಿಶೋರವಯಸಂ ಶಾಂತಂ ರಾಧಾಕಾಂತಮನಂತಕಂ ॥ ೨೦ ॥

ಗೋಪಾಂಗನಾಪರಿವೃತಂ ಕುತ್ರಚಿನ್ನಿರ್ಜನೇ ವನೇ ।
ಕುತ್ರಚಿದ್ರಾಸಮಧ್ಯಸ್ಥಂ ರಾಧಯಾ ಪರಿಸೇವಿತಂ ॥ ೨೨ ॥

ಕುತ್ರಚಿದ್ಗೋಪವೇಷಂ ಚ ವೇಷ್ಟಿತಂ ಗೋಪಬಾಲಕೈಃ ।
ಶತಶೃಂಗಾಚಲೋತ್ಕೃಷ್ಟೇ ರಮ್ಯೇ ವೃಂದಾವನೇ ವನೇ ॥ ೨೩ ॥

ನಿಕರಂ ಕಾಮಧೇನೂನಾಂ ರಕ್ಷಂತಂ ಶಿಶುರೂಪಿಣಂ ।
ಗೋಲೋಕೇ ವಿರಜಾತೀರೇ ಪಾರಿಜಾತವನೇ ವನೇ ॥
ವೇಣುಂ ಕ್ವಣಂತಂ ಮಧುರಂ ಗೋಪೀಸಮ್ಮೋಹಕಾರಣಂ ॥ ೨೪ ॥

ನಿರಾಮಯೇ ಚ ವೈಕುಂಠೇ ಕುತ್ರಚಿಚ್ಚ ಚತುರ್ಭುಜಂ ।
ಲಕ್ಷ್ಮೀಕಾಂತಂ ಪಾರ್ಷದೈಶ್ಚ ಸೇವಿತಂ ಚ ಚತುರ್ಭುಜೈಃ ॥ ೨೫ ॥

ವೈಗೆಲ್ಲಾ ಚಂದನಗಂಧವನ್ನು ಲೇಪಿಸಿಕೊಂಡು, ರತ್ನಾಲಂಕಾರಗಳಿಂದ ಅಲಂಕೃತ ನಾಗಿ, ಪೀತಾಂಬರವನ್ನು ಧರಿಸಿ, ಕೈಯಲ್ಲಿ ಕೊಳಲನ್ನು ಹಿಡಿದಿರುವ ಬಾಲಕವೇಷ ಧಾರಿಯಾದ ರಾಧಾರಮಣನಿಗೆ ನಮಿಸದವರಾರು ?

೨೨–೨೪. ಆ ಕೃಷ್ಣಪರಮಾತ್ಮನು, ಒಮ್ಮೆ ನಿರ್ಜನವಾದ ವನದಲ್ಲಿ ಗೋಪಸ್ತ್ರೀ ಪರಿವೃತನಾಗಿಯೂ, ಇನ್ನೊಮ್ಮೆ ರಾಸಮಂಡಲದಲ್ಲಿ ರಾಧೆಯಿಂದ ಸೇವಿತನಾಗಿಯೂ, ಮತ್ತೊಮ್ಮೆ ಗೋಪಾಲಕನಾಗಿ ಗೋಪಬಾಲಕರೊಡನೆ ಉತ್ಕೃಷ್ಟವಾದ ಶತಶೃಂಗ ಪರ್ವತದಲ್ಲೋ ಬೃಂದಾವನದಲ್ಲೋ ಗೋವುಗಳ ಸಮೂಹವನ್ನು ರಕ್ಷಣೆಮಾಡು ತ್ತಲೂ, ಅಲ್ಲದಿದ್ದರೆ ಗೋಲೋಕದಲ್ಲಿರುವ ವಿರಜಾನದಿಯ ದಡದ ಪಾರಿಜಾತ ವನದಲ್ಲಿ ಗೋಪಿಯರನ್ನು ಮೋಹಗೊಳಿಸಲು ವೇಣುಗಾನಮಾಡುತ್ತಲೂ, ವಿಹರಿಸುವನು.

೨೫. ಆಧಿವ್ಯಾಧಿರಹಿತವಾದ ವೈಕುಂಠದಲ್ಲಿ ನಾರಾಯಣರೂಪನಾಗಿ ಲಕ್ಷ್ಮೀ ಪತಿ ಎನಿಸಿಕೊಂಡು–ಚತುರ್ಭುಜಧಾರಿಯಾಗಿ ಚತುರ್ಭುಜರಾದ ಪಾರ್ಷದರಿಂದ ಸೇವೆ ಹೊಂದುವವನೂ ಆ ಪರಮಾತ್ಮನೇ

ಕುತ್ರಚಿತ್ಸ್ವಾಂಶರೂಪೇಣ ಜಗತಾಂ ಪಾಲನಾಯ ಚ || ೨೬ ||

ಶ್ವೇತದ್ವೀಪೇ ವಿಷ್ಣುರೂಪಂ ಪದ್ಮಯಾ ಪರಿಷೇವಿತಂ |
ಕುತ್ರಚಿತ್ಸ್ವಾಂಶಕಲಯಾ ಬ್ರಹ್ಮಾಂಡೇ ಬ್ರಹ್ಮರೂಪಿಣಂ || ೨೭ ||

ಶಿವಸ್ವರೂಪಂ ಶಿವದಂ ಸ್ವಾಂಶೇನ ಶಿವರೂಪಿಣಂ |
ಸ್ವಾತ್ಮನಃ ಷೋಡಶಾಂಶೇನ ಸರ್ವಾಧಾರಂ ಪರಾತ್ಪರಂ |
ಸ್ವಯಂ ಮಹದ್ವಿರಾಡ್ರೂಪಂ ವಿಶ್ವೌಘಂ ಯಸ್ಯ ಲೋಮಸು || ೨೮ ||

ಲೀಲಯಾ ಸ್ವಾಂಶಕಲಯಾ ಜಗತಾಂ ಪಾಲನಾಯ ಚ |
ನಾನಾವತಾರಂ ಬಿಭ್ರಂತಂ ಬೀಜಂ ತೇಷಾಂ ಸನಾತನಂ || ೨೯ ||

ವಸಂತಂ ಕುತ್ರಚಿತ್ಸಂತಂ ಯೋಗಿನಾಂ ಹೃದಯೇ ಸತಾಂ || ೩೦ ||

೨೬–೨೭. ಜಗತ್ಪರಿಪಾಲನೆಗಾಗಿ ತನ್ನ ಪೂರ್ಣಾಂಶದಿಂದ, ವಿಷ್ಣುರೂಪಧಾರಿಯಾಗಿ ಶ್ವೇತದ್ವೀಪದಲ್ಲಿ ನೆಲೆಸಿ ಲಕ್ಷ್ಮೀದೇವಿಯಿಂದ ಸೇವೆಪೊಂದುವಾತನೂ ಆ ಪರಮಾತ್ಮನೇ. ಬ್ರಹ್ಮಾಂಡದ ಸೃಷ್ಟಿಗಾಗಿ ತನ್ನದೊಂದು ಕಲೆಯಿಂದ ಚತುರ್ಮುಖಬ್ರಹ್ಮರೂಪನಾಗಿ ತೋರುವವನೂ ಆ ಪರಮಾತ್ಮನೇ.

೨೮. ತನ್ನ ಒಂದಂಶದಿಂದ ಶಿವನೆನಿಸಿಕೊಂಡು ಎಲ್ಲರಿಗೂ ಮಂಗಳದಾಯಕನೂ, ತನ್ನ ಹದಿನಾರನೆಯ ಒಂದಂಶದಿಂದ ಸರ್ವಾಧಾರನೂ ಪರಾತ್ಪರನೂ ಆದ ವಿರಾಟ್ಪುರುಷನ ರೂಪಧಾರಿಯಾಗಿ ಪ್ರಪಂಚವೆಲ್ಲವನ್ನೂ ತನ್ನ ರೋಮಕೂಪದಲ್ಲಿ ಅಡಗಿಸಿಕೊಳ್ಳಬಲ್ಲವನೂ ಆ ಪರಮಾತ್ಮನೇ.

೨೯. ಜಗತ್ತಿನಲ್ಲಿರುವ ದುಷ್ಟರ ಶಿಕ್ಷಣೆಗೂ, ಶಿಷ್ಟರ ರಕ್ಷಣೆಗೂ ಆಗಾಗ ಬೇರೆ ಬೇರೆ ಅವತಾರಮಾಡಿ ತನ್ನ ಲೀಲೆಯನ್ನು ತೋರಿಸುವವರೂ, ಆದಿಕಾರಣನಾದ ಪರಮಾತ್ಮನ ಅಂಶದಿಂದಲೇ ಜನಿಸಿದವರು.

೩೦–೩೧. ಯೋಗಿಶ್ರೇಷ್ಠರ ಹೃದಯದಲ್ಲಿ ಯಾವಾಗಲೂ ನೆಲೆಸಿರುವ, ಎಲ್ಲಾ ಪ್ರಾಣಿಗಳ ಶರೀರದಲ್ಲೂ ಪ್ರಾಣರೂಪನಾಗಿರುವ, ನಿರ್ಗುಣನೂ ಮತ್ತು ಸರ್ವ

ಪ್ರಾಣರೂಪಂ ಪ್ರಾಣಿನಾಂ ಚ ಪರಮಾತ್ಮಾನಮೀಶ್ವರಂ ।
ತಂ ಚ ಸ್ತೋತುಮಶಕ್ತಾಹಮಬಲಾ ನಿರ್ಗುಣಂ ವಿಭುಂ ॥ ೩೧ ॥

ನಿರ್ಲಕ್ಷ್ಯಂ ಚ ನಿರೀಹಂ ಚ ಸಾರಂ ವಾಙ್ಮನಸೋಃ ಪರಂ ।
ಯಂ ಸ್ತೋತುಮಕ್ಷಮೋಽನಂತಃ ಸಹಸ್ರವದನೇನ ಚ ॥ ೩೨ ॥

ಪಂಚವಕ್ತ್ರಶ್ಚತುರ್ವಕ್ತ್ರೋ ಗಜವಕ್ತ್ರಃ ಷಡಾನನಃ ।
ಯಂ ಸ್ತೋತುಂ ನ ಕ್ಷಮಾ ಮಾಯಾ ಮೋಹಿತಾ ಯಸ್ಯ ಮಾಯಯಾ॥೩೩॥

ಯಂ ಸ್ತೋತುಂ ನ ಕ್ಷಮಾ ಶ್ರೀಶ್ಚ ಜಡೀಭೂತಾ ಸರಸ್ವತೀ ।
ವೇದಾ ನ ಶಕ್ತಾ ಯಂ ಸ್ತೋತುಂ ಕೋ ವಾ ವಿದ್ವಾಂಶ್ಚ ವೇದವಿತ್ ॥ ೩೪ ॥

ಕಿಂ ಸ್ತೌಮಿ ತಮನೀಹಂ ಚ ಶೋಕಾರ್ತಾ ಸ್ತ್ರೀ ಪರಾತ್ಪರಂ ।
ಇತ್ಯುಕ್ತ್ವಾ ಸಾ ಚ ಗಾಂಧರ್ವೀ ವಿರರಾಮ ರುರೋದ ಚ ॥ ೩೫ ॥

ಶಕ್ತನೂ ಆದ ಆ ಪರಮಾತ್ಮನನ್ನು ಅಬಲೆಯಾದ ನಾನು ಹೊಗಳಿ ಮುಗಿಯಲು ಸಾಧ್ಯವೇ ?

೩೨-೩೫. "ಎಲೈ ಪರಮಾತ್ಮನೇ ! ಯಾವ ಗುರಿಯೂ, ಆಶೆಯೂ ಇಲ್ಲದ ಮತ್ತು ಮನೋವಾಕ್ಕುಗಳಿಗೆ ಅತೀತನಾದ ನಿನ್ನ ಗುಣಗಳನ್ನು ಸಾವಿರ ಬಾಯುಳ್ಳ ಆದಿಶೇಷನೂ, ಐದುಮುಖವುಳ್ಳ ಪರಮೇಶ್ವರನೂ, ಚತುರ್ಮುಖನಾದ ಬ್ರಹ್ಮನೂ, ಗಜಮುಖನೂ, ಷಣ್ಮುಖನೂ ಹೊಗಳಿ ಮುಗಿಯಲಾರರು. ನಿನ್ನನ್ನು ಹೊಗಳಲು ಹೊರಟ ಪ್ರಕೃತಿದೇವಿಯು ನಿನ್ನ ಮಾಯೆಗೆ ಮರುಳಾದಳು. ಲಕ್ಷ್ಮಿ, ಮತ್ತು ಸರಸ್ವತಿಯರು ನಿನ್ನನ್ನು ಹೊಗಳಲಾರದೆ ಜಡರಾದರು. ಚತುರ್ವೇದಗಳೂ ನಿನ್ನ ಗುಣಗಾನ ಮಾಡಲಾರದೆ ಹೋದುವು. ಹೀಗಿರುವಾಗ ವೇದವನ್ನೋದಿ ವಿದ್ವಾಂಸ ನೆನಿಸಿಕೊಂಡವನು ನಿನ್ನನ್ನು ಹೊಗಳಲು ಸಾಧ್ಯವೇ ! ಇಚ್ಛಾರಹಿತನೂ, ಪರಾತ್ಪರನೂ ಆದ ನಿನ್ನನ್ನು ದುಃಖಿತೆಯಾದ ನಾನೆಂತು ನುತಿಸಲಿ" ಎಂದು ಹೇಳುತ್ತಾ ಆ ಮಾಲಾವತಿಯು 'ಗೋಳಾಡಲಾರಂಭಿಸಿದಳು.

ಕೃಪಾನಿಧಿಂ ಪ್ರಣನಾಮ ಭಯಾರ್ತಾ ಚ ಪುನಃ ಪುನಃ ।
ಕೃಷ್ಣಶ್ಚ ಶಕ್ತಿಭಿಃ ಸಾರ್ಧಮಧಿಷ್ಠಾನಂ ಚಕಾರ ಹ　　॥ ೩೬ ॥
ಭರ್ತುರಸ್ಯಾಂತರೇ ತಸ್ಯಾಃ ಪರಮಾತ್ಮಾ ನಿರಾಕೃತಿಃ ।

ಉತ್ಥಾಯ ಶೀಘ್ರಂ ವೀಣಾಂ ಚ ಧೃತ್ವಾ ಸ್ನಾತ್ವಾ ಚ ವಾಸಸೀ　　॥ ೩೭ ॥

ಪ್ರಣನಾಮ ದೇವಸಂಘಂ ಬ್ರಾಹ್ಮಣಂ ಪುರತಃ ಸ್ಥಿತಂ ।
ನೇದುರ್ದುಂದುಭಯೋ ದೇವಾಃ ಪುಷ್ಪವೃಷ್ಟಿಂ ಚ ಚಕ್ರಿರೇ　　॥ ೩೮ ॥

ದೃಷ್ಟ್ವಾ ಚೋಪರಿದಂಪತ್ಯೋಃ ಪ್ರದದುಃ ಪರಮಾಶಿಷಂ ।
ಗಂಧರ್ವೋ ದೇವಪುರತೋ ನನರ್ತ ಚ ಜಗೌ ಕ್ಷಣಂ　　॥ ೩೯ ॥

ಜೀವಿತಂ ಪುರತಃ ಪ್ರಾಪ ದೇವಾನಾಂ ಚ ವರೇಣ ಚ ।
ಜಗಾಮ ಪತ್ನ್ಯಾ ಸಾರ್ಧಂ ಚ ಪಿತ್ರಾ ಮಾತ್ರಾ ಚ ಹರ್ಷಿತಃ　　॥ ೪೦ ॥

---

೩೬. ಭಯಾಕುಲಿತಳಾಗಿ ಮತ್ತೆ ಮತ್ತೆ ದಯಾಮಯನಾದ ಪರಮಾತ್ಮನಿಗೆ ಮಾಲಾವತಿಯು ನಮಿಸಲು, ನಿರಾಕಾರನಾದ ಕೃಷ್ಣಪರಮಾತ್ಮನೂ ಕೂಡ ಆಕೆಯ ದೇಹದಲ್ಲಿ ಎಲ್ಲಾ ಶಕ್ತಿಗಳೊಂದಿಗೆ ಅಧಿಷ್ಠಾನವನ್ನು ಮಾಡಿದನು.

೩೭–೩೮. ಕೂಡಲೇ ಉಪಬರ್ಹಣನು ನಿದ್ರೆಯಿಂದ ಎಚ್ಚೆತ್ತವನಂತೆ ಮೇಲಕ್ಕೆ ಎದ್ದು ಸ್ನಾನಮಾಡಿ, ಶುಭ್ರವಸ್ತ್ರಗಳನ್ನುಟ್ಟು, ಕೈಯಲ್ಲಿ ವೀಣೆಯನ್ನು ಧರಿಸಿ, ತನ್ನ ಮುಂದಿರುವ ದೇವತೆಗಳಿಗೂ, ಬ್ರಹ್ಮಚಾರಿಗೂ ಭಕ್ತಿಯಿಂದ ವಂದಿಸಿದನು. ಆಗ ಎಲ್ಲೆಲ್ಲೂ ನಗಾರಿಯ ಶಬ್ದವಾಗಿ ದೇವತೆಗಳು ಹೂಮಳೆಗರೆದರು.

೩೯. ಆ ದಂಪತಿಗಳಿಬ್ಬರಿಗೂ ದೇವತೆಗಳು ಆಶೀರ್ವದಿಸಿದರು. ಗಂಧರ್ವನಾದ ಉಪಬರ್ಹಣನೂ ಕೂಡ ದೇವತೆಗಳ ಮುಂದೆ ಕ್ಷಣಕಾಲ ಹಾಡಿ, ನರ್ತನ ಮಾಡಿದನು.

೪೦. ದೇವತೆಗಳ ವರದಿಂದ ಮೊದಲಿನಂತೆಯೇ ಜೀವವನ್ನು ಪಡೆದು ಹೆಂಡತಿಯೊಡನೆಯೂ, ಪುನರ್ಜೀವಿತರಾದ ತಂದೆತಾಯಿಗಳೊಡನೆಯೂ ಉಪಬರ್ಹಣನು ಸಂತೋಷದಿಂದ ತನ್ನ ಮನೆಯನ್ನು ಸೇರಿದನು.

ಉಪಬರ್ಹಣಗಂಧರ್ವೋ ಗಂಧರ್ವನಗರಂ ಪುನಃ ।
ಮಾಲಾವತೀ ರತ್ನಕೋಟಿಂ ಧನಾನಿ ವಿವಿಧಾನಿ ಚ ॥ ೪೧ ॥

ಪ್ರದದೌ ಬ್ರಾಹ್ಮಣೇಭ್ಯಶ್ಚ ಭೋಜಯಾಮಾಸ ತಾನ್ಸತೀ ।
ವೇದಾಂಶ್ಚ ಪಾಠಯಾಮಾಸ ಕಾರಯಾಮಾಸ ಮಂಗಲಂ ॥ ೪೨ ॥

ಮಹೋತ್ಸವಂ ಚ ವಿವಿಧಂ ಹರೇರ್ನಾಮ್ನೈಕಮಂಗಲಂ ।
ಜಗ್ಮುರ್ದೇವಾಶ್ಚ ಸ್ವಸ್ಥಾನಂ ವಿಪ್ರರೂಪೀ ಹರಿಃ ಸ್ವಯಂ ॥ ೪೩ ॥

ಏತತ್ತೇ ಕಥಿತಂ ಸರ್ವಂ ಸ್ತವರಾಜಂ ಚ ಶೌನಕ ।
ಇದಂ ಸ್ತೋತ್ರಂ ಪುಣ್ಯರೂಪಂ ಪೂಜಾಕಾಲೇ ತು ಯಃ ಪಠೇತ್ ॥ ೪೪ ॥

ಹರಿಭಕ್ತಿಂ ಹರೇರ್ದಾಸ್ಯಂ ಲಭತೇ ವೈಷ್ಣವೋ ಜನಃ ।
ವರಾರ್ಥೀ ಯಃ ಪಠೇದ್ಭಕ್ತ್ಯಾ ಚಾಸ್ತಿಕಃ ಪರಮಾಸ್ಥಯಾ ॥
ಧರ್ಮಾರ್ಥಕಾಮಮೋಕ್ಷಾಣಾಂ ನಿಶ್ಚಿತಂ ಲಭತೇ ಫಲಂ ॥ ೪೫ ॥

೪೧–೪೩. ಉಪಬರ್ಹಣನು ಗಂಧರ್ವನಗರಕ್ಕೆ ಪುನರ್ಜೀವಿತನಾಗಿ ಬಂದ ಆನಂದವಲ್ಲಿ ಮಾಲಾವತಿಯು ಅನೇಕ ಬ್ರಾಹ್ಮಣರಿಂದ ವೇದಘೋಷವನ್ನೂ, ಮಂಗಳಕಾರ್ಯಗಳನ್ನೂ ಮಾಡಿಸಿ, ಅವರೆಲ್ಲರನ್ನೂ ಮಿಷ್ಟಭೋಜನದಿಂದ ತೃಪ್ತಿಗೊಳಿಸಿ, ಅವರಿಗೆ ಧನಕನಕಾದಿಗಳನ್ನು ದಾನಕೊಟ್ಟು ಉಪಚರಿಸಿದಳು. ಅನವರತವೂ ಹರಿನಾಮಸ್ಮರಣೆಮಾಡಿದಳು ಇತ್ತ ಕಡೆ ದೇವತೆಗಳೂ, ಬ್ರಾಹ್ಮಣರೂಪಧಾರಿಯಾದ ಪರಮಾತ್ಮನೂ ತಮ್ಮ ತಮ್ಮ ಸ್ಥಳಕ್ಕೆ ಹಿಂತಿರುಗಿದರು.

೪೪–೪೫. ಸೌತಿ:—ಎಲೈ, ಶೌನಕನೇ, ಮಾಲಾವತಿಯು ರಚಿಸಿದ ಈ ಮಂಗಳಸ್ತೋತ್ರವನ್ನು ವಿಷ್ಣುಭಕ್ತರು ಪೂಜಾಕಾಲದಲ್ಲಿ ಪಠಿಸಿದರೆ ಅಚಲವಾದ ಹರಿಭಕ್ತಿಯನ್ನೂ ಹರಿದಾಸ್ಯವನ್ನೂ ಪಡೆಯುವರು. ಇದನ್ನು ಶ್ರದ್ಧೆಯಿಂದ ಪಠಿಸಿದ ಆಸ್ತಿಕನು ಧಮಾರ್ಥಕಾಮ ಮೋಕ್ಷಗಳಲ್ಲಿ ತಾನು ಬಯಸಿದ್ದನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ವಿದ್ಯಾರ್ಥೀ ಲಭತೇ ವಿದ್ಯಾಂ ಧನಾರ್ಥೀ ಲಭತೇ ಧನಂ ॥ ೪೬ ॥

ಭಾರ್ಯಾರ್ಥೀ ಲಭತೇ ಭಾರ್ಯಾಂ ಪುತ್ರಾರ್ಥೀ ಲಭತೇ ಸುತಂ ।
ಧರ್ಮಾರ್ಥೀ ಲಭತೇ ಧರ್ಮಂ ಯಶೋಽರ್ಥೀ ಲಭತೇ ಯಶಃ ॥ ೪೭ ॥

ಭ್ರಷ್ಟರಾಜ್ಯೋ ಲಭೇದ್ರಾಜ್ಯಂ ಪ್ರಜಾಭ್ರಷ್ಟಃ ಪ್ರಜಾಂ ಲಭೇತ್ ।
ರೋಗಾರ್ತೋ ಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬಂಧನಾತ್ ॥

ಭಯಾನ್ಮುಚ್ಯೇತ ಭೀತಸ್ತು ಧನಂ ನಷ್ಟಧನೋ ಲಭೇತ್ ।
ದಸ್ಯುಗ್ರಸ್ತೋ ಮಹಾರಣ್ಯೇ ಹಿಂಸ್ರಜಂತು ಸಮನ್ವಿತಃ ॥
ದಾವಾಗ್ನಿದಗ್ಧೋ ಮುಚ್ಯೇತ ನಿಮಗ್ನಶ್ಚ ಜಲಾರ್ಣವೇ ॥ ೪೯ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಗಂಧರ್ವ-
ಜೀವದಾನೇ ಮಹಾಪುರುಷಸ್ತೋತ್ರಪ್ರಣಯನಂ ನಾಮ
ಅಷ್ಟಾದಶೋಽಧ್ಯಾಯಃ

೪೬–೪೯. ಈ ಸ್ತೋತ್ರವನ್ನು ಭಕ್ತಿಯಿಂದ ಪಾರಾಯಣಮಾಡುವವರಿಗೆ, ಬಯಸಿದ ವಿದ್ಯೆಯೂ, ಧನವೂ, ಪತ್ನೀಪುತ್ರರೂ ಲಭಿಸುವರು. ತಾವು ಆಶಿಸಿದ ಧರ್ಮ ಮತ್ತು ಕೀರ್ತಿಯೂ ಕೈಗೂಡುವುದು. ಕಳೆದು ಹೋದ ರಾಜ್ಯವೂ, ಕೈಬಿಟ್ಟ ಪ್ರಜೆಗಳೂ ಕೈ ಸೇರುವರು. ರೋಗಪೀಡಿತನು ರೋಗದಿಂದಲೂ, ಕಾರಾಗೃಹ ಬದ್ಧನು ಬಂಧನದಿಂದಲೂ, ಭೀತನು ಭಯದಿಂದಲೂ ವಿಮುಕ್ತನಾಗುವನು. ನಷ್ಟವಾದ ಧನವು ಪುನಃ ಲಭಿಸುವುದು. ಗೊಂಡಾರಣ್ಯದಲ್ಲಿ ಕಳ್ಳಕಾಕರಿಗೆ ಸಿಕ್ಕಿದವನೂ, ದುಷ್ಟ ಮೃಗಗಳ ಬಾಧೆಗೊಳಗಾದವನೂ, ಕಾಡು ಕಿಚ್ಚಿಗೆ ಸಿಲುಕಿದವನೂ, ಮಹಾಸಮುದ್ರದಲ್ಲಿ ಮುಳುಗಿದವನೂ, ತಮ್ಮ ತಮ್ಮ ಕಷ್ಟದಿಂದ ಪಾರಾಗುವರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಬ್ರಹ್ಮಖಂಡದಲ್ಲಿ ಮಹಾಪುರುಷ
ಸ್ತೋತ್ರದಿಂದ ಗಂಧರ್ವನು ಪುನರ್ಜೀವಿತನಾಗುವ
ಹದಿನೆಂಟನೆಯ ಅಧ್ಯಾಯವು ಮುಗಿದುದು.

ಪದಿನೆಂಟನೆಯ ಅಧ್ಯಾಯದ ಸಾರಾಂಶವು

ಬ್ರಹ್ಮಚಾರಿಯ ಮಾತಿನಂತೆ ದೇವತೆಗಳೆಲ್ಲರೂ ಮಾಲಾವತಿ ಇದ್ದೆಡೆಗೆ ಬಂದು ಉಪಬರ್ಹಣನ ಶರೀರದಲ್ಲಿ ತಮ್ಮ ತಮ್ಮ ಶಕ್ತಿಯನ್ನು ಆವಾಹನೆಮಾಡಿದರು. ಏನಾದರೇನು? ಆತ್ಮನಿಲ್ಲದ ಮೇಲೆ ಉಳಿದ ಶಕ್ತಿ ಎಲ್ಲವೂ ವಿಫಲ. ಆದ್ದರಿಂದ ಉಪಬರ್ಹಣನು ಇನ್ನೂ ಶವಸದೃಶನಾಗಿಯೇ ಬಿದ್ದಿದ್ದನು. ಆಗ ಬ್ರಹ್ಮನ ಉಪದೇಶ ದಂತೆ ಮಾಲಾವತಿಯು ಮಿಂದು ಶುಚಿಯಾಗಿ ಭಕ್ತಿಯಿಂದ ಶ್ರೀಕೃಷ್ಣಪರಮಾತ್ಮನನ್ನು ವಿವಿಧವಾಗಿ ಹೊಗಳಿದಳು. ಆಕೆಯ ಭಕ್ತಿಗೆ ಮೆಚ್ಚಿ ಕೃಷ್ಣಪರಮಾತ್ಮನು ಆಕೆಯ ಪತಿಗೆ ಜೀವದಾನ ಮಾಡಿದನು. ಕೂಡಲೇ ಗಂಧರ್ವನು ಎದ್ದು ಸ್ನಾನಮಾಡಿ ಶುಭ್ರವಸ್ತ್ರಧಾರಿಯಾಗಿ ಪರಮಾತ್ಮನನ್ನೂ ದೇವತೆಗಳನ್ನು ಕುರಿತು ಹಾಡಿ ನರ್ತಿಸಿದನು. ದೇವತೆಗಳೂ ಆ ದಂಪತಿಗಳ ಮೇಲೆ ಹೂಮಳೆಗರೆದು, ಆಶೀರ್ವದಿಸಿ ತಮ್ಮ ತಮ್ಮ ಸ್ಥಾನಕ್ಕೆ ಹಿಂತಿರುಗಿದರು. ಇತ್ತ ಮಾಲಾವತಿಯು, ತನ್ನ ಪತಿಯು ಜೀವಿತನಾದ ಆನಂದಕ್ಕಾಗಿ ಮಹೋತ್ಸವಗಳನ್ನು ನಡೆಸಿ, ಬ್ರಾಹ್ಮಣರನೇಕರನ್ನು ಊಟೋಪಚಾರಗಳಿಂದ ತುಷ್ಟಿಬಡಿಸಿ, ಧನಕನಕಾದಿ ವಸ್ತುಗಳನ್ನು ದಾನ ಮಾಡಿದಳು.

ಮಹಾಪತಿವ್ರತೆಯಾದ ಮಾಲಾವತಿಯು ಪರಮಾತ್ಮನನ್ನು ಒಲಿಸಿಕೊಳ್ಳಲು ಪಠಿಸಿದ ಸ್ತೋತ್ರಗಳನ್ನು ಯಾರು, ಯಾವ ಫಲಾಪೇಕ್ಷೆಯಿಂದ ಪಠಿಸಿದರೂ, ಆ ಫಲ ವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಏಕೋನವಿಂಶೋಽಧ್ಯಾಯಃ ॥

॥ ಸೌತಿರುವಾಚ ॥

ಮಾಲಾವತೀ ಧನಂ ದತ್ವಾ ಬ್ರಾಹ್ಮಣೇಭ್ಯಃ ಪ್ರಹರ್ಷಿತಾ ।
ಚಕಾರ ವಿವಿಧಂ ವೇಷಂ ಸ್ವಾತ್ಮನಃ ಸ್ವಾಮಿನಃ ಕೃತೇ ॥ ೧ ॥

ಭರ್ತುಶ್ಚಕಾರ ಶುಶ್ರೂಷಾಂ ಪೂಜಾಂ ಚ ಸಮಯೋಚಿತಾಂ ।
ತೇನ ಸಾರ್ಧಂ ಸುರಸಿಕಾ ರೇಮೇ ಸಾ ಸುಚಿರಂ ಮುದಾ ॥ ೨ ॥

ಮಹಾಪುರುಷಸ್ತೋತ್ರಂ ಚ ಪೂಜಾಂ ಚ ಕವಚಂ ಮನುಂ ।
ವಿಸ್ಮೃತಂ ಬೋಧಯಾಮಾಸ ಸ್ವಯಂ ರಹಸಿ ಸುವ್ರತಾ ॥ ೩ ॥

ಹತ್ತೊಂಭತ್ತನೆಯ ಅಧ್ಯಾಯವು

೧. ಸೂತಪುತ್ರ :—ಇಂತು ಮಾಲಾವತಿಯು ಬ್ರಾಹ್ಮಣರಿಗೆ ಯಥೇಚ್ಛವಾಗಿ ದ್ರವ್ಯದಾನಮಾಡಿ ತನ್ನ ಪತಿದೇವನ ಮನೋಭಿಪ್ರಾಯಕ್ಕೆ ತಕ್ಕಂತೆ ತಾನು ವಿವಿಧ ವೇಷಭೂಷಿತಳಾಗಿ ಅವನನ್ನು ಅನುಸರಿಸಿಕೊಂಡಿದ್ದಳು.

೨. ಕಾಲಾನುಗುಣವಾಗಿ ತನ್ನ ಪತಿದೇವನಿಗೆ ಸೇವೆಗೈಯುತ್ತಾ ರಸಿಕಳಾದ ಆಕೆಯು ಆತನೊಡನೆ ಬಹಳಕಾಲ ವಿಹರಿಸುತ್ತಾ ಸಂತೋಷದಿಂದಿದ್ದಳು.

೩. ತಮ್ಮ ಸುಖಸಂತೋಷದಲ್ಲಿ ತನ್ನ ಪತಿದೇವನು ಮರೆತ ವಿಷ್ಣುವಿನ ಸ್ತೋತ್ರ, ಪೂಜೆ, ಕವಚ ಮತ್ತು ಮಂತ್ರಗಳನ್ನು ಪುನಃ ಪಡೆಯಲು ಏಕಾಂತದಲ್ಲಿ ಆ ಪತಿವ್ರತೆಯು ತನ್ನ ಪತಿಯ ನೆನಪಿಗೆ ತಂದಳು.

ಪುರಾ ದತ್ತಂ ವಸಿಷ್ಠೇನ ಸ್ತೋತ್ರಪೂಜಾದಿಕಂ ಹರೇಃ ।
ಗಂಧರ್ವಾಯ ಚ ಮಾಲತ್ಯೈ ಮಂತ್ರಮೇಕಂ ಚ ಪುಷ್ಕರೇ ॥ ೪ ॥

ವಿಸ್ಮೃತಂ ಸ್ತೋತ್ರಕವಚಂ ವಸಿಷ್ಠಶ್ಚ ಕೃಪಾನಿಧಿಃ ।
ಗಂಧರ್ವರಾಜಂ ರಹಸಿ ಬೋಧಯಾಮಾಸ ಶೂಲಿನಃ ॥ ೫ ॥

ಏವಂ ಚಕಾರ ರಾಜ್ಯಂ ಚ ಕುಬೇರಭವನೋಪಮೇ ।
ಆಶ್ರಮೇ ಪರಮಾನಂದೋ ಗಂಧರ್ವೋ ಬಾಂಧವೈಃ ಸಹ ॥ ೬ ॥

ಯಥಾ ತಥಾ ಗತಾಭಿಶ್ಚ ಸ್ತ್ರೀಭಿರನ್ಯಾಭಿರೇವ ಚ ।
ಆಗತ್ಯ ತಾಭಿಃ ಸ್ವಸ್ವಾಮೀ ಸಂಪ್ರಾಪ್ತಃ ಪರಯಾ ಮುದಾ ॥ ೭ ॥

॥ ಶೌನಕ ಉವಾಚ ॥

ಕಿಂ ಸ್ತೋತ್ರಂ ಕವಚಂ ವಿಷ್ಣೋರ್ಮಂತ್ರಪೂಜಾವಿಧಿಃ ಪುರಾ ।
ದತ್ತೋ ವಸಿಷ್ಠಸ್ತಾಭ್ಯಾಂ ಚ ತಂ ಭವಾನ್ವಕ್ತುಮರ್ಹತಿ ॥ ೮ ॥

೪–೫. ಮಹರ್ಷಿಯಾದ ವಸಿಷ್ಠನು ಹಿಂದೆ ಪುಷ್ಕರಕ್ಷೇತ್ರದಲ್ಲಿ ಉಪಬರ್ಹಣನಿಗೂ, ಮಾಲಾವತೀದೇವಿಗೂ ವಿಷ್ಣು ಮತ್ತು ಮಹೇಶ್ವರರ ಸ್ತೋತ್ರ, ಪೂಜೆ ಮತ್ತು ಕವಚದ ವಿಧಾನಗಳನ್ನು ಉಪದೇಶಿಸಿದ್ದನು. ಜನ್ಮಾಂತರ ಹೊಂದಿ ಮರೆತ ಅದೇ ಕವಚಾದಿಗಳನ್ನು ದಯಾಮಯನಾದ ವಸಿಷ್ಠನು ಪುನಃ ಅವನ ಪ್ರಾರ್ಥನೆಯಂತೆ ಆತನಿಗೆ ಉಪದೇಶಿಸಿದನು.

೬. ಅನಂತರ ಕುಬೇರನ ಮಂದಿರಕ್ಕೆ ಸಮನಾದ ತನ್ನ ಆಶ್ರಮದಲ್ಲಿ ಗಂಧರ್ವನಾದ ಉಪಬರ್ಹಣನು ತನ್ನ ಇಷ್ಟಮಿತ್ರರೊಡನೆ ರಾಜ್ಯಭೋಗವನ್ನನುಭವಿಸಿ ಕೊಂಡಿದ್ದನು.

೭. ಆತನ ಉಳಿದ ಪತ್ನಿಯರೂ ಆತನು ಪುನರ್ಜೀವಿತನಾದುದನ್ನು ಕೇಳಿ ಸಂತುಷ್ಟರಾಗಿ ಬಂದು ಆತನೊಡಗೂಡಿದರು. ಇಂತು ಉಪಬರ್ಹಣನು ತನ್ನ ಆಪ್ತೇಷ್ಟರೊಡನೆ ಸುಖಸಂತೋಷದಿಂದ ಕಾಲವನ್ನು ಕಳೆಯುತಿದ್ದನು.

೮–೧೦. ಶೌನಕ :—ಮಹರ್ಷಿಯಾದ ವಸಿಷ್ಠನು ಗಂಧರ್ವರಾಜನಾದ ಉಪಬರ್ಹಣನಿಗೂ ಮತ್ತು ಮಾಲಾವತಿಗೂ ಉಪದೇಶಿಸಿದ ವಿಷ್ಣುವಿನ ಕವಚ,

ದ್ವಾದಶಾಕ್ಷರಮಂತ್ರಂ ಚ ಶೂಲಿನಃ ಕವಚಾದಿಕಂ ।
ದತ್ತಂ ಗಂಧರ್ವರಾಜಾಯ ವಸಿಷ್ಠೇನ ಚ ಕಿಂ ಪುರಾ ॥ ೯ ॥

ತದಪಿ ಬ್ರೂಹಿಹೇ ಸೌತೇ ಶ್ರೋತುಂ ಕೌತೂಹಲಂ ಮಮ ।
ಶಂಕರಸ್ತೋತ್ರಕವಚಂ ಮಂತ್ರಂ ದುರ್ಗತಿನಾಶನಂ ॥ ೧೦ ॥

॥ ಸೌತಿರುವಾಚ ॥

ತುಷ್ಟಾವ ಯೇನ ಸ್ತೋತ್ರೇಣ ಮಾಲತೀ ಪರಮೇಶ್ವರಂ ।
ತದೇವ ಸ್ತೋತ್ರಂ ದತ್ತಂ ಚ ಮಂತ್ರಂ ಚ ಕವಚಂ ಶೃಣು ॥ ೧೧ ॥

ಓಂ ನಮೋ ಭಗವತೇ ರಾಸಮಂಡಲೇಶಾಯ ಸ್ವಾಹಾ ।
ಇದಂ ಮಂತ್ರಂ ಕಲ್ಪತರುಂ ಪ್ರದದೌ ಷೋಡಶಾಕ್ಷರಂ ॥ ೧೨ ॥

ಪುರಾ ದತ್ತಂ ಕುಮಾರಾಯ ಬ್ರಹ್ಮಣಾ ಪುಷ್ಕರೇ ಹರೇಃ ।
ಪುರಾ ದತ್ತಂ ಚ ಕೃಷ್ಣೇನ ಗೋಲೋಕೇ ಶಂಕರಾಯ ಚ ॥ ೧೩ ॥

ಸ್ತೋತ್ರ, ಮಂತ್ರಪೂಜಾವಿಧಿಗಳಾವುವು? ಮತ್ತು ಶೂಲಿಯ ದ್ವಾದಶಾಕ್ಷರ ಮಂತ್ರ ಕವಚಗಳಾವುವು? ಪಾಪನಾಶಕಗಳಾದ ಅವೆರಡು ಮಂತ್ರಸ್ತೋತ್ರಾದಿಗಳಿಂದ ಗಂಧರ್ವನಿಗಾದ ಸತ್ಫಲವೇನು? ಎಂಬುದನ್ನು ತಿಳಿಯಲು ನನಗೆ ಬಹಳ ಕುತೂಹಲ ವಿರುವುದರಿಂದ ತಾವು ವಿವರಿಸಿ ಹೇಳಬೇಕು. ಶಂಕರನ ಸ್ತೋತ್ರ ಕವಚಾದಿಗಳು ಸಕಲರ ಕಷ್ಟಗಳನ್ನೂ ಪರಿಹರಿಸುವುವು.

೧೧. ಸೂತಪುತ್ರ :—ಮಾಲಾವತೀದೇವಿಯು ಪರಮಾತ್ಮನನ್ನು ಯಾವ ಸ್ತೋತ್ರದಿಂದ ಸ್ತುತಿಸಿ ಮೆಚ್ಚಿಸಿದಳೋ ಅದೇ ಸ್ತೋತ್ರವನ್ನೇ ವಸಿಷ್ಠರು ಗಂಧರ್ವ ರಾಜನಿಗೆ ಉಪದೇಶಿಸಿದರು. ಮಂತ್ರ ಮತ್ತು ಕವಚಗಳನ್ನು ಈ ಮುಂದೆ ವಿವರಿಸುವೆನು.

೧೨. ಕಲ್ಪವೃಕ್ಷದಂತೆ ಕೇಳಿದ್ದನ್ನು ಕೊಡುವ 'ಓಂ ನಮೋ ಭಗವತೇ ರಾಸ ಮಂಡಲೇಶಾಯ ಸ್ವಾಹಾ' ಎಂಬ ಹದಿನಾರಕ್ಷರದ ಕೃಷ್ಣಪರಮಾತ್ಮನ ದಿವ್ಯಮಂತ್ರ ವನ್ನು ವಸಿಷ್ಠನು ಗಂಧರ್ವನಿಗೆ ಉಪದೇಶಿಸಿದನು.

೧೩. ಈ ದಿವ್ಯ ಮಂತ್ರವನ್ನು ಪೂರ್ವದಲ್ಲಿ ಬ್ರಹ್ಮನು ತನ್ನ ವಾಸಸ್ಥಾನವಾದ ಪುಷ್ಕರಕ್ಷೇತ್ರದಲ್ಲಿ ಷಣ್ಮುಖನಿಗೆ ಉಪದೇಶಿಸಿದನು. ಕೃಷ್ಣಪರಮಾತ್ಮನು ಗೋಲೋಕ ದಲ್ಲಿ ಶ್ರೀಹರಿಗೂ, ಶಂಕರನಿಗೂ ಉಪದೇಶಿಸಿದ ಮಂತ್ರವೇ ಅದು.

ಧ್ಯಾನಂ ಚ ವಿಷ್ಣೋರ್ವೇದೋಕ್ತಂ ಶಾಶ್ವತಂ ಸರ್ವದುರ್ಲಭಂ ।
ಮೂಲೇನ ಸರ್ವಂ ದೇಯಂ ಚ ನೈವೇದ್ಯಾದಿಕಮುತ್ತಮಂ ॥ ೧೪ ॥

ಅತೀವ ಗುಪ್ತಕವಚಂ ಪಿತೃವಕ್ತ್ರಾನ್ಮಯಾ ಶ್ರುತಂ ।
ಪಿತ್ರೇ ದತ್ತಂ ಪುರಾ ವಿಪ್ರ ಗಂಗಾಯಾಂ ಶೂಲಿನಾ ಧ್ರುವಂ ॥ ೧೫ ॥

ಶೂಲಿನೇ ಬ್ರಹ್ಮಣೇ ದತ್ತಂ ಗೋಲೋಕೇ ರಾಸಮಂಡಲೇ ।
ಧರ್ಮಾಯ ಗೋಪೀಕಾಂತೇನ ಕೃಪಯಾ ಪರಮಾದ್ಭುತಂ ॥ ೧೬ ॥

॥ ಬ್ರಹ್ಮೋವಾಚ ॥

ರಾಧಾಕಾಂತ ಮಹಾಭಾಗ ಕವಚಂ ಯತ್ಪ್ರಕಾಶಿತಂ ।
ಬ್ರಹ್ಮಾಂಡಪಾವನಂ ನಾಮ ಕೃಪಯಾ ಕಥಯ ಪ್ರಭೋ ॥ ೧೭ ॥

ಮಾಂ ಮಹೇಶಂ ಚ ಧರ್ಮಂ ಚ ಭಕ್ತಂ ಚ ಭಕ್ತವತ್ಸಲ ।
ತ್ವತ್ಪ್ರಸಾದೇನ ಪುತ್ರೇಭ್ಯೋ ದಾಸ್ಯಾಮಿ ಭಕ್ತಿಸಂಯುತಃ ॥ ೧೮ ॥

---

೧೪. ವೇದೋಕ್ತವಾಗಿಯೂ, ಎಲ್ಲರಿಗೂ ದುರ್ಲಭವಾಗಿಯೂ ಇರುವ ಈ ವಿಷ್ಣುವಿನ ಮಂತ್ರವನ್ನು ಧ್ಯಾನಮಾಡಿ ಆವಾಹನಾದಿ ನೈವೇದ್ಯಂತವಾಗಿ ಸರ್ವ ಸೇವೆಯನ್ನೂ ಭಕ್ತಿಯಿಂದರ್ಪಿಸಬೇಕು.

೧೫-೧೬. ಬಹಳ ಗೋಪ್ಯವಾದ ವಿಷ್ಣುಕವಚವನ್ನು ನನ್ನ ತಂದೆಯು ನನಗೆ ಉಪದೇಶಿಸಿದನು. ನನ್ನ ತಂದೆಗೂ ಕೂಡ ಪೂರ್ವದಲ್ಲಿ ಗಂಗಾತೀರದಲ್ಲಿದ್ದಾಗ ಪರಮೇಶ್ವರನು ಉಪದೇಶಿಸಿದನು. ಪರಮೇಶ್ವರ, ಬ್ರಹ್ಮ ಮತ್ತು ಧರ್ಮದೇವನು ಸ್ತೋತ್ರಮಾಡಿ ದಯಾಮಯನಾದ ಮತ್ತು ಗೋಪಿಕಾವಲ್ಲಭನಾದ ಕೃಷ್ಣನಿಂದ ಗೋಲೋಕದ ರಾಸಮಂಡಲದಲ್ಲಿ ಈ ಕವಚದ ಉಪದೇಶವನ್ನು ಹೊಂದಿದರು.

೧೭-೧೮. ಬ್ರಹ್ಮ:—ಎಲೈ ರಾಧಾರಮಣನೂ, ಭಕ್ತವತ್ಸಲನೂ ಆದ ಪರಮಾತ್ಮನೇ! ಬ್ರಹ್ಮಾಂಡವನ್ನು ಪಾವನಗೊಳಿಸುವ ವಿಷ್ಣುಕವಚವನ್ನು ಭಕ್ತರಾದ ನನಗೂ, ಮಹೇಶ್ವರನಿಗೂ, ಧರ್ಮದೇವನಿಗೂ ಕೃಪೆಮಾಡಿ ಉಪದೇಶಿಸು. ನಿನ್ನ ದಿವ್ಯಾನುಗ್ರಹದಿಂದ ನಾವೂ ನಮ್ಮ ಮಕ್ಕಳಿಗೆ ಉಪದೇಶಮಾಡಿ ವಿಷ್ಣುಭಕ್ತಿಯನ್ನು ಪ್ರಚಾರಗೊಳಿಸುವೆವು.

|| ಶ್ರೀ ಕೃಷ್ಣ ಉವಾಚ ||

ಶೃಣು ವಕ್ಷ್ಯಾಮಿ ಬ್ರಹ್ಮೇಶ ಧರ್ಮೇದಂ ಕವಚಂ ಪರಂ |
ಅಹಂ ದಾಸ್ಯಾಮಿ ಯುಷ್ಮಭ್ಯಂ ಗೋಪನೀಯಂ ಸುದುರ್ಲಭಂ || ೧೯ ||

ಯಸ್ಮೈ ಕಸ್ಮೈ ನ ದಾತವ್ಯಂ ಪ್ರಾಣತುಲ್ಯಂ ಮಮೈವ ಹಿ |
ಯತ್ತೇಜೋ ಮಮ ದೇಹೇಽಸ್ತಿ ತತ್ತೇಜಃ ಕವಚೇಽಪಿ ಚ || ೨೦ ||

ಕುರು ಸೃಷ್ಟಿಮಿಮಂ ಧೃತ್ವಾ ಧಾತಾ ತ್ರಿಜಗತಾಂ ಭವ |
ಸಂಹರ್ತಾ ಭವ ಹೇ ಶಂಭೋ ಮಮ ತುಲ್ಯೋ ಭವೇ ಭವ || ೨೧ ||

ಹೇ ಧರ್ಮ ತ್ವಮಿಮಂ ಧೃತ್ವಾ ಭವ ಸಾಕ್ಷೀ ಚ ಕರ್ಮಣಾಂ |
ತಪಸಾಂ ಫಲದಾತಾರೋ ಯೂಯಂ ಭವತ ಮದ್ವರಾತ್ || ೨೨ ||

---

೧೯. ಶ್ರೀಕೃಷ್ಣ :—ಎಲೈ ಧರ್ಮ, ಮತ್ತು ಮಹೇಶರೇ! ಅತ್ಯಂತ ಗೋಪ್ಯವೂ, ಎಲ್ಲರಿಗೂ ದುರ್ಲಭವೂ ಆದ ವಿಷ್ಣುಕವಚವನ್ನು ನಿಮಗೆ ನಾನು ಹೇಳುವೆನು, ಅವಧರಿಸಿ.

೨೦. ನನ್ನ ಪ್ರಾಣಕ್ಕೆ ಸಮನಾದ ಈ ಕವಚವನ್ನು ಅನರ್ಹರಿಗೆ ಉಪದೇಶಿಸ ಕೂಡದು. ನನ್ನ ದೇಹದಲ್ಲಿರುವ ತೇಜಸ್ಸೇ ಈ ಕವಚದಲ್ಲೂ ಇದೆ.

೨೧. ಎಲೈ ಬ್ರಹ್ಮನೇ! ನೀನು ಈ ಕವಚವನ್ನು ಧರಿಸಿ, ಮೂರು ಲೋಕ ವನ್ನೂ ಸೃಜಿಸಲು ಶಕ್ತನಾಗು. ಶಂಕರನೇ, ನೀನೂ ಕೂಡ ಈ ಕವಚಧಾರಣೆಯಿಂದ ಲೋಕಸಂಹಾರಕಶಕ್ತಿಯನ್ನು ಪಡೆ ಮತ್ತು ನನ್ನಂತೆಯೇ ಕೀರ್ತಿವಂತನಾಗು.

೨೨. ಧರ್ಮದೇವನೇ! ನೀನೂ ಕೂಡ ವಿಷ್ಣುಕವಚಧಾರಿಯಾಗಿ, ಕರ್ಮ ಸಾಕ್ಷಿಯಾಗು. ನನ್ನ ಅನುಗ್ರಹದಿಂದ ನೀವೆಲ್ಲರೂ ಎಲ್ಲರ ತಪಃಫಲಗಳನ್ನೂ ನೀಡಲು ಶಕ್ತರಾಗುವಿರಿ.

ಬ್ರಹ್ಮಾಂಡಪಾವನಸ್ಯಾಸ್ಯ ಕವಚಸ್ಯ ಹರಿಃ ಸ್ವಯಂ ।
ಋಷಿಶ್ಛಂದಶ್ಚ ಗಾಯತ್ರೀ ದೇವೋಽಹಂ ಜಗದೀಶ್ವರಃ ॥ ೨೩ ॥

ಧರ್ಮಾರ್ಥಕಾಮಮೋಕ್ಷೇಷು ವಿನಿಯೋಗಃ ಪ್ರಕೀರ್ತಿತಃ ।
ತ್ರಿಲಕ್ಷವಾರಪಠನಾತ್ಸಿದ್ಧಿದಂ ಕವಚಂ ವಿಧೇ ॥ ೨೪ ॥

ಯೋ ಭವೇತ್ಸಿದ್ಧಕವಚೋ ಮಮ ತುಲ್ಯೋ ಭವೇಚ್ಚ ಸಃ ।
ತೇಜಸಾ ಸಿದ್ಧಿಯೋಗೇನ ಜ್ಞಾನೇನ ವಿಕ್ರಮೇಣ ಚ ॥ ೨೫ ॥

ಪ್ರಣವೋ ಮೇ ಶಿರಃ ಪಾತು ನಮೋ ರಾಮೇಶ್ವರಾಯ ಚ ।
ಭಾಲಂ ಪಾಯಾನ್ನೇತ್ರಯುಗ್ಮಂ ನಮೋ ರಾಧೇಶ್ವರಾಯ ಚ ॥ ೨೬ ॥

ಕೃಷ್ಣಃ ಪಾಯಾಚ್ಛ್ರೋತ್ರಯುಗ್ಮಂ ಹೇ ಹರೇ ಘ್ರಾಣಮೇವ ಚ ।
ಜಿಹ್ವಾಂ ತು ವಹ್ನಿಜಾಯಾ ತು ಕೃಷ್ಣಾಯೇತಿ ಚ ಸರ್ವತಃ ॥ ೨೭ ॥

೨೩-೨೪. ಬ್ರಹ್ಮಾಂಡವನ್ನೆಲ್ಲಾ ಪಾವನಗೊಳಿಸಬಲ್ಲ ವಿಷ್ಣುಕವಚಕ್ಕೆ ಸ್ವಯಂ ವಿಷ್ಣುವೇ ಋಷಿಯು. ಛಂದಸ್ಸು ಗಾಯತ್ರಿಯು. ಜಗದೊಡೆಯನಾದ ಪರಮಾತ್ಮನೇ ದೇವತೆಯು. ಧರ್ಮಾರ್ಥಕಾಮಮೋಕ್ಷಗಳಲ್ಲಿ ಈ ಕವಚದ ವಿನಿಯೋಗವು. ಮೂರು ಲಕ್ಷಾವರ್ತಿ ಪಠಿಸಿದವರಿಗೆ ಈ ಕವಚವು ಸಿದ್ಧಿಸುವುದು.

೨೫. ಕವಚಸಿದ್ಧಿಯನ್ನು ಪಡೆದಾತನು ತೇಜಸ್ಸು, ಜ್ಞಾನ ಮತ್ತು ಪರಾಕ್ರಮಗಳಲ್ಲಿ ನನಗೆ ಎಣೆಯಾಗುವುದರಲ್ಲಿ ಸಂಶಯವಿಲ್ಲ.

೨೬. ಮುಂದಿನದು ನ್ಯಾಸವಿಧಿ. "ಓಂ" ಕಾರವು ನನ್ನ ತಲೆಯನ್ನು ರಕ್ಷಿಸಲಿ. 'ನಮೋ ರಾಮೇಶ್ವರಾಯ' ಎಂಬುದು ನನ್ನ ಹಣೆಯನ್ನೂ 'ನಮೋ ರಾಧೇಶ ರಾಯ' ಎಂಬುದು ಎರಡು ಕಣ್ಣುಗಳನ್ನೂ ರಕ್ಷಿಸಲಿ.

೨೭. 'ಓಂ ಕೃಷ್ಣಾಯ ನಮಃ' ಎಂಬುದು ಎರಡು ಕಿವಿಗಳನ್ನೂ 'ಓಂ ಹರಯೇ ನಮಃ' ಎಂಬುದು ಮೂಗನ್ನೂ 'ಓಂ ಸ್ವಾಹಾಯೈ ನಮಃ' ಎಂಬುದ ನಾಲಗೆಯನ್ನೂ, 'ಓಂ ಕೃಷ್ಣಾಯ ನಮಃ' ಎಂಬುದು ಶರೀರದ ಹೊರ ಆವರಣವನ್ನೂ ಕಾಪಾಡಲಿ.

ಶ್ರೀಕೃಷ್ಣಾಯ ಸ್ವಾಹೇತಿ ಚ ಕಂಠಂ ಪಾತು ಷಡಕ್ಷರಃ ।
ಹ್ರೀಂ ಕೃಷ್ಣಾಯ ನಮೋ ವಕ್ತ್ರಂ ಕ್ಲೀಂ ಪೂರ್ವಶ್ಚ ಭುಜದ್ವಯಂ ॥ ೨೮ ॥

ನಮೋ ಗೋಪಾಂಗಶೇಶಾಯ ಸ್ಕಂಧಾವಷ್ಟಾಕ್ಷರೋಽವತು ।
ದಂತಪಂಕ್ತಿಮೋಷ್ಠಯುಗ್ಮಂ ನಮೋ ಗೋಪೀಶ್ವರಾಯ ಚ ॥ ೨೯ ॥

ಓಂ ನಮೋ ಭಗವತೇ ರಾಸಮಂಡಲೇಶಾಯ ಸ್ವಾಹಾ ।
ಸ್ವಯಂ ವಕ್ಷಸ್ಥಲಂ ಪಾತು ಮಂತ್ರೋಽಯಂ ಷೋಡಶಾಕ್ಷರಃ ॥ ೩೦ ॥

ಐಂ ಕೃಷ್ಣಾಯ ಸ್ವಾಹೇತಿ ಚ ಕರ್ಣಯುಗ್ಮಂ ಸದಾಽವತು ।
ಓಂ ವಿಷ್ಣವೇ ಸ್ವಾಹೇತಿ ಚ ಕಪೋಲಂ ಸರ್ವತೋಽವತು ॥ ೩೧ ॥

ಓಂ ಹರಯೇ ನಮ ಇತಿ ಪೃಷ್ಠಂ ಪಾದಂ ಸದಾಽವತು ।
ಓಂ ಗೋವರ್ಧನಧಾರಿಣೇ ಸ್ವಾಹಾ ಸರ್ವಶರೀರಕಂ ॥ ೩೨ ॥

---

೨೮. 'ಶ್ರೀಕೃಷ್ಣಾಯ ಸ್ವಾಹ' ಎಂಬ ಆರಕ್ಷರವು ಕಂಠವನ್ನೂ, 'ಹ್ರೀಂ ಕೃಷ್ಣಾಯ ನಮಃ' ಎಂಬುದು ಬಾಯನ್ನೂ 'ಕ್ಲೀಂ ಕೃಷ್ಣಾಯ ನಮಃ' ಎಂಬುದು ಎರಡು ಭುಜಗಳನ್ನೂ ಪರಿಪಾಲಿಸಲಿ.

೨೯. 'ನಮೋ ಗೋಪಾಂಗನೇಶಾಯ' ಎಂಬ ಎಂಟಕ್ಷರವು ಎರಡು ಹೆಗಲುಗಳನ್ನೂ 'ನಮೋ ಗೋಪೀಶ್ವರಾಯ' ಎಂಬುದು ಹಲ್ಲುಗಳ ಸಾಲನ್ನೂ ಮತ್ತು ಎರಡು ತುಟಿಗಳನ್ನೂ ಪಾಲಿಸಲಿ.

೩೦. 'ಓಂ ನಮೋ ಭಗವತೇ ರಾಸಮಂಡಲೇಶಾಯ ಸ್ವಾಹಾ' ಎಂಬ ಹದಿನಾರಕ್ಷರದ ಮಂತ್ರವು ನನ್ನ ವಕ್ಷಸ್ಥಳವನ್ನು ಕಾಪಾಡಲಿ.

೩೧–೩೨. 'ಐಂ ಕೃಷ್ಣಾಯ ಸ್ವಾಹಾ' ಎಂಬುದು ಎರಡು ಕಿವಿಗಳನ್ನೂ, 'ಓಂ ಹರಯೇ ನಮಃ' ಎಂಬುದು ಬೆನ್ನುಭಾಗ ಮತ್ತು ಕಾಲುಗಳನ್ನೂ 'ಓಂ ಗೋವರ್ಧನಧಾರಿಣೇ ಸ್ವಾಹಾ' ಎಂಬುದು ಶರೀರವೆಲ್ಲವನ್ನೂ ಯಾವಾಗಲೂ ರಕ್ಷಿಸಲಿ.

ಪ್ರಾಚ್ಯಾಂ ಮಾಂ ಪಾತು ಶ್ರೀಕೃಷ್ಣ ಆಗ್ನೇಯ್ಯಾಂ ಪಾತು ಮಾಧವಃ ।
ದಕ್ಷಿಣೇ ಪಾತು ಗೋಪೀಶೋ ನೈರ್ಋತ್ಯಾಂ ನಂದನಂದನಃ ॥ ೩೩ ॥

ವಾರುಣ್ಯಾಂ ಪಾತು ಗೋವಿಂದೋ ವಾಯವ್ಯಾಂ ರಾಧಿಕೇಶ್ವರಃ ।
ಉತ್ತರೇ ಪಾತು ರಾಸೇಶ ಐಶಾನ್ಯಾಮಚ್ಯುತಃ ಸ್ವಯಂ ॥ ೩೪ ॥

ಸತತಂ ಸರ್ವತಃ ಪಾತು ಪರೋ ನಾರಾಯಣಃ ಸ್ವಯಂ ।
ಇತಿ ತೇ ಕಥಿತಂ ಬ್ರಹ್ಮನ್ ಕವಚಂ ಪರಮಾದ್ಭುತಂ ॥ ೩೫ ॥

ಮಮಜೀವನತುಲ್ಯಂ ಚ ಯುಷ್ಮಭ್ಯಂ ದತ್ತಮೇವ ಚ ।
ಅಶ್ವಮೇಧ ಸಹಸ್ರಾಣಿ ವಾಜಪೇಯ ಶತಾನಿ ಚ ॥
ಕಲಾಂ ನಾರ್ಹಂತಿ ತಾನ್ಯೇವ ಕವಚಸ್ಯೈವಧಾರಣಾತ್ ॥ ೩೬ ॥

ಗುರುಮಭ್ಯರ್ಚ್ಯ ವಿಧಿವದ್ವಸ್ತ್ರಾಲಂಕಾರಚಂದನೈಃ ।
ಸ್ನಾತ್ವಾ ತಂ ಚ ನಮಸ್ಕೃತ್ಯ ಕವಚಂ ಧಾರಯೇತ್ಸುಧೀಃ ॥ ೩೭ ॥

೩೩–೩೪. ಪೂರ್ವದಿಕ್ಕಿನಲ್ಲಿ ಶ್ರೀಕೃಷ್ಣನೂ, ಆಗ್ನೇಯದಲ್ಲಿ ಮಾಧವನೂ, ದಕ್ಷಿಣದಲ್ಲಿ ಗೋಪೀಶನೂ, ನೈಋತ್ಯದಲ್ಲಿ ನಂದನಂದನನೂ, ಪಶ್ಚಿಮದಲ್ಲಿ ಗೋವಿಂದನೂ, ವಾಯವ್ಯದಲ್ಲಿ ರಾಧಿಕೇಶ್ವರನೂ, ಉತ್ತರದಲ್ಲಿ ರಾಸೇಶನೂ, ಐಶಾನ್ಯ ದಲ್ಲಿ ಅಚ್ಯುತನೂ ಯಾವಾಗಲೂ ನನ್ನನ್ನು ಕಾಪಾಡುತ್ತಿರಲಿ.

೩೫–೩೬. 'ಯಾವಾಗಲೂ, ಎಲ್ಲೆಲ್ಲೂ ನಾರಾಯಣನು ನನ್ನನ್ನು ಕಾಪಾಡಲಿ' ಎಂದು ಪ್ರಾರ್ಥಿಸಿಕೊಳ್ಳಬೇಕು. ಎಲೈ, ಬ್ರಹ್ಮಾದಿದೇವತೆಗಳೇ! ಪರಮಾಶ್ಚರ್ಯವಾಗಿಯೂ, ನನ್ನ ಜೀವಕ್ಕೆ ಸಮನಾಗಿಯೂ ಇರುವ ಈ ದಿವ್ಯ ಕವಚವನ್ನು ನಿಮಗೆ ಉಪದೇಶಿಸಿದ್ದೇನೆ. ಸಾವಿರ ಅಶ್ವಮೇಧಯಾಗ ಮಾಡಿದವರೂ ನೂರುವಾಜಪೇಯ ಯಾಗ ಮಾಡಿದವರೂ, ಈ ಕವಚಧಾರಣೆಮಾಡುವುದರ ಒಂದಂಶಕ್ಕೆ ಸಮನಾದ ಫಲವನ್ನು ಪಡೆಯಲಾರರು.

೩೭. ವಿದ್ವಾಂಸನಾದವನು ಸ್ನಾನಮಾಡಿ ಶುಭ್ರವಸ್ತ್ರಧರನಾಗಿ ಶಾಸ್ತ್ರೋಕ್ತ ರೀತಿಯಲ್ಲಿ ವಸ್ತ್ರಾಲಂಕಾರಚಂದನಭೂಷಣಗಳಿಂದ ತನ್ನ ಗುರುದೇವನನ್ನು ಸತ್ಕರಿಸಿ, ಅನಂತರ ಕವಚಧಾರಣೆ ಮಾಡಬೇಕು.

ಕವಚಸ್ಯ ಪ್ರಸಾದೇನ ಜೀವನ್ಮುಕ್ತೋ ಭವೇನ್ನರಃ ।
ಯದಿಸ್ಯಾತ್ಸಿದ್ಧಕವಚೋ ವಿಷ್ಣುರೇವ ಭವೇದ್ದ್ವಿಜ ॥ ೩೮ ॥

॥ ಸೌತಿರುವಾಚ ॥

ಶಿವಸ್ಯ ಕವಚಂ ಸ್ತೋತ್ರಂ ಶ್ರೂಯತಾಮಿತಿ ಶೌನಕ ।
ವಸಿಷ್ಠೇನ ಚ ಯದ್ದತ್ತಂ ಗಂಧರ್ವಾಯ ಚ ಯೋ ಮನುಃ ॥ ೩೯ ॥

ಓಂ ನಮೋ ಭಗವತೇ ಶಿವಾಯ ಸ್ವಾಹೇತಿ ಚ ಮನುಃ ।
ದತ್ತೋ ವಸಿಷ್ಠೇನ ಪುರಾ ಪುಷ್ಕರೇ ಕೃಪಯಾ ವಿಭೋಃ ॥ ೪೦ ॥

ಅಯಂ ಮಂತ್ರೋ ರಾವಣಾಯ ಪ್ರದತ್ತೋ ಬ್ರಹ್ಮಣಾ ಪುರಾ ।
ಸ್ವಯಂ ಶಂಭುಶ್ಚ ಬಾಣಾಯ ತಥಾ ದುರ್ವಾಸಸೇ ಪುರಾ ॥ ೪೧ ॥

ಮೂಲೇನ ಸರ್ವಂ ದೇಯಂ ಚ ನೈವೇದ್ಯಾದಿಕಮುತ್ತಮಂ ।
ಧ್ಯಾಯೇನ್ನಿತ್ಯಾದಿಕಂ ಧ್ಯಾನಂ ವೇದೋಕ್ತಂ ಸರ್ವಸಮ್ಮತಂ ॥ ೪೨ ॥

---

೩೮. ಕವಚದ ಅನುಗ್ರಹಬಲದಿಂದ ಮನುಜನು ಜೀವನ್ಮುಕ್ತನಾಗ ಬಹುದು. ಈ ಕವಚ ಸಿದ್ಧಿಯನ್ನು ಪಡೆದಾತನು ಸಾಕ್ಷಾತ್ ವಿಷ್ಣುವೆನಿಸಿ ಕೊಳ್ಳುವನು.

೩೯. ಸೂತಪುತ್ರ :—ಎಲೈ, ಶೌನಕನೇ, ವಸಿಷ್ಠಮಹರ್ಷಿಯು ಗಂಧರ್ವನಿಗೆ ಉಪದೇಶಿಸಿದ ಶಿವಕವಚ, ಸ್ತೋತ್ರ, ಮಂತ್ರಗಳನ್ನು ಈಗ ನಿನಗೆ ವಿವರಿಸುವೆನು. ಅವಧರಿಸು.

೪೦. ವಸಿಷ್ಠಮಹರ್ಷಿಯು ಪರಮಾತ್ಮನಕೃಪೆಯಿಂದ ಪುಷ್ಕರಕ್ಷೇತ್ರದಲ್ಲಿ 'ಓಂ ನಮೋ ಭಗವತೇ ಶಿವಾಯ ಸ್ವಾಹಾ' ಎಂಬ ದ್ವಾದಶಾಕ್ಷರ ಮಂತ್ರವನ್ನು ಗಂಧರ್ವನಿಗೆ ಉಪದೇಶಿಸಿದನು.

೪೧-೪೨. ಈ ದ್ವಾದಶಾಕ್ಷರ ಮಂತ್ರವನ್ನು ಪೂರ್ವದಲ್ಲಿ ಬ್ರಹ್ಮನು ರಾವಣ ನಿಗೆ ಉಪದೇಶಿಸಿದನು. ಅಂತೆಯೇ ಈಶ್ವರನು ಬಾಣಾಸುರನಿಗೂ ಮತ್ತು ದೂರ್ವಾಸಮಹರ್ಷಿಗೂ ಉಪದೇಶಿಸಿದನು. ವೇದೋಕ್ತರೀತಿಯಲ್ಲಿ ಧ್ಯಾನಾವಾಹ ನಾದಿಯಾಗಿ ನೈವೇದ್ಯಾಂತಪೂಜೆಯನ್ನು ಮಾಡಿ ಮುಗಿಸಿ ಈ ಮಂತ್ರವನ್ನು ಭಕ್ತಿಯಿಂದ ಜಪಿಸಬೇಕು.

|| ಓಂ ನಮೋ ಮಹಾದೇವಾಯ ||

|| ಬಾಣಾಸುರ ಉವಾಚ ||

ಮಹೇಶ್ವರ ಮಹಾಭಾಗ ಕವಚಂ ಯತ್ಪ್ರಕಾಶಿತಂ |
ಸಂಸಾರಪಾವನಂ ನಾಮ ಕೃಪಯಾ ಕಥಯ ಪ್ರಭೋ || ೪೩ ||

|| ಮಹೇಶ್ವರ ಉವಾಚ ||

ಶ್ರುಣು ವಕ್ಷ್ಯಾಮಿ ಹೇ ವತ್ಸ ಕವಚಂ ಪರಮಾದ್ಭುತಂ |
ಅಹಂ ತುಭ್ಯಂ ಪ್ರದಾಸ್ಯಾಮಿ ಗೋಪನೀಯಂ ಸುದುರ್ಲಭಂ || ೪೪ ||

ಪುರಾ ದುರ್ವಾಸಸೇ ದತ್ತಂ ತ್ರೈಲೋಕ್ಯವಿಜಯಾಯ ಚ || ೪೫ ||

ಮಮೈವೇದಂ ಚ ಕವಚಂ ಭಕ್ತ್ಯಾ ಯೋ ಧಾರಯೇತ್ಸುಧೀಃ |
ಜೇತುಂ ಶಕ್ನೋತಿ ತ್ರೈಲೋಕ್ಯಂ ಭಗವನ್ನವಲೀಲಯಾ || ೪೬ ||

---

೪೩. ಬಾಣಾಸುರ :— ಮಹಾಭಾಗ್ಯದಾತನಾದ ಎಲೈ ಮಹೇಶನೇ ! ಸಂಸಾರದಿಂದ ಪಾರುಗಾಣಿಸಿ ಪಾವನಗೊಳಿಸುವ ಶಿವಕವಚವನ್ನು ನನಗೆ ದಯವಿಟ್ಟು ಉಪದೇಶಿಸು.

೪೪. ಮಹೇಶ್ವರ :—ಎಲೈ, ಬಾಲಕನಾದ ಬಾಣಾಸುರನೇ, ಬಹಳ ಗುಟ್ಟಾಗಿಯೂ, ಪರಮಾಶ್ಚರ್ಯಕರವಾಗಿಯೂ ಇರುವ ಶಿವಕವಚವನ್ನು ನಿನಗೆ ಉಪದೇಶಿಸುವೆನು. ಇದು ಎಲ್ಲರಿಗೂ ಸುಲಭವಾಗಿ ಸಿಗುವುದಿಲ್ಲ.

೪೫–೪೬. ಪೂರ್ವದಲ್ಲಿ ದೂರ್ವಾಸಮಹರ್ಷಿಯು ಮೂರು ಲೋಕವನ್ನೂ ಜಯಿಸಲೋಸುಗ ಈ ಕವಚವನ್ನು ನನ್ನಿಂದ ಪಡೆದನು. ಈ ನನ್ನ ಕವಚವನ್ನು ಯಾರು ಭಕ್ತಿಯಿಂದ ಧರಿಸುವರೋ ಅವರು ಬಹಳ ಸುಲಭವಾಗಿ ಮೂರುಲೋಕವನ್ನೂ ಜಯಿಸಬಲ್ಲವರಾಗುವರು.

ಸಂಸಾರಪಾವನಸ್ಯಾಸ್ಯ ಕವಚಸ್ಯ ಪ್ರಜಾಪತಿಃ ।
ಋಷಿಶ್ಛಂದಶ್ಚ ಗಾಯತ್ರೀ ದೇವೋಽಹಂ ಚ ಮಹೇಶ್ವರಃ ॥
ಧರ್ಮಾರ್ಥಕಾಮಮೋಕ್ಷೇಷು ವಿನಿಯೋಗಃ ಪ್ರಕೀರ್ತಿತಃ ॥ ೪೭ ॥

ಪಂಚಲಕ್ಷಜಪೇನೈವ ಸಿದ್ಧಿದಂ ಕವಚಂ ಭವೇತ್ ।
ಯೋ ಭವೇತ್ಸಿದ್ಧಕವಚೋ ಮಮತುಲ್ಯೋ ಭವೇದ್ಭುವಿ ॥
ತೇಜಸಾ ಸಿದ್ಧಿಯೋಗೇನ ತಪಸಾ ವಿಕ್ರಮೇಣ ಚ ॥ ೪೮ ॥

ಶಂಭುರ್ಮೇ ಮಸ್ತಕಂ ಪಾತು ಮುಖಂ ಪಾತು ಮಹೇಶ್ವರಃ ।
ದಂತಪಂಕ್ತಿಂ ನೀಲಕಂಠೋಽಧರೋಷ್ಠಂ ಹರಃ ಸ್ವಯಂ ॥ ೪೯ ॥

ಕಂಠಂ ಪಾತು ಚಂದ್ರಚೂಡಃ ಸ್ಕಂಧೌ ವೃಷಭವಾಹನಃ ।
ವಕ್ಷಃಸ್ಥಲಂ ನೀಲಕಂಠಃ ಪಾತು ಪೃಷ್ಠಂ ದಿಗಂಬರಃ ॥ ೫೦ ॥

ಸರ್ವಾಂಗಂ ಪಾತು ವಿಶ್ವೇಶಃ ಸರ್ವದಿಕ್ಷು ಚ ಸರ್ವದಾ ।
ಸ್ವಪ್ನೇ ಜಾಗರಣೇ ಚೈವ ಸ್ಥಾಣುರ್ಮೇ ಪಾತು ಸಂತತಂ ॥ ೫೧ ॥

---

೪೭. ಸಂಸಾರವನ್ನು ಪವಿತ್ರಗೊಳಿಸುವ ಈ ಶಿವಕವಚಕ್ಕೆ ಪ್ರಜಾಪತಿಯೇ ಋಷಿಯು. ಛಂದಸ್ಸು ಗಾಯತ್ರೀ. ಮಹೇಶ್ವರನಾದ ನಾನೇ ದೇವತೆ. ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಇದರ ವಿನಿಯೋಗವು ಸಾರ್ಥಕವಾಗಿದೆ.

೪೮. ಐದು ಲಕ್ಷಾವರ್ತಿ ಜಪಿಸಿದವರಿಗೆ ಈ ಕವಚವು ಸಿದ್ಧಿಸುವುದು. ಸಿದ್ಧಕವಚನು ತೇಜಸ್ಸು, ಪರಾಕ್ರಮ ಮತ್ತು ತಪಸಿದ್ಧಿಗಳಲ್ಲಿ ನನಗೆ ಸಮನೆನಿಸುವನು.

೪೯–೫೧. 'ಶಂಭುವು ನನ್ನ ತಲೆಯನ್ನೂ, ಮಹೇಶ್ವರನು ಮುಖವನ್ನೂ, ನೀಲಕಂಠನು ದಂತಪಂಕ್ತಿಗಳನ್ನೂ, ಹರನು ಕೆಳತುಟಿಯನ್ನೂ ಕಾಪಾಡಲಿ. ಚಂದ್ರಶೇಖರನು ಕಂಠವನ್ನೂ. ವೃಷಭವಾಹನನು ಎರಡು ಹೆಗಲುಗಳನ್ನೂ, ನೀಲಕಂಠನು ಎದೆಯನ್ನೂ, ದಿಗಂಬರನು ಬೆನ್ನು ಭಾಗವನ್ನೂ, ರಕ್ಷಿಸಲಿ. ವಿಶ್ವೇಶನು ನನ್ನ ಸರ್ವಾಂಗಗಳನ್ನೂ, ಹಾಗೆಯೇ ಸ್ಥಾಣುವು ಎಲ್ಲದಿಕ್ಕಿನಲ್ಲೂ, ಅವಸ್ಥಾತ್ರಯಗಳಲ್ಲೂ ನನ್ನನ್ನು ಪಾಲಿಸಲಿ' ಎಂದು ಅಂಗನ್ಯಾಸವನ್ನು ಮಾಡಿಕೊಳ್ಳಬೇಕು.

ಇತಿ ತೇ ಕಥಿತಂ ಬಾಣ ಕವಚಂ ಪರಮಾದ್ಭುತಂ ।
ಯಸ್ಮೈ ಕಸ್ಮೈ ನ ದಾತವ್ಯಂ ಗೋಪನೀಯಂ ಪ್ರಯತ್ನತಃ ॥ ೫೨ ॥

ಯತ್ಫಲಂ ಸರ್ವತೀರ್ಥಾನಾಂ ಸ್ನಾನೇನ ಲಭತೇ ನರಃ ।
ತತ್ಫಲಂ ಲಭತೇ ನೂನಂ ಕವಚಸ್ಯೈವಧಾರಣಾತ್ ॥ ೫೩ ॥

ಇದಂ ಕವಚಮಜ್ಞಾತ್ವಾ ಭಜೇನ್ಮಾಂ ಯಃ ಸುಮಂದಧೀಃ ।
ಶತಲಕ್ಷಪ್ರಜಪ್ತೋಽಪಿ ನ ಮಂತ್ರಃ ಸಿದ್ಧಿದಾಯಕಃ ॥ ೫೪ ॥

॥ ಸೌತಿರುವಾಚ ॥

ಇದಂ ಚ ಕವಚಂ ಪ್ರೋಕ್ತಂ ಸ್ತೋತ್ರಂ ಚ ಶ್ರುಣು ಶೌನಕ ।
ಮಂತ್ರರಾಜಃ ಕಲ್ಪತರುರ್ವಸಿಷ್ಠೋ ದತ್ತವಾನ್ಪುರಾ ॥ ೫೫ ॥

---

೫೨. ಎಲೈ ಬಾಣಾಸುರನೇ! ನಾನು ನಿನಗೆ ಅನುಗ್ರಹಿಸಿದ ಪರಮಾಶ್ಚರ್ಯಕರವಾದ ಈ ಕವಚವನ್ನು ಅನರ್ಹರಾದವರಿಗೆ ಉಪದೇಶಿಸದೆ ಪ್ರಯತ್ನಪೂರ್ವಕವಾಗಿ ರಕ್ಷಿಸಿಕೊಳ್ಳಬೇಕು.

೫೩. ಎಲ್ಲ ಪುಣ್ಯತೀರ್ಥಗಳಲ್ಲೂ ಮಿಂದು ಪಡೆಯುವ ಪುಣ್ಯಫಲವನ್ನು ಈ ಕವಚಧಾರಣೆಮಾತ್ರದಿಂದಲೇ ಮನುಜನು ಪಡೆಯುವುದರಲ್ಲಿ ಸಂದೇಹವಿಲ್ಲ.

೫೪. ಈ ಕವಚದ ಮಹಿಮೆಯೇ ಅರಿಯದ ಮೂಢನು ಕೇವಲ ಮಂತ್ರವನ್ನು ಒಂದು ಕೋಟ್ಯಾವರ್ತಿ ಜಪಿಸಿದರೂ ಕೂಡ ಅದು ಸಿದ್ಧಿಸುವುದಿಲ್ಲ.

೫೫. ಸೂತಪುತ್ರ :—ಎಲೈ, ಶೌನಕನೇ! ಶಿವಕವಚ ಮತ್ತು ಮಂತ್ರಗಳನ್ನು ಹೇಳಿದುದಾಯಿತು. ಈಗ ಮಂತ್ರಗಳಿಗೆಲ್ಲಾ ಕಲ್ಪವೃಕ್ಷದಂತಿರುವ ವಸಿಷ್ಠ ಮಹರ್ಷಿಯು ಉಪದೇಶಿಸಿದ ಮಹೇಶ್ವರಸ್ತೋತ್ರವನ್ನು ಹೇಳುವೆನು. ಲಾಲಿಸು.

|| ಓಂ ನಮಃ ಶಿವಾಯ ||

|| ಬಾಣಾಸುರ ಉವಾಚ ||

ವಂದೇ ಸುರಾಣಾಂ ಸಾರಂ ಚ ಸುರೇಶಂ ನೀಲಲೋಹಿತಂ ।
ಯೋಗೀಶ್ವರಂ ಯೋಗಿಬೀಜಂ ಯೋಗಿನಾಂ ಚ ಗುರೋರ್ಗುರುಂ || ೫೬ ||

ಜ್ಞಾನಾನಂದಂ ಜ್ಞಾನರೂಪಂ ಜ್ಞಾನಬೀಜಂ ಸನಾತನಂ ।
ತಪಸಾಂ ಫಲದಾತಾರಂ ದಾತಾರಂ ಸರ್ವಸಂಪದಾಂ || ೫೭ ||

ತಪೋಬೀಜಂ ತಪೋರೂಪಂ ತಪೋಧನಧನಂ ವರಂ ।
ವರಂ ವರೇಣ್ಯಂ ವರದಮೀಡ್ಯಂ ಸಿದ್ಧಗಣೈರ್ವರೈಃ || ೫೮ ||

ಕಾರಣಂ ಭುಕ್ತಿಮುಕ್ತೀನಾಂ ನರಕಾರ್ಣವತಾರಣಂ ।
ಆಶುತೋಷಂ ಪ್ರಸನ್ನಾಸ್ಯಂ ಕರುಣಾಮಯಸಾಗರಂ || ೫೯ ||

ಹಿಮಚಂದನಕುಂದೇಂದುಕುಮುದಾಂಭೋಜಸನ್ನಿಭಂ ।
ಬ್ರಹ್ಮಜ್ಯೋತಿಃಸ್ವರೂಪಂ ಚ ಭಕ್ತಾನುಗ್ರಹವಿಗ್ರಹಂ || ೬೦ ||

೫೬–೫೮. ಬಾಣಾಸುರ :—ಸುರರಿಗೆಲ್ಲಾ ಶ್ರೇಷ್ಠನೂ, ಸುರನಾಯಕನೂ, ಯೋಗಿವರ್ಯನೂ, ಯೋಗಿಗಳ ಗುರುವೂ, ಯೋಗಕಾರಣನೂ ಆದ ನೀಲಲೋಹಿತ ನಿಗೆ ಇದೋ ವಂದನೆಗಳು. ಜ್ಞಾನಾನಂದಮಯನೂ, ಜ್ಞಾನಸ್ವರೂಪನೂ, ಜ್ಞಾನ ಬೀಜನೂ, ತಪಸ್ಸಿನ ಫಲದಾತೃವೂ, ಸರ್ವಸಂಪತ್ಪ್ರದಾತೃವೂ ಆದ ಆದಿಮೂರ್ತಿಗೆ ಇದೋ ನಮಿಸುವೆನು. ತಪೋಬೀಜನೂ, ತಪೋರೂಪನೂ. ತಪೋಧನನೂ, ಸಿದ್ಧಗಣಸ್ತುತನೂ, ಸರ್ವಶ್ರೇಷ್ಠನೂ ಆದ ಮಹೇಶನಿಗೆ ಸಾಷ್ಟಾಂಗವೆರಗುವೆನು.

೫೯–೬೦. ಭುಕ್ತಿಮುಕ್ತಿಗಳಿಗೆ ಕಾರಣನೂ, ನರಕಾರ್ಣವತಾರಣನೂ, ಕರುಣಾಮಯಸಾಗರನೂ, ಆಶುತೋಷನೂ, ಸ್ಮಿತವದನನೂ, ಭಕ್ತಬಂಧುವೂ ಆದ ನಿನಗೆ ನನ್ನ ಅನಂತ ವಂದನೆಗಳು. ಹಿಮ, ಚಂದನ, ಗಂಧ, ಮೊಲ್ಲೆಯಮೊಗ್ಗು, ಚಂದ್ರ, ನೈದಿಲೆ, ತಾವರೆ ಮುಂತಾದುವುಗಳಂತೆ ಬಿಳುಪಾದವನೂ, ಭಕ್ತಾನುಗ್ರಹ ದಾಯಕನೂ ಆಗಿರುವ ಜ್ಯೋತಿರ್ಮಯನಾದ ನಿನಗೆ ನಾನು ಅಭಿವಂದಿಸುವೆನು.

ವಿಷಯಾಣಾಂ ವಿಭೇದೇನ ಬಿಭ್ರಂತಂ ಬಹುರೂಪಕಂ ।
ಜಲರೂಪಮಗ್ನಿರೂಪಮಾಕಾಶರೂಪಮೀಶ್ವರಂ ॥ ೬೧ ॥

ವಾಯುರೂಪಂ ಚಂದ್ರರೂಪಂ ಸೂರ್ಯರೂಪಂ ಮಹತ್ಪ್ರಭುಂ ।
ಆತ್ಮನಃ ಸ್ವಪದಂ ದಾತುಂ ಸಮರ್ಥಮವಲೀಲಯಾ ॥ ೬೨ ॥

ಭಕ್ತಜೀವನಮೀಶಂ ಚ ಭಕ್ತಾನುಗ್ರಹಕಾರಕಂ ।
ವೇದಾ ನ ಶಕ್ತಾ ಯಂ ಸ್ತೋತುಂ ಕಿಮಹಂ ಸ್ತೌಮಿ ತಂ ಪ್ರಭುಂ ॥ ೬೩ ॥

ಅಪರಿಚ್ಛಿನ್ನಮೀಶಾನಮಹೋ ವಾಙ್ಮನಸೋಃ ಪರಂ ।
ವ್ಯಾಘ್ರಚರ್ಮಾಂಬರಧರಂ ವೃಷಭಸ್ಥಂ ದಿಗಂಬರಂ ॥
ತ್ರಿಶೂಲಪಟ್ಟಿಶಧರಂ ಸಸ್ಮಿತಂ ಚಂದ್ರಶೇಖರಂ ॥ ೬೪ ॥

ಇತ್ಯುಕ್ತ್ವಾ ಸ್ತವರಾಜೇನ ನಿತ್ಯಂ ಬಾಣಃ ಸುಸಂಯುತಃ ।
ಪ್ರಾಣಮಚ್ಛಂಕರಂ ಭಕ್ತ್ಯಾ ದುರ್ವಾಸಾಶ್ಚ ಮುನೀಶ್ವರಃ ॥ ೬೫ ॥

೬೧-೬೩. ವಿಷಯಭೇದದಿಂದ ಜಲರೂಪ, ಅಗ್ನಿರೂಪ, ಆಕಾಶರೂಪ, ವಾಯುರೂಪ, ಚಂದ್ರರೂಪ, ಮತ್ತು ಸೂರ್ಯರೂಪಗಳನ್ನು ಧರಿಸಬಲ್ಲ ಭಕ್ತ ಪರಾಧೀನನೂ, ಆತ್ಮಾನಂದದಾಯಕನೂ, ಆದ ಮಹಾತ್ಮನಿಗೆ ನಮಿಸುವೆನು. ಯಾರನ್ನು ಚತುರ್ವೇದಗಳೂ ಹೊಗಳಿ ಮುಗಿಯಲಾರವೋ, ಆ ಪ್ರಭುವಾದ ಪರಮೇಶ್ವರನನ್ನು ನಾನು ನನ್ನ ಅಲ್ಪನುಡಿಗಳಿಂದ ಹೊಗಳಬಲ್ಲೆನೆ?

೬೪. ಅಪರಿಮಿತನೂ, ಮನೋವಾಕ್ಕುಗಳಿಗೆ ಅತೀತನೂ, ವ್ಯಾಘ್ರಚರ್ಮಾಂಬರಧರನೂ, ವೃಷಭವಾಹನನೂ, ತ್ರಿಶೂಲ, ಪಟ್ಟಿಶಧರನೂ, ಚಂದ್ರಶೇಖರನೂ, ಸ್ಮಿತವದನನೂ ಆದ ಪರಶಿವನಿಗೆ ನನ್ನ ಭಕ್ತಿಪೂರ್ವಕವಾದ ವಂದನೆಗಳು.

೬೫. ಸೂತಪುತ್ರ :—ಹೀಗೆ ಪ್ರತಿದಿನವೂ, ಬಾಣಾಸುರ ಮತ್ತು ದೂರ್ವಾಸರು ಸ್ಥಿರಚಿತ್ತದಿಂದ ಶಂಕರನನ್ನು ಸ್ತೋತ್ರಮಾಡಿ ಸಾಷ್ಟಾಂಗವೆರಗುವರು.

ಇದಂ ದತ್ತಂ ವಸಿಷ್ಠೇನ ಗಂಧರ್ವಾಯ ಪುರಾ ಮುನೇ ।
ಕಥಿತಂ ಚ ಮಹಾಸ್ತೋತ್ರಂ ಶೂಲಿನಃ ಪರಮಾದ್ಭುತಂ ॥ ೬೬ ॥

ಇದಂ ಸ್ತೋತ್ರಂ ಮಹಾಪುಣ್ಯಂ ಪಠೇದ್ಭಕ್ತ್ಯಾ ಚ ಯೋ ನರಃ ।
ಸ್ನಾನಸ್ಯ ಸರ್ವತೀರ್ಥಾನಾಂ ಫಲಮಾಪ್ನೋತಿ ನಿಶ್ಚಿತಂ ॥ ೬೭ ॥

ಅಪುತ್ರೋ ಲಭತೇ ಪುತ್ರಂ ವರ್ಷಮೇಕಂ ಶ್ರುಣೋತಿ ಯಃ ।
ಸಂಯತಶ್ಚ ಹವಿಷ್ಯಾಶೀ ಪ್ರಣಮ್ಯ ಶಂಕರಂ ಗುರುಂ ॥ ೬೮ ॥

ಗಲತ್ಕುಷ್ಠೀ ಮಹಾಶೂಲೀ ವರ್ಷಮೇಕಂ ಶ್ರುಣೋತಿ ಯಃ ।
ಅವಶ್ಯಂ ಮುಚ್ಯತೇ ರೋಗಾದ್ವ್ಯಾಸವಾಕ್ಯಮಿತಿ ಶ್ರುತಂ ॥ ೬೯ ॥

ಕಾರಾಗಾರೇಽಪಿ ಬದ್ಧೋ ಯೋ ನೈವ ಪ್ರಾಪ್ನೋತಿ ನಿರ್ವೃತಿಂ ।
ಸ್ತೋತ್ರಂ ಶ್ರುತ್ವಾ ಮಾಸಮೇಕಂ ಮುಚ್ಯತೇ ಬಂಧನಾದ್ಧ್ರುವಂ ॥ ೭೦ ॥

---

೬೬. ಪರಮಾಶ್ಚರ್ಯಕರವಾದ ಪರಮೇಶ್ವರನ ಈ ಸ್ತೋತ್ರವನ್ನು ಪೂರ್ವದಲ್ಲಿ ವಸಿಷ್ಠಮಹರ್ಷಿಯು ಗಂಧರ್ವನಾದ ಉಪಬರ್ಹಣನಿಗೆ ಉಪದೇಶಿಸಿದನು.

೬೭. ಮಹತ್ಪುಣ್ಯದಾಯಕವಾದ ಈ ಸ್ತೋತ್ರವನ್ನು ಭಕ್ತಿಯಿಂದ ಪಠನ ಮಾಡುವ ಮಾನವನು ಎಲ್ಲ ಪುಣ್ಯನದಿಗಳಲ್ಲಿ ಸ್ನಾನಮಾಡಿದ ಫಲವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

೬೮. ಮಕ್ಕಳಿಲ್ಲದವನು ಪರಶಿವನಿಗೆರಗಿ, ಅವನಿಗರ್ಪಿಸಿದ ನೈವೇದ್ಯಾನ್ನವನ್ನು ಮಾತ್ರ ಭುಂಜಿಸಿ, ಇಂದ್ರಿಯನಿಗ್ರಹಪರನಾಗಿ ಒಂದು ವರ್ಷಕಾಲ ಈ ಸ್ತೋತ್ರವನ್ನು ಕೇಳಿದರೆ ಅವನಿಗೆ ಸತ್ಪುತ್ರರು ಜನಿಸುವರು.

೬೯. ಅಷ್ಟೇಕೆ! ಕುಷ್ಠರೋಗಿಗಳೂ ಮತ್ತು ಶೂಲರೋಗಿಗಳೂ ಕೂಡ ಒಂದು ವರ್ಷ ಭಕ್ತಿಯಿಂದ ಈ ಸ್ತೋತ್ರವನ್ನು ಕೇಳಿದರೆ ರೋಗದಿಂದ ವಿಮುಕ್ತರಾಗುವರೆಂದು ವ್ಯಾಸಮಹರ್ಷಿಗಳೇ ಹೇಳಿದ್ದಾರೆ.

೭೦. ಕಾರಾಗೃಹದಲ್ಲಿ ಸಿಕ್ಕಿ ಬಿಡುಗಡೆಯಿಲ್ಲದೆ ನರಳುವವನೂ ಕೂಡ ಒಂದು ತಿಂಗಳು ಮಾತ್ರ ಈ ಸ್ತೋತ್ರವನ್ನು ಕೇಳಿದರೆ ಬಂಧನದಿಂದ ಮುಕ್ತನಾಗುವುದು ಖಂಡಿತ.

ಭ್ರಷ್ಟರಾಜ್ಯೋ ಲಭೇದ್ರಾಜ್ಯಂ ಭಕ್ತ್ಯಾ ಮಾಸಂ ಶ್ರುಣೋತಿ ಯಃ ।
ಮಾಸಂ ಶ್ರುತ್ವಾ ಸಂಯತಶ್ಚ ಲಭೇದ್ಭ್ರಷ್ಟಧನೋ ಧನಂ ॥ ೭೧ ॥

ಯಕ್ಷ್ಮಗ್ರಸ್ತೋ ವರ್ಷಮೇಕಮಾಸ್ತಿಕೋ ಯಃ ಶ್ರುಣೋತಿ ಚೇತ್ ।
ನಿಶ್ಚಿತಂ ಮುಚ್ಯತೇ ರೋಗಾಚ್ಛಂಕರಸ್ಯ ಪ್ರಸಾದತಃ ॥ ೭೨ ॥

ಯಃ ಶ್ರುಣೋತಿ ಸದಾ ಭಕ್ತ್ಯಾ ಸ್ತವರಾಜಮಿಮಂ ದ್ವಿಜ ।
ತಸ್ಯಾಸಾಧ್ಯಂ ತ್ರಿಭುವನೇ ನಾಸ್ತಿ ಕಿಂಚಿಚ್ಚ ಶೌನಕ ॥ ೭೩ ॥

ಕದಾಚಿದ್ಬಂಧುವಿಚ್ಛೇದೋ ನ ಭವೇತ್ತಸ್ಯ ಭಾರತೇ ।
ಅಚಲಂ ಪರಮೈಶ್ವರ್ಯಂ ಲಭತೇ ನಾತ್ರ ಸಂಶಯಃ ॥ ೭೪ ॥

ಸುಸಂಯತೋಽತಿಭಕ್ತ್ಯಾ ಚ ಮಾಸಮೇಕಂ ಶ್ರುಣೋತಿ ಯಃ ।
ಅಭಾರ್ಯೋ ಲಭತೇ ಭಾರ್ಯಾಂ ಸುವಿನೀತಾಂ ಸತೀಂ ವರಾಂ ॥ ೭೫ ॥

---

೭೧. ಒಂದು ತಿಂಗಳು ಭಕ್ತಿಯಿಂದ ಕೇಳಿದ ಮಾತ್ರದಿಂದ ಕಳೆದು ಹೋದ ರಾಜ್ಯವನ್ನೂ, ನಷ್ಟವಾದ ಧನವನ್ನೂ ಮನುಜನು ಮತ್ತೆ ಪಡೆಯುವನು.

೭೨. ಕ್ಷಯರೋಗಿಯು ಜಿತವಾದ ಮನಸ್ಸಿನಿಂದ ಒಂದು ವರ್ಷ ಈ ಸ್ತೋತ್ರವನ್ನು ಕೇಳಿ ಈಶ್ವರಾನುಗ್ರಹ ಪಡೆದು ರೋಗವಿಮುಕ್ತನಾಗಬಹುದು.

೭೩. ಎಲೈ, ಶೌನಕನೇ! ಹೆಚ್ಚು ಹೇಳುವುದರಿಂದೇನು? ಪರಮಪಾವನವಾದ ಈ ಸ್ತೋತ್ರವನ್ನು ಭಕ್ತಿಯಿಂದ ಕೇಳಿದವರೆಲ್ಲರಿಗೂ ಮೂರು ಲೋಕದಲ್ಲೂ ಅಸಾಧ್ಯವಾದುದಾವುದೂ ಇರುವುದಿಲ್ಲ.

೭೪–೭೫. ಜಿತೇಂದ್ರಿಯನಾಗಿಯೂ, ಭಕ್ತಿಯುತನಾಗಿಯೂ, ಒಂದು ತಿಂಗಳು ಕೇಳುವವನಿಗೆ ಯಾವಾಗಲೂ ಬಂಧುವಿರಹವುಂಟಾಗುವುದಿಲ್ಲ. ಅತುಲೈಶ ರ್ಯವು ಅವನಿಗೆ ಸಿದ್ಧಿಸುವುದು. ಹೆಂಡತಿ ಇಲ್ಲದವನಿಗೆ ಸುವಿನೀತೆಯೂ, ಪತಿವ್ರತೆಯೂ ಆದ ಪತ್ನಿಯು ದೊರಕುವಳು.

ಮಹಾಮೂರ್ಖಶ್ಚ ದುರ್ಮೇಧಾ ಮಾಸಮೇಕಂ ಶೃಣೋತಿ ಯಃ ।
ಬುದ್ಧಿಂ ವಿದ್ಯಾಂ ಚ ಲಭತೇ ಗುರೂಪದೇಶಮಾತ್ರತಃ || ೨೬ ||

ಕರ್ಮದುಃಖೀ ದರಿದ್ರಶ್ಚ ಮಾಸಂ ಭಕ್ತ್ಯಾ ಶೃಣೋತಿ ಯಃ ।
ಧ್ರುವಂ ವಿತ್ತಂ ಭವೇತ್ತಸ್ಯ ಶಂಕರಸ್ಯ ಪ್ರಸಾದತಃ || ೨೭ ||

ಇಹಲೋಕೇ ಸುಖಂ ಭುಕ್ತ್ವಾ ಕೃತ್ವಾ ಕೀರ್ತಿಂ ಸುದುರ್ಲಭಾಂ ।
ನಾನಾಪ್ರಕಾರಧರ್ಮಂ ಚ ಯಾತ್ಯಂತೇ ಶಂಕರಾಲಯಂ || ೨೮ ||

ಪಾರ್ಷದಪ್ರವರೋ ಭೂತ್ವಾ ಸೇವತೇ ತತ್ರ ಶಂಕರಂ ।
ಯಃ ಶೃಣೋತಿ ತ್ರಿಸಂಧ್ಯಂ ಚ ನಿತ್ಯಂ ಸ್ತೋತ್ರಮನುತ್ತಮಂ || ೨೯ ||

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಸೌತಿಶೌನಕ-
ಸಂವಾದೇ ವಿಷ್ಣು ಶಂಕರಸ್ತೋತ್ರಕಥನಂ ನಾಮ
ಏಕೋನವಿಂಶೋಽಧ್ಯಾಯಃ

೨೬-೨೭. ಈ ಸ್ತೋತ್ರವನ್ನು ಸದ್ಗುರುವಿನಿಂದ ಉಪದೇಶಪಡೆದು ಒಂದು ತಿಂಗಳು ಕೇಳಿದ ಮಾತ್ರದಿಂದಲೇ, ಮೂರ್ಖನೂ ಮತ್ತು ಮಂದಬುದ್ಧಿಯೂ ಕೂಡ ಬುದ್ಧಿವಂತನೂ ಮತ್ತು ವಿದ್ಯಾವಂತನೂ ಆಗುವನು. ದ್ರವ್ಯಾರ್ಜನೆಗೆ ದಾರಿಯಿಲ್ಲದ ದರಿದ್ರನೂ, ಜನ್ಮಾಂತರಕರ್ಮಗಳಿಂದ ದುಃಖಪಡುತ್ತಿರುವವನೂ, ಈ ಸ್ತೋತ್ರವನ್ನು ಭಕ್ತಿಯಿಂದ ಒಂದು ತಿಂಗಳು ಕೇಳಿದರೆ ಈಶ್ವರಪ್ರಸಾದದಿಂದ ಹಣಗಾರನೂ, ಸುಖಿಯೂ ಆಗುವನು.

೨೮-೨೯. ಮೂರು ಸಂಧ್ಯಾಕಾಲದಲ್ಲೂ ಈ ದಿವ್ಯಸ್ತೋತ್ರವನ್ನು ಭಕ್ತಿಯಿಂದ ಕೇಳುವವರು ಇಹಲೋಕದಲ್ಲಿ ಧರ್ಮಾರ್ಥಕಾಮಗಳನ್ನು ಇಚ್ಛೆಯಿದ್ದಷ್ಟು ಉಪಭೋಗಿಸಿ, ಸತ್ಕೀರ್ತಿಗಳಿಸಿ ಕೊನೆಯಲ್ಲಿ ಶಿವಲೋಕವನ್ನು ಸೇರಿ ಪರಶಿವನ ಪಾರ್ಷದರಲ್ಲಿ ಉತ್ತಮರೆನಿಸಿಕೊಂಡು ಆತನ ಸೇವೆಗೈಯ್ಯುವರು.

ಇಲ್ಲಿಗೆ ಶ್ರೀಬ್ರಹ್ಮವೈವರ್ತಮಹಾಪುರಾಣದಲ್ಲಿ ವಿಷ್ಣು ಮತ್ತು ಶಂಕರನ
ಸ್ತೋತ್ರಕಥನವೆಂಬ ಹತ್ತೊಂಭತ್ತನೆಯ ಅಧ್ಯಾಯವು
ಮುಗಿದುದು.

ಹತ್ತೊಂಭತ್ತನೆಯ ಅಧ್ಯಾಯದ ಸಾರಾಂಶವು

" ಪುನರುಜ್ಜೀವಿತನಾದ ಉಪಬರ್ಹಣನು, ತನ್ನ ಪತ್ನಿಯರೊಡಗೂಡಿ ಸಕಲ ಸುಖಸಂಪತ್ತನ್ನೂ, ಅನುಭವಿಸುತ್ತ ವಸಿಷ್ಠಮಹರ್ಷಿಯು ತನಗೆ ಹಿಂದೆ ಉಪದೇಶಿಸಿದ ವಿಷ್ಣುವಿನ ಮತ್ತು ಶಿವನ ಕವಚ, ಸ್ತೋತ್ರ, ಮಂತ್ರಗಳನ್ನು ಮರೆತನು. ಪತಿಯ ಮಂಗಳವನ್ನೇ ಬಯಸುವ ಮಾಲಾವತಿಯು ಸಕಾಲದಲ್ಲಿ ತನ್ನ ಪತಿದೇವನನ್ನು ಎಚ್ಚರಿಸಿ ದಯಾಮಯನಾದ ವಸಿಷ್ಠನಿಂದ ಪುನಃ ಅವುಗಳ ಉಪದೇಶವನ್ನು ಹೊಂದುವಂತೆ ಮಾಡಿದಳು. ಆ ಮಂತ್ರ, ಸ್ತೋತ್ರಗಳ ಮಹಿಮೆಯಿಂದ ಉಪಬರ್ಹಣನು ಆಪ್ತೇಷ್ಟರೊಡನೆ ಸುಖವಾಗಿದ್ದನು." ಎಂದು ಹೇಳಿದ ಸೂತಪುತ್ರರನ್ನು ಕುರಿತು ಶೌನಕರು, ವಸಿಷ್ಠರು ಉಪಬರ್ಹಣನಿಗೆ ಉಪದೇಶಿಸಿದ ಶಿವನ ಮತ್ತು ವಿಷ್ಣುವಿನ ಕವಚ, ಸ್ತೋತ್ರ, ಮಂತ್ರಗಳನ್ನು ವಿವರಿಸಬೇಕೆಂದು ಬೇಡಿದರು. ಅವರ ಬೇಡಿಕೆಯಂತೆ ಸೂತಪುತ್ರರು; ಮಾಲಾವತಿಯು (ಹಿಂದಿನ ಅಧ್ಯಾಯದಲ್ಲಿ) ಹೇಳಿದುದೇ ವಿಷ್ಣುವಿನ ಸ್ತೋತ್ರವೆಂದೂ, 'ಓಂ ನಮೋ ಭಗವತೇ ರಾಸಮಂಡಲೇಶಾಯ ಸ್ವಾಹಾ' ಎಂಬುದು ವಿಷ್ಣುವಿನ ಷೋಡಶಾಕ್ಷರ ಮಂತ್ರವೆಂದೂ, ಇದನ್ನು ಪೂರ್ವದಲ್ಲಿ ಶ್ರೀಕೃಷ್ಣನು ಶಂಕರನಿಗೂ, ಬ್ರಹ್ಮನು ತನ್ನ ಮಗನಾದ ವಸಿಷ್ಠನಿಗೂ ಉಪದೇಶಿಸಿದನೆಂದೂ 'ವಿಷ್ಣುಕವಚಕ್ಕೆ ವಿಷ್ಣುವೇ ಋಷಿಯು, ಗಾಯತ್ರಿಯೇ ಛಂದಸ್ಸು, ಪರಮಾತ್ಮನೇ ದೇವತೆ, ಧರ್ಮಾರ್ಥಕಾಮಮೋಕ್ಷಗಳಲ್ಲಿ ಕವಚದ ವಿನಿಯೋಗವು, ಮೂರು ಲಕ್ಷಾವರ್ತಿ ಪಠಿಸಿದವರಿಗೆ ಇದು ಸಿದ್ಧಿಸುವುದು.' ಎಂದು ಕೃಷ್ಣಪರಮಾತ್ಮನು ಧರ್ಮ, ಬ್ರಹ್ಮ ಮತ್ತು ಶಂಕರರಿಗೆ ಬೋಧಿಸಿದನೆಂದೂ, ವಿಷ್ಣುವಿನ ಉಪದೇಶದಂತೆ ಈ ಕವಚದ ನ್ಯಾಸವಿಧಿಯನ್ನರಿತು ಭಕ್ತಿ, ಶ್ರದ್ಧೆಯಿಂದ ಇದನ್ನು ಧಾರಣೆಮಾಡಿದವರು ಸಾಕ್ಷಾದ್ವಿಷ್ಣುವೇ ಆಗುವರೆಂದೂ ಹೇಳಿದರು. ಅನಂತರ 'ಓಂ ನಮೋ ಭಗವತೇ ಶಿವಾಯ ಸ್ವಾಹಾ' ಎಂಬುದು ಶಂಕರನ ದ್ವಾದಶಾಕ್ಷರ ಮಂತ್ರವೆಂದೂ, ಈ ಮಂತ್ರವು ಬ್ರಹ್ಮನಿಂದ ರಾವಣನಿಗೂ, ಶಿವನಿಂದ ಬಾಣಾಸುರ ಮತ್ತು ದೂರ್ವಾಸರಿಗೂ, ಉಪದಿಷ್ಟವಾಯಿತೆಂದೂ, 'ಶಿವ ಕವಚ' ಕ್ಕೆ

‘ಪ್ರಜಾಪತಿಯೇ ಋಷಿಯು, ಗಾಯತ್ರಿಯೇ ಛಂದುಸ್ಸು, ಮಹೇಶ್ವರನೇ ದೇವತೆ, ಧರ್ಮಾರ್ಥಕಾಮಮೋಕ್ಷಗಳಲ್ಲೇ ಇದರ ವಿನಿಯೋಗವು. ಐದು ಲಕ್ಷಾವರ್ತಿ ಜಪಿಸಿದವರಿಗೆ ಇದು ಸಿದ್ಧಿಸುವುದು.’ ಎಂದು ಮಹೇಶ್ವರನು ಬಾಣಾಸುರನಿಗೆ ಬೋಧಿಸಿದನೆಂದೂ, ಮಹೇಶನ ಅಪ್ಪಣೆಯಂತೆ ಈ ಕವಚದ ನ್ಯಾಸವಿಧಿಯನ್ನರಿತು ಭಕ್ತಿಶ್ರದ್ಧೆಯಿಂದ ಇದನ್ನು ಧರಿಸಿದವರು ಸಾಕ್ಷಾತ್ ಮಹೇಶ್ವರನೇ ಆಗುವರೆಂದೂ, ಬಾಣಾಸುರನು ಹೇಳಿದ ‘ವಂದೇ ಸುರಾಣಾಂ ಸಾರಂ ಚ’ ಮುಂತಾದ ಶಿವನ ಸ್ತೋತ್ರವನ್ನು ಭಕ್ತಿಯಿಂದ ಭಜಿಸಿದವರು ಸಕಲಪಾಪವಿಮುಕ್ತರಾಗಿ ಇಹಲೋಕದಲ್ಲಿ ಅನಂತ ಸುಖಗಳನ್ನು ಅನುಭವಿಸಿ ಕೊನೆಯಲ್ಲಿ ಶಿವಲೋಕವನ್ನು ಹೊಂದಿ ಶಿವನ ಪಾರ್ಷದರಲ್ಲೊಬ್ಬರಾಗುವರೆಂದೂ, ಸೂತಪುತ್ರರು ಶೌನಕರನ್ನು ಕುರಿತು ನುಡಿದರು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ವಿಂಶೋಽಧ್ಯಾಯಃ ॥

ಮುದಾ ಮಾಲಾವತೀಸಾರ್ಧಂ ಗಂಧರ್ವಶ್ಚೋಪಬರ್ಹಣಃ ।
ರೇಮೇ ಕಾಲಾವಶೇಷಂ ಚ ತಾಭಿಶ್ಚ ನಿರ್ಜನೇ ವನೇ ॥ ೧ ॥

ಗಂಧರ್ವರಾಜೋ ಮುಮುದೇ ಪುತ್ರದಾರಾದಿಭಿಃ ಸಹ ।
ನಾನಾವಿಧಂ ಕ್ರತುವರಂ ಮಹತ್ಪುಣ್ಯಂ ಚಕಾರ ಹ ॥ ೨ ॥

ರಾಜತ್ವಂ ಬುಭುಜೇ ರಾಜಾ ಕುಬೇರಭವನೋಪಮೇ ।
ರೇಮೇ ಸುಶೀಲಯಾ ಸಾರ್ಧಂ ಸ್ಥಿರಯೌವನಯುಕ್ತಯಾ ॥ ೩ ॥

ಇಪ್ಪತ್ತನೆಯ ಅಧ್ಯಾಯವು

೧. ಸೂತಪುತ್ರ: ಗಂಧರ್ವನಾದ ಉಪಬರ್ಹಣನು, ಪಟ್ಟಮಹಿಷಿಯಾದ ಮಾಲಾವತಿಯೊಡನೆಯೂ, ಉಳಿದ ಪತ್ನಿಯರೊಡನೆಯೂ ಕೂಡಿ, ಉಳಿದ ತನ್ನ ಜೀವಿತಕಾಲವನ್ನು ನಿರ್ಜನವಾದ ವನದಲ್ಲಿ ಸಂತೋಷದಿಂದ ಕಳೆದನು.

೨. ಅವನ ತಂದೆಯಾದ ಗಂಧರ್ವರಾಜನೂ ಕೂಡ ಹೆಂಡತಿಮಕ್ಕಳೊಡ ಗೂಡಿ ಸಂತೋಷದಿಂದ ಬಹಳ ಪುಣ್ಯಕರವಾದ ಅನೇಕ ಯಜ್ಞಯಾಗಾದಿಗಳನ್ನು ನಡೆಸಿದನು.

೩. ಕುಬೇರನ ಮಂದಿರಕ್ಕೆ ಎಣೆಯಾದ ತನ್ನರಮನೆಯಲ್ಲಿ ರಾಜ್ಯಸುಖ ವನ್ನನುಭವಿಸಿ–ಯುವತಿಯೂ, ಸುಶೀಲೆಯೂ ಆದ ತನ್ನ ಪತ್ನಿಯೊಡನೆ ಕ್ರೀಡಿಸಿ ಕೊಂಡಿದ್ದನು.

ಗಂಧರ್ವರಾಜಃ ಕಾಲೇ ಚ ಗಂಗಾತೀರೇ ಮನೋಹರೇ ।
ಪತ್ನ್ಯಾ ಸಾರ್ಧಮಸೂಂಸ್ತ್ಯಕ್ತ್ವಾ ವೈಕುಂಠಂ ಚ ಯಯೌ ಮುದಾ ॥ ೪

ಶೈವಃ ಶಿವಪ್ರಸಾದೇನ ಪುತ್ರಸ್ಯ ವಿಷ್ಣು ಸೇವಯಾ ।
ಬಭೂವ ದಾಸೋ ವೈಕುಂಠೇ ವಿಷ್ಣೋಃ ಶ್ಯಾಮಚತುರ್ಭುಜಃ ॥ ೫ ॥

ಕೃತ್ವಾ ಪಿತ್ರೋಶ್ಚ ಸತ್ಕಾರಂ ಗಂಧರ್ವಶ್ಚೋಪಬರ್ಹಣಃ ।
ಬ್ರಾಹ್ಮಣೇಭ್ಯೋ ದದೌ ವಿಪ್ರ ಧನಾನಿ ವಿವಿಧಾನಿ ಚ ॥ ೬ ॥

ಕಾಲೇ ಸ್ವಯಂ ಬ್ರಹ್ಮಶಾಪಾತ್ಪ್ರಾಣಾಂಸ್ತ್ಯಕ್ತ್ವಾ ವಿಚಕ್ಷಣಃ ।
ಸ ಜಜ್ಞೇ ವೃಷಲೀಗರ್ಭೇ ಬ್ರಹ್ಮಬೀಜೇನ ಶೌನಕ ॥ ೭ ॥

ಮಾಲಾವತೀ ವಹ್ನಿಕುಂಡೇ ಪುಷ್ಕರೇ ಭಾರತೇ ಭುವಿ ।
ಕೃತ್ವಾ ತು ವಾಂಛಿತಂ ಕಾಮಂ ಪ್ರಾಣಾಂಸ್ತತ್ಯಾಜ ಸಾ ಸತೀ ॥ ೮ ॥

---

೪ ಗಂಧರ್ವರಾಜನು ತನ್ನ ಜೀವಿತಕಾಲಾವಸಾನದಲ್ಲಿ ಪ್ರಿಯಪತ್ನಿಯೊಡಗೂಡಿ, ಪುಣ್ಯತಮವಾದ ಗಂಗಾತೀರದಲ್ಲಿ ಪ್ರಾಣವನ್ನು ಬಿಟ್ಟು ಸಂತೋಷದಿಂದ ವೈಕುಂಠಕ್ಕೆ ತೆರಳಿದನು.

೫. ಪರಶಿವನ ಅನುಗ್ರಹದಿಂದ ಶಿವಭಕ್ತನೂ, ವಿಷ್ಣುಭಕ್ತನಾದ ಮಗನ ಪ್ರಭಾವದಿಂದ ವಿಷ್ಣುಭಕ್ತನೂ, ಚತುರ್ಭುಜನೂ ಆಗಿ ವೈಕುಂಠದಲ್ಲಿ ವಿಷ್ಣುವಿನ ಸೇವೆಮಾಡಿಕೊಂಡಿದ್ದನು.

೬. ಇತ್ತ ಉಪಬರ್ಹಣನು ತನ್ನ ತಂದೆತಾಯಿಗಳಿಗೆ ಉತ್ತರಕ್ರಿಯೆಗಳನ್ನು ಮಾಡಿ ಬ್ರಾಹ್ಮಣರಿಗೆ ಧನಕನಕವಸ್ತುವಾಹನಗಳನ್ನು ದಾನವಿತ್ತನು.

೭. ಅನಂತರ ತಾನೂ, ಬ್ರಹ್ಮಶಾಪದ ಅವಧಿಯು ತೀರಿದಮೇಲೆ ಪ್ರಾಣತ್ಯಾಗ ಮಾಡಿ, ಬ್ರಾಹ್ಮಣನ ವೀರ್ಯದಿಂದ ಶೂದ್ರಸ್ತ್ರೀಯೊಬ್ಬಳಲ್ಲಿ ಜನಿಸಿದನು.

೮. ಮಾಲಾವತಿಯಾದರೋ ಭರತಖಂಡದ ಪುಷ್ಕರಕ್ಷೇತ್ರದಲ್ಲಿ ಪತಿಗೆ ಸತ್ಕ್ರಿಯೆಗಳನ್ನು ಮಾಡಿ ತಾನೂ ಅಗ್ನಿಕುಂಡದಲ್ಲಿ ಆತ್ಮತ್ಯಾಗವನ್ನು ಮಾಡಿದಳು.

ಸೃಂಜಯಸ್ಯ ತು ಪತ್ನ್ಯಾಂ ಚ ಮನುವಂಶೋದ್ಭವಸ್ಯ ಚ ।
ಜಜ್ಞೇ ನೃಪಸ್ಯ ಸಾಧ್ವೀ ಸಾ ಪುಣ್ಯಾ ಜಾತಿಸ್ಮರಾ ವರಾ ॥ ೯ ॥

ಉಪಬರ್ಹಣಗಂಧರ್ವಃ ಪತಿರ್ಮೇ ಭವಿತೇತಿ ಚ ।
ಇತಿ ಕಾಮಾ ಕಾಮುಕೀ ಸಾ ಸುಂದರೀ ಸುಂದರೀವರಾ ॥ ೧೦ ॥

॥ ಶೌನಕ ಉವಾಚ ॥

ಬ್ರಹ್ಮವೀರ್ಯಾಚ್ಛೂದ್ರಪತ್ನ್ಯಾಂ ಗಂಧರ್ವಶ್ಚೋಪಬರ್ಹಣಃ ।
ಜಾತಃ ಕೇನ ಪ್ರಕಾರೇಣ ತದ್ಭವಾನ್ವಕ್ತುಮರ್ಹತಿ ॥ ೧೧ ॥

॥ ಸೌತಿರುವಾಚ ॥

ಕಾನ್ಯಕುಬ್ಜೇ ಚ ದೇಶೇ ಚ ದ್ರುಮಿಲೋ ನಾಮ ರಾಜಕಃ ।
ಕಲಾವತೀ ತಸ್ಯ ಪತ್ನೀ ವಂಧ್ಯಾ ಚಾಪಿ ಪತಿವ್ರತಾ ॥ ೧೨ ॥

ಸ್ವಾಮಿದೋಷೇಣ ಸಾ ವಂಧ್ಯಾ ಕಾಲೇ ಚ ಭರ್ತುರಾಜ್ಞಯಾ ।
ಉಪತಸ್ಥೇ ವನೇ ಘೋರೇ ನಾರದಂ ಕಾಶ್ಯಪಂ ಮುನಿಂ ॥ ೧೩ ॥

೯–೧೦. ಹಿಂದಿನ ಜಾತಿಸ್ಮರಣಶಕ್ತಿಯುಳ್ಳವಳೂ, ಪುಣ್ಯವತಿಯೂ ಆದ ಆಕೆಯು, ಮನುವಂಶಜನಾದ ಸೃಂಜಯನೆಂಬ ರಾಜನ ಪತ್ನಿಯಲ್ಲಿ ಪುನರ್ಜನ್ಮವೆತ್ತಿದಳು. ಆಗಲೂ ಆ ಸುಂದರಿಗೆ ಜನ್ಮಾಂತರವನ್ನು ಪಡೆದಿರುವ ಉಪಬರ್ಹಣನೇ ಪತಿಯಾಗಬೇಕೆಂದು ಬಹಳ ಬಯಕೆಯಾಗಿತ್ತು.

೧೧. ಶೌನಕ :—' ಗಂಧರ್ವನಾಗಿದ್ದ ಉಪಬರ್ಹಣನು, ಬ್ರಾಹ್ಮಣವೀರ್ಯದಿಂದ ಶೂದ್ರಸ್ತ್ರೀಯಲ್ಲಿ ಜನಿಸಿದ ಬಗೆ ಹೇಗೆ ? ' ಎಂಬುದನ್ನು ತಾವು ದಯವಿಟ್ಟು ವಿವರಿಸಬೇಕು.

೧೨. ಸೂತಪುತ್ರ :—ಕಾನ್ಯಕುಬ್ಜದಲ್ಲಿ ದ್ರುಮಿಲನೆಂಬ ಶೂದ್ರರಾಜನಿದ್ದನು. ಅವನಿಗೆ ಕಲಾವತಿಯೆಂಬ ಮಡದಿಯಿದ್ದಳು. ಪತಿವ್ರತೆಯಾದ ಆಕೆಗೆ ಮಕ್ಕಳಿರಲಿಲ್ಲ.

೧೩. ಪತಿಯ ದೋಷದಿಂದ ಬಂಜೆ ಎನಿಸಿಕೊಂಡ ಆಕೆಯು, ಪತಿಯ ಅಪ್ಪಣೆಯಂತೆ ಒಮ್ಮೆ ಘೋರವನದಲ್ಲಿ ತಪಸ್ಸು ಮಾಡುತ್ತಿದ್ದ ಕಶ್ಯಪ ಪುತ್ರನಾದ ನಾರದನ ಸಮೀಪಕ್ಕೆ ಬಂದಳು.

ಧ್ಯಾಯಮಾನಂ ಚ ಶ್ರೀಕೃಷ್ಣಂ ಜ್ವಲಂತಂ ಬ್ರಹ್ಮತೇಜಸಾ ।
ತಸ್ಥೌ ಸುವೇಷಂ ಕೃತ್ವಾ ಸಾ ಧ್ಯಾನಾಂತಂ ಚ ಮುನೇಃ ಪುರಃ ॥ ೧೪ ॥

ಗ್ರೀಷ್ಮಮಧ್ಯಾಹ್ನಮಾರ್ತಾಂಡಪ್ರಭಾತುಲ್ಯೇನ ತೇಜಸಾ ।
ತಪಂತಂ ದೂರತೋಽಪ್ಯೇವಂ ಸಮೀಪಂ ಗಂತುಮಕ್ಷಮಾ ॥ ೧೫ ॥

ಧ್ಯಾನಾಂತೇ ಚ ಮುನಿಶ್ರೇಷ್ಠಃ ಪರಃ ಕೃಷ್ಣಪರಾಯಣಃ ।
ದದರ್ಶ ಪುರತೋ ದೂರೇ ಸುಂದರೀಂ ಸ್ಥಿರಯೌವನಾಂ ॥ ೧೬ ॥

ಚಾರುಚಂಪಕವರ್ಣಾಢ್ಯಾಂ ಶರತ್ಪಂಕಜಲೋಚನಾಂ ।
ಶರತ್ಪಾರ್ವಣಚಂದ್ರಾಸ್ಯಾಂ ರತ್ನಭೂಷಣಭೂಷಿತಾಂ ॥ ೧೭ ॥

ಬೃಹನ್ನಿತಂಬಭಾರಾರ್ತಾಂ ಪೀನಶ್ರೋಣಿಪಯೋಧರಾಂ ।
ಶೋಭಿತಾಂ ಪೀತವಸ್ತ್ರೇಣ ಸಸ್ಮಿತಾಂ ರಕ್ತಲೋಚನಾಂ ॥ ೧೮ ॥

---

೧೪. ಬ್ರಹ್ಮವರ್ಚಸ್ವಿಯಾದ ಕಾಶ್ಯಪನು ಶ್ರೀಕೃಷ್ಣನನ್ನು ಧ್ಯಾನಮಾಡುತ್ತಿದ್ದನು. ಕಲಾವತಿಯು ಸುಂದರವೇಷಧಾರಿಣಿಯಾಗಿ ಅವನ ಧ್ಯಾನ ಸಮಾಪ್ತಿಯನ್ನು ನಿರೀಕ್ಷಿಸುತ್ತ ನಿಂತಳು.

೧೫. ಗ್ರೀಷ್ಮಋತುವಿನ ಮಧ್ಯಾಹ್ನದ ಸೂರ್ಯನಂತೆ ಪ್ರಚಂಡವಾದ ಆತನ ತೇಜಸ್ಸನ್ನು ತಡೆಯಲಾರದೆ ಕಲಾವತಿಯು ಬಹಳ ದೂರದಲ್ಲಿಯೇ ನಿಂತಳು

೧೬. ಕೃಷ್ಣಪರಮಾತ್ಮನಲ್ಲಿ ಆಸಕ್ತನಾದ ಮುನಿಯು ತನ್ನ ಧ್ಯಾನಾವಸಾನದಲ್ಲಿ ಕಣ್ತೆರೆದು, ತನ್ನ ಮುಂದೆ ಸುಂದರಿಯಾದ ಯುವತಿಯೊಬ್ಬಳು ನಿಂತಿರುವುದನ್ನು ಕಂಡನು.

೧೭-೨೦. ಮುನಿರೂಪಕ್ಕೆ ಮೋಹಿತಳಾಗಿ ಅವನೊಡನೆ ಸಂಭೋಗಿಸಬೇಕೆಂಬ ಬಯಕೆಯಿಂದ ತನ್ನ ಸ್ತನ ಮತ್ತು ನಿತಂಬ ಬಿಂಬಗಳನ್ನು ಪ್ರಕಟವಾಗಿ ತೋರ್ಪಡಿಸುತ್ತಿರುವ ಆಕೆಯು ಸಂಪಿಗೆಯಂತಿರುವ ದೇಹಕಾಂತಿಯನ್ನೂ, ಶರಚ್ಚಂದ್ರನಂತಿರುವ ವದನವನ್ನೂ, ಶರದೃತುವಿನ ತಾವರೆಯಂತೆ ವಿಶಾಲವಾದ ಕಣ್ಣುಗಳನ್ನೂ, ಗಾತ್ರಾನು

ಮೋಹಿತಾಂ ಮುನಿರೂಪೇಣ ಕಾಮಬಾಣಪ್ರಪೀಡಿತಾಂ ।
ದರ್ಶಯಂತೀಂ ಸ್ತನಶ್ರೋಣೀಂ ಮೈಥುನಾಸಕ್ತಚೇತಸಾ ॥ ೧೯ ॥

ಸಿಂಧೂರಬಿಂದುಭೂಷಾಢ್ಯಾಂ ಸುಚಾರುಕಜ್ಜಲೋಜ್ವಲಾಂ ।
ಪಾದಾಲಕ್ತಕಶೋಭಾಢ್ಯಾಂ ರೂಪೇಣೈವ ಯಥೋರ್ವಶೀಂ ॥ ೨೦ ॥

ಮುನಿಃ ಪಪ್ರಚ್ಛ ದೃಷ್ಟ್ವಾ ತಾಂ ಕಾ ತ್ವಂ ಕಾಮಿನಿ ನಿರ್ಜನೇ ।
ಕಸ್ಯ ಪತ್ನೀ ಕಥಂ ವಾತ್ರ ಸತ್ಯಂ ಬ್ರೂಹಿ ಚ ಪುಂಶ್ಚಲಿ ॥ ೨೧ ॥

ಮುನೇಶ್ಚ ವಚನಂ ಶ್ರುತ್ವಾ ಕಂಪಿತಾ ಚ ಕಲಾವತೀ ।
ಉವಾಚ ವಿನಯೇನೈವ ಕೃತ್ವಾ ಚ ಶ್ರೀಹರಿಂ ಹೃದಿ ॥ ೨೨ ॥

॥ ಕಲಾವತ್ಯುವಾಚ ॥

ಗೋಪಿಕಾಹಂ ದ್ವಿಜಶ್ರೇಷ್ಠ ದ್ರುಮಿಲಸ್ಯ ಚ ಕಾಮಿನೀ ।
ಪುತ್ರಾರ್ಥಿನೀ ಚಾಗತಾಹಂ ತ್ವನ್ಮೂಲಂ ಭರ್ತುರಾಜ್ಞಯಾ ॥ ೨೩ ॥

ಗುಣವಾಗಿರುವ ನಿತಂಬ ಮತ್ತು ಸ್ತನಗಳನ್ನೂ, ಮುನಿಯು ನೋಡಿದನು ತನ್ನ ಸೌಂದರ್ಯಕ್ಕೆ ಅನುಗುಣವಾಗಿ ಆಕೆಯು ಪೀತಾಂಬರವನ್ನುಟ್ಟು, ರತ್ನಾಭರಣಗಳಿಂದ ಅಲಂಕೃತಳಾಗಿ, ಹಣೆಗೆ ಸಿಂಧೂರ(ಚಂದ್ರ)ದ ಬೊಟ್ಟುಗಳನ್ನೂ ಕಣ್ಣಿಗೆ ಕಾಡಿಗೆಯನ್ನೂ, ಕಾಲಿನ ಉಗುರುಗಳಿಗೆ ಅರಗಿನ ರಸವನ್ನೂ, ಧರಿಸಿ ದೇವವೇಶ್ಯೆಯಾದ ಊರ್ವಶಿಯಂತಿದ್ದಳು.

೨೧. ಆಕೆಯನ್ನು ನೋಡಿದ ಋಷಿಯು, 'ಎಲೌ, ತಾಯಿಯೇ! ನೀನಾರ ಮಡದಿಯು? ನಿರ್ಜನವಾದ ಈ ವನಕ್ಕೆ ಏಕಾಕಿನಿಯಾಗಿ ಏಕೆ ಬಂದೆ? ನಿನ್ನನ್ನು ನೋಡಿದರೆ, ಕುಲಟೆಯಂತೆ ತೋರುವೆಯಲ್ಲ! ಸತ್ಯವನ್ನು ಹೇಳು' ಎಂದು ಕೇಳಿದನು

೨೨. ಋಷಿಯ ಮಾತುಗಳನ್ನು ಕೇಳಿ ಕಲಾವತಿಯು ಭಯಕಂಪಿತಳಾಗಿ, ಮನಸ್ಸಿನಲ್ಲೇ ಶ್ರೀಹರಿಯನ್ನು ಧ್ಯಾನಿಸುತ್ತಾ-ವಿನಯಭರಿತವಾದ ಕೆಲವು ನುಡಿಗಳನ್ನಾಡಿದಳು.

೨೩. ಕಲಾವತೀ:—ಎಲೈ, ಮುನಿವರ್ಯನೇ! ನಾನು ದ್ರುಮಿಲನೆಂಬ ರಾಜನ ಮಡದಿಯಾದ ಶೂದ್ರಳು. ಮಕ್ಕಳಿಲ್ಲದ ನಾನು ನನ್ನ ಪತಿಯ ಅಪ್ಪಣೆಯಂತೆ ಪುತ್ರಪ್ರಾಪ್ತಿಗಾಗಿ ನಿನ್ನ ಸಮೀಪಕ್ಕೆ ಬಂದಿರುವೆನು.

ವೀರ್ಯಾಧಾನಂ ಕುರು ಮಯಿ ಸ್ತ್ರೀಣೋಪೇಕ್ಷ್ಯಾ ಹ್ಯುಪಸ್ಥಿತಾ ।
ತೇಜೀಯಸಾಂ ನ ದೋಷಾಯ ವಹ್ನೇಃ ಸರ್ವಭುಜೋ ಯಥಾ ॥ ೨೪ ॥

ವೃಷಲೀವಚನಂ ಶ್ರುತ್ವಾ ಚುಕೋಪ ಮುನಿಸತ್ತಮಃ ।
ಉವಾಚ ನಿತ್ಯಂ ಸತ್ಯಂ ಚ ಕೋಪಪ್ರಸ್ಫುರಿತಾಧರಃ ॥ ೨೫ ॥

॥ ಕಾಶ್ಯಪ ಉವಾಚ ॥

ಯಃ ಸ್ವಲಕ್ಷ್ಮೀಂ ಚ ಭೋಗಾರ್ಹಾಂ ಪರಾಯ ದಾತುಮಿಚ್ಛತಿ ।
ತಂ ಸಾ ತ್ಯಜತಿ ಮೂಢಂ ಚ ವೇದವಾದ ಇತಿ ಧ್ರುವಂ ॥ ೨೬ ॥

ನ ತ್ವಂ ದ್ರುಮಿಲಭೋಗಾರ್ಹಾ ಪುನರೇವ ಭವಿಷ್ಯಸಿ ।
ವಿರಕ್ತೇನ ಸ್ವಯಂ ತ್ಯಕ್ತಾ ನ ಗೃಹ್ಣಾತಿ ಚ ತ್ವಾಂ ಪುನಃ ॥ ೨೭ ॥

---

೨೪. ಅಗ್ನಿದೇವನಿಗೆ ಭಕ್ಷ್ಯಾಭಕ್ಷ್ಯನಿಬಂಧನೆಯಿಲ್ಲದಿರುವಂತೆ–ತೇಜಃಶಾಲಿಗಳಿಗೆ ಗಮ್ಯಾಗಮ್ಯವಿವೇಚನೆಯು ಅನವಶ್ಯಕವಲ್ಲವೇ! ಆದ್ದರಿಂದ ಪುತ್ರಾಪೇಕ್ಷೆಯಿಂದ ನಿನ್ನೆಡೆಗೆ ಬಂದಿರುವ ಅಬಲೆಯಾದ ನನ್ನನ್ನು ಉಪೇಕ್ಷಿಸದೆ–ನನ್ನಲ್ಲಿ ವೀರ್ಯಾಧಾನಮಾಡು.

೨೫. ಇಂತು ನುಡಿದ ಶೂದ್ರಸ್ತ್ರೀಯ ಮಾತನ್ನು ಕೇಳಿ ಋಷಿವರ್ಯನು ಕುಪಿತನಾಗಿ ತನ್ನ ಕೆಳತುಟಿಯು ನಡುಗುತ್ತಿರಲು, ನಿತ್ಯವೂ, ಸತ್ಯವೂ ಆದ ಕೆಲವು ಮಾತುಗಳನ್ನಾಡಿದನು.

೨೬. ಕಾಶ್ಯಪ:—ಭೋಗಾರ್ಹಳಾದ ತನ್ನ ಗೃಹಲಕ್ಷ್ಮಿಯನ್ನು ಯಾರು ಪರಪುರುಷನಿಗೆ ಕೊಡಲು ಯೋಚಿಸುವನೋ, ಆ ಮೂಢನನ್ನು ಆಕೆಯೂ ಕೂಡ ತ್ಯಜಿಸುವಳೆಂಬುದು ಅನಾದಿಸಿದ್ಧವಾದುದು.

೨೭. ಪರಪುರುಷನೊಡಗೂಡಿದ ನೀನು ಮತ್ತೆ ನಿನ್ನ ಪತಿಯೊಡನೆ ಭೋಗಿಸಲು ಅನರ್ಹಳಾಗುವೆ. ತಾನಾಗಿಯೇ ತ್ಯಜಿಸಿದ ವಿರಕ್ತನಾದ ನಿನ್ನ ಪತಿಯೂ ಕೂಡ ನಿನ್ನನ್ನು ಮತ್ತೆ ಸ್ವೀಕರಿಸುವುದಿಲ್ಲ.

ಯಃ ಶೂದ್ರಪತ್ನೀಂ ಗೃಹ್ಣಾತಿ ಬ್ರಾಹ್ಮಣೋ ಜ್ಞಾನದುರ್ಬಲಃ ।
ಸ ಚಂಡಾಲೋ ಭವೇತ್ಸತ್ಯಂ ನ ಕರ್ಮಾರ್ಹೋ ದ್ವಿಜಾತಿಷು ॥ ೨೮ ॥

ಪಿತೃಶ್ರಾದ್ಧೇ ಚ ಯಜ್ಞೇ ಚ ಶಿಲಾಸ್ಪರ್ಶೇ ಸುರಾರ್ಚನೇ ।
ನಾಧಿಕಾರಶ್ಚ ತಸ್ಯೈವಮಿತ್ಯಾಹ ಕಮಲೋದ್ಭವಃ ॥ ೨೯ ॥

ಕುಂಭೀಪಾಕಂ ಸ್ವಯಂ ಯಾತಿ ಪಾತಯಿತ್ವಾ ಚ ಪೂರುಷಾನ್ ।
ಮಾತಾಮಹಾನ್ ಸ್ವಾತ್ಮನಶ್ಚ ಸಶಪೂರ್ವಾನ್ ದಶಾಪರಾನ್ ॥ ೩೦ ॥

ತತ್ತರ್ಪಣಂ ಮೂತ್ರಮೇವ ಪಿಂಡಂ ಸದ್ಯಃ ಪುರೀಷಕಂ ।
ಶಾಲಗ್ರಾಮಸ್ಯ ತತ್ಸ್ಪರ್ಶೇ ಚೋಪವಾಸಸ್ತ್ರಿರಾತ್ರಕಂ ॥ ೩೧ ॥

---

೨೮. ಬ್ರಾಹ್ಮಣ ಜನ್ಮದಲ್ಲಿ ಹುಟ್ಟಿದ್ದರೂ ತಿಳಿವಳಿಕೆ ಸಾಲದೆ ಯಾರು ಶೂದ್ರ ಸ್ತ್ರೀಯೊಡಗೂಡುವರೋ, ಅವರು ಬ್ರಾಹ್ಮಣನಿಗೆ ಉಚಿತವಾದ ಕರ್ಮಗಳಿಗೆ ಅನರ್ಹರಾಗಿ ಕರ್ಮಚಂಡಾಲರೆನಿಸುವರು.

೨೯. ಪಿತೃಶ್ರಾದ್ಧಮಾಡುವುದಕ್ಕಾಗಲೀ, ಯಜ್ಞಯಾಗಾದಿಕರ್ಮಾಚರಣೆಗಾಗಲೀ, ಸಾಲಿಗ್ರಾಮಶಿಲೆಯನ್ನು ಸ್ಪರ್ಶಮಾಡುವುದಕ್ಕಾಗಲೀ, ದೇವತಾರ್ಚನೆಗಾಗಲೀ, ಆ ಕರ್ಮಚಂಡಾಲನಿಗೆ ಅಧಿಕಾರವಿಲ್ಲವೆಂದು ಬ್ರಹ್ಮದೇವನು ಹೇಳಿರುವನು.

೩೦. ಮತ್ತು ಕುಂಭೀಪಾಕನರಕದಲ್ಲಿ ಬಿದ್ದು ತೊಳಲುವುದಲ್ಲದೆ ತನ್ನ ಮಾತಾಮಹಾದಿ ಹತ್ತು ಜನ ಪೂರ್ವಜರನ್ನೂ, ತನ್ನ ಪುತ್ರನೇ ಮೊದಲಾದ ಹತ್ತು ಜನ ಅವರಜ (ಮುಂದಿನವರು)ರನ್ನೂ ನರಕಕ್ಕೆ ಕೊಂಡೊಯ್ಯುವನು.

೩೧. ಆ ಚಂಡಾಲನು ತನ್ನ ಪಿತೃದೇವತೆಗಳಿಗೆ ಕೊಡುವ ತರ್ಪಣೋದಕವು ಮೂತ್ರಸದೃಶವೂ, ಪಿಂಡವು ಅಮೇಧ್ಯಸದೃಶವೂ ಆಗುವುದು. ಅವರು ಸಾಲಿಗ್ರಾಮ ಶಿಲೆಯನ್ನು ಮುಟ್ಟಿದರೆ ಆ ಪಾಪಪರಿಹಾರಕ್ಕಾಗಿ ಮೂರುರಾತ್ರಿ ಉಪವಾಸ ಮಾಡಬೇಕು.

ತದಿಷ್ಟದೇವೋ ಗೃಹ್ಣಾತಿ ನ ನೈವೇದ್ಯಂ ಸ ತಜ್ಜಲಂ।
ಸಂನ್ಯಾಸಿನಾಂ ಬ್ರಾಹ್ಮಣಾನಾಂ ತದನ್ನಂ ಚ ಪುರೀಷವತ್ ॥ ೩೨ ॥

ಕುಂಭೀಪಾಕೇ ಪಚ್ಯತೇ ಸ ಶಕ್ರಾಂತಂ ಯಾವದೇವ ಹಿ।
ಏಕವಿಂಶತಿಪುರುಷೈಃ ಸಾರ್ಧಂ ಸತ್ಯಂ ಚ ಪುಂಶ್ಚಲಿ। ॥ ೩೩ ॥

ಶೂದ್ರೋಚ್ಛಿಷ್ಟಂ ಚ ಯೋ ಭುಂಕ್ತೇ ಶೂದ್ರಾಣಾಂ ಬ್ರಾಹ್ಮಣಾಧಮಃ।
ತತ್ತುಲ್ಯೋಽಧರಭೋಜೀ ಚೈವೇತ್ಯಾಂಗಿರಸ ಭಾಷಿತಂ ॥ ೩೪ ॥

ಶೂದ್ರೋ ವಾ ಯದಿ ಗೃಹ್ಣಾತಿ ಬ್ರಾಹ್ಮಣೀಂ ಜ್ಞಾನದುರ್ಬಲಃ।
ಸ ಪಚ್ಯತೇ ಕಾಲಸೂತ್ರೇ ಯಾವದಿಂದ್ರಾಶ್ಚತುರ್ದಶ ॥ ೩೫ ॥

ಅಷ್ಟಾದಶೇಂದ್ರಾವಚ್ಛಿನ್ನಂ ಕಾಲಂ ಚ ಕಾಲಸೂತ್ರಕೇ।
ಬ್ರಾಹ್ಮಣೀ ಪಚ್ಯತೇ ತತ್ರ ಭಕ್ಷಿತಾ ಕ್ರಿಮಿಭಿರ್ಧ್ರುವಂ ॥ ೩೬ ॥

---

೩೨. ಅವನು ಅರ್ಪಣೆಮಾಡಿದ ನೈವೇದ್ಯಾನ್ನವನ್ನೂ, ಪಾದೋದಕವನ್ನೂ ಅವನ ಇಷ್ಟದೇವತೆಯು ಸ್ವೀಕರಿಸುವದಿಲ್ಲ ಸನ್ಯಾಸಿಗಳೂ ಮತ್ತು ಬ್ರಾಹ್ಮಣರೂ, ಅವನು ಹಾಕಿದ ಅನ್ನವನ್ನು ಅಮೇಧ್ಯದಂತೆಯೇ ತಿಳಿಯುವರು.

೩೩. ಆ ಕರ್ಮಚಂಡಾಲನ ಅನ್ನ ನೀರುಗಳನ್ನು ಸ್ವೀಕರಿಸಿದವನೂ ಕೂಡ ತನ್ನ ವಂಶದ ಇಪ್ಪತ್ತೊಂದು ತಲೆಯವರೆಗಿನ ಪುರುಷರೊಡಗೂಡಿ ಕುಂಭೀಪಾಕದಲ್ಲಿ ಬಿದ್ದು ನರಳುವರು.

೩೪. ಶೂದ್ರರ ಎಂಜಲೆಲೆಯಲ್ಲಿ ಉಳಿದಿರುವ ಅನ್ನವನ್ನು ತಿನ್ನುವ ಬ್ರಾಹ್ಮಣನೂ, ಶೂದ್ರಸ್ತ್ರೀಯ ಅಧರಪಾನಮಾಡುವ ಬ್ರಾಹ್ಮಣನೂ ಸಮಾನವಾದ ಪಾಪಕ್ಕೆ ಗುರಿಯಾಗುವರೆಂದು ಆಂಗಿರಸ ಮಹರ್ಷಿಗಳು ಹೇಳುವರು.

೩೫. ಯಾವನಾದರೂ ಶೂದ್ರನು ತಿಳಿವಳಿಕೆಯಿಲ್ಲದೆ ಬ್ರಾಹ್ಮಣಸ್ತ್ರೀಯೊಡ ಗೂಡಿದರೆ ಅವನು ಚತುರ್ದಶ ಇಂದ್ರರ ಜೀವಿತಕಾಲದವರೆಗೂ ಕಾಲಸೂತ್ರವೆಂಬ ನರಕದಲ್ಲಿ ಬಿದ್ದು ತೊಳಲುವನು.

೩೬. ಶೂದ್ರನೊಡಗೂಡಿದ ಬ್ರಾಹ್ಮಣಿಯಾದರೋ ಹದಿನೆಂಟು ಮಂದಿ ಇಂದ್ರರ ಜೀವಿತಕಾಲದವರೆಗೆ ಕಾಲಸೂತ್ರದಲ್ಲಿ ನರಳಿ ಕೊನೆಗೆ ಕ್ರಿಮಿಕೀಟಗಳ ಆಹಾರವಾಗುವಳು.

ತತಶ್ಚಂಡಾಲಯೋನೌ ಚ ಲಬ್ಧ್ವಾ ಜನ್ಮ ಚ ಬ್ರಾಹ್ಮಣೀ ।
ಶೂದ್ರಶ್ಚ ಕುಷ್ಠೀ ಭವತಿ ಜ್ಞಾತಿಭಿಃ ಪರಿವರ್ಜಿತಃ ॥ ೩೭ ॥

ಇತ್ಯುಕ್ತ್ವಾ ಚ ಮುನಿಶ್ರೇಷ್ಠೋ ವಿರರಾಮ ಚ ಶೌನಕ ।
ವೃಷಲೀ ತತ್ಪುರಸ್ತಸ್ಥೌ ಶುಷ್ಕಕಂಠೌಷ್ಠತಾಲುಕಾ ॥ ೩೮ ॥

ಏತಸ್ಮಿನ್ನಂತರೇ ತೇನ ಪಥಾ ಯಾತಿ ಚ ಮೇನಕಾ ।
ತಸ್ಯಾ ಊರುಂ ಸ್ತನಂ ದೃಷ್ಟ್ವಾ ಮುನೇರ್ವೀರ್ಯಂ ಪಪಾತ ಹ ॥ ೩೯ ॥

ಋತುಸ್ನಾತಾ ಚ ವೃಷಲೀ ಪೀತ್ವಾ ತತ್ರ ಕ್ಷಣಂ ಮುದಾ ।
ಮುನಿಂ ಪ್ರಣಮ್ಯ ಪ್ರಹೃಷ್ಟಾ ಪ್ರಯಯೌ ಭರ್ತುರಂತಿಕಂ ॥ ೪೦ ॥

---

೩೭. ಅನಂತರ ಚಂಡಾಲ ಯೋನಿಯಲ್ಲೇ ಆ ಬ್ರಾಹ್ಮಣಿಯ ಜನನವಾಗುವುದು. ಅವಳ ಸಂಗಮಾಡಿದ ಶೂದ್ರನೂ ಕೂಡ ಕುಷ್ಠರೋಗಿಯಾಗಿ ಕುಲಕ್ಕೆ ಹೊರಗಾಗುವನು.

೩೮. ಎಲೈ ಶೌನಕನೇ! ಕಾಶ್ಯಪನು ಇಂತು ನುಡಿದು ಸುಮ್ಮನಾಗಲು, ಕಲಾವತಿಯೂ ಕೂಡ ಒರಿಮಾತಿನಿಂದ ಗಂಟಲು ತುಟಿಗಳನ್ನು ಒಣಗಿಸಿಕೊಂಡು ಅವನೆದುರಿನಲ್ಲಿ ಸುಮ್ಮನೆ ನಿಂತಳ..

೩೯. ಇಷ್ಟರೊಳಗೆ ಅದೇ ಮಾರ್ಗವಾಗಿ ಅಪ್ಸರಸಿಯಾದ ಮೇನಕೆಯು ಬಂದಳು. ಆಕೆಯ ತೊಡೆ ಮತ್ತು ಸ್ತನಗಳ ಸೌಂದರ್ಯವನ್ನು ನೋಡಿದ್ದ ಕಾಶ್ಯಪನಿಗೆ ವೀರ್ಯಸ್ಖಲನವಾಯಿತು.

೪೦. ಋತುಸ್ನಾತಳಾಗಿ ಕಾದು ನಿಂತಿದ್ದ ಕಲಾವತಿಯು, ಸ್ಖಲಿತವಾದ ಋಷಿಯ ಆ ವೀರ್ಯವನ್ನು ಸಂತೋಷದಿಂದ ಸ್ವೀಕರಿಸಿ, ಮಹರ್ಷಿಗೆ ವಂದಿಸಿ ತನ್ನ ಪತಿಯಡೆಗೆ ಬಂದಳು.

ಗತ್ವಾ ಪ್ರಣಮ್ಯ ದ್ರುಮಿಲಂ ಕಾಂತಾ ಕಾಂತಂ ಮನೋಹರಂ ।
ಸರ್ವಂ ನಿವೇದಯಾಮಾಸ ವೃತ್ತಾಂತಂ ಗರ್ಭಹೇತುಕಂ ॥ ೪೧ ॥

ಕಲಾವತೀವಚಃ ಶ್ರುತ್ವಾ ಪ್ರಹೃಷ್ಟವದನೇಕ್ಷಣಃ ।
ಉವಾಚ ಕಾಂತಾಂ ಮಧುರಂ ಪರಿಣಾಮಸುಖಾವಹಂ ॥ ೪೨ ॥

॥ ದ್ರುಮಿಲ ಉವಾಚ ॥

ವಿಪ್ರಸ್ಯ ವೀರ್ಯಂ ತ್ವದ್ಗರ್ಭೇ ವೈಷ್ಣವಸ್ಯ ಮಹಾತ್ಮನಃ ।
ವೈಷ್ಣವೋ ಭವಿತಾ ಬಾಲಸ್ತ್ವಂ ಚ ಭಾಗ್ಯವತೀ ಸತೀ ॥ ೪೩ ॥

ಯದ್ಗರ್ಭೇ ವೈಷ್ಣವೋ ಜಾತೋ ಯಸ್ಯ ವೀರ್ಯೇಣ ವಾ ಸತಿ ।
ತಯೋರ್ಯಾತಿ ಚ ವೈಕುಂಠಂ ಪುರುಷಾಣಾಂ ಶತಂ ಶತಂ ॥ ೪೪ ॥

ತೌ ಚ ವಿಷ್ಣುವಿಮಾನೇನ ಸದ್ರತ್ನನಿರ್ಮಿತೇನ ಚ ।
ಯಾತೌ ವೈಕುಂಠನಗರಂ ಜನ್ಮಮೃತ್ಯುಜರಾಹರಂ ॥ ೪೫ ॥

---

೪೧. ಬಂದವಳೇ ತನ್ನ ಪತಿಯಾದ ದ್ರುಮಿಲನಿಗೆ ವಂದಿಸಿ, ತಾನು ಕಾಶ್ಯಪ ಮುನಿಯಿಂದ ಗರ್ಭವತಿಯಾಗಿ ಬಂದ ಸಮಾಚಾರವೆಲ್ಲವನ್ನೂ ಆಮೂಲಾಗ್ರವಾಗಿ ವಿವರಿಸಿದಳು.

೪೨. ಕಲಾವತಿಯ ಮಾತನ್ನು ಕೇಳಿ ಸಂತೋಷಗೊಂಡು ದ್ರುಮಿಲನು ಆಕೆಯನ್ನು ಕುರಿತು ಕೆಲವು ಮಾತುಗಳನ್ನಾಡಿದನು.

೪೩. ದ್ರುಮಿಲ:—"ನಿನ್ನ ಗರ್ಭದಲ್ಲಿ ಮಹಾತ್ಮನೂ, ವಿಷ್ಣುಭಕ್ತನೂ ಆದ ಬ್ರಾಹ್ಮಣನ ವೀರ್ಯವಿರುವುದರಿಂದ ನಿನಗೆ ವಿಷ್ಣುಭಕ್ತನಾದ ಮಗನೇ ಜನಿಸುವನು. ನೀನು ಭಾಗ್ಯವತಿಯಾಗಿ ಬಾಳುವೆ."

೪೪. ಎಲೌ, ಸತಿಯೇ ವಿಷ್ಣುಭಕ್ತನು ಯಾರ ವೀರ್ಯದಿಂದ ಯಾರ ಗರ್ಭದಲ್ಲಿ ಜನಿಸುವನೋ ಆ ಜನನೀಜನಕರಿಬ್ಬರು ನೂರುಜನ ತಮ್ಮ ವಂಶಜರೊಡನೆ ವೈಕುಂಠಲೋಕದಲ್ಲಿ ವಿಷ್ಣುಸಾನ್ನಿಧ್ಯವನ್ನು ಪಡೆಯುವರು.

೪೫. ವಿಷ್ಣುಭಕ್ತನ ಜನನೀಜನಕರೂ ಕೂಡ ರತ್ನನಿರ್ಮಿತವಾದ ವಿಷ್ಣು ವಿಮಾನದಲ್ಲಿ ಕುಳಿತು ಜನ್ಮಜರಾಮರಣನಾಶಕವಾದ ವೈಕುಂಠಲೋಕವನ್ನು ಸೇರುವರು.

ಕಸ್ಯಚಿದ್ಬ್ರಾಹ್ಮಣಸ್ಯೈವ ಗೇಹಂ ಗಚ್ಛ ಶುಭಾನನೇ ।
ಪಶ್ಚಾನ್ಮಮಾಂತಿಕಂ ಭದ್ರೇ ಯಾಸ್ಯಸೀತಿ ಹರೇಃ ಪುರಂ ॥ ೪೬ ॥

ಇತ್ಯುಕ್ತ್ವಾ ಗೋಪರಾಜಶ್ಚ ಸ್ನಾತ್ವಾ ಕೃತ್ವಾ ತು ತರ್ಪಣಂ ।
ಸಂಪೂಜ್ಯಾಭೀಷ್ಟದೇವಂ ಚ ಬ್ರಾಹ್ಮಣೇಭ್ಯೋ ಧನಂ ದದೌ ॥ ೪೭ ॥

ಅಶ್ವಾನಾಂ ಚ ಚತುರ್ಲಕ್ಷಂ ಗಜಾನಾಂ ಲಕ್ಷಮೇವ ಚ ।
ಶತಂ ಮತ್ತಗಜೇಂದ್ರಾಣಾಂ ಬ್ರಾಹ್ಮಣೇಭ್ಯೋ ದದೌ ಮುದಾ ॥ ೪೮ ॥

ಉಚ್ಚೈಃಶ್ರವಃ ಪಂಚಲಕ್ಷಂ ರಥಾನಾಂ ಚ ಸಹಸ್ರಕಂ ।
ಶಕಟಾನಾಂ ತ್ರಿಲಕ್ಷಂ ಚ ಬ್ರಾಹ್ಮಣೇಭ್ಯೋ ದದೌ ಮುದಾ ॥ ೪೯ ॥

ಗವಾಂ ದ್ವಾದಶಲಕ್ಷಂ ಚ ಮಹಿಷಾಣಾಂ ತ್ರಿಲಕ್ಷಕಂ ।
ತ್ರಿಲಕ್ಷಂ ರಾಜಹಂಸಾನಾಂ ಬ್ರಾಹ್ಮಣೇಭ್ಯೋ ದದೌ ಮುದಾ ॥ ೫೦ ॥

---

೪೬. ಎಲೌ, ಮಂಗಳಾಂಗಿಯೇ, ನೀನೀಗ ಯಾವನಾದರೊಬ್ಬ ಬ್ರಾಹ್ಮಣನ ಮನೆಯಲ್ಲಿಯೇ ಹೋಗಿ ಸೇರು. ಕೆಲವು ಕಾಲದಮೇಲೆ ನನ್ನ ಸಮೀಪಕ್ಕೆ ಕರೆಸಿಕೊಳ್ಳುತ್ತೇನೆ.

೪೭. ಗೋಪರಾಜನಾದ ದ್ರುಮಿಲನು ಇಂತು ನುಡಿದು, ಸ್ನಾನಮಾಡಿ, ಪಿತೃದೇವತೆಗಳಿಗೆ ತರ್ಪಣವನ್ನಿತ್ತು, ಇಷ್ಟದೇವತೆಯನ್ನು ಪೂಜಿಸಿ ಬ್ರಾಹ್ಮಣರಿಗೆ ದ್ರವ್ಯದಾನಮಾಡಿದನು.

೪೮. ನಾಲ್ಕು ಲಕ್ಷ ಕುದುರೆಗಳನ್ನೂ ಒಂದು ಲಕ್ಷ ಆನೆಗಳನ್ನೂ ನೂರು ಮದದಾನೆಗಳನ್ನೂ ಬ್ರಾಹ್ಮಣರಿಗೆ ಸಂತೋಷದಿಂದ ದಾನಮಾಡಿದನು.

೪೯–೫೦. ಅಲ್ಲದೆ ಇಂದ್ರನ ಕುದುರೆಯಾದ ಉಚ್ಚೈಃಶ್ರವದಂತಿರುವ ಐದು ಲಕ್ಷ ಕುದುರೆಗಳನ್ನೂ, ಸಾವಿರ ರಥಗಳನ್ನೂ, ಲಕ್ಷ ಗಾಡಿಗಳನ್ನೂ, ಹನ್ನೆರಡು ಲಕ್ಷ ಗೋವುಗಳನ್ನೂ, ಮೂರು ಲಕ್ಷ ಎಮ್ಮೆಗಳನ್ನೂ, ಮೂರು ಲಕ್ಷ ರಾಜಹಂಸಗಳನ್ನೂ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು.

ಪಾರಾವತಾನಾಂ ಲಕ್ಷಂ ಚ ಶುಕಾನಾಂ ಚ ಶತಂ ಮುನೇ ।
ಲಕ್ಷಂ ಚ ದಾಸದಾಸೀನಾಂ ಬ್ರಾಹ್ಮಣೇಭ್ಯೋ ದದೌ ಮುದಾ ॥ ೫೧ ॥

ಗ್ರಾಮಾಣಾಂ ಚ ಸಹಸ್ರಂ ಚ ನಗರಾಣಾಂ ಶತಂ ಶತಂ ।
ಧಾನ್ಯತಂಡುಲಶೈಲಂ ಚ ಬ್ರಾಹ್ಮಣೇಭ್ಯೋ ದದೌ ಮುದಾ ॥ ೫೨ ॥

ಶತಕೋಟಿಂ ಸುವರ್ಣಾನಾಂ ರತ್ನಾನಾಂ ಚ ಸಹಸ್ರಕಂ ।
ಮುದ್ರಾಣಾಂ ಕೋಟಿಕಲಶಂ ಬ್ರಾಹ್ಮಣೇಭ್ಯೋ ದದೌ ಮುದಾ ॥ ೫೩ ॥

ದದೌ ತೈಜಸಪಾತ್ರಾಣಾಂ ಭೂಷಣಾನಾಮಸಂಖ್ಯಕಂ ।
ತಾಂ ಸ್ತ್ರಿಯಂ ರತ್ನಭೂಷಾಢ್ಯಾಂ ಬ್ರಾಹ್ಮಣೇಭ್ಯೋ ದದೌ ಮುದಾ ॥ ೫೪ ॥

ರಾಜ್ಯಂ ದತ್ವಾ ಮಹಾರಾಜೋಽಪ್ಯಂತರ್ಬಾಹ್ಯೇ ಹರಿಂ ಸ್ಮರನ್ ।
ಜಗಾಮ ಬದರೀಂ ಗೋಪ್ರೋ ಮನೋಗಾಮೀ ಮುದಾನ್ವಿತಃ ॥ ೫೫ ॥

೫೧–೫೩. ಇದೇ ಸಂದರ್ಭದಲ್ಲಿ ಒಂದುಲಕ್ಷ ಪಾರಿವಾಳಗಳೂ, ನೂರು ಗಿಣಿಗಳೂ, ಲಕ್ಷ ದಾಸ ದಾಸಿಯರೂ, ಸಹಸ್ರಾರು ಗ್ರಾಮಗಳೂ, ನೂರಾರು ನಗರಗಳೂ ಬೆಟ್ಟದಂತಿರುವ ಧಾನ್ಯರಾಶಿಗಳೂ, ನೂರಾರುಕೋಟಿ ಸುವರ್ಣ ನಾಣ್ಯಗಳೂ, ಸಹಸ್ರಾರು ರತ್ನಾಭರಣಗಳೂ, ರಾಜಮುದ್ರೆ ಇರುವ ಕೋಟ್ಯಂತರ ಕಲಶಗಳೂ ಬ್ರಾಹ್ಮಣರಿಗೆ ಆ ರಾಜನಿಂದ ದಾನವಾಗಿ ಸಂದವು.

೫೪. ಲೆಕ್ಕವಿಲ್ಲದಷ್ಟು ಸುವರ್ಣ ಪಾತ್ರೆಗಳನ್ನೂ, ಸ್ವರ್ಣಭೂಷಣಗಳನ್ನೂ ಬ್ರಾಹ್ಮಣರಿಗೆ ಕೊಟ್ಟು ರತ್ನಾಲಂಕೃತಳಾದ ಕಲಾವತಿಯನ್ನೂ ಕೂಡ ಬಾಹ್ಮಣನೊಬ್ಬನಿಗೆ ದಾನಮಾಡಿದನು.

೫೫. ಮಹಾರಾಜನಾದ ದ್ರುಮಿಲನು ರಾಜ್ಯವನ್ನೂ ಕೂಡ ದಾನಮಾಡಿ ಕಾಯಾವಾಚಾಮನಸಾ ಪರಮಾತ್ಮನನ್ನು ಸ್ಮರಿಸುತ್ತಾ ಮನೋವೇಗದಿಂದ ಬದರಿಕಾಶ್ರಮಕ್ಕೆ ಹೋಗಿ ಸೇರಿದನು.

ತತ್ರ ಮಾಸಂ ತಪಃ ಕೃತ್ವಾ ಗಂಗಾತೀರೇ ಮನೋಹರೇ ।
ಪ್ರಾಣಾಂಸ್ತತ್ಯಾಜ ಯೋಗೇನ ಸದ್ಯೋ ದೃಷ್ಟೋ ಮಹರ್ಷಿಭಿಃ ॥ ೫೬ ॥

ಸ ಚ ವಿಷ್ಣುವಿಮಾನೇನ ರತ್ನೇಂದ್ರನಿರ್ಮಿತೇನ ಚ ।
ಸಂಯುಕ್ತೋ ವಿಷ್ಣುದೂತೈಶ್ಚ ವೈಕುಂಠಂ ಚ ಜಗಾಮ ಹ ॥ ೫೭ ॥

ತತ್ರ ಪ್ರಾಪ ಹರೇರ್ದಾಸ್ಯಂ ಹರಿದಾಸೋ ಬಭೂವ ಸಃ ।
ವೃತ್ತಾಂತಂ ಚ ಕಲಾವತ್ಯಾಃ ಶ್ರೂಯತಾಮಿತಿ ಶೌನಕ ॥ ೫೮ ॥

ಗತೇ ಕಲಾವತೀನಾಥೇ ಉಚ್ಚೈಶ್ಚ ಪ್ರರುರೋದ ಹ ।
ವಹ್ನೌ ಪ್ರಾಣಾಂಸ್ತ್ಯಕ್ತುಕಾಮಾ ಬ್ರಾಹ್ಮಣೇನೈವ ರಕ್ಷಿತಾ ॥ ೫೯ ॥

ಬ್ರಾಹ್ಮಣೋ ಮಾತರಿತ್ಯುಕ್ತ್ವಾ ತಾಂ ಗೃಹೀತ್ವಾ ಮುದಾನ್ವಿತಃ ।
ಜಗಾಮ ರತ್ನಪೂರ್ಣಂ ಚ ಸ್ವಗೇಹಂ ಚ ಕ್ಷಣೇನ ಚ ॥ ೬೦ ॥

---

೫೬. ಅಲ್ಲಿ ಮನೋಹರವಾದ ಗಂಗಾತೀರದಲ್ಲಿ ಒಂದು ತಿಂಗಳು ತಪಸ್ಸು ಮಾಡಿ ಮಹರ್ಷಿಗಳ ಕಣ್ಣೆದುರಿನಲ್ಲಿಯೇ ಯೋಗಶಕ್ತಿಯಿಂದ ಪ್ರಾಣ ತ್ಯಾಗಮಾಡಿದನು.

೫೭. ಅನಂತರ ಉತ್ತಮರತ್ನನಿರ್ಮಿತವಾದ ವಿಷ್ಣುವಿಮಾನದಲ್ಲಿ ಕುಳಿತು ವಿಷ್ಣುದೂತರೊಡಗೂಡಿ ವೈಕುಂಠಕ್ಕೆ ತೆರಳಿದನು.

೫೮. ಇಂತು ದ್ರುಮಿಲನು ವೈಕುಂಠದಲ್ಲಿ ವಿಷ್ಣುವಿನ ಸೇವೆಮಾಡುತ್ತಾ ವಿಷ್ಣುದಾಸನೆನಿಸಿಕೊಂಡನು. ಅಯ್ಯಾ, ಶೌನಕನೇ ! ಈಗ ಕಲಾವತಿಯ ವೃತ್ತಾಂತವನ್ನು ಮುಂದುವರಿಸುವೆನು ಅವಧರಿಸು.

೫೯. ಇತ್ತ ಪತಿಯು ತನ್ನನ್ನು ತ್ಯಜಿಸಲು ಕಲಾವತಿಯು ದುಃಖಿತಳಾಗಿ ಅಗ್ನಿಪ್ರವೇಶಮಾಡುವುದರಲ್ಲಿದ್ದಳು. ಅಷ್ಟರಲ್ಲಿಯೇ ಬ್ರಾಹ್ಮಣನು ಆಕೆಯನ್ನು ಸಮಾಧಾನಗೊಳಿಸಿದನು.

೬೦. ಮಾತೆಯೇ ಗರ್ಭಿಣಿಯಾದ ನೀನು ಆತ್ಮತ್ಯಾಗಮಾಡುಚಿತವಲ್ಲವೆಂದು ಬ್ರಾಹ್ಮಣನು ಹಿತನುಡಿಗಳಾಡಿ ರತ್ನಪರಿಪೂರ್ಣವಾದ ತನ್ನ ಮಂದಿರಕ್ಕೆ ಆಕೆಯನ್ನು ಕರೆದೊಯ್ದನು.

ಸಾ ವಿಪ್ರಗೇಹೇ ಸಾಧ್ವೀ ಚ ಸುಷಾವ ತನಯಂ ವರಂ ।
ತಪ್ತಕಾಂಚನ ವರ್ಣಾಭಂ ಜ್ವಲಂತಂ ಬ್ರಹ್ಮತೇಜಸಾ ॥ ೬೧ ॥

ತತ್ರಸ್ಥಾ ಯೋಷಿತಃ ಸರ್ವಾ ದದೃಶುರ್ಬಾಲಕಂ ಶುಭಂ ।
ಗ್ರೀಷ್ಮಮಧ್ಯಾಹ್ನಮಾರ್ತಂಡಂ ಜಿತಂ ತಂ ಬ್ರಹ್ಮತೇಜಸಾ ॥ ೬೨ ॥

ಕಾಮದೇವಾಧಿಕಂ ರೂಪೇ ಚಂದ್ರಾಧಿಕಶುಭಾನನಂ ।
ಶರತ್ಪಾರ್ವಣಚಂದ್ರಾಸ್ಯಂ ಶರತ್ಪಂಕಜಲೋಚನಂ ॥ ೬೩ ॥

ಹಸ್ತಪಾದಾದಿವಲಿತಂ ಸುಕಪೋಲಂ ಮನೋಹರಂ ।
ಪದ್ಮಚಕ್ರಾಂಕಿತಂ ಪಾದಪದ್ಮಂ ವಾತುಲಮುಜ್ವಲಂ ॥ ೬೪ ॥

ಕರಯುಗ್ಮಂ ವಾತುಲಂ ಚ ರುದಂತಂ ಚ ಸ್ತನಾರ್ಥಿನಂ ।
ಯೋಷಿತೋ ಬಾಲಕಂ ದೃಷ್ಟ್ವಾ ಪ್ರಯಯುಃ ಸ್ವಾಶ್ರಮಂ ಮುದಾ ॥ ೬೫ ॥

---

೬೧. ಆ ಬ್ರಾಹ್ಮಣನ ಮನೆಯಲ್ಲಿ ಸಾಧ್ವೀಮಣಿಯಾದ ಕಲಾವತಿಯು,– ಪುಟಕ್ಕೆ ಹಾಕಿದ ಚಿನ್ನದಂತೆ ಹೊಂಬಣ್ಣವುಳ್ಳವನೂ, ಬ್ರಹ್ಮತೇಜಸ್ವಿಯೂ ಆದ ಪುತ್ರನನ್ನು ಪ್ರಸವಿಸಿದಳು.

೬೨–೬೫. ಅಲ್ಲಿದ್ದ ಬ್ರಾಹ್ಮಣಸ್ತ್ರೀಯರೆಲ್ಲರೂ ಗ್ರೀಷ್ಮಮಧ್ಯಾಹ್ನದ ಸೂರ್ಯನಂತೆ ತೇಜಸ್ವಿಯೂ, ಮನ್ಮಥನಿಗಿಂತ ಸುಂದರನೂ, ಶರಚ್ಚಂದ್ರನಂತೆ ಮುಖವುಳ್ಳವನೂ, ಕಮಲಲೋಚನನೂ, ಸುಕಪೋಲನೂ ಆದ ಆ ಬಾಲಕನನ್ನು ನೋಡಿದರು. ಸ್ತನ್ಯಕ್ಕಾಗಿ ಅಳುತ್ತಿರುವ ಆ ಬಾಲಕನ ಹಸ್ತಪಾದಗಳಲ್ಲಿರುವ ಪದ್ಮಚಕ್ರಾದಿರೇಖೆಗಳನ್ನು ತಿರುಗಿಸಿ ತಿರುಗಿಸಿ ನೋಡಿ ಅವನ ಮಾಹಾತ್ಮ್ಯವನ್ನು ಕೊಂಡಾಡಿ, ಆ ಸ್ತ್ರೀಯರೆಲ್ಲರೂ ತಮ್ಮ ತಮ್ಮ ಆಶ್ರಮಕ್ಕೆ ತೆರಳಿದರು.

ಪುತ್ರದಾರಯುತೋ ವಿಪ್ರಃ ಪ್ರಹೃಷ್ಟಶ್ಚ ನನರ್ತ ಹ।
ಸ ಬಾಲೋ ವವೃಧೇ ತತ್ರ ಶುಕ್ಲಪಕ್ಷೇ ಯಥಾ ಶಶೀ ॥ ೬೬ ॥

ಪುಪೋಷ ಬ್ರಾಹಣಸ್ತಾಂ ಚ ಸಪುತ್ರಾಂ ಚ ಯಥಾ ಸುತಾಂ ॥ ೬೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಸೌತಿಶೌನಕ ಸಂವಾದೇ ಉಪಬರ್ಹಣ ಜನ್ಮಕಥನಂ ನಾಮ ವಿಂಶೋऽಧ್ಯಾಯಃ

---

೬೬. ಪತ್ನೀಪುತ್ರರೊಡಗೂಡಿ ಆ ಬ್ರಾಹ್ಮಣನು ಸಂತೋಷದಿಂದ ನಲಿದಾಡಿದನು. ಆ ಬಾಲಕನೂ ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿ ಹೊಂದುತ್ತಿದ್ದನು.

೬೭. ಬಾಲಕನೊಡಗೂಡಿದ ಕಲಾವತಿಯನ್ನು ಆ ಬ್ರಾಹ್ಮಣನು ತನ್ನ ಸ್ವಂತ ಮಗಳಂತೆ ಪಾಲಿಸಿಕೊಂಡಿದ್ದನು.

ಇಲ್ಲಿಗೆ ಶ್ರೀಬ್ರಹ್ಮವೈವರ್ತಮಹಾಪುರಾಣದ ಬ್ರಹ್ಮಖಂಡದಲ್ಲಿ ಉಪಬರ್ಹಣನ ಪುನರ್ಜನ್ಮಕಥನ ರೂಪವಾದ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

ಇಪ್ಪತ್ತನೆಯ ಅಧ್ಯಾಯದ ಸಾರಾಂಶವು

' ತಂದೆತಾಯಿಗಳೊಡನೆ ಪುನರುಜ್ಜೀವಿತನಾದ ಉಪಬರ್ಹಣನು-ಮಾಲಾವತಿ ಮತ್ತು ಉಳಿದ ಪತ್ನಿಯರೊಡಗೂಡಿ ತನ್ನ ಜೀವಿತಕಾಲಾವಧಿ ಸುಖವಾಗಿದ್ದನು. ಅನಂತರ ಅವನ ತಂದೆತಾಯಿಯರು ಸತ್ತು ಸ್ವರ್ಗಕ್ಕೆ ಹೋದಮೇಲೆ, ಅವರಿಗೆ ಉತ್ತರಕ್ರಿಯೆಗಳನ್ನು ಮಾಡಿ ಬ್ರಹ್ಮಶಾಪದಂತೆ ತಾನೂ ಪ್ರಾಣತ್ಯಾಗಮಾಡಿ ಬ್ರಾಹ್ಮಣನ ವೀರ್ಯದಿಂದ ಶೂದ್ರಸ್ತ್ರೀಯಲ್ಲಿ ಜನಿಸಿದನು. ಮಾಲಾವತಿಯೂ ಕೂಡ ಆತ್ಮತ್ಯಾಗಮಾಡಿ ಮನುವಂಶಜನಾದ ಸೃಂಜಯನ ಪತ್ನಿಯ ಗರ್ಭದಲ್ಲಿ ಜನಿಸಿ ಜನ್ಮಾಂತರವನ್ನು ಪಡೆದಿರುವ ಉಪಬರ್ಹಣನೇ ತನ್ನ ಪತಿಯಾಗಬೇಕೆಂದು ಪ್ರಾರ್ಥಿಸುತ್ತಿದ್ದಳು ' ಎಂದ ಸೂತಪುತ್ರರನ್ನು ಕುರಿತು ಶೌನಕರು-" ಉಪಬರ್ಹಣನು ಬ್ರಾಹ್ಮಣವೀರ್ಯದಿಂದ ಶೂದ್ರಪತ್ನಿಯಲ್ಲಿ ಜನಿಸಿದ ಬಗೆ ಹೇಗೆ? " ಎಂದು ಕೇಳಿದರು. ' ಕಾನ್ಯಕುಬ್ಜದಲ್ಲಿ ದ್ರುಮಿಲನೆಂಬ ರಾಜನು ಕಲಾವತಿಯೆಂಬ ಪತ್ನಿಯೊಡನೆ ರಾಜ್ಯವಾಳಿಕೊಂಡಿದ್ದನು. ಬಹಳ ಕಾಲದವರೆಗೆ ಅವರಿಗೆ ಮಕ್ಕಳಾಗದಿರಲು ಪುತ್ರ ಪ್ರಾಪ್ತಿಗಾಗಿ ರಾಜನು ತಪಸ್ಸುಮಾಡುತ್ತಿದ್ದ ಕಾಶ್ಯಪಮುನಿಯ ಸಮೀಪಕ್ಕೆ ತನ್ನ ಪತ್ನಿಯನ್ನು ಕಳುಹಿಸಿದನು. ಆಕೆಯ ಹಾವಭಾವವಿಲಾಸಗಳನ್ನರಿತ – ಮುನಿಯು ನೀನಾರೆಂದು ಕೇಳಲು-ಕಲಾವತಿಯು ತಾನು ಬಂದ ಸಮಾಚಾರದವರೆಗೆ ಎಲ್ಲವನ್ನೂ ವಿವರಿಸಿದಳು. ಶೂದ್ರಸ್ತ್ರೀಯೊಡಗೂಡುವುದು ಬ್ರಾಹ್ಮಣನಿಗೆ ಮಹಾಪಾತಕವೆಂದೂ, ಅಂತೆಯೇ, ಬ್ರಾಹ್ಮಣಿಯೂ ಶೂದ್ರನೊಡಗೂಡಿದರೆ ಕುಂಭೀಪಾಕದಲ್ಲಿ ನರಳುವಳೆಂದೂ ಹೇಳಿ-ಆಕೆಯನ್ನು ಕಾಶ್ಯಪನು ತಿರಸ್ಕರಿಸಿದನು. ಅಷ್ಟರಲ್ಲಿ ಅಲ್ಲಿಗೆ ಬಂದ ಅಪ್ಸರಸಿಯಾದ ಮೇನಕೆಯ ರೂಪುಲಾವಣ್ಯಗಳನ್ನು ನೋಡಿದ ಕಾಶ್ಯಪನಿಗೆ ರೇತಃಸ್ಖಲನವಾಯಿತು. ಸಮಯವನ್ನು ನಿರೀಕ್ಷಿಸುತ್ತಿದ್ದ ಕಲಾವತಿಯು ಆ ರೇತಸ್ಸನ್ನು ಹೊಂದಿ ಗರ್ಭವತಿಯಾಗಿ ಹಿಂತಿರುಗಿ ತನ್ನ ಪತಿಗೆ ನಡೆದ ಸಮಾಚಾರ ವೆಲ್ಲವನ್ನೂ ವಿವರಿಸಿದಳು. ಸಂತಸಗೊಂಡ ದ್ರುಮಿಲನು ತನ್ನ ರಾಜ್ಯಕೋಶಾದಿ ಗಳೆಲ್ಲವನ್ನೂ ಬ್ರಾಹ್ಮಣರಿಗೆ ದಾನಮಾಡಿ ಕಲಾವತಿಯನ್ನೂ ಬ್ರಾಹ್ಮಣನೊಬ್ಬನಿಗೆ ಅರ್ಪಿಸಿ-ತಾನು ಬದರಿಕಾಶ್ರಮಕ್ಕೆ ಹೋಗಿ ತಪಸ್ಸು ಮಾಡಿ ವೈಕುಂಠಲೋಕಕ್ಕೆ ತೆರಳಿದನು. ಇತ್ತ ಕಲಾವತಿಯು ಬ್ರಾಹ್ಮಣನ ಆಶ್ರಮದಲ್ಲಿ ಪೂರ್ಣಿಮಾ ಚಂದ್ರನಂತಿರುವ ಪುತ್ರನನ್ನು ಪಡೆದು ಸುಖವಾಗಿದ್ದಳು. ಆ ಬಾಲಕನೇ ಬ್ರಹ್ಮಶಾಪಗ್ರಸ್ತನಾದ ಉಪಬರ್ಹಣನು ' ಎಂದು ಸೂತಪುತ್ರರು ಶೌನಕರಿಗೆ ವ್ಯಕ್ತಪಡಿಸಿದರು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಏಕವಿಂಶೋऽಧ್ಯಾಯಃ ॥

॥ ಸೌತಿರುವಾಚ ॥

ಬಭೂವ ಕಾಲೇ ಬಾಲಶ್ಚ ಕ್ರಮೇಣ ಪಂಚಹಾಯನಃ ।
ಜಾತಿಸ್ಮರೋ ಜ್ಞಾನಯುಕ್ತಃ ಪೂರ್ವಮಂತ್ರಸ್ಮೃತೇಃ ಸದಾ ॥ ೧ ॥

ಗೀಯತೇ ಸತತಂ ಕೃಷ್ಣಯಶೋನಾಮಗುಣಾದಿಕಂ ।
ಕ್ಷಣಂ ರೋದಿತಿ ನೃತ್ಯೇನ ಪುಲಕಾಂಚಿತವಿಗ್ರಹಃ ॥ ೨ ॥

ಇಪ್ಪತ್ತೊಂದನೆಯ ಅಧ್ಯಾಯವು

೧. ಸೂತಪುತ್ರ :—ಕಲಾವತಿಯ ಪುತ್ರನು ಕ್ರಮವಾಗಿ ಅಭಿವೃದ್ಧಿಹೊಂದಿ ಐದು ವರ್ಷದ ಬಾಲಕನಾದನು. ಅವನಿಗಾಗಲೇ ಪೂರ್ವಜನ್ಮದ ಸತ್ಕರ್ಮಗಳ ಮತ್ತು ಪರಮಾತ್ಮನ ಮಂತ್ರ, ಸ್ತೋತ್ರಗಳ ಸ್ಮರಣೆಯೂ, ಒಳ್ಳೆಯ ತಿಳಿವಳಿಕೆಯೂ ಬಂದಿತು.

೨. ಅವನು ಯಾವಾಗಲೂ ಕೃಷ್ಣಪರಮಾತ್ಮನ ಗುಣ, ಕೀರ್ತಿಗಳನ್ನ ಗಾನು ಮಾಡುತ್ತಲೂ, ಒಮ್ಮೊಮ್ಮೆ ನರ್ತನಮಾಡುತ್ತಲೂ, ರೋಮಾಂಚಿತ ಶರೀರನಾಗಿ ದೈನ್ಯದಿಂದ ಬೇಡುತ್ತಲೂ ಇದ್ದನು.

ಕೃಷ್ಣಸಂಬಂಧಿನೀಂ ಗಾಥಾಂ ಶ್ರುಣೋತಿ ಯತ್ರ ಯತ್ರ ವೈ ।
ತತ್ಸಂಬಂಧಿಪುರಾಣಂ ಚ ತತ್ರ ತಿಷ್ಠತಿ ಬಾಲಕಃ　　　　॥ ३ ॥

ಧೂಲಿಧೂಸರಸರ್ವಾಂಗೋ ಧೂಲಿನೈವೇದ್ಯಮಾಪ್ಸಿತಂ ।
ಧೂಲಿಷು ಪ್ರತಿಮಾಂ ಕೃತ್ವಾ ಧೂಲಿನಾ ಪೂಜಯೇದ್ಧರಿಂ　　　　॥ ४ ॥

ಪುತ್ರಮಾಹ್ವಯತೇ ಮಾತಾ ಪ್ರಾತರಾಶಾಯ ಚೇನ್ಮನೇ ।
ಹರಿಂ ಸಂಪೂಜಯಾಮೀತಿ ಮಾತರಂ ಸಂವದೇತ್ಪುನಃ　　　　॥ ५ ॥

॥ ಶೌನಕ ಉವಾಚ ॥

ಕಿಂ ನಾಮ ಬಾಲಕಸ್ಯಾಸ್ಯ ಜನ್ಮನಾತ್ರ ಬಭೂವ ಹ ।
ವ್ಯುತ್ಪತ್ತ್ಯಾ ಸಂಜ್ಞಯಾ ವಾಽಪಿ ತದ್ಭವಾನ್ವಕ್ತುಮರ್ಹತಿ　　　　॥ ६ ॥

---

३. ಎಲ್ಲಾದರೂ ಶ್ರೀಕೃಷ್ಣಪರಮಾತ್ಮನಿಗೆ ಸಂಬಂಧವಾದ ಕಥೆಯನ್ನಾಗಲೀ, ಪುರಾಣವನ್ನಾಗಲೀ ಕೇಳಿದರೆ ಅಲ್ಲಿಯೇ ಆ ಬಾಲಕನು ನಿಂತುಬಿಡುತ್ತಿದ್ದನು.

४. ಬಾಲಕನು ಮೈಗೆಲ್ಲಾ ಧೂಳನ್ನು ಎರಚಿಕೊಂಡು, ಧೂಳಿನಿಂದಲೇ ಪರಮಾತ್ಮನ ವಿಗ್ರಹವೊಂದನ್ನು ಮಾಡಿ, ಧೂಳಿನಿಂದಲೇ ಪೂಜಿಸಿ ಧೂಳನ್ನೇ ನಿವೇದಿಸುತ್ತಿದ್ದನು.

५. ಆ ಸಮಯದಲ್ಲಿ ತಾಯಿಯೇನಾದರೂ ಮಗುವನ್ನು ಬೆಳಗಿನೂಟಕ್ಕೆ ಕರೆದರೆ, 'ಹರಿಯನ್ನು ಪೂಜಿಸುತ್ತಿದ್ದೇನೆ. ಈಗ ಬರಲವಕಾಶವಿಲ್ಲ' ಎಂದು ಬಾಲಕನು ಉತ್ತರವೀಯುತ್ತಿದ್ದನು.

६. ಶೌನಕ–ಆ ಬಾಲಕನ ಹೆಸರೇನು? ಅದು ಅವನ ಜನ್ಮಕಾಲಕ್ಕೂ, ಅರ್ಥವ್ಯುತ್ಪತ್ತಿಗೂ ಮತ್ತು ಸಂಜ್ಞೆಗೂ ಅನುರೂಪವಾದುದು ಹೇಗೆ?

॥ ಸೌತಿರುವಾಚ ॥

ಅನಾವೃಷ್ಟ್ಯವಶೇಷೇ ಚ ಕಾಲೇ ಬಾಲೋ ಬಭೂವ ಹ ।
ನಾರಂ ದದೌ ಜನ್ಮಕಾಲೇ ತೇನಾಯಂ ನಾರದಾಭಿಧಃ ॥ ೭ ॥

ದದಾತಿ ನಾರಂ ಜ್ಞಾನಂ ಚ ಬಾಲಕೇಭ್ಯಶ್ಚ ಬಾಲಕಃ ।
ಜಾತಿಸ್ಮರೋ ಮಹಾಜ್ಞಾನೀ ತೇನಾಯಂ ನಾರದಾಭಿಧಃ ॥ ೮ ॥

ವೀರ್ಯೇಣ ನಾರದಸ್ಯೈವ ಬಭೂವ ಬಾಲಕೋ ಮುನೇ ।
ಮುನೀಂದ್ರಸ್ಯ ವರೇಣ್ಯೈವ ತೇನಾಯಂ ನಾರದಾಭಿಧಃ ॥ ೯ ॥

---

೭. ಸೂತಪುತ್ರ :—ಲೋಕದಲ್ಲೆಲ್ಲಾ ಮಳೆಯಿಲ್ಲದೆ ಕ್ಷಾಮಸಂಭವಿಸಿದ್ದಾಗ ಆ ಬಾಲಕನು ಜನಿಸಿದನು. ಅವನು ಹುಟ್ಟಿದ ಕೂಡಲೇ ಎಲ್ಲೆಲ್ಲೂ ಸಮೃದ್ಧಿಯಾಗಿ ಮಳೆಯಾಯಿತು. (ನಾರಂ-ನೀರನ್ನು, ದದೌ-ಕೊಟ್ಟನು) ಆದ್ದರಿಂದ ಅವನಿಗೆ ನಾರದನೆಂಬ ಜನನ ಕಾಲಾನುಗುಣವಾದ ಹೆಸರಾಯಿತು.

('ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ') ಎಂಬುದು ಸ್ಮೃತಿವಚನ.

೮. ಪೂರ್ವಜನ್ಮದ ಸ್ಮರಣೆಯೂ, ಮಹಾಜ್ಞಾನವೂ, ಉಳ್ಳ ಆ ಬಾಲಕನು ತನ್ನ ಸಹಪಾಠಿಗಳಿಗೆ (ನಾರಂ-ಜ್ಞಾನವನ್ನು, ದದಾತಿ-ಕೊಡುವನು) ಪರಮಾತ್ಮನ ವಿಷಯಕವಾದ ಜ್ಞಾನವನ್ನು ಬೋಧಿಸುತ್ತಿದ್ದುದರಿಂದಲೂ ಅವನಿಗೆ ವ್ಯುತ್ಪತ್ತಿಗೆ ಅನುಗುಣವಾಗಿ ನಾರದನೆಂದು ಹೆಸರಾಯಿತು.

೯. ಕೊನೆಯದಾಗಿ ಕಶ್ಯಪಪುತ್ರನಾದ ನಾರದನ ವೀರ್ಯದಿಂದಲೇ ಆ ಬಾಲಕನು ಜನಿಸಿದುದರಿಂದಲೂ (ನಾರದಸ್ಯ ಅಪತ್ಯಂ ಪುಮಾನ್-ನಾರದಃ) ಅವನಿಗೆ ನಾರದನೆಂಬ ಅಭಿಧಾನವು ಸರಿಹೊಂದಿತು.

|| ಶೌನಕ ಉವಾಚ ||

ಶಿಶುನಾಮ ಚ ವಿಜ್ಞಾತಂ ವ್ಯುತ್ಪತ್ತ್ಯಾ ಚ ಯಥೋಚಿತಂ ।
ಮುನೀಂದ್ರಸ್ಯ ಕಥಂ ನಾಮ ನಾರದಶ್ಚೇತಿ ಮಂಗಲಂ || ೧೦ ||

|| ಸೌತಿರುವಾಚ ||

ಅಪುತ್ರಕಾಯ ವಿಪ್ರಾಯ ಧರ್ಮಪುತ್ರೋ ನರೋ ಮುನಿಃ ।
ದದೌ ಪುತ್ರಂ ಕಶ್ಯಪಾಯ ತೇನಾಯಂ ನಾರದಾಭಿಧಃ || ೧೧ ||

|| ಶೌನಕ ಉವಾಚ ||

ಅಧುನಾ ನಾಮವ್ಯುತ್ಪತ್ತಿಃ ಶ್ರುತಾ ಸೌತೇ ಶಿಶೋರಪಿ ।
ಶೂದ್ರಯೋನೌ ಬ್ರಹ್ಮಪುತ್ರಃ ಕಥಂ ಸ ನಾರದಾಭಿಧಃ || ೧೨ ||

|| ಸೌತಿರುವಾಚ ||

ಕಲ್ಪಾಂತರೇ ಬ್ರಹ್ಮಕಂಠಾದ್ಬಭೂವುರ್ಬಹವೋ ನರಾಃ ।
ನರಾನ್ದದೌ ತತ್ಕಂಠಂ ಚ ತೇನ ತನ್ನರದಂ ಸ್ಮೃತಂ || ೧೩ ||

---

೧೦. ಶೌನಕ-ಬಾಲಕನ ಹೆಸರೇನೋ ವ್ಯುತ್ಪತ್ತಿಗನುಗುಣವಾಯಿತು. ಆದರೆ ಅವನ ತಂದೆಯಾದ ಮುನೀಂದ್ರನಿಗೆ ನಾರದನೆಂಬ ಮಂಗಳಾಭಿಧಾನ ಬರಲು ಕಾರಣವೇನು ?

೧೧. ಸೂತಪುತ್ರ-ಧರ್ಮಪುತ್ರನಾದ ನರನೆಂಬ ಋಷಿಯು ಪುತ್ರರಿಲ್ಲದ ಕಶ್ಯಪನಿಗೆ ಮಗನನ್ನು ಅನುಗ್ರಹಿಸಿದುದರಿಂದ (ನರನಿಂದ ದತ್ತನಾದ) ಅವನು ನಾರದನಾದನು.

೧೨. ಶೌನಕ-ಎಲೈ, ಸೂತಪುತ್ರರೇ! ನಾರದನ ಮಗನು ನಾರದನು ಎಂಬುದರ ವ್ಯುತ್ಪತ್ತಿಯು ನನಗೀಗ ಅರ್ಥವಾಯಿತು. ಬ್ರಹ್ಮಪುತ್ರನು ಶೂದ್ರಯೋನಿಯಲ್ಲಿ ಜನಿಸಿಯೂ ನಾರದನೆನಿಸಿಕೊಂಡುದು ಹೇಗೆಂಬುದನ್ನು ವಿವರಿಸುವಿರಾ ?

೧೩. ಸೂತಪುತ್ರ :—ಕಲ್ಪಾಂತರದಲ್ಲಿ ಬ್ರಹ್ಮನ ಕಂಠಪ್ರದೇಶದಿಂದ ಬಹಳ ಜನರು ಜನಿಸಿದರು. ಆ ಕಂಠವು ನರರ ಉತ್ಪತ್ತಿಗೆ ಕಾರಣವಾದುದರಿಂದ 'ನರದ' ಎನ್ನಿಸಿಕೊಂಡಿತು.

ತತೋ ಬಭೂವ ಬಾಲಶ್ಚ ನರದಾತ್ಕಂಠದೇಶತಃ ।
ಅತೋ ಬ್ರಹ್ಮಾ ನಾಮ ಚಕ್ರೇ ನಾರದಶ್ಚೇತಿ ಮಂಗಲಂ ॥ ೧೪ ॥

ಸಾಂಪ್ರತಂ ಶಿಶುವೃತ್ತಾಂತಂ ಸಾವಧಾನಂ ನಿಶಾಮಯ ।
ಉಪಾಲಂಭರಹಸ್ಯೇನ ವಿಶಿಷ್ಟಂ ಕಿಂ ಪ್ರಯೋಜನಂ ॥ ೧೫ ॥

ವವೃಧೇ ಗೋಪಿಕಾಬಾಲೋ ವಿಪ್ರಗೇಹೇ ದಿನೇ ದಿನೇ ।
ಸಪುತ್ರಾಂ ಪಾಲಿತಾಂ ಚಕ್ರೇ ಬ್ರಾಹ್ಮಣಃ ಸ್ವಸುತಾಂ ಯಥಾ ॥ ೧೬ ॥

ಏತಸ್ಮಿನ್ನಂತರೇ ವಿಪ್ರಾ ಆಯಯುರ್ವಿಪ್ರಮಂದಿರಂ ।
ಶಿಶವಃ ಪಂಚವರ್ಷೀಯಾ ಮಹಾತೇಜಸ್ವಿನೋ ಯಥಾ ॥ ೧೭ ॥

ಪ್ರಚ್ಛನ್ನಂ ಹೃತವಂತಶ್ಚ ಗ್ರೀಷ್ಮಮಧ್ಯಾಹ್ನಭಾಸ್ಕರಂ ।
ಮಧುಪರ್ಕಾದಿಕಂ ದತ್ವಾ ತಾನ್ನನಾಮ ಗೃಹೀ ದ್ವಿಜ ॥ ೧೮ ॥

---

೧೪. 'ನರದ' ವೆನಿಸಿಕೊಂಡ ಆ ಕಂಠಪ್ರದೇಶದಿಂದ ಹುಟ್ಟಿದ ಬಾಲಕನಿಗೆ ಬ್ರಹ್ಮದೇವನು ನಾರದನೆಂಬ (ನರದಾತ್ ಜಾತಃ–ನಾರದಃ) ದಿವ್ಯನಾಮವನ್ನಿಟ್ಟನು.

೧೫. ಈ ಶಬ್ದಗಳ ರಹಸ್ಯಾರ್ಥವನ್ನು ಹೆಚ್ಚು ಹುಡುಕಿ ಪಡೆಯುವುದರಿಂದಾಗುವ ಪ್ರಯೋಜನವೇನು. ಪ್ರಕೃತದಲ್ಲಿ ಶಿಶುವಿನ ಸಮಾಚಾರವನ್ನು ಮುಂದು ವರಿಸುವೆನು. ಸಾವಧಾನದಿಂದ ಕೇಳು.

೧೬. ಗೋಪಕನ್ನಿಕೆಯಾದ ಕಲಾವತಿಯ ಪುತ್ರನು ಬ್ರಾಹ್ಮಣನ ಮನೆಯಲ್ಲಿ ಇಂತು ದಿನೇ, ದಿನೇ ಅಭಿವೃದ್ಧಿಗೊಳ್ಳುತ್ತಿದ್ದನು. ಬ್ರಾಹ್ಮಣನೂ ಕೂಡ ಪುತ್ರವತಿಯಾದ ಆ ಕಲಾವತಿಯನ್ನು ತನ್ನ ಮಗಳಂತೆ ಕಾಪಾಡಿಕೊಂಡಿದ್ದನು.

೧೭. ಈ ಸಂದರ್ಭದಲ್ಲಿ ಕೆಲವು ಬ್ರಾಹ್ಮಣರು ಐದುವರ್ಷದ ಬಾಲಕರ ರೂಪಧಾರಿಗಳಾಗಿ ಮಹಾತೇಜಸ್ಸಿನಿಂದ ಬೆಳಗುತ್ತಾ, ಆ ಬ್ರಾಹ್ಮಣನ ಮನೆಗೆ ಬಂದರು.

೧೮. ಕಪಟವೇಷದಿಂದ ಬಂದಿದ್ದ ಅವರು ಗ್ರೀಷ್ಮಋತುವಿನ ಮಧ್ಯಾಹ್ನದ ಸೂರ್ಯನಂತೆ ತೇಜಸ್ವಿಗಳಾಗಿದ್ದರು. ಆ ಬ್ರಾಹ್ಮಣ ಗೃಹಸ್ಥನು ಅವರೆಲ್ಲರಿಗೂ ಮಧುಪರ್ಕಾದಿಗಳನ್ನು ಕೊಟ್ಟು ಸತ್ಕರಿಸಿ ನಮಿಸಿದನು.

ಫಲಮೂಲಾದಿಕಂ ಕಾಲೇ ಚತ್ವಾರೋ ಮುನಿಪುಂಗವಾಃ ।
ವಿಪ್ರದತ್ತಂ ಬುಭುಜಿರೇ ತೆಚ್ಛೇಷಂ ಬುಭುಜೇ ಶಿಶುಃ ॥ ೧೯ ॥

ಚತುರ್ಥಕೋ ಮುನಿಸ್ತಸ್ಮೈ ಕೃಷ್ಣಮಂತ್ರಂ ದದೌ ಮುದಾ ।
ತೇಷಾಂ ದಾಸಃ ಸ ಬಭೂವ ದ್ವಿಜಸ್ಯ ಮಾತುರಾಜ್ಞಯಾ ॥ ೨೦ ॥

ಏಕದಾ ಶಿಶುಮಾತಾ ಚ ಗಚ್ಛಂತೀ ನಿಶಿವರ್ತ್ಮನಿ ।
ಮಮಾರ ಸರ್ಪದಷ್ಟಾ ಚ ತತ್ಕ್ಷಣಂ ಸ್ಮರತೀ ಹರಿಂ ॥ ೨೧ ॥

ಸದ್ಯೋ ಜಗಾಮ ವೈಕುಂಠಂ ವಿಷ್ಣುಯಾನೇನ ಸಾ ಸತೀ ।
ವಿಷ್ಣುಪಾರ್ಷದಸಂಯುಕ್ತಾ ಸದ್ರತ್ನನಿರ್ಮಿತೇನ ಚ ॥ ೨೨ ॥

---

೧೯. ಆ ನಾಲ್ವರು ಮುನಿಗಳೂ ಆ ಗೃಹಸ್ಥನು ಕೊಟ್ಟ ಹಣ್ಣು ಹಂಪಲುಗಳನ್ನು ಕಾಲೋಚಿತವಾಗಿ ಭಕ್ಷಣೆ ಮಾಡಿದರು. ಅವರು ತಿಂದು ಮಿಕ್ಕುದನ್ನು ಆ ಶಿಶುವು ತಿಂದಿತು.

೨೦. ಅನಂತರ ನಾಲ್ಕನೆಯ ಮುನಿಯು ಆ ಶಿಶುವಿಗೆ ಸಂತೋಷದಿಂದ ಕೃಷ್ಣಮಂತ್ರವನ್ನು ಉಪದೇಶಿಸಿದನು. ಆಗ ಆ ಶಿಶುವು ತಾಯಿಯ ಮತ್ತು ಆ ಬ್ರಾಹ್ಮಣನ ಅನುಜ್ಞೆಯಂತೆ ಆ ಮುನಿಗಳ ದಾಸನಾದನು.

೨೧. ಹೀಗಿರಲು, ಒಮ್ಮೆ ಆ ಶಿಶುವಿನ ತಾಯಿಯು ಅರ್ಧರಾತ್ರಿಯಲ್ಲಿ ಯಾವುದೋ ಮಾರ್ಗವಾಗಿ ಹೋಗುತ್ತಿದ್ದಳು. ದುರ್ದೈವದಿಂದ ಆಕೆಯನ್ನು ಹಾವು ಕಡಿಯಿತು. ವಿಷವೇರಿ ಹರಿಸ್ಮರಣೆ ಮಾಡುತ್ತಾ ಆಕೆಯು ಮೃತಿ ಹೊಂದಿದಳು.

೨೨. ಒಡನೆಯೇ ರತ್ನನಿರ್ಮಿತವಾದ ವಿಷ್ಣುವಿಮಾನದಲ್ಲಿ ಕುಳಿತು ವೈಕುಂಠಕ್ಕೆ ತೆರಳಿ ವಿಷ್ಣುವಿನ ಪಾರ್ಷದರೊಡನೆ ಸೇರಿದಳು.

ಪ್ರಾತರ್ಬಾಲೋ ದ್ವಿಜೈಃ ಸಾರ್ಧಂ ಪ್ರಯಯೌ ವಿಪ್ರಮಂದಿರಾತ್ ।
ತತ್ವಜ್ಞಾನಂ ದದುಸ್ತಸ್ಮೈ ಬ್ರಾಹ್ಮಣಾಶ್ಚ ಕೃಪಾಲವಃ ॥ ೨೩ ॥

ಬ್ರಹ್ಮಪುತ್ರಾಃ ಶಿಶುಂ ತ್ಯಕ್ತ್ವಾ ಸ್ವಸ್ಥಾನಂ ಪ್ರಯಯುಃ ಕಿಲ ।
ಮಹಾಜ್ಞಾನೀ ಶಿಶುಸ್ತಸ್ಥೌ ಗಂಗಾತೀರೇ ಮನೋಹರೇ ॥ ೨೪ ॥

ತತ್ರ ಸ್ನಾತ್ವಾ ವಿಪ್ರದತ್ತಂ ವಿಷ್ಣುಮಂತ್ರಂ ಜಜಾಪ ಸಃ ।
ಕ್ಷುತ್ಪಿಪಾಸಾರೋಗಶೋಕಹರಂ ವೇದೇಷು ದುರ್ಲಭಂ ॥ ೨೫ ॥

ಮಹಾರಣ್ಯೇ ಚ ಘೋರೇ ಚ ಅಶ್ವತ್ಥಮೂಲಸನ್ನಿಧೌ ।
ಕೃತ್ವಾ ಯೋಗಾಸನಂ ತಸ್ಥೌ ಸುಚಿರಂ ತತ್ರ ಬಾಲಕಃ ॥ ೨೬ ॥

---

೨೩. ಇತ್ತ ಪ್ರಾತಃಕಾಲವಾದರೂ ತಾಯಿಯು ಬರದಿರಲು, ಆ ಬಾಲಕನು ತಾನಿದ್ದ ಮನೆಯನ್ನು ಬಿಟ್ಟು, ಬಂದಿದ್ದ ಬ್ರಾಹ್ಮಣರೊಡನೆ ಹೊರಟನು. ದಯಾಳುಗಳಾದ ಆ ದ್ವಿಜರೂ ಕೂಡ ಆ ಬಾಲಕನಿಗೆ ತತ್ವಜ್ಞಾನವನ್ನು ಉಪದೇಶಿಸಿದರು.

೨೪. ಅನಂತರ ಆ ಬ್ರಾಹ್ಮಣರೆಲ್ಲರೂ ಆ ಶಿಶುವೊಂದನ್ನೇ ಬಿಟ್ಟು ತಮ್ಮ ತಮ್ಮ ಸ್ಥಳಕ್ಕೆ ಹೊರಟುಹೋದರು. ಮಹಾಜ್ಞಾನಿಯಾದ ಆ ಬಾಲಕನು ಮನೋಹರವಾದ ಗಂಗಾತೀರದಲ್ಲಿ ನಿಂತನು.

೨೫. ಗಂಗೆಯಲ್ಲಿ ಮಿಂದು, ವೇದದುರ್ಲಭವಾಗಿಯೂ, ಹಸಿವು ಬಾಯಾರಿಕೆಗಳನ್ನೂ ರೋಗ ರುಜಿನಗಳನ್ನೂ ನಿವಾರಿಸಬಲ್ಲುದಾಗಿಯೂ, ಇರುವ ವಿಷ್ಣು ಮಂತ್ರವನ್ನು ಜಪಿಸಿದನು.

೨೬. ಆ ಬಾಲಕನು ಘೋರವಾದ ಅರಣ್ಯದಲ್ಲಿ, ಅಶ್ವತ್ಥವೃಕ್ಷದ ಬುಡದಲ್ಲಿ ಯೋಗಾಸನವನ್ನು ಮಾಡುತ್ತಾ ಬಹಳಕಾಲ ಧ್ಯಾನಾಸಕ್ತನಾಗಿದ್ದನು.

॥ ಶೌನಕ ಉವಾಚ ॥

ಕಂ ಮಂತ್ರಂ ಬಾಲಕಃ ಪ್ರಾಪ ಕುಮಾರೇಣ ಚ ಧೀಮತಾ ।
ದತ್ತಂ ಪರಂ ಶ್ರೀಹರೇಶ್ಚ ತದ್ಭವಾನ್ವಕ್ತುಮರ್ಹತಿ ॥ ೨೭ ॥

॥ ಸೌತಿರುವಾಚ ॥

ಕೃಷ್ಣೇನ ದತ್ತೋ ಗೋಲೋಕೇ ಕೃಪಯಾ ಬ್ರಹ್ಮಣೇ ಪುರಾ ।
ದ್ವಾವಿಂಶತ್ಯಕ್ಷರೋ ಮಂತ್ರೋ ವೇದೇಷು ಚ ಸುದುರ್ಲಭಃ ॥ ೨೮ ॥

ತಂ ಚ ಬ್ರಹ್ಮಾ ದದೌ ಭಕ್ತ್ಯಾ ಕುಮಾರಾಯ ಚ ಧೀಮತೇ ।
ಕುಮಾರೇಣ ಸ ದತ್ತಶ್ಚ ಮಂತ್ರಶ್ಚ ಶಿಶವೇ ದ್ವಿಜ ॥ ೨೯ ॥

ಓಂ ಶ್ರೀಂ ನಮೋ ಭಗವತೇ ರಾಸಮಂಡಲೇಶ್ವರಾಯ ।
ಶ್ರೀ ಕೃಷ್ಣಾಯ ಸ್ವಾಹೇತಿ ಚ ಮಂತ್ರೋಽಯಂ ಕಲ್ಪಪಾದಪಃ ॥ ೩೦ ॥

ಮಹಾಪುರುಷಸ್ತೋತ್ರಂ ಚ ಪೂರ್ವೋಕ್ತಂ ಕವಚಂ ಚ ಯತ್ ।
ಅಸ್ಯಾಪಯೌಗಿಕಂ ಧ್ಯಾನಂ ಸಾಮವೇದೋಕ್ತಮೇವ ಚ ॥ ೩೧ ॥

---

೨೭. ಶೌನಕ :—ಜ್ಞಾನಿಯಾದ ಆ ಬ್ರಹ್ಮಪುತ್ರನು ವಿಷ್ಣುವಿನ ಯಾವ ಮಂತ್ರವನ್ನು ಆ ಬಾಲಕನಿಗೆ ಉಪದೇಶಿಸಿದನೆಂಬುದನ್ನು ದಯವಿಟ್ಟು ಹೇಳುವಿರಾ ?

೨೮. ಸೌತಿ :—ವೇದದಲ್ಲೂ ಸಿಗದಿರುವ ಇಪ್ಪತ್ತೆರಡಕ್ಷರದ ಮಂತ್ರವನ್ನು ಪೂರ್ವದಲ್ಲಿ ಶ್ರೀಕೃಷ್ಣನು ಬ್ರಹ್ಮನಿಗೆ ಗೋಲೋಕದಲ್ಲಿ ಉಪದೇಶಮಾಡಿದನು.

೨೯. ಆ ಮಂತ್ರವನ್ನು ಬ್ರಹ್ಮನು ಜ್ಞಾನಿಯಾದ ತನ್ನ ಕುಮಾರನಿಗೂ ಕುಮಾರನು ಈ ಬಾಲಕನಿಗೂ ಕ್ರಮವಾಗಿ ಉಪದೇಶಿಸಿದರು.

೩೦. 'ಓಂ ಶ್ರೀಂ ನಮೋ ಭಗವತೇ ರಾಸಮಂಡಲೇಶ್ವರಾಯ ಶ್ರೀಕೃಷ್ಣಾಯ ಸ್ವಾಹಾ' ಎಂಬುದೇ ಅವರು ಉಪದೇಶಿಸಿದ ಕಲ್ಪವೃಕ್ಷದಂತಿರುವ ಇಪ್ಪತ್ತೆರಡು ಅಕ್ಷರದ ಮಂತ್ರವು.

೩೧. ಮಹಾಪುರುಷನ ಸ್ತೋತ್ರ ಮತ್ತು ಕವಚದ ವಿಧಾನವನ್ನು ಹಿಂದಿನ ಅಧ್ಯಾಯದಲ್ಲಿಯೇ ತಿಳಿಸಿದೆ ಈ ಮಂತ್ರಕ್ಕೆ ಉಪಯುಕ್ತವಾದ ಧ್ಯಾನಕ್ರಮವು ಸಾಮವೇದದಲ್ಲಿ ಹೇಳಿದೆ.

ತೇಜೋಮಂಡಲರೂಪೇ ಚ ಸೂರ್ಯಕೋಟಿಸಮಪ್ರಭೇ ।
ಯೋಗಿಭಿರ್ವಾಂಛಿತಂ ಧ್ಯಾನೇ ಯೋಗ್ಯೈಃ ಸಿದ್ಧಗಣೈಃ ಸುರೈಃ ॥ ೩೨ ॥

ಧ್ಯಾಯಂತೇ ವೈಷ್ಣವಾ ರೂಪಂ ತದಭ್ಯಂತರಸನ್ನಿಧೌ ।
ಅತೀವಕಮನೀಯಂ ಚಾನಿರ್ವಚನೀಯಂ ಮನೋಹರಂ ॥ ೩೩ ॥

ನವೀನಜಲದಶ್ಯಾಮಂ ಶರತ್ಪಂಕಜಲೋಚನಂ ।
ಶರತ್ಪಾರ್ವಣಚಂದ್ರಾಸ್ಯಂ ಪಕ್ವಬಿಂಬಾಧಿಕಾಧರಂ ॥ ೩೪ ॥

ಮುಕ್ತಾಪಂಕ್ತಿವಿನಿಂದ್ಯೈಕದಂತಪಂಕ್ತಿಮನೋಹರಂ ।
ಸಸ್ಮಿತಂ ಮುರಲೀನ್ಯಸ್ತಹಸ್ತಾವಲಂಬನೇನ ಚ ॥ ೩೫ ॥

ಕೋಟಿಕಂದರ್ಪಲಾವಣ್ಯಂ ಲೀಲಾಧಾಮ ಮನೋಹರಂ ।
ಚಂದ್ರಲಕ್ಷಪ್ರಭಾಜುಷ್ಟಂ ಪುಷ್ಟಶ್ರೀಯುಕ್ತವಿಗ್ರಹಂ ॥ ೩೬ ॥

ತ್ರಿಭಂಗಭಂಗಿನಾ ಯುಕ್ತಂ ದ್ವಿಭುಜಂ ಪೀತವಾಸಸಂ ।
ರತ್ನಕೇಯೂರವಲಯಂ ರತ್ನನೂಪುರಭೂಷಿತಂ ॥ ೩೭ ॥

೩೨–೩೩. ಯೋಗಸಿದ್ಧಿಯನ್ನು ಪಡೆದ ಸಿದ್ಧರು ಮತ್ತು ಯೋಗಿಗಳು ಕೋಟಿಸೂರ್ಯರಿಗೆ ಸಮನಾದ ಪ್ರಭೆಯುಳ್ಳ ತೇಜೋಮಂಡಲರೂಪನಾದ ಆ ಪರಮಾತ್ಮನನ್ನು ಧ್ಯಾನಿಸುವರು. ಆದರೆ ವೈಷ್ಣವರು ಆ ಮಂಡಲದೊಳಗಿರುವ ಪರಮಾತ್ಮನ ದಿವ್ಯಸುಂದರ ವಿಗ್ರಹವನ್ನು ಧ್ಯಾನಿಸುವರು.

೩೪–೩೫. ವರ್ಷಋತುವಿನ ಮೇಘದಂತೆ ಶ್ಯಾಮವರ್ಣನೂ, ಶರದೃತುವಿನ ಪೂರ್ಣಿಮಾಚಂದ್ರನಂತಿರುವ ವದನವುಳ್ಳವನೂ, ಕಮಲದಳಲೋಚನನೂ, ಪಕ್ವವಾದ ಬಿಂಬಫಲ (ತೊಂಡೆಹಣ್ಣಿನಂತಿರುವ)ದಂತಿರುವ ಅಧರವುಳ್ಳವನೂ, ಸಸ್ಮಿತನೂ ಮುರಲೀ (ಕೊಳಲು)ಹಸ್ತನೂ ಆದ ಆ ಪರಮಾತ್ಮನು ಧ್ಯಾನೈಕಗಮ್ಯನು.

೩೬–೩೭. ಅಲ್ಲದೆ, ಆ ಪರಮಾತ್ಮನು, ಕೋಟ್ಯಂತರ ಮನ್ಮಥರ ಲಾವಣ್ಯ ಮತ್ತು ಲೀಲೆಗೆ ಗಣಿಯಂತೆಯೂ, ಲಕ್ಷಾಂತರ ಚಂದ್ರರ ಮನೋಹರವಾದ ಕಾಂತಿಗೆ ಆಕರದಂತೆಯೂ ಇರುವನು. ತ್ರಿಭಂಗಭಂಗಿಯುಳ್ಳ ನಿಲವಿನಿಂದಲೂ, ಪೀತಾಂಬರ

ರತ್ನಕುಂಡಲಯುಗ್ಮೇನ ಗಂಡಸ್ಥಲವಿರಾಜಿತಂ ।
ಮಯೂರಪುಚ್ಛಚೂಡಂ ಚ ರತ್ನಮಾಲಾ ವಿಭೂಷಿತಂ ॥ ೩೮ ॥

ಶೋಭಿತಂ ಜಾನುಪರ್ಯಂತಂ ಮಾಲತೀವನಮಾಲಯಾ ।
ಚಂದನೋಕ್ಷಿತಸರ್ವಾಂಗಂ ಭಕ್ತಾನುಗ್ರಹಕಾರಕಂ ॥ ೩೯ ॥

ಮಣಿನಾ ಕೌಸ್ತುಭೇಂದ್ರೇಣ ವಕ್ಷಃಸ್ಥಲಸಮುಜ್ವಲಂ ।
ವೀಕ್ಷಿತಂ ಗೋಪಿಕಾಭಿಶ್ಚ ಶಶ್ವದ್ವಿಕ್ರೀಡಿತಲೋಚನೈಃ ॥ ೪೦ ॥

ಸ್ಥಿರಯೌವನಯುಕ್ತಾಭಿರ್ವೇಷ್ಟಿತಾಭಿಶ್ಚ ಸಂತತಂ ।
ಭೂಷಣೈರ್ಭೂಷಿತಾಭಿಶ್ಚ ರಾಧಾವಕ್ಷಸ್ಥಲಸ್ಥಿತಂ ॥ ೪೧ ॥

ಬ್ರಹ್ಮವಿಷ್ಣುಶಿವಾದ್ಯೈಶ್ಚ ಪೂಜಿತಂ ವಂದಿತಂ ಸ್ತುತಂ ।
ಕಿಶೋರಂ ರಾಧಿಕಾಕಾಂತಂ ಶಾಂತರೂಪಂ ಪರಾತ್ಪರಂ ॥ ೪೨ ॥

ದಿಂದಲೂ, ರತ್ನದ ಅಂಗದ, (ಬಾಹುಪುರಿ), ವಲಯ ಮತ್ತು ನೂಪುರ (ಕಾಲುಬಳೆ) ಗಳಿಂದಲೂ, ಕಪೋಲಗಳಲ್ಲಿ ಪ್ರತಿಬಿಂಬಿಸಿರುವ ರತ್ನಕುಂಡಲಗಳಿಂದಲೂ, ಕಿರೀಟದಲ್ಲಿರುವ ನವಿಲುಗರಿಯಿಂದಲೂ, ಕಂಠದಲ್ಲಿರುವ ರತ್ನಮಾಲೆಯಿಂದಲೂ ಶೋಭಿತನಾದ ಆ ಪರಮಾತ್ಮನೇ ಸಗುಣೋಪಾಸನೆಗೆ ವಿಷಯನು.

೩೯-೪೧. ಮಂಡಿಯವರೆಗೆ ಜೋಲಾಡುವ ಜಾಜಿಹೂವಿನ ಮಾಲೆಯನ್ನು ಕಂಠದಲ್ಲಿ ಧರಿಸಿ, ಅಂಗಾಂಗಗಳಿಗೂ ದಿವ್ಯಚಂದನಗಂಧವನ್ನು ಲೇಪಿಸಿಕೊಂಡು ವಕ್ಷಸ್ಥಲದಲ್ಲಿ ಕೌಸ್ತುಭಮಣಿಯನ್ನು ಅಲಂಕರಿಸಿಕೊಂಡು, - ಯುವತಿಯರೂ - ಲಜ್ಜಾಶೀಲೆಯರೂ, ದಿವ್ಯಾಭರಣಾಲಂಕೃತರೂ ಆದ-ಗೋಪಿಕಾಸ್ತ್ರೀಯರಿಂದ ಪರಿವೃತನಾಗಿ, ವಕ್ಷಸ್ಥಲದಲ್ಲಿ ರಾಧಾದೇವಿಯನ್ನು ಧರಿಸಿಕೊಂಡಿರುವ ಆ ಪರಮಾತ್ಮನ ಮನೋಹರವಾದ ರೂಪವನ್ನು ಯೋಗಿಗಳು ಧ್ಯಾನಿಸುವರು.

೪೨-೪೩. ಬ್ರಹ್ಮ, ವಿಷ್ಣು, ಮಹೇಶ್ವರಾದಿಗಳಿಂದ ಪೂಜಿತನೂ, ನಮಸ್ಕೃತನೂ ಮತ್ತು ಸ್ತುತನೂ ಆಗಿ ಒಮ್ಮೆ ಗೋಪಬಾಲಕನೂ ಮತ್ತೊಮ್ಮೆ ರಾಧಾ

ನಿರ್ಲಿಪ್ತಂ ಸಾಕ್ಷಿರೂಪಂ ಚ ನಿರ್ಗುಣಂ ಪ್ರಕೃತೇಃ ಪರಂ ।
ಧ್ಯಾಯೇತ್ಸರ್ವೇಶ್ವರಂ ತಂ ಚ ಪರಮಾತ್ಮಾನಮೀಶ್ವರಂ ॥ ೪೩ ॥

ಇದಂ ತೇ ಕಥಿತಂ ಧ್ಯಾನಂ ಸ್ತೋತ್ರಂ ಚ ಕವಚಂ ಮುನೇ ।
ಮಂತ್ರೌಪಯೌಗಿಕಂ ಸತ್ಯಂ ಮಂತ್ರಶ್ಚ ಕಲ್ಪಪಾದಪಃ ॥ ೪೪ ॥

ಸಾಂಪ್ರತಂ ಬಾಲಕಸ್ತಸ್ಥೌ ಧ್ಯಾನಸ್ಥಸ್ತತ್ರ ಶೌನಕ ।
ದಿವ್ಯಂ ವರ್ಷಸಹಸ್ರಂ ಚ ನಿರಾಹಾರಃ ಕೃಶೋದರಃ ॥ ೪೫ ॥

ಶಕ್ತಿಮಾನ್ ಪರಿಪುಷ್ಟಶ್ಚ ಸಿದ್ಧಮಂತ್ರಪ್ರಭಾವತಃ ।
ದದರ್ಶ ಬಾಲಕೋ ಧ್ಯಾನೇ ದಿವ್ಯಂ ಲೋಕಂ ಚ ಬಾಲಕಂ ॥ ೪೬ ॥

ರಮಣನೂ, ಇನ್ನೊಮ್ಮೆ ಶಾಂತಾಕಾರನೂ, ಪರಾತ್ಪರನೂ, ಎಲ್ಲರ ಕರ್ಮಕ್ಕೂ ಸಾಕ್ಷಿಭೂತನಾದರೂ ಕರ್ಮಲೇಪರಹಿತನೂ, ನಿರ್ಗುಣನೂ, ಪ್ರಕೃತಿಗಿಂತ ಪರನೂ ಆದ ಆ ಪರಮಪುರುಷನನ್ನು ಭಕ್ತಿಯಿಂದ ಧ್ಯಾನಮಾಡಬೇಕು.

೪೪. ಎಲೈ ಶೌನಕನೇ! ಕಲ್ಪವೃಕ್ಷದಂತೆ ಕೇಳಿದ ಫಲವನ್ನು ಕೊಡುವ ಇಪ್ಪತ್ತೆರಡಕ್ಷರಗಳುಳ್ಳ ವಿಷ್ಣುವಿನ ಮಂತ್ರವನ್ನೂ, ಅದಕ್ಕೆ ಯೋಗ್ಯವಾದ ಧ್ಯಾನ ಶ್ಲೋಕಗಳನ್ನೂ ನಿನ್ನ ಬೇಡಿಕೆಯಂತೆ ವಿವರಿಸಿದುದಾಯಿತು.

೪೫. ಪ್ರಕೃತದಲ್ಲಿ ಅಶ್ವತ್ಥವೃಕ್ಷದ ಬುಡದಲ್ಲಿ ಧ್ಯಾನಾಸಕ್ತನಾಗಿದ್ದ ಬಾಲಕನ ಕಥೆಯನ್ನು ಮುಂದುವರಿಸುವೆನು. ಆ ಬಾಲಕನು ನಿರಾಹಾರದಿಂದ ಕೃಶೋದರನಾಗಿ ಒಂದುಸಾವಿರ ವರ್ಷ ಅಂತೆಯೇ ಧ್ಯಾನವನ್ನು ಮಾಡುತ್ತಿದ್ದನು.

೪೬. ಆದರೂ ವಿಷ್ಣುಮಂತ್ರಪ್ರಭಾವದಿಂದ ಅವನ ಶಕ್ತಿಯು ಕುಂದದೆ ದೇಹವು ಪುಷ್ಟವಾಗಿದ್ದಿತು. ಹೀಗೆಯೇ ನಿಶ್ಚಲಮನಸ್ಸಿನಿಂದ ಧ್ಯಾನಮಾಡುತ್ತಾ ಒಮ್ಮೆ ದಿವ್ಯದೃಷ್ಟಿಯನ್ನು ಪಡೆದು ಗೋಲೋಕವನ್ನೂ, ಅಲ್ಲಿರುವ ಗೋಪಬಾಲಕನಾದ ಪರಮಾತ್ಮನನ್ನೂ ನೋಡಿದನು.

ರತ್ನಸಿಂಹಾಸನಸ್ಥಂ ಚ ರತ್ನಭೂಷಣಭೂಷಿತಂ ।
ಕಿಶೋರವಯಸಂ ಶ್ಯಾಮಂ ಗೋಪವೇಷಂ ಚ ಸಸ್ಮಿತಂ ॥ ೪೭ ॥

ಗೋಪೈರ್ಗೋಪಾಂಗನಾಭಿಶ್ಚ ವೇಷ್ಟಿತಂ ಪೀತವಾಸಸಂ ।
ದ್ವಿಭುಜಂ ಮುರಲೀಹಸ್ತಂ ಚಂದನೇನ ವಿಚರ್ಚಿತಂ ॥ ೪೮ ॥

ಬ್ರಹ್ಮವಿಷ್ಣುಶಿವಾದ್ಯೈಶ್ಚ ಸ್ತೂಯಮಾನಂ ಪರಾತ್ಪರಂ ।
ದೃಷ್ಟ್ವಾ ಚ ಸುಚಿರಂ ಶಾಂತಂ ಶಾಂತಶ್ಚ ಗೋಪಿಕಾಸುತಃ ॥ ೪೯ ॥

ವಿರರಾಮ ಚ ಶೋಕಾರ್ತೋ ಯದಾ ತದ್ದ್ರಷ್ಟುಮಕ್ಷಮಃ ।
ರುರೋದಾಶ್ವತ್ಥಮೂಲೇ ಚ ನ ದೃಷ್ಟ್ವಾ ಬಾಲಕಂ ಶಿಶುಃ ॥ ೫೦ ॥

ಬಭೂವಾಕಾಶವಾಣೀತಿ ರುದಂತಂ ಬಾಲಕಂ ಪ್ರತಿ ।
ಸತ್ಯಂ ಪ್ರಬೋಧಯುಕ್ತಂ ಚ ಹಿತಮೇವ ಮಿತಾಕ್ಷರಂ ॥ ೫೧ ॥

೪೭–೪೮. ನೋಡಿದರೆ–ಆ ಗೋಪಬಾಲನು ರತ್ನಾಭರಣಗಳನ್ನು ಧರಿಸಿಕೊಂಡು, ದಿವ್ಯಚಂದನವನ್ನು ಅಂಗಾಂಗಗಳಿಗೂ ಲೇಪಿಸಿಕೊಂಡು, ಪೀತಾಂಬರಧಾರಿಯಾಗಿ, ಕೈಯಲ್ಲಿ ಕೊಳಲನ್ನು ಹಿಡಿದು ರತ್ನಸಿಂಹಾಸನದಲ್ಲಿ ಮಂಡಿಸಿದ್ದಾನೆ. ಸುತ್ತಲೂ ಗೋಪಾಲಕರೂ, ಗೋಪಿಕಾಸ್ತ್ರೀಯರೂ ನೆರೆದಿದ್ದಾರೆ.

೪೯–೫೦. ಪರತರನಾದ ಆ ಪರಮಾತ್ಮನನ್ನು ಬ್ರಹ್ಮವಿಷ್ಣುಮಹೇಶ್ವರರು ಮುಂತಾದ ದೇವತೆಗಳು ಸ್ತುತಿಸುತ್ತಿದ್ದಾರೆ. ಕಲಾವತಿಯ ಪುತ್ರನು ಬಹಳ ಕಾಲದವರೆಗೆ ಆ ದಿವ್ಯಸುಂದರ ವಿಗ್ರಹವನ್ನು ಎವೆಯಿಕ್ಕದೆ ನೋಡಿದನು. ಆದರೂ ನೇತ್ರಗಳಿಗೆ ತೃಪ್ತಿಯಾಗಲಿಲ್ಲ. ಅಷ್ಟರಲ್ಲೇ ಪರಮಾತ್ಮನ ರೂಪು ಕಣ್ಮರೆಯಾಯಿತು. ಕೂಡಲೇ ಬಾಲಕನು ಆ ಅಶ್ವತ್ಥವೃಕ್ಷದ ಬುಡದಲ್ಲೇ ಅಳುತ್ತಾ ಕುಳಿತುಕೊಂಡನು.

೫೧–೫೩. ಅಷ್ಟರಲ್ಲಿಯೇ, ಅಳುತ್ತಿರುವ ಆ ಬಾಲಕನನ್ನು ಸತ್ಯವೂ, ಪ್ರಿಯವೂ ಮತ್ತು ಮಿತವೂ ಆದ ಆಕಾಶವಾಣಿಯು ಇಂತು ಸಮಾಧಾನಗೊಳಿಸಿತು. 'ಎಲೈ' ಬಾಲಕನೇ! ವಿಷಯಾಭಿಲಾಷೆಯನ್ನು ತೊರೆಯುದವರಿಗೂ, ಮನಸ್ಸು ಪರಿಶುದ್ಧವಾಗದ

ಸಕೃದ್ಯದ್ದರ್ಶಿತಂ ರೂಪಂ ತದೇವ ನಾಧುನಾ ಪುನಃ ।
ಅತಿಪಕ್ವಕಷಾಯಾಣಾಂ ದುರ್ದರ್ಶಂ ಚ ಕುಯೋಗಿನಾಂ ॥ ೫೨ ॥

ಏತಸ್ಮಿನ್ವಿಗ್ರಹೇಽತೀತೇ ಸಂಪ್ರಾಪ್ತೇ ದಿವ್ಯವಿಗ್ರಹೇ ।
ಪುನರ್ದ್ರಕ್ಷ್ಯಸಿಗೋವಿಂದಂ ಜನ್ಮಮೃತ್ಯುಹರಂ ಹರಿಂ ॥ ೫೩ ॥

ಇತಿ ಶ್ರುತ್ವಾ ಬಾಲಕಶ್ಚ ವಿರರಾಮ ಮುದಾನ್ವಿತಃ ।
ಕಾಲೇ ತತ್ಯಾಜ ತೀರ್ಥೇ ಚ ತನುಂ ಕೃಷ್ಣಂ ಹೃದಿ ಸ್ಮರನ್ ॥ ೫೪ ॥

ನೇದುರ್ದುಂದುಭಯಃ ಸ್ವರ್ಗೇ ಪುಷ್ಪವೃಷ್ಟಿರ್ಬಭೂವ ಹ ।
ಬಭೂವ ಶಾಪಮುಕ್ತಶ್ಚ ನಾರದಶ್ಚ ಮಹಾಮುನಿಃ ॥ ೫೫ ॥

ತನುಂ ತ್ಯಕ್ತ್ವಾ ಸ ಜೀವಶ್ಚ ವಿಲೀನೋ ಬ್ರಹ್ಮವಿಗ್ರಹೇ ।
ಬಭೂವ ಪ್ರಾಕ್ತನಾನ್ನಿತ್ಯಃ ಕಾಲಭೇದೇ ತಿರೋಹಿತಃ ॥ ೫೬ ॥

ಕುಯೋಗಿಗಳಿಗೂ (ಕು-ಕುತ್ಸಿತ) ದುರ್ಲಭನಾದ ಪರಮಾತ್ಮನ ದರ್ಶನವು, ನಿನಗೆ ಈ ಜನ್ಮದಲ್ಲಿ ಇನ್ನೊಮ್ಮೆ ದೊರೆಯಲಾರದು. ಈ ಪಾಂಚಭೌತಿಕ ಶರೀರವನ್ನು ಬಿಟ್ಟು ನೀನು ದಿವ್ಯ ಶರೀರಧರನಾಗಿ, ಜರಾಮರಣ ಹರನಾದ ಹರಿಯನ್ನು ಮತ್ತೆ ನೋಡುವೆ.'

೫೪. ಹೀಗೆಂದ ಆಕಾಶವಾಣಿಯನ್ನು ಕೇಳಿ ಆ ಬಾಲಕನು ಸಂತೋಷದಿಂದ ಮೌನವಾಗಿ ಹಿಂತಿರುಗಿದನು. ಮತ್ತು ತನ್ನ ಜೀವಿತ ಕಾಲಾವಸಾನದಲ್ಲಿ ಕೃಷ್ಣ ಪರಮಾತ್ಮನನ್ನು ಧ್ಯಾನಿಸುತ್ತಾ ಪುಣ್ಯತೀರ್ಥದಲ್ಲಿ ತನ್ನ ದೇಹವನ್ನು ತ್ಯಾಗಮಾಡಿದನು.

೫೫. ದೇವತೆಗಳು ಸ್ವರ್ಗದಲ್ಲಿ ಹೂಮಳೆಗರೆದರು. ನಗಾರಿಗಳ ಧ್ವನಿಯು ನಭೋಮಂಡಲವನ್ನು ವ್ಯಾಪಿಸಿತು. ಇಂತು ಮಹರ್ಷಿಯಾದ ನಾರದನು ಶಾಪ ವಿಮುಕ್ತನಾದನು.

೫೬. ಪಾಂಚಭೌತಿಕ ಶರೀರವನ್ನು ಬಿಟ್ಟು ಆ ಜೀವನು ಬ್ರಹ್ಮನ ವಿಗ್ರಹದಲ್ಲಿ ಐಕ್ಯವಾದನು. ನಿತ್ಯಭಕ್ತನಾದ ಆ ನಾರದನು ಕೆಲವು ಕಾಲ ಜೀವಲೋಕದಲ್ಲಿದ್ದು ಕಾಲಾಂತರದಲ್ಲಿ ಕಣ್ಮರೆಯಾದನು.

ಆವಿರ್ಭಾವಸ್ತಿರೋಭಾವಃ ಸ್ವೇಚ್ಛಯಾ ನಿತ್ಯದೇಹಿನಾಂ ।
ಜನ್ಮಮೃತ್ಯುಜರಾವ್ಯಾಧಿರ್ಭಕ್ತಾನಾಂ ನಾಸ್ತಿ ಶೌನಕ　　　॥ ೫೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಸೌತಿಶೌನಕ ಸಂವಾದೇ ನಾರದಶಾಪವಿಮೋಚನಂ ನಾಮೈಕವಿಂಶೋಽಧ್ಯಾಯಃ

---

೫೭. ನಿತ್ಯಾತ್ಮರಾದ ವಿಷ್ಣುಭಕ್ತರು ತಮ್ಮ ಇಚ್ಛೆಬಂದಂತೆ ಹುಟ್ಟು ಸಾವುಗಳನ್ನು ಹೊಂದಬಹುದು. ಜನನ ಮರಣಗಳಾಗಲೀ, ಜರಾವ್ಯಾಧಿಗಳಾಗಲೀ ಭಕ್ತರನ್ನು ಬಂಧಿಸಲಾರವು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಬ್ರಹ್ಮಖಂಡದಲ್ಲಿ
ನಾರದ ಶಾಪವಿಮೋಚನಾರೂಪವಾದ ಇಪ್ಪತ್ತೊಂದನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತೊಂದನೆಯ ಅಧ್ಯಾಯದ ಸಾರಾಂಶವು

ಕಲಾವತಿಯ ಪುತ್ರನಿಗೆ ಐದುವರ್ಷವಾಗುವುದರೊಳಗೆ ಜನ್ಮಾಂತರದ ಸ್ಮರಣೆಯುಂಟಾಗಿ, ಅವನ ಬಾಲಲೀಲೆಯೆಲ್ಲವೂ ಕೃಷ್ಣಪರಮಾತ್ಮನ ಸೇವಾಪರವಾಯಿತು. ಮಣ್ಣಿನಲ್ಲೇ ಪರಮಾತ್ಮನ ವಿಗ್ರಹವೊಂದನ್ನು ಮಾಡಿ, ಮಣ್ಣಿನಿಂದಲೇ ಪೂಜಿಸಿ, ಮಣ್ಣನ್ನೇ ಭಕ್ತಿಯಿಂದ ನಿವೇದಿಸುತ್ತಿದ್ದ ಆ ಬಾಲಕನ ಭಕ್ತಿಯನ್ನು ಮಾತೆಯು ಕಣ್ಣಾಣಿಯುವಂತೆ ನೋಡಿ ಆನಂದಿಸಿದಳು. ಕೃಷ್ಣಪರಮಾತ್ಮನ ಸಂಬಂಧವಾದ ಪುರಾಣಕಥೆಗಳನ್ನು ಕೇಳುವುದರಲ್ಲಿ ಆಸಕ್ತನಾದ ಆ ಬಾಲಕನಿಗೆ ಊಟತಿಂಡಿಗಳೂ, ಆಟಪಾಟಗಳೂ, ಬೇಕಾಗುತ್ತಿರಲಿಲ್ಲ. ಆ ಬಾಲಕನು ಮಳೆ ಇಲ್ಲದ ಕ್ಷಾಮಕಾಲದಲ್ಲಿ ಹುಟ್ಟಿ ಮಳೆಗರೆಸಿದ್ದರಿಂದಲೂ, (ನಾರಂ = ನೀರನ್ನು ದದೌ ಇತಿ = ಕೊಟ್ಟನೆಂಬ ಕಾರಣದಿಂದಲೂ), ತನ್ನ ಸಮಾನವಯಸ್ಕರಿಗೆಲ್ಲಾ ದಿವ್ಯಜ್ಞಾನವನ್ನು ಬೋಧಿಸಿದ್ದರಿಂದಲೂ (ನಾರಂ = ಜ್ಞಾನವನ್ನು ದದಾತೀತಿ = ಕೊಡುವನೆಂಬ ಕಾರಣದಿಂದ), ನಾರದನೆಂಬ ಋಷಿಯ ವೀರ್ಯದಿಂದ ಜನಿಸಿದ್ದರಿಂದಲೂ (ನಾರದಸ್ಯ ಅಪತ್ಯಂ ಪುಮಾನ್=ನಾರದಃ), ನಾರದನೆಂದು ಹೆಸರುವಾಸಿಯಾದನು. ಪುತ್ರರಿಲ್ಲದ ಕಶ್ಯಪನಿಗೆ-ಧರ್ಮಪುತ್ರನಾದ ನರನು ಪುತ್ರಾನುಗ್ರಹಮಾಡಿದ್ದರಿಂದ (ನರೇಣ = ನರನಿಂದ ದತ್ತಃ ಕೊಡಲ್ಪಟ್ಟವನು) ಕಶ್ಯಪಪುತ್ರನಿಗೂ ನಾರದನೆಂಬ ಅಭಿಧಾನವಾಯಿತು. ಕಲ್ಪಾಂತರದಲ್ಲಿ ಬ್ರಹ್ಮನ ಕಂಠದಿಂದ ಅನೇಕ ನರರು ಹುಟ್ಟಿದುದರಿಂದ ಆ ಕಂಠಕ್ಕೆ 'ನರದ'ವೆಂಬುದಾಗಿಯೂ, ಅಲ್ಲಿಂದ ಜನಿಸಿದವನೇ ನಾರದನೆಂದೂ ಜಗತ್ಪ್ರಸಿದ್ಧನಾದನು. ಪ್ರಕೃತ ಗೋಪಬಾಲಕನಾದ ನಾರದನು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಗೊಳ್ಳುತ್ತಿರಲು, ಆ ಬ್ರಾಹ್ಮಣನ ಮನೆಗೆ ಅತಿತೇಜಸ್ವಿಗಳಾದ ನಾಲ್ವರು ಮುನಿಗಳು-ಐದು ವರ್ಷದ ಬಾಲಕರ ರೂಪಧಾರಿಗಳಾಗಿ ಬಂದು ಆತಿಥ್ಯವನ್ನು ಸ್ವೀಕರಿಸಿದರು. ಅವರು ತಿಂದು ಮಿಕ್ಕುದನ್ನು ಈ ಬಾಲಕನು ತಿಂದು ಅವರಿಂದ ಕೃಷ್ಣಮಂತ್ರೋಪದೇಶವನ್ನು ಪಡೆದು, ತಾಯಿಯ ಅಪ್ಪಣೆ ಪಡೆದು ಅವರ ದಾಸನಾದನು. ಅನಂತರ ಅವರು ಕಣ್ಮರೆಯಾದರು.

ಹೀಗಿರಲು ಒಮ್ಮೆ ನಾರದನ ತಾಯಿ ದಾಸಿ ಕಲಾವತಿಯು ಹಾವು ಕಡಿದು ಮೃತಿಹೊಂದಲು ನಾರದನು ತನ್ನ ಮನೆಯನ್ನು ತ್ಯಜಿಸಿ, ಬ್ರಾಹ್ಮಣರಿಂದ ಜ್ಞಾನೋಪದೇಶವನ್ನು ಹೊಂದಿ, ಗಂಗೆಯ ದಡದಲ್ಲಿ ಒಂದು ಅಶ್ವತ್ಥವೃಕ್ಷದ ಕೆಳಗೆ ಬಹಳ ಕಾಲ ಕೃಷ್ಣಪರಮಾತ್ಮನನ್ನು ಧ್ಯಾನಿಸಿ, ಕೊನೆಗೆ ಒಮ್ಮೆ ಕ್ಷಣಕಾಲ ಮಾತ್ರ ಕೃಷ್ಣಪರಮಾತ್ಮನ ದಿವ್ಯಸುಂದರಾಕಾರವನ್ನು ದಿವ್ಯದೃಷ್ಟಿಯಿಂದ ನೋಡಿದನು. ಅಷ್ಟರಲ್ಲೇ ಕಣ್ಮರೆಯಾದ ಪರಮಾತ್ಮನ ರೂಪವನ್ನು ನೋಡಲು ತವಕಿಸುತ್ತಿರುವ ಬಾಲಕನನ್ನು ಕುರಿತು, 'ಎಲೈ, ಬಾಲಕನೇ! ನಿನಗೆ ಈ ಜನ್ಮದಲ್ಲಿ ಇನ್ನೊಮ್ಮೆ ಹರಿಯ ದರ್ಶನವಾಗಲಾರದು. ನೀನು ಪಾಂಚಭೌತಿಕ ಶರೀರವನ್ನು ಬಿಟ್ಟು, ಗೋಲೋಕವನ್ನು ಸೇರಿದ ಮೇಲೆ ಯಾವಾಗಲೂ ಗೋಪಿಕಾವಲ್ಲಭನ ದಿವ್ಯಸುಂದರ ವಿಗ್ರಹವನ್ನು ನೋಡುತ್ತಾ ಸೇವೆಗೈಯ್ಯುವೆ' ಎಂದು ಅಶರೀರವಾಣಿಯಾಯಿತು. ಸಮಾಧಾನಗೊಂಡ ಬಾಲಕನು ಕೆಲವು ಕಾಲದ ಮೇಲೆ, ಪ್ರಾಕೃತಿಕ ಶರೀರವನ್ನು ಪುಣ್ಯಕ್ಷೇತ್ರದಲ್ಲಿ ತ್ಯಜಿಸಿ ಪರಮಾತ್ಮನ ಲೋಕವನ್ನು ಸೇರಿ ಸೇವೆಗೈಯ್ಯುತ್ತಿದ್ದನು. ಇಂತು ನಾರದನಿಗೆ ಬ್ರಹ್ಮಶಾಪ ವಿಮೋಚನೆಯಾಯಿತು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

|| ದ್ವಾವಿಂಶೋಽಧ್ಯಾಯಃ ||

|| ಸೌತಿರುವಾಚ ||

ಕತಿ ಕಲ್ಪಾಂತರೇಽತೀತೇ ಸ್ರಷ್ಟುಃ ಸೃಷ್ಟಿವಿಧೌ ಪುನಃ |
ಮರೀಚಿಮಿಶ್ರೈರ್ಮುನಿಭಿಃ ಸಾರ್ಧಂ ಕಂಠಾದ್ಬಭೂವ ಸಃ || ೧ ||

ವಿಧೇರ್ನರದನಾಮ್ನಶ್ಚ ಕಂಠದೇಶಾದ್ಬಭೂವ ಸಃ |
ನಾರದಸ್ತೇನ ವಿಖ್ಯಾತೋ ಮುನೀಂದ್ರಸ್ತೇನ ಹೇತುನಾ || ೨ ||

ಯಃ ಪುತ್ರಶ್ಚೇತಸೋ ಧಾತುರ್ಬಭೂವ ಮುನಿಪುಂಗವಃ |
ತೇನ ಪ್ರಚೇತಾ ಇತಿ ಚ ನಾಮ ಚಕ್ರೇ ಪಿತಾಮಹಃ || ೩ ||

ಇಪ್ಪತ್ತೆರಡನೆಯ ಅಧ್ಯಾಯವು

೧. ಸೂತಪುತ್ರ ;—ಕೆಲವು ಕಲ್ಪಗಳು ಕಳೆದ ಮೇಲೆ ಚತುರ್ಮುಖಬ್ರಹ್ಮನ ಸೃಷ್ಟಿಯಲ್ಲಿ ಮರೀಚಿ ಮುಂತಾದ ಮಹರ್ಷಿಗಳೊಡನೆ ಮತ್ತೆ ಆ ನಾರದನು ಋಷಿಯಾಗಿ ಜನಿಸಿದನು.

೨. ಬ್ರಹ್ಮನ 'ನರದ' ವೆಂಬ ಕಂಠದೇಶದಿಂದ ಅವತರಿಸಿದ ಆ ಮುನಿಗೆ ನಾರದನೆಂಬ ಹೆಸರು ಅನ್ವರ್ಥವಾಯಿತು. (ನೋಡು ಅಧ್ಯಾಯ ೨೧ ಶ್ಲೋಕ ೧೩)

೩. ಬ್ರಹ್ಮನ ಚೇತಸ್ಸಿನಿಂದ (ಮನಸ್ಸಿನಿಂದ) ಜನಿಸಿದ ಮುನಿಶ್ರೇಷ್ಠನು 'ಪ್ರಚೇತಸ' ನೆಂದು ಪ್ರಸಿದ್ಧಿಪಡೆದನು.

ಬಭೂವ ಧಾತುರ್ಯಃ ಪುತ್ರಃ ಸಹಸಾ ದಕ್ಷ ಪಾರ್ಶ್ವತಃ ।
ಸರ್ವಕರ್ಮಣಿ ದಕ್ಷಶ್ಚ ತೇನ ದಕ್ಷಃ ಪ್ರಕೀರ್ತಿತಃ ॥ ೪ ॥

ವೇದೇಷು ಕರ್ದಮಃ ಶಬ್ದಶ್ಛಾಯಾಯಾಂ ವರ್ತತೇ ಸ್ಫುಟಃ ।
ಬಭೂವ ಕರ್ದಮಾದ್ಬಾಲಃ ಕರ್ದಮಸ್ತೇನ ಕೀರ್ತಿತಃ ॥ ೫ ॥

ತೇಜೋಭೇದೇ ಮರೀಚಿಶ್ಚ ವೇದೇಷು ವರ್ತತೇ ಸ್ಫುಟಂ ।
ಜಾತಃ ಸದ್ಯೋಽತಿ ತೇಜಸ್ವೀ ಮರೀಚಿಸ್ತೇನ ಕೀರ್ತಿತಃ ॥ ೬ ॥

ಕ್ರತುಸಂಘಶ್ಚ ಬಾಲೇನ ಕೃತೋ ಜನ್ಮಾಂತರೇಽಧುನಾ ।
ಬ್ರಹ್ಮಪುತ್ರೇಽಪಿತನ್ನಾಮ ಕ್ರತುರಿತ್ಯಭಿಧೀಯತೇ ॥ ೭ ॥

ಪ್ರಧಾನಾಂಗಂ ಮುಖಂ ಧಾತುಸ್ತತೋ ಜಾತಶ್ಚ ಬಾಲಕಃ ।
ಇರಸ್ತೇಜಸ್ವಿ ವಚನೋಽಪ್ಯಂಗಿರಾಸ್ತೇನ ಕೀರ್ತಿತಃ ॥ ೮ ॥

---

೪. ಯಾವ ಮಹರ್ಷಿಯು ಬ್ರಹ್ಮನ ದಕ್ಷಿಣ (ಬಲಭಾಗ) ಪಾರ್ಶ್ವದಿಂದ ಜನಿಸಿ, ಎಲ್ಲ ಕಾರ್ಯಗಳಲ್ಲೂ ದಕ್ಷ (ಸಮರ್ಥ) ನೆನಿಸಿಕೊಂಡನೋ ಆತನಿಗೆ ದಕ್ಷನೆಂದೇ ಹೆಸರಾಯಿತು.

೫. 'ಕರ್ದಮ' ವೆಂದರೆ ಕಾಂತಿ ಎಂದು ವೇದದಲ್ಲಿ ಪ್ರಸಿದ್ಧವಾಗಿದೆ. ಬ್ರಹ್ಮನ ಕಾಂತಿಯಿಂದ ಜನಿಸಿದಾತನಿಗೆ 'ಕರ್ದಮ' ನೆಂದು ಹೆಸರಾದುದು, ಅದೇ ಕಾರಣದಿಂದಲೇ.

೬. ವೇದದಲ್ಲಿ 'ಮರೀಚಿ' ಎಂದರೆ ಒಂದು ವಿಧವಾದ ತೇಜಸ್ಸು ಎಂದು ಉಕ್ತವಾಗಿದೆ. ಆದ್ದರಿಂದ ಬ್ರಹ್ಮನ ತೇಜಸ್ಸಿನಿಂದ ಜನಿಸಿ, ತೇಜಸ್ವಿಯಾದವನು 'ಮರೀಚಿ' ಎನಿಸಿಕೊಂಡನು.

೭. ಜನ್ಮಾಂತರದಲ್ಲಿ ಅನೇಕ ಕ್ರತು (ಯಾಗ) ಗಳನ್ನು ನಡೆಸಿ ಬ್ರಹ್ಮಪುತ್ರನಾಗಿ ಜನಿಸಿದಾತನೇ ಕ್ರತುವೆನಿಸಿಕೊಂಡನು.

೮. ಬ್ರಹ್ಮನ ಪ್ರಧಾನಾಂಗವಾದ ಮುಖದಿಂದ ಜನಿಸಿ ಇರಃ, ಅಂದರೆ ತೇಜಸ್ವಿಯಾಗಿದ್ದುದರಿಂದ (ಅಂಗ–ಇರಃ) ಆ ಮಹರ್ಷಿಯು ಅಂಗಿರಸನಾದನು.

ಅತಿತೇಜಸ್ವಿನಿ ಭೃಗುರ್ವರ್ತತೇ ನಾಮ್ನಿ ಶೌನಕ ।
ಜಾತಃ ಸದ್ಯೋಽತಿತೇಜಸ್ವೀ ಭೃಗುಸ್ತೇನ ಪ್ರಕೀರ್ತಿತಃ ॥ ೯ ॥

ಬಾಲೋಽಪ್ಯರುಣವರ್ಣಶ್ಚ ಜಾತಃ ಸದ್ಯೋಽತಿತೇಜಸಾ ।
ಪ್ರಜ್ವಲನ್ನೂರ್ಧ್ವತಪಸಾ ಚಾರುಣಿಸ್ತೇನ ಕೀರ್ತಿತಃ ॥ ೧೦ ॥

ಹಂಸಾ ಆತ್ಮವಶಾ ಯಸ್ಯ ಯೋಗೇನ ಯೋಗಿನೋ ಧ್ರುವಂ ।
ಬಾಲಃ ಪರಮಯೋಗೀಂದ್ರಸ್ತೇನ ಹಂಸೋ ಪ್ರಕೀರ್ತಿತಃ ॥ ೧೧ ॥

ವಶೀಭೂತಶ್ಚ ಶಿಷ್ಯಶ್ಚ ಜಾತಃ ಸದ್ಯೋ ಹಿ ಬಾಲಕಃ ।
ಅತಿಪ್ರಿಯಶ್ಚ ಧಾತುಶ್ಚ ವಶಿಷ್ಠಸ್ತೇನ ಕೀರ್ತಿತಃ ॥ ೧೨ ॥

ಸಂತತಂ ಯಸ್ಯ ಯತ್ನಂ ಚ ತಪಃಸು ಬಾಲಕಸ್ಯ ಚ ।
ಪ್ರಕೀರ್ತಿತೋ ಯತಿಸ್ತೇನ ಸಂಯತಃ ಸರ್ವಕರ್ಮಸು ॥ ೧೩ ॥

---

೯. 'ಭೃಗು' ಎಂದರೆ ಅತಿತೇಜಸ್ವಿಯಾದುದು ಎಂಬರ್ಥವಿದೆ. ಆದ್ದರಿಂದ ಬಹಳ ತೇಜಸ್ವಿಯಾದ ಬ್ರಹ್ಮಪುತ್ರನೊಬ್ಬನು ಭೃಗುಮಹರ್ಷಿಯೆನಿಸಿಕೊಂಡನು.

೧೦. ಅರುಣ (ಕೆಂಪು) ವರ್ಣನಾದ ಬಾಲಕನೊಬ್ಬನು ಬ್ರಹ್ಮನಿಂದ ಜನಿಸಿ ತಪೋಮಹಿಮೆಯಿಂದ ಪ್ರಜ್ವಲಿಸುವವನಾಗಿ 'ಆರುಣಿ' ಎಂಬುದಾಗಿ ಖ್ಯಾತಿ ಪಡೆದನು.

೧೧. ಯೋಗಾಭ್ಯಾಸದಿಂದ ಇಂದ್ರಿಯಗಳನ್ನು ಆತ್ಮವಶಪಡಿಸಿಕೊಳ್ಳಬಲ್ಲ ಯೋಗಿಶ್ರೇಷ್ಠರು ಹಂಸರೆನಿಸಿಕೊಳ್ಳುವರು. ಆದುದರಿಂದಲೇ ಬ್ರಹ್ಮಪುತ್ರರಲ್ಲಿ ಇಂದ್ರಿಯನಿಗ್ರಹಮಾಡಿದ ಯೋಗಿಶ್ರೇಷ್ಠನಾದವನೊಬ್ಬನು ಹಂಸನಾದನು.

೧೨. 'ವ' ಎಂದರೆ ತನ್ನ ವಶನಾಗಿರುವವನು. 'ಶಿ' ಎಂದರೆ ತನ್ನ ಶಿಷ್ಯನ 'ಇಷ್ಟ' ನೆಂದರೆ ಪ್ರೀತಿಪಾತ್ರನು. ಆದುದರಿಂದ ಬ್ರಹ್ಮನ ಅಧೀನನೂ, ಶಿಷ್ಯನೂ ಮತ್ತು ಪ್ರಿಯನೂ ಆದ ಋಷಿಯು ವಸಿಷ್ಠನಾದನು.

೧೩. ಎಲ್ಲ ಕರ್ಮಗಳಲ್ಲೂ ಸಂಯತ (ನಿಗ್ರಹಪರ) ನಾಗಿ ಯಾವಾಗಲೂ ತಪಸ್ಸಿಗೇ ಪ್ರಯತ್ನಪಡುತಿದ್ದ ಮಹರ್ಷಿಯೊಬ್ಬನು ಯತಿ (ಪ್ರಯತ್ನ ಮಾಡು ವವನು) ಎನಿಸಿಕೊಂಡನು.

ಪುಲಸ್ತಪಃಸು ವೇದೇಷು ವರ್ತತೇ ಹಃ ಸ್ಫುಟೇಽಪಿ ಚ ।
ಸ್ಫುಟಸ್ತಪಃಸಮೂಹಶ್ಚ ಪುಲಹಸ್ತೇನ ಬಾಲಕಃ ॥ ೧೪ ॥

ಪುಲಸ್ತಪಃಸಮೂಹಶ್ಚ ಯಸ್ಯಾಸ್ತಿ ಪೂರ್ವಜನ್ಮನಾಂ ।
ತಪಃಸಂಘಸ್ವರೂಪಶ್ಚ ಪುಲಸ್ತ್ಯಸ್ತೇನ ಬಾಲಕಃ ॥ ೧೫ ॥

ತ್ರಿಗುಣಾಯಾಂ ಪ್ರಕೃತ್ಯಾಂ ತು ತ್ರಿರ್ವಿಷ್ಣಾವಶ್ಚ ವರ್ತತೇ ।
ತಯೋರ್ಭಕ್ತಿಃ ಸಮಾ ಯಸ್ಯ ತೇನ ಬಾಲೋಽತ್ರಿರುಚ್ಯತೇ ॥ ೧೬ ॥

ಜಟಾ ವಹ್ನಿಶಿಖಾರೂಪಾಃ ಪಂಚ ಸಂತಿ ಚ ಮಸ್ತಕೇ ।
ತಪಸ್ತೇಜೋಭವಾ ಯಸ್ಯ ಸ ಚ ಪಂಚಶಿಖಸ್ಮೃತಃ ॥ ೧೭ ॥

ಅಪಾಂತರತಮೋ ದೇಶೇ ತಪಸ್ತೇಪೇಽನ್ಯಜನ್ಮನಿ ।
ಅಪಾಂತರತಮಾ ನಾಮ ಶಿಶೋಸ್ತೇನ ಪ್ರಕೀರ್ತಿತಂ ॥ ೧೮ ॥

---

೧೪. 'ಪುಲ' ಎಂದರೆ ತಪಸ್ಸೆಂದೂ, 'ಹ' ಎಂದರೆ ಸ್ಫುಟವೆಂದೂ ವೇದದಲ್ಲಿ ಪ್ರತಿಪಾದಿತವಾಗಿವೆ. ಆದ್ದರಿಂದ ಪ್ರಕಟವಾಗಿ ತಪಸ್ಸುಮಾಡುವವನು ಪುಲಹನೆನಿಸಿಕೊಂಡನು.

೧೫. ಜನ್ಮಾಂತರದ ತಪಸ್ಸಮೂಹವನ್ನು ಶೇಖರಿಸಿಕೊಂಡಿರುವಾತನು–(ಪುಲಃ – ತಪಸ್ಸಿನ ಸಮೂಹವು, ಅಸ್ಯ – ಇವನಿಗೆ, ಅಸ್ತೀತಿ – ಇದೆಯಾದ್ದರಿಂದ) ಪುಲಸ್ತ್ಯಮಹರ್ಷಿಯೆನಿಸಿಕೊಂಡನು.

೧೬. 'ತ್ರಿ' ಎಂದರೆ ಸತ್ವರಜಸ್ತಮಸ್ಸೆಂಬ ತ್ರಿಗುಣಾತ್ಮಕಳಾದ ಪ್ರಕೃತಿದೇವಿಯೆಂದೂ, 'ಅ' ಎಂದರೆ ವಿಷ್ಣುವೆಂದೂ ಅರ್ಥವಾಗುವುದರಿಂದ ಆ ಪ್ರಕೃತಿ ಪುರುಷರಲ್ಲಿ ಸಮನಾದ ಭಕ್ತಿಯುಳ್ಳವನು 'ಅತ್ರಿ' ಎಂದು ಹೆಸರಾದನ .

೧೭. ತಪಸ್ಸಿನ ತೇಜಸ್ಸನ್ನು ಪ್ರಕಟಗೊಳಿಸುವ ಮತ್ತು ಅಗ್ನಿಜ್ವಾಲೆಯಂತೆ ಪ್ರಕಾಶಮಾನವಾದ ಐದು ಜಟೆಗಳನ್ನು ಶಿರಸ್ಸಿನಲ್ಲಿ ಪಡೆದಾತನು ಪಂಚಶಿಖನೆನಿಸಿಕೊಂಡನು.

೧೮. ಜನ್ಮಾಂತರದಲ್ಲಿ ಅಪಾಂತರತಮವೆಂಬ ದೇಶದಲ್ಲಿ ತಪಸ್ಸುಮಾಡಿದುದರ ಫಲವಾಗಿ ಒಬ್ಬ ಮಹರ್ಷಿಯು ಅಪಾಂತರತಮನೆಂದು ಹೆಸರಾಂತನು.

ಸ್ವಯಂ ತಪಃ ಸಮಾಪ್ನೋತಿ ವಾಹಯೇತ್ಪ್ರಾಪಯೇತ್ಪರಾನ್ ।
ವೋಢುಂ ಸಮರ್ಥಸ್ತಪಸಿ ವೋಢುಸ್ತೇನ ಪ್ರಕೀರ್ತಿತಃ ॥ ೧೯ ॥

ತಪಸಸ್ತೇಜಸಾ ಬಾಲೋ ದೀಪ್ತಿಮಾನ್ಸತತಂ ಮುನೇ ।
ತಪಃಸು ರೋಚತೇ ಚಿತ್ತಂ ರುಚಿಸ್ತೇನ ಪ್ರಕೀರ್ತಿತಃ ॥ ೨೦ ॥

ಕೋಪಕಾಲೇ ಬಭೂವುರ್ಯೇ ಸ್ರಷ್ಟುರೇಕಾದಶಸ್ಮೃತಾಃ ।
ರೋದನಾದೇವ ರುದ್ರಾಶ್ಚ ಕೋಪಿತಾಸ್ತೇನ ಹೇತುನಾ ॥ ೨೧ ॥

ರುದ್ರೇಷ್ವೇಕತಮೋ ಬಾಲೋ ಮಹೇಶ ಇತಿ ಮೇ ಭ್ರಮಃ ।
ಭವಾನ್ಪುರಾಣತತ್ತ್ವಜ್ಞಃ ಸಂದೇಹಂ ಛೇತ್ತುಮರ್ಹಸಿ ॥ ೨೨ ॥

---

೧೯. ತಪಸ್ಸಿನ ಕುಂದುಕೊರತೆಗಳನ್ನು ಎದುರಿಸಿ ತಾನು ತಪವೆಸಗುವುದಲ್ಲದೆ, ಇತರರಿಗೂ ತಪಃಫಲವನ್ನು ಒದಗಿಸಿಕೊಡಬಲ್ಲವನು 'ವೋಢು' (ಎಂದರೆ ಹೊರಬಲ್ಲವನು) ಎನಿಸಿಕೊಂಡನು.

೨೦. ತಪೋಮಹಿಮೆಯಿಂದ ಸರ್ವದಾ 'ರುಚಿ' ಎಂದರೆ ವರ್ಚಸ್ವಿಯಾಗಿಯೂ, ಯಾವಾಗಲೂ ತಪಸ್ಸಿನಲ್ಲೇ ಅಭಿರುಚಿಯುಳ್ಳಾತನೂ, "ರುಚಿ" ಎಂಬ ಮಹರ್ಷಿಯಾದನು.

೨೧. ತನ್ನ ಪುತ್ರರು ಸೃಷ್ಟಿವಿಮುಖರಾದಾಗ ಕುಪಿತನಾದ ಬ್ರಹ್ಮನ ಲಲಾಟ (ಹಣೆ)ದೇಶದಿಂದ ಹೊರಬಂದ ಹನ್ನೊಂದು ಮಂದಿ ಪುತ್ರರು ರೋದಿಸು (ಅಳು)ತ್ತಿದ್ದುದರಿಂದ ರುದ್ರರೆನಿಸಿಕೊಂಡರು. (ಸೋರೋದೀತ್ ಯದರೋದೀತ್ತದ್ರುದ್ರಸ್ಯ ರುದ್ರತ್ವಂ) ಎಂದು ಶ್ರುತಿವಚನ.

೨೨. ಶೌನಕ:–ಮೇಲೆ ತಾವು ವಿವರಿಸಿದ ಏಕಾದಶರುದ್ರರಲ್ಲಿಯೇ ಒಬ್ಬನು ಮಹೇಶನಿರಬಹುದೆಂದು ನನಗೆ ಭ್ರಾಂತಿಯಾಗುತ್ತಿದೆ. ಪುರಾಣತತ್ತ್ವಜ್ಞರಾದ ತಾವು ದಯವಿಟ್ಟು ನನ್ನ ಸಂದೇಹವನ್ನು ಪರಿಹರಿಸಬೇಕು.

॥ ಸೌತಿರುವಾಚ ॥

ವಿಷ್ಣುಃ ಸತ್ವಗುಣಃ ಪಾತಾ ಬ್ರಹ್ಮಾ ಸ್ರಷ್ಟಾ ರಜೋಗುಣಃ ।
ತಮೋಗುಣಾಸ್ತೇ ರುದ್ರಾಶ್ಚ ದುರ್ನಿವಾರಾ ಭಯಂಕರಾಃ ॥ ೨೩ ॥

ಕಾಲಾಗ್ನಿರುದ್ರಃ ಸಂಹರ್ತಾ ತೇಷ್ವೇಕಃ ಶಂಕರಾಂಶಕಃ ।
ಶುದ್ಧಸತ್ವಸ್ವರೂಪಶ್ಚ ಶಿವಶ್ಚ ಶಿವದಃ ಸತಾಂ ॥ ೨೪ ॥

ಅನ್ಯೇ ಕೃಷ್ಣಸ್ಯ ಚ ಕಲಾಸ್ತಾವಂಶೌ ವಿಷ್ಣುಶಂಕರೌ ।
ಸಮೌ ಸತ್ವಸ್ವರೂಪೌ ದ್ವೌ ಪರಿಪೂರ್ಣತಮಸ್ಯ ಚ ॥ ೨೫ ॥

ಉಕ್ತಂ ರುದ್ರೋದ್ಭವೇ ಕಾಲೇ ಕಥಂ ವಿಸ್ಮರಿಸಿ ದ್ವಿಜ ।
ಮಾಯಯಾ ಮೋಹಿತಾಃ ಸರ್ವೇ ಮುನೀನಾಂ ಚ ಮತಿಭ್ರಮಃ ॥ ೨೬ ॥

---

೨೩. ಸೂತಪುತ್ರ :—ಸೃಷ್ಟಿಕರ್ತನಾದ ಬ್ರಹ್ಮನು ರಜೋಗುಣಸಂಪನ್ನನೂ, ರಕ್ಷಕನಾದ ವಿಷ್ಣುವು ಸತ್ವಗುಣಸಂಪನ್ನನೂ, ಭಯಂಕರರೂ ಎದುರಿಸಲಸಾಧ್ಯರೂ ಆದ ಏಕಾದಶರುದ್ರರು ತಮೋಗುಣಸಂಪನ್ನರೂ ಅಹುದು.

೨೪. ಆ ಏಕಾದಶರುದ್ರರಲ್ಲಿ ಶಂಕರನ ಅಂಶದಿಂದ ಜನಿಸಿದ ಕಾಲಾಗ್ನಿರುದ್ರನೆಂಬಾತನೇ ಜಗತ್ಸಂಹಾರಕನು. ಮಹೇಶನಾದರೋ ಸರ್ವರಿಗೂ ಮಂಗಳದಾಯಕನೂ, ಶುದ್ಧಸ್ವರೂಪನೂ ಆದವನು. ಆದುದರಿಂದ ಶಿವನನ್ನು ಏಕಾದಶರುದ್ರರಲ್ಲೊಬ್ಬನೆಂದು ತಿಳಿಯುವವರು ಮೂರ್ಖರು.

೨೫. ಪರಿಪೂರ್ಣತಮನಾದ ಕೃಷ್ಣಪರಮಾತ್ಮನ ಅಂಶದಿಂದ ವಿಷ್ಣು ಮತ್ತು ಶಂಕರರು ಜನಿಸಿ, ಸತ್ವಗುಣಸಂಪನ್ನರಾದರು. ಉಳಿದ ಬ್ರಹ್ಮಾದಿಗಳು ಪರಮಾತ್ಮನ ಒಂದು ಕಲೆ (ಹದಿನಾರನೆಯ ಒಂದು ಭಾಗ) ಮಾತ್ರ.

೨೬. ಎಲೈ ಶೌನಕನೇ! ಮಾಯೆಯು ಮುನಿಗಳನ್ನೂ ಮೋಹಗೊಳಿಸುವುದಲ್ಲವೇ ? ರುದ್ರರ ಉತ್ಪತ್ತಿಕಾಲದಲ್ಲಿ ವಿವರಿಸಿದುದೆಲ್ಲವನ್ನೂ ಆಗಲೇ ಮರೆತಿರುವೆಯಲ್ಲಾ ! ಮಾಯೆಯ ಮಹಿಮೆಯು ಅಸದಳವು. ಅದಕ್ಕೆ ಸಿಲುಕದವರಾರೂ ಇಲ್ಲ.

ಸನಕಶ್ಚ ಸನಂದಶ್ಚ ತೃತೀಯಶ್ಚ ಸನಾತನಃ ।
ಸನತ್ಕುಮಾರೋ ಭಗವಾಂಶ್ಚ ತುರ್ಯೋ ಬ್ರಹ್ಮಣಃ ಸುತಃ ॥ ೨೭ ॥

ಬ್ರಹ್ಮಾ ಸ್ರಷ್ಟುಂ ಪೂರ್ವಪುತ್ರಾನುವಾಚ ತೇ ನ ಸೇಹಿರೇ ।
ತೇನ ಪ್ರಕೋಪಿತೋ ಧಾತಾ ರುದ್ರಾಃ ಕೋಪೋದ್ಭವಾ ಮುನೇ ॥ ೨೮ ॥

ಸನಕಶ್ಚ ಸನಂದಶ್ಚ ತೌ ದ್ವಾವಾನಂದವಾಚಕೌ ।
ಆನಂದಿತೌ ಚ ಬಾಲೌ ದ್ವೌ ಭಕ್ತಿಪೂರ್ಣತಮೌ ಸದಾ ॥ ೨೯ ॥

ಸನಾತನಶ್ಚ ಶ್ರೀಕೃಷ್ಣೋ ನಿತ್ಯಃ ಪೂರ್ಣತಮಃ ಸ್ವಯಂ ।
ತದ್ಭಕ್ತಸ್ತಮಃ ಸತ್ಯಂ ತೇನ ಬಾಲಃ ಸನಾತನಃ ॥ ೩೦ ॥

ಸನತ್ತು ನಿತ್ಯವಚನಃ ಕುಮಾರಃ ಶಿಶುವಾಚಕಃ ।
ಸನತ್ಕುಮಾರಂ ತೇನೇಮಮುವಾಚ ಕಮಲೋದ್ಭವಃ ॥ ೩೧ ॥

---

೨೭ ಇರಲಿ, ಮತ್ತೊಮ್ಮೆ ಹೇಳುವೆನು. ಅವಧರಿಸು "ಸನಕ, ಸನಂದ, ಸನಾತನ, ಸನತ್ಕುಮಾರ'ರೆಂಬ ನಾಲ್ವರು ಬ್ರಹ್ಮದೇವನ ಪ್ರಪ್ರಥಮ ಪುತ್ರರು.

೨೮. ಬ್ರಹ್ಮನು ತನ್ನ ಈ ಮಕ್ಕಳನ್ನು ಕುರಿತು, ಸೃಷ್ಟಿಮಾಡಲು ಹೇಳಿದಾಗ ಇವರು ಒಪ್ಪಲಿಲ್ಲ. ಆಗ ಕುಪಿತನಾದ ಬ್ರಹ್ಮನ ಲಲಾಟದಿಂದ ಏಕಾದಶರುದ್ರರು ಜನಿಸಿದರು.

೨೯. 'ಸನಕ, ಸನಂದ' ಎಂಬೆರಡು ಶಬ್ದಗಳು ಆನಂದವೆಂಬ ಅರ್ಥವನ್ನು ಕೊಡುವುವು,–ಪರಮಾತ್ಮನಲ್ಲಿ ಭಕ್ತಿಪೂರ್ಣರಾಗಿ ಎಲ್ಲರನ್ನೂ ಆನಂದಗೊಳಿಸಿದ ಈ ಇಬ್ಬರು ಸನಕಸನಂದರಾದರು.

೩೦. ನಿತ್ಯನೂ, ಪರಿಪೂರ್ಣಸ್ವರೂಪನೂ ಆದ ಶ್ರೀಕೃಷ್ಣನೇ ಸನಾತನೆನಿಸಿಕೊಳ್ಳುವನು. ಅವನ ಭಕ್ತನೂ ಅವನಿಗೆ ಸಮನಾದುದರಿಂದ ವಿಷ್ಣುಭಕ್ತನಾದ ಮೂರನೆಯವನು ಸನಾತನಾದನು.

೩೧. 'ಸನತ್' ಎಂದರೆ ನಿತ್ಯನು. 'ಕುಮಾರ' ನೆಂದರೆ ಶಿಶು ಆದ್ದರಿಂದ ನಿತ್ಯನೂ ಶಿಶುರೂಪನೂ ಆದ ನಾಲ್ಕನೆಯವನನ್ನು ಬ್ರಹ್ಮನು ಸನತ್ಕುಮಾರನೆಂದು ಕರೆದನು.

ಬ್ರಹ್ಮಣೋ ಬಾಲಕಾನಾಂ ಚ ವ್ಯುತ್ಪತ್ತಿಃ ಕಥಿತಾ ಮುನೇ ।
ಸಾಂಪ್ರತಂ ನಾರದಾಽಖ್ಯಾನಂ ಶ್ರೂಯತಾಂ ಚ ಯಥಾಕ್ರಮಂ ॥ ೩೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಸೌತಿಶೌನಕ
ಸಂವಾದೇ ಬ್ರಹ್ಮವ್ಯುತ್ಪತ್ತಿಕಥನಂ ನಾಮ
ದ್ವಾವಿಂಶತಿತಮೋಽಧ್ಯಾಯಃ

---

೩೨. ಎಲೈ ಶೌನಕನೇ, ಬ್ರಹ್ಮಪುತ್ರರ ಹೆಸರುಗಳು ಅನ್ವರ್ಥವಾದುವೆಂಬುದನ್ನು ವಿವರಿಸಿಯಾಯಿತು. ಈಗ ನಾರದನ ಕಥೆಯನ್ನು ಮುಂದುವರಿಸುವೆನು. ಸಾವಧಾನದಿಂದ ಕೇಳು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದಲ್ಲಿ ಬ್ರಹ್ಮಪುತ್ರರ ನಾಮ
ವ್ಯುತ್ಪತ್ತಿಕಥನರೂಪವಾದ ಇಪ್ಪತ್ತೆರಡನೆಯ ಅಧ್ಯಾಯವು
ಸಮಾಪ್ತವಾದುದು.

ಇಪ್ಪತ್ತೆರಡನೆಯ ಅಧ್ಯಾಯದ ಸಾರಾಂಶವು

ಕೆಲವು ಕಲ್ಪಗಳಾದ ಮೇಲೆ ಬ್ರಹ್ಮನ (ನರದವೆಂಬ) ಕಂಠದೇಶದಿಂದ ನಾರದನು ಹುಟ್ಟಿ ಅನ್ವರ್ಥನಾಮವುಳ್ಳವನಾದನು. ಅಂತೆಯೇ, ಬ್ರಹ್ಮನ ಚೇತಸ್ಸಿನಿಂದ (ಮನಸ್ಸಿನಿಂದ) ಹುಟ್ಟಿದವನು ಪ್ರಚೇತಸನೆಂದೂ, ದಕ್ಷಿಣಪಾರ್ಶ್ವದಿಂದ ಹುಟ್ಟಿದವನು ದಕ್ಷನೆಂದೂ, ಕರ್ದಮ (ಕಾಂತಿ) ದಿಂದ ಹುಟ್ಟಿದವನು ಕರ್ದಮನೆಂದೂ, ಮರೀಚಿ (ತೇಜಸ್ಸು) ಯಿಂದ ಜನಿಸಿದವನು ಮರೀಚಿಯೆಂದೂ, ಜನ್ಮಾಂತರದಲ್ಲಿ ಕ್ರತು (ಯಾಗ) ಗಳನ್ನು ನಡೆಸಿದವನು ಕ್ರತುವೆಂದೂ, ಪ್ರಧಾನಾಂಗದಿಂದ (ಇರ) ಜನಿಸಿ ತೇಜಸ್ವಿಯಾಗಿದ್ದವನು ಅಂಗಿರಸನೆಂದೂ, ಖ್ಯಾತಿವಂತರಾದರು. ಭೃಗುವು ಅತಿತೇಜಸ್ವಿಯಾಗಿದ್ದುದರಿಂದಲೂ, ಆರುಣಿಯು (ಅರುಣ) ಕೆಂಪು ವರ್ಣದವನಾಗಿದ್ದುದರಿಂದಲೂ, ಹಂಸನು ಯೋಗಿಶ್ರೇಷ್ಠನಾಗಿದ್ದುದರಿಂದಲೂ, ವಸಿಷ್ಠನು ಬ್ರಹ್ಮನಿಗೆ ವಶ್ಯನೂ, ಶಿಷ್ಯನೂ, ಇಷ್ಟನೂ ಮತ್ತು ಪ್ರೀತಿಪಾತ್ರನೂ ಆಗಿದ್ದುದರಿಂದಲೂ, ಯತಿಯು ಪ್ರಯತ್ನಶೀಲನಾಗಿದ್ದುದರಿಂದಲೂ, ಪುಲಹನು ತಪಸ್ವಿಗಳಲ್ಲಿ ಶ್ರೇಷ್ಠನಾಗಿದ್ದುದರಿಂದಲೂ, ಪುಲಸ್ತ್ಯನು ಜನ್ಮಾಂತರದ ತಪಸ್ಸನ್ನು ಸಂಗ್ರಹಿಸಿಕೊಂಡಿದ್ದುದರಿಂದಲೂ, ಆಯಾಯ ಹೆಸರಿಗೆ ಅನ್ವರ್ಥವಾಗಿದ್ದರು. ತ್ರಿಗುಣಾತ್ಮಕಳಾದ ಪ್ರಕೃತಿಯಲ್ಲೂ, ವಿಷ್ಣುವಿನಲ್ಲೂ, ಭಕ್ತಿಯುಳ್ಳವನು ಅತ್ರಿಯಾದನು. ಶಿರಸ್ಸಿನಲ್ಲಿ ಐದು ಜಟೆಯುಳ್ಳವನು ಪಂಚಶಿಖನೆನಿಸಿಕೊಂಡನು. ಅಪಾಂತರತಮವೆಂಬ ದೇಶದಲ್ಲಿ ಹುಟ್ಟಿದವನು ಅಪಾಂತರತಮನೆನಿಸಿಕೊಂಡನು. ತಪಸ್ಸಿನ ಕಷ್ಟಗಳನ್ನು ಹೊರಲು ಶಕ್ತನಾದವನು ವೋಢುವಾದನು. ತಪಸ್ಸಿನಲ್ಲಿ ರುಚಿ (ಅಭಿಲಾಷೆ) ಯಿದ್ದವನು ರುಚಿ ಎನಿಸಿಕೊಂಡನು. ಕುಪಿತನಾದ ಬ್ರಹ್ಮನ ಲಲಾಟದಿಂದ ರೋದಿಸುತ್ತಾ (ಅಳುತ್ತಾ) ಹುಟ್ಟಿದವರು ರುದ್ರರೆನಿಸಿಕೊಂಡರು. ಇಂತು ಬ್ರಹ್ಮಪುತ್ರರ ಹೆಸರೆಲ್ಲವೂ ಅನ್ವರ್ಥವಾಯಿತು. ಮಹೇಶ್ವರನು ಏಕಾದಶರುದ್ರರಲ್ಲಿ ಒಬ್ಬನೆಂದೂ, ಅವನೇ ತಾಮಸಗುಣಪ್ರಧಾನನಾದ ಜಗತ್ಸಂಹಾರಕನೆಂದೂ ಅನೇಕರು ತಿಳಿದಿರುವರು. ಇದು ತಪ್ಪು ಏಕಾದಶರುದ್ರರಲ್ಲಿ ಒಬ್ಬನಾದ ಕಾಲಾಗ್ನಿರುದ್ರನು

ತಮೋಗುಣಪ್ರಧಾನನು. ಹರಿಹರರಿಬ್ಬರೂ ಸತ್ವಗುಣಪ್ರಧಾನರು. ಮತ್ತು ಪರಮಾತ್ಮನ ಅಂಶಜರು. ಉಳಿದ ದೇವತೆಗಳೆಲ್ಲರೂ ಪರಮಾತ್ಮನ ಕಲೆಯಿಂದ ಮಾತ್ರ ಜನಿಸಿದವರು. ಬ್ರಹ್ಮನ ಪ್ರಥಮ ಪುತ್ರರಲ್ಲಿ ಎಲ್ಲರ ಆನಂದಕ್ಕೂ ಕಾರಣರಾದ ಇಬ್ಬರು ಸನಕಸನಂದರೆಂದೂ, ಮೂರನೆಯವನು ಕೃಷ್ಣಭಕ್ತನೂ, ಕೃಷ್ಣಸದೃಶನೂ ಆಗಿದ್ದುದರಿಂದ ಸನಾತನನೆಂದೂ, ನಾಲ್ಕನೆಯವನು ನಿತ್ಯನೂ, ಶಿಶುರೂಪನೂ ಆದ್ದರಿಂದ ಸನತ್ಕುಮಾರನೆಂತಲೂ ಪ್ರಸಿದ್ಧಿಗೊಂಡರು. ಅಂತೂ ಬ್ರಹ್ಮಪುತ್ರರಿಗೆಲ್ಲರಿಗೂ ಆಯಾಯ ಹೆಸರು ಅನ್ವರ್ಥವೆನಿಸಿತು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ತ್ರಯೋವಿಂಶತಿತಮೋಽಧ್ಯಾಯಃ ॥

॥ ಸೌತಿರುವಾಚ ॥

ಸ್ರಷ್ಟ್ವಾ ಸೃಷ್ಟಿವಿಧಾನೇನ ನಿಯೋಜ್ಯ ಸರ್ವಬಾಲಕಾನ್ ।
ನಾರದಂ ಪ್ರೇರಯಾಮಾಸ ಸೃಷ್ಟಿಂ ಕರ್ತುಂ ಚ ಶೌನಕ ॥ ೧ ॥

ಹಿತಂ ಸತ್ಯಂ ವೇದಸಾರಂ ಪರಿಣಾಮಸುಖಾವಹಂ ।
ಉವಾಚ ನಾರದಂ ಬ್ರಹ್ಮಾ ವೇದವೇದಾಂಗಪಾರಗಂ ॥ ೨ ॥

ಇಪ್ಪತ್ತಮೂರನೆಯ ಅಧ್ಯಾಯವು

೧. ಸೂತಪುತ್ರ :—ಚತುರ್ಮುಖಬ್ರಹ್ಮನು ತನ್ನ ಪುತ್ರರೆಲ್ಲರಿಗೂ ಸೃಷ್ಟಿ ಮಾಡಲು ಹೇಳಿ ಅನಂತರ ನಾರದನನ್ನು ಮತ್ತೆ ಸೃಷ್ಟಿಗೆ ಪ್ರೇರಿಸಿದನು.

೨. ಬ್ರಹ್ಮದೇವನು ವೇದವೇದಾಂಗಪಾರಂಗತನಾದ ನಾರದನನ್ನು ಕುರಿತು ಆಡಿದ ಮಾತು, ಪ್ರಿಯವೂ, ಸತ್ಯವೂ, ವೇದಾಸಾರವೂ, ಅಂತ್ಯದಲ್ಲಿ ಸುಖಕರವೂ ಆಗಿದ್ದಿತು.

॥ ಬ್ರಹ್ಮೋವಾಚ ॥

ಏಹಿ ವತ್ಸ ಕುಲಶ್ರೇಷ್ಠ ನಾರದ ಪ್ರಾಣವಲ್ಲಭ ।
ಜ್ಞಾನದೀಪಶಿಖಾಜ್ಞಾನತಿಮಿರಕ್ಷಯಕಾರಕ ॥ ೩ ॥

ಸರ್ವೇಷಾಮಪಿ ವಂದ್ಯಾನಾಂ ಜನಕಃ ಪರಮೋ ಗುರುಃ ।
ವಿದ್ಯಾದಾತಾ ಮಂತ್ರದಾತಾ ದ್ವೌ ಸಮೌ ಚ ಪಿತುಃ ಪರೌ ॥ ೪ ॥

ತವಾಹಂ ಜನಕಃ ಪುತ್ರ ವಿದ್ಯಾದಾತಾ ಚ ಪಾಲಕಃ ।
ಮಮಾಜ್ಞಯಾ ಚ ಮತ್ಪ್ರೀತ್ಯಾ ಕುರು ದಾರಪರಿಗ್ರಹಂ ॥ ೫ ॥

ಸ ಚ ಶಿಷ್ಯಃ ಸೋಽಪಿ ಪುತ್ರೋ ಯಶ್ಚಾಜ್ಞಾಂ ಪಾಲಯೇದ್ಗುರೋಃ ।
ನ ಕ್ಷೇಮಂ ತಸ್ಯ ಮೂಢಸ್ಯ ಯೋ ಗುರೋರವಚಸ್ಕರಃ ॥ ೬ ॥

---

೩. ಬ್ರಹ್ಮ:—ನನಗೆ ಅತ್ಯಂತ ಪ್ರೀತಿಪಾತ್ರನೂ, ನನ್ನ ವಂಶೋದ್ಧಾರಕನೂ, ದಿವ್ಯಜ್ಞಾನವೆಂಬ ದೀಪದ ಬೆಳಕಿನಿಂದ ಅಜ್ಞಾನವೆಂಬ ಕತ್ತಲೆಯನ್ನು ನೀಗುವವನೂ ಆದ ಎಲೈ ನಾರದನೇ! ಇಲ್ಲಿ ಬಾ.

೪. ಮಾನ್ಯರೊಳಗೆ ಹೆತ್ತತಂದೆಯು ಅತಿಮಾನ್ಯನು. ವಿದ್ಯಾದಾತನೂ, ಮಂತ್ರೋಪದೇಶಕನೂ, ತಂದೆಗೆ ಎಣೆಯಾದವರು.

೫. ನಾನು ನಿನಗೆ ಜನ್ಮದಾತನೂ, ವಿದ್ಯಾದಾತನೂ, ಮತ್ತು ಪಾಲಕನೂ, ಆಗಿದ್ದೇನೆ. ಆದುದರಿಂದ ನನ್ನ ಪ್ರೀತಿಗಾಗಿ, ನನ್ನ ಆಜ್ಞೆಯಂತೆ ನೀನು ಗೃಹಸ್ಥಾಶ್ರಮವನ್ನು ಸ್ವೀಕರಿಸು.

೬. ಗುರುವಿನ ಆಜ್ಞೆಯನ್ನು ಪಾಲಿಸುವವನೇ ನಿಜವಾದ ಶಿಷ್ಯನು ಮತ್ತು ಪುತ್ರನು. ಗುರುವಚನವನ್ನು ಉಲ್ಲಂಘಿಸುವ ಮೂಢನಿಗೆ ಎಂದೆಂದಿಗೂ ಕ್ಷೇಮವಿಲ್ಲ.

ಸ ಪಂಡಿತಃ ಸ ಚ ಜ್ಞಾನೀ ಸ ಕ್ಷೇಮೀ ಸ ಚ ಪುಣ್ಯವಾನ್ ।
ಗುರೋರ್ವಚಸ್ಕರೋ ಯೋ ಹಿ ಕ್ಷೇಮಂ ತಸ್ಯ ಪದೇ ಪದೇ ॥ ೭ ॥

ಸರ್ವೇಷಾಮಾಶ್ರಮಾಣಾಂ ಚ ಪ್ರಧಾನಃ ಪುಣ್ಯವಾನ್ಗೃಹೀ ।
ಸ್ತ್ರೀಪುತ್ರಪೌತ್ರಯುಕ್ತಂ ಚ ಮಂದಿರಂ ತಪಸಃ ಫಲಂ ॥ ೮ ॥

ಪಿತರಃ ಪರ್ವಕಾಲೇ ಚ ತಿಥಿಕಾಲೇ ಚ ದೇವತಾಃ ।
ಸರ್ವೇ ಗೃಹಸ್ಥಮಾಯಾಂತಿ ನಿಪಾನಮಿವ ಧೇನವಃ ॥ ೯ ॥

ನಿತ್ಯಂ ನೈಮಿತ್ತಿಕಂ ಕಾಮ್ಯಂ ಕುರ್ವಂತಿ ಗೃಹಿಣಃ ಸದಾ ।
ಇಹ ಏತತ್ಸುಖಂ ಪುಣ್ಯಂ ಸ್ವರ್ಗಭೋಗಂ ಪರತ್ರ ಚ ॥ ೧೦ ॥

---

೭. ಗುರುವಚನವನ್ನು ಎಳ್ಳಷ್ಟೂ ಮೀರದವನೇ ಪಂಡಿತನು, ಜ್ಞಾನಿಯು, ಕುಶಲಿಯು, ಮತ್ತು ಪುಣ್ಯವಂತನು. ಅವನಿಗೆ ಎಲ್ಲ ಕಾರ್ಯದಲ್ಲಿಯೂ ಜಯವು ಲಭಿಸುವುದು.

೮ ಎಲ್ಲ ಆಶ್ರಮಗಳಿಗಿಂತಲೂ ಗೃಹಸ್ಥಾಶ್ರಮಿಯೇ ಪ್ರಧಾನನೂ, ಪುಣ್ಯವಂತನೂ ಆಹುದು. ಪತ್ನೀಪುತ್ರಪೌತ್ರಾದಿ ಸಂಪದ್ಯುಕ್ತವಾದ ಮಂದಿರವನ್ನು ತಪಸ್ಸಿನ ಫಲವೆಂದು ಭಾವಿಸಬೇಕು.

೯. ಅಮಾವಾಸ್ಯಾ ಮುಂತಾದ ಪರ್ವಕಾಲಗಳಲ್ಲಿ ಪಿತೃದೇವತೆಗಳೂ, ಪುಣ್ಯ ತಿಥಿಗಳಲ್ಲಿ ದೇವತೆಗಳೂ, ಬಾಯಾರಿದ ಹಸುಗಳು ನೀರಿನ ತೊಟ್ಟಿಗೆ ಹೋಗುವಂತೆ ಸದ್ಗೃಹಸ್ಥನ ಮನೆಗೆ ಬರುವರು.

೧೦. ಸಂಸಾರಿಗಳು ಯಾವಾಗಲೂ, ನಿತ್ಯ, ನೈಮಿತ್ತಿಕ ಮತ್ತು ಕಾಮ್ಯಕರ್ಮಗಳನ್ನೂ ಮಾಡಿ, ಇಹಲೋಕದಲ್ಲಿ ಸುಖಾನುಭವಿಗಳಾಗಿ, ಪರಲೋಕದಲ್ಲಿ ಪುಣ್ಯಫಲವಾದ ಸ್ವರ್ಗಸುಖವನ್ನು ಹೊಂದುವರು.

ಜೀವನ್ಮುಕ್ತೋ ಗೃಹಸ್ಥಶ್ಚ ಸ್ವಧರ್ಮಪರಿಪಾಲಕಃ।
ಯಶಸ್ವೀ ಪುಣ್ಯವಾಂಶ್ಚೈವ ಕೀರ್ತಿಮಾನ್ಧನವಾನ್ಸುಖೀ ॥ ೧೧ ॥

ಯಶಸ್ವೀ ಕೀರ್ತಿಮಾನ್ಯೋ ಹಿ ಮೃತೋ ಜೀವತಿ ಸಂತತಂ।
ಯಶಃ ಕೀರ್ತಿವಿಹೀನೋ ಹಿ ಜೀವನ್ನಪಿ ಮೃತೋ ಹಿ ಸಃ ॥ ೧೨ ॥

ಬ್ರಹ್ಮಣೋ ವಚನಂ ಶ್ರುತ್ವಾ ನಾರದೋ ಮುನಿಸತ್ತಮಃ।
ಉವಾಚ ವಿನಯಂ ಭೀತಃ ಶುಷ್ಕಕಂಠೌಷ್ಠತಾಲುಕಃ ॥ ೧೩ ॥

॥ ನಾರದ ಉವಾಚ ॥

ಏಕದಾ ವಾಗ್ವಿರೋಧೇನ ಚೋಭಯೋಸ್ತಾತಪುತ್ರಯೋಃ।
ಹಾನಿರ್ಬಭೂವ ದೈವೇನ ಮಹತೀವಾಯಶಸ್ಕರೀ ॥ ೧೪ ॥

---

೧೧. ಸ್ವಧರ್ಮಾಚರಣೆಯಲ್ಲಿ ನಿರತನಾದ ಗೃಹಸ್ಥನು ಧನವಂತನೂ, ಕೀರ್ತಿವಂತನೂ, ಮತ್ತು ಪುಣ್ಯವಂತನೂ ಆಗಿ ಸುಖವನ್ನು ಅನುಭವಿಸಿ ಜೀವನ್ಮುಕ್ತನಾಗುವನು.

೧೨. ಕೀರ್ತಿವಂತನು ಮೃತನಾದರೂ ಯಶಃಶರೀರದಿಂದ ಯಾವಾಗಲೂ ಜೀವಿಸಿರುವನು. ಕೀರ್ತಿಗಳಿಸದವನು ಜೀವಿಸಿದ್ದರೂ ಮೃತಪ್ರಾಯನೇ.

೧೩. ಬ್ರಹ್ಮನ ಮಾತನ್ನು ಕೇಳಿದ ಮುನಿಶ್ರೇಷ್ಠನಾದ ನಾರದನು ಮತ್ತೆಲ್ಲಿ ಶಾಪಬರುವುದೋ ಎಂಬ ಭಯದಿಂದ ಒಣಗಿಹೋದ ಗಂಟಲು ಮತ್ತು ತುಟಿಗಳುಳ್ಳವನಾಗಿ ಬಹಳ ವಿನಯದಿಂದ ಪ್ರತ್ಯುತ್ತರ ಕೊಟ್ಟನು.

೧೪. ನಾರದ:—ತಂದೆ ಮಕ್ಕಳಾದ ನಮ್ಮಿಬ್ಬರಿಗೆ ಒಮ್ಮೆ ವಿರೋಧವು ಒದಗಿ ಅದರ ಪರಿಣಾಮವಾಗಿ ಇಬ್ಬರಿಗೂ ಮಹದಪಕೀರ್ತಿಯು ಬಂದುದರಿಂದ ಹಾನಿಯುಂಟಾಯಿತು.

ಮಯಾ ಪ್ರಾಪ್ತಂ ಚ ತ್ವಚ್ಛಾಪಾದ್ಗಾಂಧರ್ವಂ ಶೌದ್ರಮೇವ ಚ ।
ಜನ್ಮ ಕರ್ಮ ಚ ಮಚ್ಛಾಪಾತ್ತ್ವಮಪೂಜ್ಯೋ ಭವೇಃಭವಃ ॥ ೧೫ ॥

ಬಭೂವ ಶಾಪೋ ಮುಕ್ತೋ ಮೇ ಕಾಲೇ ತೇ ಭವಿತಾ ವಿಧೇ ।
ದೋಷಾಯ ಕಲ್ಪತೇ ಶಶ್ವದ್ವಿರೋಧೋ ನ ಗುಣಾಯ ಚ ॥ ೧೬ ॥

ಸ ಪಿತಾ ಸ ಗುರುರ್ಬಂಧುಃ ಸ ಪುತ್ರಃ ಸ ಸದೀಶ್ವರಃ ।
ಯಃ ಶ್ರೀಕೃಷ್ಣಪಾದಪದ್ಮೇ ದೃಢಾಂ ಭಕ್ತಿಂ ಚ ಕಾರಯೇತ್ ॥ ೧೭ ॥

ಅಸದ್ವರ್ತ್ಮನಿ ಚಾಜ್ಞಾನಾದ್ಗಚ್ಛಂತಿ ಯದಿ ಬಾಲಕಾಃ ।
ನಿವರ್ತಯತಿ ತಾನೇವ ಸ ಪಿತಾ ಕರುಣಾನಿಧಿಃ ॥ ೧೮ ॥

ಕಾರಯಿತ್ವಾ ಕೃಷ್ಣಪಾದೇ ಭಕ್ತಿತ್ಯಾಗಂ ಚ ಯಃ ಪಿತಾ ।
ಅನ್ಯಸ್ಮಿನ್ ವಿಷಯೇ ಪುತ್ರಂ ಸ ಕಿಂ ಹಂತೆ ಪ್ರವರ್ತಯೇತ್ ॥ ೧೯ ॥

---

೧೫. ನಿನ್ನ ಶಾಪದಿಂದ ನನಗೆ ಗಂಧರ್ವ ಮತ್ತು ಶೂದ್ರಯೋನಿಯಲ್ಲಿ ಜನ್ಮವೂ, ಅದಕ್ಕುಚಿತವಾದ ಕರ್ಮವೂ ಲಭಿಸಿತು. ನನ್ನ ಶಾಪದಿಂದ ನೀನೂ ಕೂಡ ಪ್ರಪಂಚದಲ್ಲಿ ಪೂಜಾರಹಿತನಾದೆ.

೧೬. ನನ್ನ ಶಾಪವಂತೂ ಬಿಡುಗಡೆಯಾಯಿತು. ನಿನ್ನ ಶಾಪವಿಮೋಚನೆಯೂ ಆಗುವುದರಲ್ಲಿದೆ. ಪದೆ ಪದೆ ವಿರೋಧಮಾಡಿಕೊಳ್ಳುವುದರಿಂದ ಕೆಡಕೇ ಹೊರತು ಯಾರಿಗೂ ಏನೂ ಪ್ರಯೋಜನವಿಲ್ಲ.

೧೭. ನಾನು ಇಷ್ಟುಮಾತ್ರ ಹೇಳಬಲ್ಲೆ. ಯಾರು ತನ್ನ ಮಕ್ಕಳಿಗೆ ಶ್ರೀಕೃಷ್ಣನ ಪಾದಾರವಿಂದದಲ್ಲಿ ದೃಢಭಕ್ತಿಯು ಜನಿಸುವಂತೆ ಮಾಡುವರೋ ಅವರೇ ನಿಜವಾದ ತಂದೆ, ಗುರು, ಬಂಧು ಮತ್ತು ಯಜಮಾನನೆನಿಸಿಕೊಳ್ಳುವರು.

೧೮. ಬಾಲಕರು ಅಜ್ಞಾನದಿಂದ ಉನ್ಮಾರ್ಗಪ್ರವೃತ್ತರಾದರೆ ಅವರನ್ನು ದುರ್ಮಾರ್ಗದಿಂದ ತಪ್ಪಿಸಿ ಸನ್ಮಾರ್ಗಕ್ಕೆ ತರುವವನೇ ದಯಾಮಯನಾದ ತಂದೆಯೆನಿಸಿ ಕೊಳ್ಳುವನು.

೧೯. ಶ್ರೀಕೃಷ್ಣನ ಪಾದಾರವಿಂದದಲ್ಲಿ ಭಕ್ತಿಯಿಟ್ಟುಕೊಂಡಿರುವುದನ್ನು ತಪ್ಪಿಸಿ ವಿಷಯ ಸುಖಗಳ ಕಡೆಗೆ ಮನಸ್ಸು ಒಲಿಯುವಂತೆ ಮಾಡುವವನು ಎಂತಹ ತಂದೆ !

ದಾರಗ್ರಹೋ ಹಿ ದುಃಖಾಯ ಕೇವಲಂ ನ ಸುಖಾಯ ಚ ।
ತಪಃಸ್ವರ್ಗಭಕ್ತಿಮುಕ್ತಿಕರ್ಮಣಾಂ ವ್ಯವಧಾಯಕಃ ॥ ೨೦ ॥

ಯೋಷಿತಸ್ತ್ರಿವಿಧಾ ಬ್ರಹ್ಮನ್ಗೃಹಿಣಾಂ ಮೂಢಚೇತಸಾಂ ।
ಸಾಧ್ವೀ ಭೋಗ್ಯಾ ಚ ಕುಲಟಾಸ್ತಾಃ ಸರ್ವಾಃ ಸ್ವಾರ್ಥತತ್ಪರಾಃ ॥ ೨೧ ॥

ಪರಲೋಕಭಿಯಾ ಸಾಧ್ವೀ ತಥೇಹ ಯಶಸಾತ್ಮನಃ ।
ಕಾಮಸ್ನೇಹಾಚ್ಚ ಕುರುತೇ ಭರ್ತುಃ ಸೇವಾಂ ಚ ಸಂತತಂ ॥ ೨೨ ॥

ಭೋಗ್ಯಾ ಭೋಗಾರ್ಥಿನೀ ಶಶ್ವತ್ಕಾಮಸ್ನೇಹೇನ ಕೇವಲಂ ।
ಕುರುತೇ ಕಾಂತಸೇವಾಂ ಚ ನ ಚ ಭೋಗಾದೃತೇ ಕ್ಷಣಂ ॥ ೨೩ ॥

ವಸ್ತ್ರಾಲಂಕಾರಸಂಭೋಗಸುಸ್ನಿಗ್ಧಾಹಾರಮುತ್ತಮಂ ।
ಯಾವತ್ಪ್ರಾಪ್ನೋತಿ ಸಾ ಭೋಗ್ಯಾ ತಾವಚ್ಚ ವಶಗಾ ಪ್ರಿಯಾ ॥ ೨೪ ॥

---

೨೦. ತಪಸ್ಸು, ಭಕ್ತಿ, ಸ್ವರ್ಗ, ಮುಕ್ತಿ ಮುಂತಾದುವುಗಳಿಗೆ ಪ್ರತಿಬಂಧಕವಾದ ವಿವಾಹವೆಂಬುದು ಕೇವಲ ದುಃಖದಾಯಕವೇ ಹೊರತು, ಎಂದೆಂದಿಗೂ ಸುಖದಾಯಕವಲ್ಲ.

೨೧. ಎಲೈ, ಬ್ರಹ್ಮದೇವನೇ, ಮೂಢಜನರು ಮಾತ್ರ ಸಂಸಾರಿಗಳಾಗುವರು. ಅವರ ಗೃಹಿಣಿಯರಾಗುವ ಸ್ತ್ರೀಯರಲ್ಲಿ ಸಾಧ್ವೀ, ಭೋಗ್ಯಾ ಮತ್ತು ಕುಲಟಾ ಎಂದು ಮೂರು ವಿಧವಾಗಿರುವರು. ಮೂವರೂ ಸ್ವಾರ್ಥಪರರೇ.

೨೨. ಅವರಲ್ಲಿ ಸಾಧ್ವಿಯಾದವಳು–ಪರಲೋಕದಲ್ಲಿ ತನಗೆ ಶಿಕ್ಷೆಯಾಗುವುದೆಂಬ ಭಯದಿಂದಲೂ, ಪತಿಸೇವೆಯಿಂದ ಇಹಲೋಕದಲ್ಲಿ ಕೀರ್ತಿದೊರೆಯುವುದೆಂಬ ಆಶೆಯಿಂದಲೂ ಮತ್ತು ರತ್ಯಾಸಕ್ತಿಯಿಂದಲೂ ಪತಿಸೇವೆಯನ್ನು ಮಾಡುವಳು.

೨೩. ಯಾರು ಇಂದ್ರಿಯಸುಖಗಳನ್ನೂ, ಕಾಮಸುಖವನ್ನೂ ಬಯಸಿ ಕೇವಲ ಸುಖಪ್ರಾಪ್ತಿಗಾಗಿ ಪತಿಸೇವೆ ಮಾಡುವಳೋ ಅವಳು 'ಭೋಗ್ಯಾ' ಎನಿಸಿಕೊಳ್ಳುವಳು.

೨೪. ಉತ್ತಮವಾದ ವಸ್ತ್ರಾಲಂಕಾರಗಳೂ, ರುಚಿಸುವ ಆಹಾರಗಳೂ, ಇಷ್ಟಸಂಭೋಗವೂ ದೊರೆಯುವವರೆಗೆ, ಭೋಗ್ಯಳು ಪತಿಯನ್ನು ಅನುವರ್ತಿಸುವಳು.

ಕುಲಾಂಗಾರಸಮಾ ನಾರೀ ಕುಲಟಾ ಕುಲನಾಶಿನೀ ।
ಕಪಟಾತ್ಕುರುತೇ ಸೇವಾಂ ಸ್ವಾಮಿನೋ ನ ಚ ಭಕ್ತಿತಃ ॥ ೨೫ ॥

ಸದಾ ಪುಂಯೋಗಮಾಶಂಸುರ್ಮನಸಾ ಮದನಾತುರಾ ।
ಆಹಾರಾದಧಿಕಂ ಜಾರಂ ಪ್ರಾರ್ಥಯಂತೀ ನವಂ ನವಂ ॥ ೨೬ ॥

ಜಾರಾರ್ಥೇ ಸ್ವಪತಿಂ ತಾತ ಹಂತುಮಿಚ್ಛತಿ ಪುಂಶ್ಚಲೀ ।
ತಸ್ಯಾಂ ಯೋ ವಿಶ್ವಸೇನ್ಮೂಢೋ ಜೀವನಂ ತಸ್ಯ ನಿಷ್ಫಲಂ ॥ ೨೭ ॥

ಕಥಿತಾಃ ಯೋಷಿತಃ ಸರ್ವಾ ಉತ್ತಮಾಧಮಮಧ್ಯಮಾಃ ।
ಸ್ವಾತ್ಮಾರಾಮಾ ವಿಜಾನಂತಿ ಮನಸ್ತಾಸಾಂ ನ ಪಂಡಿತಾಃ ॥ ೨೮ ॥

---

೨೫. ತನ್ನ ಉತ್ಪತ್ತಿಗೆ ಕಾರಣವಾದ ಕಾಷ್ಠವನ್ನೇ ನಾಶಗೊಳಿಸುವ ಅಗ್ನಿಯಂತೆ ತಾನು ಹುಟ್ಟಿದ ಮತ್ತು ಸೇರಿದ ಎರಡು ವಂಶಗಳಿಗೂ ಅಕೀರ್ತಿ ತರುವ ಹೆಂಗಸು ಕುಲಟೆಯೆನಿಸುವಳು. ಆಕೆಯು ಕಪಟದಿಂದ ಪತಿಸೇವೆ ಮಾಡುವಳೇ ಹೊರತು ಭಕ್ತಿಯಿಂದಲ್ಲ.

೨೬–೨೭. ಕುಲಟೆಯು ಯಾವಾಗಲೂ ಪುರುಷರೊಡಗೂಡಲು ಕಾಮಾತುರಳಾಗಿ ಅನ್ನಾಹಾರಗಳಿಗಿಂತಲೂ ಹೊಸ ಹೊಸ ಜಾರರೊಡಗೂಡಲು ಹೆಚ್ಚು ಬಯಸುವಳು. ಕುಲಟೆಯು ಜಾರನಿಗಾಗಿ ತನ್ನ ಪತಿಯನ್ನು ನಾಶಗೊಳಿಸುವುದಕ್ಕೂ ಹಿಂದೆಗೆಯುವಳಲ್ಲ. ಅವಳನ್ನು ನಂಬಿಕೊಂಡಿರುವ ಮೂಢಮನುಜನ ಜೀವನವೇ ನಿಷ್ಫಲವಾಗುವುದು.

೨೮. ಸಾಧ್ವಿ, ಭೋಗ್ಯಾ ಮತ್ತು ಕುಲಟೆಯರು ಕ್ರಮವಾಗಿ ಉತ್ತಮ, ಮಧ್ಯಮ, ಅಧಮರೆಂದು ಸಿದ್ಧವಾಯಿತು. ಸ್ತ್ರೀಯರ ಮನೋಭಿಪ್ರಾಯಗಳನ್ನು ಆತ್ಮಜ್ಞಾನವುಳ್ಳ ಯೋಗಿಗಳು ತಿಳಿಯಬಲ್ಲರೇ ಹೊರತು ಪಂಡಿತ ಸಾಮಾನ್ಯರು ತಿಳಿಯಲಾರರು.

ಹೃದಯಂ ಕ್ಷುರಧಾರಾಭಂ ಶರತ್ಪದ್ಮೋತ್ಸವಂ ಮುಖಂ ।
ಸುಧಾಸಮಂ ಸುಮಧುರಂ ವಚನಂ ಸ್ವಾರ್ಥಸಿದ್ಧಯೇ ॥ ೨೯ ॥

ಪ್ರಕೋಪೇ ವಿಷತುಲ್ಯಂ ಚ ವಿಶ್ವಾಸೇ ಸರ್ವನಾಶನಂ ।
ದುರ್ಜ್ಞೇಯಂ ತದಭಿಪ್ರಾಯಂ ನಿಗೂಢಂ ಕರ್ಮಕೇವಲಂ ॥ ೩೦ ॥

ಸದಾ ತಾಸಾಮವಿನಯಃ ಪ್ರಬಲಂ ಸಾಹಸಂ ಪರಂ ।
ದೋಷೋತ್ಕರ್ಷಃ ಫಲೋತ್ಕರ್ಷಃ ಶಶ್ವನ್ಮಾಯಾ ಪುರತ್ಯಯಾ ॥ ೩೧ ॥

ಪುಂಸಶ್ಚಾಷ್ಟಗುಣಃ ಕಾಮಃ ಶಶ್ವತ್ಕಾಮೋ ಜಗದ್ಗುರೋ ।
ಆಹಾರೋ ದ್ವಿಗುಣೋ ನಿತ್ಯಂ ನೈಷ್ಠುರ್ಯಂ ಚ ಚತುರ್ಗುಣಂ ॥ ೩೨ ॥

ಕೋಪಃ ಪುಂಸಃ ಷಡ್ಗುಣಶ್ಚ ವ್ಯವಸಾಯಶ್ಚ ನಿಶ್ಚಿತಂ ।
ಯತ್ರಮೇದೋಷನಿವಹಾಃ ಕಾಸ್ಥಾ ತತ್ರ ಪಿತಾಮಹ ॥ ೩೩ ॥

೨೯–೩೦. ಸ್ವಾರ್ಥಸಿದ್ಧಿಯನ್ನು ಬಯಸುವ ಹೆಂಗಸರ ಮುಖವು ಶರದೃತುವಿನ ತಾವರೆಯಂತೆ ಪ್ರಸನ್ನವಾಗಿಯೂ, ಮಾತು ಅಮೃತದಂತೆ ಮಧುರವಾಗಿಯೂ, ಇದ್ದರೂ, ಹೃದಯವು ಮಾತ್ರ ಕತ್ತಿಯ ಅಲುಗಿನಂತೆ ಕಠಿಣವಾಗಿಯೇ ಇರುವುದು. ಅಂಥ ಸ್ತ್ರೀಯರು ಕುಪಿತರಾದರೆ ವಿಷಸದೃಶರಾಗುವರು. ಅವರ ವಿಶ್ವಾಸವೂ ನಾಶಕ್ಕೆ ಕಾರಣವಾದುದು. ಅವರ ಕಾರ್ಯಗಳೆಲ್ಲ ಗೂಢವಾದುದರಿಂದ ಅವರ ಅಭಿಪ್ರಾಯವನ್ನು ತಿಳಿಯುವುದು ಅಸಾಧ್ಯ.

೩೧. ಯಾವಾಗಲೂ ಅವರು ಅವಿಧೇಯರಾಗಿರುವುದಲ್ಲದೆ ಪುರುಷರಿಗಿಂತಲೂ ಪ್ರಬಲವಾದ ಸಾಹಸಮಾಡುವರು. ಅವರ ದುರ್ಗುಣಗಳನ್ನೂ, ಕಪಟ ದೋಷಗಳನ್ನೂ ಹೇಳಲಳವಲ್ಲ.

೩೨–೩೩. ಎಲೈ, ಜಗನ್ನಾಥನೇ ಪುರುಷರಿಗಿಂತ ಎರಡರಷ್ಟು ಆಹಾರಾಭಿಲಾಷೆಯೂ, ನಾಲ್ಕರಷ್ಟು ನಿಷ್ಠುರತೆಯೂ, ಆರರಷ್ಟು ಕೋಪಸಾಹಸಗಳೂ, ಎಂಟರಷ್ಟು ಕಾಮಾತುರತೆಯೂ ಉಳ್ಳ, ದುರ್ಗುಣಗಳಿಗೆ ಗಣಿಯಾಗಿರುವ ಸ್ತ್ರೀಸಾಮಾನ್ಯರಲ್ಲಿ ಪ್ರೀತಿಯಿಡುವುದು ಉಚಿತವೇ ?

ಕಾ ಕ್ರೀಡಾ ಕಿಂ ಸುಖಂ ಪುಂಸೋ ವಿಣ್ಮೂತ್ರಮಲವೇಶ್ಮನಿ ।
ತೇಜಃ ಪ್ರಣಷ್ಟಂ ಸಂಭೋಗೇ ದಿವಾಲಪೇ ಯಶಃ ಕ್ಷಯಃ ॥ ೩೪ ॥

ಧನಕ್ಷಯೋಽತಿಪ್ರೀತೌ ಚಾತ್ಯಾಸಕ್ತೌ ಚ ವಪುಃ ಕ್ಷಯಃ ।
ಸಾಹಿತ್ಯೇ ಪೌರುಷಂ ನಷ್ಟಂ ಕಲಹೇ ಮಾನನಾಶನಂ ॥
ಸರ್ವನಾಶಶ್ಚ ವಿಶ್ವಾಸೇ ಬ್ರಹ್ಮನ್ನಾರೀಷು ಕಿಂ ಸುಖಂ ॥ ೩೫ ॥

ಯಾವದ್ಧನೀ ಚ ತೇಜಸ್ವೀ ಸಶ್ರೀಕೋ ಯೋಗ್ಯತಾಪರಃ ।
ಪುಮಾನ್ನಾರೀಂ ವಶೀಕರ್ತುಂ ಸಮರ್ಥಸ್ತಾವದೇವ ಹಿ ॥ ೩೬ ॥

ರೋಗಿಣಂ ನಿರ್ಧನಂ ವೃದ್ಧಂ ಯೋಷಿದ್ವೈ ಪ್ರೇಕ್ಷತೇಽಪ್ರಿಯಂ ।
ಲೋಕಾಚಾರಭಯಾತ್ತಸ್ಮೈ ದದಾತ್ಯಾಹಾರಮಲ್ಪಕಂ ॥ ೩೭ ॥

೩೪–೩೫. ಮಲಮೂತ್ರಗಳಿಗೆ ಮನೆಯಾಗಿರುವ ಸ್ತ್ರೀಶರೀರದಲ್ಲಿ ಸುಖವನ್ನು ಬಯಸಿ ಕ್ರೀಡಿಸುವುದು ಭ್ರಾಂತಿಯಲ್ಲವೇ? ಅವರೊಡನೆ ಸಂಭೋಗಿಸಿದರೆ ವೀರ್ಯನಾಶವೂ, ಹಗಲು ಮಾತನಾಡಿದರೆ ಕೀರ್ತಿಕ್ಷಯವೂ, ಅವರಲ್ಲಿ ಅತಿಪ್ರೇಮದಿಂದ ದ್ರವ್ಯನಾಶವೂ, ಅತ್ಯಾಸಕ್ತಿಯಿಂದ ಶರೀರಕ್ಷಯವೂ, ಸ್ತ್ರೀಯರ ಗುಂಪಿನಲ್ಲಿ ಸೇರಿದರೆ ಪೌರುಷನಾಶವೂ, ಕಲಹಮಾಡಿದರೆ ಮಾನಹಾನಿಯೂ, ನಂಬಿದರೆ ಸರ್ವನಾಶವೂ ಸಂಭವಿಸುವಾಗ ಸ್ತ್ರೀಯರಿಂದ ಸುಖವನ್ನು ಬಯಸುವುದು ಮೂಢತನವಲ್ಲದೆ ಮತ್ತೇನು?

೩೬. ಪುರುಷನು ಹಣವಂತನೂ, ತೇಜೋವಂತನೂ, ಸಂಪದ್ಯುಕ್ತನೂ, ಮತ್ತು ಗೌರವಾರ್ಹನೂ ಆಗಿರುವವರೆಗೆ ಹೆಂಗಸನ್ನು ತನ್ನ ವಶಪಡಿಸಿಕೊಳ್ಳಲು ಶಕ್ತನಾಗುವನು.

೩೭. ಸರ್ವದಾ ರೋಗಿಯೂ, ದರಿದ್ರನೂ, ವೃದ್ಧನೂ ಆದ ಪತಿಯನ್ನು ಹೆಂಗಸು ಪ್ರೀತಿಸುವುದಿಲ್ಲ. ಜನಗಳು ಏನೆಂದಾರೋ ಎಂಬ ಭಯದಿಂದ ಅವನಿಗೆ ಅಲ್ಪಸ್ವಲ್ಪ ಆಹಾರವನ್ನು ಮಾತ್ರ ಕೊಡುವಳು.

ಇತ್ಯೇವಂ ಕಥಿತಂ ಸರ್ವಂ ಬ್ರಹ್ಮನ್ನಾತ್ಮಾಗಮೋ ಯಥಾ ।
ಸರ್ವಂ ಜಾನಾಸಿ ಸರ್ವಜ್ಞ ಸ್ವಾತ್ಮಾರಾಮೇಽಶ್ವರೋ ಭವಾನ್ ॥ ೩೮ ॥

ಅನುಗ್ರಹಂ ಕುರು ವಿಭೋ ವಿದಾಯಂ ದೇಹಿ ಸಾಂಪ್ರತಂ ।
ಕೃಷ್ಣಭಕ್ತಿಂ ಪ್ರಾರ್ಥಯಾಮಿ ತ್ವಯಿ ಕಲ್ಪತರೋಃ ಪರೇ ॥ ೩೯ ॥

ಇತ್ಯುಕ್ತ್ವಾ ನಾರದಸ್ತತ್ರ ಧೃತ್ವಾ ತಾತಪದಾಂಬುಜಂ ।
ಆಜ್ಞಾಂ ಯಯಾಚೇ ಪಿತರಂ ಗಂತುಂ ತಪಸಿ ಮಂಗಲೇ ॥ ೪೦ ॥

ಕೃತಾಂಜಲಿಪುಟೋ ಭೂತ್ವಾ ಭಕ್ತಿನಮ್ರಾತ್ಮಕಂಧರಃ ।
ಕೃತ್ವಾ ಪ್ರದಕ್ಷಿಣಂ ನತ್ವಾ ಬ್ರಹ್ಮಾಣಂ ಗಂತುಮುದ್ಯತಃ ॥ ೪೧ ॥

---

೩೮. ಎಲೈ, ಬ್ರಹ್ಮದೇವನೇ ! ನಾನು ಅರಿತಮಟ್ಟಿಗೆ ಸ್ತ್ರೀವಿಷಯವನ್ನು ಬಿನ್ನವಿಸಿಕೊಂಡೆನು. ಸರ್ವಜ್ಞನೂ, ಆತ್ಮಾರಾಮನೂ ಆದ ನಿನಗೆ ಅರಿಯದಿರುವುದು ಬೇರಾವುದೂ ಇಲ್ಲ.

೩೯. ಆದುದರಿಂದ, ಎಲೈ ಪ್ರಭುವರ್ಯನೇ, ನನ್ನಲ್ಲಿ ಅನುಗ್ರಹಿಸಿ ವಿದಾಯ ಬ್ರಹ್ಮಚರ್ಯವನ್ನೇ ನನಗೆ ದಯಪಾಲಿಸು. ಕಲ್ಪವೃಕ್ಷದಂತೆ ಇಷ್ಟದಾತನಾದ ನೀನು ಅಚಲವಾದ ಶ್ರೀಕೃಷ್ಣಭಕ್ತಿಯನ್ನು ನನಗೆ ಅನುಗ್ರಹಿಸಿದರೆ ಕೃತಕೃತ್ಯನಾಗುವೆನು.

೪೦. ನಾರದನು ಇಂತು ನುಡಿದು, ತಂದೆಯ ಪಾದಪಂಕಜಗಳನ್ನು ಹಿಡಿದು, ಮಂಗಳಕಾರಕವಾದ ತಪಸ್ಸಿಗೆ ಹೊರಡಲು ಅಪ್ಪಣೆಯನ್ನು ಬೇಡಿದನು.

೪೧. ಭಕ್ತಿಯಿಂದ ಕೈಗಳೆರಡನ್ನೂ ಜೋಡಿಸಿಕೊಂಡು, ತಲೆಯನ್ನು ತಗ್ಗಿಸಿಕೊಂಡು ಬ್ರಹ್ಮದೇವನಿಗೆ ಪ್ರದಕ್ಷಿಣೆ ನಮಸ್ಕಾರವನ್ನು ಮಾಡಿ ನಾರದನು ಹೊರಡಲನುವಾದನು.

ಗಚ್ಛಂತಂ ತನಯಂ ದೃಷ್ಟ್ವಾ ವಿಧಾತಾ ಜಗತಾಂ ಮುನೇ ।
ರುರೋದೋಚ್ಚೈರ್ಮುಕ್ತಕಂಠಂ ಮಹಾಸಾಂಸಾರಿಕೋ ಯಥಾ ॥ ೪೨ ॥

ಕರೇ ಧೃತ್ವಾ ಸಮಾಲಿಂಗ್ಯ ಚುಚುಂಬ ಚ ಪುನಃ ಪುನಃ ।
ಚಿರಂ ವಕ್ಷಸಿ ಕೃತ್ವಾ ಚ ವಾಸಯಾಮಾಸ ಜಾನುನಿ ॥ ೪೩ ॥

ಸ್ವತ್ಮಾರಾಮೇಶ್ವರೋ ಬ್ರಹ್ಮಾ ಯೋಗೀಂದ್ರಾಣಾಂ ಗುರೋರ್ಗುರುಃ ।
ಭೇದಂ!ಸೋಢುಂ ನ ಶಕ್ತೋ್ತೀ ಭೂದ್ವಿಚ್ಛೇದೋ ದುಃಸಹೋ ನೃಣಾಂ ॥ ೪೪ ॥

ಕಾತರಃ ಪುತ್ರಭೇದೇನ ಮೋಹಿತೋ ವಿಷ್ಣುಮಾಯಯಾ ।
ಶೋಕಾರ್ತೋ್ತೀ ವಕ್ತುಮಾರೇಭೇ ಸುತಂ ಸಂಬೋಧ್ಯ ಶೌನಕ ॥ ೪೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ
ಬ್ರಹ್ಮನಾರದ ಸಂವಾದೇ
ತ್ರಯೋವಿಂಶತಿತಮೋಽಧ್ಯಾಯಃ

---

೪೨. ಮಗನು ಸಂಸಾರದಲ್ಲಿ ವಿರಕ್ತನಾದುದನ್ನು ನೋಡಿ ಜಗತ್ಸೃಷ್ಟಿ ಕರ್ತನಾದ ಬ್ರಹ್ಮನು, ಮಗನನ್ನು ಅಗಲಿದ ಗೃಹಸ್ಥನಂತೆ ಬಹಳವಾಗಿ ಗೋಳಾಡ ಲಾರಂಭಿಸಿದನು.

೪೩. ಹೋಗುತ್ತಿದ್ದ ಮಗನನ್ನು ಹಿಡಿದು ತೊಡೆಯಮೇಲೆ ಕುಳ್ಳಿರಿಸಿ ಎದೆಗೆ ಅಪ್ಪಿಕೊಂಡು ಮತ್ತೆ ಮತ್ತೆ ಮುದ್ದಿಟ್ಟನು.

೪೪. ಆತ್ಮಾರಾಮರಲ್ಲಿ ಅಗ್ರಗಣ್ಯನೂ, ಯೋಗಿಗಳಲ್ಲಿ ಪರಮಯೋಗಿಯೂ ಆದ ಬ್ರಹ್ಮನು ಪುತ್ರವಿರಹವನ್ನು ಸಹಿಸಲಾರದಾದನು. ಹೀಗಿರುವಾಗ ಹುಲು ಮನುಜರಿಗೆ ಆಪ್ತರ ಅಗಲಿಕೆಯನ್ನು ಸಹಿಸಲು ಸುಲಭಸಾಧ್ಯವೇ ?

೪೫. ಎಲೈ, ಶೌನಕನೇ, ಪುತ್ರವಿರಹದಿಂದ ಕಾತರನಾದ ಬ್ರಹ್ಮನು ವಿಷ್ಣುವಿನ ಮಾಯೆಗೊಳಗಾಗಿ, ದುಃಖದಿಂದ ಮಗನನ್ನು ಕುರಿತು ಉಪದೇಶಿಸಲು ಮೊದಲು ಮಾಡಿದನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದಲ್ಲಿ ಬ್ರಹ್ಮನಾರದಸಂವಾದರೂಪವಾದ
ಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

ಇಪ್ಪತ್ತಮೂರನೆಯ ಅಧ್ಯಾಯದ ಸಾರಾಂಶವು

ಪುತ್ರರೆಲ್ಲರನ್ನೂ ಸೃಷ್ಟಿಗೆ ನಿಯಮಿಸಿದ ಬ್ರಹ್ಮನು, ಪುನರ್ಜನ್ಮವೆತ್ತಿದ ನಾರದನನ್ನು ಮತ್ತೆ ಸೃಷ್ಟಿಗೆ ಪ್ರೇರಿಸಿದನು. 'ಜನ್ಮದಾತನೂ, ವಿದ್ಯಾದಾತನೂ, ಮಂತ್ರೋಪದೇಶಕನೂ ಆದ ಪಿತೃವಿನ ವಾಕ್ಯೋಲ್ಲಂಘನೆಮಾಡುವವನು ಸತ್ಪುತ್ರನಲ್ಲವೆಂದೂ, ಆಶ್ರಮಗಳಲ್ಲೆಲ್ಲಾ ಪರಮೋತ್ತಮವಾದ ಗೃಹಸ್ಥಾಶ್ರಮವನ್ನು ಸ್ವೀಕರಿಸಿ, ಅತಿಥಿ, ಅಭ್ಯಾಗತರನ್ನು ಸತ್ಕರಿಸಿವು ಣ್ಯಕರ್ಮಗಳಿಂದ ಯಶಃಶರೀರಿಯಾಗಿ ಬಾಳುವುದು ಉಚಿತವೆ'ಂದೂ, ನುಡಿದ ತಂದೆಯ ಉಪದೇಶವನ್ನು ಕೇಳಿ-ನಾರದನು ಪುನಃ ತಂದೆಯನ್ನು ಕುರಿತು ಹೀಗೆ ಹೇಳಿದನು. "ಎಲೈ ಪಿತನೇ, ಒಮ್ಮೆ ನಮ್ಮಿಬ್ಬರಿಗೂ ಇದೇ ವಿಷಯದಲ್ಲಿ ವಿರೋಧವೂ, ಪರಸ್ಪರ ಶಾಪವೂ ಒದಗಿ ಅದರ ಫಲವನ್ನು ನಾನು ಅನುಭವಿಸಿಯಾಯಿತು. ನೀನಿನ್ನೂ ಅನುಭವಿಸುತ್ತಿರುವೆ. ಹೀಗಿರುವಾಗ ಮತ್ತೆ ಅದೇ ವಿಷಯವನ್ನೇ ಪ್ರಸ್ತಾಪಿಸುವೆಯಲ್ಲಾ! ತಂದೆಯಾದವನು ನ್ಯಾಯವಾಗಿ, ಸಂಸಾರದಲ್ಲಿ ಮನಃಪ್ರವೃತ್ತಿಯನ್ನು ತಪ್ಪಿಸಿ ಪರಮಾತ್ಮನಲ್ಲಿ ಭಕ್ತಿಯುಂಟಾಗುವಂತೆ ಮಾಡಬೇಕು. ಅದನ್ನು ಬಿಟ್ಟು, ಸಂಸಾರಿಯಾಗೆಂದು ನನಗೆ ಬೋಧಿಸುವೆಯಲ್ಲಾ! ಯಾವ ಸುಖಕ್ಕಾಗಿ ನಾನು ಸಂಸಾರಿಯಾಗಲಿ?

ಸಾಮಾನ್ಯವಾಗಿ ಹೆಂಗಸರಲ್ಲಿ ಸಾಧ್ವಿಯರು, ಭೋಗ್ಯರು ಮತ್ತು ಕುಲಟಿಯರು ಎಂದು ಮೂರು ವಿಭಾಗಮಾಡಬಹುದು. ಈ ಮೂವರೂ ಒಂದೊಂದು ರೀತಿಯಲ್ಲಿ ಸ್ವಾರ್ಥಕ್ಕಾಗಿಯೇ ಪತಿಸೇವೆ ಮಾಡುವವರೇ ವಿನಹಾ ನಿಷ್ಕಾಮವಾಗಿ ಸೇವೆಮಾಡುವ ಸ್ತ್ರೀಯರೇ ಲೋಕದಲ್ಲಿಲ್ಲ-ಇದನ್ನು ತಿಳಿದೂ ಸ್ತ್ರೀಯರ ಕ್ಷಣಿಕ ಸುಖಕ್ಕೆ ಮನಸೋಲಲೇ?-ಆದ್ದರಿಂದ ದಯವಿಟ್ಟು ನನಗೆ ಪರಮಾತ್ಮನಲ್ಲಿ ಭಕ್ತಿಯನ್ನು ಅನುಗ್ರಹಿಸು" ಎಂದು ಹೇಳಿ ಹೊರಡಲನುವಾದ ನಾರದನನ್ನು ಬ್ರಹ್ಮನು ಬಿಗಿದಪ್ಪಿಕೊಂಡು, ಮುದ್ದಾಡಿ ಪುತ್ರವಿರಹವನ್ನು ಸಹಿಸಲಾರದೆ ಮತ್ತೆ ಕೆಲವು ಹಿತವಾದ ನುಡಿಗಳನ್ನು ಹೇಳಲು ಪ್ರಾರಂಭಮಾಡಿದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಚತುರ್ವಿಂಶತಿತಮೋಽಧ್ಯಾಯಃ ॥

॥ ಶ್ರೀ ಬ್ರಹ್ಮೋವಾಚ ॥

ತ್ವಂ ಗಚ್ಛ ತಪಸೇ ವತ್ಸ ಕಿಂ ಮೇ ಸಂಸಾರಕರ್ಮಣಿ ।
ಅಹಂ ಯಾಸ್ಯಾಮಿ ಗೋಲೋಕಂ ವಿಜ್ಞಾತುಂ ಕೃಷ್ಣಮೀಶ್ವರಂ ॥ ೧ ॥

ಸನಕಶ್ಚ ಸನಂದಶ್ಚ ತೃತೀಯಶ್ಚ ಸನಾತನಃ ।
ಸನತ್ಕುಮಾರೋ ನೀರಾಗಶ್ಚತುರ್ಥಃ ಪುತ್ರ ಏವ ಚ ॥ ೨ ॥

ಯತೀ ಹಂಸೀ ಚಾರುಣಿಶ್ಚ ವೋಢುಃ ಪಂಚಶಿಖಸ್ತಥಾ ।
ಪುತ್ರಾಸ್ತಪಸ್ವಿನಃ ಸರ್ವೇ ಕಿಂ ಮೇ ಸಂಸಾರಕರ್ಮಣಿ ॥ ೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮ:—ಎಲೈ, ವತ್ಸ ನಾರದನೇ, ನೀನು ತಪಸ್ಸಿಗೆ ಹೋಗುವೆಯಾದರೆ ನಾನೂ ಕೃಷ್ಣಪರಮಾತ್ಮನ ಸೇವೆಗಾಗಿ ಗೋಲೋಕಕ್ಕೆ ಹೋಗುವೆನು. ಈ ಸಂಸಾರದಿಂದ ನನಗೆ ಆಗಬೇಕಾದುದೇನು ?

೨-೩. ನನ್ನ ಪುತ್ರರಲ್ಲಿ—' ಸನಕ, ಸನಂದ, ಸನಾತನ, ಸನತ್ಕುಮಾರ 'ರೆಂಬ ನಾಲ್ವರೂ ಮತ್ತು ' ಯತಿ, ಹಂಸ, ಆರುಣಿ, ವೋಢು, ಪಂಚಶಿಖ ' ಎಂಬ ಐವರೂ ಸಂಸಾರದಲ್ಲಿ ವಿರಾಗಿಗಳಾಗಿ, ತಪಸ್ವಿಗಳಾದರು. ನಾನು ಮಾತ್ರ ಈ ಸಂಸಾರದಲ್ಲಿ ಏಕೆ ಆಸಕ್ತಿ ವಹಿಸಲಿ ?

ಪಚೆಸ್ಕರೋ ಮರೀಚಿರ್ಮೇಽಂಗಿರಾಶ್ಚ ಭೃಗುಸ್ತಥಾ ।
ರುಚಿರತ್ರಿಃ ಕರ್ದಮಶ್ಚ ಪ್ರಚೇತಾಶ್ಚ ಕ್ರತುರ್ಮನುಃ ॥ ೪ ॥

ವಸಿಷ್ಠೋ ವಶಗಃ ಶಶ್ವತ್ಸರ್ವೇಷು ಚ ಸುತೇಷು ಚ ।
ಅನ್ಯೇಽವಿವೇಕಿನೋಽಸಾಧ್ಯಾಃ ಕಿಂ ಮೇ ಸಂಸಾರಕರ್ಮಣಿ ॥ ೫ ॥

ನಿಬೋಧ ವತ್ಸ ವಕ್ಷ್ಯಾಮಿ ವೇದೋಕ್ತಂ ವಚನಂ ಶುಭಂ ।
ಪಾರಂಪರ್ಯಕ್ರಮಪರಂ ಚತುರ್ವರ್ಗಫಲಪ್ರದಂ ॥ ೬ ॥

ಧರ್ಮಾರ್ಥಕಾಮಮೋಕ್ಷಾಂಶ್ಚ ಸರ್ವೇ ವಾಂಛಂತಿ ಪಂಡಿತಾಃ ।
ವೇದಪ್ರಣಿಹಿತಾನೇತಾನ್ ಸಭಾಸು ಮುನಿಶಂಸಿತಾನ್ ॥ ೭ ॥

ವೇದಪ್ರಣಿಹಿತೋ ಧರ್ಮೋಽಹ್ಯಧರ್ಮಸ್ತದ್ವಿಪರ್ಯಯಃ ।
ಆದೌ ವಿಪ್ರೋ ಯಜ್ಞಸೂತ್ರಂ ಪರಿಧಾಯ ಸುಖಂ ಸುಖೀ ॥ ೮ ॥

೪–೫. ' ಮರೀಚಿ, ಅಂಗಿರಸ್ಸು, ಭೃಗು, ರುಚಿ, ಅತ್ರಿ, ಕರ್ದಮ, ಪ್ರಚೇತ, ಕ್ರತು, ಮನು ಮತ್ತು ವಸಿಷ್ಠ ' ಇವರಿಷ್ಟು ಜನ ಮಾತ್ರ ನನಗೆ ವಿಧೇಯರಾಗಿ ಸಂಸಾರಿಗಳಾದರು. ಉಳಿದವರೆಲ್ಲಾ ಅವಿವೇಕಿಗಳೂ, ಅವಿಧೇಯರೂ ಆಗಿರುವಾಗ ನನಗೇಕೆ ಈ ಸಂಸಾರದ ಹಂಬಲು ?

೬. ವೇದೋಕ್ತವೂ, ವಂಶಪರಂಪರೆಯಿಂದ ಅನುಸರಿಸಬೇಕಾದುದೂ, ಪುರುಷಾರ್ಥಪ್ರದವೂ ಆದ ಕೆಲವು ಹಿತನುಡಿಗಳನ್ನು ಹೇಳುವೆನು ಆಲಿಸು.

೭. ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವರ್ಗಗಳೇ ಪುರುಷಾರ್ಥವೆಂದೂ, ಇವು ವೇದೋಕ್ತಗಳೆಂದೂ, ಮಹರ್ಷಿಗಳ ಸಭೆಯಲ್ಲಿ ಸಿದ್ಧಾಂತವಾಗಿರುವುದರಿಂದ ಪಂಡಿತರು ಇವನ್ನು ಬಯಸುತ್ತಾರೆ.

೮. ವೇದವಿಹಿತವಾದುದೆಲ್ಲ ಧರ್ಮವೆಂದೂ ವೇದವಿರುದ್ಧವಾದುದೆಲ್ಲ ಅಧರ್ಮವೆಂದೂ ತಿಳಿಯಬೇಕು. ಆದುದರಿಂದ ಬ್ರಾಹ್ಮಣನಾದವನು ಮೊದಲು ಸರಿಯಾದ ಕಾಲದಲ್ಲಿ ಉಪನೀತನಾಗಿ ಯಜ್ಞೋಪವೀತವನ್ನು ಧರಿಸಬೇಕು.

ಸಮಧೀತ್ಯ ತತೋ ವೇದಾನ್ ದದಾತಿ ಗುರುದಕ್ಷಿಣಾಂ ।
ತತಃ ಪ್ರಕೃಷ್ಟಕುಲಜಾಂ ಸುವಿನೀತಾಂ ಸಮುದ್ವಹೇತ್ ॥ ೯ ॥

ಸಾ ಸಾಧ್ವೀ ಕುಲಜಾ ಯಾ ಚ ಪತಿಸೇವಾಸು ತತ್ಪರಾ ।
ಸದ್ವಂಶೇ ದುರ್ವಿನೀತಾ ಚ ಸಂಭವೇನ್ನ ಕದಾಚನ ॥
ಆಕರೇ ಪದ್ಮರಾಗಾಣಾಂ ಜನ್ಮ ಕಾಚಮಣೇಃ ಕುತಃ ॥ ೧೦ ॥

ಅಸದ್ವಂಶಪ್ರಸೂತಾ ಯಾ ಪಿತ್ರೋರ್ದೋಷೇಣ ನಾರದ ।
ದುರ್ವಿನೀತಾ ಚ ಸಾ ದುಷ್ಟಾ ಸ್ವತಂತ್ರಾ ಸರ್ವಕರ್ಮಸು ॥ ೧೧ ॥

ನ ವತ್ಸ ದುಷ್ಟಾಃ ಸರ್ವಾಶ್ಚ ಯೋಷಿತಃ ಕಮಲಾಕಲಾಃ ।
ಸ್ವರ್ವೇಶ್ಯಾಂಶಾಶ್ಚ ಕುಲಟಾ ಅಸದ್ವಂಶಸಮುದ್ಭವಾಃ ॥ ೧೨ ॥

---

೯. ಅನಂತರ ಕರ್ಮಾಚರಣೆಗಾಗಿ ವೇದಾಧ್ಯಯನ ಮಾಡಿ, ಗುರುದಕ್ಷಿಣೆಯನ್ನು ಸಲ್ಲಿಸಿ ಗುರುವಿನ ಅಪ್ಪಣೆಯಂತೆ ಸತ್ಕುಲದಲ್ಲಿ ಹುಟ್ಟಿ ವಿನೀತಳಾದ ಕನ್ಯೆಯನ್ನು ಪರಿಗ್ರಹಿಸಬೇಕು.

೧೦. ಯಾವ ಸ್ತ್ರೀಯು ಪತಿಸೇವಾಪರಾಯಣೆಯಾಗಿರುವಳೋ ಆಕೆಯು ಸಾಧ್ವೀ ಮತ್ತು ಕುಲಜೆ ಎನಿಸಿಕೊಳ್ಳುವಳು. ಒಳ್ಳೆಯ ವಂಶದಲ್ಲಿ ದುಷ್ಟಳಾದ ಸ್ತ್ರೀಯು ಎಂದೆಂದಿಗೂ ಜನಿಸುವುದಿಲ್ಲ. ಪದ್ಮರಾಗ ರತ್ನದ ಗಣಿಯಲ್ಲಿ ಗಾಜಿನ ಚೂರುಗಳು ಎಂದೂ ಉತ್ಪತ್ತಿಯಾಗುವುದಿಲ್ಲವಲ್ಲವೇ ?

೧೧. ತಂದೆತಾಯಿಗಳ ದುರ್ನಡತೆಯಿಂದ ಜನಿಸಿದ ಸ್ತ್ರೀಯು ದುಷ್ಟಳು, ದುರ್ವಂಶಜಳು ಮತ್ತು ದುರ್ವಿನೀತಳೂ ಆಗಿ ಪತಿಯ ಅಧೀನಳಾಗಿರದೆ ಎಲ್ಲ ಕೆಲಸಗಳಲ್ಲೂ ಸ್ವಾತಂತ್ರ್ಯವನ್ನು ವಹಿಸುವಳು.

೧೨. ಆದರೆ ಎಲ್ಲೈ, ವತ್ಸನೇ, ಲಕ್ಷ್ಮೀದೇವಿಯ ಕಲೆಯಿಂದ ಜನಿಸಿದ ಸ್ತ್ರೀಯರು ದುಷ್ಟರಲ್ಲ. ದೇವ ವೇಶ್ಯೆಯರ ದುರ್ವಂಶದಲ್ಲಿ ಜನಿಸಿದವರು ಮಾತ್ರ ದುಷ್ಟರು ಮತ್ತು ಕುಲಟೆಯರು.

ನಿರ್ಗುಣಂ ಸ್ವಾಮಿನಂ ಸಾಧ್ವೀ ಸೇವತೇ ಚ ಪ್ರಶಂಸತಿ |
ನ ಸೇವತೇ ಚ ಕುಲಟಾ ಪ್ರಿಯಂ ನಿಂದತಿ ಸದ್ಗುಣಂ || ೧೩ ||

ಸಾಧುಃ ಸದ್ವಂಶಜಾಂ ಕನ್ಯಾಂ ಪ್ರಯತ್ನೇನ ಪರಿಗ್ರಹೇತ್ |
ತಸ್ಯಾಂ ಪುತ್ರಾನ್ಸಮುತ್ಪಾದ್ಯ ವೃದ್ಧಸ್ತು ತಪಸೇ ವ್ರಜೇತ್ || ೧೪ ||

ವರಂ ಹುತವಹೇ ವಾಸಃ ಸರ್ಪವಕ್ತ್ರೇ ಚ ಕಂಟಕೇ |
ಏತೇಭ್ಯೋ ದುಃಖದೋ ವಾಸಃ ಸ್ತ್ರಿಯಾ ದುರ್ಮುಖಯಾ ಸಹ || ೧೫ ||

ಮತ್ತೋಧೀತಸ್ತ್ವಯಾ ವೇದೋ ಮಹ್ಯಂ ಚ ಗುರುದಕ್ಷಿಣಾಂ |
ಪುತ್ರ ದೇಹೀದಮೇವೇಹ ಕುರು ದಾರಪರಿಗ್ರಹಂ || ೧೬ ||

---

೧೩. ಸಾಧ್ವೀಶಿರೋಮಣಿಯಾದ ಸತಿಯು ತನ್ನ ಪತಿಯು ನಿರ್ಗುಣನಾದರೂ ಅವನನ್ನು ಸೇವಿಸುವಳು ಮತ್ತು ಹೊಗಳುವಳು. ಆದರೆ ಕುಲಟೆಯಾದವಳು ತನ್ನ ಪತಿಯು ಸದ್ಗುಣಿಯಾದರೂ ಕೂಡ ಆತನನ್ನು ಸೇವಿಸದೆ, ದೂಷಿಸುವಳು.

೧೪. ಸತ್ಪುರುಷನು, ಸದ್ವಂಶಜಳಾದ ಸ್ತ್ರೀಯನ್ನು ನಡೆನುಡಿಗಳಿಂದ ಪರೀಕ್ಷಿಸಿ, ಪರಿಗ್ರಹಿಸಿ, ಆಕೆಯಲ್ಲಿ ಸತ್ಪುತ್ರರನ್ನು ಪಡೆದು, ವೃದ್ಧನಾದ ಮೇಲೆ ತಪಸ್ಸಿಗಾಗಿ ವನಕ್ಕೆ ತೆರಳಬೇಕು.

೧೫. ದುಷ್ಟಳಾದ ಸ್ತ್ರೀಯೊಡನೆ ವಾಸಿಸುವುದಕ್ಕಿಂತ ಜಾಜ್ವಲ್ಯಮಾನವಾದ ಅಗ್ನಿಯಲ್ಲಿ ಪ್ರವೇಶಿಸುವುದೂ, ಕಂಟಕಪ್ರಾಯವಾದ ಘಟಸರ್ಪದ ಬಾಯನ್ನು ಹೊಗುವುದೂ ಎಷ್ಟೋ ಉತ್ತಮ.

೧೬. ಇರಲಿ, ಪ್ರಕೃತದಲ್ಲಿ ನೀನು ನನ್ನಿಂದ ವೇದಾಧ್ಯಯನ ಮಾಡಿದುದಾಯಿತು. ಗುರುದಕ್ಷಿಣೆಯನ್ನು ಅರ್ಪಿಸುವುದು ಮಾತ್ರ ಉಳಿದಿದೆ. ಈಗ ನನ್ನ ಮಾತಿನಂತೆ ನೀನು ಗೃಹಸ್ಥನಾಗುವುದೇ ನನಗೆ ನೀನು ಅರ್ಪಿಸಬೇಕಾಗಿರುವ ಗುರುದಕ್ಷಿಣೆಯು.

ವತ್ಸ ಸ್ವಂ ಕುಲಜಾತಾಂ ಚ ಪೂರ್ವಪತ್ನೀಂ ಚ ಮಾಲತೀಂ ।
ವಿವಾಹಂ ಕುರು ಕಲ್ಯಾಣ ಕಲ್ಯಾಣೇ ಚ ದಿನೇಽನಘ ॥ ೧೭ ॥

ಮನುವಂಶೋದ್ಭವಸ್ಯೇಹ ಸೃಂಜಯಸ್ಯ ಗೃಹೇ ಸತೀ ।
ತ್ವತ್ಕೃತೇ ಜನ್ಮ ಲಬ್ಧ್ವಾ ಚ ಕುರುತೇ ಭಾರತೇ ತಪಃ ॥ ೧೮ ॥

ಗೃಹ್ಣೀಷ್ವ ಪರಮಾಂ ರತ್ನಮಾಲಾಂ ಚ ಕಮಲಾಕಲಾಂ ।
ಭಾರತೇ ನ ಭವೇದ್ವ್ಯರ್ಥಂ ಜನಾನಾಂ ತಪಸಃ ಫಲಂ ॥ ೧೯ ॥

ಆದೌ ಭವೇದ್ಗೃಹೀ ಲೋಕೋ ವಾನಪ್ರಸ್ಥಸ್ತತಃ ಪರಂ ।
ತತಸ್ತಪಸ್ವೀ ಮೋಕ್ಷಾಯ ಕ್ರಮ ಏಷ ಶ್ರುತೌ ಶ್ರುತಃ ॥ ೨೦ ॥

ವೈಷ್ಣವಾನಾಂ ಹರೇರರ್ಚಾ ತಪಸ್ಯಾ ಚ ಶ್ರುತೌ ಶ್ರುತಾ ॥ ೨೧ ॥

---

೧೭. ಆದ್ದರಿಂದ, ಪುಣ್ಯಶಾಲಿಯಾದ ನಾರದನೇ! ನಿನ್ನ ಪೂರ್ವಜನ್ಮದ ಪತ್ನಿಯೂ, ಸದ್ವಂಶಪ್ರಸೂತಳೂ ಆದ ಮಾಲಾವತಿಯನ್ನು ಶುಭದಿವಸದಲ್ಲಿ ಪತ್ನಿಯನ್ನಾಗಿ ಸ್ವೀಕರಿಸಿ ನನಗೆ ಹಿತಕಾರಿಯಾಗು.

೧೮. ಆ ಸಾಧ್ವೀಮಣಿಯು ಭರತಖಂಡದಲ್ಲಿ ಮನುವಂಶೋತ್ಪನ್ನನಾದ ಸೃಂಜಯನ ಗೃಹದಲ್ಲಿ ನಿನಗಾಗಿ ಜನ್ಮವೆತ್ತಿ ತಪವೆಸಗುತ್ತಿದ್ದಾಳೆ.

೧೯. ಭರತಖಂಡದಲ್ಲಿ ತಪಸ್ಸು ಮಾಡುವವರ ಅಭಿಲಾಷೆಯು ಎಂದಿಗೂ ವ್ಯರ್ಥವಾಗಬಾರದು ಆದುದರಿಂದ ರತ್ನಮಾಲೆಯಂತೆ ಶ್ರೇಷ್ಠಳೂ, ಲಕ್ಷ್ಮೀದೇವಿಯ ಕಲೆಯಿಂದ ಜನಿಸಿದವಳೂ ಆದ ಮಾಲಾವತಿಯನ್ನು ನೀನು ಸ್ವೀಕರಿಸು.

೨೦. ವೇದಾಧ್ಯಯನ ಸಂಪನ್ನನಾದ ಬ್ರಹ್ಮಚಾರಿಯು ಮೊದಲು ಗೃಹಸ್ಥನೂ, ಅನಂತರ ವಾನಪ್ರಸ್ಥನೂ, ಕೊನೆಗೆ ಮೋಕ್ಷಪ್ರಾಪ್ತಿಗಾಗಿ ತಪಸ್ವಿಯೂ ಆಗಬೇಕೆಂಬ ಕ್ರಮವು ವೇದೋಕ್ತವಾಗಿದೆ.

೨೧. ವಿಷ್ಣುಭಕ್ತರು, ಹರಿಪೂಜೆಯನ್ನೂ, ತಪಸ್ಸನ್ನೂ ಆಚರಿಸಬೇಕೆಂದು ಶ್ರುತಿ ವಿಶ್ರುತವಾಗಿದೆ.

ವೈಷ್ಣವ ತ್ವಂ ಗೃಹೇ ತಿಷ್ಠ ಕುರು ಕೃಷ್ಣ ಪದಾರ್ಚನಂ ।
ಅಂತರ್ಬಾಹ್ಯೇ ಹರಿರ್ಯಸ್ಯ ತಸ್ಯ ಕಿಂ ತಪಸಾ ಸುತ　॥ ೨೨ ॥

ನಾಂತರ್ಬಾಹ್ಯೇ ಹರಿರ್ಯಸ್ಯ ತಸ್ಯ ಕಿಂ ತಪಸಾನಘ ।
ತಪಸಾ ಹರಿರಾರಾಧ್ಯೋ ನಾನ್ಯಃ ಕಶ್ಚನಃ ವಿದ್ಯತೇ　॥ ೨೩ ॥

ಯತ್ರ ಯತ್ರ ಕೃತಂ ಕೃಷ್ಣ ಸೇವನಂ ಪರಮಂ ತಪಃ ।
ವತ್ಸ ಮದ್ವಚನೇನೈವ ಗೃಹೇ ಸ್ಥಿತ್ವಾ ಹರಿಂ ಭಜ　॥ ೨೪ ॥

ಗೃಹೀ ಭವ ಮುನಿಶ್ರೇಷ್ಠ ಗೃಹಿಣಾಂ ಸರ್ವದಾ ಸುಖಂ ।
ಕಾಮಿನ್ಯಾಂ ಸುಖಸಂಭೋಗಃ ಸ್ವರ್ಗಭೋಗಸಮೋ ಮತಃ　॥ ೨೫ ॥

---

೨೨. ನೀನು ವೈಷ್ಣವನಾದುದರಿಂದ (ವಿಷ್ಣುಭಕ್ತ) ಗೃಹಸ್ಥನಾಗಿ ಕೃಷ್ಣಪರಮಾತ್ಮನ ಪೂಜೆಯನ್ನು ಮಾಡಿಕೊಂಡಿರು ಒಳಗೂ ಹೊರಗೂ, ಎಲ್ಲೆಲ್ಲೂ ಪರಮಾತ್ಮನನ್ನು ಕಾಣಬಲ್ಲ ಭಕ್ತನಿಗೆ ತಪವೇಕೆ ?

೨೩. ಪರಮಾತ್ಮನು ಒಳಗೂ, ಹೊರಗೂ ಸರ್ವವ್ಯಾಪಕನೆಂದೂ ತಿಳಿಯದವನು ತಪವೆಸಗಿದರೂ ಪ್ರಯೋಜನವಿಲ್ಲ. ತಪಸ್ಸಿನಿಂದಲೇ ಹರಿಯನ್ನು ಮೆಚ್ಚಿಸಬೇಕೇ ಹೊರತು ಬೇರೆ ಮಾರ್ಗವಿಲ್ಲ.

೨೪. ಆದರೆ ಕೃಷ್ಣನ ಸೇವೆಯೆಲ್ಲವೂ, ಎಲ್ಲಿ ಮಾಡಲ್ಪಟ್ಟರೂ ಶ್ರೇಷ್ಠವಾದ ತಪಸ್ಸು ಎನಿಸಿಕೊಳ್ಳುವುದು. ಆದುದರಿಂದ ಎಲೈ ಪುತ್ರನೇ. ನನ್ನ ಮಾತನ್ನು ಕೇಳಿ ನೀನು ಗೃಹಸ್ಥನಾಗಿ ಪರಮಾತ್ಮನ ಸೇವೆಯನ್ನು ಮಾಡಿಕೊಂಡಿರು.

೨೫. ಎಲೈ, ಮುನಿಶ್ರೇಷ್ಠನಾದ ನಾರದನೇ, ನನ್ನ ಮಾತನ್ನು ಕೇಳಿ ನೀನು ಗೃಹಸ್ಥನಾಗು. ಗೃಹಸ್ಥರಿಗೆ ಯಾವಾಗಲೂ ಸುಖವುಂಟು. ಕಾಮಿನಿಯರೊಡನೆ ಕಾಮಸುಖವನ್ನು ಅನುಭವಿಸುವುದು 'ಸ್ವರ್ಗಸುಖಕ್ಕೆ' ಎಣೆ ಎಂದು ಹೇಳುವುದುಂಟು.

ತದ್ದರ್ಶನಮುಪಸ್ಪರ್ಶಂ ವಾಂಛಂತ್ಯೇವ ಮುಮುಕ್ಷವಃ ।
ಸರ್ವಸ್ಪರ್ಶಸುಖಾತ್ಸ್ತ್ರೀಣಾಮುಪಸ್ಪರ್ಶಸುಖಂ ಪರಂ ॥ ೨೬ ॥

ತತಃ ಸುಖತಮೋ ಪುತ್ರದರ್ಶನಂ ಸ್ಪರ್ಶನಂ ಮುನೇ ।
ಸರ್ವೇಭ್ಯಃ ಪ್ರೇಯಸೀ ಕಾಂತಾ ಪ್ರಿಯಾ ತೇನ ಪ್ರಕೀರ್ತಿತಾಃ ॥ ೨೭ ॥

ಪುತ್ರಪ್ರಯೋಜನಾ ಕಾಂತಾ ಶತಕಾಂತಾಪ್ರಿಯಃ ಸುತಃ ।
ನಾಸ್ತಿ ಪುತ್ರಾತ್ಪರೋ ಬಂಧುರ್ನಾಸ್ತಿ ಪುತ್ರಾತ್ಪ್ರಿಯಃ ಪರಃ ॥ ೨೮ ॥

ಸರ್ವೇಭ್ಯೋ ಜಯಮನ್ವಿಚ್ಛೇತ್ಪುತ್ರಾದೇಕಾತ್ಪರಾಜಯಂ ।
ನ ಚಾತ್ಮನಿ ಪ್ರಿಯೋಽರ್ಥಶ್ಚ ತಸ್ಮಾದಪಿ ಸುತಃ ಪ್ರಿಯಃ ॥ ೨೯ ॥

---

೨೬. ಮೋಕ್ಷಕಾಮಿಗಳೂ ಕೂಡ ಸುಂದರಿಯರ ದರ್ಶನವನ್ನೂ, ಅಂಗ ಸ್ಪರ್ಶವನ್ನೂ ಬಯಸುವರು. ಎಲ್ಲ ಸ್ಪರ್ಶಸುಖಗಳಿಗಿಂತಲೂ ಕಾಮಿನಿಯರ ಕೋಮಲಾವಯವಸ್ಪರ್ಶಸುಖವೇ ಹೆಚ್ಚೆಂದು ಹೇಳುವರು-(ಇದು ಅರ್ಥವಾದ)

೨೭. ಅದಕ್ಕಿಂತಲೂ, ಮಗನ ದರ್ಶನ ಮತ್ತು ಸ್ಪರ್ಶನ ಸುಖಗಳು ಮೇಲೆನಿಸುವುವು. ಕಾಂತೆಯು ಎಲ್ಲ ಬಂಧುಗಳಿಗಿಂತಲೂ ಪ್ರೀತಿಪಾತ್ರಳಾದುದರಿಂದ 'ಪ್ರಿಯೆ' ಎನಿಸಿಕೊಳ್ಳುವಳು.

೨೮. ಪುತ್ರಪ್ರಾಪ್ತಿಗಾಗಿ, ಕಾಂತೆಯು ಪ್ರಿಯಳಾಗುವುದರಿಂದ, ನೂರು ಮಂದಿ ಕಾಂತೆಯರಿಗಿಂತಲೂ, ಒಬ್ಬ ಪುತ್ರನು ಪ್ರಿಯನಾಗುವನು. ಪುತ್ರನಿಗಿಂತ ಉತ್ತಮನಾದ ಬಂಧುವೂ, ಪ್ರಿಯನೂ ಬೇರೊಬ್ಬನಿಲ್ಲ.

೨೯. ಎಲ್ಲವಿಧದಲ್ಲೂ, ಎಲ್ಲರನ್ನೂ ಜಯಿಸಲು ಬಯಸುವವರೂ ಕೂಡ ತಮ್ಮ ಮಕ್ಕಳಿಂದ ಮಾತ್ರ ಪರಾಜಯ(ಸೋಲು)ವನ್ನೇ ಬಯಸುವರು. ಮನುಜನಿಗೆ ಧನವು ಪ್ರಿಯವಾದರೆ ಅದಕ್ಕಿಂತಲೂ ಮಗನು ನೂರ್ಮಡಿಯಾಗಿ ಪ್ರಿಯನು.

ಅತಃ ಪ್ರಿಯತಮೇ ಪುತ್ರೇ ನ್ಯಸೇದಾತ್ಮಪರಂ ಧನಂ ।
ಇತ್ಯೇವಮುಕ್ತ್ವಾ ಸ ಬ್ರಹ್ಮಾ ವಿರರಾಮ ಚ ಶೌನಕ ॥
ಉವಾಚ ವಚನಂ ತಾತಂ ನಾರದೋ ಜ್ಞಾನಿನಾಂ ವರಃ ॥ ೩೦ ॥

॥ ನಾರದ ಉವಾಚ ॥

ಸ್ವಯಂ ವಿಜ್ಞಾಯ ಸರ್ವಾರ್ಥಂ ಸ್ವಪುತ್ರಂ ವೇದದರ್ಶನೇ ।
ಪ್ರವರ್ತ್ತಯತ್ಯಸನ್ಮಾರ್ಗೇ ಸ ದಯಾಲುಃ ಕಥಂ ಪಿತಾ ॥ ೩೧ ॥

ಜಲಬುದ್ಬುದವತ್ಸರ್ವಂ ಸಂಸಾರಮತಿನಶ್ವರಂ ।
ಜಲರೇಖಾ ಯಥಾ ಮಿಥ್ಯಾ ತಥಾ ಬ್ರಹ್ಮನ್ ಜಗತ್ತ್ರಯಂ ॥ ೩೨ ॥

ವಿಹಾಯ ಹರಿದಾಸ್ಯಂ ಚ ವಿಷಯೇ ಯನ್ಮನಶ್ಚಲಂ ।
ದುರ್ಲಭಂ ಮಾನವಂ ಜನ್ಮ ಮಾಭೂತ್ತನ್ನಿಷ್ಫಲಂ ಕ್ವಚಿತ್ ॥ ೩೩ ॥

---

೩೦. ಪುತ್ರನು ಪ್ರಿಯತಮನಾದುದರಿಂದಲೇ ತನಗೆ ಪ್ರೀತಿಪಾತ್ರವಾದ ಧನವನ್ನೂ ಕೂಡ ಜನರು ಪುತ್ರನಿಗೆ ಕೊಡುವರು" ಎಂದು ನುಡಿದು ಸುಮ್ಮನಾದ ಬ್ರಹ್ಮನನ್ನು ಕುರಿತು ಜ್ಞಾನಿಗಳಲ್ಲಿ ಶ್ರೇಷ್ಠನಾದ ನಾರದನು ಇಂತೆಂದನು.

೩೧. ನಾರದ :—ತಾನು ಸರ್ವಜ್ಞನಾಗಿ, ಪುತ್ರನಿಗೂ ವೇದಶಾಸ್ತ್ರಗಳನ್ನು ಬೋಧಿಸಿ, ಅನಂತರ ಅವನನ್ನು ದುರ್ಮಾರ್ಗದಲ್ಲಿ ತೊಡಗಿಸುವವನು ದಯಾಮಯನಾದ ತಂದೆಯೆನಿಸಿಕೊಳ್ಳುವನೇ ?

೩೨. ಸಂಸಾರವು ನೀರಿನ ಗುಳ್ಳೆಯಂತೆ ನಶ್ವರವಾದುದು. ನೀರಿನೊಳಗೆ ಎಳೆದ ಗೆರೆಯಂತೆ ಮೂರುಲೋಕವೂ ಮಿಥ್ಯೆ (ಸುಳ್ಳು) ಎನಿಸಿಕೊಳ್ಳುವುದು.

೩೩. ಹರಿದಾಸ್ಯವನ್ನು ದೂರಮಾಡಿ ವಿಷಯಸುಖಗಳಲ್ಲಿ ಮನಸ್ಸನ್ನು ತೊಡಗಿಸಿ ದುರ್ಲಭವಾದ ಮನುಜಜನ್ಮವು ಲಭಿಸಿದಾಗಲೂ ಅದನ್ನು ನಿಷ್ಫಲಮಾಡಿಕೊಳ್ಳುವುದು ಉಚಿತವಲ್ಲ.

ಕಾ ವಾ ಕಸ್ಯ ಪ್ರಿಯಾ ಪುತ್ರೋ ಬಂಧುಃ ಕೋ ವಾ ಭವಾರ್ಣವೇ |
ಕರ್ಮೋರ್ಮಿಭಿರ್ಯೋಜನಾ ಚ ತದಪಾಯೋ ವಿಯೋಜನಾ || ೩೪ ||

ಸುಕರ್ಮ ಕಾರಯೇದ್ಯೋ ಹಿ ತನ್ಮಿತ್ರಂ ಸ ಪಿತಾ ಗುರುಃ |
ದುರ್ಬುದ್ಧಿಂ ಜನಯೇದ್ಯೋ ಹಿ ಸ ರಿಪುಃ ಸ್ಯಾತ್ಕಥಂ ಪಿತಾ || ೩೫ ||

ಇತ್ಯೇವಂ ಕಥಿತಂ ತಾತ ವೇದಬೀಜಂ ಯಥಾಗಮಂ |
ಧ್ರುವಂ ತಥಾಪಿ ಕರ್ತವ್ಯಂ ತವಾಜ್ಞಾಪರಿಪಾಲನಂ || ೩೬ ||

ಆದೌ ಯಾಸ್ಯಾಮಿ ಭಗವನ್ನರನಾರಾಯಣಾಶ್ರಮಂ |
ನಾರಾಯಣಕಥಾಂ ಶ್ರುತ್ವಾ ಕರಿಷ್ಯೇ ದಾರಸಂಗ್ರಹಂ || ೩೭ ||

ಇತ್ಯೇವಮುಕ್ತ್ವಾ ಸ ಮುನಿರ್ವಿರರಾಮ ಪಿತುಃ ಪುರಃ |
ಪುಷ್ಪವೃಷ್ಟಿಸ್ತದುಪರಿ ತತ್ಕ್ಷಣೇನ ಬಭೂವ ಹ || ೩೮ ||

---

೩೪. ಸಂಸಾರಸಾಗರದಲ್ಲಿ ಪತ್ನಿಯಾರು? ಪುತ್ರನಾರು? ಬಂಧುವಾರು? ಮತ್ತು ಇವರ ಸಂಬಂಧವೆಲ್ಲಿಯದು? ಕರ್ಮವೆಂಬ ಅಲೆಗಳು ಸೇರಿದಾಗ ಒಬ್ಬರಿಗೊಬ್ಬರಿಗೆ ಸಂಬಂಧವೂ, ಅವುಗಳು ದೂರವಾದಾಗ ವಿಯೋಗವೂ ಸಿದ್ಧವಾಗಿರುವುದು.

೩೫. ಸತ್ಕರ್ಮಗಳಲ್ಲಿ ಪ್ರೇರಿಸುವವನನ್ನು, ಸ್ನೇಹಿತ, ತಂದೆ, ಗುರು, ಮುಂತಾಗಿ ಹೇಳುವುದು ನ್ಯಾಯ. ದುರ್ಬುದ್ಧಿಯನ್ನು ಹುಟ್ಟಿಸುವವನು 'ಶತ್ರು' ಎಂದೆನಿಸಿಕೊಳ್ಳುವನೇ ಹೊರತು ಎಂದಿಗೂ ತಂದೆಯೆನಿಸುವುದಿಲ್ಲ.

೩೬. ಎಲೈ ಪಿತನೇ, ವೇದಶಾಸ್ತ್ರಗಳಲ್ಲಿ ನಾನು ತಿಳಿದುದನ್ನು ಇಂತು ಭಿನ್ನವಿಸಿಕೊಂಡೆನು. ಆದರೂ ತಂದೆಯಾದ ನಿನ್ನ ಅಪ್ಪಣೆಯನ್ನು ಪರಿಪಾಲಿಸುವೆನೇ ಹೊರತು ಮೀರಿ ನಡೆಯಲಾರೆನು.

೩೭. ಆದರೆ ಪೂಜ್ಯನೇ, ಮೊದಲು ಬದರಿಕಾಶ್ರಮಕ್ಕೆ ಹೋಗಿ, ತಪಸ್ವಿಯಾದ ನಾರಾಯಣಮುನಿಯ ಕಥೆಯನ್ನು ಕೇಳಿ ತಿಳಿದು, ಅನಂತರ ಪತ್ನಿಯನ್ನು ಪರಿಗ್ರಹಿಸುವೆನು.

೩೮. ನಾರದಮುನಿಯು ಬ್ರಹ್ಮದೇವನ ಮುಂದೆ ಇಂತು ನುಡಿದು ಸುಮ್ಮನಾದ ಕ್ಷಣದಲ್ಲಿಯೇ ಅವನ ಮೇಲೆ ಹೂಮಳೆ ಸುರಿಯಿತು.

ಕ್ಷಣಂ ಪಿತುಃ ಪುರಃ ಸ್ಥಿತ್ವಾ ನಾರದೋ ಮುನಿಸತ್ತಮಃ ।
ಉವಾಚ ಚ ಪುನರ್ವೇದಂ ವಚನಂ ಮಂಗಲಪ್ರದಂ ॥ ೩೯ ॥

॥ ಶ್ರೀ ನಾರದ ಉವಾಚ ॥

ದೇಹಿ ಮೇ ಕೃಷ್ಣಮಂತ್ರಂ ಚ ಯನ್ಮನೋ ವಾಂಛಿತಂ ಮಮ ।
ತತ್ಸಂಬಂಧಿ ಚ ಯದ್ಜ್ಞಾನಂ ಯತ್ರ ತದ್ಗುಣವರ್ಣನಂ ॥ ೪೦ ॥

ತತಃ ಪಶ್ಚಾತ್ಕರಿಷ್ಯಾಮಿ ತ್ವತ್ಪ್ರೀತ್ಯಾ ದಾರಸಂಗ್ರಹಂ ।
ಮಾನಸೇ ಪರಿಪೂರ್ಣೇ ಚ ಕಾರ್ಯಂ ಕರ್ತುಂ ಪುಮಾನ್ಸುಖೀ ॥ ೪೧ ॥

ನಾರದಸ್ಯ ವಚಃ ಶ್ರುತ್ವಾ ಪ್ರಹೃಷ್ಟಃ ಕಮಲೋದ್ಭವಃ ।
ಉವಾಚ ಪುನರೇವೇದಂ ಪುತ್ರಂ ಜ್ಞಾನವಿದಾಂ ವರಃ ॥ ೪೨ ॥

---

೩೯. ಇಂತು ತಂದೆಯ ಎದುರಿನಲ್ಲಿ ಮುನಿವರನಾದ ನಾರದನು ಕ್ಷಣಕಾಲ ಸುಮ್ಮನಿದ್ದು ಪುನಃ ಅವನನ್ನು ಕುರಿತು ಮಂಗಳಕರವಾದ ಕೆಲವು ಮಾತುಗಳನ್ನಾಡಿದನು.

೪೦. ನಾರದ:—ಎಲೈ ತಂದೆಯೇ, ನನ್ನ ಮನೋಭಿಲಷಿತವಾದ ಶ್ರೀಕೃಷ್ಣ ಪರಮಾತ್ಮನ ಮಂತ್ರವನ್ನೂ, ಆತನಿಗೆ ಸಂಬಂಧಿಸಿದ ಜ್ಞಾನವನ್ನೂ, ಆತನ ಗುಣ ವರ್ಣನೆಯನ್ನೂ ನನಗೆ ದಯವಿಟ್ಟು ಬೋಧಿಸು.

೪೧. ಅನಂತರ ನಿನ್ನ ತೃಪ್ತಿಗಾಗಿ ನಾನು ಸಂಸಾರಿಯಾಗುವೆನು. ಯಾವ ಮನುಜನಾದರೂ ತನ್ನ ಅಭಿಲಾಷೆಯು ಪೂರ್ಣವಾದ ಮೇಲೆ ಯಾವ ಕೆಲಸ ಮಾಡಲೂ ಸಿದ್ಧನಾಗುವನು ಮತ್ತು ಸುಖಿಯಾಗುವನು.

೪೨. ಜ್ಞಾನಿಗಳಲ್ಲಿ ಶ್ರೇಷ್ಠನಾದ ಬ್ರಹ್ಮನು ಪುತ್ರನ ಮಾತನ್ನು ಕೇಳಿ ಸಂತಸಗೊಂಡು ಅವನನ್ನು ಕುರಿತು ಪುನಃ ಕೆಲವು ನುಡಿಗಳನ್ನು ಹೇಳಿದನು.

॥ ಬ್ರಹ್ಮೋವಾಚ ॥

ಪತ್ಯುರ್ಮಂತ್ರಂ ಪಿತುರ್ಮಂತ್ರಂ ನ ಗೃಹ್ಣೀಯಾದ್ವಿಚಕ್ಷಣಃ ।
ವಿವಿಕ್ತಾಶ್ರಮಿಣಾಂ ಚೈವ ನ ಮಂತ್ರಃ ಸುಖದಾಯಕಃ ॥ ೪೩ ॥

ನಿಷೇಕಾಲ್ಲಭ್ಯತೇ ಮಂತ್ರೋ ಗುರುರ್ಭರ್ತಾ ಚ ಕಾಮಿನೀ ।
ವಿದ್ಯಾ ಸುಖಂ ಭಯಂ ದುಃಖಂ ಪುರುಷೈಃ ಸ್ವೇಚ್ಛಯಾ ನ ಚ ॥ ೪೪ ॥

ಮಹೇಶ್ವರಸ್ತವಗುರುಃ ಪ್ರಾಕ್ತನೋ ನಃ ಪುರಾತನಃ ।
ಗಚ್ಛ ವತ್ಸ ಶಿವಂ ಶಾಂತಂ ಶಿವದಂ ಜ್ಞಾನಿನಾಂ ಗುರುಂ ॥ ೪೫ ॥

ತತ ಏವ ಭವಾನ್ಮಂತ್ರಂ ಜ್ಞಾನಂ ಲಬ್ಧ್ವಾ ಪುರಾತನಾತ್ ।
ನಾರಾಯಣಕಥಾಂ ಶ್ರುತ್ವಾ ಶೀಘ್ರಮಾಗಚ್ಛ ಮದ್ಗೃಹಂ ॥ ೪೬ ॥

---

೪೩. ಬ್ರಹ್ಮ:—ಕುಶಲಿಯಾದ ಪುತ್ರನು ತಂದೆಯಿಂದಲೂ, ಪತ್ನಿಯು ಪತಿಯಿಂದಲೂ, ಮಂತ್ರೋಪದೇಶವನ್ನು ಸ್ವೀಕರಿಸಕೂಡದು. ಅಂತೆಯೇ ಸಂನ್ಯಾಸಿಗಳಿಂದ ಮಂತ್ರೋಪದೇಶವನ್ನು ಸ್ವೀಕರಿಸುವುದೂ ಸುಖಕರವಾದುದಲ್ಲ.

೪೪. ಮನುಜನಿಗೆ ಗುರುಗಳೂ, ಪತ್ನಿಯರೂ, ಪತಿಯರೂ, ವಿದ್ಯೆಯೂ, ಸುಖದುಃಖವೂ, ಭಯಕ್ರೋಧವೂ, ಮಾತೆಯ ಗರ್ಭದಲ್ಲಿರುವಾಗಲೇ ನಿರ್ಣಯವಾಗಿರುವುದರಿಂದ ತಮಗೆ ಇಚ್ಛೆಬಂದಂತೆ ಗುರುವನ್ನಾಗಲೀ, ವಿದ್ಯೆಯನ್ನಾಗಲೀ, ಸಂಬಂಧವನ್ನಾಗಲೀ, ಸುಖವನ್ನಾಗಲೀ ಪಡೆಯುವುದಕ್ಕೆ ಸಾಧ್ಯವಿಲ್ಲ.

೪೫. ನಮಗಿಂತಲೂ ಪುರಾತನನಾದ ಮಹೇಶನೇ ನಿನಗೆ ಗುರುವು. ಆದುದರಿಂದ ಜ್ಞಾನಿಗಳಲ್ಲಿ ಅಗ್ರಗಣ್ಯನೂ, ಮಂಗಳಕರನೂ, ಶಾಂತನೂ ಆದ ಆತನೆಡೆಗೆ ಹೋಗು.

೪೬. ಪುರಾಣಪುರುಷನಾದ ಆತನಿಂದ ನೀನು ಮಂತ್ರೋಪದೇಶವನ್ನು ಹೊಂದಿ ನಾರಾಯಣಋಷಿಯ ಕಥೆಯನ್ನೂ ಕೇಳಿ ಜಾಗ್ರತೆಯಾಗಿ ನನ್ನ ಮಂದಿರಕ್ಕೆ ಹಿಂತಿರುಗು.

ಇತ್ಯುಕ್ತ್ವಾ ಜಗತಾಂ ಧಾತಾ ವಿರರಾಮ ಚ ಶೌನಕ ।
ಪ್ರಣಮ್ಯ ಪಿತರಂ ಭಕ್ತ್ಯಾ ಶಿವಲೋಕಂ ಯಯೌ ಮುನಿಃ　　　|| ೪೭ ||

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಸೌತಿಶೌನಕ
ಸಂವಾದೇ ಬ್ರಹ್ಮನಾರದೋಕ್ತಸಂಸಾರಸುಖಾಸುಖವರ್ಣನಂ
ನಾಮ ಚತುರ್ವಿಂಶತಿತಮೋಽಧ್ಯಾಯಃ

---

೪೭. ಎಲೈ, ಶೌನಕನೇ, ಜಗತ್ಕರ್ತನಾದ ಬ್ರಹ್ಮನು ಇಂತು ನುಡಿದು ಸುಮ್ಮನಾಗಲು, ನಾರದನು ಭಕ್ತಿಪೂರ್ವಕವಾಗಿ ತಂದೆಗೆ ವಂದಿಸಿ, ಶಿವಲೋಕಕ್ಕೆ ತೆರಳಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಬ್ರಹ್ಮಖಂಡದಲ್ಲಿ ಬ್ರಹ್ಮನಾರದರಿಂದ
ವಿವೃತವಾದ ಸಂಸಾರಸುಖಾಸುಖವರ್ಣನರೂಪವಾದ ಇಪ್ಪತ್ತನಾಲ್ಕನೆಯ
ಅಧ್ಯಾಯವು ಸಮಾಪ್ತವಾದುದು.

ಇಪ್ಪತ್ತನಾಲ್ಕನೆಯ ಅಧ್ಯಾಯದ ಸಾರಾಂಶವು

ಜಗತ್ತಿನಲ್ಲಿ ಜನಿಸಿ, ಪುರುಷಾರ್ಥಪ್ರಾಪ್ತಿಗಾಗಿ ಪ್ರಯತ್ನಿಸುವುದೇ ಪುರುಷನ ಪರಮೋದ್ದೇಶವಾಗಿರಬೇಕು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಈ ನಾಲ್ಕೇ ಪುರುಷಾರ್ಥಗಳೆಂದು ವೇದೋಕ್ತವಾಗಿವೆ. ಇವುಗಳಲ್ಲಿ ಯಜ್ಞಯಾಗಾದಿಸತ್ಕರ್ಮಾಚರಣೆಯೇ ಧರ್ಮವೆನಿಸುವುದು. ಈ ಕರ್ಮಾಚರಣೆಗಾಗಿ ವೇದಾಧ್ಯಯನಮಾಡಿ, ಗುರುದಕ್ಷಿಣೆಯನ್ನು ಕೊಟ್ಟು ಗುರುವಿನ ಅಪ್ಪಣೆಯಂತೆ ದಾರಪರಿಗ್ರಹಮಾಡುವುದು ಅತ್ಯವಶ್ಯಕ. ಸ್ತ್ರೀಯರು ಸಾಧ್ವಿಯರು ಮತ್ತು ಕುಲಟೆಯರು ಎಂದು ಇಬ್ಬಗೆಯಾಗಿರುವರು. ಇವರಲ್ಲಿ ಮಹಾಲಕ್ಷ್ಮೀದೇವಿಯ ವಂಶಜರು ಸಾಧ್ವಿಯರೆಂದೂ, ದೇವವೇಶ್ಯೆಯರ ವಂಶಜರು ಕುಲಟೆಯರೆಂದೂ ಪ್ರಸಿದ್ಧರಾಗಿರುವರು. ಸತ್ಪುರುಷನು ಸಾಧ್ವಿಯಾದ ಸ್ತ್ರೀಯನ್ನು ನೋಡಿ ವರಿಸಿ, ಆಕೆಯಲ್ಲಿ ಸತ್ಪುತ್ರನನ್ನು ಪಡೆದು, ಧರ್ಮಾರ್ಥಕಾಮಗಳನ್ನು ಹೊಂದಿ, ಮೋಕ್ಷಪ್ರಾಪ್ತಿಗಾಗಿ ನಿರ್ಜನವಾದ ವನದಲ್ಲಿ ತಪವೆಸಗಬೇಕು. ಹೀಗಿರುವಾಗ ನೀನು ನನ್ನಲ್ಲಿ ವೇದಾಧ್ಯಯನಮಾಡಿ ಗುರುದಕ್ಷಿಣೆಯನ್ನೀ ಕೊಡದೆ ತಪಸ್ಸಿಗೆ ಹೋಗುವುದನುಚಿತ. ನನ್ನ ಗುರುದಕ್ಷಿಣೆಯ ಸಲುವಾಗಿಯಾದರೂ ನೀನು ವಿವಾಹಿತನಾಗು. ಆಗ ನನ್ನ ಗುರುದಕ್ಷಿಣೆಯು ಸಂದಂತೆ ಭಾವಿಸುವೆನು. ನಿನ್ನ ಪೂರ್ವಜನ್ಮದ ಪತ್ನಿಯಾದ ಮಾಲಾವತಿಯು, ಭರತಖಂಡದ ಸೃಂಜಯನೆಂಬುವನ ಮನೆಯಲ್ಲಿ ನಿನಗಾಗಿ ಜನ್ಮವೆತ್ತಿ ತಪಸ್ಸು ಮಾಡುತ್ತಿರುವಳು. ಆಕೆಯನ್ನು ವರಿಸಿ, ಭರತಖಂಡದಲ್ಲಿ ಎಸಗಿದ ತಪಸ್ಸಿಗೆ ಫಲವು ಸಿದ್ಧವೆಂಬುದನ್ನು ಎಲ್ಲರಿಗೂ ಮನಗಾಣಿಸು. ಕ್ರಮವಾಗಿ ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಿಯಾಗಿ ಮುಕ್ತಿಹೊಂದು. ವಿಷ್ಣುಭಕ್ತನಾದ ನೀನು ಎಲ್ಲಿದ್ದರೂ ಭಕ್ತಿಯಿಂದ ಹರಿಯ ಅರ್ಚನೆಯನ್ನು ಮಾಡಿ ಮುಕ್ತಿ ಹೊಂದಬಹುದು. ಆಶ್ರಮಗಳಲ್ಲೆಲ್ಲಾ ಗೃಹಸ್ಥಾಶ್ರಮವೇ ಉತ್ತಮವಾದುದು. ಅತಿಥಿ ಅಭ್ಯಾಗತರ ಸತ್ಕಾರದಿಂದ ಧರ್ಮವನ್ನೂ, ಕುಟುಂಬ ಪೋಷಣೆಗಾಗಿ ಅರ್ಥವನ್ನೂ, ವಿಷಯೇಂದ್ರಿಯಗಳ ತೃಪ್ತಿಯಿಂದ ಕಾಮವನ್ನೂ ಯಥೇಚ್ಛವಾಗಿ ಪಡೆಯಬಹುದು. ಪತ್ನೀಪುತ್ರರಿಂದ ಉಂಟಾ

ಗುವ ಸುಖವು ಸ್ವರ್ಗಸುಖಕ್ಕೆ ಎಣೆಯೆಂದು ಬಲ್ಲವರು ಹೇಳುವರು. (‘ ವಿಷಯೇಷ್ವಪಿಲಬ್ಧೇಷು ತದಿಚ್ಛೋಪರಮೇ ಸತಿ । ಅಂತರ್ಮುಖ ಮನೋವೃತ್ತ್ಯಾವಾನಂದಃ ಪ್ರತಿಭಿಂಬತಿ ॥ ’) ಎಂದರೆ ವಿಷಯ ಸುಖಾನುಭವದಿಂದ ವಿಷಯೇಚ್ಛೆಯು ಶಾಂತವಾಗಿ ಮನಸ್ಸು ಅಂತರ್ಮುಖವಾದಾಗ ಆತ್ಮಜ್ಞಾನವು ಸುಲಭವಾಗುವುದು. ಆದ್ದರಿಂದ ನೀನು ಸಂಸಾರಿಯಾಗು’ ಎಂದು ನುಡಿದ ತಂದೆಯ ಮಾತನ್ನು ಕೇಳಿ ನಾರದನು “ ಕ್ಷಣಿಕಸುಖದಾಯಕವಾದ ಸಂಸಾರದಲ್ಲಿ ಪ್ರೇರಿಸುವುದು, ಪುತ್ರಹಿತಕಾರಿಯಾದ ತಂದೆಗೆ ಉಚಿತವಲ್ಲವೆಂದೂ, ಉತ್ತಮವಾದ ಮಾನವ ಜನ್ಮವನ್ನು ಪಡೆದೂ, ಹರಿದಾಸನಾಗದೆ ಸಂಸಾರದಲ್ಲಿ ಮುಳುಗಿ ತೊಳಲುವುದು ಮೂಢತನವೆಂದೂ’ ವೇದೋಕ್ತವಾಗಿದ್ದರೂ, ಪಿತೃವಾದ ನಿನ್ನ ಆಜ್ಞೆಯನ್ನು ಪರಿಪಾಲಿಸಲು ನಾನು ಮೊದಲು ಬದರಿಕಾಶ್ರಮಕ್ಕೆ ಹೋಗಿ ನಾರಾಯಣ ಋಷಿಯ ಕಥೆಯನ್ನು ಕೇಳಿ ತಿಳಿದು ಅನಂತರ ಗೃಹಸ್ಥನಾಗುವೆನು ನನಗೆ ಶ್ರೀಕೃಷ್ಣನ ಮಂತ್ರವನ್ನಾದರೂ ಉಪದೇಶಿಸು. ಅದರ ಶಕ್ತಿಯಿಂದ ಸಂಸಾರಸಾಗರದಿಂದ ಉತ್ತೀರ್ಣನಾಗುವೆನು” ಎಂದು ನುಡಿದನು. ಬ್ರಹ್ಮದೇವನು ತಂದೆಯು ಮಗನಿಗೂ, ಗಂಡನು ಹೆಂಡತಿಗೂ, ಮಂತ್ರೋಪದೇಶ ಮಾಡಕೂಡದೆಂದೂ, ನೀನು ಗುರುವಾದ ಮಹಾದೇವನಿಂದಲೇ ಮಂತ್ರೋಪದೇಶವನ್ನು ಹೊಂದುವುದು ನ್ಯಾಯವೆಂದೂ ಹೇಳಿ ಮಗನನ್ನು ಬೀಳ್ಕೊಟ್ಟನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

|| ಪಂಚವಿಂಶತಿತಮೋಽಧ್ಯಾಯಃ ||

|| ಸೌತಿರುವಾಚ ||

ಕ್ಷಣೇನ ವಿಪ್ರಪ್ರವರೋ ಮುದಾನ್ವಿತೋ
ಜಗಾಮ ಶಂಭೋಃ ಸದನಂ ಮನೋಹರಂ ।
ಊರ್ಧ್ವಂ ಧ್ರುವಾದ್ಯೋಜನಲಕ್ಷಮಿಪ್ಸಿತಂ
ಮಹಾರ್ಘರತ್ನೌಘವಿನಿರ್ಮಿತಂ ಮಹತ್ || ೧ ||

ನಿರಾಶ್ರಯೋ ಯೋಗಬಲೇನ ಶಂಭುನಾ
ಧೃತಂ ವಿಚಿತ್ರಂ ವಿವಿಧಾಲಯಾನ್ವಿತಂ ।
ದೃಷ್ಟಂ ಸುಪುಣ್ಯಾಶಯಸಾಧಕೈರ್ವರೈ
ರ್ಮುನೀಂದ್ರವರ್ಯೈಃ ಪರಿಪೂರಿತಂ ಶುಭಂ || ೨ ||

ಇಪ್ಪತ್ತೈದನೆಯ ಅಧ್ಯಾಯವು

ಸೂತಪುತ್ರ :—ಸಂತುಷ್ಟನಾದ ನಾರದಮುನಿಯು, ಧ್ರುವಲೋಕಕ್ಕಿಂತ ಲಕ್ಷಯೋಜನ ಮೇಲುಭಾಗದಲ್ಲಿರುವ ಶಿವಲೋಕದಲ್ಲಿ ಅನರ್ಘ್ಯರತ್ನಗಳಿಂದ ನಿರ್ಮಿತವೂ, ಮನೋಹರವೂ ಆಗಿದ್ದ ಶಂಕರನ ಮಂದಿರಕ್ಕೆ–ಯೋಗಶಕ್ತಿಯಿಂದ ಕ್ಷಣಮಾತ್ರದಲ್ಲಿ ಹೋಗಿ ಸೇರಿದನು.

೨. ಮೂಲಾಧಾರವಿಲ್ಲದ ಆ ಮಂದಿರವನ್ನು ಶಂಭುವು ತನ್ನ ಯೋಗಶಕ್ತಿಯಿಂದಲೇ ಧರಿಸಿದ್ದನು. ಆ ಮಂದಿರವು ವಿವಿಧಾಲಯಗಳಿಂದಲೂ, ಋಷಿವರ್ಯರಿಂದಲೂ ಪರಿಪೂರಿತವಾಗಿತ್ತು. ಪುಣ್ಯಕರ್ಮಿಗಳಾದ ಯೋಗಿಗಳು ಮಾತ್ರ ಕಾಣಬಹುದಾದ ಮಂದಿರವದು.

ಮಯೂಖಶೂನ್ಯಂ ರವಿಚಂದ್ರಯೋರ್ಮುನೇ
　　ಹುತಾಶನೈರ್ವೇಷ್ಟಿತಮೇವ ಕೇವಲಂ ।
ಪ್ರಾಕಾರರೂಪೈರತಿರಿಕ್ತವರ್ಧಿತೈ
　　ರುಚ್ಚೈರಸಂಖ್ಯಾಪ್ರಮಿತೈಃ ಶಿಖೋಜ್ಜ್ವಲೈಃ　　॥ ೩ ॥

ಪುರಂ ವರಂ ಯೋಜನಲಕ್ಷವಿಸ್ತೃತಂ
　　ತ್ರಿಕೋಟಿರತ್ನೇಂದ್ರಗೃಹಾನ್ವಿತಂ ಸದಾ ।
ವಿರಾಜಿತಂ ಹೀರಕಸಾರನಿರ್ಮಿತೈ
　　ಶ್ಚಿತ್ರೈರ್ವಿಚಿತ್ರೈರ್ವಿವಿಧೈರ್ಮನೋಹರೈಃ　　॥ ೪ ॥

ಮಾಣಿಕ್ಯಮುಕ್ತಾಮಣಿದರ್ಪಣೈರ್ಯುತಂ
　　ನ ಸ್ವಪ್ನದೃಷ್ಟಂ ದ್ವಿಜ ವಿಶ್ವಕರ್ಮಣಃ ।
ಆಕಲ್ಪಮೇಕೈಃ ಶಿವಸೇವಿತೈರ್ಜನೈ
　　ರ್ನಿಷೇವಿತಂ ಸಂತತಮೇವ ಶೌನಕ　　॥ ೫ ॥

---

೩. ಆ ಪರಶಿವನ ಮಂದಿರಕ್ಕೆ ಸೂರ್ಯಚಂದ್ರರ ಬೆಳಕು ಅವಶ್ಯಕವಿರಲಿಲ್ಲ. ಅಗ್ನಿದೇವನು ತನ್ನ ಅಪರಿಮಿತ ಜ್ವಾಲೆಗಳಿಂದ ಕೋಟೆಯಂತೆ ಸುತ್ತಲೂ ಆ ಮಂದಿರವನ್ನು ಆವರಿಸಿಕೊಂಡು ಬೆಳಗುತ್ತಿದ್ದನು.

೪. ಆ ಶಂಕರನ ಪಟ್ಟಣವೂ ಕೂಡ ಲಕ್ಷಯೋಜನವಿಸ್ತೀರ್ಣವಾಗಿ, ರತ್ನನಿರ್ಮಿತವಾದ ಮೂರುಕೋಟಿ ಗೃಹಗಳಿಂದ ತುಂಬಿದ್ದಿತು. ಆ ಮನೆಗಳಲ್ಲಿ ಉತ್ತಮವಾದ ವಜ್ರವೈಡೂರ್ಯಾದಿ ರತ್ನಗಳನ್ನು ಮೆಟ್ಟಿ ಚಿತ್ರ-ವಿಚಿತ್ರವಾದ ಕೆಲಸಗಳನ್ನು ಮಾಡಿತ್ತು.

೫. ಮುತ್ತುಮಾಣಿಕ್ಯಗಳಿಂದಲೂ, ರತ್ನಕನ್ನಡಿಗಳಿಂದಲೂ ಶೋಭಿಸುತ್ತಿದ್ದ ಅಂಥ ಪಟ್ಟಣವನ್ನು, ದೇವತೆಗಳ ಶಿಲ್ಪಿಯಾದ ವಿಶ್ವಕರ್ಮನು ಸ್ವಪ್ನದಲ್ಲೂ ಕೂಡ ನೋಡಿರಲಾರನು. ಕಲ್ಪಕಾಲದವರೆಗೂ ಶಿವನ ಪಾರ್ಷದರು ಮಾತ್ರ ಎಡೆಬಿಡದೆ ಅಲ್ಲಿ ಪರಶಿವನನ್ನು ಸೇವಿಸಿಕೊಂಡಿದ್ದರು.

ಸಿದ್ಧೈರ್ನಿಯುಕ್ತಂ ಶತಕೋಟಿಲಕ್ಷಕೈ
ಸ್ತ್ರಿಕೋಟಿಲಕ್ಷೈಶ್ಚ ಯುತಂ ಸ್ವಪಾರ್ಷದೈಃ ।
ಯುಕ್ತಂ ತ್ರಿಲಕ್ಷೈರ್ವಿಕಟೈಶ್ಚ ಭೈರವೈಃ
ಕ್ಷೇತ್ರೈಶ್ಚತುರ್ಲಕ್ಷಶತೈಶ್ಚ ವೇಷ್ಟಿತಂ ॥ ೬ ॥

ಸುರದ್ರುಮೈರ್ವೇಷ್ಟಿತಮೇವ ಸಂತತಂ
ಮಂದಾರವೃಕ್ಷಪ್ರವರೈಃ ಸುಪುಷ್ಪಿತೈಃ ।
ವಿರಾಜಿತಂ ಸುಂದರಕಾಮಧೇನುಭಿ
ರ್ಯಥಾ ಬಲಾಕಾಶತಕೈರ್ನಭಸ್ಥಲಂ ॥ ೭ ॥

ದೃಷ್ಟ್ವಾ ಮುನಿರ್ವಿಸ್ಮಯಮಾಪ ಮಾನಸೇ
ಕಿಂ ನಾತ್ರ ಚಿತ್ರಂ ಸುರಯೋಗಿನಾಂ ಗುರೌ ।
ಲೋಕಂ ತ್ರಿಲೋಕಾಚ್ಚ ವಿಲಕ್ಷಣಂ ಪರಂ
ಭೀಮೃತ್ಯುರೋಗಾರ್ತಿಜರಾಹರಂ ವರಂ ॥ ೮ ॥

---

೬. ಅಲ್ಲಪ-ಅಲ್ಲಿ ನೂರುಕೋಟಿಲಕ್ಷ ಸಿದ್ಧಪುರುಷರೂ, ಮೂರುಕೋಟಿಲಕ್ಷ ಪಾರ್ಷದರೂ, ಮೂರುಲಕ್ಷ ವಿಕಟಾಕಾರವುಳ್ಳ ಭೈರವರೂ, ನಾನೂರುಲಕ್ಷ ಕ್ಷೇತ್ರಪಾಲರೂ ಪರಶಿವನ ಸೇವೆಗಾಗಿ ಕಾದಿದ್ದರು.

೭. ಚೆನ್ನಾಗಿ ಪುಷ್ಪಿತವಾದ ಪಾರಿಜಾತವೃಕ್ಷಗಳು ಪರಶಿವನ ಮಂದಿರದ ಸುತ್ತಲೂ ಶೋಭಿಸುತ್ತಿದ್ದವು. ನೂರಾರು ಹಾಲುಹಕ್ಕಿಗಳಿಂದ ಕೂಡಿದ ಆಕಾಶದಂತೆ ಸುಂದರವಾದ ಕಾಮಧೇನುಗಳಿಂದ ಆ ಮಂದಿರವು ಮನೋಹರವಾಗಿದ್ದಿತು.

೮. ಆ ದಿವ್ಯಮಂದಿರವನ್ನು ನೋಡಿ ನಾರದಮುನಿಗೆ ಬಹಳ ಆಶ್ಚರ್ಯವಾಯಿತು. ದೇವತೆಗಳಿಗೂ ಮತ್ತು ಯೋಗಿಗಳಿಗೂ ಗುರುವಾದ ಪರಶಿವನ ಲೋಕದಲ್ಲಿ ಆಶ್ಚರ್ಯವಿಲ್ಲದುದು ಯಾವುದು? ಭಯರೋಗಗಳ ಮತ್ತು ಜರಾಮರಣಗಳ ನಾಶಕವಾದ ಆ ಲೋಕವೇ ತ್ರಿಲೋಕಕ್ಕಿಂತಲೂ ವಿಲಕ್ಷಣವಾಗಿತ್ತು.

ದೂರೇ ಸಭಾಮಂಡಲಮಧ್ಯಗಂ ಶಿವಂ
ದದರ್ಶ ಶಾಂತಂ ಶಿವದಂ ಮನೋಹರಂ ।
ಪದ್ಮತ್ರಿನೇತ್ರಂ ವಿಧುಪಂಚವಕ್ತ್ರಕಂ
ಗಂಗಾಧರಂ ನಿರ್ಮಲ ಚಂದ್ರಶೇಖರಂ ॥ ೯ ॥

ಪ್ರತಪ್ತ ಹೇಮಾಭಜಟಾಧರಂ ವಿಭುಂ
ದಿಗಂಬರಂ ಶುಭ್ರಮನಂತಮಕ್ಷರಂ ।
ಮಂದಾಕಿನೀ ಪುಷ್ಕರಬೀಜಮಾಲಯಾ
ಕೃಷ್ಣೇತಿ ನಾಮ್ನೈವ ಮುದಾ ಜಪಂತಂ ॥ ೧೦ ॥

ಸುನೀಲಕಂಠಂ ಭುಜಗೇಂದ್ರಮಂಡಿತಂ
ಯೋಗೀಂದ್ರಸಿದ್ಧೇಂದ್ರಮುನೀಂದ್ರವಂದಿತಂ ।
ಸಿದ್ಧೇಶ್ವರಂ ಸಿದ್ಧಿವಿಧಾನಕಾರಣಂ
ಮೃತ್ಯುಂಜಯಂ ಕಾಲಯಮಾಂತಕಾರಕಂ ॥ ೧೧ ॥

---

೯. ಆ ಮಂದಿರವನ್ನು ಪ್ರವೇಶಿಸಿ, ಸಭಾಮಂಟಪದ ಮಧ್ಯದಲ್ಲಿ ಕುಳಿತಿರುವ, ಚಂದ್ರನಂತೆ ಆಹ್ಲಾದಕಗಳಾದ ಐದು ಮುಖಗಳಿಂದಲೂ ತಾವರೆಯಂತೆ ವಿಶಾಲಗಳಾದ ಮೂರು ಕಣ್ಣುಗಳಿಂದಲೂ ಮನೋಹರವಾದ, ಶಿರಸ್ಸಿನಲ್ಲಿ ಗಂಗೆಯನ್ನೂ ಮತ್ತು ಬಾಲಚಂದ್ರನನ್ನೂ ಧರಿಸಿರುವ, ಪರಶಿವನ ಮಂಗಳಮೂರ್ತಿಯನ್ನು ನೋಡಿದನು.

೧೦. ಶಿರಸ್ಸಿನಲ್ಲಿ ಪುಟಕ್ಕೆ ಹಾಕಿದ ಚಿನ್ನದಂತೆ ಹೊಂಬಣ್ಣವಾದ ಜಟೆಗಳನ್ನು ಧರಿಸಿ, ದಿಗಂಬರನಾಗಿರುವ ಮತ್ತು ನಾಶರಹಿತನಾದ ಆ ಶಂಕರನು, ಮಂದಾಕಿನಿಯಲ್ಲಿ ಬೆಳೆದ ತಾವರೆ ಮಣಿಯ ಮಾಲೆಯೊಂದನ್ನು ಕೈಯಲ್ಲಿ ಹಿಡಿದು 'ಕೃಷ್ಣ' ಎಂಬ ದಿವ್ಯನಾಮವನ್ನು ಸಂತೋಷದಿಂದ ಜಪಿಸುತ್ತಾ ಕುಳಿತಿದ್ದನು.

೧೧ ಮೃತ್ಯುವನ್ನು ಜಯಿಸಿದವನೂ, ಕಾಲಪುರುಷನಿಗೂ ಮತ್ತು ಯಮನಿಗೂ ಮೃತ್ಯುಸ್ವರೂಪನೂ, ಎಲ್ಲರ ಇಷ್ಟಾರ್ಥಸಿದ್ಧಿಗೆ ಕಾರಣನೂ, ಸಿದ್ಧೇಶ್ವರನೂ, ನೀಲಕಂಠನೂ, ಸರ್ಪಗಳಿಂದ ಅಲಂಕೃತನೂ ಆದ ಶಿವನು ಶ್ರೇಷ್ಠರಾದ ಯೋಗಿಗಳಿಂದಲೂ, ಸಿದ್ಧರಿಂದಲೂ ಮತ್ತು ಮುನಿಗಳಿಂದಲೂ ಸೇವೆಯನ್ನು ಸ್ವೀಕರಿಸುತ್ತಿದ್ದನು.

ಪ್ರಸನ್ನಹಾಸ್ಯಾಸ್ಯ ಮನೋಹರಂ ವರಂ
ವಿಶ್ವಾಶ್ರಯಾಣಾಂ ಶಿವದಂ ವರಪ್ರದಂ।
ಸದಾಶುತೋಷಂ ಭವರೋಗವರ್ಜಿತಂ
ಭಕ್ತಪ್ರಿಯಂ ಭಕ್ತಜನೈಕಬಂಧುಂ ॥ ೧೨ ॥

ಗತ್ವಾ ಸಮೀಪಂ ಮುನಿರೇಷ ಶೂಲಿನಂ
ನನಾಮ ಮೂರ್ಧ್ನಾ ಪುಲಕಾಂಕವಿಗ್ರಹಂ।
ವೀಣಾಂ ತ್ರಿತಂತ್ರೀ ಕ್ವಣಯನ್ ಪುನರ್ಜಗೌ
ಕೃಷ್ಣಂ ಸ ತುಷ್ಟಾವ ಕಲಂ ಸುಕಂಠಃ ॥ ೧೩ ॥

ದೃಷ್ಟ್ವಾ ಮುನೀಂದ್ರಪ್ರವರಂ ಚ ಸಸ್ಮಿತಂ
ವಿಧೇಃ ಸುತಂ ವೇದವಿದಾಂ ವರಿಷ್ಠಂ।
ಯೋಗೀಂದ್ರಸಿದ್ಧೇಂದ್ರಮಹರ್ಷಿಭಿಃ ಸಹ
ಹರ್ಷೇಣ ಪೀಠಾದುದಪಶ್ಯದೀಶ್ವರಃ ॥ ೧೪ ॥

---

೧೨. ಭಕ್ತರಿಗೆ ಪ್ರಿಯನೂ ಮತ್ತು ಅನನ್ಯಬಂಧುವೂ, ಭವರೋಗರಹಿತನೂ, ಶರಣಾಗತರಿಗೆ ಶಿವಂಕರನೂ (ಮಂಗಳಕರನೂ) ಆದ ಆ ಪರಮೇಶ್ವರನು ಪ್ರಸನ್ನನಾಗಿ ನಗುತ್ತ ಕುಳಿತಿರುವುದನ್ನು ನಾರದನು ದೂರದಿಂದಲೇ ನೋಡಿದನು.

೧೩. ಆನಂದದಿಂದ ರೋಮಾಂಚಿತಶರೀರನಾದ ನಾರದಮುನಿಯು ಶೂಲಿಯ (ಶಿವನ) ಸಮೀಪಕ್ಕೆ ಹೋಗಿ ಸಾಷ್ಟಾಂಗವೆರಗಿದನು. ಮತ್ತು ಮೂರುತಂತಿಯ ವೀಣೆಯನ್ನು ನುಡಿಸುತ್ತಾ ಇಂಪಾದ ಧ್ವನಿಯಿಂದ ತಾನೂ ಕೃಷ್ಣಪರಮಾತ್ಮನನ್ನು ಸ್ತುತಿಸಲಾರಂಭಿಸಿದನು.

೧೪. ಬ್ರಹ್ಮಪುತ್ರನೂ, ವೇದಾಧ್ಯಾಯಿಗಳಲ್ಲಿ ಅಗ್ರಗಣ್ಯನೂ, ಮುನಿಶ್ರೇಷ್ಠನೂ ಆದ ಆ ನಾರದನನ್ನು ನೋಡಿ, ಶ್ರೇಷ್ಠರಾದ ಯೋಗಿಗಳು, ಸಿದ್ಧರು ಮತ್ತು ಮುನಿಗಳೊಡನೆ ಸಂತುಷ್ಟನಾದ ಈಶ್ವರನು ಪೀಠದಿಂದೆದ್ದು ಇದಿರುಗೊಂಡನು.

ದದೌ ಚ ತಸ್ಮೈ ಮುನಯೇ ಸಸಂಭ್ರಮಾತ್
ಆಲಿಂಗನಂ ಚಾಶಿಷಮಾಸನಾದಿಕಂ ।
ಪಪ್ರಚ್ಛ ಭದ್ರಾಗಮನಪ್ರಯೋಜನಂ
ತಪೋಧನಂ ತಂ ತಪಸಾಂ ಚ ಶೌನಕ ॥ ೧೫ ॥

ಸದ್ರತ್ನಸಿಂಹಾಸನ ಸುಂದರೇ ಪರ
ಶ್ಚೋಪವಾಸ ಶಂಭುರ್ವರಪಾರ್ಷದೈಃ ಸಹ ।
ನೋಪವಾಸ ಧಾತುಸ್ತನಯಃ ಕೃತಾಂಜಲಿ
ಸ್ತುಷ್ಟಾವ ಭಕ್ತ್ಯಾ ಪ್ರಣತಃ ಪ್ರಭುಂ ದ್ವಿಜ ॥ ೧೬ ॥

ಗಂಧರ್ವರಾಜೇನ ಕೃತೇನ ನಾರದ
ಸ್ತೋತ್ರೇಣ ರಮ್ಯೇಣ ಶುಭಪ್ರದೇನ ಚ ।
ಸ್ತುತ್ವಾ ಪ್ರಣಾಮಂ ಪುನರೇವ ಕೃತ್ವಾ
ಭವಾಜ್ಞಯೋಪವಾಸ ಭವಸ್ಯ ವಾಮತಃ ॥ ೧೭ ॥

---

೧೫. ಬಹಳ ಸಂಭ್ರಮದಿಂದ ನಾರದಮುನಿಯನ್ನು ಆಲಂಗಿಸಿಕೊಂಡು, ಆಶೀರ್ವದಿಸಿ, ಪೀಠದಲ್ಲಿ ಕುಳ್ಳಿರಿಸಿ, ತಪಸ್ವಿಶ್ರೇಷ್ಠನಾದ ಆತನು ತನ್ನ ಸಮೀಪಕ್ಕೆ ಬಂದ ಪ್ರಯೋಜನವೇನೆಂದು ಪರಮೇಶ್ವರನು ಕೇಳಿದನು.

೧೬. ಅನಂತರ ಪರಶಿವನು ತನ್ನ ಪಾರ್ಷದರೊಡನೆ ಸುಂದರವಾದ ರತ್ನ ಸಿಂಹಾಸನದಲ್ಲಿ ಮಂಡಿಸಿದನು. ಬ್ರಹ್ಮಪುತ್ರನಾದ ನಾರದನಾದರೋ ಪೀಠದಲ್ಲಿ ಕುಳಿತುಕೊಳ್ಳದೆ, ಬಹಳ ಭಕ್ತಿವಿನಯಗಳಿಂದ ಶಂಕರನಿಗೆರಗಿ ಕೈಮುಗಿದುಕೊಂಡು ಸ್ತುತಿಸಲಾರಂಭಿಸಿದನು.

೧೭. ಗಂಧರ್ವರಾಜನು ರಚಿಸಿದ-ರಮ್ಯವೂ, ಮಂಗಳಕರವೂ ಆದ ಸ್ತೋತ್ರದಿಂದ ಪರಮೇಶ್ವರನನ್ನು ಮೆಚ್ಚಿಸಿ, ಪುನಃ ಸಾಷ್ಟಾಂಗವೆರಗಿ ಅಪ್ಪಣೆಯನ್ನು ಪಡೆದು ನಾರದನು ಅವನ ವಾಮಭಾಗದಲ್ಲಿ (ಎಡಭಾಗ) ಕುಳಿತುಕೊಂಡನು.

ಚಕಾರ ತತ್ರೈವ ನಿವೇದನಂ ಶಿವೇ
ಮನೋಭಿಲಾಷಂ ನಿಜಕಾಮಪೂರಕೇ ।
ಶ್ರುತ್ವಾ ಮುನೇಸ್ತದ್ವಚನಂ ಕೃಪಾನಿಧಿ
ರ್ದ್ರುತಂ ಪ್ರತಿಜ್ಞಾಯ ಚಕಾರ ಚೋಮಿತಿ ॥ ೧೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಸೌತಿಶೌನಕ ಸಂವಾದೇ ಕೈಲಾಸಂ ಪ್ರತಿ ನಾರದಗಮನಂ ನಾಮ ಪಂಚವಿಂಶತಿತಮೋಽಧ್ಯಾಯಃ

---

೧೮. ಅನಂತರ ತನ್ನ ಇಷ್ಟಾರ್ಥವನ್ನು ಪೂರ್ಣಗೊಳಿಸಬಲ್ಲ ಪರಶಿವನು ತನ್ನ ಮನಸ್ಸಿನ ಅಭಿಲಾಷೆಯನ್ನು ಬಿನ್ನವಿಸಿಕೊಂಡನು. ದಯಾಮಯನಾದ ಪರಶಿವನೂ ಕೂಡ ನಾರದಮುನಿಯ ಸದಭಿಲಾಷೆಯನ್ನು ತಿಳಿದು ಅದನ್ನು ಕೈಗೂಡಿಸುವುದಾಗಿ ಪ್ರತಿಜ್ಞೆಮಾಡಿದನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದಲ್ಲಿ ಕೈಲಾಸಪರ್ವತವನ್ನು ಕುರಿತು ನಾರದನು ಪ್ರಯಾಣಮಾಡಿದ್ದನ್ನು ವರ್ಣಿಸುವ ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೈದನೆಯ ಅಧ್ಯಾಯದ ಸಾರಾಂಶವು

ತಂದೆಯ ಅಪ್ಪಣೆ ಪಡೆದು ಹೊರಟ ಮುನಿಯು–ಧ್ರುವಲೋಕಕ್ಕಿಂತಲೂ ಬಹಳ ಮೇಲಿರುವ ಶಿವಲೋಕವನ್ನು ಯೋಗಶಕ್ತಿಯಿಂದ ಕ್ಷಣಮಾತ್ರದಲ್ಲಿ ಸೇರಿದನು. ಅಲ್ಲಿ ತ್ರಿನೇತ್ರನೂ, ಪಂಚವಕ್ತ್ರನೂ, ಗಂಗಾಧರನೂ, ಚಂದ್ರಶೇಖರನೂ ಆದ ಪರಶಿವನು, ಅನೇಕ ಸಿದ್ಧರಿಂದಲೂ, ಪಾರ್ಷದರಿಂದಲೂ ಸೇವಿತನಾಗಿ, ಮನೋಹರವಾದ ಮಂದಿರದ ಮಧ್ಯಭಾಗದ ಮಣಿಪೀಠದಲ್ಲಿ ಮಂಡಿಸಿದ್ದನು. ಬಂದ ಮುನಿಯನ್ನು ಕಂಡು ಶಂಕರನು ಇದಿರೆದ್ದು ಆಲಂಗಿಸಿಕೊಂಡು, ಆಸನಾದಿಗಳಿಂದ ಉಪಚರಿಸಲು ನಾರದಮುನಿಯು ಶಂಕರನಿಗೆ ಸಾಷ್ಟಾಂಗವೆರಗಿ– ಬಹಳ ಭಕ್ತಿ ವಿನಯಗಳಿಂದ ಸ್ತುತಿಸಿ, ಮೆಚ್ಚಿಸಿ, ತನ್ನ ಮನೋಭಿಲಾಷೆಯನ್ನು ಬಿನ್ನವಿಸಿದನು. ತುಷ್ಟನಾದ ಪರಮೇಶ್ವರನೂ ಇಷ್ಟಾರ್ಥವನ್ನು ಸಲ್ಲಿಸುವುದಾಗಿ ಮಾತುಕೊಟ್ಟನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಷಡ್ವಿಂಶತಿತಮೋಽಧ್ಯಾಯಃ ॥

॥ ಸೌತಿರುವಾಚ ॥

ಹರಿಸ್ತೋತ್ರಂ ಚ ಕವಚಂ ಮಂತ್ರಂ ಪೂಜಾವಿಧಿಂ ಪರಂ ।
ಹರಂ ಯಯಾಚೇ ದೇವರ್ಷಿರ್ಧ್ಯಾನಂ ಚ ಜ್ಞಾನಮೇವ ಚ ॥ ೧ ॥

ಸ್ತೋತ್ರಂ ಚ ಕವಚಂ ಮಂತ್ರಂ ಧ್ಯಾನಂ ಪೂಜಾವಿಧಿಂ ತಥಾ ।
ತತ್ಪ್ರಾಕ್ತನೀಯಜ್ಞಾನಂ ಚ ದದೌ ತಸ್ಮೈ ಮಹೇಶ್ವರಃ ॥ ೨ ॥

ಇಪ್ಪತ್ತಾರನೆಯ ಅಧ್ಯಾಯವು

೧. ಸೂತಪುತ್ರ :—ದೇವರ್ಷಿಯಾದ ನಾರದನು, ಶ್ರೀಕೃಷ್ಣಪರಮಾತ್ಮನನ್ನು ಮೆಚ್ಚಿಸುವ ಸ್ತೋತ್ರಮಂತ್ರಗಳನ್ನೂ, ಜ್ಞಾನಧ್ಯಾನಗಳನ್ನೂ, ಕವಚ ಮತ್ತು ಪೂಜಾವಿಧಿಯನ್ನೂ ಉಪದೇಶಿಸಬೇಕೆಂದು ಹರನನ್ನು ಬೇಡಿದನು.

೨. ಮಹೇಶ್ವರನು ನಾರದನ ಪ್ರಾರ್ಥನೆಯಂತೆ ಸ್ತೋತ್ರಾದಿಗಳೆಲ್ಲವನ್ನೂ ಅವನಿಗೆ ಉಪದೇಶಿಸಿ, ಜನ್ಮಾಂತರದ ನೆನಪು ಬರುವಂತೆ ಮಾಡಿದನು.

ಸರ್ವಂ ಪ್ರಾಪ್ಯ ಮುನಿಶ್ರೇಷ್ಠಃ ಪರಿಪೂರ್ಣ ಮನೋರಥಃ ।
ಉವಾಚ ಪ್ರಣತೋ ಭಕ್ತ್ಯಾ ಗುರುಂ ಪ್ರಣತವತ್ಸಲಂ ॥ ೩ ॥

॥ ನಾರದ ಉವಾಚ ॥

ಆಹ್ನಿಕಂ ಬ್ರಾಹ್ಮಣಾನಾಂ ಚ ವದ ವೇದವಿದಾಂ ವರ ।
ಸ್ವಧರ್ಮಪಾಲನಂ ನಿತ್ಯಂ ಯತೋ ಭವತಿ ನಿತ್ಯಶಃ ॥ ೪ ॥

॥ ಶ್ರೀ ಮಹೇಶ್ವರ ಉವಾಚ ॥

ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ಬ್ರಹ್ಮರಂಧ್ರಸ್ಥ ಪಂಕಜೇ ।
ಸೂಕ್ಷ್ಮೇ ಸಹಸ್ರಪತ್ರೇ ಸ್ವೇ ನಿರ್ಮಲೇ ಗ್ಲಾನಿವರ್ಜಿತೇ ॥ ೫ ॥

ರಾತ್ರಿವಾಸಂ ಪರಿತ್ಯಜ್ಯ ಗುರುಂ ತತ್ರೈವ ಚಿಂತಯೇತ್ ।
ವ್ಯಾಖ್ಯಾಮುದ್ರಾಕರಂ ಪ್ರೀತಂ ಸಸ್ಮಿತಂ ಶಿಷ್ಯವತ್ಸಲಂ ॥ ೬ ॥

---

೩. ತನ್ನ ಇಷ್ಟಾರ್ಥವೆಲ್ಲವನ್ನೂ ಹೊಂದಿ ಪೂರ್ಣಮನೋರಥನಾದ ಮುನಿಯು, ಶರಣಾಗತವತ್ಸಲನೂ, ತನ್ನ ಗುರುವೂ ಆದ ಶಂಕರನಿಗೆ ಭಕ್ತಿಯಿಂದ ವಂದಿಸಿ, ವಿನಯದಿಂದ ಕೆಲವು ಮಾತುಗಳನ್ನಾಡಿದನು.

೪. ನಾರದ:—ಎಲೈ, ವೇದಜ್ಞರಲ್ಲಿ ವರಿಷ್ಠನಾದ ಶಂಕರನೇ ! ಬ್ರಾಹ್ಮಣರು ತಮ್ಮ ನಿತ್ಯಕರ್ಮಗಳನ್ನು (ಆಹ್ನಿಕಗಳನ್ನು) ಯಾವ ರೀತಿಯಲ್ಲಿ ಆಚರಿಸಿದರೆ ತಮ್ಮ ಧರ್ಮವನ್ನು ಕಾಪಾಡಿಕೊಳ್ಳಬಹುದೆಂಬುದನ್ನು ದಯವಿಟ್ಟು ನನಗೆ ತಿಳಿಸಬೇಕು.

೫–೬. ಶ್ರೀಮಹೇಶ್ವರ:—ಅತ್ಯಂತ ಸೂಕ್ಷ್ಮವೂ, ಸಹಸ್ರದಳಯುತವೂ ಆದ ಬ್ರಹ್ಮರಂಧ್ರದ ಕಮಲವು ನಿರ್ಮಲವೂ, ವಿಕಾಸಯುತವೂ ಆಗುವ ಬ್ರಾಹ್ಮ ಮುಹೂರ್ತ (ರಾತ್ರಿಯ ಕೊನೆಯ ಜಾವ)ದಲ್ಲಿ ಮನುಜನು ಹಾಸಿಗೆಯಿಂದೆದ್ದು, ರಾತ್ರಿಯುಟ್ಟ ಬಟ್ಟೆಗಳನ್ನು ತೆಗೆದು ಶುಭ್ರವಸ್ತ್ರಧಾರಣೆಮಾಡಿ, ಪ್ರಸನ್ನವದನನೂ, ಶಿಷ್ಯವತ್ಸಲನೂ, ದಕ್ಷಿಣಾಮೂರ್ತಿಯಂತೆ (ವ್ಯಾಖ್ಯಾಮುದ್ರಾ) ಹೆಬ್ಬೆರಳು ಮತ್ತು

ಪ್ರಸನ್ನವದನಂ ಶಾಂತಂ ಪರಿತುಷ್ಟಂ ನಿರಂತರಂ ।
ಸಾಕ್ಷಾದ್ಬ್ರಹ್ಮಸ್ವರೂಪಂ ಚ ಪರಮಂ ಚಿಂತಯೇತ್ಸದಾ ॥ ೭ ॥

ಧ್ಯಾತ್ವೈವಂ ಗುರುಮಾರಾಧ್ಯ ಹೃತ್ಪದ್ಮೇ ನಿರ್ಮಲೇ ಸಿತೇ ।
ಸಹಸ್ರಪತ್ರೇ ವಿಸ್ತೀರ್ಣೇ ದೇವಮಿಷ್ಟಂ ವಿಚಿಂತಯೇತ್ ॥ ೮ ॥

ಯಸ್ಯ ದೇವಸ್ಯ ಯದ್ಧ್ಯಾನಂ ಯದ್ರೂಪಂ ತದ್ವಿಚಿಂತಯೇತ್ ।
ಗೃಹೀತ್ವಾ ತದನುಜ್ಞಾಂ ಚ ಕರ್ತವ್ಯಂ ಸಮಯೋಚಿತಂ ॥ ೯ ॥

ಆದೌ ಧ್ಯಾತ್ವಾ ಗುರುಂ ನತ್ವಾ ಸಂಪೂಜ್ಯ ವಿಧಿಪೂರ್ವಕಂ ।
ಪಶ್ಚಾತ್ತದಾಜ್ಞಾಮಾದಾಯ ಧ್ಯಾಯೇದಿಷ್ಟಂ ಪ್ರಪೂಜಯೇತ್ ॥ ೧೦ ॥

ಗುರುಪ್ರದರ್ಶಿತೋ ದೇವೋ ಮಂತ್ರಪೂಜಾವಿಧಿರ್ಜಪಃ ।
ನ ದೇವೇನ ಗುರುರ್ದೃಷ್ಟಸ್ತಸ್ಮಾದ್ದೇವಾದ್ಗುರುಃ ಪರಃ ॥ ೧೧ ॥

ತೋರುಬೆರಳುಗಳ ತುದಿಯನ್ನು ಕೂಡಿಸಿಕೊಂಡಿರುವ ಬಲಗೈಯುಳ್ಳವನೂ, ಸರ್ವದಾ ಶಾಂತಿ ಮತ್ತು ತುಷ್ಟಿಯುತನೂ, ಸಾಕ್ಷಾತ್ ಬ್ರಹ್ಮಸ್ವರೂಪನೂ ಆದ ಪರಮಗುರುವನ್ನು ಮನಸ್ಸಿನಲ್ಲಿ ಭಕ್ತಿಯಿಂದ ಧ್ಯಾನಮಾಡಬೇಕು.

೮. ಇಂತಹ ಗುರುವನ್ನು ಧ್ಯಾನಪೂರ್ವಕವಾಗಿ ಪೂಜಿಸಿ, ನಿರ್ಮಲವೂ, ಧವಳ (ಬಿಳುಪು)ವೂ, ವಿಕಸಿತ ಸಹಸ್ರದಳವೂ ಆದ ಹೃದಯಾರವಿಂದದಲ್ಲಿ ಇಷ್ಟ ದೇವರನ್ನು ಧ್ಯಾನಿಸಬೇಕು.

೯. ತನಗೆ ಅಭಿಮತವಾದ ದೇವತಾರೂಪವನ್ನು ಧ್ಯಾನಿಸಿದನಂತರ, ಆ ದೇವತೆಯ ಅಪ್ಪಣೆ ಬೇಡಿ ಕಾಲೋಚಿತವಾದ ಕಾರ್ಯವನ್ನು ನಡೆಸಬೇಕು.

೧೦. ವಿಧಿಪೂರ್ವಕವಾಗಿ ಗುರುವನ್ನು ಧ್ಯಾನಿಸಿ, ಪೂಜಿಸಿ, ನಮಿಸಿದನಂತರ ಆತನ ಅಪ್ಪಣೆಪಡೆದು ಇಷ್ಟದೇವತೆಯ ಧ್ಯಾನವನ್ನೂ, ಪೂಜೆಯನ್ನೂ ಮಾಡಬೇಕು.

೧೧. ಏಕೆಂದರೆ, ಗುರುವು ದೇವತಾಸ್ವರೂಪವನ್ನೂ, ಅದರ ಪೂಜಾವಿಧಿ, ಜಪ, ಮಂತ್ರ ಮುಂತಾದುವುಗಳನ್ನೂ ಉಪದೇಶಿಸುವನೇ ಹೊರತು, ದೇವತೆಯಿಂದ ನಮಗೆ ಗುರುವಿನ ಸ್ವರೂಪಜ್ಞಾನವಾಗುವುದಿಲ್ಲ. ಆದ್ದರಿಂದ ಗುರುವು ದೇವತೆಗಿಂತ ಶ್ರೇಷ್ಠನು.

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ।
ಗುರುಃ ಪ್ರಕೃತಿರೀಶಾದ್ಯಾ ಗುರುಶ್ಚಂದ್ರೋಽನಲೋ ರವಿಃ ॥ ೧೨ ॥

ಗುರುರ್ವಾಯುಶ್ಚ ವರುಣೋ ಗುರುರ್ಮಾತಾಪಿತಾ ಸುಹೃತ್ ।
ಗುರುರೇವ ಪರಂ ಬ್ರಹ್ಮ ನಾಸ್ತಿ ಪೂಜ್ಯೋ ಗುರೋಃ ಪರಃ ॥ ೧೩ ॥

ಅಭೀಷ್ಟದೇವೇ ರುಷ್ಟೇ ಚ ಸಮರ್ಥೋ ರಕ್ಷಣೇ ಗುರುಃ ।
ನ ಸಮರ್ಥೋ ಗುರೌ ರುಷ್ಟೇ ರಕ್ಷಣೇ ಸರ್ವದೇವತಾಃ ॥ ೧೪ ॥

ಯಸ್ಯ ತುಷ್ಟೋ ಗುರುಃ ಶಶ್ವಜ್ಜಯಸ್ತಸ್ಯ ಪದೇ ಪದೇ ।
ಯಸ್ಯ ರುಷ್ಟೋ ಗುರುಸ್ತಸ್ಯ ಸರ್ವನಾಶಶ್ಚ ಸರ್ವದಾ ॥ ೧೫ ॥

ನ ಸಂಪೂಜ್ಯ ಗುರುಂ ದೇವಂ ಯೋ ಮೂಢಃ ಪೂಜಯೇದ್ಭ್ರಮಾತ್ ।
ಬ್ರಹ್ಮಹತ್ಯಾಶತಂ ಪಾಪೀ ಲಭತೇ ನಾತ್ರ ಸಂಶಯಃ ॥ ೧೬ ॥

೧೨-೧೩. ಗುರುವನ್ನು ಬ್ರಹ್ಮವಿಷ್ಣುಮಹೇಶ್ವರರ ತ್ರಿಮೂರ್ತ್ಯಾತ್ಮಕನೆಂದು ತಿಳಿಯಬೇಕು. ಗುರುದೇವನಲ್ಲಿಯೇ ಪ್ರಕೃತಿದೇವಿಯೂ, ಚಂದ್ರಸೂರ್ಯರೂ, ಈಶ, ಅಗ್ನಿ, ವರುಣ, ವಾಯು ಮುಂತಾದ ದಿಕ್ಪಾಲಕರೂ. ಮಾತಾಪಿತೃಗಳೂ, ಮಿತ್ರರೂ ಅಭೇದದಿಂದಿರುವರು. ಹೆಚ್ಚು ಹೇಳುವುದರಿಂದೇನು? ಗುರುವೇ ಪರಬ್ರಹ್ಮನು. ಗುರುವಿಗಿಂತ ಪೂಜ್ಯನೂ ಮತ್ತು ಉತ್ತಮನೂ ಕೂಡ ಬೇರೊಬ್ಬರಿಲ್ಲ.

೧೪. ನಮ್ಮ ಇಷ್ಟದೇವರು ಕುಪಿತನಾದರೂ ಗುರುದೇವನು ರಕ್ಷಿಸಬಲ್ಲನು. ಗುರುದೇವನು ಕುಪಿತನಾದರೆ ಸಂಭವಿಸುವ ಕಷ್ಟದಿಂದ ಯಾವ ದೇವತೆಗಳೂ ಪಾರುಗಾಣಿಸಲಾರರು.

೧೫. ಗುರುದೇವನನ್ನು ಸೇವೆಯಿಂದ ತೃಪ್ತಿಪಡಿಸಿ, ಅವನ ಅನುಗ್ರಹವನ್ನು ಪಡೆದಾತನಿಗೆ ಎಲ್ಲ ಕಾರ್ಯಗಳಲ್ಲೂ ಜಯವು ಸಿದ್ಧಿಸುವುದು. ಆತನ ಆಗ್ರಹಕ್ಕೆ ಪಾತ್ರನಾದವನು ಎಲ್ಲೆಲ್ಲೂ ಭಂಗಹೊಂದುವನು.

೧೬. ಗುರುದೇವನನ್ನು ಮೊದಲು ಪೂಜಿಸದೆ ಇತರ ದೇವತೆಗಳನ್ನು ಪೂಜಿಸುವ ಮೂಢನು, ನೂರಾರು ಬ್ರಹ್ಮಹತ್ಯೆಗೆ ಸಮನಾದ ಪಾಪಕ್ಕೆ ಪಾತ್ರನಾಗುವುದರಲ್ಲಿ ಸಂಶಯವಿಲ್ಲ.

ಸಾಮವೇದೇ ಚ ಭಗವಾನಿತ್ಯುವಾ ಚ ಹರಿಃ ಸ್ವಯಂ ।
ತಸ್ಮಾದಭೀಷ್ಟದೇವಾಚ್ಚ ಗುರುಃ ಪೂಜ್ಯತಮಃ ಪರಃ ॥ ೧೭ ॥

ಗುರುಮಿಷ್ಟಂ ಸ್ವಯಂ ಧ್ಯಾತ್ವಾ ಸ್ತುತ್ವಾ ವೈ ಸಾಧಕೋ ಮುನೇ ।
ನಿರ್ಮಲಂ ಸ್ಥಲಮಾಸಾಧ್ಯ ವಿಣ್ಮೂತ್ರಂ ಹ್ಯುತ್ಸೃಜೇನ್ಮುದಾ ॥ ೧೮ ॥

ಜಲಂ ಜಲಸಮೀಪಂ ಚ ಸರಂಧ್ರಂ ಪ್ರಾಣಿಸನ್ನಿಧಿಂ ।
ದೇವಾಲಯಸಮೀಪಂ ಚ ವೃಕ್ಷಮೂಲಂ ಚ ವರ್ತ್ಮ ಚ ॥ ೧೯ ॥

ಹಲೋತ್ಕರ್ಷಸ್ಥಲಂ ಚೈವ ಸಸ್ಯಕ್ಷೇತ್ರಂ ಚ ಗೋಷ್ಠಕಂ ।
ನದೀಕಂದರಗರ್ಭಂ ಚ ಪುಷ್ಪೋದ್ಯಾನಂ ಚ ಪಂಕಿಲಂ ॥ ೨೦ ॥

ಗ್ರಾಮಾದ್ಯಭ್ಯಂತರಂ ಚೈವ ನೃಣಾಂ ಗೃಹಸಮೀಪಕಂ ।
ಶಂಕುಂ ಸೇತುಂ ಶರವಣಂ ಶ್ಮಶಾನಂ ವಹ್ನಿಸನ್ನಿಧಿಂ ॥ ೨೧ ॥

---

೧೭. 'ಇಷ್ಟದೇವತೆಗಿಂತ ಗುರುವು ಪೂಜ್ಯತಮನು' ಎಂಬುದನ್ನು ಸಾಮವೇದದಲ್ಲಿ ಹರಿಪರಮಾತ್ಮನೇ ಈ ರೀತಿಯಾಗಿ ಅಪ್ಪಣೆಕೊಡಿಸಿದ್ದಾನೆ.

೧೮. ಇಂತು ಸ್ವಧರ್ಮಪರಿಪಾಲನೆಯಲ್ಲಿ ನಿರತನಾದವನು ಗುರುವನ್ನೂ, ಇಷ್ಟದೇವತೆಯನ್ನೂ ಭಜಿಸಿ. ಅನಂತರ ಪರಿಶುದ್ಧವಾದ ಸ್ಥಳದಲ್ಲಿ, ಮಲಮೂತ್ರಗಳನ್ನು ವಿಸರ್ಜಿಸಬೇಕು.

೧೯-೨೧. ನೀರು ಮತ್ತು ನೀರಿನ ಸಮೀಪದಲ್ಲಿರುವ ಹಳ್ಳ ಕೊಳ್ಳಗಳು, ಪ್ರಾಣಿಗಳ ನಿವಾಸಸ್ಥಳ ಮತ್ತು ದೇವಾಲಯಗಳ ಸಮೀಪ, ಮರದ ಬುಡಪ್ರದೇಶ ಮತ್ತು ದಾರಿಯ ಮಧ್ಯಭಾಗ, 'ಉತ್ತುಬಿತ್ತಿರುವ ಹೊಲಗದ್ದೆಗಳು, ದನಗಳ ಕೊಟ್ಟಿಗೆ, ನದಿ ಮತ್ತು ಗುಹೆಗಳ ಮಧ್ಯಭಾಗ, ನೀರೆರೆದಿರುವ ಹೂದೋಟಗಳು. ಕೆಸರಿರುವ ಜಾಗಗಳು, ಊರಿನ ಒಳಭಾಗ ಮತ್ತು ಮನೆಗಳ ಸಮೀಪ, ಸೇತುವೆ, ಲಾಳದ ಗುತ್ತಿ, ಶ್ಮಶಾನ ಮತ್ತು ಬೆಂಕಿಯಿರುವ ಜಾಗಗಳು' ಇವಿಷ್ಟೂ ಮಲಮೂತ್ರ ವಿಸರ್ಜನೆಗೆ ಅನುಚಿತವಾದ ಸ್ಥಳಗಳು.

ಕ್ರೀಡಾಸ್ಥಲಂ ಮಹಾರಣ್ಯಂ ಮಂಚಕಾಧಃಸ್ಥಲಂ ತಥಾ ।
ವೃಕ್ಷಚ್ಛಾಯಾಯುತಂ ಸ್ಥಾನಮಂತಃ ಪ್ರಾಣ್ಯವಪರ್ಣಕಂ ॥ ೨೨ ॥

ದೂರ್ವಾಸ್ಥಾನಂ ಕುಶಸ್ಥಾನಂ ವಲ್ಮೀಕಸ್ಥಾನಮೇವ ಚ ।
ವೃಕ್ಷಾರೋಪಣಭೂಮಿಂ ಚ ಕಾರ್ಯಾರ್ಥಂ ಚ ಪರಿಷ್ಕೃತಂ ॥ ೨೩ ॥

ಏತತ್ಸರ್ವಂ ಪರಿತ್ಯಜ್ಯ ಸೂರ್ಯತಾಪವಿವರ್ಜಿತಂ ।
ಕೃತ್ವಾ ಗರ್ತಂ ಪುರೀಷಂ ಚ ಮೂತ್ರಂ ಚ ಪರಿವರ್ಜಯೇತ್ ॥ ೨೪ ॥

ಪುರೀಷಮೂತ್ರೋತ್ಸರ್ಗಂ ಚ ದಿವಾ ಕುರ್ಯಾದುದಙ್ಮುಖಃ ।
ಪಶ್ಚಿಮಾಭಿಮುಖೋ ರಾತ್ರೌ ಸಂಧ್ಯಾಯಾಂ ದಕ್ಷಿಣಾಮುಖಃ ॥ ೨೫ ॥

ಮೌನೀ ಭೂತ್ವಾ ಚ ನಿಶ್ವಾಸಂ ಯಥಾ ಗಂಧೋ ನ ಸಂಚರೇತ್ ।
ತ್ಯಕ್ತ್ವಾ ಮೃದಾ ಸಮಾಚ್ಛಾದ್ಯ ಶೌಚಂ ಕುರ್ಯಾದ್ವಿಚಕ್ಷಣಃ ॥ ೨೬ ॥

೨೨-೨೪. ಅಂತೆಯೇ, ಆಟದಬಯಲು, ಮತ್ತು ದಟ್ಟವಾದ ಕಾಡುಗಳನ್ನೂ, ಮಂಚದ ತಳಭಾಗ ಮತ್ತು ಮರದ ನೆರಳಿರುವ ಜಾಗಗಳನ್ನೂ, ಎಲೆಯಿಂದ ಆವೃತವಾದ, ಸೂಕ್ಷ್ಮಪ್ರಾಣಿಗಳ ವಾಸಸ್ಥಾನವನ್ನೂ, ಗರಿಕೆಯ ಹುಲ್ಲು, ದರ್ಭೆ ಮತ್ತು ಹುಲ್ಲುಗಳು ಬೆಳದಿರುವ ಜಾಗಗಳನ್ನೂ, ಮರಗಳನ್ನು ಬೆಳೆಸುವ ಮತ್ತು ಯಜ್ಞಯಾಗಾದಿ ಕಾರ್ಯಗಳಿಗಾಗಿ ಶುದ್ಧಿಗೊಳಿಸಿರುವ ಸ್ಥಳಗಳನ್ನೂ ಬಿಟ್ಟು, ಸೂರ್ಯನ ಬಿಸಿಲು ಬರದಿರುವ ಸ್ಥಳದಲ್ಲಿ ಒಂದು ಹಳ್ಳವನ್ನು ತೋಡಿ, ಅಲ್ಲಿ ಮಲಮೂತ್ರಾದಿಗಳನ್ನು ವಿಸರ್ಜಿಸಬೇಕು.

೨೫. ಹಗಲಿನಲ್ಲಿ ಉತ್ತರದಿಕ್ಕಿಗೂ, ರಾತ್ರಿಯಲ್ಲಿ ಪಶ್ಚಿಮದಿಕ್ಕಿಗೂ, ಸಂಧ್ಯಾಕಾಲದಲ್ಲಿ ದಕ್ಷಿಣದಿಕ್ಕಿಗೂ ಎದುರಾಗಿ ಕುಳಿತು ಮಲಮೂತ್ರಾದಿಗಳನ್ನು ವಿಸರ್ಜಿಸಬೇಕು.

೨೬. ದುರ್ಗಂಧದ ಅನುಭವವಾಗದಿರುವಂತೆ ನಿಶ್ವಾಸವಾಯುವನ್ನು ಬಿಗಿಹಿಡಿದು ಮೌನದಿಂದ ಮಲಮೂತ್ರಗಳನ್ನು ವಿಸರ್ಜಿಸಿ, ಅದನ್ನು ಮಣ್ಣಿನಿಂದ ಮುಚ್ಚಿ ಅನಂತರ ಶೌಚಕರ್ಮವನ್ನು (ಶುಚಿಮಾಡಿಕೊಳ್ಳುವಿಕೆ) ಆಚರಿಸಬೇಕು.

ಕೃತ್ವಾ ತು ಲೋಷ್ಠಶೌಚಂ ಚ ಜಲಶೌಚಂ ತತಃ ಪರಂ ।
ಮೃದ್ಯುಕ್ತಂ ತಜ್ಜಲಂ ಚೈವ ತತ್ಪ್ರಮಾಣಂ ನಿಶಾಮಯ ॥ ೨೭ ॥

ಏಕಾಂ ಲಿಂಗೇ ಮೃದಂ ದದ್ಯಾದ್ವಾಮಹಸ್ತೇ ಚತುಷ್ಟಯಂ ।
ಉಭಯೋರ್ಹಸ್ತಯೋರ್ದ್ವೇ ತು ಮೂತ್ರಶೌಚಂ ಪ್ರಕೀರ್ತಿತಂ ॥ ೨೮ ॥

ಮೂತ್ರಶೌಚಂ ದ್ವಿಗುಣಿತಂ ಮೈಥುನಾನಂತರಂ ಯದಿ ।
ಮೈಥುನಾನಂತರಂ ಯದ್ವಾ ಮೂತ್ರಶೌಚಂ ಚತುರ್ಗುಣಂ ॥ ೨೯ ॥

ಏಕಾ ಲಿಂಗೇ ಗುದೇ ತಿಸ್ರಃ ತಥಾ ವಾಮಕರೇ ದಶ ।
ಉಭಯೋಃ ಸಪ್ತ ದಾತವ್ಯಾಃ ಪಾದಃ ಷಡ್ಭಿೇನ ಶುಧ್ಯತಿ ॥ ೩೦ ॥

ಪುರೀಷಶೌಚಂ ವಿಪ್ರಾಣಾಂ ಗೃಹಿಣಾಮಿದಮೇವ ಚ ।
ವಿಧವಾನಾಂ ದ್ವಿಗುಣಿತಂ ಶೌಚಮೇವಂ ಪ್ರಕೀರ್ತಿತಂ ॥ ೩೧ ॥

---

೨೭. ಮೊದಲು ಮಣ್ಣಿನ ಹೆಂಟೆಯಿಂದ ಚೆನ್ನಾಗಿ ಶುಚಿಮಾಡಿ, ಅನಂತರ ನೀರಿನಿಂದ ತೊಳೆದುಕೊಳ್ಳಬೇಕು. ಅನಂತರ, ನೀರು ಬೆರೆಸಿದ ಮಣ್ಣಿನಿಂದ ಮುಂದೆ ಹೇಳುವಂತೆ ಮೃತ್ತಿಕಾಶೌಚವನ್ನು ಮಾಡಿಕೊಳ್ಳಬೇಕು. ಅದರ ಪ್ರಮಾಣವು ಮುಂದೆ ಹೇಳುವಂತಿರಬೇಕು.

೨೮. ಮೂತ್ರವಿಸರ್ಜನೆ ಮಾಡಿದಾಗ ಲಿಂಗಕ್ಕೆ ಒಂದು ಸಾರಿಯೂ, ಎಡಗೈಗೆ ನಾಲ್ಕುಸಾರಿಯೂ, ಎರಡು ಕೈಗಳಿಗೆ ಎರಡು ಸಾರಿಯೂ, ಮೃತ್ತಿಕೆಯನ್ನು ಹಾಕಿಕೊಂಡು ಶುಚಿಮಾಡಿಕೊಳ್ಳಬೇಕು.

೨೯. ಸ್ತ್ರೀಸುಖವನ್ನನುಭವಿಸಿದ ನಂತರ ಮೂತ್ರವಿಸರ್ಜನೆ ಮಾಡಿದರೆ, ಮೇಲೆ ಹೇಳಿದುದಕ್ಕೆ ದ್ವಿಗುಣವಾಗಿ ಶೌಚಮಾಡಿಕೊಳ್ಳಬೇಕೆಂದೂ, ಚತುರ್ಗುಣವಾಗಿ ಮಾಡಿಕೊಳ್ಳಬೇಕೆಂದೂ ಹಲಕೆಲವರ ಅಭಿಪ್ರಾಯಗಳು.

೩೦–೩೧. ಬ್ರಾಹ್ಮಣ ಗೃಹಸ್ಥರು ಮಲವಿಸರ್ಜನೆ ಮಾಡಿದಾಗ, ಲಿಂಗಕ್ಕೆ ಒಂದು ಸಾರಿಯೂ, ಗುದಪ್ರದೇಶಕ್ಕೆ ಮೂರು ಸಾರಿಯೂ, ಎಡಗೈಗೆ ಹತ್ತು ಸಾರಿಯೂ, ಎರಡು ಕೈಗಳಿಗೆ ಏಳು ಸಾರಿಯೂ, ಕಾಲುಗಳಿಗೆ ಆರುಸಾರಿಯೂ, ಮೃತ್ತಿಕೆಯನ್ನು ಹಾಕಿಕೊಂಡರೆ ಶುಚಿಯಾಗಿರುವರು. ವಿಧವೆಯರು ಇದಕ್ಕೆ ದ್ವಿಗುಣವಾಗಿ ಶೌಚವನ್ನಾಚರಿಸಬೇಕು.

ಯತೀನಾಂ ವೈಷ್ಣವಾನಾಂ ಚ ಬ್ರಹರ್ಷೇರ್ಬ್ರಹ್ಮಚಾರಿಣಾಂ ।
ಚತುರ್ಗುಣಂ ಚ ಗೃಹಿಣಾಂ ತೇಷಾಂ ಶೌಚಂ ಪ್ರಕೀರ್ತಿತಂ ॥ ೩೨ ॥

ನೋ ಯೋವದುಪನೀಯೇತ ದ್ವಿಜಃ ಶೂದ್ರಸ್ತಥಾಂಗನಾ ।
ಗಂಧಲೇಪಕ್ಷಯಕರಂ ತೇಷಾಂ ಶೌಚಂ ಪ್ರಕೀರ್ತಿತಂ ॥ ೩೩ ॥

ಶೌಚಂ ಕ್ಷತ್ರವಿಶೋಶ್ಚೈವ ದ್ವಿಜಾನಾಂ ಗೃಹಿಣಾಂ ಸಮಂ ।
ದ್ವಿಗುಣಂ ವೈಷ್ಣವಾದೀನಾಂ ಮುನೀನಾಂ ಪರಿಕೀರ್ತಿತಂ ॥ ೩೪ ॥

ನ್ಯೂನಾಧಿಕಂ ನ ಕರ್ತವ್ಯಂ ಶೌಚಂ ಶುದ್ಧಿಮಭೀಪ್ಸತಾ ।
ಪ್ರಾಯಶ್ಚಿತ್ತಂ ಪ್ರಯುಜ್ಯೇತ ವಿಹಿತಾತಿಕ್ರಮೇ ಕೃತೇ ॥ ೩೫ ॥

---

೩೨. ಸನ್ಯಾಸಿಗಳು, ವಿಷ್ಣುಭಕ್ತರು, ಬ್ರಹ್ಮರ್ಷಿಗಳು ಮತ್ತು ಬ್ರಹ್ಮಚಾರಿಗಳು, ಗೃಹಸ್ಥರಿಗಿಂತ ನಾಲ್ಕರಷ್ಟು ಶೌಚವನ್ನು (ಮೃತ್ತಿಕಾಶೌಚವನ್ನು) ಮಾಡಿಕೊಂಡರೆ ಶುದ್ಧರಾಗುವರು.

೩೩. ಉಪನಯನವಾಗದಿರುವ ಬ್ರಾಹ್ಮಣ ಮತ್ತು ಸ್ತ್ರೀ,ಶೂದ್ರರು ಮೃತ್ತಿಕೆಯನ್ನು ದುರ್ಗಂಧನಾಶವಾಗುವಷ್ಟನ್ನು ಮಾತ್ರ ಲೇಪಿಸಿಕೊಂಡು, ಶೌಚಮಾಡಿಕೊಳ್ಳಬೇಕು.

೩೪. ಗೃಹಸ್ಥರಾದ ಬ್ರಾಹ್ಮಣರಿಗೆ ವಿಧಿಸಿರುವ ಶೌಚಕ್ರಮವನ್ನೇ, ಕ್ಷತ್ರಿಯ ಮತ್ತು ವೈಶ್ಯರು ಅನುಸರಿಸಬೇಕು. ವಿಷ್ಣುಭಕ್ತರು ಮತ್ತು ಮುನಿಗಳು ಅದರ ಎರಡರಷ್ಟನ್ನು ಆಚರಿಸಬೇಕು.

೩೫. ದೇಹಶುದ್ಧಿಯನ್ನು ಬಯಸುವ ಪ್ರತಿಯೊಬ್ಬನೂ, ಶೌಚವಿಧಿಯನ್ನು ಹೆಚ್ಚುಕಡಿಮೆ ಇಲ್ಲದಂತೆ ಆಚರಿಸಬೇಕು. ವಿಧಿವಿಹಿತವಾದದ್ದಕ್ಕಿಂತ ಹೆಚ್ಚುಕಡಿಮೆ ಆಚರಿಸಿದರೆ ಅವನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

ಶೌಚಂ ತನ್ನಿಯಮಂ ಮತ್ತಃ ಸಾವಧಾನಂ ನಿಶಾಮಯ ।
ಮೃಚ್ಛೌಚೇ ಚ ಶುಚಿರ್ವಿಪ್ರೋಽಪ್ಯಶುಚಿಶ್ಚ ವ್ಯತಿಕ್ರಮೇ ॥ ೩೬ ॥

ವಲ್ಮೀಕಮೂಷಕೋತ್ಖಾತಾಂ ಮೃದಮರ್ಂತರ್ಜಲಾಂ ತಥಾ ।
ಶೌಚಾವಶಿಷ್ಟಾಂ ಗೇಹಾಚ್ಚ ನಾದದ್ಯಾಲ್ಲೇಪಸಂಭವಾಂ ॥ ೩೭ ॥

ಅಂತಃಪ್ರಾಣ್ಯವಪನ್ನಾಂ ಚ ಹಲೋತ್ಖಾತಾಂ ವಿಶೇಷತಃ ।
ಕುಶಮೂಲೋತ್ಥಿತಾಂ ಚೈವ ದೂರ್ವಾಮೂಲೋತ್ಥಿತಾಂ ತಥಾ ॥ ೩೮ ॥

ಅಶ್ವತ್ಥಮೂಲಾನ್ನೀತಾಂ ಚ ತಥೈವ ಶಯನೋತ್ಥಿತಾಂ ।
ಚತುಷ್ಪಥಾಚ್ಚ ಗೋಷ್ಠಾನಾಂ ಗೋಷ್ಪದಾನಾಂ ತಥೈವ ಚ ॥ ೩೯ ॥

ಶಸ್ಯಸ್ಥಲಾನಾಂ ಕ್ಷೇತ್ರಾಣಾಮುದ್ಯಾನಾನಾಂ ಮೃದಂ ತ್ಯಜೇತ್ ।
ಸ್ನಾತೋ ವಾಪ್ಯಥವಾಽಸ್ನಾತೋ ವಿಪ್ರಃ ಶೌಚೇನ ಶುದ್ಧ್ಯತಿ ॥ ೪೦ ॥

---

೩೬. ಎಲೈ ಶೌನಕನೇ, ನಾನು ಹೇಳುವ ಶೌಚವಿಧಾನವನ್ನು ಸಾವಧಾನಿಸಿ, ಕೇಳು. ಬ್ರಾಹ್ಮಣನು ಮೃತ್ತಿಕಾಶೌಚದಿಂದಲೇ ಶುಚಿಯಾಗುವನು. ಅದಿಲ್ಲದೆ ಅವನು ಶುಚಿಯಾಗುವಂತಿಲ್ಲ.

೩೭. ಹುತ್ತದ ಮತ್ತು ಇಲಿ ತೋಡಿರುವ ಮಣ್ಣನ್ನೂ, ನೀರಿನೊಳಗಿನ ಮತ್ತು ಒಮ್ಮೆ ಶೌಚಕ್ಕಾಗಿ ಉಪಯೋಗಿಸಿಕೊಂಡಿರುವ ಮಣ್ಣನ್ನೂ, ಮನೆಯ ನೆಲದ ಅಥವಾ ಗೋಡೆಯ ಮಣ್ಣನ್ನೂ ಶೌಚಕ್ಕೆ ಉಪಯೋಗಿಸಬಾರದು.

೩೮–೪೦. ಒಳಗೆ ಸೂಕ್ಷ್ಮಪ್ರಾಣಿಗಳಿದ್ದು ಮೇಲೆ ಎಲೆಮುಚ್ಚಿಕೊಂಡಿರುವ ಮಣ್ಣನ್ನೂ, ಉತ್ತ ಹೊಸಮಣ್ಣನ್ನೂ, ದರ್ಭೆ, ಗರಿಕೆ, ಹುಲ್ಲು ಮತ್ತು ಅರಳಿಮರದ ಬುಡದ ಮಣ್ಣನ್ನೂ, ಮಲಗುವ ಸ್ಥಳ, ನಾಲ್ಕುದಾರಿ ಸೇರುವ ಸ್ಥಳ ಮತ್ತು ದನಗಳ ಕೊಟ್ಟಿಗೆಯ ಮಣ್ಣನ್ನೂ, ಗೋಪಾದದ ಮಣ್ಣನ್ನೂ, ಸಸ್ಯಕ್ಷೇತ್ರ ಮತ್ತು ಪುಷ್ಪೋದ್ಯಾನಗಳ ಮಣ್ಣನ್ನೂ ಮೃತ್ತಿಕೆಗೆ ಉಪಯೋಗಿಸಬಾರದು. ಸ್ನಾನಮಾಡಿರಲಿ, ಇಲ್ಲದಿರಲಿ, ಮೃತ್ತಿಕಾಶೌಚದಿಂದಲೇ ಬ್ರಾಹ್ಮಣನು ಶುದ್ಧನಾಗುವನು.

ಶೌಚಹೀನೋಽಶುಚಿರ್ನಿತ್ಯಮನರ್ಹಃ ಸರ್ವಕರ್ಮಸು ।
ಕೃತ್ವಾ ಶೌಚಮಿದಂ ವಿಪ್ರೋ ಮುಖಂ ಪ್ರಕ್ಷಾಲಯೇತ್ಸುಧೀಃ ॥ ೪೧ ॥

ಆದೌ ಷೋಡಶಗಂಡೂಷೈರ್ಮುಖಶುದ್ಧಿಂ ವಿಧಾಯ ಚ ।
ದಂತಕಾಷ್ಠೇನ ದಂತಂ ಚ ತತ್ಪಶ್ಚಾತ್ಪರಿಮಾರ್ಜಯೇತ್ ॥ ೪೨ ॥

ಪುನಃ ಷೋಡಶಗಂಡೂಷೈರ್ಮುಖಶುದ್ಧಿಂ ಸಮಾಚರೇತ್ ।
ದಂತಮಾರ್ಜನಕಾಷ್ಠಾನಾಂ ನಿಯಮಂ ಶೃಣು ನಾರದ ॥ ೪೩ ॥

ನಿರೂಪಿತಂ ಸಾಮವೇದೇ ಹರಿಣಾ ಚಾಹ್ನಿಕಕ್ರಮೇ ।
ಅಪಾಮಾರ್ಗಂ ಸಿಂಧುವಾರಮಾಮ್ರಂ ಚ ಕರವೀರಕಂ ॥ ೪೪ ॥

ಖದಿರಂ ಚ ಶಿರೀಷಂ ಚ ಜಾತಿ ಪುನ್ನಾಗ ಶಾಲಕಂ ।
ಅಶೋಕಮರ್ಜುನಂ ಚೈವ ಕ್ಷೀರಿವೃಕ್ಷಂ ಕದಂಬಕಂ ॥ ೪೫ ॥

---

೪೧. ಶೌಚವನ್ನಾಚರಿಸದವನು ಅಶುಚಿಯಾದುದರಿಂದ ಯಾವ ಸತ್ಕರ್ಮಗಳಿಗೂ ಅರ್ಹನಾಗುವುದಿಲ್ಲ. ಆದುದರಿಂದ ಬ್ರಾಹ್ಮಣನು ಮೇಲೆ ಹೇಳಿದಂತೆ ಶೌಚಕಾರ್ಯವನ್ನು ಮಾಡಿ, ಅನಂತರ ಮುಖವನ್ನು ತೊಳೆದುಕೊಳ್ಳಬೇಕು.

೪೨. ಮೊದಲು ಬಾಯಿಗೆ ನೀರುಹಾಕಿಕೊಂಡು ಹದಿನಾರು ಸಾರಿ ಮುಕ್ಕಳಿಸಿ ಉಗುಳಿ, ಅನಂತರ ಹಲ್ಲುಜ್ಜುವ ಕಡ್ಡಿಯಿಂದ ಹಲ್ಲುಗಳನ್ನು ಚೆನ್ನಾಗಿ ತಿಕ್ಕಬೇಕು.

೪೩. ಪುನಃ ಹದಿನಾರು ಸಾರಿ ನೀರಿನಿಂದ ಮುಕ್ಕಳಿಸಿ, ಬಾಯನ್ನು ಶುದ್ಧಿ ಮಾಡಬೇಕು. ಎಲೈ ನಾರದನೇ! ಹಲ್ಲುಜ್ಜುವ ಎಲೆ ಮತ್ತು ಕಡ್ಡಿಗಳ ನಿಯಮವನ್ನು ವಿವರಿಸುವೆನು ಅವಧರಿಸು.

೪೪–೪೬. ಸಾಮವೇದದ ಆಹ್ನಿಕಪ್ರಕರಣದಲ್ಲಿ ಪರಮಾತ್ಮನು ಇದನ್ನು ವಿವರಿಸಿರುವನು. ಉತ್ತರಣೆ, ಲಕ್ಕಿಗಿಡ, ಮಾವು, ಕಣಿಗಲು ಮತ್ತು ಕಗ್ಗಲಿ ಗಿಡಗಳಿಂದಲೂ, ಬಾಗೆ, ಜಾಜಿ, ಪುನ್ನಾಗ ಮತ್ತು ಶಾಲಕದ ಗಿಡಗಳಿಂದಲೂ ಅಶೋಕ (ಆನಂದವೃಕ್ಷ), ಅರ್ಜುನ (ಕೆಂಪು ಮತ್ತಿಗಿಡ) ಕ್ಷೀರಿವೃಕ್ಷ (ಹಾಲೆಗಿಡ) ಮತ್ತು

ಜಂಬೂಕಂ ಬಕುಲಂ ತೋಕ್ಮಂ ಪಲಾಶಂ ಚ ಪ್ರಶಸ್ತಕಂ ।
ಬದರೀಂ ಪಾರಿಭದ್ರಂ ಚ ಮಂದಾರಂ ಶಾಲ್ಮಲಿಂ ತಥಾ ॥ ೪೬ ॥

ವೃಕ್ಷಂ ಕಂಟಕಯುಕ್ತಂ ಚ ಲತಾದಿ ಪರಿವರ್ಜಯೇತ್ ।
ಪಿಪ್ಪಲಂ ಚ ಪ್ರಿಯಾಲಂ ಚ ತಿಂತಿಡೀಕಂ ಚ ತಾಲಕಂ ॥ ೪೭ ॥

ಖರ್ಜೂರಂ ನಾರಿಕೇಲಂ ಚ ತಾಲಂ ಚ ಪರಿವರ್ಜಯೇತ್ ।
ದಂತಸೌಚವಿಹೀನಶ್ಚ ಸರ್ವಶೌಚವಿಹೀನಕಃ ॥ ೪೮ ॥

ಶೌಚಹೀನೋಽಶುಚಿರ್ನಿತ್ಯಮನರ್ಹಃ ಸರ್ವಕರ್ಮಸು ।
ಕೃತ್ವಾ ಶೌಚಂ ಶುಚಿರ್ವಿಪ್ರೋ ಧೃತ್ವಾ ಧೌತೇ ಚ ವಾಸಸೀ ॥ ೪೯ ॥

ಪ್ರಕ್ಷಾಲ್ಯ ಪಾದಾವಾಚಮ್ಯ ಪ್ರಾತಃಸಂಧ್ಯಾಂ ಸಮಾಚರೇತ್ ।
ಏವಂ ತ್ರಿಸಂಧ್ಯಂ ಸಂಧ್ಯಾಂ ಚ ಕುರುತೇ ಕುಲಜೋ ದ್ವಿಜಃ ॥ ೫೦ ॥

ಉತ್ತಮವಾದ ಕದಂಬ(ದೇವತಾಳಿ) ಗಿಡಗಳಿಂದಲೂ, ನೇರಳೆ, ಪಗಡೆ, ಗರಿಕೆಹುಲ್ಲು, ಮುತ್ತುಗ, ಯುಗಚಿ, ದೇವದಾರು, ಪಾರಿಜಾತ ಮತ್ತು ಬೂರುಗದ ಮರಗಳಿಂದಲೂ, ಹಲ್ಲುಜ್ಜುವ ಕಡ್ಡಿಯನ್ನಾಗಲೀ, ಎಲೆಯನ್ನಾಗಲೀ ತೆಗೆದುಕೊಳ್ಳಬೇಕು.

೪೭–೪೮. ಮುಳ್ಳಿರುವ ಗಿಡಬಳ್ಳಿಗಳನ್ನೂ, ಅಳಲೆಗಿಡ, ಮೊರಟೆಗಿಡ, ಹುಣಸೆ, ತಾಳೆ, ಖರ್ಜೂರ, ತೆಂಗು ಮತ್ತು ತಾಳೆಗಿಡಗಳನ್ನೂ ಹಲ್ಲುಜ್ಜಲು ಉಪಯೋಗಿಸಬಾರದು. ಹಲ್ಲನ್ನು ಶುದ್ಧಿಮಾಡಿಕೊಳ್ಳದಿದ್ದವನು ಇತರ ಯಾವ ಶೌಚಗಳಿಂದಲೂ ಶುಚಿಯಾಗುವುದಿಲ್ಲ.

೪೯. ಶೌಚಮಾಡಿಕೊಳ್ಳದವನು ಯಾವಾಗಲೂ ಅಶುಚಿಯಾಗಿ ಯಾವ ಕರ್ಮಾಚರಣೆಗೂ ಯೋಗ್ಯನಾಗುವುದಿಲ್ಲ. ಆದ್ದರಿಂದ ಬ್ರಾಹ್ಮಣನು ಶೌಚಕರ್ಮದಿಂದ ಶುಚಿಯಾಗಿ, ಕೈಕಾಲುಗಳನ್ನು ತೊಳೆದುಕೊಂಡು, ಒಗೆದು ಶುಭ್ರವಾದ ಎರಡು ಬಟ್ಟೆಗಳನ್ನು ಧರಿಸಿ ಪ್ರಾತಃಸಂಧ್ಯಾವಂದನೆಯನ್ನು ಮಾಡಬೇಕು.

೫೦–೫೧. ಸದ್ವಂಶದಲ್ಲಿ ಹುಟ್ಟಿದ ಬ್ರಾಹ್ಮಣನು ಮೇಲೆ ಹೇಳಿದಂತೆ ಶೌಚಕರ್ಮವನ್ನಾಚರಿಸಿ, ಮೂರು ಸಂಧ್ಯಾಕಾಲಗಳಲ್ಲೂ ಸಂಧ್ಯಾವಂದನೆಯನ್ನು ಮಾಡ

ಸ ಸ್ನಾತಃ ಸರ್ವತೀರ್ಥೇಷು ತ್ರಿಸಂಧ್ಯಂ ಯಃ ಸಮಾಚರೇತ್ ।
ಸಂಧ್ಯಾತ್ರಿತಯಹೀನಸ್ಯಾದನರ್ಹಃ ಸರ್ವಕರ್ಮಸು ॥ ೫೧ ॥

ಯದಹ್ನಾ ಕುರತೇ ಕರ್ಮ ನ ತಸ್ಯ ಫಲಭಾಗ್ಭವೇತ್ ।
ನೋಪತಿಷ್ಠತಿ ಯಃ ಪೂರ್ವಾಂ ನೋಪಾಸ್ತೇ ಯಸ್ತು ಪಶ್ಚಿಮಾಂ ॥ ೫೨ ॥
ಸ ಶೂದ್ರವದ್ಬಹಿಃ ಕಾರ್ಯಃ ಸರ್ವಸ್ಮಾದ್ದ್ವಿಜ ಕರ್ಮಣಃ ।

ಪೂರ್ವಾಂ ಸಂಧ್ಯಾಂ ಪರಿತ್ಯಜ್ಯ ಮಧ್ಯಮಾಂ ಪಶ್ಚಿಮಾಂ ತಥಾ ॥ ೫೩

ಬ್ರಹ್ಮಹತ್ಯಾಮಾತ್ಮಹತ್ಯಾಂ ಪ್ರತ್ಯಹಂ ಲಭತೇ ದ್ವಿಜಃ ।
ಏಕಾದಶೀವಿಹೀನೋ ಯಃ ಸಂಧ್ಯಾಹೀನಶ್ಚ ಯೋ ದ್ವಿಜಃ ॥ ೫೪ ॥
ಕಲ್ಪಂ ವ್ರಜೇತ್ಕಾಲಸೂತ್ರಂ ಯಥಾ ಹಿ ವೃಷಲೀಪತಿಃ ।

ಬೇಕು. ಮೂರು ಸಂಧ್ಯೆಯನ್ನೂ ಆಚರಿಸುವವನು ಎಲ್ಲ ಪುಣ್ಯತೀರ್ಥಗಳಲ್ಲೂ ಸ್ನಾನಮಾಡಿದ ಫಲವನ್ನು ಹೊಂದುವನು. ಸಂಧ್ಯಾವಂದನೆಯನ್ನು ಮಾಡದವನು ಯಾವ ಸತ್ಕರ್ಮಗಳಿಗೂ ಕೂಡ ಅರ್ಹನಲ್ಲ.

೫೨. ಯಾರು ಪ್ರಾತಃಸಂಧ್ಯೆ ಮತ್ತು ಸಾಯಂಸಂಧ್ಯೆಗಳನ್ನು ಆಚರಿಸುವುದಿಲ್ಲವೋ, ಅವರು ಶೂದ್ರರಂತೆ, ಯಾವ ಸತ್ಕರ್ಮಾಚರಣೆಗೂ ಅರ್ಹರಾಗುವುದಿಲ್ಲ. ಒಂದು ವೇಳೆ ಅವರು ಸತ್ಕರ್ಮಗಳನ್ನು ಆಚರಿಸಿದರೂ ಅದರ ಸತ್ಫಲವು ಅವರಿಗೆ ಲಭಿಸುವುದಿಲ್ಲ.

೫೩–೫೪. ಯಾರು ತ್ರಿಕಾಲದಲ್ಲೂ ಸಂಧ್ಯಾವಂದನೆಯನ್ನು ಆಚರಿಸದಿರುವರೋ ಆ ಬ್ರಾಹ್ಮಣರು ಪ್ರತಿದಿನವೂ, ಬ್ರಹ್ಮಹತ್ಯೆ ಮತ್ತು ಆತ್ಮಹತ್ಯೆಗಳ ದೋಷಕ್ಕೆ ಗುರಿಯಾಗುವರು. ಬ್ರಾಹ್ಮಣಜನ್ಮದಲ್ಲಿ ಹುಟ್ಟಿ ಸಂಧ್ಯಾವಂದನೆಯನ್ನೂ ಏಕಾದಶೀವ್ರತವನ್ನೂ ಆಚರಿಸದವನು, ಶೂದ್ರಸ್ತ್ರೀಯೊಡಗೂಡಿದ ಪಾಪಿಬ್ರಾಹ್ಮಣನಂತೆ, ಅನೇಕ ಕಲ್ಪಗಳ ಕಾಲ ಕಾಲಸೂತ್ರವೆಂಬ ನರಕದಲ್ಲಿ ತೊಳಲುವನು.

ಪ್ರಾತಃಸಂಧ್ಯಾಂ ವಿಧಾಯೈವಂ ಗುರುಮಿಷ್ಟಂ ಸುರಂ ರವಿಂ ॥ ೫೫ ॥

ಬ್ರಹ್ಮಾಣಮೀಶಂ ವಿಷ್ಣುಂ ಚ ಮಾಯಾಂ ಪದ್ಮಾಂ ಸರಸ್ವತೀಂ ।
ಪ್ರಣಮ್ಯ ಗುರುಮಾಜ್ಯಂ ಚ ದರ್ಪಣಂ ಮಧು ಕಾಂಚನಂ ॥ ೫೬ ॥
ಸ್ಪೃಷ್ಟ್ವಾ ಸ್ನಾನಾದಿಕಂ ಕಾಲೇ ಕುರ್ಯಾತ್ಸಾಧಕಸತ್ತಮಃ ।

ಪುಷ್ಕರಣ್ಯಾಂ ತು ವ್ಯಾಪ್ಯಾಂ ತು ಯದಾ ಸ್ನಾನಂ ಸಮಾಚರೇತ್ ॥ ೫೭ ॥

ಸಮುದ್ಧೃತ್ಯ ಪಂಚಪಿಂಡಾನಾದೌ ಧರ್ಮಿ ವಿಚಕ್ಷಣಃ ।
ನದ್ಯಾಂ ನದೇ ಕಂದರೇ ವಾ ತೀರ್ಥೇ ವಾ ಸ್ನಾನಮಾಚರೇತ್ ॥ ೫೮ ॥

ಕುರ್ಯಾತ್ಸ್ನಾತ್ವಾ ತು ಸಂಕಲ್ಪಂ ತತಃ ಸ್ನಾನಂ ಪುನರ್ಮುನೇ ।
ಶ್ರೀಕೃಷ್ಣಪ್ರೀತಿಕಾಮಶ್ಚ ವೈಷ್ಣವಾನಾಂ ಮಹಾತ್ಮನಾಂ ॥ ೫೯ ॥

೫೫-೫೬. ಕರ್ಮನಿರತರಾದ ಬ್ರಾಹ್ಮಣನು, ಇಂತು ಸಕಾಲದಲ್ಲಿ ಪ್ರಾತಃ ಸಂಧ್ಯೆಯನ್ನಾಚರಿಸಿ, ಗುರುವನ್ನೂ, ಇಷ್ಟದೇವತೆಯನ್ನೂ, ಸೂರ್ಯನನ್ನೂ, ಬ್ರಹ್ಮವಿಷ್ಣುಮಹೇಶ್ವರರನ್ನೂ, ಲಕ್ಷ್ಮಿ, ಸರಸ್ವತಿ, ಪಾರ್ವತಿಯರನ್ನೂ, ಭಕ್ತಿಯಿಂದ ಭಜಿಸಿ, ತುಪ್ಪ, ಕನ್ನಡಿ, ಜೇನು ಮತ್ತು ಚಿನ್ನ ಇವುಗಳ ಸ್ಪರ್ಶದಿಂದ ಆತ್ಮ ಶುದ್ಧಿ ಮಾಡಿಕೊಂಡು, ಅನಂತರ ಕಾಲಾನುಗುಣವಾಗಿ ಸ್ನಾನಾದಿಕರ್ಮಗಳನ್ನು ಆಚರಿಸಬೇಕು.

೫೭-೫೯. ಕೊಳದಲ್ಲಾಗಲೀ, ಭಾವಿಯಲ್ಲಾಗಲೀ ಸ್ನಾನಮಾಡುವವರು ಮೊದಲು ಐದು ಹಿಡಿ ಮಣ್ಣನ್ನು ತೆಗೆದು ಹೊರಕ್ಕೆ ಹಾಕಿ ಸ್ನಾನಮಾಡಿದರೆ ಧರ್ಮಿಷ್ಠರಾಗುವರು. ಕಾಲುವೆ, ಕೊಲ್ಲಿ ಮತ್ತು ಹೊಳೆಗಳಲ್ಲಾಗಲೀ, ಪುಣ್ಯ ತೀರ್ಥಗಳಲ್ಲಾಗಲೀ ಸ್ನಾನಮಾಡುವಾಗ ಮೊದಲು ಸ್ನಾನಮಾಡಿ, ಸಂಕಲ್ಪವನ್ನು ಆಚರಿಸಿ ಮತ್ತೆ ಸ್ನಾನಮಾಡುವುದರಿಂದ ಶ್ರೀಕೃಷ್ಣನ ಮತ್ತು ಆತನ ಭಕ್ತರ ಅನುಗ್ರಹಕ್ಕೆ ಪಾತ್ರರಾಗುವರು.

ಸಂಕಲ್ಪೋ ಗೃಹಿಣಾಂ ಚೈವ ಕೃತಪಾತಕನಾಶಕಃ ।
ವಿಪ್ರಃ ಕೃತ್ವಾ ತು ಸಂಕಲ್ಪಂ ಮೃದಂ ಗಾತ್ರೇ ಪ್ರಲೇಪಯೇತ್ ॥ ೬೦ ॥

ವೇದೋಕ್ತಮಂತ್ರೇಣಾನೇನ ದೇಹಶುದ್ಧಿ ಕೃತೇ ನರಃ ।
ಅಶ್ವಕ್ರಾಂತೇ ರಥಕ್ರಾಂತೇ ವಿಷ್ಣುಕ್ರಾಂತೇ ವಸುಂಧರೇ ॥ ೬೧ ॥

ಮೃತ್ತಿಕೇ ಹರ ಮೇ ಪಾಪಂ ಯನ್ಮಯಾ ದುಷ್ಕೃತಂ ಕೃತಂ ।
ಉದ್ಧೃತಾಸಿ ವರಾಹೇಣ ಕೃಷ್ಣೇನ ಶತಬಾಹುನಾ ॥ ೬೨ ॥

ಆರುಹ್ಯ ಮಮ ಗಾತ್ರಾಣಿ ಸರ್ವಂ ಪಾಪಂ ಪ್ರಮೋಚಯ ।
ಪುಣ್ಯಂ ದೇಹಿ ಮಹಾಭಾಗೇ ಸ್ನಾನಾನುಜ್ಞಾಂ ಕುರುಷ್ವ ಮಾಂ ॥ ೬೩ ॥

ಇತ್ಯುಕ್ತ್ವಾ ಚ ಜಲೇ ನಾಭಿಪ್ರಮಾಣೇ ಮಂತ್ರಪೂರ್ವಕಂ ।
ಚತುರ್ಹಸ್ತಪ್ರಮಾಣಾಂ ಚ ಕೃತ್ವಾ ಮಂಡಲಿಕಾಂ ಶುಭಾಂ ॥ ೬೪ ॥

---

೬೦. ಸಂಕಲ್ಪಮಾಡಿ ಸ್ನಾನಮಾಡುವ ಗೃಹಸ್ಥರ ಪಾಪಗಳೆಲ್ಲವೂ ಪರಿಹಾರವಾಗುವುದು. ಬ್ರಾಹ್ಮಣನಾದವನು ಸ್ನಾನಮಾಡಲು ಸಂಕಲ್ಪಮಾಡಿ ಶರೀರಕ್ಕೆ ಮೃತ್ತಿಕೆಯನ್ನು ಲೇಪಿಸಿಕೊಳ್ಳಬೇಕು.

೬೧–೬೩. "ರಥಾಶ್ವಗಳಿಂದಲೂ, ವಿರಾಡ್ರೂಪಿಯಾದ ವಿಷ್ಣುವಿನಿಂದಲೂ, ಸರ್ವದಾ ವ್ಯಾಪ್ತಳೂ, ಆದ್ದರಿಂದ ವಸುಂಧರೆಯೂ ಎನಿಸಿದ ಎಲೌ, ಮೃತ್ತಿಕೆಯೇ! ನಾನು ಮಾಡಿರುವ ಪಾಪಗಳನ್ನು ಪರಿಹರಿಸು. ವರಾಹರೂಪಿಯಾದ ಪರಮಾತ್ಮನ ನೂರುತೋಳುಗಳಿಂದ, ಸಮುದ್ರದೊಳಗಿನಿಂದ ಮೇಲಕ್ಕೆ ಎತ್ತಲ್ಪಟ್ಟ ನೀನು, ನನ್ನ ಶರೀರವನ್ನು ಆಕ್ರಮಿಸಿ, ಪಾಪಗಳೆಲ್ಲವನ್ನೂ ಪರಿಹರಿಸಿ, ಪುಣ್ಯಕರಳಾಗು. ಎಲೌ ಪುಣ್ಯವತಿಯೇ! ನನಗೆ ಸ್ನಾನಮಾಡಲು ಅಪ್ಪಣೆ ಕೊಡು" ಎಂಬ ಅರ್ಥವುಳ್ಳ, ಮೇಲೆ ಹೇಳಿರುವ ವೇದೋಕ್ತ ಮಂತ್ರವನ್ನು ಪಠಿಸಿ, ದೇಹಶುದ್ಧಿಗಾಗಿ ಮೃತ್ತಿಕೆಯನ್ನು ಶರೀರಕ್ಕೆಲ್ಲಾ ಲೇಪಿಸಿಕೊಳ್ಳಬೇಕು.

೬೪–೬೫. ಅನಂತರ ನಾಭಿ (ಹೊಕ್ಕಳು) ಪರ್ಯಂತವಾದ ನೀರಿಗಿಳಿದು,

ತೀರ್ಥಾನ್ಯಾವಾಹಯೇತ್ತತ್ರ ಹಸ್ತಂ ದತ್ವಾ ತಪೋಧನ ।
ಯಾನಿ ಯಾನಿ ಚ ತೀರ್ಥಾನಿ ಸರ್ವಾಣಿ ಕಥಯಾಮಿ ತೇ ॥ ೩೫ ॥

ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ।
ನರ್ಮದೇ ಸಿಂಧು ಕಾವೇರಿ ಜಲೇಽಸ್ಮಿನ್ ಸನ್ನಿಧಿಂ ಕುರು ॥ ೩೬ ॥

ನಲಿನೀ ನಂದಿನೀ ಸೀತಾ ಮಾಲಿನೀ ಚ ಮಹಾಪಗಾ ।
ವಿಷ್ಣುಪಾದಾಬ್ಜಸಂಭೂತಾ ಗಂಗಾ ತ್ರಿಪಥಗಾಮಿನೀ ॥ ೩೭ ॥

ಪದ್ಮಾವತೀ ಭೋಗವತೀ ಸ್ವರ್ಣರೇಖಾ ಚ ಕೌಶಿಕೀ ।
ದಕ್ಷಾ ಪೃಥ್ವೀ ಚ ಸುಭಗಾ ವಿಶ್ವಕಾಯಾ ಶಿವಾಮೃತಾ ॥ ೩೮ ॥

ವಿದ್ಯಾಧರೀ ಸುಪ್ರಸನ್ನಾ ತಥಾ ಲೋಕಪ್ರಸಾದಿನೀ ।
ಕ್ಷೇಮಾ ಚ ವೈಷ್ಣವೀ ಶಾಂತಾ ಶಾಂತಿದಾ ಗೋಮತೀ ಸತೀ ॥ ೩೯ ॥

ಮಂತ್ರೋಚ್ಚಾರಣೆ ಪೂರ್ವಕವಾಗಿ, ನಾಲ್ಕು ಹಸ್ತ ಪರಿಮಾಣವುಳ್ಳ, ಮಂಡಲವನ್ನು ಮಾಡಿ, ಅಲ್ಲಿ ಮುಂದೆ ಹೇಳುವ ಪುಣ್ಯತೀರ್ಥಗಳನ್ನು ಆವಾಹನೆ ಮಾಡಬೇಕು.

೩೬–೩೯. 'ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದೆ, ಸಿಂಧು ಮತ್ತು ಕಾವೇರಿ ನದಿಗಳೇ! ನೀವೆಲ್ಲರೂ ಈ ನೀರಿನಲ್ಲಿ ನೆಲೆಸಿರಿ. ನಲಿನೀ, ನಂದಿನೀ, ಸೀತಾ, ಮಾಲಿನೀ ಮತ್ತು ಮಹಾಪಗಾ ನದಿಗಳೂ, ವಿಷ್ಣುವಿನ ಪಾದಕಮಲದಿಂದ ಜನಿಸಿ ತ್ರಿಪಥಗಾಮಿನಿಯಾದ ಗಂಗೆಯೂ, ಪದ್ಮಾವತೀ, ಭೋಗವತೀ, ಸ್ವರ್ಣರೇಖಾ, ಕೌಶಿಕೀ, ದಕ್ಷಾ, ಪೃಥ್ವೀ, ಸುಭಗಾ, ವಿಶ್ವಕಾಯಾ, ಶಿವಾ, ಅಮೃತಾ, ವಿದ್ಯಾಧರೀ, ಸುಪ್ರಸನ್ನಾ ಲೋಕಪ್ರಸಾದಿನೀ, ಕ್ಷೇಮಾ, ವೈಷ್ಣವೀ, ಶಾಂತಾ, ಗೋಮತೀ ಮತ್ತು ಸತೀ ಇತ್ಯಾದಿ ಸಕಲ ನದಿಗಳೂ ಈ ನೀರಿನಲ್ಲಿ ಬಂದು ಸೇರಿಕೊಳ್ಳಲಿ' ಎಂದು ಆವಾಹನೆ ಮಾಡಬೇಕು.

ಸಾವಿತ್ರೀ ತುಲಸೀ ದುರ್ಗಾ ಮಹಾಲಕ್ಷ್ಮೀಃ ಸರಸ್ವತೀ ।
ಕೃಷ್ಣಪ್ರಾಣಾಧಿಕಾ ರಾಧಾ ಲೋಪಮುದ್ರಾ ದಿತೀ ರತಿಃ　　॥ ೭೦ ॥

ಅಹಲ್ಯಾ ಚಾದಿತಿಃ ಸಂಜ್ಞಾ ಸ್ವಧಾ ಸ್ವಾಹಾಪ್ಯರುಂಧತೀ ।
ಶತರೂಪಾ ದೇವಹೂತಿರಿತ್ಯಾದ್ಯಾಃ ಸಂಸ್ಮರೇತ್ಸುಧೀಃ　　॥ ೭೧ ॥

ಸ್ನಾತ್ವಾ ಸ್ನಾತ್ವಾ ಮಹಾಪೂತಃ ಕುರ್ಯಾತ್ತು ತಿಲಕಂ ಬುಧಃ ।
ಬಾಹ್ವೋರ್ಮೂರ್ಲೇ ಲಲಾಟೇ ಚ ಕಂಠದೇಶೇ ಚ ವಕ್ಷಸಿ　　॥ ೭೨ ॥

ಸ್ನಾನಂ ದಾನಂ ತಪೋ ಹೋಮೋ ದೇವತಾ ಪಿತೃಕರ್ಮ ಚ ।
ತತ್ಸರ್ವಂ ನಿಷ್ಫಲಂ ಯಾತಿ ಲಲಾಟೇ ತಿಲಕಂ ವಿನಾ　　॥ ೭೩ ॥

ಬ್ರಾಹ್ಮಣಸ್ತಿಲಕಂ ಕೃತ್ವಾ ಕುರ್ಯಾತ್ಸಂಧ್ಯಾಂ ಚ ತರ್ಪಣಂ ।
ನಮಸ್ಕೃತ್ಯ ಸುರಾನ್ಭಕ್ತ್ಯಾ ಗೃಹಂ ಗಚ್ಛೇನ್ಮುದಾನ್ವಿತಃ　　॥ ೭೪ ॥

೭೦–೭೧. ಅನಂತರ, ಸಾವಿತ್ರಿ, ತುಲಸಿ, ದುರ್ಗಾ, ಮಹಾಲಕ್ಷ್ಮಿ ಮತ್ತು ಸರಸ್ವತೀದೇವಿಯರನ್ನೂ, ಕೃಷ್ಣಪರಮಾತ್ಮನ ಪ್ರಾಣಪ್ರಿಯಳಾದ ರಾಧೆಯನ್ನೂ, ಲೋಪಮುದ್ರಾ, ದಿತಿ, ರತಿ, ಅಹಲ್ಯಾ, ಅದಿತಿ, ಸಂಜ್ಞಾ, ಸ್ವಧಾ, ಸ್ವಾಹಾ, ಅರುಂಧತಿ, ಶತರೂಪಾ, ದೇವಹೂತಿ ಮುಂತಾದ ಪತಿವ್ರತೆಯರನ್ನೂ ಧ್ಯಾನ ಮಾಡಬೇಕು.

೭೨. ಇಂತು ಸ್ನಾನಮಾಡಿ ಪವಿತ್ರನಾಗಿ, ತೋಳುಗಳ ಬುಡ, ಹಣೆ, ಕತ್ತು ಮತ್ತು ಎದೆಗೆ ಆಯಾ ಮತಾನುಗುಣವಾಗಿ ತಿಲಕವನ್ನು ಧರಿಸಿಕೊಳ್ಳಬೇಕು.

೭೩ ಹಣೆಯಲ್ಲಿ ತಿಲಕವಿಲ್ಲದೆ ಮಾಡಿದ ಸ್ನಾನ, ದಾನಗಳೂ, ತಪೋಹೋಮಗಳೂ, ದೇವಕಾರ್ಯಪಿತೃಕಾರ್ಯಗಳೂ ನಿಷ್ಫಲವಾಗುವುವು. (ಪಿತೃಕರ್ಮದಲ್ಲಿ ಕೇವಲ ನೀರಿನಿಂದಲೇ ತಿಲಕಧಾರಣೆಮಾಡುವುದುಂಟು.)

೭೪. ಆದ್ದರಿಂದ ಬ್ರಾಹ್ಮಣನು ತಿಲಕಧಾರಣೆಮಾಡಿ, ಅನಂತರ ಸಂಧ್ಯಾವಂದನೆಯನ್ನೂ, ದೇವರ್ಷಿಪಿತೃತರ್ಪಣವನ್ನೂ ಆಚರಿಸಿ, ದೇವತೆಗಳಿಗೆ ಭಕ್ತಿಯಿಂದ ವಂದಿಸಿ, ಸಂತೋಷದಿಂದ ಮನೆಗೆ ಹಿಂತಿರುಗಬೇಕು.

ಪ್ರಕ್ಷಾಲ್ಯ ಪಾದೌ ಯತ್ನೇನ ಧೃತ್ವಾ ಧೌತೇ ಚ ವಾಸಸೀ ।
ಮಂದಿರಂ ಪ್ರವಿಶೇತ್ಪ್ರಾಜ್ಞೋ ಇತ್ಯಾಹ ಹರಿರೇವ ಚ ॥ ೭೫ ॥

ವಿನಾ ಪಾದಕ್ಷಾಲನಂ ಯಃ ಸ್ನಾತ್ವಾ ವಿಶತಿ ಮಂದಿರಂ ।
ತಸ್ಯ ಸ್ನಾನಾದಿಕಂ ನಷ್ಟಂ ಜಪಹೋಮಾದಿ ಪಂಚಕಂ ॥ ೭೬ ॥

ಪರಿಧಾಯ ಸ್ನಿಗ್ಧವಸ್ತ್ರಂ ಗೃಹಂ ಚ ಪ್ರವಿಶೇದ್ಗೃಹೀ।
ರುಷ್ಟಾ ಲಕ್ಷ್ಮೀರ್ಗೃಹಾದ್ಯಾತಿ ಶಾಪಂ ದತ್ವಾ ಸುದಾರುಣಂ ॥ ೭೭ ॥

ಜಂಘೋರ್ಧ್ವತಶ್ಚ ಯೋ ವಿಪ್ರಃ ಪಾದೌ ಪ್ರಕ್ಷಾಲಯೇದ್ವೃಗಾ ।
ತಾವದ್ಭವತಿ ಚಂಡಾಲೋ ಯಾವದ್ಗಂಗಾಂ ನ ಪಶ್ಯತಿ ॥ ೭೮ ॥

ಉಪವಿಶ್ಯಾಸನೇ ಬ್ರಹ್ಮ ಶುಚಿರಾಚಮ್ಯ ಸಾಧಕಃ ।
ಪೂಜಾಂ ಕುರ್ಯಾತ್ತು ವೇದೋಕ್ತಾಂ ಭಕ್ತಿಯುಕ್ತೋ ಹಿ ಸಂಯುತಃ ॥ ೭೯ ॥

---

೭೫. ಸ್ನಾನಮಾಡಿ ಬಂದರೂ ಕೂಡ, ಕೈಕಾಲುಗಳನ್ನು ಚೊಕ್ಕಟವಾಗಿ ತೊಳೆದು ಶುಭ್ರವಸ್ತ್ರಗಳನ್ನು ಧರಿಸಿಯೇ ಮನೆಯೊಳಕ್ಕೆ ಪ್ರವೇಶಮಾಡಬೇಕೆಂದು ಸಾಕ್ಷಾತ್ ಪರಮಾತ್ಮನೇ ಅಪ್ಪಣೆ ಕೊಡಿಸಿದ್ದಾನೆ.

೭೬. ಯಾರು ಸ್ನಾನಮಾಡಿ ಬಂದು, ಕಾಲನ್ನು ತೊಳೆಯದೇ ಮನೆಯನ್ನು ಪ್ರವೇಶಿಸುವರೋ, ಅವರು ಮಾಡಿದ ಸ್ನಾನವೂ, ಜಪವೂ, ಹೋಮ, ಅಧ್ಯಾ[illegible]ನ, ತರ್ಪಣ, ಬಲಿ, ವೈಶ್ವದೇವ ಮತ್ತು ಅತಿಥಿ ಸತ್ಕಾರಗಳೂ ವ್ಯರ್ಥವಾಗುವುವು.

೭೭. ಸ್ನಾನಮಾಡಿದ ಗೃಹಸ್ಥನು ಕೊಳಕು ಬಟ್ಟೆಯನ್ನುಟ್ಟು ಮನೆಯೊಳಕ್ಕೆ ಪ್ರವೇಶಿಸಿದರೆ, ಗೃಹಲಕ್ಷ್ಮಿಯು ಕುಪಿತಳಾಗಿ ಅವನಿಗೆ ಕ್ರೂರ ಶಾಪವನ್ನು ಕೊಟ್ಟು ಮನೆಯಿಂದ ಹೊರಟುಹೋಗುವಳು.

೭೮. ಮೊಣಕಾಲಿನಿಂದ ಮೇಲಕ್ಕೆ ಕಾಲು ತೊಳೆದುಕೊಳ್ಳುವ ಬ್ರಾಹ್ಮಣನು ಗಂಗಾನದಿಯನ್ನು ನೋಡಿ ಪವಿತ್ರನಾಗುವವರೆಗೂ ಚಂಡಾಲನೆನಿಸಿಕೊಳ್ಳುತ್ತಾನೆ.

೭೯. ಆದ್ದರಿಂದ ಸ್ನಾನಮಾಡಿ ಬಂದ ಬ್ರಾಹ್ಮಣನು ಕಾಲುಗಳನ್ನು ತೊಳೆದು ಕೊಂಡು ಮನೆಯೊಳಕ್ಕೆ ಹೋಗಿ, ಆಸನದಲ್ಲಿ ಕುಳಿತು, ಶುದ್ಧಾಚಮನ ಮಾಡಿ, ಭಕ್ತಿಯಿಂದ ವೇದೋಕ್ತಕ್ರಮದಲ್ಲಿ ಇಷ್ಟದೇವತಾಪೂಜೆಯನ್ನೆಸಗಬೇಕು.

ಶಾಲಗ್ರಾಮೇ ಮಣೌ ಮಂತ್ರೇ ಪ್ರತಿಮಾಯಾಂ ಜಲೇ ಸ್ಥಲೇ ।
ಗೋಪೃಷ್ಠೇ ವಾ ಗುರೌ ವಿಪ್ರೇ ಪ್ರಶಸ್ತಮರ್ಚನಂ ಹರೇಃ ॥ ೮೦ ॥

ಸರ್ವೇಷು ಶಸ್ತಾ ಪೂಜಾ ಚ ಶಾಲಗ್ರಾಮೇ ಚ ನಾರದ ।
ಸುರಾಣಾಮೇವ ಸರ್ವೇಷಾಂ ಯತ್ರಾಧಿಷ್ಠಾನಮೇವ ಚ ॥ ೮೧ ॥

ಸ ಸ್ನಾತಃ ಸರ್ವತೀರ್ಥೇಷು ಸರ್ವಯಜ್ಞೇಷು ದೀಕ್ಷಿತಃ ।
ಶಾಲಗ್ರಾಮೋದಕೇನೈವ ಯೋಽಭಿಷೇಕಂ ಸಮಾಚರೇತ್ ॥ ೮೨ ॥

ಶಾಲಗ್ರಾಮಜಲಂ ಭಕ್ತ್ಯಾ ನಿತ್ಯಮಶ್ನಾತಿ ಯೋ ನರಃ ।
ಜೀವನ್ಮುಕ್ತಃ ಸ ಚ ಭವೇದ್ಯಾತ್ಯಂತೇ ಕೃಷ್ಣಮಂದಿರಂ ॥ ೮೩ ॥

ಶಾಲಗ್ರಾಮಶಿಲಾಚಕ್ರಂ ಯತ್ರ ತಿಷ್ಠತಿ ನಾರದ ।
ಸ ಚಕ್ರೀ ಭಗವಾಂಸ್ತತ್ರ ಸರ್ವತೀರ್ಥಾನಿ ನಿಶ್ಚಿತಂ ॥ ೮೪ ॥

---

೮೦. 'ಸಾಲಿಗ್ರಾಮಶಿಲೆ, ಸ್ಫಟಿಕ ಮುಂತಾದ ಮಣಿ, ವಿಗ್ರಹ, ನೀರು, ಮಣ್ಣು, ಗೋವಿನ ಹಿಂಭಾಗ, ಗುರು, ಮತ್ತು ಬ್ರಾಹ್ಮಣ' ಇವುಗಳಾವುದರಲ್ಲಾದರೂ ಪರಮಾತ್ಮನನ್ನು ಆವಾಹನೆಮಾಡಿ, ಪೂಜೆಮಾಡುವುದು, ಉತ್ತಮವಾದುದು.

೮೧. ಎಲೈ ನಾರದನೇ! ಮೇಲೆ ಹೇಳಿದ ಎಲ್ಲದಕ್ಕಿಂತ, ಎಲ್ಲ ದೇವತೆಗಳೂ ನೆಲೆಸಿರುವ ಸಾಲಿಗ್ರಾಮವನ್ನು ಪೂಜಿಸುವುದೇ ಶ್ರೇಷ್ಠವಾದುದು.

೮೨. ಸಾಲಿಗ್ರಾಮಕ್ಕೆ ಅಭಿಷೇಕಮಾಡಿದ ನೀರನ್ನು ತಲೆಯ ಮೇಲೆ ಪ್ರೋಕ್ಷಿಸಿ ಕೊಳ್ಳುವಾತನು, ಪುಣ್ಯತೀರ್ಥಗಳಲ್ಲಿ ಮಿಂದ ಫಲವನ್ನೂ, ಎಲ್ಲ ಯಜ್ಞಯಾಗಗಳಲ್ಲಿ ದೀಕ್ಷಿತನಾದ ಫಲವನ್ನೂ ಹೊಂದುವನು.

೮೩. ನಿತ್ಯವೂ ಭಕ್ತಿಯಿಂದ ಸಾಲಿಗ್ರಾಮ ತೀರ್ಥವನ್ನು ಪಾನಮಾಡುವಾತನು ಜೀವನ್ಮುಕ್ತನಾಗಿ, ಶ್ರೀಕೃಷ್ಣಪರಮಾತ್ಮನ ಮಂದಿರದಲ್ಲಿ ಅನವರತ ಸೇವೆಗೈಯುವನು.

೮೪. ಚಕ್ರಾಕಾರವಾದ ಸಾಲಿಗ್ರಾಮಶಿಲೆಯು ಇರುವೆಡೆಯಲ್ಲೆಲ್ಲಾ, ಸುದರ್ಶನ ಚಕ್ರಹಸ್ತನಾದ ಪರಮಾತ್ಮನೂ, ಎಲ್ಲ ಪುಣ್ಯತೀರ್ಥಗಳೂ ನೆಲೆಸಿರುವುವು.

ತತ್ರ ಯೋ ಹಿ ಮೃತೋ ದೇಹೀ ಜ್ಞಾನಾಜ್ಞಾನೇನ ದೈವತಃ ।
ರತ್ನನಿರ್ಮಿತಯಾನೇನ ಸ ಯಾತಿ ಶ್ರೀಹರೇಃ ಪದಂ ॥ ೮೫ ॥

ಶಾಲಗ್ರಾಮಂ ವಿನಾನ್ಯತ್ರ ಕಃ ಸಾಧುಃ ಪೂಜಯೇದ್ಧರಿಂ ।
ಕೃತ್ವಾ ತತ್ರ ಹರೇಃ ಪೂಜಾಂ ಪರಿಪೂರ್ಣಫಲಂ ಲಭೇತ್ ॥ ೮೬ ॥

ಪೂಜಾಧಾರಶ್ಚ ಕಥಿತಃ ಶ್ರೂಯತಾಂ ಪೂಜನಕ್ರಮಃ ।
ಹರೇಃ ಪೂಜಾಂ ಬಹುಮತಾಂ ಕಥಯಾಮಿ ಯಥಾಗಮಂ ॥ ೮೭ ॥

ಕಶ್ಚಿದ್ದದಾತಿ ಹರಯೇ ಚೋಪಚಾರಾಂಶ್ಚ ಷೋಡಶ ।
ಸುಂದರಾಣಿ ಪವಿತ್ರಾಣಿ ನಿತ್ಯಂ ಭಕ್ತ್ಯಾ ಚ ವೈಷ್ಣವಃ ॥ ೮೮ ॥

ಕಶ್ಚಿದ್ದ್ವಾದಶ ವಸ್ತೂನಿ ಪಂಚ ವಸ್ತೂನಿ ಕಶ್ಚನ ।
ಯೇಷಾಮೇವ ಯಥಾ ಶಕ್ತಿರ್ಭಕ್ತಿರ್ಮೂಲಂ ಚ ಪೂಜನೇ ॥ ೮೯ ॥

---

೮೫. ಜ್ಞಾನಪೂರ್ವಕವಾಗಲೀ, ಅಜ್ಞಾನದಿಂದಾಗಲೀ, ಯಾವನು ಸಾಲಿಗ್ರಾಮಶಿಲೆಯ ಸಮೀಪದಲ್ಲಿ ಮೃತಿಹೊಂದುವನೋ, ಆತನು ರತ್ನವಿಮಾನದಲ್ಲಿ ಕುಳಿತು ಶ್ರೀಹರಿಯ ಲೋಕಕ್ಕೆ ತೆರಳುವನು

೮೬. ಸತ್ಪುರುಷನು ಸಾಲಿಗ್ರಾಮಶಿಲೆಯನ್ನುಳಿದು ಬೇರೆಡೆ ಹರಿಯನ್ನು ಪೂಜಿಸುವುದಿಲ್ಲ. ಸಾಲಿಗ್ರಾಮದಲ್ಲಿ ಹರಿಯನ್ನು ಪೂಜಿಸುವುದರಿಂದ ಪೂರ್ಣಫಲವನ್ನು ಪಡೆಯಬಹುದು.

೮೭. ಇದುವರೆಗೆ ಪೂಜೆಯ ಅವಲಂಬನವನ್ನು (ಆಧಾರವನ್ನು) ಹೇಳಿದುದಾಯಿತು. ಈಗ ಹರಿಪೂಜೆಯ ಭಿನ್ನಭಿನ್ನ ಕ್ರಮಗಳನ್ನು ಶಾಸ್ತ್ರೋಕ್ತವಾಗಿ ವಿವರಿಸುವೆನು.

೮೮–೮೯. ವಿಷ್ಣುಭಕ್ತರು ತಮ್ಮ ಶಕ್ತ್ಯನುಗುಣವಾಗಿ, ಷೋಡಶೋಪಚಾರದಿಂದ ಕೆಲವರೂ, ಸುಂದರವೂ ಪವಿತ್ರವೂ ಆದ ದ್ವಾದಶವಸ್ತುಗಳ ಸಮರ್ಪಣೆಯಿಂದ ಕೆಲವರೂ, ಐದೇ ವಸ್ತುಗಳ ಸಮರ್ಪಣೆಯಿಂದ ಮತ್ತೆ ಕೆಲವರೂ, ಪೂಜಿಸುವರು. ಪೂಜೆಯಲ್ಲಿ ಭಕ್ತಿಯು ಪ್ರಧಾನವೇ ಹೊರತು ಬಾಹ್ಯವಸ್ತುಗಳಲ್ಲ.

ಆಸನಂ ವಸನಂ ಪಾದ್ಯಮರ್ಘ್ಯಮಾಚಮನೀಯಕಂ ।
ಪುಷ್ಪಂ ಚಂದನಧೂಪಂ ಚ ದೀಪಂ ನೈವೇದ್ಯಮುತ್ತಮಂ　　॥ ೯೦ ॥

ಗಂಧಂ ಮಾಲ್ಯಂ ಚ ಶಯ್ಯಾಂ ಚ ಲಲಿತಾಂ ಸುವಿಲಕ್ಷಣಾಂ ।
ಜಲಮನ್ನಂ ಚ ತಾಂಬೂಲಂ ಸಾಧಾರಂ ದೇಯಮೇವ ಚ　　॥ ೯೧ ॥

ಗಂಧಾನ್ನತಲ್ಪತಾಂಬೂಲಂ ವಿನಾ ದ್ರವ್ಯಾಣಿ ದ್ವಾದಶ ।
ಪಾದ್ಯಾರ್ಘ್ಯ ಜಲನೈವೇದ್ಯ ಪುಷ್ಪಾಣ್ಯೇತಾನಿ ಪಂಚ ಚ　　॥ ೯೨ ॥

ಸರ್ವಾಣ್ಯೇತಾನಿ ಮೂಲೇನ ದದ್ಯಾತ್ಸಾಧಕಸತ್ತಮಃ ।
ಗುರೂಪದಿಷ್ಟಂ ಮೂಲಂ ಚ ಪ್ರಶಸ್ತಂ ಸರ್ವಕರ್ಮಸು　　॥ ೯೩ ॥

೯೦–೯೧. ಇದು ಷೋಡಶೋಪಚಾರಪೂಜಾಕ್ರಮ :—ಆಸನ, ಪಾದ್ಯ, ಅರ್ಘ್ಯ, ಆಚಮನ, ಸ್ನಾನ, ವಸ್ತ್ರ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ಜಲ, ತಾಂಬೂಲ, ಸುವರ್ಣಪುಷ್ಪ, ನೀರಾಜನ ಮತ್ತು ಶಯ್ಯಾ–ಇವುಗಳನ್ನು ಭಕ್ತಿಯಿಂದ ಪರಮಾತ್ಮನಿಗೆ ಕ್ರಮವಾಗಿ ಅರ್ಪಿಸಬೇಕು.

೯೨. ಮೇಲಿನವುಗಳಲ್ಲಿ, ಗಂಧ, ನೈವೇದ್ಯ, ಶಯ್ಯಾ (ಹಾಸಿಗೆ), ತಾಂಬೂಲಗಳನ್ನು ಬಿಟ್ಟು ಉಳಿದುದನ್ನು ಅರ್ಪಿಸುವುದೇ ದ್ವಾದಶೋಪಚಾರಪೂಜೆಯೆನಿಸುವುದು. ಪಾದ್ಯ, ಅರ್ಘ್ಯ, ಸ್ನಾನ, ಪುಷ್ಪ, ನೈವೇದ್ಯಗಳನ್ನು ಮಾತ್ರ ಅರ್ಪಿಸಿದರೆ ಅದು ಪಂಚೋಪಚಾರಪೂಜೆಯೆಂದೆನಿಸುವುದು.

೯೩. ಉತ್ತಮನಾದ ಭಕ್ತನು ಈ ಪೂಜೆಯೆಲ್ಲವನ್ನೂ, ಶಾಸ್ತ್ರಾಧಾರಯುತವಾಗಿ, ಇಷ್ಟದೇವತಾ ಮಂತ್ರೋಚ್ಚಾರಣಪೂರ್ವಕವಾಗಿ ಮಾಡಬೇಕು. ಎಲ್ಲ ಕರ್ಮಗಳಿಗೂ ಗುರೂಪದಿಷ್ಟವಾದ ಮಂತ್ರವೇ ಮುಖ್ಯವಾದುದು.

ಆದೌ ಕೃತ್ವಾ ಭೂತಶುದ್ಧಿಂ ಪ್ರಾಣಾಯಾಮಂ ತತಃ ಪರಂ ।
ಅಂಗಪ್ರತ್ಯಂಗಯೋರ್ನ್ಯಾಸಃ ಮಂತ್ರನ್ಯಾಸಂ ತತಃ ಪರಂ ॥ ೯೪ ॥

ವರ್ಣನ್ಯಾಸಂ ವಿನಿರ್ವರ್ತ್ಯ ಚಾರ್ಘ್ಯಪಾತ್ರಂ ವಿನಿರ್ದಿಶೇತ್ ।
ತ್ರಿಕೋಣಮಂಡಲಂ ಕೃತ್ವಾ ತತ್ರ ಕೂರ್ಮಂ ಪ್ರಪೂಜಯೇತ್ ॥ ೯೫ ॥

ಜಲೇನಾಪೂರ್ಯ ಶಂಖಂ ಚ ತತ್ರ ಸಂಸ್ಥಾಪಯೇದ್ದ್ವಿಜ ।
ಜಲಂ ಸಂಪೂಜ್ಯ ವಿಧಿವತ್ತೀರ್ಥಾನ್ಯಾವಾಹಯೇತ್ತತಃ ॥ ೯೬ ॥

ಪೂಜೋಪಕರಣಂ ತೇನ ಜಲೇನ ಕ್ಷಾಲಯೇತ್ಪುನಃ ।
ತತೋ ಗೃಹೀತ್ವಾ ಪುಷ್ಪಂ ಚ ಕೃತ್ವಾ ಯೋಗಾಸನಂ ಶುಚಿಃ ॥ ೯೭ ॥

ಧ್ಯಾನೇನ ಗುರುದತ್ತೇನ ಧ್ಯಾಯೇತ್ಕೃಷ್ಣಮನನ್ಯಧೀಃ ।
ಧ್ಯಾತ್ವಾ ಪಾದ್ಯಾದಿಕಂ ಸರ್ವಂ ದದ್ಯಾನ್ಮೂಲೇನ ಸಾಧಕಃ ॥ ೯೮ ॥

೯೪–೯೫. ಮೊದಲು 'ಅಪಸರ್ಪಂತು ಯೇ ಭೂತಾ' ಎಂಬ ಮಂತ್ರೋಚ್ಚಾರಣೆಯಿಂದ ಭೂತಶುದ್ಧಿಯನ್ನು ಮಾಡಿ, ಅನಂತರ ಕ್ರಮವಾಗಿ ಪ್ರಾಣಾಯಾಮವನ್ನೂ, ಅಂಗಪ್ರತ್ಯಂಗಗಳಲ್ಲಿ ಆಯಾಯ ದೇವತೆಯ ಆವಾಹನೆಯನ್ನೂ, ಮಂತ್ರನ್ಯಾಸ-ವರ್ಣನ್ಯಾಸಗಳನ್ನೂ (ಅಕ್ಷರನ್ಯಾಸ), ನೆರವೇರಿಸಿ ಕಲಶೋದಕವನ್ನು ಪೂಜಿಸಿ ತ್ರಿಕೋಣಾಕಾರವಾದ ಮಂಡಲದಲ್ಲಿ ಕೂರ್ಮಾವತಾರಿಯಾದ ಪರಮಾತ್ಮನನ್ನು ಪೂಜಿಸಬೇಕು.

೯೬. ಅನಂತರ ಶಂಖವನ್ನು ತೊಳೆದು, ನೀರಿನಿಂದ ತುಂಬಿ, ಆ ಮಂಡಲದಲ್ಲಿರಿಸಿ, ಪೂಜಿಸಿ, ಆ ನೀರಿನಲ್ಲಿ ವೇದೋಕ್ತಮಂತ್ರದಿಂದ ಎಲ್ಲ ತೀರ್ಥಗಳನ್ನೂ ಆವಾಹನೆಮಾಡಬೇಕು.

೯೭–೯೮. ಶಂಖೋದಕದಿಂದ ಪೂಜಾಸಾಮಗ್ರಿಗಳನ್ನು ತೊಳೆದು ಅನಂತರ ಪದ್ಮಾಸನವನ್ನು ಹಾಕಿಕೊಂಡು, ಪುಷ್ಪವನ್ನು ಕೈಯ್ಯಲ್ಲಿ ಹಿಡಿದುಕೊಂಡು, ಗುರೂಪದೇಶಾನುಸಾರವಾಗಿ ಪರಮಾತ್ಮನನ್ನು ಅನನ್ಯಭಕ್ತಿಯಿಂದ ಧ್ಯಾನಿಸಿ ಮಂತ್ರಪೂರ್ವಕವಾಗಿ ಪಾದ್ಯಾದಿಪೂಜೆಗಳನ್ನು ಪ್ರಾರಂಭಿಸಬೇಕು.

ಅಂಗಪ್ರತ್ಯಂಗದೇವಂ ಚ ತಂತ್ರೋಕ್ತಂ ಪೂಜಯೇದ್ಧರಿಂ ।
ಮೂಲಂ ಜಪ್ತ್ವಾ ಯಥಾಶಕ್ತಿ ದೇವಮಂತ್ರಂ ವಿಸರ್ಜಯೇತ್ ॥ ೯೯ ॥

ದತ್ವೋಪಹಾರಂ ವಿವಿಧಂ ಸ್ತುತ್ವಾ ಚ ಕವಚಂ ಪಠೇತ್ ।
ತತಃ ಕೃತ್ವಾ ಪರೀಹಾರಂ ಮೂರ್ಧ್ನಾ ಚ ಪ್ರಣಮೇದ್ಭುವಿ ॥ ೧೦೦ ॥

ಕೃತ್ವಾ ವೈ ದೇವಪೂಜಾಂ ಚ ಯಜ್ಞಂ ಕುರ್ಯಾದ್ವಿಚಕ್ಷಣಃ ।
ಶ್ರೌತಸ್ಮಾರ್ತಾಗ್ನಿಯುಕ್ತಂ ಚ ಬಲಿಂ ದದ್ಯಾತ್ತತೋ ಮುನೇ ॥ ೧೦೧ ॥

ನಿತ್ಯಶ್ರಾದ್ಧಂ ಯಥಾಶಕ್ತಿ ದಾನಂ ವಿತ್ತಾನುರೂಪಕಂ ।
ಕೃತ್ವಾ ಕೃತೀ ಸ ವಿಹರೇತ್ಕ್ರಮ ಏಷ ಶ್ರುತೌ ಶ್ರುತಃ ॥ ೧೦೨ ॥

---

೯೯. ಅಂಗಪ್ರತ್ಯಂಗ ದೇವತೆಗಳೊಡಗೂಡಿದ ಹರಿಪರಮಾತ್ಮನನ್ನು ಶಾಸ್ತ್ರೋಕ್ತವಾಗಿ ಪೂಜಿಸಿ, ಮೂಲಮಂತ್ರವನ್ನು ಶಕ್ತ್ಯನುಗುಣವಾಗಿ ಜಪಿಸಿ, ಅನಂತರ ದೇವಮಂತ್ರವನ್ನು ವಿಸರ್ಜನೆಮಾಡಬೇಕು.

೧೦೦. ವಿಧವಿಧವಾದ ಭಕ್ಷ್ಯಭೋಜ್ಯಾದಿ ಉಪಹಾರಗಳನ್ನು ಅರ್ಪಿಸಿ, ಸ್ತುತಿಸಿ, ಕವಚವನ್ನು ಪಠಿಸಿ, ಕ್ಷಮಾಪಣೆ ಬೇಡಿಕೊಂಡು-ಅನಂತರ ಭೂಮಿಯ ಮೇಲೆ ಸಾಷ್ಟಾಂಗವೆರಗಬೇಕು.

೧೦೧. ಇಂತು ದೇವಪೂಜೆಯನ್ನು ಮಾಡಿ, ಶ್ರೌತಸ್ಮಾರ್ತಾಗ್ನಿಯುತವಾದ ಬ್ರಹ್ಮಯಜ್ಞವನ್ನಾಚರಿಸಿ, ಅನಂತರ ವೈಶ್ವದೇವ ಬಲಿಯನ್ನು ಅರ್ಪಿಸಬೇಕು.

೧೦೨. ದೇವರ್ಷಿಪಿತೃತರ್ಪಣರೂಪವಾದ ನಿತ್ಯಶ್ರಾದ್ಧವನ್ನೂ, ತನ್ನ ಆದಾಯಕ್ಕೆ ತಕ್ಕ ದಾನವನ್ನೂ ಮಾಡಿ, ಗೃಹಸ್ಥನು ಕೃತಕೃತ್ಯನಾಗಬೇಕೆಂಬ ಈ ಮೇಲೆ ಹೇಳಿದ ಕ್ರಮವು ವೇದೋಕ್ತವಾಗಿದೆ.

ಇತಿ ತೇ ಕಥಿತಂ ಸರ್ವಂ ವೇದೋಕ್ತಂ ಸೂತ್ರಮುತ್ತಮಂ ।
ಆಹ್ನಿಕಸ್ಯ ಚ ವಿಪ್ರಾಣಾಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೦೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಶಿವನಾರದ ಸಂವಾದೇ ಆಹ್ನಿಕ ನಿರೂಪಣಂ ನಾಮ ಷಡ್ವಿಂಶತಿತಮೋಽಧ್ಯಾಯಃ

---

೧೦೩. ಎಲೈ ನಾರದನೇ, ಬ್ರಾಹ್ಮಣರು ವೇದೋಕ್ತರೀತಿಯಲ್ಲಿ ಆಚರಿಸಬೇಕಾದ ಆಹ್ನಿಕಕ್ರಮವನ್ನು ಇದುವರೆಗೂ ವಿಸ್ತಾರವಾಗಿ ಹೇಳಿದುದಾಯಿತು. ಇನ್ನೇನಾದರೂ ನಿನ್ನ ಅಭಿಲಾಷೆಯಿದ್ದರೆ ಪ್ರಶ್ನಿಸಿ ತಿಳಿದುಕೊಳ್ಳಬಹುದು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಬ್ರಹ್ಮಖಂಡದ ಶಿವನಾರದ ಸಂವಾದದಲ್ಲಿ ಆಹ್ನಿಕ ನಿರೂಪಣವೆಂಬ ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೊಂಬತ್ತನೆಯ ಅಧ್ಯಾಯದ ಸಾರಾಂಶವು

ಬ್ರಾಹ್ಮಣರು ಆಚರಿಸಬೇಕಾದ ನಿತ್ಯಕರ್ಮದ ವಿಧಾನವನ್ನು ಅರುಹಬೇಕೆಂದು ನಾರದನು ಕೇಳಿದಾಗ ಪರಮೇಶ್ವರನು ಇಂತೆಂದನು. ‘ ಬ್ರಾಹ್ಮಣನು ಬ್ರಾಹ್ಮೀ ಮುಹೂರ್ತದಲ್ಲೆದ್ದು ರಾತ್ರಿಯುಟ್ಟ ಬಟ್ಟೆಯನ್ನು ತೆಗೆದು ನಿರ್ಮಲವಾದ ಮನಸ್ಸಿನಿಂದ ಮೊದಲು ತನ್ನ ವಿದ್ಯಾಗುರುವನ್ನು ಧ್ಯಾನಿಸಿ, ಅನಂತರ ಶುದ್ಧಹೃದಯದಿಂದ ತನ್ನ ಇಷ್ಟದೇವತೆಯನ್ನು ಧ್ಯಾನಿಸಬೇಕು. ಗುರುವು ಮಂತ್ರೋಪದೇಶ ಮಾಡಿ, ಅವರ ಮೂಲಕ ದೇವತೆಯ ಸ್ವರೂಪಜ್ಞಾನವುಂಟಾಗುವುದರಿಂದ ದೇವತೆಗಿಂತ ಗುರುವೇ ಶ್ರೇಷ್ಠನೆನಿಸುವನು. ಈ ರೀತಿ ಗುರು ಮತ್ತು ಇಷ್ಟದೇವತೆಯನ್ನು ಧ್ಯಾನಿಸಿದ ನಂತರ ಶಾಸ್ತ್ರವಿಹಿತವಾದ ನಿರ್ಮಲ ಸ್ಥಳವಲ್ಲಿ, ಗುಂಡಿಯೊಂದನ್ನು ತೆಗೆದು, ಮೂಲಮೂತ್ರ ವಿಸರ್ಜನೆಮಾಡಿ, ಮಣ್ಣಿನಿಂದ ಅದನ್ನು ಮುಚ್ಚಿ ಅನಂತರ ತನ್ನ ಶರೀರವನ್ನು ಶಾಸ್ತ್ರವಿಹಿತಕ್ರಮದಂತೆ, ಮಣ್ಣು ನೀರುಗಳಿಂದ ಶುಚಿಮಾಡಿ ಕೊಳ್ಳಬೇಕು. ಆ ರೀತಿ ಶುಚಿಮಾಡಿಕೊಳ್ಳದವನು ಯಾವ ಸತ್ಕರ್ಮಾಚರಣೆಗೂ ಅರ್ಹನಾಗುವುದಿಲ್ಲ.

ಅನಂತರ ನೀರಿನಿಂದ ಬಾಯಿಮುಕ್ಕಳಿಸಿ ಶುದ್ಧಿಮಾಡಿಕೊಂಡು ಹಲ್ಲುಗಳನ್ನು ವಿಹಿತವಾದ ಕಡ್ಡಿಗಳಿಂದ ಉಜ್ಜಿ ತೊಳೆದುಕೊಂಡು ಶುಭ್ರವಾದ ಎರಡು ಬಟ್ಟೆಗಳನ್ನು ಧರಿಸಿ, ಆಚಮನಪೂರ್ವಕವಾಗಿ ಪ್ರಾತಃಸಂಧ್ಯೆಯನ್ನು ಆಚರಿಸಬೇಕು. ನಿತ್ಯವೂ ಸಂಧ್ಯಾವಂದನೆಯನ್ನಾಚರಿಸದವನು ಯಾವ ಸತ್ಕರ್ಮ ಮಾಡಲೂ ಅರ್ಹನಾಗುವುದಿಲ್ಲ. ಅನಂತರ ಕಾಲದೇಶಾನುಗುಣವಾಗಿ ಹೊಳೆಯಲ್ಲಾಗಲೀ, ಕೆರೆಯಲ್ಲಾಗಲೀ, ಕಟ್ಟೆಗಳಲ್ಲಾಗಲೀ, ನಾಭಿಪ್ರಮಾಣದ ನೀರಿಗಿಳಿದು ಸಂಕಲ್ಪಪೂರ್ವಕವಾಗಿ ಸ್ನಾನ ಮಾಡಿ, ಎಲ್ಲ ಪುಣ್ಯತೀರ್ಥಗಳನ್ನೂ ಅಲ್ಲಿ ಆವಾಹನೆ ಮಾಡಿ ಪುನಃ ಮಿಂದು ಮೇಲಕ್ಕೆ ಬಂದು, ತನ್ನ ಮತಾನುಗುಣವಾದ ತಿಲಕವನ್ನು ಧಾರಣೆಮಾಡಬೇಕು. ಅನಂತರ ಸಂಧ್ಯಾಕರ್ಮವನ್ನೂ ದೇವಪಿತೃತರ್ಪಣಗಳನ್ನೂ ಆಚರಿಸಿ, ಶುಭ್ರವಾದ ವಸ್ತ್ರಗಳನ್ನುಟ್ಟು ಬಂದು, ಕಾಲುಗಳನ್ನು ತೊಳೆದುಕೊಂಡು ಮನೆಯೊಳಕ್ಕೆ ಪ್ರವೇಶಿಸಬೇಕು. ಮತ್ತು ಶುಚಿಯಾದ ಆಸನದಲ್ಲಿ ಕುಳಿತು ಶಾಸ್ತ್ರೋಕ್ತರೀತ್ಯಾ ದೇವಾರ್ಚನೆಯನ್ನು ಮಾಡಿ, ತನ್ನ ಆಶ್ರಮಾನುಗುಣವಾಗಿ ಅಗ್ನಿಹೋತ್ರ ಮತ್ತು ವೈಶ್ವದೇವಗಳನ್ನು ಆಚರಿಸಬೇಕು. ಇದೇ ಬ್ರಾಹ್ಮಣನ ನಿತ್ಯವಿಧಿಯು.

[ಈ ಅಧ್ಯಾಯದಲ್ಲಿ ಹೇಳಿರುವ ನಿತ್ಯಕರ್ಮವಿಧಿಯು ವಿಜ್ಞಾನಶಾಸ್ತ್ರಕ್ಕೂ ಅನುಗುಣವಾಗಿದೆ. ಬೆಳಗಿನ ಝಾವದಲ್ಲೆದ್ದು ಮಲಮೂತ್ರವಿಸರ್ಜನೆಗಾಗಿ ನಿರ್ಜನ ಪ್ರದೇಶಕ್ಕೆ ಹೋಗುವುದರಿಂದ ನಿರ್ಮಲವಾದ ವಾಯುಸೇವನೆಯೂ, ಶರೀರ ವ್ಯಾಯಾಮವೂ ಆಗುವುದು. ಅಂತೆಯೇ ಮೃತ್ತಿಕಾಶೌಚದಿಂದ ದೇಹದಲ್ಲಿರುವ ವಿಷಕ್ರಿಮಿಗಳ ನಾಶವೂ, ದಂತಕಾಷ್ಠಗಳನ್ನುಪಯೋಗಿಸುವುದರಿಂದ ಹಲ್ಲಿನ ಪರಿಶುದ್ಧತೆಯ ಮೂಲಕ ಸಕಲ ರೋಗನಾಶವೂ ಉಂಟಾಗುವುದು. ಸಂಧ್ಯಾವಂದನೆಯನ್ನು ವಿಹಿತಕ್ರಮದಂತೆ ಆಚರಿಸುವುದರಿಂದ ಮನಸ್ಸಿನ ಏಕಾಗ್ರತೆಯನ್ನು ಸಾಧಿಸಿದಂತಾಗುವುದು. ಹೊಳೆ ಮತ್ತು ಕೆರೆಗಳಲ್ಲಿಳಿದು, ಮುಳುಗಿ, ಸಂಕಲ್ಪಪೂರ್ವಕವಾಗಿ ಸ್ನಾನಮಾಡುವುದರಿಂದ ಶರೀರದ ಕೊಳೆಯು ನೀರಿನಲ್ಲಿ ನೆನೆದು ಚೆನ್ನಾಗಿ ತೊಳೆದುಹೋಗುವುದು. ಭಸ್ಮಧಾರಣಾದಿಗಳಿಂದ ಶೈತ್ಯಪರಿಹಾರವಾಗುವುದು. ದೇವತಾರ್ಚನೆಗೆ ಮೊದಲು ಪ್ರಾಣಾಯಾಮ ಮತ್ತು ಆಸನಾದಿಗಳನ್ನು ಮಾಡುವುದರಿಂದ, ನಿಶ್ವಾಸೋಚ್ಛ್ವಾಸದ್ವಾರಗಳು ಮತ್ತು ಅವಯವಗಳ ಸಂಧಿಬಂಧಗಳು ಶುದ್ಧಿಯಾಗುವುವು. ಹಾಗೆಯೇ ದೇವತಾರ್ಚನೆಯಿಂದ ಮನಸ್ಸಿನ ನೈರ್ಮಲ್ಯವೂ, ವೈಶ್ವದೇವದಿಂದ ಮಿತಾಹಾರಪದ್ಧತಿಯೂ ಉಂಟಾಗಿ, ಮನುಜನು ರೋಗರುಜಿನಾದಿಗಳಿಲ್ಲದೆ ದೀರ್ಘಾಯುವಾಗಲು ಸಹಕಾರಿಯಾಗುವುದು. ಆದುದರಿಂದ ಸಂಧ್ಯಾವಂದನಾದಿ ಕರ್ಮಾಚರಣೆಯು ವ್ಯರ್ಥಕಾಲಕ್ಷೇಪವೆಂದು ಅರ್ವಾಚೀನರು ಹೇಳುವುದು ನಿರಾಧಾರವಾದುದು. ಪ್ರಾಚೀನ ಮಹರ್ಷಿಗಳು ಇದನ್ನು ಅನುಸರಿಸಿಕೊಂಡು ಬಂದುದರಿಂದಲೇ, ಅರೋಗದೃಢಕಾಯರಾಗಿ ಚಿರಕಾಲ ಬಾಳುತ್ತಿದ್ದರು. ಈಗಿನ ಕಾಲದಲ್ಲಿ ನಿತ್ಯಕರ್ಮಾನುಷ್ಠಾನಮಾಡುತ್ತಿರುವ ಕೆಲವರು ಶಾಸ್ತ್ರಕ್ರಮವನ್ನು ಅನುಸರಿಸದೆ ಬಾಹ್ಯಪ್ರಪಂಚದ ಕೋಟಲೆಗೆ ಸಿಕ್ಕಿ ತೊಳಲುತ್ತಿರುವುದರಿಂದ ನಿತ್ಯಕರ್ಮದ ಐಹಿಕಫಲವನ್ನು ಹೊಂದುತ್ತಿಲ್ಲ. ಅಷ್ಟು ಮಾತ್ರದಿಂದ ಶಾಸ್ತ್ರವಿಹಿತ ಕರ್ಮಾಚರಣೆಯು ಅನಾದರಣೀಯವಲ್ಲ. ವಿಧಿವಿಹಿತ ಕರ್ಮವನ್ನು ಕ್ರಮವಾಗಿ ಆಚರಿಸುವವರು ಇಂದಿಗೂ ಐಹಿಕಫಲವನ್ನೂ ಪಡೆಯುತ್ತಲೇ ಇದ್ದಾರೆ. ಮುಂದೆಯೂ ಪಡೆಯುತ್ತಾರೆಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ಎಲ್ಲರೂ ಶಾಸ್ತ್ರವಿಹಿತಕರ್ಮಾಚರಣೆಯಲ್ಲಿ ನಿರತರಾಗಬೇಕೆಂಬುದೇ ಈ ಅಧ್ಯಾಯದ ಮುಖ್ಯತತ್ತ್ವ.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಸಪ್ತವಿಂಶತಿತಮೋಽಧ್ಯಾಯಃ ॥

॥ ನಾರದ ಉವಾಚ ॥

ಭಕ್ಷ್ಯಂ ಕಿಂ ವಾಪ್ಯಭಕ್ಷ್ಯಂ ಚ ದ್ವಿಜಾನಾಂ ಗೃಹಿಣಾಂ ಪ್ರಭೋ ।
ಯತೀನಾಂ ವೈಷ್ಣವಾನಾಂ ಚ ವಿಧವಾಬ್ರಹ್ಮಚಾರಿಣಾಂ ॥ ೧ ॥

ಕಿಂ ಕರ್ತವ್ಯಮಕರ್ತವ್ಯಮಭೋಗ್ಯಂ ಭೋಗ್ಯಮೇವ ವಾ ।
ಸರ್ವಂ ಕಥಯ ಸರ್ವಜ್ಞ ಸರ್ವೇಶಃ ಸರ್ವಕಾರಣಂ ॥ ೨ ॥

॥ ಮಹೇಶ್ವರ ಉವಾಚ ॥

ಕಶ್ಚಿತ್ತಪಸ್ವೀ ವಿಪ್ರಶ್ಚ ನಿರಾಹಾರೀ ಚಿರಂ ಮುನಿಃ ।
ಕಶ್ಚಿತ್ಸಮೀರಣಾಹಾರೀ ಫಲಾಹಾರೀ ಚ ಕಶ್ಚನ ॥ ೩ ॥

ಇಪ್ಪತ್ತೇಳನೆಯ ಅಧ್ಯಾಯವು

೧–೨. ನಾರದ :—ಸರ್ವಜ್ಞನೂ, ಸರ್ವೇಶ್ವರನೂ ಆದ ಎಲೈ, ಪರಶಿವನೇ! ದ್ವಿಜರಲ್ಲಿ ಬ್ರಹ್ಮಚಾರಿ, ಗೃಹಸ್ಥ, ಸಂನ್ಯಾಸಿ, ವಿಧವೆ ಮತ್ತು ವೈಷ್ಣವರಿಗೆ ನಿಯಮಿತವಾದ ಭಕ್ಷ್ಯಾಭಕ್ಷ್ಯಪದಾರ್ಥಗಳನ್ನೂ, ಭೋಗ್ಯಾಭೋಗ್ಯವಸ್ತುಗಳನ್ನೂ, ಕರ್ತವ್ಯಾಕರ್ತವ್ಯ ಕರ್ಮಗಳನ್ನೂ, ಅವುಗಳಿಗೆ ಕಾರಣವನ್ನೂ ದಯವಿಟ್ಟು ವಿವರಿಸು.

೩–೪. ಮಹೇಶ್ವರ :—ಎಲೈ, ನಾರದನೇ, ಆಹಾರವನ್ನೇ ತೆಗೆದುಕೊಳ್ಳದೆ ಚಿರಕಾಲ ತಪಸ್ಸು ಮಾಡಿಕೊಂಡು ಕೆಲವರು ಮಹರ್ಷಿಗಳಿದ್ದರು. ಕೆಲವರು

ಅನ್ನಾಹಾರೀ ಯಥಾಕಾಲೇ ಗೃಹೀ ಚ ಗೃಹಿಣೀಯುತಃ ।
ಯೇಷಾಮಿಚ್ಛಾ ಚ ಯಾ ಬ್ರಹ್ಮನ್ ರುಚೀನಾಂ ವಿವಿಧಾಗತಿಃ ॥ ೪ ॥

ಹವಿಷ್ಯಾನ್ನಂ ಬ್ರಾಹ್ಮಣಾನಾಂ ಪ್ರಶಸ್ತಂ ಗೃಹಿಣಾಂ ಸದಾ ।
ನಾರಾಯಣೋಚ್ಛಿಷ್ಟಮಿಷ್ಟಮಭಕ್ಷ್ಯಮನಿವೇದಿತಂ ॥ ೫ ॥

ಅನ್ನಂ ವಿಷ್ಠಾ ಜಲಂ ಮೂತ್ರಂ ಯದ್ವಿಷ್ಣೋರನಿವೇದಿತಂ ।
ವಿಣ್ಮೂತ್ರಂ ಸರ್ವಥಾ ಪ್ರೋಕ್ತಮನ್ನಂ ಚ ಹರಿವಾಸರೇ ॥ ೬ ॥

ಬ್ರಾಹ್ಮಣಃ ಕಾಮತೋಽನ್ನಂ ಚ ಯೋ ಭುಂಕ್ತೇ ಹರಿವಾಸರೇ ।
ತ್ರೈಲೋಕ್ಯಜನಿತಂ ಪಾಪಂ ಸೋಽಪಿಭುಂಕ್ತೇ ನ ಸಂಶಯಃ ॥ ೭ ॥

ವಾಯುವನ್ನೂ, ಮತ್ತೆ ಕೆಲವರು ಹಣ್ಣುಗಳನ್ನೂ ಆಹಾರವಾಗಿ ಸೇವಿಸುತ್ತಿದ್ದರು. ಗೃಹಸ್ಥನು ತನ್ನ ಗೃಹಿಣಿಯೊಡನೆ ನಿಯಮಿತಕಾಲದಲ್ಲಿ ಮಾತ್ರ ಅನ್ನವನ್ನು (ಆಹಾರವನ್ನು) ತೆಗೆದುಕೊಳ್ಳುತ್ತಿದ್ದನು. ಒಬ್ಬೊಬ್ಬರಿಗೆ, ಒಂದೊಂದು ವಿಧವಾದ ಅಭಿಲಾಷೆಯಿರುವುದರಿಂದ, ಮೇಲೆ ಹೇಳಿದವುಗಳಲ್ಲಿ ಯಾವುದನ್ನು ಆಹಾರವಾಗಿ ತೆಗೆದುಕೊಂಡರೂ ತಪ್ಪಾಗುವುದಿಲ್ಲ.

೫. ಬ್ರಾಹ್ಮಣಗೃಹಸ್ಥರು ಹುತಶೇಷವಾದ (ಹೋಮಮಾಡಿ ಉಳಿದಿರುವ) ಅನ್ನವನ್ನು ತಿನ್ನುವುದು ಯಾವಾಗಲೂ ಪ್ರಶಸ್ತವಾದುದು. ಪರಮಾತ್ಮನಿಗೆ ನಿವೇದಿಸದಿರುವ ಅನ್ನವನ್ನು ತಿನ್ನಬಾರದು.

೬. ಪರಮಾತ್ಮನಿಗೆ ಅರ್ಪಿಸದ ಅನ್ನವು ಮಲವೆಂದೂ, ನೀರು ಮೂತ್ರವೆಂದೂ ತಿಳಿಯಬೇಕು. ಏಕಾದಶೀ ಮುಂತಾದ ಹರಿವಾಸರಗಳಲ್ಲಿ ಅನ್ನವನ್ನು ತಿನ್ನುವುದು ಮಲಮೂತ್ರಗಳನ್ನು ಸೇವಿಸಿದಂತೆ.

೭. ಯಾವ ಬ್ರಾಹ್ಮಣನು ಹರಿವಾಸರದಲ್ಲಿ ಇಚ್ಛಾಪೂರ್ವಕವಾಗಿ ಅನ್ನವನ್ನು ತಿನ್ನುವನೋ, ಅವನು ಮೂರುಲೋಕದ ಜೀವಿಗಳು ಮಾಡುವ ಪಾಪಕ್ಕೆ ಗುರಿಯಾಗುವನು.

ನ ಭೋಕ್ತವ್ಯಂ ನ ಭೋಕ್ತವ್ಯಂ ನ ಭೋಕ್ತವ್ಯಂ ಚ ನಾರದ ।
ಗೃಹಿಭಿರ್ಬ್ರಾಹ್ಮಣೈರನ್ನಂ ಸಂಪ್ರಾಪ್ತೇ ಹರಿವಾಸರೇ　　॥ ೮ ॥

ಗೃಹೀ ಶೈವಶ್ಚ ಶಾಕ್ತಶ್ಚ ಬ್ರಾಹ್ಮಣೋ ಜ್ಞಾನದುರ್ಬಲಃ ।
ಪ್ರಯಾತಿ ಕಾಲಸೂತ್ರಂ ಚ ಭುಕ್ತ್ವಾ ಚ ಹರಿವಾಸರೇ　　॥ ೯ ॥

ಕೃಮಿಭಿಃ ಶಾಲಿಮಾನೈಶ್ಚ ಭಕ್ಷಿತಸ್ತತ್ರ ತಿಷ್ಠತಿ ।
ವಿಣ್ಮೂತ್ರಭೋಜನಂ ಕೃತ್ವಾ ಯಾವದಿಂದ್ರಾಶ್ಚತುರ್ದಶ　　॥ ೧೦ ॥

ಜನ್ಮಾಷ್ಟಮೀ ದಿನೇ ರಾಮನವಮೀ ದಿವಸೇ ಹರೇಃ ।
ಶಿವರಾತ್ರೌ ಚ ಯೋ ಭುಂಕ್ತೇ ಸೋಽಪಿ ದ್ವಿಗುಣಪಾತಕೀ　　॥ ೧೧ ॥

ಉಪವಾಸಾಸಮರ್ಥಶ್ಚ ಫಲಂ ಮೂಲಂ ಜಲಂ ಪಿಬೇತ್ ।
ನ ಚೇಚ್ಛರೀರೀ ಸಭವೇದನ್ಯಥಾ ಚಾತ್ಮಘಾತಕಃ　　॥ ೧೨ ॥

---

೮. ಎಲೈ, ನಾರದನೇ, ಬ್ರಾಹ್ಮಣಗೃಹಸ್ಥರು ಹರಿವಾಸರದಲ್ಲಿ ಖಂಡಿತವಾಗಿಯೂ ಅನ್ನವನ್ನು ತಿನ್ನಕೂಡದೆಂದು ಸಾರಿ ಹೇಳುವೆನು.

೯. ಗೃಹಸ್ಥನಾಗಲೀ, ಶಿವೋಪಾಸಕನಾಗಲೀ, ಶಕ್ತ್ಯುಪಾಸಕನಾಗಲೀ, ಬ್ರಾಹ್ಮಣನು ತಿಳಿವಳಿಕೆ ಸಾಲದೆ ಹರಿವಾಸರದಲ್ಲಿ ಊಟಮಾಡಿದರೆ ಕಾಲಸೂತ್ರವೆಂಬ ನರಕದಿಂದ ಎಂದಿಗೂ ಬಿಡುಗಡೆಹೊಂದುವುದಿಲ್ಲ.

೧೦. ಅಲ್ಲದೆ–ಅನ್ನದ ಅಗುಳಿನಷ್ಟು ಸಂಖ್ಯೆ ಕ್ರಿಮಿಕೀಟಗಳಿಂದ ಭಕ್ಷಿತನಾಗಿ, ಮಲಮೂತ್ರಗಳನ್ನೇ ಸೇವಿಸುತ್ತಾ, ಚತುರ್ದಶ ಇಂದ್ರರ ಜೀವಿತಕಾಲದವರೆಗೂ ಅಲ್ಲಿ ತೊಳಲುವನು.

೧೧. ಶ್ರೀಕೃಷ್ಣಜನ್ಮಾಷ್ಟಮೀ, ಶ್ರೀರಾಮನವಮೀ ಮತ್ತು ಶಿವರಾತ್ರಿಯ ದಿವಸಗಳಲ್ಲೂ ಊಟಮಾಡುವವನು ದ್ವಿಗುಣಪಾಪಿಯಾಗುವನು,

೧೨. ಮೇಲ್ಕಂಡ ದಿವಸಗಳಲ್ಲಿ–ಶರೀರನಾಶಸಂಭವವೊದಗಿ ನಿರಾಹಾರಿಗಳಾಗಿರಲು ಸಾಧ್ಯವಾಗದಿದ್ದರೆ–ಹಣ್ಣು, ಗೆಡ್ಡೆ, ಗೆಣಸು ಮತ್ತು ನೀರನ್ನು ಸೇವಿಸಬಹುದು. ಹಾಗಿಲ್ಲದೆ ಊಟವನ್ನೇ ಮಾಡುವ ಮನುಜನು ಆತ್ಮಸ್ವರೂಪವನ್ನು ಹೊಂದಲಾಗದುದರಿಂದ ಆತ್ಮಹತ್ಯೆಯ ಪಾಪಕ್ಕೆ ಗುರಿಯಾಗುವನು.

ಸಕೃದ್ಭುಂಕ್ತೇ ಹವಿಷ್ಯಾನ್ನಂ ವಿಷ್ಣೋರ್ನೈವೇದ್ಯಮೇವ ಚ ।
ನ ಭವೇತ್ಪ್ರತ್ಯವಾಯೀ ಸ ಚೋಪವಾಸಫಲಂ ಲಭೇತ್ ॥ ೧೩ ॥

ಏಕಾದಶ್ಯಾಮನಾಹಾರಂ ಗೃಹೀ ವಿಪ್ರಶ್ಚ ಭಾರತೇ ।
ಸ ಚ ತಿಷ್ಠತಿ ವೈಕುಂಠೇ ಯಾವದ್ವೈ ಬ್ರಹ್ಮಣೋ ವಯಃ ॥ ೧೪ ॥

ಗೃಹಿಣಾಂ ಶೈವಶಾಕ್ತಾನಾಮಿದಮುಕ್ತಂ ಚ ನಾರದ ।
ವಿಶೇಷತೋ ವೈಷ್ಣವಾನಾಂ ಯತೀನಾಂ ಬ್ರಹ್ಮಚಾರಿಣಾಂ ॥ ೧೫ ॥

ನಿತ್ಯಂ ನೈವೇದ್ಯಭೋಜೀ ಯಃ ಶ್ರೀವಿಷ್ಣೋಸ್ಸ ಹಿ ವೈಷ್ಣವಃ ।
ನಿತ್ಯಂ ಶತೋಪವಾಸಾನಾಂ ಜೀವನ್ಮುಕ್ತಿಫಲಂ ಲಭೇತ್ ॥ ೧೬ ॥

---

೧೩. ಒಂದುವೇಳೆ ವಿಷ್ಣುವಿಗೆ ನಿವೇದಿಸಿದ ಹವಿಷ್ಯಾನ್ನವನ್ನು ಹರಿವಾಸರದಲ್ಲಿ ಒಂದು ಹೊತ್ತು ಊಟಮಾಡಿದರೂ ಅದು ಅಪರಾಧವಾಗುವುದಿಲ್ಲ. ಉಪವಾಸ ಮಾಡಿದ ಫಲವನ್ನು ಅವನೂ ಪಡೆಯುವನು.

೧೪. ಭರತಖಂಡದಲ್ಲಿರುವ ಬ್ರಾಹ್ಮಣಗೃಹಸ್ಥನು ಏಕಾದಶಿಯ ದಿವಸ ನಿರಾಹಾರಿಯಾಗಿದ್ದರೆ, ಅವನು ಬ್ರಹ್ಮನ ಆಯುಃಪರಿಮಿತಿಯಷ್ಟು ಕಾಲದವರೆಗೂ ವೈಕುಂಠಲೋಕದಲ್ಲಿ ನೆಲೆಸಿ ಸುಖವಾಗಿರುವನು.

೧೫. ಎಲೈ, ನಾರದನೇ, ಈ ಏಕಾದಶೀ ಉಪವಾಸವ್ರತವು ಗೃಹಸ್ಥರಿಗೂ, ಶೈವರು ಮತ್ತು ಶಾಕ್ತರಿಗೂ ಅದರಲ್ಲೂ ವಿಶೇಷವಾಗಿ ವೈಷ್ಣವರು, ಯತಿಗಳು ಮತ್ತು ಬ್ರಹ್ಮಚಾರಿಗಳಿಗೂ ವಿಹಿತವಾಗಿದೆ.

೧೬. ಪ್ರತಿದಿನವೂ ವಿಷ್ಣುವಿಗೆ ನಿವೇದಿಸಿದ ಆಹಾರವನ್ನು ತಿನ್ನುವವನೇ ನಿಜವಾದ ವೈಷ್ಣವನು. ಅಂಥ ವೈಷ್ಣವನಿಗೆ ನೂರಾರು ಉಪವಾಸಗಳ ಫಲವೂ, ಜೀವನ್ಮುಕ್ತಿಯೂ ಲಭಿಸುವುದು.

ವಾಂಛಂತಿ ತಸ್ಯ ಸಂಸ್ಪರ್ಶಂ ತೀರ್ಥಾನ್ಯಖಿಲದೇವತಾಃ ।
ಆಲಾಪಂ ದರ್ಶನಂ ಚೈವ ಸರ್ವಪಾಪಪ್ರಣಾಶನಂ ॥ ೧೭ ॥

ದ್ವಿಸ್ವಿನ್ನಮನ್ನಂ ಪೃಥುಕಂ ಶುದ್ಧಂ ದೇಶ ವಿಶೇಷಕೇ ।
ನಾತ್ಯಂತ ಶಸ್ತಂ ವಿಪ್ರಾಣಾಂ ಭಕ್ಷಣೇ ಚ ನಿವೇದನೇ ॥ ೧೮ ॥

ಅಭಕ್ಷ್ಯಂ ವೈ ಯತೀನಾಂ ಚ ವಿಧವಾಬ್ರಹ್ಮಚಾರಿಣಾಂ ।
ತಾಂಬೂಲಂ ಚ ಯಥಾ ಬ್ರಹ್ಮನ್ ತಥೈತದ್ವಸ್ತು ನ ಧ್ರುವಂ ॥ ೧೯ ॥

ತಾಂಬೂಲಂ ವಿಧವಾಸ್ತ್ರೀಣಾಂ ಯತೀನಾಂ ಬ್ರಹ್ಮಚಾರಿಣಾಂ ।
ತಪಸ್ವಿನಾಂ ಚ ವಿಪ್ರೇಂದ್ರ ಗೋಮಾಂಸಸದೃಶಂ ಧ್ರುವಂ ॥ ೨೦ ॥

ಸರ್ವೇಷಾಂ ಬ್ರಾಹ್ಮಣಾನಾಂ ಯದಭಕ್ಷ್ಯಂ ಶ್ರುಣು ನಾರದ ।
ಯದುಕ್ತಂ ಸಾಮವೇದೇ ಚ ಹರಿಣಾಚಾಹ್ನಿಕಕ್ರಮೇ ॥ ೨೧ ॥

---

೧೭. ಎಲ್ಲ ದೇವತೆಗಳೂ ಮತ್ತು ಸಕಲ ಪುಣ್ಯತೀರ್ಥಗಳೂ ಆ ವೈಷ್ಣವನ ಸ್ಪರ್ಶವನ್ನು ಬಯಸುವುವು. ಅವನನ್ನು ನೋಡಿ ಅವನೊಡನೆ ಮಾತನಾಡುವುದರಿಂದಲೇ ಜನರ ಸಮಸ್ತಪಾಪಗಳೂ ಕೂಡ ಪರಿಹಾರವಾಗುವುವು.

೧೮. ಕೆಲವು ದೇಶಗಳಲ್ಲಿ ಉಪವಾಸದ ದಿವಸ ಅವಲಕ್ಕಿಯನ್ನು ಉಪಯೋಗಿಸುವರು. ಅದು ಎರಡುಸಾರಿ ಬೇಯುವುದಾದ್ದರಿಂದ, ಅದನ್ನು ಪರಮಾತ್ಮನಿಗೆ ನಿವೇದಿಸುವುದೂ, ಬ್ರಾಹ್ಮಣರು ತಿನ್ನುವುದೂ ಅಷ್ಟು ಉಚಿತವಲ್ಲ.

೧೯. ವಿಶೇಷವಾಗಿ ಸನ್ಯಾಸಿ, ವಿಧವಾ ಮತ್ತು ಬ್ರಹ್ಮಚಾರಿಗಳಿಗೆ ಎಲೆ ಅಡಿಕೆಯಂತೆ (ತಾಂಬೂಲ) ಈ ಅವಲಕ್ಕಿಯ ಆಹಾರವೂ ನಿಷೇಧಿಸಲ್ಪಟ್ಟಿರುವುದು.

೨೦. ಎಲೈ ನಾರದನೇ! ವಿಧವೆಯರಾದ ಸ್ತ್ರೀಯರೂ, ಯತಿಗಳೂ, ಬ್ರಹ್ಮಚಾರಿಗಳೂ ಮತ್ತು ತಪಸ್ವಿಗಳೂ ತಾಂಬೂಲವನ್ನು ಗೋಮಾಂಸಕ್ಕೆ ಸಮಾನವೆಂದು ತಿಳಿಯಬೇಕು.

೨೧. ಎಲೈ ನಾರದನೇ, ಬ್ರಾಹ್ಮಣ ಸಾಮಾನ್ಯರೂ, ಸಾಮಾನ್ಯ ದಿವಸಗಳಲ್ಲೂ ತಿಂದು ಕುಡಿಯಬಾರದ ಕೆಲವು ತಿಂಡಿತೀರ್ಥಗಳನ್ನು ಸಾಮವೇದದ ಆಹ್ನಿಕ ಪ್ರಕರಣದಲ್ಲಿ ಪರಮಾತ್ಮನು ಅಪ್ಪಣೆಕೊಡಿಸಿರುವಂತೆ ವಿವರಿಸುವೆನು. ಸಾವಧಾನದಿಂದ ಕೇಳು.

ತಾಮ್ರಪತ್ರೇ ಪಯಃಪಾನಂ ಉಚ್ಛಿಷ್ಟೇ ಘೃತಭೋಜನಂ।
ದುಗ್ಧಂ ಲವಣಸಾರ್ಧಂ ಚ ಸದ್ಯೋ ಗೋಮಾಂಸಭಕ್ಷಣಂ ॥ ೨೨ ॥

ನಾರಿಕೇಲೋದಕಂ ಕಾಂಸ್ಯೇ ತಾಮ್ರಪಾತ್ರೇ ಸ್ಥಿತಂ ಲಘು ।
ಐಕ್ಷವಂ ತಾಮ್ರಪಾತ್ರಸ್ಥಂ ಸುರಾತುಲ್ಯಂ ನ ಸಂಶಯಃ ॥ ೨೩ ॥

ಉತ್ಥಾಯ ವಾಮಹಸ್ತೇನ ಯಸ್ತೋಯಂ ಪಿಬತಿ ದ್ವಿಜಃ ।
ಸುರಾಪೀ ಚ ಸ ವಿಜ್ಞೇಯಃ ಸರ್ವಧರ್ಮಬಹಿಷ್ಕೃತಃ ॥ ೨೪ ॥

ಅನಿವೇದ್ಯಂ ಹರೇರನ್ನಂ ಭುಕ್ತಶೇಷಂ ಚ ನಿತ್ಯಶಃ ।
ಪೀತಶೇಷಜಲಂ ಚೈವ ಗೋಮಾಂಸ ಸದೃಶಂ ಮುನೇ ॥ ೨೫ ॥

---

೨೨. ತಾಮ್ರದ ಪಾತ್ರೆಯಲ್ಲಿ ಹಾಲನ್ನು ಕುಡಿಯುವುದು, ಎಂಜಲು ತುಪ್ಪ ವನ್ನು (ಪಾತ್ರೆ ಎಂಜಲಾದ ನಂತರ ಬಡಿಸಿದ ತುಪ್ಪ) ತಿನ್ನುವುದು, ಉಪ್ಪು ಬೆರಕೆ ಯಾದ ಹಾಲನ್ನು ಉಪಯೋಗಿಸುವುದು ಈ ಮೂರು ಗೋಮಾಂಸಭಕ್ಷಣಕ್ಕೆ ಸಮನಾಗುವವು.

೨೩. ಕಂಚಿನ ಮತ್ತು ತಾಮ್ರದ ಪಾತ್ರೆಗಳಲ್ಲಿರುವ ಎಳನೀರೂ, (ಸುರಾ ವಿಶೇಷವೂ) ಮತ್ತು ತಾಮ್ರದ ಪಾತ್ರೆಯಲ್ಲಿರುವ ಕಬ್ಬಿನರಸ, ಪಾನಕ ಮುಂತಾದುವೂ ಮದ್ಯಕ್ಕೆ (ಹೆಂಡಕ್ಕೆ) ಸಮಾನವೆಂದೂ ತಿಳಿಯಬೇಕು.

೨೪. ದ್ವಿಜನಾದವನು ನಿಂತುಕೊಂಡು ಎಡಗೈಯಿಂದ ನೀರನ್ನು ಕುಡಿದರೆ ಅವನನ್ನು ಮದ್ಯಪಾಯಿಯಂತೆ ಎಲ್ಲ ಧರ್ಮಗಳಿಂದಲೂ ಬಹಿಷ್ಕರಿಸಬೇಕು.

೨೫. ಎಲೈ, ಋಷಿವರ್ಯನೆ, ಶ್ರೀಹರಿಗೆ ನಿವೇದಿಸಿದ ಅನ್ನವೂ ಒಬ್ಬರು ತಿಂದು ಮಿಕ್ಕಿರುವ ಅನ್ನವೂ, ಕುಡಿದು ಉಳಿದಿರುವ ನೀರೂ, ಗೋಮಾಂಸಕ್ಕೆ ಸದೃಶವಾದುದು.

ಕಲಿಂಗಣ ಫಲಂ ಚೈವ ಗೋಮಾಂಸಂ ಕಾರ್ತಿಕೇಸ್ಮೃತಂ ।
ಮಾಘೇ ಚ ಮೂಲಕಂ ಚೈವ ಕಲಂಬೀ ಶಯನೇ ತಥಾ ॥ ೨೬ ॥

ಶ್ವೇತವರ್ಣಂ ಚ ತಾಲಂ ಚ ಮಸೂರಂ ಮತ್ಸ್ಯಮೇವ ಚ ।
ಸರ್ವೇಷಾಂ ಬ್ರಾಹ್ಮಣಾನಾಂ ಚ ತ್ಯಾಜ್ಯಂ ಸರ್ವತ್ರ ದೇಶಕೇ ॥ ೨೭ ॥

ಮತ್ಸ್ಯಾಂಶ್ಚ ಕಾಮತೋ ಭುಕ್ತ್ವಾ ಸೋಪವಾಸಸ್ತ್ರ್ಯಹಂ ವಸೇತ್ ।
ಪ್ರಾಯಶ್ಚಿತ್ತಂ ತತಃ ಕೃತ್ವಾ ಶುದ್ಧಿಮಾಪ್ನೋತಿ ವಾಡವಃ ॥ ೨೮ ॥

ಪ್ರತಿಪತ್ಸು ಚ ಕೂಷ್ಮಾಂಡಮಭಕ್ಷ್ಯಂ ಹ್ಯರ್ಥನಾಶನಂ ।
ದ್ವಿತೀಯಾಯಾಂ ಚ ಬೃಹತೀಂ ಭೋಜನೇ ನ ಸ್ಮರೇದ್ಧರಿಂ ॥ ೨೯ ॥

---

೨೬. ಕಾರ್ತಿಕಮಾಸದಲ್ಲಿ ಕಡವೆಕಾಯನ್ನು ಉಪಯೋಗಿಸಿದರೆ ಗೋಮಾಂಸ ಭಕ್ಷಣಮಾಡಿದಂತಾಗುವುದು. ಅದೇ ರೀತಿ, ಮಾಘಮಾಸದಲ್ಲಿ–ಮೂಲಂಗಿಯೂ, ಚಾತುರ್ಮಾಸ್ಯವ್ರತಮಾಡುವಾಗ ಕದಂಬಫಲವೂ ನಿಷಿದ್ಧವಾಗಿದೆ.

೨೭. ಬಿಳಿದಾದ ತಾಳೆಯುಫಲವನ್ನೂ, ಕಾಡುಕಡಲೆಯನ್ನೂ, ಮೀನನ್ನೂ ಎಲ್ಲಾ ದೇಶಗಳಲ್ಲೂ ಬ್ರಾಹ್ಮಣರು ಉಪಯೋಗಿಸಕೂಡದು. ಇವು ಶಾಸ್ತ್ರದಲ್ಲಿ ನಿಷಿದ್ಧವಾಗಿವೆ.

೨೮. ಒಂದುವೇಳೆ, ತಿಳಿವಳಿಕೆಯಿಲ್ಲದೆ, ಬಯಕೆಯಿಂದ ಮೀನುಗಳನ್ನು ತಿಂದರೆ ಮೂರು ದಿವಸ ಉಪವಾಸಮಾಡಿ, ಪ್ರಾಯಶ್ಚಿತ್ತಮಾಡಿಕೊಳ್ಳುವುದರಿಂದ ಬ್ರಾಹ್ಮಣನು ಶುದ್ಧನಾಗಬಹುದು.

೨೯. ಪಾಡ್ಯದ ದಿವಸ ಕುಂಬಳಕಾಯನ್ನು ಉಪಯೋಗಿಸುವುದರಿಂದ ದ್ರವ್ಯ ನಾಶವಾಗುವುದು. ಬಿದಿಗೆಯ ದಿವಸ ಹೆಗ್ಗುಳ್ಳವನ್ನು ಆಹಾರದಲ್ಲಿ ಉಪಯೋಗಿಸ ಬಾರದು.

ಅಭಕ್ಷ್ಯಂ ಚ ಪಟೋಲಂ ಚ ಶತ್ರುವೃದ್ಧಿಕರಂ ಪರಂ ।
ತೃತೀಯಾಯಾಂ ಚತುರ್ಥ್ಯಾಂ ಚ ಮೂಲಕಂ ಧನನಾಶನಂ　　॥ ೩೦ ॥

ಕಲಂಕಕಾರಣಂ ಚೈವ ಪಂಚಮ್ಯಾಂ ಬಿಲ್ವಭಕ್ಷಣಂ ।
ತಿರ್ಯಗ್ಯೋನಿಂ ಪ್ರಾಪಯೇತ್ತು ಷಷ್ಠ್ಯಾಂ ವೈ ನಿಂಬಭಕ್ಷಣಂ　　॥ ೩೧ ॥

ರೋಗವೃದ್ಧಿಕರಂ ಚೈವ ನರಾಣಾಂ ತಾಲಭಕ್ಷಣಂ ।
ಸಪ್ತಮ್ಯಾಂ ಚ ತಥಾ ತಾಲಂ ಶರೀರಸ್ಯ ಚ ನಾಶಕಂ　　॥ ೩೨ ॥

ನಾರಿಕೇಲಫಲಂ ಭಕ್ಷ್ಯಮಷ್ಟಮ್ಯಾಂ ಬುದ್ಧಿನಾಶನಂ ।
ತುಂಬೀ ನವಮ್ಯಾಂ ಗೋಮಾಂಸಂ ದಶಮ್ಯಾಂ ಚ ಕಲಂಬಿಕಾ　　॥ ೩೩ ॥

ಏಕಾದಶ್ಯಾಂ ತಥಾ ಶಿಂಬೀ ದ್ವಾದಶ್ಯಾಂ ಪೂತಿಕಾ ತಥಾ ।
ತ್ರಯೋದಶ್ಯಾಂ ಚ ವಾರ್ತಾಕೀ ನ ಭಕ್ಷ್ಯಾ ಪುತ್ರನಾಶನಂ　　॥ ೩೪ ॥

೩೦–೩೧. ತದಿಗೆ ದಿವಸ ಪಡವಲಕಾಯನ್ನು ತಿನ್ನುವುದರಿಂದ ಶತ್ರುಗಳು ವೃದ್ಧಿಯಾಗುವರು. ಮೂಲಂಗಿಯನ್ನು ಚೌತಿಯ ದಿವಸ ತಿಂದರೆ ಧನನಾಶವಾಗುವುದು. ಪಂಚಮಿಯ ದಿವಸ ಬಿಲ್ವಫಲವನ್ನು ಉಪಯೋಗಿಸುವುದರಿಂದ ಅಪಕೀರ್ತಿ ಬರುವುದು. ನಿಂಬಫಲವನ್ನು ಷಷ್ಠಿಯ ದಿವಸ ತಿಂದರೆ ಮೂಕಜಂತುವಾಗಿ ಜನಿಸುವನು.

೩೨. ಸಾಮಾನ್ಯವಾಗಿ ತಾಳಫಲವನ್ನು ತಿನ್ನುವವರಿಗೆ ರೋಗವು ಇದ್ದೇ ಇರುವುದು. ಅದರಲ್ಲೂ ಸಪ್ತಮಿಯ ದಿವಸ ಅದನ್ನು ತಿಂದರೆ ಶರೀರವೇ ನಾಶವಾಗುವುದು.

೩೩. ತೆಂಗಿನಕಾಯನ್ನು ಅಷ್ಟಮಿಯ ದಿವಸ ತಿನ್ನುವುದರಿಂದ ಬುದ್ಧಿಯು ನಾಶವಾಗುವುದು. ನವಮಿಯ ದಿವಸ ಸೋರೆಯಕಾಯನ್ನೂ, ದಶಮಿಯ ದಿವಸ ಕಡವೆಕಾಯನ್ನೂ ತಿಂದರೆ ಗೋಮಾಂಸವನ್ನು ತಿಂದವನಂತೆ ಪಾತಕಿಯಾಗುವನು.

೩೪. ಏಕಾದಶಿಯ ದಿವಸ ಶಿಂಬೀಫಲವನ್ನೂ, ದ್ವಾದಶಿಯ ದಿವಸ ಪೂತಿಕಾ ಫಲವನ್ನೂ, ತ್ರಯೋದಶಿಯ ದಿವಸ ಬದನೆಯಕಾಯನ್ನೂ ತಿನ್ನುವುದರಿಂದ ಪುತ್ರ ನಾಶವಾಗುವುದು.

ಚತುರ್ದಶ್ಯಾಂ ಮಾಷಭಕ್ಷ್ಯಂ ಮಹಾಪಾಪಕರಂ ಪರಂ ।
ಪಂಚದಶ್ಯಾಂ ತಥಾ ಮಾಂಸಮಭಕ್ಷ್ಯಂ ಗೃಹಿಣಾಂ ಮುನೇ ॥ ೩೫ ॥

ಗೃಹಿಣಾಂ ಪ್ರೋಕ್ಷಿತಂ ಮಾಂಸಂ ಭಕ್ಷ್ಯಮನ್ಯದಿನೇಷು ಚ ।
ಪ್ರಾತಃಸ್ನಾನೆ ತಥಾ ಶ್ರಾದ್ಧೇ ಪಾರ್ವಣೇವ್ರತವಾಸರೇ ॥ ೩೬ ॥
ಪ್ರಶಸ್ತಂ ಸಾರ್ಷಪಂ ತೈಲಂ ಪಕ್ವತೈಲಂ ಚ ನಾರದ ।

ಕುಹೂ ಪೂರ್ಣೇಂದು ಸಂಕ್ರಾಂತಿ ಚತುರ್ದಶ್ಯಷ್ಟಮೀಷು ಚ ॥ ೩೭ ॥

ರವೌ ಶ್ರಾದ್ಧೇ ವ್ರತಾಹೇ ಚ ದುಷ್ಟಂ ಸ್ತ್ರೀತಿಲತೈಲಕಂ ।
ಮಾಂಸಂ ಚ ರಕ್ತಶಾಕಂ ಚ ಕಾಂಸ್ಯಪಾತ್ರೇ ಚ ಭೋಜನಂ ॥ ೩೮ ॥

ನಿಷಿದ್ಧಂ ಶಯನೇ ಚೈವ ಕೂರ್ಮಮಾಂಸಂ ಚ ಮಂತ್ರಿತಂ ।
ನಿಷಿದ್ಧಂ ಸರ್ವವರ್ಣಾನಾಂ ದಿವಾ ಸ್ವಸ್ತ್ರೀನಿಷೇವಣಂ ॥ ೩೯ ॥

---

೩೫. ಚತುರ್ದಶಿಯ ದಿವಸ ಉದ್ದಿನಲ್ಲಿ ಮಾಡಿದ ಆಹಾರಪದಾರ್ಥವನ್ನೂ, ಪೂರ್ಣಿಮಾ ಮತ್ತು ಅಮಾವಾಸ್ಯಾದಿವಸಗಳಲ್ಲಿ ಮಾಂಸವನ್ನೂ ತಿನ್ನುವುದರಿಂದ ಗೃಹಸ್ಥರಿಗೆ ಮಹಾಪಾಪವು ಸಂಘಟಿಸುವುದು.

೩೬. ಉಳಿದ ದಿವಸಗಳಲ್ಲಿ ಗೃಹಸ್ಥರು, ಮಂತ್ರಪೂರ್ವಕವಾಗಿ ಜಲಪ್ರೋಕ್ಷಿತವಾದ ಮಾಂಸವನ್ನು ತಿನ್ನಬಹುದು. ಎಲೈ, ನಾರದನೇ, ಪ್ರಾತಃಸ್ನಾನಮಾಡುವಾಗಲೂ, ಶ್ರಾದ್ಧ, ವ್ರತ ಮತ್ತು ಪರ್ವದಿವಸಗಳಲ್ಲೂ, ಸ್ನಾನಕ್ಕೆ ಸಾಸಿವೆ ಎಣ್ಣೆಯನ್ನೂ, ಚೆನ್ನಾಗಿ ಬೇಯಿಸಿದ ಬೇರಾವುದಾದರೂ ಎಣ್ಣೆಯನ್ನೂ, ಉಪಯೋಗಿಸುವುದು ಶ್ರೇಷ್ಠವಾದುದು.

೩೭–೩೯. ಅಮಾವಾಸ್ಯೆ, ಪೂರ್ಣಿಮಾ, ಸಂಕ್ರಮಣ, ಚತುರ್ದಶಿ ಮತ್ತು ಅಷ್ಟಮೀ ದಿವಸಗಳಲ್ಲೂ, ರವಿವಾರದಲ್ಲೂ, ಶ್ರಾದ್ಧ ಮತ್ತು ವ್ರತದಿವಸಗಳಲ್ಲೂ, ಸ್ತ್ರೀಸಂಗಮಾಡುವುದು ನಿಷಿದ್ಧವಾದುದು. ಅಂತೆಯೇ, ಎಳ್ಳೆಣ್ಣೆಯನ್ನೂ, ಮಾಂಸವನ್ನೂ, ಕೆಂಪುಬಣ್ಣದ ತರಕಾರಿಗಳನ್ನೂ ಉಪಯೋಗಿಸುವುದು ಮತ್ತು ಕಂಚಿನ ಪಾತ್ರೆಯಲ್ಲಿ ಊಟಮಾಡುವುದು, ಬಹಳ ದೋಷವಾದುದು. ಅಂತೆಯೇ, ಆ ದಿವಸಗಳಲ್ಲಿ ಹಗಲು ಮಲಗಿ ನಿದ್ರೆಮಾಡುವುದೂ, ಆಮೆಯ ಮಾಂಸವನ್ನು ಭಕ್ಷಿಸುವುದೂ ನಿಷಿದ್ಧವಾದುದು. ಅಲ್ಲದೆ ಚತುರ್ವರ್ಣದವರಿಗೂ, ಹಗಲು ಹೊತ್ತಿನಲ್ಲಿ ಸ್ತ್ರೀಸಂಗಮಾಡುವುದು ಮಹಾಪಾಪಕರವೆನಿಸುವುದು.

ರಾತ್ರೌ ಚ ದಧಿಭಕ್ಷ್ಯಂ ಚ ಶಯನಂ ಸಂಧ್ಯಯೋರ್ದಿನೇ ।
ರಜಸ್ವಲಾ ಸ್ತ್ರೀಗಮನಮೇತನ್ನರಕಕಾರಣಂ ॥ ೪೦ ॥

ಉದಕ್ಯವೀರಯೋರನ್ನಂ ಪುಂಶ್ಚಲ್ಯನ್ನಮಭಕ್ಷ್ಯಕಂ ।
ಶೂದ್ರಾನ್ನಂ ಯಾಜಕಾನ್ನಂ ಚ ಶೂದ್ರಶ್ರಾದ್ಧಾನ್ನಮೇವ ಚ ॥ ೪೧ ॥

ಅಭಕ್ಷ್ಯಾನ್ನಂ ಚ ವಿಪ್ರರ್ಷೇ ಯದನ್ನಂ ವೃಷಲೀಪತೇಃ ।
ಬ್ರಹ್ಮನ್ ವಾರ್ಧುಷಿಕಾನ್ನಂ ಚ ಗಣಕಾನ್ನಮಭಕ್ಷಕಂ ॥ ೪೨ ॥

ಅಗ್ರದಾನಿ ದ್ವಿಜಾನ್ನಂ ಚ ಚಿಕಿತ್ಸಾಕಾರಕಸ್ಯ ಚ ।
ಹಸ್ತಚಿತ್ರಾಹತಾ ತೈಲಮಗ್ರಾಹ್ಯಂ ಚಾಪ್ಯಭಕ್ಷಕಂ ॥ ೪೩ ॥

---

೪೦. ರಾತ್ರಿಯ ಹೊತ್ತು ಮೊಸರನ್ನವನ್ನು ತಿನ್ನುವುದು, ಎರಡು ಸಂಧ್ಯಾಕಾಲಗಳಲ್ಲೂ ಮತ್ತು ಪಗಲಿನಲ್ಲೂ ಮಲಗಿರುವುದು, ಮುಟ್ಟಾದ ಸ್ತ್ರೀಯೊಡನೆ ಸಂಗಮಾಡುವುದು–ಇವು ನರಕಪ್ರಾಪ್ತಿಗೆ ಕಾರಣಗಳು.

೪೧–೪೩. ಮುಟ್ಟಾದವಳ ಮತ್ತು ಪತಿಪುತ್ರರಿಲ್ಲದವಳ ಅನ್ನವನ್ನೂ, ವೇಶ್ಯೆಯರ ಅನ್ನವನ್ನೂ, ತಿನ್ನಕೂಡದು. ಹಾಗೆಯೇ ಶೂದ್ರಾನ್ನ, ಶೂದ್ರನಿಂದ ಯಾಗ ಮಾಡಿಸುವವನ ಅನ್ನ, ಮತ್ತು ಶೂದ್ರನ ಶ್ರಾದ್ಧಾನ್ನವನ್ನೂ, ಶೂದ್ರಸ್ತ್ರೀಸಂಪರ್ಕ ಮಾಡಿದವನ ಅನ್ನವನ್ನೂ, ಭಕ್ಷಿಸಕೂಡದು. ಎಲೈ, ವಿಪ್ರೋತ್ತಮನಾದ ನಾರದನೇ, ಹಣವನ್ನು ಸಾಲಕೊಟ್ಟು ಬಡ್ಡಿಯಿಂದಲೇ ಜೀವಿಸುವವನ ಅನ್ನವನ್ನೂ, ಲೆಕ್ಕಿಗರ ಅನ್ನವನ್ನೂ, ಚಿಕಿತ್ಸಾಕಾರಕನ ಮತ್ತು ಶೂದ್ರನ ಹತ್ತಿರ ಮೊಟ್ಟಮೊದಲು ದಾನಕ್ಕೆ ಕೈಯೊಡ್ಡಿದ ಬ್ರಾಹ್ಮಣನ ಅನ್ನವನ್ನೂ ಸ್ವೀಕರಿಸಬಾರದು. ಹಸ್ತ, ಚಿತ್ರ ಮತ್ತು ಶ್ರವಣನಕ್ಷತ್ರಗಳಲ್ಲಿ ಎಣ್ಣೆಯನ್ನು ದಾನ ತೆಗೆದುಕೊಳ್ಳುವುದಾಗಲೀ, ಉಪಯೋಗಿಸುವುದಾಗಲೀ ತಪ್ಪು.

ಮೂಲೇ ಮೃಗೇ ಭಾದ್ರಪದೇ ಮಾಂಸಂ ಗೋಮಾಂಸತುಲ್ಯಕಂ ।
ಅಮಾಯಾಂ ಕೃತ್ತಿಕಾಯಾಂ ಚ ದ್ವಿಜೈಃ ಕ್ಷೌರಂ ವಿವರ್ಜಿತಂ　　॥ ೪೪ ॥

ಕೃತ್ವಾ ತು ಮೈಥುನಂ ಕ್ಷೌರಂ ಯೋ ದೇವಾಂಸ್ತರ್ಪಯೇತ್ಪಿತೄನ್ ।
ರುಧಿರಂ ತದ್ಭವೇತ್ತೋಯಂ ದಾತಾ ಚ ನರಕಂ ವ್ರಜೇತ್　　॥ ೪೫ ॥

ಯತ್ಕರ್ತವ್ಯಮಕರ್ತವ್ಯಂ ಯದ್ಭೋಜ್ಯಂ ಯದಭೋಜ್ಯಕಂ ।
ಸರ್ವಂ ತುಭ್ಯಂ ನಿಗದಿತಂ ಕಿಂ ಭೂಯಃ ಶ್ರೋತುಮಿಚ್ಛಸಿ　　॥ ೪೬ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಸೌತಿಶೌನಕ
ಸಂವಾದೇ ನಾರದಂ ಪ್ರತಿ ಶಿವೋಪದೇಶೇ ಭಕ್ಷ್ಯಾಭಕ್ಷ್ಯಾದಿ
ವಿವರಣಂ ನಾಮ ಸಪ್ತವಿಂಶತಿತಮೋಽಧ್ಯಾಯಃ

---

೪೪. ಮೂಲ, ಮೃಗಶಿರ, ಪೂರ್ವ ಮತ್ತು ಉತ್ತರಾಭಾದ್ರ ನಕ್ಷತ್ರಗಳಲ್ಲಿ ಮಾಂಸವನ್ನು ತಿಂದರೆ ಗೋಮಾಂಸವನ್ನು ತಿಂದಂತಾಗುವುದು. ಅಮಾವಾಸ್ಯಾ ಮತ್ತು ಕೃತ್ತಿಕಾನಕ್ಷತ್ರಗಳಲ್ಲಿ ದ್ವಿಜನು ಕ್ಷೌರವನ್ನು ಮಾಡಿಸಿಕೊಳ್ಳಬಾರದು.

೪೫. ಆಗತಾನೆ ಸ್ತ್ರೀಸಂಗಮಾಡಿದವನು ಮತ್ತು ಕ್ಷೌರಮಾಡಿಸಿಕೊಂಡಿರುವವನು, ದೇವತೆಗಳಿಗೆ ಮತ್ತು ಪಿತೃಗಳಿಗೆ ತರ್ಪಣವನ್ನು ಕೊಟ್ಟಿದ್ದಾದರೆ ಆ ತರ್ಪಣೋದಕವು ರಕ್ತಕ್ಕೆ ಸಮನಾಗುವುದು ಮತ್ತು ಆ ಮನುಜನು ನರಕಕ್ಕೆ ಹೋಗುವನು.

೪೬. ಮಾಡಬಹುದಾದ ಮತ್ತು ಮಾಡಬಾರದ ಕರ್ಮಗಳನ್ನೂ, ತಿನ್ನಬಾರದ ಮತ್ತು ತಿನ್ನಬಹುದಾದ ತಿಂಡಿಗಳನ್ನೂ, ನಿನಗೆ ವಿವರಿಸಿದುದಾಯಿತು. ಎಲೈ, ವತ್ಸ, ನಾರದನೇ! ನಿನಗೆ ಇನ್ನೇನನ್ನು ತಿಳಿಯಲು ಕುತೂಹಲವಿದೆ, ತಿಳಿಸು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಬ್ರಹ್ಮಖಂಡದ ಶಿವನಾರದ ಸಂವಾದದಲ್ಲಿ
ಭಕ್ಷ್ಯಾಭಕ್ಷ್ಯಾದಿ ವಸ್ತುಗಳ ವಿವರಣರೂಪವಾದ ಇಪ್ಪತ್ತೇಳನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತೇಳನೆಯ ಅಧ್ಯಾಯದ ಸಾರಾಂಶವು

ದ್ವಿಜರಲ್ಲಿ ಬ್ರಹ್ಮಚಾರಿ, ಗೃಹಸ್ಥ, ಸನ್ಯಾಸಿ, ವೈಷ್ಣವ ಮತ್ತು ವಿಧವೆಯರಿಗೆ ನಿಯಮಿತವಾದ ಭಕ್ಷ್ಯಾಭಕ್ಷ್ಯ ಪದಾರ್ಥಗಳನ್ನೂ, ಭೋಗ್ಯಾಭೋಗ್ಯ ವಸ್ತುಗಳನ್ನೂ, ಕರ್ತವ್ಯಾಕರ್ತವ್ಯ ಕರ್ಮಗಳನ್ನೂ ತಿಳಿಯಬೇಕೆಂದು ನಾರದನು ಕೇಳಿದನು. ಅದಕ್ಕೆ ಮಹೇಶ್ವರನು ಇಂತು ಉತ್ತರವಿತ್ತನು. ಪೂರ್ವದಲ್ಲಿ ಕೆಲವು ಋಷಿಗಳು ನಿರಾಹಾರಿಗಳಾಗಿಯೂ, ಕೆಲವರು ವಾಯುಭಕ್ಷಕರಾಗಿಯೂ, ಮತ್ತೆ ಕೆಲವರು ಫಲಭಕ್ಷಕರಾರಾಗಿಯೂ ಇದ್ದುಕೊಂಡು ತಪಸ್ಸುಮಾಡಿದರು. ಗೃಹಸ್ಥರು ಗೃಹಿಣೀ ಸಮೇತರಾಗಿ ನಿಯಮಿತ ಕಾಲದಲ್ಲಿ ಮಾತ್ರ ಅನ್ನವನ್ನು ಭಕ್ಷಿಸುತ್ತಿದ್ದರು. ಆದುದರಿಂದ ಬ್ರಾಹ್ಮಣ ಗೃಹಸ್ಥನು ಪರಮಾತ್ಮನಿಗೆ ನಿವೇದಿಸಿದ ಹವಿಷ್ಯಾನ್ನ (ಗಂಜಿಯನ್ನು ಇಂಗಿಸಿದ ಅನ್ನ) ವನ್ನು ತಿನ್ನುವುದು ಉತ್ತಮ. ಏಕಾದಶಿಯ ದಿವಸದಲ್ಲಿ ಅನ್ನವನ್ನು ತಿಂದರೆ ಕಾಲಸೂತ್ರವೆಂಬ ನರಕಕ್ಕೆ ಹೋಗುವರಾದ್ದರಿಂದ ಬ್ರಾಹ್ಮಣರಾರೂ ಆ ದಿವಸ ಊಟಮಾಡಕೂಡದು. ಕೃಷ್ಣಜನ್ಮಾಷ್ಟಮಿ, ರಾಮನವಮಿ ಮತ್ತು ಶಿವರಾತ್ರಿಯ ದಿವಸಗಳಲ್ಲೂ ಊಟಮಾಡಕೂಡದು. ಒಂದು ವೇಳೆ ಶಾರೀರಕ ಶಕ್ತಿ ಸಾಲದೆ ಉಪವಾಸಮಾಡಲಾಗದವನು ಶರೀರರಕ್ಷಣೆಯು ಅತ್ಯವಶ್ಯಕವಾದುದರಿಂದ ಮೇಲ್ಕಂಡ ದಿವಸಗಳಲ್ಲಿ ಫಲಮೂಲಾದಿಗಳನ್ನು ಸೇವಿಸಬಹುದು. ಅಥವಾ ಒಂದೇ ಹೊತ್ತು, ಪರಮಾತ್ಮನಿಗೆ ನಿವೇದಿಸಿದ ಅನ್ನವನ್ನು ತಿನ್ನಬಹುದು. ನಿತ್ಯವೂ ವಿಷ್ಣುನೈವೇದ್ಯವನ್ನು ತಿನ್ನುವವನೇ ನಿಜವಾದ ವೈಷ್ಣವನು. ಕೆಲವು ದೇಶಗಳಲ್ಲಿ ಎರಡು ಸಾರಿ ಬೆಂದ ಅನ್ನ ಮತ್ತು ಅವಲಕ್ಕಿಯನ್ನು ಉಪಯೋಗಿಸುವರು. ಬ್ರಾಹ್ಮಣರು ಅವನ್ನು ಉಪಯೋಗಿಸುವುದು ಅಷ್ಟು ಯೋಗ್ಯವಲ್ಲ. ಯತಿಗಳು, ವಿಧವೆಯರು ಮತ್ತು ಬ್ರಹ್ಮಚಾರಿಗಳು ತಾಂಬೂಲವನ್ನೂ, ಅವಲಕ್ಕಿ ಮುಂತಾದುವುಗಳನ್ನೂ ಭಕ್ಷಿಸಕೂಡದು. ತಾಮ್ರಪಾತ್ರೆಯಲ್ಲಿ ಹಾಲು ಕುಡಿಯಬಾರದು. ಊಟಕ್ಕೆ ಕುಳಿತನಂತರ ತುಪ್ಪ ಹಾಕಿಸಿಕೊಂಡು ತಿನ್ನಬಾರದು. ಹಾಲಿಗೆ ಉಪ್ಪನ್ನು ಸೇರಿಸಿ ಕುಡಿಯಬಾರದು. ಕಂಚಿನ ಪಾತ್ರೆಯಲ್ಲಿ ಎಳನೀರನ್ನೂ, ತಾಮ್ರಪಾತ್ರೆಯಲ್ಲಿ ಪಾನಕಾದಿಗಳನ್ನೂ

ಕುಡಿಯಬಾರದು. ಶ್ರೀಹರಿಗೆ ಸಮರ್ಪಿಸದ, ಅನ್ನನೀರುಗಳನ್ನು ಸೇವಿಸಕೂಡದು. ಎದ್ದುನಿಂತಾಗಲೀ, ಎಡಗೈನಿಂದಾಗಲೀ ನೀರನ್ನು ಕುಡಿಯಬಾರದು. ಆಯಾಯ ಮಾಸ, ನಕ್ಷತ್ರ ಮತ್ತು ತಿಥಿಗಳಲ್ಲಿ ನಿಷಿದ್ಧವಾಗಿರುವ ಆಹಾರವನ್ನು ಸೇವಿಸಕೂಡದು. (ಇಲ್ಲಿ ನಿಷಿದ್ಧವಾಗಿರುವ ಮಾಂಸಭಕ್ಷಣಾದಿಗಳು, ಭಕ್ಷಣಾರ್ಹತೆಯುಳ್ಳ ಕ್ಷತ್ರಿಯಾದಿಗಳಿಗೆ ಮಾತ್ರ ಸಂಬಂಧಿಸುವುದರಿಂದ, ಬ್ರಾಹ್ಮಣಾದಿಗಳು ಉಳಿದ ದಿವಸಗಳಲ್ಲಿ ತಿನ್ನಬಹುದೆಂದು ಅರ್ಥಮಾಡಿಕೊಳ್ಳಬಾರದು.) ರಾತ್ರಿಯಲ್ಲಿ ದಧ್ಯನ್ನಭಕ್ಷಣ, ದಿವಾಶಯನ ಮತ್ತು ಸ್ವಸ್ತ್ರೀಗಮನ, ನಿಷಿದ್ಧವಾದ ಅನ್ನಭಕ್ಷಣ ಇವೆಲ್ಲವೂ ನರಕಪ್ರಾಪ್ತಿಗೆ ಕಾರಣಗಳು. ಅಮಾವಾಸ್ಯಾ ಮತ್ತು ಕೃತ್ತಿಕಾ ನಕ್ಷತ್ರಗಳಲ್ಲಿ ಕ್ಷೌರಮಾಡಿಸಿಕೊಳ್ಳಕೂಡದು. ಸ್ತ್ರೀಸಂಗಮಾಡಿ ಅಥವಾ ಕ್ಷೌರಮಾಡಿಸಿಕೊಂಡು ದೇವಪಿತೃತರ್ಪಣಾದಿ ಕಾರ್ಯಗಳನ್ನು ಮಾಡಬಾರದು.

(ಇಲ್ಲಿ ಹೇಳಿರುವ ಭಕ್ಷ್ಯಾಭಕ್ಷ್ಯಗಳನ್ನೂ, ಕರ್ತವ್ಯಾಕರ್ತವ್ಯಗಳನ್ನೂ ಅನುಸರಿಸುವುದರಿಂದ, ಪಾರಲೌಕಿಕ ಫಲವು ಮಾತ್ರವಲ್ಲದೆ ದೃಷ್ಟವಾದ ಅನೇಕ ಫಲಗಳೂ ವಿವೇಕಿಗಳಿಗೆ ಕಂಡುಬರುವುವು.)

॥ ಓಂ ॥

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಅಷ್ಟಾವಿಂಶತಿತಮೋಽಧ್ಯಾಯಃ ॥

॥ ನಾರದ ಉವಾಚ ॥

ಶ್ರುತಂ ಸರ್ವಂ ಜಗನ್ನಾಥ ತ್ವತ್ಪ್ರಸಾದಾಜ್ಜಗದ್ಗುರೋ ।
ಭವಾನ್ ಬ್ರಹ್ಮಸ್ವರೂಪಂ ಚ ವದ ಬ್ರಹ್ಮನಿರೂಪಣಂ ॥ ೧ ॥

ಪ್ರಭೋ ಕಿಂ ಬ್ರಹ್ಮ ಸಾಕಾರಂ ಕಿಂ ನಿರಾಕಾರಮೀಶ್ವರ ।
ಕಿಂ ತದ್ವಿಶೇಷಣಂ ಕಿಂ ವಾಪ್ಯವಿಶೇಷಣಮೇವ ಚ ॥ ೨ ॥

ಇಪ್ಪತ್ತೆಂಟನೆಯ ಅಧ್ಯಾಯವು

೧. ನಾರದ:—ಎಲೈ, ಜಗದ್ಗುರುವಾದ ಪರಮೇಶನೇ, ನಿನ್ನ ದಿವ್ಯಾನುಗ್ರಹದಿಂದ ಆಹ್ನಿಕಕ್ರಮವನ್ನೂ, ಭಕ್ಷ್ಯಾಭಕ್ಷ್ಯವಸ್ತುಗಳ ವಿವೇಚನೆಯನ್ನೂ ಅರಿತಂತಾಯಿತು. ಈಗ ಪರಬ್ರಹ್ಮಸ್ವರೂಪವನ್ನೂ, ಅದನ್ನು ತಿಳಿಯುವ ಬಗೆಯನ್ನೂ, ದಯವಿಟ್ಟು ವಿವರಿಸು.

೨-೩. ಎಲೈ ಪ್ರಭುವಾದ ಶಂಕರನೇ, ಪರಬ್ರಹ್ಮವಸ್ತುವು ಸಾಕಾರವೇ ಅಥವಾ ನಿರಾಕಾರವೇ ; ಸಗುಣವೇ ಅಥವಾ ನಿರ್ಗುಣವೇ ; ದೃಶ್ಯವೇ ಅಥವಾ ಅದೃಶ್ಯವೇ,

ಕಿಂ ವಾ ದೃಶ್ಯಮದೃಶ್ಯಂ ವಾ ಲಿಪ್ತಂ ದೇಹಿಷು ಕಿಂ ನ ವಾ ।
ಕಿಂ ವಾ ತಲ್ಲಕ್ಷಣಂ ಶಸ್ತಂ ವೇದೇ ವಾ ಕಿಂ ನಿರೂಪಿತಂ ॥ ೩ ॥

ಬ್ರಹ್ಮಾತಿರಿಕ್ತಾ ಪ್ರಕೃತಿಃ ಕಿಂ ವಾ ಬ್ರಹ್ಮಸ್ವರೂಪಿಣೀ ।
ಪ್ರಕೃತೇರ್ಲಕ್ಷಣಂ ಕಿಂ ವಾ ಸಾರಭೂತಂ ಶ್ರುತೌ ಶ್ರುತಂ ॥ ೪ ॥

ಪ್ರಾಧಾನ್ಯಂ ಕಸ್ಯ ಸೃಷ್ಟೌ ಚ ದ್ವಯೋರ್ಮಧ್ಯೇ ವರಂ ಪರಂ ।
ವಿಚಾರ್ಯ ಮನಸಾ ಸರ್ವಂ ಸರ್ವಜ್ಞ ವದ ಮಾಂ ಧ್ರುವಂ ॥ ೫ ॥

ನಾರದಸ್ಯ ವಚಃ ಶ್ರುತ್ವಾ ಪಂಚವಕ್ತ್ರಃ ಪ್ರಹಸ್ಯ ಚ ।
ಭಗವಾನ್ಕರ್ತುಮಾರೇಭೇ ಪರಬ್ರಹ್ಮನಿರೂಪಣಂ ॥ ೬ ॥

॥ ಮಹಾದೇವ ಉವಾಚ ॥

ಯದ್ಯತ್ಪೃಷ್ಟಂ ತ್ವಯಾ ವತ್ಸ ನಿಗೂಢಂ ಜ್ಞಾನಮುತ್ತಮಂ ।
ಸುದುರ್ಲಭಂ ಚ ವೇದೇಷು ಪುರಾಣೇಷು ಚ ನಾರದ ॥ ೭ ॥

ದೇಹಿಗಳಿಗೆ ಸಂಬದ್ಧವೇ ಅಥವಾ ಅಸಂಬದ್ಧವೇ, ಅದನ್ನು ಸರಿಯಾಗಿ ತಿಳಿಸುವ ನಿಷ್ಕೃಷ್ಟ ಲಕ್ಷಣವಾವುದು? ವೇದದಲ್ಲಿ ಹೇಳಿರುವ ಪರಮಾತ್ಮಸ್ವರೂಪವಾವುದು?

೪–೫. ಪ್ರಕೃತಿಯು ಪರಬ್ರಹ್ಮವಸ್ತುವಿಗೆ ಭಿನ್ನವೇ ಅಥವಾ ಅಭಿನ್ನವೇ? ಪ್ರಕೃತಿಯ ಲಕ್ಷಣವು ವೇದದಲ್ಲಿ ಎಂತು ನಿರೂಪಿತವಾಗಿದೆ. ಪ್ರಕೃತಿ ಮತ್ತು ಪುರುಷರಲ್ಲಿ ಸೃಷ್ಟಿಗೆ ಪ್ರಧಾನರಾರು? ಇವೆಲ್ಲವನ್ನೂ ಚೆನ್ನಾಗಿ ಪರ್ಯಾಲೋಚಿಸಿ ನನಗೆ ತಿಳಿಯಹೇಳು.

೬. ಷಡ್ಗುಣೈಶ್ವರ್ಯಸಂಪನ್ನನೂ, ಪಂಚಮುಖನೂ ಆದ ಪರಮೇಶ್ವರನು ನಾರದನ ಜಿಜ್ಞಾಸೆಯನ್ನರಿತು ಹಸನ್ಮುಖನಾಗಿ ಪರಬ್ರಹ್ಮಸ್ವರೂಪವನ್ನು ನಿರೂಪಿಸಲಾರಂಭಿಸಿದನು.

೭–೮. ಮಹಾದೇವ:—ಎಲೈ, ವತ್ಸ ನಾರದನೇ! ನೀನು ಕೇಳಿದ ಪರಬ್ರಹ್ಮಸ್ವರೂಪವು ವೇದ ಮತ್ತು ಅನೇಕಪುರಾಣಗಳಲ್ಲಿ ಸ್ಪಷ್ಟವಾಗಿ ತಿಳಿಯುವುದಿಲ್ಲ.

ಅಹಂ ಬ್ರಹ್ಮಾ ಚ ವಿಷ್ಣುಶ್ಚ ಶೇಷೋ ಧರ್ಮೋ ಮಹಾನ್ವಿರಾಟ್ ।
ಸರ್ವಂ ನಿರೂಪಿತಂ ಬ್ರಹ್ಮನ್ನಸ್ಮಾಭಿಃ ಶ್ರುತಿಭಿರ್ಮುನೇ ॥ ೮ ॥

ಯದ್ವಿಶೇಷಣಯುಕ್ತಂ ಚ ದೃಶ್ಯಂ ಪ್ರತ್ಯಕ್ಷಮೇವ ಚ ।
ತನ್ನಿರೂಪಿತಮಸ್ಮಾಭಿಃ ವೇದವೇದವಿದಾಂ ವರ ॥ ೯ ॥

ವೈಕುಂಠೇ ಚ ಪುರಾ ಪೃಷ್ಟೇ ಧರ್ಮೇಣ ಬ್ರಹ್ಮಣಾ ತದಾ ।
ಯದುವಾಚ ಹರಿಃ ಕಿಂಚಿನ್ನಿಬೋಧ ಕಥಯಾಮಿ ತೇ ॥ ೧೦ ॥

ಸಾರಭೂತಂ ಚ ತತ್ತ್ವಾನಾಮಜ್ಞಾನಾಂಧಕಲೋಚನಂ ।
ದ್ವೈಧಭ್ರಮತಮೋಧ್ವಂಸಸುಪ್ರಕೃಷ್ಟಪ್ರದೀಪಕಂ ॥ ೧೧ ॥

ಪರಮಾತ್ಮಸ್ವರೂಪಂ ಚ ಪರಬ್ರಹ್ಮಸನಾತನಂ ।
ಸರ್ವದೇಹಸ್ಥಿತಂ ಸಾಕ್ಷಿಸ್ವರೂಪಂ ದೇಹಿ ಕರ್ಮಣಾಂ ॥ ೧೨ ॥

ನಾನು ಮತ್ತು ಬ್ರಹ್ಮ, ವಿಷ್ಣು, ಶೇಷ, ಧರ್ಮ, ವಿರಾಟ್ಪುರುಷರೂ ವೇದಮೂಲಕವಾಗಿ ಪರಬ್ರಹ್ಮಸ್ವರೂಪವನ್ನು ತಿಳಿದಿರುವೆವು.

೯. ಎಲೈ, ವೇದವೇದಾಂಗ ಪಾರಂಗತನೇ, ನೀನು ಕೇಳಿದ ಸಗುಣ ನಿರ್ಗುಣಗಳ ಮತ್ತು ದೃಶ್ಯಾದೃಶ್ಯಗಳ ವಿವೇಚನೆಯನ್ನು ನಾನು ತಿಳಿದಿರುವಂತೆ ವಿವರಿಸುವೆನು ಅವಧರಿಸು.

೧೦. ಪೂರ್ವದಲ್ಲಿ ಧರ್ಮ ಮತ್ತು ಚತುರ್ಮುಖಬ್ರಹ್ಮರು ವೈಕುಂಠಲೋಕಕ್ಕೆ ಹೋಗಿ ಶ್ರೀಮನ್ನಾರಾಯಣನನ್ನು ಕೇಳಿದಾಗ ಆತನು ಹೇಳಿದ ಪರಬ್ರಹ್ಮಸ್ವರೂಪವನ್ನು ನಿನಗೆ ತಿಳಿಯಹೇಳುವೆನು.

೧೧–೧೨. ಪ್ರಪಂಚದಲ್ಲಿ ಹುಟ್ಟಿ ತಿಳಿಯಬೇಕಾದ ತತ್ವಗಳಲ್ಲಿ ಪರಮಾತ್ಮಸ್ವರೂಪಜ್ಞಾನವೇ ಅತ್ಯಂತ ಸಾರವಾದದ್ದು. ಅಜ್ಞಾನವೆಂಬ ಅಂಧಕಾರವು ಆತ್ಮಜ್ಞಾನವೆಂಬ ಜ್ಯೋತಿಯಿಂದ ದೂರವಾಗುವುದು. ಜೀವಾತ್ಮಪರಮಾತ್ಮರು ಬೇರೆ ಬೇರೆ ಎಂಬ ಭೇದಜ್ಞಾನವು ಸ್ವಪ್ರಕಾಶವಾದ ಆತ್ಮಸ್ವರೂಪಜ್ಞಾನದಿಂದ ಪರಿಹಾರವಾಗುವುದು. ಅನಾದಿಯೂ, ಸರ್ವಶ್ರೇಷ್ಠನೂ ಆದ ಆ ಪರಮಾತ್ಮನು ಎಲ್ಲ ಪ್ರಾಣಿಗಳ ದೇಹದಲ್ಲೂ ಅವರವರ ಪುಣ್ಯಪಾಪಕರ್ಮಗಳಿಗೆ ಸಾಕ್ಷಿಯಾಗಿ ನೆಲೆಸಿರುವನು.

ಪ್ರಾಣಾಃ ಪಂಚ ಸ್ವಯಂ ವಿಷ್ಣುರ್ಮನೋ ಬ್ರಹ್ಮಾ ಪ್ರಜಾಪತಿಃ ।
ಸರ್ವಜ್ಞಾನಸ್ವರೂಪೋಽಹಂ ಶಕ್ತಿಃ ಪ್ರಕೃತಿರೀಶ್ವರೀ ॥ ೧೩ ॥

ಆತ್ಮಾಧೀನಾ ವಯಂ ಸರ್ವೇ ಸ್ಥಿತೇ ತಸ್ಮಿನ್ವಯಂ ಸ್ಥಿತಾಃ ।
ಗತೇ ಗತಾಶ್ಚ ಪರಮೇ ನರದೇವಮಿವಾನುಗಾಃ ॥ ೧೪ ॥

ಜೀವಸ್ತತ್ಪ್ರತಿಬಿಂಬಶ್ಚ ಸರ್ವಭೋಗೀ ಹಿ ಕರ್ಮಣಾಂ ।
ಯಥಾರ್ಕಚಂದ್ರಯೋರ್ಬಿಂಬಂ ಜಲಪೂರ್ಣಘಟೇಷು ಚ ॥ ೧೫ ॥

ಬಿಂಬಂ ಘಟೇಷು ಭಗ್ನೇಷು ಪ್ರಲೀನಂ ಚಂದ್ರಸೂರ್ಯಯೋಃ ।
ತಥಾ ಲಯಪ್ರಸಂಗೇ ಸ ಜೀವೋ ಬ್ರಹ್ಮಣಿ ಲೀಯತೇ ॥ ೧೬ ॥

---

೧೩. ವಿಷ್ಣುವು ದೇಹಿಗಳ ಪಂಚಪ್ರಾಣಸ್ವರೂಪನಾಗಿಯೂ, ಸೃಷ್ಟಿಕರ್ತನಾದ ಬ್ರಹ್ಮನು ಮನಃಸ್ವರೂಪನಾಗಿಯೂ, ನಾನು ಜ್ಞಾನಸ್ವರೂಪನಾಗಿಯೂ, ಪ್ರಕೃತಿದೇವಿಯು ಶಕ್ತಿಸ್ವರೂಪಿಣಿಯಾಗಿಯೂ ಶರೀರದಲ್ಲಿ ನೆಲೆಸಿರುವೆವು.

೧೪. ನಾವೆಲ್ಲರೂ ಪರಮಾತ್ಮನ ಅಧೀನರು. ಶರೀರದಲ್ಲಿ ಪರಮಾತ್ಮನಿರುವವರೆಗೂ ನಾವೂ ಇದ್ದು, ಅವನು ಹೊರಟಾಗ, ರಾಜನನ್ನು ಹಿಂಬಾಲಿಸುವ ಸೇವಕರಂತೆ ನಾವೂ ಹಿಂದೆ ಹೊರಡುವೆವು.

೧೫. ನೀರು ತುಂಬಿದ ಗಡಿಗೆಯಲ್ಲಿ ಸೂರ್ಯಚಂದ್ರರ ಬಿಂಬವು ಪ್ರತಿಬಿಂಬಿಸಿ ಪರಿಮಿತಿಯನ್ನು ಪಡೆಯುವಂತೆ, ಅಂತಃಕರಣದಲ್ಲಿ ಪ್ರತಿಬಿಂಬಿಸಿದ ಆತ್ಮನು ಜೀವನೆನಿಸಿಕೊಂಡು ಕರ್ಮಫಲಭೋಗಿಯಾಗುವನು.

೧೬. ನೀರಿನ ಗಡಿಗೆಯು ಒಡೆದು ಹೋದರೆ ಸೂರ್ಯಚಂದ್ರರ ಪ್ರತಿಬಿಂಬವು ನಿಜವಾದ ಬಿಂಬದಲ್ಲೇ ಐಕ್ಯವಾಗುವಂತೆ, ಪ್ರಳಯಕಾಲದಲ್ಲಿ ಅಂತಃಕರಣವು ನಾಶವಾದ ಮೇಲೆ ಜೀವನೂ ಪರಬ್ರಹ್ಮನಲ್ಲಿಯೇ ಐಕ್ಯವಾಗುವನು.

ಏಕಮೇವ ಪರಂಬ್ರಹ್ಮ ಶೇಷೇ ವತ್ಸ ಭವಕ್ಷಯೇ ।
ವಯಂ ಪ್ರಲೀನಾಸ್ತತ್ರೈವ ಜಗದೇತಚ್ಚರಾಚರಂ ॥ ೧೭ ॥

ತಚ್ಚ ಜ್ಯೋತಿಃಸ್ವರೂಪಂ ಚ ಮಂಡಲಾಕಾರಮೇವ ಚ ।
ಗ್ರೀಷ್ಮಮಧ್ಯಾಹ್ನಮಾರ್ತಂಡಕೋಟಿಕೋಟಿ ಸಮಪ್ರಭಂ ॥ ೧೮ ॥

ಆಕಾಶಮಿವ ವಿಸ್ತೀರ್ಣಂ ಸರ್ವವ್ಯಾಪಕಮವ್ಯಯಂ ।
ಸುಖದೃಶ್ಯಂ ಯಥಾ ಚಂದ್ರಬಿಂಬಂ ಯೋಗಿಭಿರೇವ ಚ ॥ ೧೯ ॥

ವದಂತಿ ಯೋಗಿನಸ್ತತ್ರ ಪರಂ ಬ್ರಹ್ಮ ಸನಾತನಂ ।
ದಿವಾ ನಿಶಂ ಚ ಧ್ಯಾಯಂತೇ ಸತ್ಯಂ ತತ್ಸರ್ವಮಂಗಲಂ ॥ ೨೦ ॥

ನಿರೀಹಂ ಚ ನಿರಾಕಾರಂ ಪರಮಾತ್ಮಾನಮೀಶ್ವರಂ ।
ಸ್ವೇಚ್ಛಾಮಯಂ ಸ್ವತಂತ್ರಂ ಚ ಸರ್ವಕಾರಣಕಾರಣಂ ॥ ೨೧ ॥

---

೧೭. ಎಲೈ, ವತ್ಸ ನಾರದನೇ. ಪ್ರಪಂಚವೆಲ್ಲವೂ ಲಯವಾದ ಮೇಲೆ ಉಳಿಯುವುದು ಪರಬ್ರಹ್ಮವೊಂದೇ. ತ್ರಿಮೂರ್ತಿಗಳಾದ ನಾವೂ ಚರಾಚರಾತ್ಮಕವಾದ ಪ್ರಪಂಚವೂ ಪ್ರಲಯದಲ್ಲಿ ಪರಮಾತ್ಮನಲ್ಲಿಯೇ ಐಕ್ಯವಾಗುವೆವು.

೧೮. ಆ ಪರಮಾತ್ಮನು ಮಂಡಲಾಕಾರವಾದ ಜ್ಯೋತಿಃಸ್ವರೂಪನಾಗಿಯೂ, ಗ್ರೀಷ್ಮಋತುವಿನ ಮಧ್ಯಾಹ್ನದ ಕೋಟಿಸೂರ್ಯರಂತೆ ತೇಜೋಮಯನಾಗಿಯೂ ಇರುವನು.

೧೯. ಆಕಾಶದಂತೆ ಆತ್ಮನಿಗೂ ಪರಿಮಿತಿಯಿಲ್ಲ. ಎಲ್ಲ ಕಡೆಯಲ್ಲೂ ವ್ಯಾಪಿಸಿಕೊಂಡು ನಾಶರಹಿತನಾಗಿರುವನ . ಯೋಗಿಗಳು ಚಂದ್ರಬಿಂಬದಂತೆ ಸುಖದೃಶ್ಯನಾದ ಪರಮಾತ್ಮನನ್ನು ಸಾಕ್ಷಾತ್ಕಾರಮಾಡಿಕೊಂಡು ಆನಂದಿಸುವರು.

೨೦. ಯೋಗಿಗಳು ಅನಾದಿಯಾದ ಆ ಪರಬ್ರಹ್ಮನನ್ನು ಹಗಲೂ ರಾತ್ರಿ ಧ್ಯಾನಮಾಡಿ ಸರ್ವಮಂಗಳನಾದ ಅವನ ಸತ್ಯಸ್ವರೂಪವನ್ನರಿಯುವರು.

೨೧–೨೨. ಆ ಪರಮಾತ್ಮನು ಇಚ್ಛಾರಹಿತನೂ, ನಿರಾಕಾರನೂ, ನಿರ್ಗುಣನೂ, ಸ್ವೇಚ್ಛಾಮಯನೂ, ಸ್ವತಂತ್ರನೂ ಮತ್ತು ಆದಿಕಾರಣನೂ ಆಗಿದ್ದಾನೆ. ಪರಮಾನಂದ

ಪರಮಾನಂದರೂಪಂ ಚ ಪರಮಾನಂದಕಾರಣಂ ।
ಪರಂ ಪ್ರಧಾನಂ ಪುರುಷಂ ನಿರ್ಗುಣಂ ಪ್ರಕೃತೇಃ ಪರಂ ।
ತತ್ರೈವ ಲೀನಾ ಪ್ರಕೃತಿಃ ಸರ್ವಬೀಜಸ್ವರೂಪಿಣೀ ॥ ೨೨ ॥

ಯಥಾಗ್ನೌ ದಾಹಿಕಾ ಶಕ್ತಿಃ ಪ್ರಭಾ ಸೂರ್ಯೇ ಯಥಾ ಮುನೇ ।
ಯಥಾ ದುಗ್ಧೇ ಚ ಧಾವಲ್ಯಂ ಜಲೇ ಶೈತ್ಯಂ ಯಥೈವ ಚ ॥ ೨೩ ॥

ಯಥಾ ಶಬ್ದಶ್ಚ ಗಗನೇ ಯಥಾ ಗಂಧಃ ಕ್ಷಿತೌ ಸದಾ ।
ತಥಾ ಹಿ ನಿರ್ಗುಣಂ ಬ್ರಹ್ಮ ನಿರ್ಗುಣಾ ಪ್ರಕೃತಿಸ್ತಥಾ ॥ ೨೪ ॥

ಸೃಷ್ಟ್ಯುನ್ಮುಖೇನ ತದ್ಬ್ರಹ್ಮ ಚಾಂಶೇನ ಪುರುಷಃ ಸ್ಮೃತಃ ।
ಸ ಏವ ಸಗುಣೋ ವತ್ಸ ಪ್ರಾಕೃತೋ ವಿಷಯೀ ಸ್ಮೃತಃ ॥ ೨೫ ॥

ತ್ರಿಗುಣಾ ಸಾ ಹಿ ತತ್ರೈವ ಪರಾ ಚ್ಛಾಯಾಮಯೀ ಸ್ಮೃತಾ ॥ ೨೬ ॥

ಸ್ವರೂಪನೂ, ಪರಮಾನಂದಕ್ಕೆ ಕಾರಣನೂ ಆದ ಆ ಪರಮಪುರುಷನಲ್ಲಿಯೇ, ಸರ್ವ ಬೀಜಸ್ವರೂಪಿಣಿಯಾದ ಪ್ರಕೃತಿದೇವಿಯೂ ಅಭೇದದಿಂದ ಐಕ್ಯವಾಗಿರುವಳು.

೨೩–೨೪. ಅಗ್ನಿಯಲ್ಲಿ ದಾಹಕಶಕ್ತಿಯೂ, ಸೂರ್ಯನಲ್ಲಿ ತೇಜಸ್ಸೂ, ಹಾಲಿನಲ್ಲಿ ಬಿಳುಪು ಬಣ್ಣವೂ, ನೀರಿನಲ್ಲಿ ಶೈತ್ಯವೂ, ಆಕಾಶದಲ್ಲಿ ಶಬ್ದವೂ, ಭೂಮಿಯಲ್ಲಿ ಗಂಧವೂ, ಅಭಿನ್ನಗುಣವಾಗಿರುವಂತೆ ಸೃಷ್ಟಿವಿಮುಖವೂ, ನಿರ್ಗುಣವೂ ಆದ ಪರಮಾತ್ಮ ಮತ್ತು ಪ್ರಕೃತಿಯು ಅಭೇದದಿಂದಿರುವುದು.

೨೫. ಆ ಪರವಸ್ತುವಿನ ಸೃಷ್ಟ್ಯುನ್ಮುಖವಾದ ಅಂಶವನ್ನೇ ಪುರುಷನೆನ್ನುವರು. ಆ ಪುರುಷನು ಸೃಷ್ಟಿಯಲ್ಲಿ ತೊಡಗಿದುದರಿಂದ ಸಗುಣನೂ, ಪ್ರಾಕೃತನೂ ಮತ್ತು ವಿಷಯಿಯೂ ಆಗುವನು.

೨೬. ಆ ಪುರುಷನ ಛಾಯಾರೂಪಳಾದ ಪ್ರಕೃತಿಯೂ ಕೂಡ ಸೃಷ್ಟ್ಯುನ್ಮುಖಳಾದಾಗ ತ್ರಿಗುಣಾತ್ಮಕಳೆನಿಸುವಳು.

ಯಥಾ ಮೃದಾ ಕುಲಾಲಶ್ಚ ಘಟಂ ಕರ್ತುಂ ಕ್ಷಮಃ ಸದಾ ।
ತಥಾ ಪ್ರಕೃತ್ಯಾ ತದ್ಬ್ರಹ್ಮ ಸೃಷ್ಟಿಂ ಸ್ರಷ್ಟುಂ ಕ್ಷಮೋ ಮುನೇ ॥ ೨೭ ॥

ಸ್ವರ್ಣೇನ ಕುಂಡಲಂ ಕರ್ತುಂ ಸ್ವರ್ಣಕಾರಃ ಕ್ಷಮೋ ಯಥಾ ।
ತಥಾ ಬ್ರಹ್ಮ ತಯಾ ಸಾರ್ಧಂ ಸೃಷ್ಟಿಂ ಕರ್ತುಮಿಹೇಶ್ವರಃ ॥ ೨೮ ॥

ಕುಲಾಲಸೃಷ್ಟಾ ನ ಚ ಮೃನ್ನಿತ್ಯಾ ಚೈವ ಸನಾತನೀ ।
ನ ಸ್ವರ್ಣಕಾರಸೃಷ್ಟಂ ತತ್ಸ್ವರ್ಣಂ ವಾ ನಿತ್ಯಮೇವ ಚ ॥ ೨೯ ॥

ನಿತ್ಯಂ ತತ್ಪರಮಂ ಬ್ರಹ್ಮ ನಿತ್ಯಾ ಚ ಪ್ರಕೃತಿಃ ಸ್ಮೃತಾ ।
ದ್ವಯೋಃ ಸಮಂ ಚ ಪ್ರಾಧಾನ್ಯಮಿತಿ ಕೇಚಿದ್ವದಂತಿ ಹಿ ॥ ೩೦ ॥

ಮೃದಂ ಸ್ವರ್ಣಂ ಸಮಾಹರ್ತುಂ ಕುಲಾಲಸ್ವರ್ಣಕಾರಕೌ ।
ಸಮರ್ಥೌ ನ ಚ ಮೃತ್ಸ್ವರ್ಣಂ ತಯೋರಾಹರಣೇ ಕ್ಷಮಂ ॥ ೩೧ ॥

---

೨೭. ಕುಂಬಾರನು ಮಣ್ಣಿನಿಂದ ಗಡಿಗೆಯನ್ನು ಮಾಡಲು ಸಮರ್ಥನಾಗಿರುವಂತೆ, ಬ್ರಹ್ಮನು ಪ್ರಕೃತಿಯಿಂದ ಪ್ರಪಂಚಸೃಷ್ಟಿಯನ್ನು ಮಾಡಲು ಸಮರ್ಥನಾಗಿರುವನು.

೨೮. ಚಿನ್ನದಿಂದ ಅಕ್ಕಸಾಲಿಗನು ಕರ್ಣಕುಂಡಲವನ್ನು ಮಾಡಲು ಎಂತು ಶಕ್ತನೋ, ಅಂತೆಯೇ ಪ್ರಕೃತಿಯಿಂದ ಕೂಡಿದ ಬ್ರಹ್ಮನು ಸೃಷ್ಟಿಯನ್ನು ಮಾಡಲು ಶಕ್ತನಾಗುವನು.

೨೯. ಕುಂಬಾರನ ಗಡಿಗೆಗೆ ಮೂಲಕಾರಣವಾದ ಮಣ್ಣಾಗಲೀ, ಅಕ್ಕಸಾಲಿಗನ ಒಡವೆಗೆ ಮೂಲಕಾರಣವಾದ ಚಿನ್ನವಾಗಲೀ, ನಿತ್ಯವೂ, ಅನಾದಿಯೂ ಆದುದೇ ಹೊರತು, ಅವರ ಸೃಷ್ಟಿಗೆ ಒಳಪಟ್ಟಿಲ್ಲ.

೩೦. ಅಂತೆಯೇ ಪರಬ್ರಹ್ಮನೂ, ಪ್ರಕೃತಿಯೂ ನಿತ್ಯರಾದವರು. ಇವರಿಬ್ಬರಲ್ಲಿ ಹೆಚ್ಚುಕಮ್ಮಿಯಿಲ್ಲ. ಇಬ್ಬರೂ ಸಮಾನಬಲರು–ಎಂದು ಕೆಲವರ ಅಭಿಪ್ರಾಯ.

೩೧–೩೨. ಕುಂಬಾರನು ಗಡಿಗೆಗೆ ಉಪಾದಾನಕಾರಣವಾದ ಮಣ್ಣನ್ನೂ, ಅಕ್ಕಸಾಲಿಗನು ಒಡವೆಗೆ ಉಪಾದಾನಕಾರಣವಾದ ಸುವರ್ಣವನ್ನೂ ಸಂಗ್ರಹಮಾಡಲು ಶಕ್ತರು. ಆದರೆ ಪೃಥಿವ್ಯಾತ್ಮಕವಾದ ಮಣ್ಣೂ, ತೇಜೋರೂಪವಾದ ಸುವರ್ಣವೂ

ತಸ್ಮಾತ್ತತ್ಪ್ರಕೃತೇರ್ಬ್ರಹ್ಮ ಪರಮೇವ ಚ ನಾರದ ।
ಇತಿ ಕೇಚಿದ್ವದಂತ್ಯೇವಂ ದ್ವಯೋರ್ನೈ ನಿತ್ಯತಾ ಧ್ರುವಂ ॥ ೩೨ ॥

ಕೇಚಿದ್ವದಂತಿ ತದ್ಬ್ರಹ್ಮ ಸ್ವಯಂ ಚ ಪ್ರಕೃತಿಃ ಪುಮಾನ್ ।
ಬ್ರಹ್ಮಾತಿರಿಕ್ತಪ್ರಕೃತಿರ್ವದಂತೀತಿ ಚ ಕೇಚನ ॥ ೩೩ ॥

ತದ್ಬ್ರಹ್ಮ ಪರಮಂ ಧಾಮ ಸರ್ವಕಾರಣಕಾರಣಂ ।
ತದ್ಬ್ರಹ್ಮಲಕ್ಷಣಂ ಬ್ರಹ್ಮನ್ನಿದಂ ಕಿಂಚಿಚ್ಛ್ರುತೌ ಶ್ರುತಂ ॥ ೩೪ ॥

ಬ್ರಹ್ಮ ಚಾತ್ಮಾ ಚ ಸರ್ವೇಷಾಂ ನಿರ್ಲಿಪ್ತಂ ಸಾಕ್ಷಿರೂಪಿ ಚ ।
ಸರ್ವವ್ಯಾಪಿ ಚ ಸರ್ವಾದಿ ಲಕ್ಷಣಂ ಚ ಶ್ರುತೌ ಶ್ರುತಂ ॥ ೩೫ ॥

ತದ್ಬ್ರಹ್ಮಶಕ್ತಿಃ ಪ್ರಕೃತಿಃ ಸರ್ವಬೀಜಸ್ವರೂಪಿಣೀ ।
ಯತಸ್ತಚ್ಛಕ್ತಿಮದ್ಬ್ರಹ್ಮ ಚೇದಂ ಪ್ರಕೃತಿಲಕ್ಷಣಂ ॥ ೩೬ ॥

ಕುಂಬಾರ ಮತ್ತು ಅಕ್ಕಸಾಲಿಗರ ಉತ್ಪತ್ತಿಗೆ ಸ್ವತಂತ್ರ ಕಾರಣವಾಗುವುದಿಲ್ಲ. ಆದ್ದರಿಂದ ಪ್ರಕೃತಿಗಿಂತಲೂ ಪುರುಷನು ಶ್ರೇಷ್ಠನೆಂದೂ, ಇಬ್ಬರೂ ನಿತ್ಯರೆಂದೂ, ಮತ್ತೆ ಕೆಲವರ ಅಭಿಪ್ರಾಯ.

೩೩. ಕೆಲವರು ಬ್ರಹ್ಮನೇ ಪ್ರಕೃತಿರೂಪನಾಗಿಯೂ, ಪುರುಷರೂಪನಾಗಿಯೂ ಇರುವನೆನ್ನುವರು. ಮತ್ತೆ ಕೆಲವರು–ಬಹ್ಮನೇ ಬೇರೆ, ಪ್ರಕೃತಿಯೇ ಬೇರೆ ಎನ್ನುವರು.

೩೪. ಕಾರಣಗಳಿಗೆಲ್ಲ ಆದಿಕಾರಣವೂ, ಶ್ರೇಷ್ಠರಿಗೆಲ್ಲಾ ಶ್ರೇಷ್ಠವೂ. ಆದುದೇ ಪರಬ್ರಹ್ಮವೆಂದು–ಪರಬ್ರಹ್ಮಲಕ್ಷಣವು ವೇದದಲ್ಲಿ ಕೆಲವೆಡೆ ಉಕ್ತವಾಗಿದೆ.

೩೫. ಸರ್ವಾತ್ಮಸ್ವರೂಪವೂ, ಕರ್ಮಸಂಬಂಧರಹಿತವೂ, ಸಾಕ್ಷಿಮಾತ್ರವೂ, ಸರ್ವವ್ಯಾಪಿಯೂ, ಸರ್ವಕ್ಕೂ ಆದಿಯೂ ಆದುದೇ ಪರಬ್ರಹ್ಮವೆಂದೂ, ಶ್ರುತ್ಯುಕ್ತವಾಗಿದೆ.

೩೬. ಆ ಪರಬ್ರಹ್ಮಶಕ್ತಿಯನ್ನೇ, ಎಲ್ಲದಕ್ಕೂ ಬೀಜಸ್ವರೂಪಿಣಿಯಾದ ಪ್ರಕೃತಿ ಎನ್ನುವರು. ಪ್ರಕೃತಿರೂಪಿಣಿಯಾದ ಶಕ್ತಿಯಿಂದಲೇ ಬ್ರಹ್ಮನು ಸೃಷ್ಟಿಗೆ ಸಮರ್ಥನಾಗುವನು.

ತೇಜೋರೂಪಂ ಚ ತದ್ಬ್ರಹ್ಮ ಧ್ಯಾಯಂತೇ ಯೋಗಿನಃ ಸದಾ ।
ವೈಷ್ಣವಾಸ್ತನ್ನ ಮನ್ಯಂತೇ ಮದ್ಭಕ್ತಾಃ ಸೂಕ್ಷ್ಮಬುದ್ಧಯಃ ॥ ೩೭ ॥

ತತ್ತೇಜಃ ಕಸ್ಯ ನಾಶ್ಚರ್ಯಂ ಧ್ಯಾಯಂತೇ ಪುರುಷಂ ವಿನಾ ।
ಕಾರಣೇನ ವಿನಾ ಕಾರ್ಯಂ ಕುತೋ ವಾ ಪ್ರಭವೇದ್ಭುವಿ ॥ ೩೮ ॥

ಧ್ಯಾಯಂತೇ ವೈಷ್ಣವಾಸ್ತಸ್ಮಾತ್ತತ್ರ ರೂಪಂ ಮನೋಹರಂ ।
ಸ್ವೇಚ್ಛಾಮಯಸ್ಯ ಪುಂಸಶ್ಚ ಸಾಕಾರಸ್ಯಾತ್ಮನಃ ಸದಾ ॥ ೩೯ ॥

ತತ್ತೇಜೋಮಂಡಲಾಕಾರೇ ಸೂರ್ಯಕೋಟಿಸಮಪ್ರಭೇ ।
ನಿತ್ಯಂ ಸ್ಥಲಂ ಚ ಪ್ರಚ್ಛನ್ನಂ ಗೋಲೋಕಾಭಿಧಮೇವ ಚ ॥ ೪೦ ॥

ಲಕ್ಷಕೋಟ್ಯಾಯೋಜನಾನಾಂ ಚತುರಸ್ರಂ ಮನೋಹರಂ ।
ರತ್ನೇಂದ್ರಸಾರನಿರ್ಮಾಣೈರ್ಗೋಪೀಭಿಶ್ಚಾವೃತಂ ಸದಾ ॥ ೪೧ ॥

---

೩೭. ಯೋಗಿಗಳೆಲ್ಲರೂ, ಪರಬ್ರಹ್ಮವನ್ನು ತೇಜೋಮಯವೆಂದು ತಿಳಿದು ಧ್ಯಾನಿಸುವರು. ಆದರೆ ಸೂಕ್ಷ್ಮಜ್ಞಾನಿಗಳಾದ ವೈಷ್ಣವರು ಅದನ್ನು ಒಪ್ಪುವುದಿಲ್ಲ.

೩೮. ಪುರುಷಾಕಾರವಿಲ್ಲದ ಆ ಕೇವಲ ತೇಜಸ್ಸನ್ನು ಧ್ಯಾನಿಸುವುದೆಂತು? ಧ್ಯಾನರೂಪವಾದ ಕಾರ್ಯಕ್ಕೆ ಮೂಲಕಾರಣವಾದ ಒಂದು ಆಕಾರವಿಲ್ಲದಮೇಲೆ ಧ್ಯಾನಿಸುವುದು ಹೇಗೆ ಸಾಧ್ಯ? ಪ್ರಪಂಚದಲ್ಲೆಲ್ಲಿ ನೋಡಿದರೂ ಕಾರಣವಿಲ್ಲದೆ ಕಾರ್ಯವಾಗುವುದಿಲ್ಲವಷ್ಟೆ.

೩೯. ಆದ್ದರಿಂದ ವೈಷ್ಣವರು ಸ್ವೇಚ್ಛಾಮಯನಾದ ಆ ಪರಮಾತ್ಮನ ಮನೋಹರವಾದ ರೂಪಕ್ಕೆ ಆಕಾರವನ್ನು ಕಲ್ಪಿಸಿಕೊಂಡು ಧ್ಯಾನಿಸುವರು.

೪೦. ಕೋಟಿಸೂರ್ಯರ ಕಾಂತಿಯುತವೂ, ಮಂಡಲಾಕಾರವೂ ಆದ ಆ ಪರಬ್ರಹ್ಮನ ತೇಜಸ್ಸಿನಲ್ಲಿ ವೈಷ್ಣವರಿಗೆ ಮಾತ್ರ ಗೋಚರಿಸುವ, ನಿತ್ಯವಾದ ಗೋಲೋಕವೆಂಬುದಿದೆ.

೪೧. ಆ ಲೋಕವು ನಾಲ್ಕುದಿಕ್ಕುಗಳಲ್ಲಿಯೂ ಲಕ್ಷಕೋಟಿಯೋಜನ ವಿಸ್ತೀರ್ಣವಾಗಿಯೂ, ಪ್ರಕೃಷ್ಟರತ್ನಗಳಿಂದ ನಿರ್ಮಿತವಾಗಿಯೂ, ಗೋಪಿಯರಿಂದ ಪರಿವೃತವಾಗಿಯೂ, ಮನೋಹರವಾಗಿದೆ.

ಸುದೃಶ್ಯಂ ವರ್ತುಲಾಕಾರಂ ಯಥಾ ಚಂದ್ರಸ್ಯ ಮಂಡಲಂ ।
ನಾನಾರತ್ನೈಶ್ಚ ಖಚಿತಂ ನಿರಾಧಾರಂ ತದಿಚ್ಛಯಾ　　॥ ೪೨ ॥

ಊರ್ಧ್ವಂ ಚ ನಿತ್ಯವೈಕುಂಠಾತ್ ಪಂಚಾಶತ್ಕೋಟಿಯೋಜನಂ ।
ಗೋಗೋಪಗೋಪೀಸಂಯುಕ್ತಂ ಕಲ್ಪವೃಕ್ಷಸಮನ್ವಿತಂ　　॥ ೪೩ ॥

ಕಾಮಧೇನುಭಿರಾಕೀರ್ಣಂ ರಾಸಮಂಡಲಮಂಡಿತಂ ।
ವೃಂದಾವನವನಾಚ್ಛನ್ನಂ ವಿರಜಾವೇಷ್ಟಿತಂ ಮುನೇ　　॥ ೪೪ ॥

ಶತಶೃಂಗಂ ಶಾತಕುಂಭೈಃ ಸುದೀಪ್ತಂ ಶ್ರೀಮದೀಪ್ಸಿತಂ ।
ಲಕ್ಷಕೋಟ್ಯಾಪರಿಮಿತೈರಾಶ್ರಮೈಃ ಸುಮನೋಹರೈಃ　　॥ ೪೫ ॥

ಶತಮಂದಿರಸಂಯುಕ್ತಮಾಶ್ರಮಂ ಸುಮನೋಹರಂ ।
ಪ್ರಾಕಾರಪರಿಖಾಯುಕ್ತಂ ಪಾರಿಜಾತವನಾನ್ವಿತಂ　　॥ ೪೬ ॥

೪೨–೪೩. ನಿರಾಧಾರವೂ, ಚಂದ್ರಮಂಡಲದಂತೆ ಮನೋಹರವೂ, ರತ್ನಮಯವೂ ಆದ ಆ ಲೋಕವು ವೈಕುಂಠಲೋಕಕ್ಕಿಂತ ಐವತ್ತು ಯೋಜನ ಮೇಲು ಭಾಗದಲ್ಲಿದೆ. ನಿತ್ಯವಾದ ಆ ಲೋಕದಲ್ಲಿ ಗೋವುಗಳೂ, ಗೋಪ ಗೋಪಿಯರೂ, ಕಲ್ಪವೃಕ್ಷವೂ ನೆಲೆಸಿವೆ.

೪೪–೪೫. ಅಸಂಖ್ಯವಾದ ಕಾಮಧೇನುಗಳಿಂದಲೂ, ರಾಸಮಂಡಲದಿಂದಲೂ, ವೃಂದಾವನವೆಂಬ ವನದಿಂದಲೂ ಯುಕ್ತವಾದ ಆ ಲೋಕವು ವಿರಜಾನದಿಯಿಂದ ಪರಿವೃತವಾಗಿದೆ. ಮನೋಹರವಾದ ಲಕ್ಷಕೋಟಿ ಆಶ್ರಮಗಳಿಂದಲೂ, ದೇದೀಪ್ಯಮಾನವಾದ ಸುವರ್ಣಕಲಶಗಳಿಂದಲೂ, ಶತಶೃಂಗ ಪರ್ವತಗಳಿಂದಲೂ ಸಂಪದಾಕರವಾಗಿದೆ.

೪೬. ಆಶ್ರಮಗಳಲ್ಲಿ, ಮನೋಹರವಾದ ನೂರಾರು ಮಂದಿರಗಳೂ, ಕೋಟೆ ಕೊತ್ತಲುಗಳೂ, ಪಾರಿಜಾತವನಗಳೂ ನಿಬಿಡವಾಗಿವೆ.

ಕೌಸ್ತುಭೇಂದ್ರೇಣ ಮಣಿನಾ ರಾಜಿತಂ ಪರಮೋಜ್ಜ್ವಲಂ ।
ಹೀರಸಾರಸುಸಂಕ್ಲೃಪ್ತಸೋಪಾನೈಶ್ಚಾತಿಸುಂದರೈಃ ॥ ೪೭ ॥

ಮಣೀಂದ್ರಸಾರರಚಿತೈಃ ಕಪಾಟೈರ್ದರ್ಪಣಾನ್ವಿತೈಃ ।
ನಾನಾಚಿತ್ರವಿಚಿತ್ರಾಢ್ಯೈರಾಶ್ರಮಂ ಚ ಸುಸಂಸ್ಕೃತಂ ॥ ೪೮ ॥

ಷೋಡಶದ್ವಾರಸಂಯುಕ್ತಂ ಸುದೀಪ್ತಂ ರತ್ನದೀಪಕೈಃ ।
ರತ್ನಸಿಂಹಾಸನೇ ರಮ್ಯೇ ಮಹಾರ್ಘಮಣಿನಿರ್ಮಿತೇ ॥ ೪೯ ॥

ನಾನಾಚಿತ್ರವಿಚಿತ್ರಾಢ್ಯೇ ವಸಂತಂ ವರಮೀಶ್ವರಂ ।
ನವೀನನೀರದಶ್ಯಾಮಂ ಕಿಶೋರವಯಸಂ ಶಿಶುಂ ॥ ೫೦ ॥

ಶರನ್ಮಧ್ಯಾಹ್ನಮಾರ್ತಂಡಪ್ರಭಾಮೋಚಕಲೋಚನಂ ।
ಶರತ್ಪಾರ್ವಣಪೂರ್ಣೇಂದುಶುಭದೀಪ್ತಿಮುದಾನನಂ ॥ ೫೧ ॥

೪೭–೪೮. ಅಲ್ಲದೆ, ಉಜ್ವಲವಾದ ಕೌಸ್ತುಭರತ್ನದಿಂದಲೂ, ವಜ್ರವೈಡೂರ್ಯಗಳಿಂದ ರಚಿತವಾದ ಸುಂದರಸೋಪಾನಗಳಿಂದಲೂ, ರತ್ನಗನ್ನಡಿಗಳಿಂದ ಮಿರುಗುವ ಬಾಗಿಲುಗಳಿಂದಲೂ, ಅನೇಕ ಚಿತ್ರ ವಿಚಿತ್ರಗಳ ವೈಭವದಿಂದಲೂ, ಆ ಆಶ್ರಮವು ಮನಮೋಹಕವಾಗಿದೆ.

೪೯. ಹದಿನಾರು ಬಾಗಿಲುಗಳಿಂದಲೂ, ದೇದೀಪ್ಯಮಾನವಾದ ರತ್ನದೀಪಗಳಿಂದಲೂ, ಯುಕ್ತವಾದ ಆ ಆಶ್ರಮದ ಮಂದಿರದೊಳಗೆ, ಮನೋಹರವಾದ ಚಿತ್ರಗಳಿಂದ ಪರಿವೃತವೂ, ಅನರ್ಘಮಣಿನಿರ್ಮಿತವೂ ಆದ ರತ್ನಸಿಂಹಾಸನದಲ್ಲಿ ಪರಮಾತ್ಮನು ಮಂಡಿಸಿದ್ದಾನೆ.

೫೦–೫೧. ಶಿಶುರೂಪನೂ, ಲೀಲಾಮಾತ್ರದಿಂದ ಕೋಟಿ ಮನ್ಮಥರನ್ನು ಸೃಜಿಸಬಲ್ಲವನೂ ಆದ ಆ ಪರಮಾತ್ಮನು ನವಘನಶ್ಯಾಮಲವರ್ಣದಿಂದಲೂ, ಶರದೃತುವಿನ ಮಧ್ಯಾಹ್ನದ ನಿರ್ಮಲಾಕಾಶದಲ್ಲಿ ತೊಳಗುವ ಸೂರ್ಯನಿಗೆ ಮಿಗಿಲಾದ

ಕೋಟಿಕಂದರ್ಪಲಾವಣ್ಯಂ ಲೀಲಾನಿರ್ಮಿತಮನ್ಮಥಂ ।
ಕೋಟಿಚಂದ್ರಪ್ರಭಾಜುಷ್ಟಂ ಪುಷ್ಟಂ ಶ್ರೀಯುಕ್ತವಿಗ್ರಹಂ ॥ ೫೨ ॥

ಸಸ್ಮಿತಂ ಮುರಲೀಹಸ್ತಂ ಸುಪ್ರಶಸ್ತಂ ಸುಮಂಗಲಂ ।
ಪರಮೋತ್ತಮಪೀತಾಂಶುಕಯುಗೇನ ಸಮುಜ್ಜ್ವಲಂ ॥ ೫೩ ॥

ಚಂದನೋಕ್ಷಿತಸರ್ವಾಂಗಂ ಕೌಸ್ತುಭೇನ ವಿರಾಜಿತಂ ।
ಆಜಾನುಮಾಲತೀಮಾಲಾವನಮಾಲಾವಿಭೂಷಿತಂ ॥ ೫೪ ॥

ತ್ರಿಭಂಗಭಂಗ್ಯಸಂಯುಕ್ತಂ ಮಣಿಮಾಣಿಕ್ಯಭೂಷಿತಂ ।
ಮಯೂರಪುಚ್ಛಚೂಡಂ ಚ ಸದ್ರತ್ನಮುಕುಟೋಜ್ಜ್ವಲಂ ॥ ೫೫ ॥

ರತ್ನಕೇಯೂರವಲಯಂ ರತ್ನಮಂಜೀರರಂಜಿತಂ ।
ರತ್ನಕುಂಡಲಯುಗ್ಮೇನ ಗಂಡಸ್ಥಲಸುಶೋಭಿತಂ ॥ ೫೬ ॥

ಕಾಂತಿಯುಳ್ಳ ಕಣ್ಣುಗಳಿಂದಲೂ, ಶರತ್ಪೂರ್ಣಿಮಾ ಚಂದ್ರನನ್ನು ಧಿಕ್ಕರಿಸುವ ಮುಖದಿಂದಲೂ, ಕೋಟಿಕಂದರ್ಪಲಾವಣ್ಯವನ್ನು ದೂರಮಾಡುವ ದೇಹಕಾಂತಿಯಿಂದಲೂ, ಮನೋಹರನಾಗಿದ್ದಾನೆ.

೫೩–೫೪. ಅಂಗಾಂಗಗಳಿಗೆಲ್ಲ ದಿವ್ಯಚಂದನಗಂಧವನ್ನು ಲೇಪಿಸಿಕೊಂಡು, ಜಾನುಪರ್ಯಂತ ಜೋಲಾಡುವ ಜಾಜಿಯ ವನಮಾಲೆಯನ್ನು ಕಂಠದಲ್ಲಿ ಧರಿಸಿ, ವಕ್ಷಸ್ಥಲದಲ್ಲಿ ವಿರಾಜಿಸುತ್ತಿರುವ ಕೌಸ್ತುಭರತ್ನದಿಂದಲೂ, ಉಟ್ಟುಹೊದ್ದಿರುವ ಪೀತಾಂಬರಗಳಿಂದಲೂ, ಶೋಭಿತನಾಗಿ, ಕೈಯಲ್ಲಿ ಕೊಳಲನ್ನು ಹಿಡಿದು ಸ್ಮಿತವದನನಾಗಿರುವ ಆ ಪರಮಾತ್ಮನ ಮೂರ್ತಿಯು ಸರ್ವರಿಗೂ ಮಂಗಳದಾಯಕವಾಗಿದೆ.

೫೫–೫೬. ತ್ರಿಭಂಗಿಯುತನಾಗಿಯೂ, ಮಾಣಿಕ್ಯಾದಿ ಮಣಿಗಳಿಂದ ಮಂಡಿತನಾಗಿಯೂ, ಶಿರಸ್ಸಿನಲ್ಲಿ ಧರಿಸಿರುವ ರತ್ನಮಯ ಕಿರೀಟ ಮತ್ತು ನವಿಲುಗರಿಗಳಿಂದ ಉಜ್ಜ್ವಲನಾಗಿಯೂ, ರತ್ನಮಯವಾದ ಬಾಹುಪುರಿ ಮತ್ತು ಕಾಲಂದುಗೆಗಳಿಂದ ಶೋಭಿತನಾಗಿಯೂ, ಕಪೋಲಗಳಲ್ಲಿ ಪ್ರತಿಬಿಂಬಿಸಿರುವ ರತ್ನಕುಂಡಲಗಳಿಂದ ಮನೋಹರನಾಗಿಯೂ ಇರುವ ಆ ಪರಮಾತ್ಮನನ್ನು ವರ್ಣಿಸಲಸದಳವು.

ಮುಕ್ತಾಪಂಙ್ಕ್ತಿಸದೃಕ್ಷಾಭದಶನಂ ಸುಮನೋಹರಂ ।
ಪಕ್ವಬಿಂಬಾಧರೋಷ್ಠಂ ಚ ನಾಸಿಕೋನ್ನತಿಶೋಭನಂ ॥ ೫೭ ॥

ವೀಕ್ಷಿತಂ ಗೋಪಿಕಾಭಿಶ್ಚ ವೇಷ್ಟಿತಾಭಿಃ ಸಮಂತತಃ ।
ಸ್ಥಿರಯೌವನಯುಕ್ತಾಭಿಃ ಸಸ್ಮಿತಾಭಿಶ್ಚ ಸಾದರಂ ॥ ೫೮ ॥

ಭೂಷಿತಾಭಿಶ್ಚ ಸದ್ರತ್ನನಿರ್ಮಿತೈರ್ಭೂಷಣೈಃ ಪರಂ ।
ಸುರೇಂದ್ರೈಶ್ಚ ಮುನೀಂದ್ರೈಶ್ಚ ಮುನಿಭಿರ್ಮಾನವೇಂದ್ರಕೈಃ ॥ ೫೯ ॥

ಬ್ರಹ್ಮವಿಷ್ಣುಶಿವಾನಂತಧರ್ಮಾದ್ಯೈರ್ವಂದಿತಂ ಮುದಾ ।
ಭಕ್ತಪ್ರಿಯಂ ಭಕ್ತನಾಥಂ ಭಕ್ತಾನುಗ್ರಹಕಾರಕಂ ॥ ೬೦ ॥

ರಾಸೇಶ್ವರಂ ಸುರಸಿಕಂ ರಾಧಾವಕ್ಷಃಸ್ಥಲಸ್ಥಿತಂ ।
ಏವಂ ರೂಪಮರೂಪಂ ತಂ ಮುನೇ ಧ್ಯಾಯಂತಿ ವೈಷ್ಣವಾಃ ॥ ೬೧ ॥

೫೭-೫೯. ಮುತ್ತಿನಸಾಲಿಗೆ ಸದೃಶವಾದ ಹಲ್ಲುಗಳಿಂದಲೂ, ತೊಂಡೆ ಹಣ್ಣಿನಂತೆ ಕೆಂಪಾದ ಕೆಳತುಟಿಯಿಂದಲೂ, ಉನ್ನತವಾದ ನಾಸಿಕದಿಂದಲೂ, ಶೋಭಿತನಾದ ಆ ಪರಮಾತ್ಮನನ್ನು, ರತ್ನಭೂಷಣಗಳಿಂದ ಭೂಷಿತರೂ, ಸ್ಮಿತಮುಖಿಯರೂ, ನವಯುವತಿಯರೂ ಆದ ಗೋಪಿಕಾಸ್ತ್ರೀಯರೂ, ಮತ್ತು ಸುರ ನರ ಮುನಿಗಳೂ ಸುತ್ತಲೂ ಸುತ್ತುವರಿದ್ದಾರೆ.

೬೦-೬೧. ಬ್ರಹ್ಮ, ವಿಷ್ಣು, ಶಿವ, ಧರ್ಮಾದಿಗಳಿಂದ ವಂದಿತನೂ, ಭಕ್ತರಿಗೆಲ್ಲ ಪ್ರಿಯನೂ, ನಾಥನೂ, ಅನುಗ್ರಹಕಾರಕನೂ, ರಾಸೇಶ್ವರನೂ, ವಕ್ಷಃಸ್ಥಲದಲ್ಲಿ ರಾಧಾದೇವಿಯನ್ನು ಧರಿಸಿರುವವನೂ, ಆದ ಆ ಪರಮಾತ್ಮನನ್ನು ವಾಸ್ತವವಾಗಿ ಅರೂಪನಾಗಿದ್ದರೂ, ವೈಷ್ಣವರು ಮೇಲೆ ಹೇಳಿದಂತೆ ಸರೂಪನೆಂದು ಭಾವಿಸಿಕೊಂಡು ಸತತವೂ ಧ್ಯಾನಿಸುವರು.

ಸತತಂ ಧ್ಯೇಯಮಸ್ಮಾಕಂ ಪರಮಾತ್ಮಾನಮೀಶ್ವರಂ ।
ಅಕ್ಷರಂ ಪರಮಂ ಬ್ರಹ್ಮ ಭಗವಂತಂ ಸನಾತನಂ　　　　॥ ೬೨ ॥

ಸ್ವೇಚ್ಛಾಮಯಂ ನಿರ್ಗುಣಂ ಚ ನಿರೀಹಂ ಪ್ರಕೃತೇಃ ಪರಂ ।
ಸರ್ವಾಧಾರಂ ಸರ್ವಬೀಜಂ ಸರ್ವಜ್ಞಂ ಸರ್ವಮೇವ ಚ　　　　॥ ೬೩ ॥

ಸರ್ವೇಶ್ವರಂ ಸರ್ವಪೂಜ್ಯಂ ಸರ್ವಸಿದ್ಧಿಕರಂ ಪ್ರದಂ ।
ಸ ಏವ ಭಗವಾನಾದಿರ್ಗೋಲೋಕೇ ದ್ವಿಭುಜಃ ಸ್ವಯಂ　　　　॥ ೬೪ ॥

ಗೋಪವೇಷಶ್ಚ ಗೋಪಾಲೈಃ ಪಾರ್ಷದೈಃ ಪರಿವೇಷ್ಟಿತಃ ।
ಪರಿಪೂರ್ಣತಮಃ ಶ್ರೀಮಾನ್ ಶ್ರೀಕೃಷ್ಣೋ ರಾಧಿಕೇಶ್ವರಃ　　　　॥ ೬೫ ॥

ಸರ್ವಾಂತರಾತ್ಮಾ ಸರ್ವತ್ರ ಪ್ರತ್ಯಕ್ಷಃ ಸರ್ವಗಃ ಸ್ಮೃತಃ ।
ಕೃಷಿಶ್ಚ ಸರ್ವವಚನೋ ನಕಾರಶ್ಚಾತ್ಮವಾಚಕಃ ॥
ಸರ್ವಾತ್ಮಾ ಚ ಪರಂ ಬ್ರಹ್ಮ ತೇನ ಕೃಷ್ಣಃ ಪ್ರಕೀರ್ತಿತಃ　　　　॥ ೬೬ ॥

೬೨–೬೪. ಅನಾದ್ಯನಂತನೂ. ಷಡ್ಗುಣೈಶ್ವರ್ಯ ಪರಿಪೂರ್ಣನೂ, ನಿರ್ಗುಣನೂ, ಸ್ವೇಚ್ಛಾಮಯನೂ, ಇಚ್ಛಾರಹಿತನೂ, ಪ್ರಕೃತಿಗಿಂತ ಪರನೂ, ಸರ್ವಾಧಾರನೂ, ಸರ್ವಜ್ಞನೂ, ಸರ್ವೇಶ್ವರನೂ, ಸರ್ವಪೂಜ್ಯನೂ, ಸರ್ವಸಿದ್ಧಿಪ್ರದನೂ, ಗೋಲೋಕದಲ್ಲಿ ಭುಜದ್ವಯವಿರಾಜಿತನೂ ಆದ ಆ ಪರಮಾತ್ಮನನ್ನು ನಾವೆಲ್ಲರೂ ಅನವರತವೂ ಭಜಿಸಿ ಪೂಜಿಸಿ, ಮುಕ್ತಿಯನ್ನು ಹೊಂದಬೇಕು.

೬೫–೬೬. ಗೋಪವೇಷಧಾರಿಯೂ. ಗೋಪಾಲಕರಿಂದಲೂ, ಪಾರ್ಷದರಿಂದಲೂ, ಪರಿವೃತನೂ, ಪರಿಪೂರ್ಣಸ್ವರೂಪನೂ, ರಾಧಾರಮಣನೂ, ಆದ ಆ ಶ್ರೀಕೃಷ್ಣಪರಮಾತ್ಮನು ಸರ್ವವ್ಯಾಪಿಯಾಗಿ ಭಕ್ತರಿಗೆ ಎಲ್ಲೆಲ್ಲೂ ಕಾಣಿಸಿಕೊಳ್ಳುವನು. 'ಕೃಷ್ಣ' ಎಂಬ ಪದದಲ್ಲಿ 'ಕೃಷ್' ಎಂದರೆ ಸರ್ವವೆಂದೂ, 'ನ' ಎಂದರೆ ಆತ್ಮನೆಂದೂ ಅರ್ಥವಾಗುವುದರಿಂದ ಕೃಷ್ಣಪರಮಾತ್ಮನು ಸರ್ವಾತ್ಮನೆಂಬುದು ಸಿದ್ಧವಿಷಯವು.

ಕೃಷಿಶ್ಚ ಸರ್ವವಚನೋ ನಕಾರಶ್ಚಾದಿವಾಚಕಃ ।
ಸರ್ವಾದಿಪುರುಷೋ ವ್ಯಾಪೀ ತೇನ ಕೃಷ್ಣಃ ಪ್ರಕೀರ್ತಿತಃ ॥ ೬೭ ॥

ಸ ಏವಾಂಶೇನ ಭಗವಾನ್ವೈಕುಂಠೇ ಚ ಚತುರ್ಭುಜೈಃ ।
ಚತುರ್ಭುಜೈಃ ಪಾರ್ಷದೈಸ್ತೈರಾವೃತಃ ಕಮಲಾಪತಿಃ ॥ ೬೮ ॥

ಸ ಏವ ಕಲಯಾ ವಿಷ್ಣುಃ ಪಾತಾ ಚ ಜಗತಾಂ ಪ್ರಭುಃ ।
ಶ್ವೇತದ್ವೀಪೇ ಸಿಂಧುಕನ್ಯಾಪತಿರೇವ ಚತುರ್ಭುಜಃ ॥ ೬೯ ॥

ಏತತ್ತೇ ಕಥಿತಂ ಸರ್ವಂ ಪರಬ್ರಹ್ಮಸ್ವರೂಪಕಂ ।
ಅಸ್ಮಾಕಂ ಚಿಂತನೀಯಂ ಚ ಸೇವ್ಯಂ ವಂದಿತಮೀಪ್ಸಿತಂ ॥ ೭೦ ॥

ಇತ್ಯುಕ್ತ್ವಾ ಶಂಕರಸ್ತತ್ರ ವಿರರಾಮ ಚ ಶೌನಕ ॥ ೭೧ ॥

---

೬೭. 'ಕೃಷ್' ಎಂದರೆ ಸರ್ವವೆಂದೂ, 'ನ' ಎಂದರೆ ಆದಿಯೆಂದೂ ಅರ್ಥವಾಗುವುದರಿಂದ ಕೃಷ್ಣಪರಮಾತ್ಮನು ಸರ್ವಕ್ಕೂ ಆದಿಪುರುಷನೆಂದೂ ಸ್ಪಷ್ಟವಾಗುವುದು.

೬೮. ಲೋಕಪೂಜ್ಯನಾದ ಆ ಪರಮಾತ್ಮನೇ, ಒಂದಂಶದಿಂದ ನಾರಾಯಣನಾಗಿ, ಲಕ್ಷ್ಮೀದೇವಿಯಿಂದಲೂ, ಚತುರ್ಭುಜರಾದ ಪಾರ್ಷದರಿಂದಲೂ, ಸೇವಿತನಾಗಿ ವೈಕುಂಠಲೋಕದಲ್ಲಿ ನೆಲೆಸಿರುವನು.

೬೯. ಲಕ್ಷ್ಮೀರಮಣನೂ, ಜಗದ್ರಕ್ಷಕನೂ, ಶ್ವೇತದ್ವೀಪವಾಸಿಯೂ, ಆದ ಆ ವಿಷ್ಣುವೂ ಆ ಪರಮಾತ್ಮನ ಕಲಾಸಂಭೂತನೆಂಬುದರಲ್ಲಿ ಸಂಶಯವಿಲ್ಲ.

೭೦. ಎಲೈ, ವತ್ಸ ನಾರದನೇ ! ಸರ್ವರೂ ಸರ್ವಕಾಲದಲ್ಲಿ ಭಜಿಸಿ, ಸೇವಿಸಬೇಕಾದ ಪರಬ್ರಹ್ಮಸ್ವರೂಪವನ್ನು ನಿನಗೆ ವಿವರಿಸಿದುದಾಯಿತು.

೭೧. ಸೂತ:—ಎಲೈ, ಶೌನಕನೇ! ಶಂಕರನು ಇಂತು ನುಡಿದು ಸುಮ್ಮನಾದನು.

ಗಂಧರ್ವರಾಜಸ್ತೋತ್ರೇಣ ತುಷ್ಟುವೇ ತಂ ಚ ನಾರದಃ ।
ಮುನಿಸ್ತೋತ್ರೇಣ ಸಂತುಷ್ಟೋ ಭಗವಾನಾದಿರಚ್ಯುತಃ ॥ ೭೨ ॥

ಜ್ಞಾನಂ ಮೃತ್ಯುಂಜಯಸ್ತಸ್ಮೈ ಪ್ರದದೌ ವರಮೀಪ್ಸಿತಂ ।
ಮುನೀಂದ್ರಸ್ತಂ ಸಂಪ್ರಣಮ್ಯ ಪ್ರಹೃಷ್ಟವದನೇಕ್ಷಣಃ ॥
ತದಾಜ್ಞಯಾ ಪುಣ್ಯರೂಪಂ ಯಯೌ ನಾರಾಯಣಾಶ್ರಮಂ ॥ ೭೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಸೌತಿಶೌನಕ ಸಂವಾದೇ ಬ್ರಹ್ಮಸ್ವರೂಪ-ವೈಕುಂಠಾದಿ ವರ್ಣನಂ ನಾರದಪ್ರಸ್ಥಾನಂ ನಾಮಾಷ್ಟಾವಿಂಶತಿತಮೋಽಧ್ಯಾಯಃ.

---

೭೨. ಅನಂತರ, ನಾರದನೂ, ಗಂಧರ್ವರಾಜಪುತ್ರನಾಗಿದ್ದಾಗ ಉಪದೇಶ ಹೊಂದಿದ ಸ್ತೋತ್ರದಿಂದ, ಪರಮಾತ್ಮನನ್ನು ಸ್ತುತಿಸಿ, ತೃಪ್ತಿಪಡಿಸಿದನು. ಅವನ ಸ್ತೋತ್ರಕ್ಕೆ ಅಚ್ಯುತನು ಮೆಚ್ಚಿದನು.

೭೩. ಇತ್ತ ಮೃತ್ಯುಂಜಯನಾದ ಶಂಕರನೂ, ನಾರದನಿಗೆ ಅಭೀಪ್ಸಿತವಾದ ವರವನ್ನೂ, ದಿವ್ಯಜ್ಞಾನವನ್ನೂ ಕೊಟ್ಟನು. ಅನಂತರ ನಾರದಮುನಿಯು ಸಂತುಷ್ಟನಾಗಿ ಶಂಕರನಿಗೆ ವಂದಿಸಿ, ಆತನ ಅಪ್ಪಣೆಯಂತೆ ಪುಣ್ಯಕರವಾದ ನಾರಾಯಣಾಶ್ರಮ (ಬದರಿಕಾಶ್ರಮ) ಕ್ಕೆ ಹೊರಟನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಬ್ರಹ್ಮಖಂಡದಲ್ಲಿ ಬ್ರಹ್ಮಸ್ವರೂಪ ಮತ್ತು ವೈಕುಂಠಾದಿಗಳ ವರ್ಣನಾರೂಪವೂ, ನಾರದ ಪ್ರಸ್ಥಾನರೂಪವೂ ಆದ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೆಂಟನೆಯ ಅಧ್ಯಾಯದ ಸಾರಾಂಶವು

'ಪರಬ್ರಹ್ಮಸ್ವರೂಪವನ್ನೂ, ಅದರ ನಿಷ್ಕೃಷ್ಟಲಕ್ಷಣವನ್ನೂ, ಪ್ರಕೃತಿಲಕ್ಷಣವನ್ನೂ ಪ್ರಕೃತಿ ಮತ್ತು ಪುರುಷರಿಗೆ ಭೇದವೋ, ಅಭೇದವೋ ಎಂಬುದನ್ನೂ, ಸೃಷ್ಟಿಯಲ್ಲಿ ಯಾವುದಕ್ಕೆ ಪ್ರಾಧಾನ್ಯವೆಂಬುದನ್ನೂ ವಿವರಿಸಬೇಕೆಂ'ದು ನಾರದನು ಕೇಳಲು ಹಿಂದೆ ವೈಕುಂಠಲೋಕದಲ್ಲಿ ಶ್ರೀಮನ್ನಾರಾಯಣನು ಧರ್ಮ ಮತ್ತು ಚತುರ್ಮುಖ ಬ್ರಹ್ಮನಿಗೆ ವಿವರಿಸಿದ ಪರಬ್ರಹ್ಮಸ್ವರೂಪವನ್ನು ಮಹಾದೇವನು ನಾರದನಿಗೆ ವಿವರಿಸಿದನು. 'ಪರಬ್ರಹ್ಮವಸ್ತುವು ಎಲ್ಲ ದೇಹಿಗಳ ಪುಣ್ಯಪಾಪಕರ್ಮಗಳಿ ಸಾಕ್ಷಿಯಾಗಿ, ಎಲ್ಲರ ದೇಹದಲ್ಲೂ ನೆಲೆಸಿರುವುದು. ವಿಷ್ಣುವು ಪಂಚಪ್ರಾಣಸ್ವರೂಪನಾಗಿಯೂ, ಸೃಷ್ಟಿಕರ್ತನಾದ ಬ್ರಹ್ಮನು ಮನೋರೂಪನಾಗಿಯೂ, ಈಶ್ವರನು ಜ್ಞಾನಸ್ವರೂಪನಾಗಿಯೂ, ಪ್ರಕೃತಿದೇವಿಯು ಶಕ್ತಿಸ್ವರೂಪಿಣಿಯಾಗಿಯೂ, ಎಲ್ಲರ ದೇಹದಲ್ಲೂ ನೆಲೆಸಿರುವರು. ಅಂತಃಕರಣದಲ್ಲಿ ಪ್ರತಿಬಿಂಬಿತನಾದ ಪರಮಾತ್ಮನು ಜೀವಾತ್ಮನೆನಿಸಿಕೊಂಡು ಕರ್ಮಫಲಭೋಗಿಯಾಗುವನು. ಅಂತಃಕರಣವು ನಾಶವಾದ ಮೇಲೆ ಜೀವನು ಪರಮಾತ್ಮನಲ್ಲಿ ಐಕ್ಯಹೊಂದುವನು. ಪ್ರಳಯದಲ್ಲಿ ಚರಾಚರಾತ್ಮಕವಾದ ಜಗತ್ತೆಲ್ಲವೂ ಅವಿನಾಶಿಯಾದ ಪರಮಾತ್ಮನಲ್ಲಿ ಅಡಗಿರುವುದು. ಆ ಪರಮಾತ್ಮನು ತೇಜೋಮಯನು. ನಿರ್ಗುಣನೂ, ನಿರೀಹನೂ ನಿರಾಕಾರನೂ ಆದ ಆ ಪರಮಾತ್ಮನಲ್ಲಿಯೇ ಸರ್ವಬೀಜಸ್ವರೂಪಿಣಿಯಾದ ಪ್ರಕೃತಿಯು ಐಕ್ಯವಾಗಿರುವುದು. ಅಗ್ನಿ, ಸೂರ್ಯ ಮುಂತಾದುವುಗಳಲ್ಲಿರುವ ದಾಹಿಕಾದ ಶಕ್ತಿಯಂತೆ ಪರಬ್ರಹ್ಮನೂ ಮತ್ತು ಪ್ರಕೃತಿಯೂ ಅಭಿನ್ನರು. ಆದರೆ ಸೃಷ್ಟ್ಯುನ್ಮುಖರಾದಾಗ ಪರಮಾತ್ಮನು ಸಗುಣನಾದ ಪುರುಷನೆಂದೂ, ಪ್ರಕೃತಿಯು ತ್ರಿಗುಣಾತ್ಮಕಳೆಂದೂ, ಕರೆಯಲ್ಪಡುವರು. ಕುಂಬಾರನು ಮಣ್ಣಿನಿಂದ ಘಟವನ್ನು ಮಾಡುವಂತೆ ಪುರುಷನು ಪ್ರಕೃತಿಯಿಂದ ಚರಾಚರ ಜಗತ್ತನ್ನು ಸೃಷ್ಟಿಮಾಡುವನು. ಘಟಕ್ಕೆ ಉಪಾದಾನಕಾರಣವಾದ ಮಣ್ಣು ನಿತ್ಯವಾಗಿರುವಂತೆ ಪ್ರಕೃತಿಯೂ ನಿತ್ಯವೆಂದೂ, ಆದ್ದರಿಂದ ಪ್ರಕೃತಿ ಪುರುಷರಿಬ್ಬರಿಗೂ ಸಮಪ್ರಾಧಾನ್ಯವೆಂದೂ ಕೆಲವರ ಮತ.

ಕುಂಬಾರನು ಘಟಕ್ಕೆ ಉಪಾದಾನಕಾರಣವಾದ ಮಣ್ಣನ್ನು ಸಂಗ್ರಹಮಾಡಲು ಶಕ್ತನಾಗಿರುವಂತೆ ಮಣ್ಣೊಂದೇ ಕುಂಬಾರನ ಸೃಷ್ಟಿಗೆ ಶಕ್ತವಾಗಿಲ್ಲ. ಅದರಂತೆ ಪ್ರಕೃತಿಯೂ ಪುರುಷನಿಲ್ಲದೆ ಸ್ವತಂತ್ರಳಲ್ಲದುದರಿಂದ ಪುರುಷನೇ ಶ್ರೇಷ್ಠನೆಂದೂ ಪ್ರಕೃತಿ ಪುರುಷರಿಬ್ಬರೂ ನಿತ್ಯರೆಂದೂ ಮತ್ತೆ ಕೆಲವರ ಮತ–ಕೆಲವರು ಪ್ರಕೃತಿ

ಪುರುಷರಿಗೆ ಅಭೇದವನ್ನೂ, ಮತ್ತೆ ಕೆಲವರು ಭೇದವನ್ನೂ ನಿರೂಪಿಸುವರು. ಒಟ್ಟಿನಲ್ಲಿ ಅನಾದಿಯೂ, ಆದಿಕಾರಣವೂ, ಸರ್ವೋತ್ತಮವೂ, ಸರ್ವವ್ಯಾಪಿಯೂ, ಕರ್ಮಬಂಧ ರಹಿತವೂ, ಸಾಕ್ಷಿಮಾತ್ರವೂ ಆದುದೇ ಪರಬ್ರಹ್ಮವೆಂದೂ, ಅದರ ಶಕ್ತಿಯೇ ಪ್ರಕೃತಿ ಯೆಂದೂ ಸಿದ್ಧಾಂತವಾಗುವುದು.

ಯೋಗಿಗಳು ಪರಬ್ರಹ್ಮವನ್ನು ತೇಜೋಮಯವೆನ್ನುವರು. ಆದರೆ ವಿಷ್ಣು ಭಕ್ತರು ಪರಬ್ರಹ್ಮವು ಸಗುಣವೂ, ಸಾಕಾರವೂ, ಧ್ಯಾನಾವಲಂಬನವೂ ಆದುದೆಂದು ಹೇಳಿ, ಪರಮಾತ್ಮನ ದಿವ್ಯಸುಂದರಾಕಾರವನ್ನು ಬಣ್ಣಿಸುವರು. 'ಕೃಷ್' ಎಂದರೆ ಸರ್ವವೆಂದೂ, 'ನ' ಎಂದರೆ ಆದಿ ಎಂದೂ ಅರ್ಥವಾಗುವುದರಿಂದ ಕೃಷ್ಣಪರಮಾತ್ಮನು ಬ್ರಹ್ಮವಿಷ್ಣುಶಿವಾದಿಗಳಿಗೆಲ್ಲ ಆದಿಪುರುಷನೆಂದೂ, ಪ್ರಳಯದಲ್ಲಿ ಎಲ್ಲರೂ ಶ್ರೀಕೃಷ್ಣ ಪರಮಾತ್ಮನಲ್ಲಿಯೇ ಐಕ್ಯವಾಗಿದ್ದು ಸೃಷ್ಟಿಯಲ್ಲಿ ವ್ಯಕ್ತವಾಗುವರೆಂದು ಸ್ಪಷ್ಟ ವಾಗುವುದು.

ಶಂಕರನ ಈ ನುಡಿಗಳನ್ನು ಕೇಳಿ ನಾರದನು ಸಂತುಷ್ಟಾಂತರಂಗನಾಗಿ, ಅವನಿಗೆ ವಂದಿಸಿ, ಬದರಿಕಾಶ್ರಮಕ್ಕೆ ತೆರಳಿದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

॥ ಏಕೋನತ್ರಿಂಶತ್ತಮೋಽಧ್ಯಾಯಃ ॥

॥ ಸೌತಿರುವಾಚ ॥

ದದರ್ಶಾಶ್ರಮಮಾಶ್ಚರ್ಯಂ ದೇವರ್ಷಿರ್ನಾರದಸ್ತಥಾ ।
ಋಷಿರ್ನಾರಾಯಣಸ್ಯೈವ ಬದರೀವನಸಂಯುತಂ ॥ ೧ ॥

ನಾನಾವೃಕ್ಷಫಲಾಕೀರ್ಣಂ ಪುಂಸ್ಕೋಕಿಲರುತಶ್ರುತಂ ।
ಶರಭೇಂದ್ರೈಃ ಕೇಸರೀಂದ್ರೈರ್ವ್ಯಾಘ್ರೌಘೈಃ ಪರಿವೇಷ್ಟಿತಂ ॥ ೨ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು

೧. ಸೂತಪುತ್ರ:—ಎಲೈ, ಶೌನಕನೇ, ಪರಮೇಶ್ವರನ ಅಪ್ಪಣೆಯಂತೆ ಹೊರಟ ದೇವರ್ಷಿಯಾದ ನಾರದನು ಬದರೀ (ಯಗಚಿ) ವನದಿಂದ ಕೂಡಿದ ನಾರಾಯಣಾಶ್ರಮವನ್ನು ಕಂಡು ಅಚ್ಚರಿಗೊಂಡನು.

೨. ಆ ಆಶ್ರಮವು ಫಲಭರಿತವಾದ ಅನೇಕ ವೃಕ್ಷಗಳ ಸೊಂಪಿನಿಂದಲೂ, ಗಂಡುಕೋಗಿಲೆಗಳ ಪಂಚಮಸ್ವರದ ಇಂಪಿನಿಂದಲೂ, ಮನೋಹರವಾಗಿದ್ದಿತು. ಶರಭ ಮೃಗಗಳೂ (ಎಂಟು ಕಾಲಿರುವ ಮೃಗಗಳು) ಸಿಂಹಶಾರ್ದೂಲಗಳೂ ಅಲ್ಲಿ ತುಂಬಿದ್ದುವು.

ಋಷೀಂದ್ರಸ್ಯ ಪ್ರಭಾವೇಣ ಹಿಂಸಾಭಯವಿವರ್ಜಿತಂ ।
ಮಹಾರಣ್ಯಮಗಮ್ಯಂ ಚ ಸ್ವರ್ಗಾದಪಿ ಮನೋಹರಂ　　॥ ೩ ॥

ಸಿದ್ಧೇಂದ್ರಾಣಾಂ ಮುನೀಂದ್ರಾಣಾಮಾಶ್ರಮಾಣಾಂ ತ್ರಿಕೋಟಿಭಿಃ ।
ಆವೃತಂ ಚಂದನಾರಣ್ಯೈಃ ಪಾರಿಜಾತವನಾನ್ವಿತಂ　　॥ ೪ ॥

ದದರ್ಶ ತಮೃಷೀಂದ್ರಂ ಚ ಸಭಾಮಧ್ಯೇ ಮನೋಹರಂ ।
ರತ್ನಸಿಂಹಾಸನಸ್ಥಂ ಚ ವಸಂತಂ ಯೋಗಿನಾಂ ಗುರುಂ　　॥ ೫ ॥

ಜಪಂತಂ ಪರಮಂ ಬ್ರಹ್ಮ ಕೃಷ್ಣಮಾತ್ಮಾನಮೀಶ್ವರಂ ।
ಪ್ರಣನಾಮ ಚ ತಂ ದೃಷ್ಟ್ವಾ ಬ್ರಹ್ಮಪುತ್ರಶ್ಚ ಶೌನಕ　　॥ ೬ ॥

ಉತ್ಥಾಯ ಸಹಸಾಲಿಂಗ್ಯ ಯುಯುಜೇ ಪರಮಾಶಿಷಂ ।
ಪಪ್ರಚ್ಛ ಕುಶಲಂ ಸ್ನೇಹಾಚ್ಚ ಕಾರಾತಿಥಿಪೂಜನಂ　　॥ ೭ ॥

---

೩. ಆದರೂ, ನಾರಾಯಣಋಷಿಯ ಮಹಿಮೆಯಿಂದ ದುಷ್ಟಮೃಗಗಳ ಬಾಧೆಯ ಭಯವಿರಲಿಲ್ಲ. ಅಗಮ್ಯವಾದ ಆ ಮಹಾರಣ್ಯವು ಸ್ವರ್ಗಕ್ಕಿಂತಲೂ ಮನೋಹರವಾಗಿದ್ದಿತು.

೪. ಆ ಬದರಿಕಾಶ್ರಮವು ಸಿದ್ಧರ ಮತ್ತು ಮುನಿಗಳ ಮೂರುಕೋಟಿ ಆಶ್ರಮಗಳಿಂದಲೂ, ಚಂದನ ಮತ್ತು ಪಾರಿಜಾತದ ವನಗಳಿಂದಲೂ ಆವೃತವಾಗಿತ್ತು .

೫. ಆ ಆಶ್ರಮದ ಸಭಾಮಧ್ಯದಲ್ಲಿ ರತ್ನಸಿಂಹಾಸನಾಸೀನನೂ, ಯೋಗಿಗಳ ಗುರುವೂ ಆದ ನಾರಾಯಣಮಹರ್ಷಿಯನ್ನು ನಾರದನು ಕಂಡನು.

೬. ಅನವರತವೂ ಕೃಷ್ಣಪರಮಾತ್ಮನ ದಿವ್ಯನಾಮವನ್ನು ಜಪಿಸುತ್ತಿರುವ ಆ ನಾರಾಯಣಮಹರ್ಷಿಗೆ ಬ್ರಹ್ಮಪುತ್ರನಾದ ನಾರದನು ಸಾಷ್ಟಾಂಗವೆರಗಿದನು.

೭. ಕೂಡಲೆ ಋಷಿಯು ಇದಿರೆದ್ದು, ನಾರದನನ್ನು ಆಲಂಗಿಸಿಕೊಂಡು ಆಶೀರ್ವದಿಸಿ, ಕುಶಲಪ್ರಶ್ನಪೂರ್ವಕವಾಗಿ ಅತಿಥಿಸತ್ಕಾರಮಾಡಿದನು.

ರತ್ನಸಿಂಹಾಸನೇ ರಮ್ಯೇ ವಾಸಯಾಮಾಸ ನಾರದಂ ।
ನಿವಸನ್ನಾಸನೇ ರಮ್ಯೇ ವರ್ತ್ಮಶ್ರಮವಿವರ್ಜಿತಃ ॥ ೮ ॥

ಉವಾಚ ತಮೃಷಿಶ್ರೇಷ್ಠಂ ಭಗವಂತಂ ಸನಾತನಂ ।
ಅಧೀತವೇದಾನ್ ಸರ್ವಾಂಶ್ಚ ಪಿತುಃ ಸ್ಥಾನೇ ಸುದುರ್ಗಮಾನ್ ॥ ೯ ॥

ಜ್ಞಾನಂ ಸಂಪ್ರಾಪ್ಯ ಯೋಗೀಂದ್ರಾನ್ಮಂತ್ರಂ ವೈ ಶಂಕರಾದ್ವಿಭೋ ।
ಮನೋ ಮೇ ನ ಹಿ ತೃಪ್ನೋತಿ ದುರ್ನಿವಾರಂ ಚ ಚಂಚಲಂ ॥ ೧೦ ॥

ದೃಷ್ಟಂ ಮಯಾ ತ್ವತ್ಪದಾಬ್ಜಂ ಮನಸಾ ಪ್ರೇರಿತೇನ ಚ ।
ಕಿಂಚಿತ್ ಜ್ಞಾನವಿಶೇಷಂ ಚ ಲಬ್ಧುಮಿಚ್ಛಾಮಿ ಸಾಂಪ್ರತಂ ॥ ೧೧ ॥

ಯತ್ರ ಕೃಷ್ಣಗುಣಾಖ್ಯಾನಂ ಜನ್ಮಮೃತ್ಯುಜರಾಪಹಂ ॥ ೧೨ ॥

೮–೯. ಅನಂತರ ನಾರದಋಷಿಯು ರತ್ನಸಿಂಹಾಸನದಲ್ಲಿ ಮಂಡಿಸಿ ಮಾರ್ಗಾಯಾಸವನ್ನು ಪರಿಹರಿಸಿಕೊಂಡು, ಷಡ್ಗುಣ್ಯೈಶ್ವರ್ಯಪರಿಪೂರ್ಣನೂ, ಚತುರ್ಮುಖ ಬ್ರಹ್ಮನಿಂದ ದುರ್ಗಮವಾದ ವೇದಗಳನ್ನು ಅಧ್ಯಯನಮಾಡಿದವನೂ ಆದ ನಾರಾಯಣ ಋಷಿಯನ್ನು ಕುರಿತು ಇಂತೆಂದನು.

೧೦. ಎಲೈ, ಮಹರ್ಷಿಯೇ, ಯೋಗಿಶ್ರೇಷ್ಠನಾದ ಶಂಕರನಿಂದ ಪರಬ್ರಹ್ಮಜ್ಞಾನವನ್ನೂ, ದಿವ್ಯಮಂತ್ರೋಪದೇಶವನ್ನೂ ಪಡೆದರೂ, ಚಂಚಲವಾದ ನನ್ನ ಮನಸ್ಸಿಗೆ ಇನ್ನೂ ಅತೃಪ್ತಿಯಾಗಿದೆ.

೧೧. ನನ್ನ ಮನಸ್ಸಿನ ಪ್ರೇರಣೆಯಂತೆ ಇಲ್ಲಿಗೆ ಬಂದು ತಮ್ಮ ಪಾದಾರವಿಂದ ದರ್ಶನವನ್ನು ಪಡೆದೆನು. ಈಗ ನಿಮ್ಮಿಂದ ಇನ್ನೂ ಹೆಚ್ಚಾದ ಜ್ಞಾನವನ್ನು ಹೊಂದಬೇಕೆಂಬ ಆಸೆಯಿದೆ.

೧೨. ಜನ್ಮಜರಾಮರಣಗಳನ್ನು ಅಪಹರಿಸುವ ಕೃಷ್ಣಪರಮಾತ್ಮನ ಮಹಿಮೆಯನ್ನು ತಾವು ವಿವರಿಸಬೇಕು.

ಬ್ರಹ್ಮವಿಷ್ಣುಶಿವಾದ್ಯಾಶ್ಚ ಸುರೇಂದ್ರಶ್ಚ ಸುರಾ ವಿಭೋ ।
ಕಂ ಚಿಂತಯಂತಿ ಮುನಯೋ ಮನವಶ್ಚ ವಿಚಕ್ಷಣಾಃ ॥ ೧೩ ॥

ಕಸ್ಮಾತ್ಸೃಷ್ಟಿಶ್ಚ ಭವತಿ ಕುತ್ರ ವಾ ಸಂಪ್ರಲೀಯತೇ ।
ಕೋ ವಾ ಸರ್ವೇಶ್ವರೋ ವಿಷ್ಣುಃ ಸರ್ವಕಾರಣಕಾರಕಃ ॥ ೧೪ ॥

ತಸ್ಯೇಶ್ವರಸ್ಯ ಕಿಂ ರೂಪಂ ಕರ್ಮ ವಾ ಕಿಂ ಜಗತ್ಪತೇ ।
ವಿಚಾರ್ಯ ಮನಸಾ ಸರ್ವಂ ತದ್ಭವಾನ್ವಕ್ತುಮರ್ಹಸಿ ॥ ೧೫ ॥

ನಾರದಸ್ಯ ವಚಃ ಶ್ರುತ್ವಾ ಪ್ರಹಸ್ಯ ಭಗವಾನ್ಋಷಿಃ ।
ಕಥಾಂ ಕಥಿತುಮಾರೇಭೇ ಪುಣ್ಯಾಂ ಭುವನಪಾವನೀಂ ॥ ೧೬ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಸೌತಿಶೌನಕ
ಸಂವಾದೇ ನಾರಾಯಣಂ ಪ್ರತಿ ನಾರದಪ್ರಶ್ನೋ ನಾಮ
ಏಕೋನತ್ರಿಂಶೋಽಧ್ಯಾಯಃ

---

೧೩. ಬ್ರಹ್ಮ, ವಿಷ್ಣು, ಮಹೇಶರೂ, ದೇವೇಂದ್ರ ಮತ್ತು ದೇವತೆಗಳೂ, ಮುನಿಗಳೂ ಮತ್ತು ಕುಶಲಿಗಳಾದ ಮಾನವರೂ, ಹಗಲಿರುಳೂ ಚಿಂತಿಸುವ ಪರಮಾತ್ಮನ ಸ್ವರೂಪವಾವುದು ?

೧೪. ಚರಾಚರಾತ್ಮಕವಾದ ಜಗತ್ಸೃಷ್ಟಿಯು ಯಾರಿಂದುಂಟಾಗುವುದು ? ಮತ್ತು ಪ್ರಲಯದಲ್ಲಿ ಆ ಜಗತ್ತು ಎಲ್ಲಿ ಅಡಕವಾಗುವುದು ? ಕಾರಣಗಳಿಗೆಲ್ಲಾ ಆದಿಕಾರಣನೂ, ಸರ್ವೇಶ್ವರನೂ ಆದ ಆ ಪರಮಾತ್ಮನ ಸ್ವರೂಪವಾವುದು.

೧೫. ಪರಬ್ರಹ್ಮನ ಸ್ವರೂಪವನ್ನೂ, ಅವನು ಮಾಡುವ ಕೆಲಸವನ್ನೂ, ನನಗೆ ಚೆನ್ನಾಗಿ ವಿವರಿಸಬೇಕೆಂದು ನಿಮ್ಮನ್ನು ವಿನಯದಿಂದ ಬೇಡುವೆನು.

೧೬. ನಾರದನ ಮಾತನ್ನು ಕೇಳಿದ ನಾರಾಯಣಋಷಿಯು ಮಂದಹಾಸದಿಂದ ಪುಣ್ಯವೂ, ಭುವನಪಾವನವೂ ಆದ ಪರಮಾತ್ಮಸಂಬಂಧವಾದ ಕಥೆಯನ್ನು ಹೇಳಲುಪಕ್ರಮಿಸಿದನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಬ್ರಹ್ಮಖಂಡದಲ್ಲಿ ನಾರಾ
ಯಣ ಋಷಿಯನ್ನು ಕುರಿತು ನಾರದನ ಪ್ರಶ್ನರೂಪವಾದ
ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೊಂಭತ್ತನೆಯ ಅಧ್ಯಾಯದ ಸಾರಾಂಶವು

ಪರಮೇಶ್ವರನ ಅಪ್ಪಣೆಪಡೆದು ಹೊರಟ ನಾರದನು ಪುಣ್ಯಕರವಾದ ಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ನಾರಾಯಣಮಹರ್ಷಿಯ ದಿವ್ಯಸಂದರ್ಶನವನ್ನೂ, ಆತನ ಉಚಿತವಾದ ಆದರಸತ್ಕಾರಗಳನ್ನೂ ಪಡೆದು ತಾನು ಪರಮೇಶ್ವರನಿಂದ ಪರಬ್ರಹ್ಮಸ್ವರೂಪವನ್ನು ಅರಿತುದಾಗಿಯೂ, ಮತ್ತೊಮ್ಮೆ ತಮ್ಮಿಂದ ಆ ದಿವ್ಯಜ್ಞಾನವನ್ನು ಹೊಂದಲು ಬಯಕೆ ಇರುವುದರಿಂದ ಸರ್ವಶ್ರೇಷ್ಠನಾದ ಪರಬ್ರಹ್ಮನ ಸ್ವರೂಪವನ್ನು ವಿವರಿಸಬೇಕೆಂದೂ ಬೇಡುವನು.

—|| ಓಂ ||—

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಬ್ರಹ್ಮಖಂಡೇ

|| ತ್ರಿಂಶತ್ತಮೋಽಧ್ಯಾಯಃ ||

|| ಶ್ರೀ ನಾರಾಯಣ ಉವಾಚ ||

ಲಂಬೋದರೋ ಹರಿರುಮಾಪತಿರೀಶಶೇಷಾ
ಬ್ರಹ್ಮಾದಯಃ ಸುರಗಣಾ ಮನವೋ ಮುನೀಂದ್ರಾಃ |
ವಾಣೀ ಶಿವಾ ತ್ರಿಪಥಗಾ ಕಮಲಾದಿಕಾಶ್ಚ
ಸಂಚಿಂತಯೇದ್ಭಗವತಶ್ಚರಣಾರವಿಂದಂ || ೧ ||

ಸಂಸಾರಸಾಗರಮತೀವಗಭೀರಘೋರಂ
ದಾವಾಗ್ನಿಸರ್ಪಪರಿವೇಷ್ಟಿತಚೇಷ್ಟಿತಾಂಗಂ |
ಸಂಲಘ್ಯ ಗಂತುಮಭಿವಾಂಛತಿ ಯೋಽಹಿ ದಾಸ್ಯಂ
ಸಂಚಿಂತಯೇದ್ಭಗವತಶ್ಚರಣಾರವಿಂದಂ || ೨ ||

ಮೂವತ್ತನೆಯ ಅಧ್ಯಾಯವು

೧. ನಾರಾಯಣ ಮಹರ್ಷಿ :—ವಿಘ್ನೇಶ್ವರನೂ ಬ್ರಹ್ಮವಿಷ್ಣುಮಾಹೇಶ್ವರರೂ, ಆದಿಶೇಷನೂ, ಸುರನರಮನುಗಳೂ ಮತ್ತು ಮುನಿಗಳೂ, ಸರಸ್ವತಿ, ಪಾರ್ವತಿ, ಗಂಗೆ ಮತ್ತು ಲಕ್ಷ್ಮೀದೇವಿಯರೂ, ಪರಿಪೂರ್ಣಸ್ವರೂಪನಾದ ಆ ಪರಮಾತ್ಮನ ಪಾದಾರವಿಂದಗಳನ್ನು ಯಾವಾಗಲೂ ಧ್ಯಾನಿಸುವರು.

೨. ಅತಿಗಹನವೂ, ಭಯಂಕರವೂ ಆಗಿ ಜ್ವಾಲಾಮುಖಿಯಿಂದಲೂ, ಕ್ರೂರ ಸರ್ಪಗಳಿಂದಲೂ ಪರಿಪೂರಿತವಾಗಿರುವ ಸಂಸಾರವೆಂಬ ಸಾಗರವನ್ನು ದಾಟಿ, ಪರಮಾತ್ಮನ ಸೇವೆಯನ್ನು ಬಯಸುವವರು ಅನನ್ಯಭಕ್ತಿಯಿಂದ ಭಗವಂತನ ಚರಣಕಮಲಗಳನ್ನು ಭಜಿಸಬೇಕು.

ಗೋವರ್ಧನೋದ್ಧರಣಕೀರ್ತಿರತೀವ ಖಿನ್ನಾ
ಭೂರ್ದಾರಿತಾ ಚ ದಶನಾಗ್ರತ ಏವ ಚಾರ್ದ್ರಾ ।
ವಿಶ್ವಾನಿ ಲೋಮವಿವರೇಷು ಭಿಭರ್ತುರಾದೇಃ
ಸಂಚಿಂತಯೇದ್ಭಗವತಶ್ಚರಣಾರವಿಂದಂ ॥ ೩ ॥

ವೇದಾಂಗ ವೇದಮುಖನಿಃಸೃತಕೀರ್ತಿರಂಶೈ-
ರ್ವೇದಾಂಗ ವೇದಜನಕಸ್ಯ ಹರೇರ್ವಿಧಾತುಃ ।
ಜನ್ಮಾಂತಕಾದಿ ಭಯಶೋಕವಿದೀರ್ಣದೇಹಃ
ಸಂಚಿಂತೆಯೇದ್ಭಗವತಶ್ಚರಣಾರವಿಂದಂ ॥ ೪ ॥

ಗೋಪಾಂಗನಾವದನಪಂಕಜಷಟ್ಪದಸ್ಯ
ರಾಸೇಶ್ವರಸ್ಯ ರಸಿಕಾರಮಣಸ್ಯ ಪುಂಸಃ ।
ವೃಂದಾವನೇ ವಿಹರತೋ ವ್ರಜವೇಷವಿಷ್ಣೋಃ
ಸಂಚಿಂತೆಯೇದ್ಭಗವತಶ್ಚರಣಾರವಿಂದಂ ॥ ೫ ॥

---

೩. ಯಾವ ಪರಮಾತ್ಮನು ತನ್ನ ಕಿರುಬೆರಳಿನ ತುದಿಯಿಂದ ಗೋವರ್ಧನ ಪರ್ವತವನ್ನು ಎತ್ತಿ ಕೀರ್ತಿಗಳಿಸಿರುವನೋ, ಯಾವಾತನು ವರಾಹಾವತಾರ ಮಾಡಿ ತನ್ನ ಕೋರೆದಾಡೆಗಳಿಂದ ಸಮುದ್ರದೊಳಗೆ ಮುಳುಗಿದ್ದ ಭೂಮಿಯನ್ನು ಮೇಲಕ್ಕೆತ್ತಿದನೋ, ಪ್ರಳಯಕಾಲದಲ್ಲಿ ತನ್ನ ರೋಮಕೂಪಗಳಲ್ಲಿ ಅಖಿಲ ವಿಶ್ವವನ್ನೂ ಯಾರು ಅಡಗಿಸಿಕೊಂಡಿರುವನೋ, ಆ ಆದಿಪುರುಷನಾದ ಪರಮಾತ್ಮನ ಪಾದಾರವಿಂದಗಳನ್ನು ಎಲ್ಲರೂ ಭಕ್ತಿಯಿಂದ ಭಜಿಸಬೇಕು.

೪. ವೇದವೇದಾಂಗಗಳು ಯಾವ ಪರಮಾತ್ಮನ ಕೀರ್ತಿಯನ್ನು ಕೊಂಡಾಡಿರುವುವೋ, ಯಾವಾತನು ಚತುರ್ಮುಖಬ್ರಹ್ಮರೂಪದಿಂದ ವೇದವೇದಾಂಗಗಳಿಗೆ ಜನಕನಾದನೋ ಅಂಥ ಪರಿಪೂರ್ಣಸ್ವರೂಪನಾದ ಪರಮಾತ್ಮನ ಚರಣಕಮಲಗಳನ್ನು ಭಜಿಸುವ ಭಕ್ತನು ಜನ್ಮಜರಾಮರಣಗಳ ಕೋಟಲೆಗೆ ಸಿಲುಕುವುದಿಲ್ಲ.

೫. ಗೋಪಸ್ತ್ರೀಯರ ಮುಖಕಮಲದ ಮಕರಂದ ಪಾನಮಾಡಲು ಮಧುಕರ (ದುಂಬಿ) ನಾಗಿಯೂ, ರಾಸಮಂಡಲವಿಹಾರಿಯಾಗಿಯೂ, ರಸಿಕಸ್ತ್ರೀಯರ ರಮಣನಾಗಿಯೂ, ವೃಂದಾವನದಲ್ಲಿ ಗೋಪವೇಷಧಾರಿಯಾಗಿ ವಿಹರಿಸುವವನಾಗಿಯೂ ಇರುವ ಶ್ರೀಕೃಷ್ಣಪರಮಾತ್ಮನ ಪಾದಕಮಲಗಳನ್ನು ಭಕ್ತಿಯಿಂದ ಧ್ಯಾನಿಸಬೇಕು.

ಚಕ್ಷುರ್ನಿಮೇಷಪತಿತೋ ಜಗತಾಂ ವಿಧಾತಾ
ತತ್ಕರ್ಮ ವತ್ಸ ಕಥಿತುಂ ಭು ವಿಕಃ ಸಮರ್ಥಃ ।
ತ್ವಂ ಚಾಪಿ ನಾರದ ಮುನೇ ಪರಮಾದರೇಣ
ಸಂಚಿಂತನಂ ಕುರು ಹರೇಶ್ಚರಣಾರವಿಂದಂ ॥ ೬ ॥

ಯೂಯಂ ವಯಂ ತಸ್ಯ ಕಲಾಕಲಾಂಶಾಃ
ಕಲಾಕಲಾಂಶಾ ಮನವೋ ಮುನೀಂದ್ರಾಃ ।
ಕಲಾವಿಶೇಷಾ ಭವಪಾರಮುಖ್ಯಾ
ಮಹಾನ್ವಿರಾಡ್ಯಸ್ಯ ಕಲಾವಿಶೇಷಃ ॥ ೭ ॥

ಸಹಸ್ರಶೀರ್ಷಾ ಶಿರಸಃ ಪ್ರದೇಶೇ
ಬಿಭರ್ತಿ ಸಿದ್ಧಾರ್ಥಸಮಂ ಚ ವಿಶ್ವಂ ।
ಕೂರ್ಮೇ ಚ ಶೇಷೋ ಮಶಕೋ ಗಜೇಯಥಾ
ಕೂರ್ಮಶ್ಚ ಕೃಷ್ಣಸ್ಯ ಕಲಾಕಲಾಂಶಃ ॥ ೮ ॥

---

೬. ಯಾವ ಪರಮಾತ್ಮನ ಲೀಲಾಮಾತ್ರದಿಂದ, ನಿಮೇಷ ಕಾಲದೊಳಗೆ ಜಗತ್ಸ್ರಷ್ಟನ ಉತ್ಪತ್ತಿವಿನಾಶಗಳು ಆಗ ಬಲ್ಲುದೋ, ಅಂಥ ಪರಮಾತ್ಮನ ಅದ್ಭುತ ಕಾರ್ಯಗಳನ್ನು ವರ್ಣಿಸಲು ಸಮರ್ಥರಾರು? ಆದ್ದರಿಂದ ಎಲೈ, ನಾರದನೇ, ನೀನೂ ಕೂಡ ಆ ಪರಮಾತ್ಮನ ಚರಣಪಂಕಜಗಳನ್ನು ಭಕ್ತಿಯಿಂದ ಭಜಿಸು.

೭. ನೀವೂ, ನಾವೂ, ಮನುಗಳೂ ಮತ್ತು ಮುನಿಗಳೂ ಯಾವ ಪರಮಾತ್ಮನ ಕಲೆಯಿಂದಲೇ ಜನಿಸಿರುವೆವೋ, ಆ ಪರಮಾತ್ಮನ ಕಲಾವಿಶೇಷದಿಂದಲೇ ಪರಮೇಶ್ವರನೂ, ವಿರಾಟ್‌ಪುರುಷನೂ ಅವತರಿಸಿರುವರು.

೮. ಕೂರ್ಮಾವತಾರಿಯಾದ ಪರಮಾತ್ಮನ ಶರೀರದ ಮೇಲೆ ಆದಿಶೇಷನಿರುವಂತೆಯೂ, ದಿಗ್ಗಜಗಳ ಮೈಮೇಲೆ ನೊಣಗಳಿರುವಂತೆಯೂ, ಪರಮಾತ್ಮನ ಸಾವಿರ ತಲೆಗಳ ಮೇಲೆ ನಿಖಿಲವಿಶ್ವವೂ, ಸಾಸಿವೆ ಕಾಳಿನಂತೆ ಅಡಗಿದೆ. ಆ ಆದಿಕೂರ್ಮನೂ ಕೃಷ್ಣಪರಮಾತ್ಮನ ಅಂಶಾವತಾರಿಯು.

ಗೋಲೋಕನಾಥಸ್ಯ ವಿಭೋರ್ಯಶೋಽಮಲಂ
ಶ್ರುತೌ ಪುರಾಣೇ ನ ಹಿ ಕಿಂ ಚ ನ ಸ್ಫುಟಂ ।
ನ ಪಾದ್ಮಮುಖ್ಯಾ ಕಥಿತುಂ ಸಮರ್ಥಾಃ
ಸರ್ವೇಶ್ವರಂ ತಂ ಭಜ ಪಾದ್ಮಮುಖ್ಯಂ ॥ ೯ ॥

ವಿಶ್ವೇಷು ಸರ್ವೇಷು ಚ ವಿಶ್ವಧಾಮ್ನಃ
ಸಂತ್ಯೇವ ಶಶ್ವದ್ವಿಧಿ ವಿಷ್ಣು ರುದ್ರಾಃ ।
ತೇಷಾಂ ಚ ಮುಖ್ಯಾಃ ಶ್ರುತಯಶ್ಚ ದೇವಾಃ
ಪರಂ ನ ಜಾನಂತಿ ತಮೀಶ್ವರಂ ಭಜ ॥ ೧೦ ॥

ಕರೋತಿ ಸೃಷ್ಟಿಂ ಸ ವಿಧೇರ್ವಿಧಾತಾ
ವಿಧಾಯ ನಿತ್ಯಾಂ ಪ್ರಕೃತಿಂ ಜಗತ್ಪ್ರಸೂಂ ।
ಬ್ರಹ್ಮಾದಯಃ ಪ್ರಾಕೃತಿಕಾಶ್ಚ ಸರ್ವೇ
ಭಕ್ತಿಪ್ರದಾಂ ಶ್ರೀಂ ಪ್ರಕೃತಿಂ ಭಜಂತಿ ॥ ೧೧ ॥

---

೯. ಗೋಲೋಕಾಧಿಪತಿಯಾದ ಕೃಷ್ಣಪರಮಾತ್ಮನ ಅಮಲಕೀರ್ತಿಯು ಶ್ರುತಿಯಲ್ಲೂ, ಇತರ ಪುರಾಣಗಳಲ್ಲೂ ಸ್ಪಷ್ಟವಾಗಿ ವರ್ಣಿಸಲಾಗಿಲ್ಲ ಪಾದ್ಮ ಮುಂತಾದ ಪುರಾಣಗಳು ವರ್ಣಿಸದಿರುವ ಆ ಪರಮಾತ್ಮನ ಮಹಿಮೆಯನ್ನು ಇಲ್ಲಿ ತಿಳಿದು ನೀನು ಅವನನ್ನು ಭಜಿಸು.

೧೦. ನಿಖಿಲವಿಶ್ವದಲ್ಲೂ ನಿರಂತರವ್ಯಾಪಿಯಾದ ಯಾವ ಪರಮಾತ್ಮನ ಮಹಿಮೆಯನ್ನು ಬ್ರಹ್ಮವಿಷ್ಣುಮಹೇಶ್ವರರೂ, ಶ್ರುತಿಗಳೂ, ಮತ್ತು ಇತರ ದೇವತೆಗಳೂ ತಿಳಿಯಲಾರರೋ ಅಂಥ ಪರಮಾತ್ಮನನ್ನು ಭಕ್ತಿಯಿಂದ ಭಜಿಸು.

೧೧ ಚರಾಚರಾತ್ಮಕವಾದ ಜಗತ್ತನ್ನು ಸೃಷ್ಟಿಮಾಡುವ ಚತುರ್ಮುಖ ಬ್ರಹ್ಮನ ಸೃಷ್ಟಿಗೂ ಕಾರಣನಾದ ಆ ಪರಮಾತ್ಮನು ನಿತ್ಯಳಾದ ಪ್ರಕೃತಿಯನ್ನು ಸೃಷ್ಟ್ಯುನ್ಮುಖಳನ್ನಾಗಿ ಮಾಡಿ ಸೃಷ್ಟಿಗೆ ತೊಡಗುವನು. ಬ್ರಹ್ಮಾದಿಗಳೂ, ಪ್ರಕೃತಿಯ ಸೃಷ್ಟಿಗೊಳಗಾಗಿ ಮಾಯಾರೂಪಿಣಿಯೂ, ಭಕ್ತಿದಾತಳೂ ಆದ ಆ ಪ್ರಕೃತಿಯನ್ನು ಭಜಿಸುವರು.

ಬ್ರಹ್ಮಸ್ವರೂಪಾ ಪ್ರಕೃತಿರ್ನಭಿನ್ನಾ
ಯಯಾ ಚ ಸೃಷ್ಟಿಂ ಕುರುತೇ ಸನಾತನಃ ।
ಶ್ರಿಯಶ್ಚ ಸರ್ವಾಃ ಕಲಯಾ ಜಗತ್ಸು
ಮಾಯಾ ಚ ಸರ್ವೇ ಚ ತಯಾ ವಿಮೋಹಿತಾಃ ॥ ೧೨ ॥

ನಾರಾಯಣೀ ಸಾ ಪರಮಾ ಸನಾತನೀ
ಶಕ್ತಿಶ್ಚ ಪುಂಸಃ ಪರಮಾತ್ಮನಶ್ಚ ।
ಆತ್ಮೇಶ್ವರಶ್ಚಾಪಿ ಯಯಾ ಚ ಶಕ್ತಿಮಾಂ-
ಸ್ತಯಾ ವಿನಾ ಸ್ರಷ್ಟುಮಶಕ್ತ ಏವ ॥ ೧೩ ॥

ಗತ್ವಾ ವಿವಾಹಂ ಕುರು ವತ್ಸ ಸಾಂಪ್ರತಂ
ಕರ್ತುಂ ಪ್ರಯುಕ್ತಶ್ಚ ಪಿತುರ್ನಿದೇಶಃ ।
ಗುರೋರ್ನಿದೇಶಪ್ರತಿಪಾಲಕೋ ಭವೇಃ
ಸರ್ವತ್ರ ಪೂಜ್ಯೋ ವಿಜಯೀ ಚ ಸಂತತಂ ॥ ೧೪ ॥

---

೧೨. ಜಗತ್ಸೃಷ್ಟಿಗೆ ಕಾರಣಳಾದ ಪ್ರಕೃತಿಯು ಪರಬ್ರಹ್ಮಸ್ವರೂಪಳೇ ಹೊರತು ಭಿನ್ನಳಲ್ಲ. ಆ ಮಾಯಾರೂಪಿಣಿಯಾದ ಪ್ರಕೃತಿಯಿಂದಲೇ ಅನಾದಿಯಾದ ಪರಮಾತ್ಮನು ಸೃಷ್ಟಿಮಾಡಲು ಶಕ್ತನಾಗುವನು. ಲಕ್ಷ್ಮಿಮುಂತಾದ ಸಕಲದೇವಿಯರೂ ಆ ಪ್ರಕೃತಿಯ ಕಲೆಯಿಂದ ಅವತರಿಸಿದವರು. ಮಾಯಾರೂಪಿಣಿಯಾದ ಪ್ರಕೃತಿಯ ಮೋಹಜಾಲಕ್ಕೆ ನಿಖಿಲಪ್ರಪಂಚವೂ ಸಿಲುಕಿದೆ.

೧೩. ಸನಾತನಿಯೂ, ನಾರಾಯಣಿಯೂ ಆದ ಪ್ರಕೃತಿಯು, ಪರಮಪುರುಷನ ಶಕ್ತಿಸ್ವರೂಪಳು. ಸ್ವೇಚ್ಛಾಮಾತ್ರಪ್ರಭುವಾದ ಪರಮಾತ್ಮನೂ ಕೂಡ ಆ ಪ್ರಕೃತಿಯಿಂದಲೇ ಸೃಷ್ಟಿಯಲ್ಲಿ ಶಕ್ತನಾಗುವನು ಶಕ್ತಿಸ್ವರೂಪಿಣಿಯಾದ ಪ್ರಕೃತಿಯಿಲ್ಲದಿದ್ದರೆ ಈಶ್ವರನು ಸೃಷ್ಟಿಮಾಡಲಾಗುತ್ತಿರಲಿಲ್ಲ.

೧೪. ಆದ್ದರಿಂದ ಎಲೈ, ವತ್ಸ ನಾರದನೇ, ಈಗ ನೀನು ಹಿಂತಿರುಗಿ, ನಿನ್ನ ತಂದೆಯ ಅಪ್ಪಣೆಯಂತೆ ವಿವಾಹಿತನಾಗು. ಪಿತೃವಾಕ್ಯಪರಿಪಾಲಕನೆನಿಸಿಕೊಂಡು ಎಲ್ಲರಿಂದಲೂ ಪೂಜ್ಯನಾಗಿ ಎಲ್ಲೆಡೆಯಲ್ಲೂ ಯಾವಾಗಲೂ ಜಯಶೀಲನಾಗು.

ಸ್ವಪತ್ನೀಂ ಪೂಜಯೇದ್ಯೋ ಹಿ ವಸ್ತ್ರಾಲಂಕಾರ ಚಂದನೈಃ ।
ಪ್ರಕೃತಿಸ್ತಸ್ಯ ಸಂತುಷ್ಟಾ ಯಥಾ ಕೃಷ್ಣೋ ದ್ವಿಜಾರ್ಚನೇ ॥ ೧೫ ॥

ಸಾ ಚ ಯೋಷಿತ್ಸ್ವರೂಪಾ ಚ ಪ್ರತಿವಿಶ್ವೇಷು ಮಾಯಯಾ ।
ಯೋಷಿತಾಮಪಮಾನೇನ ಪರಾಭೂತಾ ಚ ಸಾ ಭವೇತ್ ॥ ೧೬ ॥

ದಿವ್ಯಾ ಸ್ತ್ರೀ ಪೂಜಿತಾ ಯೇನ ಪತಿಪುತ್ರವತೀ ಸತೀ ।
ಪ್ರಕೃತಿಃ ಪೂಜಿತಾ ತೇನ ಸರ್ವಮಂಗಲದಾಯಿನೀ ॥ ೧೭ ॥

ಮೂಲಪ್ರಕೃತಿರೇಕಾ ಸಾ ಪೂರ್ಣಬ್ರಹ್ಮಸ್ವರೂಪಿಣೀ ।
ಸೃಷ್ಟೌ ಪಂಚವಿಧಾ ಸಾ ಚ ವಿಷ್ಣುಮಾಯಾ ಸನಾತನೀ ॥ ೧೮ ॥

ಪ್ರಾಣಾಧಿಷ್ಠಾತೃದೇವೀ ಯಾ ಕೃಷ್ಣಸ್ಯ ಪರಮಾತ್ಮನಃ ।
ಸರ್ವಾಸಾಂ ಪ್ರೇಯಸೀ ಕಾಂತಾ ಸರಾಧಾ ಪರಿಕೀರ್ತಿತಾ ॥ ೧೯ ॥

---

೧೫. ಯಾರು ತನ್ನ ಪತ್ನಿಯನ್ನು ವಸ್ತ್ರಾಲಕಾರಚಂದನಗಳಿಂದ ತುಷ್ಟಿಬಡಿಸುವರೋ, ಅಂಥವರ ವಿಷಯದಲ್ಲಿ . ಪ್ರಕೃತಿಯು, ಬ್ರಾಹ್ಮಣರ ಪೂಜೆಯಿಂದ ಪರಮಾತ್ಮನು ತೃಪ್ತಿಗೊಳ್ಳುವಂತೆ, ತೃಪ್ತಳಾಗುವಳು.

೧೬. ಪ್ರಕೃತಿಯು ಪ್ರತಿವಿಶ್ವದಲ್ಲೂ, ತನ್ನ ಮಾಯೆಯ ಮಹಿಮೆಯಿಂದ ಸ್ತ್ರೀರೂಪಳಾಗಿರುವಳು. ಆದ್ದರಿಂದ ಎಲ್ಲಿ ಹೆಂಗಸರಿಗೆ ಅಪಮಾನವಾದರೂ ಪ್ರಕೃತಿಯು ಅಪಮಾನಿತಳಾಗುವಳು.

೧೭. ಪತಿಪುತ್ರವತಿಯಾದ ಸತಿಗೆ ಮಾಡುವ ಪೂಜೆಪುರಸ್ಕಾರಗಳಿಂದ ಪ್ರಕೃತಿಯೂ ತುಷ್ಟಳಾಗಿ ಸರ್ವಮಂಗಳಪ್ರದಳಾಗುವಳು.

೧೮. ಪರಿಪೂರ್ಣಬ್ರಹ್ಮಸ್ವರೂಪಿಣಿಯಾದ ಆ ಮೂಲಪ್ರಕೃತಿಯು, ಒಬ್ಬಳೇ ಆದರೂ, ಸೃಷ್ಟಿಯಲ್ಲಿ ಪರಮಾತ್ಮನ ಮಾಯೆಯಿಂದ ಐದು ತೆರನಾಗುವಳು.

೧೯. ಅವರಲ್ಲಿ–ಕೃಷ್ಣಪರಮಾತ್ಮನ ಪ್ರಾಣಾಧಿಷ್ಠಾತೃದೇವಿಯೂ, ಸರ್ವರಿಗೂ ಪ್ರಿಯಕಾರಿಣಿಯೂ ಆದವಳೇ ರಾಧೆ ಎನಿಸಿಕೊಂಬಳು.

ನಾರಾಯಣಪ್ರಿಯಾ ಲಕ್ಷ್ಮೀಃ ಸರ್ವಸಂಪತ್ಸ್ವರೂಪಿಣೀ ।
ವಾಗಧಿಷ್ಠಾತೃದೇವೀ ಯಾ ಸಾ ಚ ಪೂಜ್ಯಾ ಸರಸ್ವತೀ ॥ ೨೦ ॥

ಸಾವಿತ್ರೀ ವೇದಮಾತಾ ಚ ಪೂಜ್ಯರೂಪಾ ವಿಧೇಃ ಪ್ರಿಯಾ ।
ಶಂಕರಸ್ಯ ಪ್ರಿಯಾ ದುರ್ಗಾ ಯಸ್ಯಾಃ ಪುತ್ರೋ ಗಣೇಶ್ವರಃ ॥ ೨೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಬ್ರಹ್ಮಖಂಡೇ ಸೌತಿಶೌನಕ ಸಂವಾದೇ ಭಗವತ್ಸ್ತುತಿ ತತ್ಸ್ವರೂಪ ಮಾಯಾಸ್ವರೂಪ ವರ್ಣನಂ ನಾಮ ತ್ರಿಂಶತ್ತಮೋಽಧ್ಯಾಯಃ

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಪ್ರಥಮಂ ಬ್ರಹ್ಮಖಂಡಂ ಸಮಾಪ್ತಂ

---

೨೦. ನಾರಾಯಣನ ಪತ್ನಿಯೂ, ಸರ್ವಸಂಪತ್ಸ್ವರೂಪಿಣಿಯೂ ಆದ-ಲಕ್ಷ್ಮೀದೇವಿಯೂ, ವಾಗಧಿಷ್ಠಾತೃದೇವಿಯಾದ ಸರಸ್ವತಿಯೂ, ಪ್ರಕೃತಿಯ ಪಂಚ ವಿಧದಲ್ಲಿ ಒಬ್ಬೊಬ್ಬರು.

೨೧. ಉಳಿದಿಬ್ಬರಲ್ಲಿ ವೇದಮಾತೆಯೂ, ವಿಧಿಪ್ರಿಯಳೂ, ಪೂಜ್ಯಸ್ವರೂಪಳೂ ಆದ ಸಾವಿತ್ರಿಯೊಬ್ಬಳು. ಮತ್ತೊಬ್ಬಳು ಶಂಕರನ ಪ್ರಿಯಳೂ, ಗಣೇಶನ ಮಾತೆಯೂ ಆದ ದುರ್ಗಾಂಬಿಕೆಯು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಬ್ರಹ್ಮಖಂಡದಲ್ಲಿ ಭಗವಂತನ ಸ್ತುತಿ-ಮತ್ತು ಸ್ವರೂಪವನ್ನೂ ಮಾಯೆಯಸ್ವರೂಪವನ್ನೂ ತಿಳಿಸುವ ಮೂವತ್ತನೆಯ ಅಧ್ಯಾಯವು ಇಲ್ಲಿಗೆ ಮುಗಿದುದು.

ಬ್ರಹ್ಮವೈವರ್ತಮಹಾಪುರಾಣದಲ್ಲಿ ಮೊದಲನೆಯ ಬ್ರಹ್ಮಖಂಡವು ಸಂಪೂರ್ಣವಾಯಿತು.

ಮೂವತ್ತನೆಯ ಅಧ್ಯಾಯದ ಸಾರಾಂಶವು

ನಾರಾಯಣ ಮಹರ್ಷಿಯು ನಾರದನಿಗೆ ಪ್ರಕೃತಿಪುರುಷರ ಮಾಹಾತ್ಮ್ಯವನ್ನೂ, ಪ್ರಕೃತಿಯನ್ನುಳಿದು ಕೇವಲ ಪುರುಷನು ಸೃಷ್ಟಿಯಲ್ಲಿ ಅಶಕ್ತನಾಗುವನೆಂಬುದನ್ನೂ ತಿಳಿಸಿ, ತಂದೆಯ ಅಪ್ಪಣೆಯಂತೆ ವಿವಾಹಮಾಡಿಕೊಳ್ಳಬೇಕೆಂದೂ, ಸ್ತ್ರೀಯರಿಗೆ ಉಚಿತವಾದ ಗೌರವವನ್ನು ಕೊಡುವುದರಿಂದ ಪ್ರಕೃತಿಮಾತೆಯು ತುಷ್ಟಳಾಗುವಳೆಂದೂ, ಆ ಪ್ರಕೃತಿಯೇ ರಾಧೆ, ಲಕ್ಷ್ಮಿ, ಸರಸ್ವತಿ, ಸಾವಿತ್ರಿ ಮತ್ತು ದುರ್ಗಿಯೆಂಬ ಐದು ಹೆಸರಿನಿಂದ ಜಗತ್ತಿನಲ್ಲಿ ಪ್ರಸಿದ್ಧಿಗೊಂಡಿರುವಳೆಂದೂ ಬೋಧಿಸಿ, ಮುಂದೆ ಪ್ರಕೃತಿಯ ಮಾಹಾತ್ಮ್ಯವನ್ನು ತಿಳಿಸುವ ಪ್ರಕೃತಿಖಂಡಕ್ಕೆ ಅವತರಣಿಕೆಯನ್ನು ಪ್ರಾರಂಭಿಸಿದನು.